# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ- 14

## ಯಕ್ಷಗಾನ ಶ್ರೀಕೃಷ್ಣಪರಂಧಾಮ ಪಾಂಡವ ಸ್ವರ್ಗಾರೋಹಣ

### ಪಾತ್ರಗಳು

ಧರ್ಮರಾಜ ಭಿಲ್ಲ ಭೀಮ ಭಿಲ್ಲನ ಹೆಂಡತಿ ಅರ್ಜುನ ಜರ ನಕುಲ

ಸತ್ಯಭಾಮ ಸಹದೇವ ದಾರುಕ ಧೃತರಾಷ್ಟ್ರ ಕಾಲಮುಖ (ದಸ್ಯು) ಗಾಂಧಾರಿ

ರುದ್ರಮುಖ ವಿದುರ ಭದ್ರಮುಖ ಸಂಜಯ ವಜ್ರ ವೇದವ್ಯಾಸ

ಪರೀಕ್ಷಿತ ಕುಂತಿ ಸಿದ್ಧ (ಕೃಷಿಕ) ಶತಯೂಪ ಯಮಧರ್ಮರಾಜ ನಾರದ

ಸುರದೂತ ಕೃಷ್ಣ ದೇವೇಂದ್ರ ಕೃತವರ್ಮ ಸಾಂಬ ಕಣ್ವ ಋಷಿ

ಸಾತ್ಯಕಿ ಮನ್ಮಥ ಅನಿರುದ್ಧ ಗದ ಯಾದವ ಬಲ ಬಾಗಿಲಭಟರು

ಅಶರೀರವಾಣಿ ಶಬರಪಡೆ ಕೃಷ್ಣನ ಮಡದಿಯರು ದಸ್ಯುಬಲ ನಾಯಿ (ಪ್ರಾಣಿ ಪಾತ್ರ)

ರೋಗನಾಯಕರು ಪಾಪಿಗಳು ಚಿತ್ರಗುಪ್ತ ನರ್ತಕಿಯರು ಚಾರಕ ದೇವೇಂದ್ರನ ಒಡ್ಡೋಲಗದವರು
ಇತ್ಯಾದಿ.

### ಅಂಕ ೧. ಪ್ರಾರ್ಥನೆ

**ಶಾರ್ದೂಲವಿಕ್ರೀಡಿತ**
ಶ್ರೀಮದ್ದಿವ್ಯಮುನೀಂದ್ರವಂದ್ಯನನಘಂ ಪಾಪಾದ್ರಿವಜ್ರಂ ಸುಖಾ
ರಾಮಂ ಭಕ್ತಜನೇಷ್ಟದಾತನಮಿತಂ ಸಂತೋಷಪಾರಾನ್ವಿತಂ ।
ಕಾಮಕ್ರೋಧಮದಾಬ್ಜಸಂಕುಲಮಹಾಮಾತಂಗನಬ್ಜೇಕ್ಷಣಂ
ಧೀಮಂತಂ ಯದುವಂಶವಂದ್ಯನಮಲಂ ವಂದೇ ರಮಾವಲ್ಲಭಂ ॥ ೧ ॥

**ಮತ್ತೇಭವಿಕ್ರೀಡಿತ**
ಗಿರಿಜಾಧೀಶ್ವರನಂ ಶಶಾಂಕಧರನಂ ಶ್ರೀರಾಜರಾಜೇಶ್ವರೀ
ವರನಂ ಸಂಗರಶೂರನಂ ಸುಗುಣಸಾನಂದೈಕರತ್ನಾಕರೇ ।

ಶ್ವರನಂ ಸುಂದರನಂ ತ್ರಿಶೂಲಧರನಂ ಮೋಕ್ಷೈಕಸಂತೋಷಸಾ -
ಗರನಂ ಭಾಸುರನಂ ತ್ರಿಣೇತ್ರಧರನಂ ನಾಂ ವಂದಿಪೆಂ ಭಕ್ತಿಯಿಂ ‖ ೧ ‖

**ಕಂದ**

ಸರಸಿಜ ಸಂಭವನಂ ಸುರ ।
ನರಗಂಧರ್ವಾಪ್ಸರೋರಗಗರುಡನುತನಂ ‖
ವರವಾಣೀವರನಂ ನಾ ।
ನುರುತರ ಭಯಭಕ್ತಿಯಿಂದೆ ಭಜಿಸುವೆನನಿಶಂ ‖ ೩ ‖

ಸುರನುತೆಯಂ ಮತಿಯುತೆಯಂ ।
ಪರಿಶೋಭಿಪ ಸರ್ವಗುಣಗಣಾಲಂಕೃತೆಯಂ ‖
ವರವಿದ್ಯಾದೇವತೆಯಂ ।
ನೆರೆ ನುತಿಪೆಂ ಭಕ್ತಿಯಿಂದೆ ಮಹಿಮಾನ್ವಿತೆಯಂ ‖ ೪ ‖

**ರಾಗ ಸಾಂಗತ್ಯ ರೂಪಕತಾಳ**

ಜಯ ಜಯ ವಿಘ್ನೇಶ । ಜಯ ಸುರನರ ಪೋಷ ।
ಜಯ ಜಯ ಮುನಿಜನತೋಷ ‖
ಜಯ ಸೂರ್ಯಸಂಕಾಶ । ಜಯ ಪಾಪಕುಲನಾಶ ।
ಜಯ ಜಯ ಸುಗುಣವಿಶೇಷ ‖ ೫ ‖

ಧುರಧೀರಸುಕುಮಾರ । ಪರಮ ದಯಾಸಾರ ।
ಶರಣಜನಾಳಿಮಂದಾರ ‖
ವರಗುಹ ಧುರಧೀರ । ಪೊರೆಯೊ ಮಹಾವೀರ ।
ದುರಿತಾಳಿ ಸಂಹಾರ ಶೂರ ‖ ೬ ‖

**ಪರಿವರ್ಧಿನಿ ಷಟ್ಪದಿ**

ಸುರರಾಕ್ಷಸರಂದಮೃತವ ಪಡೆಯಲು ।
ಶರನಿಧಿಯನು ಮಥಿಸುತ್ತಿರುತಿರಲಾ ।
ಗುರುತರತೋಷದೊಳಲ್ಲಿಯೆ ಜನಿಸುತೆ ಹರಿಯನು ಕರವಿಡಿದು ‖
ಧರೆಯೊಳು ಭಕ್ತರ ಪೊರೆಯುತ್ತಿರುವಾ ।
ವರಧನಲಕ್ಷ್ಮಿಯೆ ದಯೆಯಿಂದೆನ್ನನು ।
ಪೊರೆಯೆಂದೆನುತೀಗೆರಗುವೆ ಭಕ್ತಿಯೊಳನುಪಮ ತವ ಪದಕೆ ‖ ೭ ‖

**ಕುಸುಮ ಷಟ್ಪದಿ**

ಗಿರಿಜಾತೆ ಹರವನಿತೆ ।
ಪರಮ ಮಂಗಲಚರಿತೆ ।
ಸುರನರ ಭುಜಂಗ ಗರುಡಾದಿ ವಿನುತೆ ‖

ಭರಿತಗುಣ ಶೀಲಯುತೆ ।
ಶರಣ ಸಜ್ಜನ ನಮಿತೆ ।
ಪೊರೆವುದೆನ್ನನು ನೀನು ಗುಹನ ಮಾತೆ ॥ ೮ ॥

**ರಾಗ ಸಾಂಗತ್ಯ ರೂಪಕತಾಳ**

ರವಿ ಸೋಮ ಮಂಗಳ ಬುಧ ಬೃಹಸ್ಪತಿ ರಾಹು ।
ಕವಿಶನ್ನೈಶ್ಚರ ಕೇತುವೆನುವ ॥
ಭುವನವಂದಿತ ನವಗ್ರಹರ ಪಾದಕ್ಕೆ ನಾ ।
ನವನತನಪ್ಪೆ ನಂದದಲಿ ॥ ೯ ॥

ಸುರಪಾಗ್ನಿ ಯಮ ವಾಯು ವರುಣ ಕುಬೇರಾದಿ ।
ಮೆರೆವಷ್ಟ ದಿಕ್ಪತಿಗಳನು ॥
ಭರಿತ ಭಕ್ತಿಯೊಳು ವಂದಿಸುತೆನ್ನನನುದಿನ ।
ಪೊರೆವುದೆಂದೈದೆ ಬೇಡುವೆನು ॥ ೧೦ ॥

**ಚೌಪದಿ**

ಹೆತ್ತ ತಾಯ್ತಂದೆಯರ ಪಾದ ಪದ್ಮವನು ।
ಚಿತ್ತ ಶುದ್ಧಿಯೊಳು ನೆನೆ ನೆನೆದು ಭಜಿಸುವೆನು ॥
ಹೊತ್ತ ಭೂಮಾತೆಯಡಿಗೆರಗುತ್ತೆ ನಾನು ।
ಮತ್ತೆ ಗೋಮಾತೆಯಡಿಗಳಿಗೆ ಮಣಿಯುವೆನು ॥ ೧೧ ॥

ವರಕವಿಗಳಡಿದಾವರೆಗೆ ವಂದಿಸುತ್ತೆ ।
ಪರಮ ವಿದ್ವಾಂಸರನು ಬಿಡದೆ ನೆನೆಯುತ್ತೆ ॥
ಗುರುಗಳನು ಭಕ್ತಿಯಿಂದೈದಿ ವಂದಿಸುತೆ ।
ಧರೆಯ ಸುಜನರಿಗೆರಗುವೆನು ನಾನು ಮತ್ತೆ ॥ ೧೨ ॥

**ವಾರ್ಧಕ**

ಇದರೊಳರಿಯದೆ ಬಂದ ತಪ್ಪುಗಳಿರಲ್ಕದನು ।
ಬುಧರು ಮನ್ನಿಸಿ ತಿದ್ದಿ ದೋಷ ವರ್ಜಿತಮಪ್ಪ ।
ವಿಧದೊಳುರೆ ಸಹಕರಿಸಿ ತಮ್ಮ ಸಜ್ಜನಿಕೆಯನು ತೋರುತೌದಾರ್ಯದಿಂದ ॥
ಸದಯರೆಂದೆವಿಪುದಲ್ಲದೆ ಮತ್ಸರದೊಳಿದನು ।
ವಿಧ ವಿಧದೊಳೈದೆ ಕೀಳ್ಗೈದು ಬರಿದೇ ಹಳಿದೊ ।
ಡದು ಮಹಾಗ್ರಾಮಸೂಕರದ ಸುನ್ಯಾಯಮಂ ಪೋಲದಿರ್ಪುದೆ ಧರೆಯೊಳು ॥ ೧೩ ॥

# ಅಂಕ ೧. ಪಾಂಡವರ ರಾಜಸಭೆ

**ವಾರ್ಧಕ**

ಒಂದು ದಿನ ಧರ್ಮಜನು ನಿಜಸಹೋದರ ಸಚಿವ ।
ಬಂಧುಬಾಂಧವರ ಕರೆಸುತ್ತೆ ಸಿಂಹಾಸನವ ।
ನಂದದಿಂದೇರುತೊಡ್ಡೋಲಗವನಿತ್ತಿರಲ್ ವಿನಯದಿಂ ಸಾಮಂತರು ॥
ವಂದಿಸುತೆ ಕಪ್ಪಕಾಣಿಕೆಯನಿತ್ತಧಿಕ ಮುದ ।
ದಿಂದಿರುತಿರಲ್ಕವರನೀಕ್ಷಿಸುತೆ ಯಮಧರ್ಮ ।
ನಂದನಂ ತೋಷದಿಂದನುಜಾತರಂ ಕರೆದು ಮನ್ನಿಸುತೆ ಬಳಿಕೆಂದನು ॥ ೧೪ ॥

**ರಾಗ ಭೈರವಿ ಝಂಪೆತಾಳ**

ಅನುಜಾತರೆಲ್ಲರಾಲಿಪುದು ನೀವೀವರೆಗೆ ।
ವಿನಯದಿಂದೆನ್ನ ಮಾತನು ಮಿರದಿರ್ದು ॥
ಮನದೊಲವಿನಿಂದೆ ಸಹಕಾರವಿತ್ತುದರಿಂದೆ ।
ಜನನಾಥನೆನಿಸಿದೆನು ನಾನು ಮುದದಿಂದೆ ॥ ೧೫ ॥

ಧುರದೊಳಾ ಕುರುವರನು ನಿಜಸಹೋದರ ಸಹಿತ ।
ಧರೆಗೊರಗಿ ಮೃತನಾದ ಬಳಿಕ ನಾನಿಳೆಯ ॥
ದೊರೆ ಎನಿಸಿ ದಶವರ್ಷ ಕಳೆಯಿತಿಂದಿನವರೆಗೆ ।
ಹರಿಯ ದಯದಿಂದೆ ನಾವಿಹೆವು ಸುಖದಿಂದ ॥ ೧೬ ॥

ಧರೆಯಧಿಪರೆಲ್ಲರನು ಧುರದಿ ಸೋಲಿಸಿ ಮತ್ತೆ ।
ತುರಗಮೇಧವನೆಸಗಿ ಬಂಧುಜನರನ್ನು ॥
ತರಿದ ಪಾಪವ ನೀಗಿ ಪುಣ್ಯಾತ್ಮರೆನಿಸುತ್ತೆ ।
ಪರಮ ಸತ್ಕೀರ್ತಿಯನು ಗಳಿಸಿಹೆವು ನಾವು ॥ ೧೭ ॥

ಹಿರಿಯಯ್ಯ ಗಾಂಧಾರಿಯರ ಸೇವೆಯನು ನಾವು ।
ಪರಿತೋಷದಿಂದೆಸಗುತಿಹೆವು ಭಕ್ತಿಯಲಿ ॥
ವರವಿದುರಸಂಜಯಯುಯುತ್ಸುವೆಂದೆಂಬವರು ।
ಹರುಷದಿಂದಿಹರು ನಮ್ಮರಮನೆಯೊಳೀಗ ॥ ೧೮ ॥

ಧರಣಿಯೊಳು ನಮಗರಿಗಳಾರಾದರಿರ್ಪರೋ ।
ದುರುಳರುಪಟಳವಿಹುದೊ ನಮ್ಮ ರಾಜ್ಯದೊಳು ॥
ವರಸಹೋದರರೆ ಯೋಚಿಸಿ ಪೇಳಿರೆನಲಾಗ ।
ಒರೆದನಾ ಮರುತಸುತನೆರಗಿ ಧರ್ಮಜಗೆ ॥ ೧೯ ॥

**ರಾಗ ಮಾರವಿ ಏಕತಾಳ**

ಹಿರಿಯಣ್ಣನೆ ಕೇ । ಳರಿಗಳ ಬಾಧೆಯು । ಧರಣಿಯೊಳಿನಿತಿಲ್ಲ ॥
ಪರಿತೋಷದೊಳೀ । ವರೆಗೆಲ್ಲರು ಸು । ಸ್ಥಿರಸುಖದಿಂದಿಹರು ॥ ೧೦ ॥

ಎನಲಾಕ್ಷಣ ಪಾ । ರ್ಥನು ಪೇಳಿದನಿಂ । ದಿನವರೆಗಿಳೆಯೊಳಗೆ ॥
ದನುಜರ ಸುಳಿವಿರ । ದನುಪಮ ಸುಖದಿಂ । ವಿನಯದೊಳಿಹರೆಲ್ಲ ॥ ೧೦ ॥

ಒಡನೆಯೆ ನಕುಲನು । ಪೊಡಮಡುತಗ್ರಜ । ನೊಡನುಸುರಿದನೀಗ ॥
ದಡಿಗರು ನಮ್ಮಿ । ಪೊಡವಿಯೊಳಿರರೆನೆ । ನುಡಿದನು ಸಹದೇವ ॥ ೧೧ ॥

ನಮ್ಮಿ ಪ್ರಜೆಗಳು । ನೆಮ್ಮದಿಯಿಂ ಸುಖ । ಸುಮ್ಮಾನದೊಳಿರ್ದು ॥
ಹೆಮ್ಮಕ್ಕಳುಗಳ । ನೊಮ್ಮೆಯು ಪೀಡಿಸ । ದೊಮ್ಮತದಿಂದಿಹರು ॥ ೧೩ ॥

**ಭಾಮಿನಿ**

ಅನುಜರಾಡಿದ ನುಡಿಯನಾಲಿಸಿ ।
ಘನತರದ ಸಂತೋಷದಿಂ ಯಮ ।
ತನುಜನೆಂದನು ಹರಿಯ ದಯೆಯಿಂ ಧರ್ಮರಾಜ್ಯವನು ॥
ಮನದೊಲವಿನಿಂದ್ಯೆದೆ ನಾವಾ ।
ಳ್ವನಿತು ಭಾಗ್ಯವ ಪಡೆದೆವೆನ್ನುತೆ ।
ವಿನಯದಿಂ ಸಭೆಯನು ವಿಸರ್ಜಿಸಿದನು ಮಹೀರಮಣ ॥ ೧೪ ॥

## ಅಂಕ ೩. ಧೃತರಾಷ್ಟ್ರಾದಿಗಳ ವನನಿರ್ಗಮನ

**ರಾಗ ಸಾಂಗತ್ಯ ರೂಪಕತಾಳ**

ಅಂಧ ನೃಪಾಲನು ವಿದುರಸಂಜಯವರ್ಯ ।
ಗಾಂಧಾರಿ ಸಹಿತ ಶ್ರೀಹರಿಯ ॥
ಚಂದದಿಂ ನೆನೆಯುತ್ತೆ ಕುಳಿತಿರಲೊಡನಾಗ ।
ಲೆಂದನು ಮನಮರುಕದೊಳು ॥ ೧೫ ॥

ಎನ್ನ ನಂದನರಿಂದ ಬಂದೊದಗಿದ ಹಾನಿ ।
ಯನ್ನಿಂದು ನೆನೆ ನೆನೆಯುತ್ತೆ ॥
ಬನ್ನವನಾಂತು ಚಿಂತಿಸುತಿರ್ಪೆನಿದಕೆನ ।
ಗಿನ್ನೆಂತೊ ಪರಿಹಾರವರಿಯೆ ॥ ೧೬ ।

ತರಳ ಧರ್ಮಜನವನನುಜಾತರೆಲ್ಲರು ।
ಸರಳ ಸದ್ವರ್ತನೆಯಿಂದೆ ॥

ನಿರತ ಸೇವೆಯನೆಸಗುತ್ತಿರ್ಪರಾದೊಡೆ ।
ದುರುಳ ಭೀಮನು ದುರ್ವಿನೀತ ॥ ೧೭ ॥

ಹಿತವೆನಿಸದು ಮನಕವನ ವರ್ತನೆ ಎನ ।
ಗತಿ ದುಃಖವೆನಿಸಿಹುದವನು ॥
ಪ್ರತಿದಿನ ಪಕ್ಕದ ಕೋಣೆಗೈತಂದಾತ್ಮ ।
ಸುತರ ನಿಂದಿಪನೆಡೆಬಿಡದೆ ॥ ೧೮ ॥

ಎನಗೆ ಬೇಸರವಾಗಬೇಕೆಂಬ ಬಯಕೆಯಿಂ ।
ದನಿಲಸುತನು ಹಂಗಿಸುವನು ॥
ದಿನನಿತ್ಯವೆನುವಾಗ ನಿಜನರ್ಮ ಸಖನೊಡ ।
ನನಿಲಜನೈತಂದು ನುಡಿದ ॥ ೧೯ ॥

**ರಾಗ ಕಾಂಭೋಜಿ ಮಟ್ಟೆತಾಳ**
ವೀರ ಮಾರುತಾತ್ಮಜಾತಗೆ । ಸಮಾನರಾರು ।
ಧಾರುಣಿಯೊಳು ನೋಳ್ಪನೊಮ್ಮೆಗೆ ॥
ಮಿರಿಬಂದ ಕೌರವರನು । ಭೂರಿಶೌರ್ಯದಿಂದ ಕೊಂದು ।
ಮಾರಿಗೌತಣವನು ಕೊಟ್ಟ । ಧೀರನಹುದು ನಾನೆ ದಿಟವು ॥ ೨೦ ॥

ಹಂದೆಯಂತೆ ರಣವ ನುಳಿಯುತೆ । ಬಾಳ್ವಾಸೆಯಿಂದೆ ।
ಮುಂದುವರಿದು ಕೊಳದೊಳಡಗುತೆ ॥
ನಿಂದ ಕುರುಕುಲೇಶನನ್ನು । ಸಂಧಿಸುತ್ತೆ ತೊಡೆಯ ಮುರಿದು ।
ಕೊಂದು ಕೆಡಹಿ ಭಾಷೆಯನ್ನು । ಚಂದದಿಂದ ತೀರಿಸಿಹೆನು ॥ ೨೧ ॥

ಕುರುಕುಲೇಶನನುಜನೆನಿಸಿದ । ದುಶ್ಶಾಸನಾಖ್ಯ ।
ದುರುಳನನ್ನು ಕೆಡಹುತುದರದ ॥
ಕರುಳನೆಳೆದು ರಕ್ತವನ್ನು । ಭರದಿ ಕುಡಿದು ಸತಿಯ ತಲೆಯ ।
ಕುರುಳ ಕಟ್ಟಿ ಭಾಷೆಯನ್ನು । ಸರಸದಿಂದ ತೀರಿಸಿಹೆನು ॥ ೨೨ ॥

ಅಂಧರಾಜನಂದು ಪಿಡಿಯುತೆ । ಮತ್ಸರಿಸಿ ಬಾಹು ।
ಬಂಧನದೊಳು ಬಿಗಿಯುತಪ್ಪುತೆ ॥
ಕೊಂದು ಕೆಡಹಲೆಂದು ಬಗೆದ । ಡಂದದಿಂದ ಹರಿಯ ಕರುಣೆ ।
ಯಿಂದ ಬಾಳಿದಂಥ ಭಕ್ತ । ನೆಂದು ಕರೆವರೆನ್ನನೀಗ ॥ ೨೩ ॥

**ವಾರ್ಧಕ**
ಎಂದು ನಿಜನರ್ಮಸಖನೊಡನೆ ಹೆಗ್ಗಳಿಕೆಯಂ ।
ಚಂದದಿಂದೊರೆದು ಮನಬಂದಂತೆ ಕೌರವರ ।

ನಿಂದಿಸುತೆ ಗಾಂಧಾರಿ ಧೃತರಾಷ್ಟ್ರರಿಂಗೈದೆ ಮನನೋಯುವಂತೆಸಗುತೆ ॥
ಗಂಧವಾಹಾತ್ಮಜಂ ನಿಜಭುಜವ ಚಪ್ಪರಿಸು ।
ತಂದದಿಂ ಮಿಸೆಯಂ ತಿರುಹುತ್ತೆ ನಡೆಯಲೊಡ ।
ನಂಧನೃಪನಿವನ ವರ್ತನೆಯ ನೀಕ್ಷಿಸುತೆ ಗಾಂಧಾರಿಯೊಡನಿಂತೆಂದನು ॥ ೩೪ ॥

**ರಾಗ ನೀಲಾಂಬರಿ ತ್ರಿವುಡೆತಾಳ**

ಅಯ್ಯಯ್ಯೊ ನಾರೀಮಣಿ । ಭೀಮನು ಬಂದು ।
ಬಯ್ಯುವನೆಲೆ ರಮಣಿ ॥
ಮುಯ್ಯಾಂತು ಬಂದು ತಾ । ನೊಯ್ಯಾರದಿಂದೆಮ್ಮ ।
ನೊಯ್ಯನೆ ಪೀಡಿಪನು । ಹಂಗಿಸುತಿಹನು ॥ ೩೫ ॥

ಹೃದಯಕೆ ಚುಚ್ಚುವಂಥ । ಮಾತನು ಪೇಳು ।
ತಧಿಕ ಬೇಸರವೀವಂಥ ॥
ಮದಮುಖನೆಡೆಯೊಳು । ಬೆದರುತೆ ಬಾಳುವ ।
ವಿಧಿಯೊದಗಿತೆ ನಮಗೆ । ದುಃಖವು ಕಡೆಗೆ ॥ ೩೬ ॥

ಹಿರಿಯಾತ ಧರ್ಮಜನು । ಯೋಗ್ಯನು ಪಾರ್ಥ ।
ನುರುತರ ಸತ್ಯಾತ್ಮನು ॥
ವರಯಮಳರು ವಿಧೇ । ಯರು ಭೀಮನೊರ್ವನು ।
ದುರುಳನಾಗಿರುತಿರ್ಪನು । ಗರ್ವಿತನವನು ॥ ೩೭ ॥

**ವಾರ್ಧಕ**

ಆದ ಕಾರಣ ನಾವು ಬೇಗನಡವಿಗೆ ಪೋಗಿ ।
ಮೋಹದಿಂ ತಪವನೆಸಗುತೆ ಮೋಕ್ಷ ಸಾಮ್ರಾಜ್ಯ ।
ದಾಧಿಪತ್ಯವ ಪಡೆವ ಕಾರ್ಯವಂ ಗೆಯ್ವುದೊಳಿತೆಂದು ನಿಶ್ಚಯಿಸುತಿರಲು ॥
ಮೇದಿನೀಶ್ವರ ಯುಧಿಷ್ಠಿರನಲ್ಲಿಗೈತಂದು ।
ಪಾದಪದ್ಮಂಗಳಿಗೆ ಮಣಿಯಲಾಶೀರ್ವದಿಸು ।
ತಾದರದೊಳವನೊಡನೆ ನುಡಿದನಾ ಧೃತರಾಷ್ಟ್ರ ಭೂಪಾಲನಾಕ್ಷಣದೊಳು ॥ ೩೮ ॥

**ರಾಗ ಸಾಂಗತ್ಯ ರೂಪಕತಾಳ**

ತನಯನೆ ಕೇಳು ನಾನಿಂದೀಗ ತಪಕಾಗಿ ।
ವನಕೆ ಪೋಪೆನು ಸತಿಸಹಿತ ॥
ಮನದೊಲವಿಂದೆ ನೀನೊಪ್ಪಿಗೆಯನ್ನೀವು ।
ದೆನಗೆನೆ ಯಮಸುತನೊರೆದ ॥ ೩೯ ॥

**ರಾಗ ಕಾಂಭೋಜಿ ಝಂಪೆತಾಳ**

ಹಿರಿಯಯ್ಯನಮಗೆ ನೀವಿಂತೊರೆದೊಡೀಗ ಬೇ ।

ಸರವೆನಿಸುತಿಹುದೆನ್ನ ಮನಕೆ ॥
ತೆರಳದಿರಿ ನೀವಿಲ್ಲೆ ಕುಳಿತು ಹರಿಯನು ಭಜಿಸಿ ।
ಪರತರವ ಚಿಂತಿಸುವುದೊಳಿತು ॥ ೪೦ ॥

ಅತಿವೃದ್ಧರಂಧರಾತ್ಮಜರಳಿದ ದುಃಖವಿಂ ।
ತತಿಶಯದ ಬಾಧೆಯಿಂ ಬಳಲಿ ॥
ಗತಿಗೆಟ್ಟ ನಿಮ್ಮನೆಂದಿಗು ಕಳುಹೆನೆನುವ ಭೂ ।
ಪತಿಯೊಡನೆ ಧೃತರಾಷ್ಟ್ರನೆಂದ ॥ ೪೧ ॥

**ರಾಗ ಸಾಂಗತ್ಯ ರೂಪಕತಾಳ**
ಬೇಡಯ್ಯ ಮಗನೆ ನೀ ಕಾಡದಿರೆಮ್ಮನು ।
ಕಾಡಿಗೆ ಕಳುಹಯ್ಯ ಮುದದಿ ॥
ನಾಡೆನಗಹಿತವೆಂದೆನಿಸಿದೆ ಸತಿಯೊಡ ।
ಗೂಡಿ ನಾ ನಡೆವೆನು ತಪಕೆ ॥ ೪೨ ॥

ಮುಪ್ಪಡಸಲು ಮುನಿ ವೃತ್ತಿಯು ಯೋಗ್ಯವೀ ।
ಚಪ್ಪನ್ನ ಭೂಪತಿಗಿಡುವೆ ॥
ಒಪ್ಪುವ ಧರ್ಮವೆಂದೆನಲು ನೀನಿದಕಿಂದು ।
ತಪ್ಪದೊಪ್ಪಿಗೆಯನು ನೀಡು ॥ ೪೩ ॥

**ರಾಗ ಕಾಂಭೋಜಿ ಝಂಪೆತಾಳ**
ಎಂದೆನಲು ಯಮಧರ್ಮನಂದನನು ಮಣಿಯುತಿಂ ।
ತೆಂದನೆಲೆ ಬೊಪ್ಪ ನಿಮ್ಮೊಡನೆ ॥
ಬಂದಪೆನು ನಿಮ್ಮ ಶುಶ್ರೂಷೆ ನಾನಿಂದಿದಕೆ ।
ಚಂದದಿಂದೀವುದೊಪ್ಪಿಗೆಯ ॥ ೪೪ ॥

ಕುರುಡರಾಗಿಹ ನಿಮ್ಮ ಸೇವೆಯನು ಗೆಯ್ಯುತೀ ।
ಬರಡು ಬಾಳನು ಧನ್ಯಗೊಳಿಸಿ ॥
ಧರೆಯೊಳಾದರ್ಶನೆಂದೆನಿಸುವೆನು ನಾನೆನ ।
ಲ್ಕೊರೆದಳವನೊಡನೆ ಗಾಂಧಾರಿ ॥ ೪೫ ॥

**ರಾಗ ಸಾಂಗತ್ಯ ರೂಪಕತಾಳ**
ಬೇಡಯ್ಯ ಬರಬೇಡ ನೀನು ಬಂದರೆ ನಮ್ಮ ।
ನಾಡಿನ ಜನರನು ಬಿಡದೆ ॥
ನಾಡ ಸಂರಕ್ಷಿಸುವವರಿಲ್ಲ ನೀನೀಗ ।
ಕಾಡಿಗೆ ಕಳುಹು ನಮ್ಮನ್ನು ॥ ೪೬ ॥

ನಮ್ಮ ಭೂಪಾಲರ ಸೇವೆಯನಾನತಿ ।
ಸುಮ್ಮಾನದಿಂದೆ ಗೆಯ್ಯುವೆನು ॥
ದುಮ್ಮಾನವನು ತೊರೆದೆಮ್ಮನು ಕಳುಹೆನ ।
ಲುಮ್ಮಳಿಸುತೆ ನೃಪನೆಂದ ॥ ೪೭ ॥

**ರಾಗ ಕಾಂಭೋಜಿ ಝಂಪೆತಾಳ**
ಬಿಟ್ಟರೆನು ನಿಮ್ಮನೀದಿನವೆ ಭೀಮಂಗಿಳೆಯ ।
ಪಟ್ಟವನು ಕಟ್ಟಿ ನಿಮ್ಮೊಡನೆ ॥
ತಟ್ಟನೆ ಬಪ್ಪೆನೆನಲಂಧನೃಪನವನ ಮೈ ।
ಮುಟ್ಟಿ ಬಳಿಕಿಂತೆಂದನಾಗ ॥ ೪೮ ॥

**ರಾಗ ಸಾಂಗತ್ಯ ರೂಪಕತಾಳ**
ಬರಿದೇತಕೆಮ್ಮ ನೀ ಪರಿಯೊಳು ತಡೆಯುವೆ ।
ಕರುಣೆ ಬಾರದೆ ನಿನ್ನ ಮನಕೆ ॥
ಪುರದೊಳಿನ್ನೆಂದಿಗು ನಾವಿರಲಾರೆವು ।
ತರಳನೆ ನೀಡೊಪ್ಪಿಗೆಯನು ॥ ೪೯ ॥

ಅಲ್ಲದೊಡನ್ನಪಾನವ ತೊರೆಯುತೆ ಬಳಿ ।
ಕಿಲ್ಲೆ ಸಾಯುವೆವಿಂದು ದಿಟವು ॥
ಸಲ್ಲದ ಕಾರ್ಯವಿದೆಂದೆಣಿಸದಿರೆನ ।
ಲಲ್ಲಿರ್ಪ ವಿದುರನಿಂತೆಂದ ॥ ೫೦ ॥

**ರಾಗ ಮಧುಮಾಧವಿ ತ್ರಿವುಡೆತಾಳ**
ತಡೆಯದಿರು ಭೂಪನನು ಮುದದಿಂ । ನಡೆಯಲಡವಿಗೆ ತಪವನೆಸಗಲು ।
ಮಡದಿಯೊಡನೀದಿನವೆ ಛಲವನು । ಬಿಡು ಬಿಡೆಲೊ ಧರ್ಮಾತ್ಮನೆ ॥ ೫೧ ॥

ನಾನು ಪೋಗುವೆನಿವರ ಸೇವೆಗೆ । ಸಾನುರಾಗದೊಳಿದಕೆ ಬೆದರದೆ ।
ನೀನು ನೀಡಪ್ಪಣೆಯ ನೀಗನು । ಮಾನವನು ಬಿಡು ಬೇಗನೆ ॥ ೫೨ ॥

ಎನಲು ಸಂಜಯನೆಂದನೆಲವೋ । ಜನಪ ಧರ್ಮಾತ್ಮಜನೆ ನಾನೇ ।
ವನಕೆ ತೆರಳುವೆನಿವರ ಸೇವೆಗೆ । ನಿನಗೆ ಭಯವಿನಿತೇತಕೆ ॥ ೫೩ ॥

ಎನಲು ಕೇಳಿಯುಯುತ್ಸು ನಾನೇ । ವನಕೆ ತೆರಳುವೆನೆನ್ನ ಜನನೀ ।
ಜನಕರನು ಶುಶ್ರೂಷೆಗೆಯ್ಯುವೆ । ನೆನಲು ಯಮಜನು ಮರುಗಿದ ॥ ೫೪ ॥

**ಕಂದ**
ಆಗಳ್ ಕುಂತೀದೇವಿ ಸ ।

ರಾಗದೊಳಾಯೆಡೆಗೆ ಬಂದು ನಿಜನಂದನನಂ ॥
ಬೇಗನೆ ಕರೆಯುತೆ ದುಃಖವ ।
ನೀಗುವವೋಲ್ ನುಡಿದಳಧಿಕ ಸಂತೃಪ್ತತೆಯಿಂ ॥ ೫೫ ॥

**ರಾಗ ಮಾಧ್ಯಮಾವತಿ ತ್ರಿವುಡೆತಾಳ**
ತನುಜ ತಡೆಯದಿರಿವರನೀಗಳೆ । ವನಕೆ ಕಳುಹುವುದುಚಿತ ಮುಪ್ಪಿನ ।
ದಿನವು ಬರೆ ಮುನಿವೃತ್ತಿಯನುಚಿತ । ವೆನಿಸದಿದು ಸದ್ಧರ್ಮವು ॥ ಕ್ಷತ್ರಿಯರಿಗೆ ॥ ೫೬ ॥

ಧರಣಿಪಗೆ ಸಮರದಲಿ ಮರಣವು । ದೊರಕದೊಡೆ ಮುಪ್ಪಿನಲಿ ರಾಜ್ಯವ ।
ತೊರೆದು ಕಾನನಕೈದಿ ತಪದಾ । ಚರಣೆಯಿಂ ಸದ್ಗತಿಯನು ॥ ಸೇರಬೇಕು ॥ ೫೭ ॥

ಆದಕಾರಣ ನೀನು ತಡೆಯದಿ । ರೀದಿನವೆ ಕಾನನಕೆ ಕಳುಹು ವಿ ।
ಷಾದಿಸದಿರಿವರೊಡನೆ ಪೋಪೆನು । ಸಾದರದೊಳಾನೀಗಲೇ ॥ ಕಾನನಕ್ಕೆ ॥ ೫೮ ॥

ಆನಿವರ ಸೇವೆಯನು ಗೆಯ್ವೆನು । ಸಾನುರಾಗದೊಳತ್ತೆ ಮಾವ ಸ ।
ಮಾನರೆಂದೇ ಭಾವಿಸುತ್ತಾ । ಕಾನನದೊಳಿನ್ನನುದಿನ ॥ ಭಕ್ತಿಯಿಂದ ॥ ೫೯ ॥

**ಭಾಮಿನಿ**
ಮಾತೆಯೆನುವುದನಾಲಿಸುತೆ ಯಮ ।
ಜಾತನೆಡವಿದ ಕಾಲಿಗೊನಕೆಯ ।
ಘಾತವಾಯ್ತೆನಗೆನುತೆ ಮರುಗುತ್ತಿರ್ಪ ವಿಷಯವನು ॥
ವಾತಸಂಭವ ಮುಖ್ಯರರಿಯುತೆ ।
ಕಾತರದೊಳೈತಂದು ಬಹು ಸಂ ।
ಪ್ರೀತಿಯಿಂ ಮಣಿಯುತ್ತೆ ಬಿನ್ನವಿಸಿದರು ಭಕ್ತಿಯಲಿ ॥ ೬೦ ॥

**ರಾಗ ನವರೋಜು ಏಕತಾಳ**
ಬೇಡಮ್ಮ ಪೋಗದಿರು । ದಯ । ಮಾಡಮ್ಮಾ ತೊರೆಯದಿರು ॥
ಕಾಡಿಗೆ ಪೋದೊಡೆ । ಗಾಢದ ದುಃಖವು ।
ಕಾಡುವುದೆಮ್ಮನು । ನಾಡಿನೊಳನುದಿನ ॥ ೬೧ ॥

ನಿನ್ನನು ನಾವುಳಿದಿಲ್ಲಿ । ಬಹು । ಖಿನ್ನತೆಯಿಂ ಬಾಳ್ವಲ್ಲಿ ॥
ಬನ್ನವು ಬಹುದಿನ । ಕಿನ್ನೇಂಗೈವೆವು ।
ಬಿನ್ನಪವನು ಕೇ । ಳ್ದಿನ್ನೆಮ್ಮನು ಪೊರೆ ॥ ೬೨ ॥

ಧುರದೊಳು ನಮ್ಮರಿಗಳನು । ತರಿ । ತರಿದಿನ್ನೀ ರಾಜ್ಯವನು ॥
ಹರುಷದೊಳಾಳುವ । ತರಳರ ಸುಖವನು ।
ಪರಿಕಿಸದೀಪರಿ । ತೆರಳುವುದುಚಿತವೆ ॥ ೬೩ ॥

ಬಿಟ್ಟೊಡೆ ನಿನ್ನನು ನಾವು । ಕಂ । ಗೆಟ್ಟವರಂತಾಗುವೆವು ॥
ತಟ್ಟನೆ ನೀ ದಯೆ । ಯಿಟ್ಟೆಂದಿನ ವೊಲು ।
ನೆಟ್ಟನೆ ನಮ್ಮೊಡ । ನೊಟ್ಟಿಗೆ ಬಾಳೌ ॥ ೬೪ ॥

**ಕಂದ**

ಇಂತವರಳುತಿರಲಲ್ಲಿಗೆ ।
ಸಂತಸದಿಂ ಬಂದರಮಲ ವೇದವ್ಯಾಸರ್ ॥
ಚಿಂತೆಯನುಳಿದೆಲ್ಲರ್ ಪದ ।
ಕಂತರಿಸದೆ ಮಣಿಯೆ ಪರಸಿ ನುಡಿದರ್ ಮುನಿಪರ್ ॥ ೬೫ ॥

**ರಾಗ ಸಾಂಗತ್ಯ ರೂಪಕತಾಳ**

ನಾನಿಂದು ನಿಮ್ಮ ಸಮಸ್ಯೆಯನರಿತು ಪ್ರ ।
ಧಾನವಿದೆಂದರಿಯುತ್ತೆ ॥
ಸಾನಂದದಿಂದೆ ಬಂದೆನು ಬರಿದೇತಕೆ ।
ಮ್ಲಾನವದನರಾದಿರಿದಕೆ ॥ ೬೬ ॥

ನಡೆಯಲಿ ಧೃತರಾಷ್ಟ್ರ ಗಾಂಧಾರಿ ಕುಂತಿಗ ।
ಳಡವಿಗೆ ಮತ್ತವರೊಡನೆ ॥
ತಡೆಯದೆ ಪೋಗಲಿ ವಿದುರ ಸಂಜಯರು ಮುಂ ।
ದಡಿಯಿಡುತಮಲ ಕಾನನಕೆ ॥ ೬೭ ॥

ಮುಂದೆ ಪೋಗುವ ವೇಳೆ ಶತಯೂಪನಾಶ್ರಮ ।
ವಂದದಿಂ ತೋರ್ಪುದಿಂತಿದನು ॥
ಚಂದದಿಂ ಪೊಕ್ಕು ಸನ್ಯಾಸವ ಕೈಕೊಂಡು ।
ಮಂದಾಕಿನಿಯ ಬಳಿವಿಡಿದು ॥ ೬೮ ॥

ಪರಮಪಾವನ ಗಂಗಾ ಮೂಲಕ್ಕೆ ತೆರಳುತೆ ।
ಹರಿಯನು ಭಕ್ತಿಯಿಂ ಭಜಿಸಿ ॥
ವರಮೋಕ್ಷ ಪದವಿಯ ಪಡೆವುದೆಂದವರನು ।
ಪರಸುತ್ತೆ ಮುನಿ ಪೋದನಂದು ॥ ೬೯ ॥

**ವಾರ್ಧಕ**

ಮತ್ತೆ ಮುನಿಯೊರೆದಂತೆ ಧರ್ಮಸುತನೊಪ್ಪಿಗೆಯ ।
ನಿತ್ತ ಬಳಿಕಂಧ ನೃಪನಧಿಕ ದಾನಂಗಳಂ ।
ಚಿತ್ತ ಶುದ್ಧಿಯೊಳಿತ್ತು ಯಾಗಯಜ್ಞಂಗಳಂ ಗೆಯ್ದು ಜಪತಪವೆಸಗುತೆ ॥
ಚಿತ್ತಜಾಂತಕನ ಪೂಜಿಸಿ ಸರ್ವರನು ತನ್ನ ।

ಹತ್ತಿರಕೆ ಕರೆದು ಮನ್ನಿಸಿ ಪೊರಟನಂದು ವನ ।
ದತ್ತ ನಿಜ ಸತಿಸಹಿತ ಕುಂತಿಸಂಜಯ ವಿದುರ ಮುಖ್ಯರಿಂದೊಡಗೂಡುತೇ ॥ ೭೦ ॥

**ಕಂದ**

ಇಂತವರೆಲ್ಲರ್ ಪೊರಟ ।
ತ್ಯಂತ ಮಹಾ ಘೋರ ಗಹನದೊಳ್ ನಡೆಯುತ್ತಂ ॥
ಸಂತಂ ಶತಯೂಪನ ವಿಪಿ ।
ನಾಂತರಮಂ ಪುಡುಕುತ್ತೈದಿದರ್ ನಿರ್ಭಯದಿಂ ॥ ೭೧ ॥

# ಅಂಕ ೪. ಸನ್ಯಾಸ ಸ್ವೀಕಾರ

**ರಾಗ ಭೈರವಿ ಝುಂಪೆತಾಳ**

ಇತ್ತ ಶತಯೂಪನಮಲಾಶ್ರಮದೊಳಿರ್ದು ಮುನಿ ।
ವೃತ್ತಿಯಿಂ ತಪವನೆಸಗುತ್ತೆ ಭಕ್ತಿಯೊಳು ॥
ಚಿತ್ತಜಾಂತಕನ ಪದಪದ್ಮವನು ನೆನೆನೆನೆದು ।
ಹೃತ್ತಿಮಿರವನು ನೀಗಿ ಮಹಿಮನೆನಿಸಿರ್ದ ॥ ೭೨ ॥

ಆ ಮುನಿಯ ಮಹಿಮೆಯಿಂ ಗಿಳಿ ಗಿಡುಗಗಳು ಬಹಳ ।
ಸಾಮರಸ್ಯದೊಳಿರ್ಪವಹಿಮುಂಗುಸಿಗಳು ॥
ಪ್ರೇಮದಿಂದಿಹವು ಹುಲಿ ಹುಲ್ಲೆಗಳು ಜೊತೆಯಿಂದ ।
ರಾಮಣೀಯಕ ವನದೊಳಲೆಯುತಿರುತಿಹವು ॥ ೭೩ ॥

ವೇದವನು ಗಿಳಿಗಳುಚ್ಚರಿಸುತ್ತೆ ಸಂಗೀತ ।
ನಾದವನು ಕೋಗಿಲೆಗಳೈದೆ ಗೆಯ್ಯುತ್ತೆ ।
ಸಾಧುಸಂತರ್ಗೆ ಕಪಿಗಳು ಫಲವನೀಯುತ್ತೆ ।
ಸಾದರದೊಳಿಹವು ಪುಣ್ಯಾಶ್ರಮದೊಳಲ್ಲಿ ॥ ೭೪ ॥

ಜಡಿಮಳೆಯ ಭಯವಿಲ್ಲ ಸುಳಿಗಾಳಿ ಇರದು ಬರ ।
ಸಿಡಿಲುಮಿಂಚುಗಳ ಭಯವೆಂಬುದಿನಿತಿಲ್ಲ ॥
ಧಡಿಗ ದಾನವರ ಸುಳಿವಿರದು ದುರ್ಮೃಗಕುಲದ ।
ತೊಡಕಿರದು ಶತಯೂಪನಮಲಾಶ್ರಮದೊಳು ॥ ೭೫ ॥

ಇಂತೆಸೆಯುವಮಲಾಶ್ರಮದೊಳಿರ್ಪ ವಟುಗಳಿಗೆ ।
ಸಂತಸದೊಳೊರ್ಮೆ ವೇದವನು ಕಲಿಸುತ್ತೆ ॥
ಶಾಂತಮಾನಸನಾಗಿ ಶತಯೂಪನಿರಲು ಭೂ ।
ಕಾಂತ ಧೃತರಾಷ್ಟ್ರನೈತಂದು ವಂದಿಸಿದ ॥ ೭೬ ॥

**ರಾಗ ಕೇದಾರಗೌಳ ಅಷ್ಟತಾಳ**

ಬಂದು ವಂದಿಸಿ ನಿಂದ ಭೂಪನ ಮನ್ನಿಸು ।
ತೆಂದನು ಶತಯೂಪನು ॥
ಚಂದವಾಯ್ತಯ್ಯ ನೀವಿಂದು ಬಂದುದು ನಡೆ ।
ತಂದ ಕಾರಣವರುಹು ॥ ೭೭ ॥

ಎನಲಂಧಭೂಪನು ಮಣಿಯುತೆ ನುಡಿದನು ।
ಘನಮಹಿಮನೆ ನಾವೀಗ ॥
ವನಕೆ ವೈರಾಗ್ಯದಿಂ ಬಂದಿಹೆನಿವರೆನ್ನ ।
ಮನೆಯವರಾತ್ಮೀಯರು ॥ ೭೮ ॥

ಆ ನಾಗ ನಗರದ ದೊರೆಯು ನಾನಿವಳೆನ್ನ ।
ಮಾನಿನಿ ಎಮ್ಮೊಡನೆ ॥
ಸಾನಂದದಿಂದೆ ಸಂಜಯ ಕುಂತಿ ವಿದುರರೀ ।
ಕಾನನಕೈತಂದರು ॥ ೭೯ ॥

ನೀಡಬೇಕೆಮಗೆ ಸನ್ಯಾಸದೀಕ್ಷೆಯನೆಂದು ।
ಬೇಡುವ ಭೂಮಿಪನ ॥
ನೋಡಿ ಸಂತೋಷದಿಂದಭಯವನೀಯುತ್ತೆ ।
ನಾಡೊಡೆಯನೊಳೆಂದನು ॥ ೮೦ ॥

**ವಾರ್ಧಕ**

ನಿನ್ನ ಮನದಭಿಲಾಷೆಯಂತೆ ನಿನ್ನೊಡನೀಗ ।
ಭಿನ್ನಭೇದವನಿರಿಸದೈತಂದ ಸಕಲರಿಂ ।
ಗೆನ್ನ ದಳನಿಳಯದೊಳ್ ಸನ್ಯಾಸದೀಕ್ಷೆಯನ್ನೀವೆನೆಂದೊರೆದು ಬಳಿಕ ॥
ಸನ್ನುತ ತಪೋಧನಂ ವಿಧಿವಿಹಿತ ಮಾರ್ಗದಿಂ ।
ಮನ್ನಿಸುತೆ ಮತ್ತೆ ದೀಕ್ಷೆಯನಿತ್ತ ಬಳಿಕವರ್ ।
ಮುನ್ನಡೆದರಲ್ಲಿಂದ ಪರಮಗಂಗಾಮೂಲದೆಡೆಗೆ ತಪವೆಸಗಲೆನುತೆ ॥ ೮೧ ॥

## ಅಂಕ ೫. ಧೃತರಾಷ್ಟ್ರಾದಿಗಳ ದುರ್ಮರಣ

**ರಾಗ ಭೈರವಿ ಝಂಪೆತಾಳ**

ಇತ್ತ ಗಜನಗರಿಯೊಳು ಯಮಧರ್ಮತನಯನ ।
ತ್ಯುತ್ತಮದೊಳಿಳೆಯ ನಾಳುತ್ತಿರ್ದು ತನ್ನ ॥
ಹತ್ತಿರಕೆ ನಿಜಸಹೋದರ ವರ್ಗವನು ಬರಿಸಿ ।
ಮತ್ತೆ ಪೇಳಿದನು ನಿಜಮನದ ಮರುಕವನು ॥ ೮೨ ॥

ವರಸಹೋದರರೆಲ್ಲರಾಲಿಪುದು ಕಾನನಕೆ ।
ಹಿರಿಯಯ್ಯನವರು ತೆರಳುತೆ ಕಳೆಯಿತೀಗ ॥
ವರುಷವೆಂಟೀವರೆಗೆ ನಾವವರ ಸಂಗತಿಯ ।
ನರಿಯದಿಹೆವಿದರಿಂದ ಮನಕೆ ಬೇಸರವು ॥ ೮೩ ॥

ಹೇಗವರ ಸಂಗತಿಯನರಿಯಬಹುದೆಮಗೆ ಬಂ ।
ದೀಗದನು ತಿಳಿಸುವವರಾರಿಹರೆನುತ್ತೆ ॥
ಕೂಗುವಗ್ರಜನ ದುಸ್ಥಿತಿಯನೀಕ್ಷಿಸಿ ಮತ್ತೆ ।
ಬೇಗನೆರಗುತ್ತೆ ಭೀಮನು ನುಡಿದನಾಗ ॥ ೮೪ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಇದಕೆ ನೀನಿಂತೇಕೆ ಬರಿದೇ । ಮುದವನುಳಿದಳುತಿರ್ಪೆ ನಿನಗೀ ।
ಹದನನರಿದರುಹುವೆನು ಬೇಗನೆ । ಸದಮಲಾತ್ಮಾ ॥ ೮೫ ॥

ಈಗಲೇ ನಾನಯ್ದಿ ಹಿರಿಯರು । ಹೇಗಿಹರು ಕಾನನದೊಳೆಂದರಿ ।
ತಾಗಮಿಸುವೆನು ನೀಡನುಜ್ಞೆಯ । ಬೇಗನೆನಗೆ ॥ ೮೬ ॥

ಒಡನೆ ಪಾರ್ಥನು ಬಂದು ಪಾದಕೆ । ಪೊಡಮಡುತೆ ನೀಡಪ್ಪಣೆಯ ನಿಂ ।
ದಡವಿಗೆಯ್ದುತೆ ತಿಳಿದು ಬಪ್ಪೆನು । ತಡೆಯದೀಗ ॥ ೮೭ ॥

ಬರಿದೆ ಮರುಗದಿರಣ್ಣ ನಾನೇ । ತೆರಳಿ ಜನನೀಜನಕರಿರವನು ।
ಪರಿಕಿಸುತೆ ಮುಂದಾಗಿ ಬರ್ಪೆನು । ಭರದೊಳೀಗ ॥ ೮೮ ॥

ಒಡನೆ ಯಮಳರು ಬಂದು ಯಮಸುತ । ನಡಿಗಳಿಗೆ ವಂದಿಸುತನುಜ್ಞೆಯ ।
ಕೊಡುಕೊಡೆನೆ ನಾರದರು ಬಂದರು । ತಡೆಯದಾಗ ॥ ೮೯ ॥

**ರಾಗ ಕೇದಾರಗೌಳ ಅಷ್ಟತಾಳ**
ದೂರದಿಂದಲೆ ಹರಿನಾಮವ ಪಾಡುತ್ತೆ । ನಾರದನೈತರಲು ॥
ಭೂರಿ ತೋಷವನಾಂತು ಸಹಜರಿಂದೊಡಗೂಡಿ । ಧಾರುಣೀಶ್ವರನು ಬಂದು ॥ ೯೦ ॥

ಪಾದಕ್ಕೆ ವಂದಿಸುತರ್ಘ್ಯಪಾದ್ಯವನಿತ್ತು । ಮೋದದಿಂ ಮನ್ನಿಸುತೆ ॥
ಹೇ ದಯಾಮಯನೆ ವಿಶೇಷವೇನೆನೆ ಮುನಿ । ಸಾದರದಿಂದೊರೆದ ॥ ೯೧ ॥

**ರಾಗ ಸಾಂಗತ್ಯ ರೂಪಕತಾಳ**
ಕೇಳಯ್ಯ ಧರ್ಮಸಂಜಾತನೆ ನಿನ್ನಂತ । ರಾಳದ ದುಃಖವನರಿತು ॥
ತಾಳಲಾರದೆ ಬಂದೆನದನರುಹಲು ನಿನ್ನ । ವೇಳೆಯ ನರಿಯುತಿಂದೀಗ ॥ ೯೨ ॥

ವನವಲಯಕೆ ತಪಕೆಂದು ಪೋಗಿಹ ನಿನ್ನ । ಜನಕಾದಿಗಳು ಶತಯೂಪ ॥
ಮುನಿಯಿಂದ ಸನ್ಯಾಸದೀಕ್ಷೆಯ ಕೈಕೊಂಡು । ವಿನುತ ಗಂಗಾಮೂಲದೆಡೆಗೆ ॥ ೯೩ ॥

ನಡೆಯುತಲ್ಲೊಂದು ಪರ್ಣಾಲಯವನು ಗೈದು । ದೃಢಮನದಿಂ ಜಪತಪವ ॥
ನಡೆಸುತ್ತಲಿರಲೊಂದು ದಿನ ವಿದುರನು ತನ್ನ । ಕಡೆಯುಸುರೆಳೆದನು ಬಳಿಕ ॥ ೯೪ ॥

ಮತ್ತೊಂದು ದಿನ ದಾವಾನಲವು ಕಾನನವನ್ನು । ಮುತ್ತಿ ನಿಮ್ಮವರೆಲ್ಲರನ್ನು ॥
ಮಿತ್ತುವಿನೆಡೆಗಟ್ಟಿತೀಪರಿ ಬಂದಿಹಾ । ಪತ್ತ ನಿನ್ನೆಂತು ಪೇಳುವೆನು ॥ ೯೫ ॥

ಆಗ ಸಂಜಯನಿದನೀಕ್ಷಿಸಿ ನಡೆದನು । ಬೇಗನೆ ಬದರಿಕಾಶ್ರಮಕೆ ।
ಹೀಗಿದೆ ಸಂಗತಿ ಎನುತೆ ನಾರದರಂದು । ಸಾಗಿದರೆಲ್ಲರಪರಸಿ ॥ ೯೬ ॥

**ವಾರ್ಧಕ**

ಇದನರಿತು ಧರ್ಮಜಂ ಮರುಗಿ ನಮ್ಮವರಿಗೀ ।
ವಿಧಿಯಾಯ್ತೆ ಹಾ ಎಂದು ಮರುಗುತೆಲ್ಲರ ಬರಿಸಿ ।
ವಿಧಿವಿಹಿತದಿಂದಪರಕರ್ಮಮಂ ಗೆಯ್ದು ವಿಪ್ರರ್ಗೆ ದಾನವನೀಯುತೆ ॥
ಸದಮಲಾತ್ಮಕನಾಗಿ ಭಕ್ತಿಯಿಂ ಶ್ರೀಹರಿಯ ।
ಪದವ ನೆನೆ ನೆನೆಯುತ್ತೆ ನಿಜಸಹೋದರ ಸಹಿತ ।
ಮುದವಿವರ್ಜಿತನಾಗಿ ರಾಜ್ಯ ಭಾರಂಗೆಯ್ಯುತಿರ್ದನೆಂದಿನ ತೆರದೊಳು ॥ ೯೭ ॥

## ಅಂಕ ೬. ಕಣ್ವಶಾಪ

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತ ನಿಜಪುರವರದೊಳಾ ಪುರು । ಷೋತ್ತಮನು ಕೃತವರ್ಮ ಸಾಂಬರ ।
ಹತ್ತಿರಕೆ ಕರೆಯುತ್ತೆ ನುಡಿದನು । ದಾತ್ತನಾಗಿ ॥ ೯೮ ॥

ಬರುವ ನವರಾತ್ರಿಯ ಮಹೋತ್ಸವ । ಕುರುತರದ ಸಿದ್ಧತೆಯನೆಸಗುತೆ ।
ಪುರವರವ ಸಿಂಗರಿಪುದನುಪಮ । ತೆರದೊಳಿಂದು ॥ ೯೯ ॥

ಹತ್ತು ದಿನದುತ್ಸವವ ನಾಳೆಯೆ । ಚಿತ್ತ ಶುದ್ದಿಯೊಳೆಯ್ದೆ ತೊಡಗುತೆ ।
ಮತ್ತೆ ಗಿರಿಜೆಯ ಭಜಿಸ ಬೇಕೀ । ಪತ್ತನದೊಳು । ॥ ೧೦೦ ॥

ಏನು ಕಾರ್ಯಕ್ರಮವನಿರಿಸುವು । ದೀ ನವೀನ ಮಹೋತ್ಸವಕ್ಕೆನೆ ।
ಸಾನುರಾಗದೆ ಸಾಂಬನೆರಗುತೆ । ತಾನು ನುಡಿದ ॥ ೧೦೧ ॥

ಪರಿಪರಿಯ ಸಂಗೀತ ನರ್ತನ । ಸರಸ ನಾಟಕ ವಾದ್ಯವಾದನ ।
ದುರುತರದ ಕಾರ್ಯಂಗಳನು ನಾ । ವಿರಿಸಬೇಕು ॥ ೧೦೨ ॥

ವಿಧವಿಧದ ದೃಶ್ಯಂಗಳಿಂದತಿ । ಮುದವನೀಯುವ ಛದ್ಮವೇಷವ ।
ಹದವರಿತು ನಾವೆಸಗುವುದು ಬಲು । ಚದುರತೆಯೊಳು ॥ ೧೦೩ ॥

ಆಗ ಕೃತವರ್ಮಕನು ನುಡಿದನು । ಸಾಗರಾಂತರ ನೃಪಮಹೀಸುರ ।
ಯೋಗಿ ಮುಖ್ಯರ ಬರಿಸಬೇಕು ಸ । ರಾಗದಿಂದ ॥ ೧೦೪ ॥

ರಂಗಭೂಮಿಯ ಸರ್ವಭಾಗವ । ಶೃಂಗರಿಸಿ ರತಿಪತಿಗೆ ಸರಿಯಹ ।
ಮಂಗಲಾಂಗಿಯರಿಂದ ನರ್ತನ । ಸಂಗಟಿಪುದು ॥ ೧೦೫ ॥

ಹರಿಕಥೆಯ ಮೇಳವಿಸಿ ಭಜನೆಯ । ನಿರಿಸಿ ಧಾರ್ಮಿಕ ಕಾರ್ಯಗಳ ನುರು ।
ತರದೊಳೆಸಗುತೆ ಹರುಷಗೊಳಿಪುದು । ಪುರಜನರನು ॥ ೧೦೬ ॥

**ವಾರ್ಧಕ**

ಹರುಷದಿಂದವರೆಂದ ಮಾತುಗಳನಾಲಿಸುತೆ ।
ಸರಸಿಜಸುನೇತ್ರನತ್ಯಾನಂದನಿಂದವರೊ ।
ಳೊರೆದನೀ ಕಾರ್ಯಮಂ ನಿರ್ವಹಿಸುವಧಿಕಾರಮಂ ನಿಮಗೆ ಕೊಟ್ಟೆನಿಂದು ॥
ಸರಿಯಾಗಿ ನೀವಿದಂ ನಡೆಸಿರೆಂದೊರೆಯುತ್ತೆ ।
ಹರಿ ನಡೆದ ಬಳಿಕ ಸಾಂಬನು ಬಹಳ ತೋಷದಿಂ ।
ಕರೆದು ಕೃತವರ್ಮಕನ ಕೂಡೆ ಮರುದಿನದ ಕಾರ್ಯಕ್ರಮದ ಕುರಿತೆಂದನು ॥ ೧೦೭ ॥

**ರಾಗ ಬೇಗಡೆ ಆದಿತಾಳ**

ಕೃತವರ್ಮಕನೆ ಕೇಳು ನೀನೆನ್ನ ಮಾತ ।
ಹಿತದಿಂದ ನುಡಿಯುವೆನೀಗ ವಿಖ್ಯಾತ ॥ ಪಲ್ಲವಿ ॥

ನಾರಿಯ ವೇಷವ ಧರಿಸುತ್ತೆ ನಾನು ।
ಭೋರನೆ ಬರಲೆನ್ನ ಪತಿಯಾಗು ನೀನು ॥
ತೋರುವ ನಾವು ನಮ್ಮಭಿನಯವನ್ನು ।
ಸಾರಸಾಕ್ಷನು ಮೆಚ್ಚುವಂತೆ ಮುಂದಿನ್ನು ॥ ೧೦೮ ॥

ನಾನು ಪೇಳುವೆನು ಗರ್ಭಿಣಿ ಎಂದೆನುತ್ತೆ ।
ನೀನದಕಹುದೆಂದು ತಲೆಯ ತೂಗುತ್ತೆ ॥
ಸಾನುರಾಗದೊಳು ಬೀದಿಯೊಳು ಪೋಗುತ್ತೆ ।
ಮಾನಿನಿಯರನು ನಂಬಿಸಬೇಕು ಮತ್ತೆ ॥ ೧೦೯ ॥

ಪರಿಚಯವಾರಿಗೂ ಸಿಕ್ಕದ ಹಾಗೆ ।
ಸುರುಚಿರ ವೇಷವ ಧರಿಸುತ್ತೆ ಹೀಗೆ ॥
ಪುರಜನರೆಲ್ಲರ ಸೇರಿಸಿ ಕೊನೆಗೆ ।
ಪರಿಹಾಸವೆಸಗುತ್ತೆ ತೆರಳುವ ಮನೆಗೆ ॥ ೧೧೦ ॥

**ಭಾಮಿನಿ**

ಎಂದವರು ನಿರ್ಧರಿಸುತೊಡನೆಯೆ ।
ಬಂದು ಮನೆಯನು ಸೇರಿ ಮರುದಿನ ।
ಚಂದದಿಂ ವೇಷವನು ಧರಿಸುತೆ ಬಳಿಕ ಪೊರಮಟ್ಟು ॥
ಮುಂದುವರಿದಲ್ಲಿರ್ಪ ಮಾರಿಯ ।
ಮಂದಿರಕೆ ಬರುತಿರಲು ಮುನಿಕುಲ ।
ವೃಂದದಿಂದೊಡಗೂಡಿ ಕಣ್ವರು ಬಂದರಾಯೆಡೆಗೆ ॥ ೧೧೧ ॥

**ರಾಗ ಸಾಂಗತ್ಯ ರೂಪಕತಾಳ**

ವರಮುನಿವರ್ಯರ ಕಂಡೊಡನಾಕ್ಷಣ ।
ಚರಣಕ್ಕೆ ಮಣಿಯುತೆಲ್ಲವರು ॥
ಪರಮ ಭಕ್ತಿಯನು ತೋರ್ಪಡಿಸುತ್ತಲಿರೆ ಬಳಿ ।
ಕೊರೆದನು ಕೃತವರ್ಮ ನಗುತೆ ॥ ೧೧೨ ॥

ಘನಮಹಿಮರೆ ನೀವು ಬಂದುದೀಗೊಳಿತೆನ್ನ ।
ವನಿತೆಯು ಬಸುರಿಯಾಗಿಹಳು ॥
ಜನಿಸುವ ಶಿಶುವಾವುದಿವಳಿಗೆಂದೊರೆಯುತ್ತೆ ।
ಮನಕೆ ತೋಷವನೀವುದೀಗ ॥ ೧೧೩ ॥

ಎಂದೆನುತೆಲ್ಲರು ಹುಸಿನಗೆಯನು ಬೀರು ।
ತಂದು ಹಾಸ್ಯವ ಗೆಯ್ಯುತಿರಲು ॥
ಚಂದದಿಂ ಯೋಚಿಸಿ ಮುನಿಮೃಡನಾಕ್ಷಣ ।
ನೊಂದು ರೋಷವ ತಾಳುತೆಂದ ॥ ೧೧೪ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲವೆಲವೊ ನಿನ್ನವಳು ಹೆರುವಳು ।
ಕುಲವಿಘಾತಕ ಮುಸಲವೊಂದನು ।
ಕೊಲುವುದಿದು ನಿಮ್ಮವರ ತಲೆಯನು । ನೆಲಕೆ ಕೆಡಹಿ ॥ ೧೧೫ ॥

ಖೂಳರಾಗಿಹ ನಿಮ್ಮ ತಲೆಯನು ।
ಹೋಳುಗೈವಾ ಮುಸಲ ಜನಿಸಲಿ ।
ನಾಳೆಯೇ ನಿನ್ನವಳ ಬಸುರಲಿ । ಕೇಳಿರಿದನು ॥ ೧೧೬ ॥

ಮಂಡೆಗಟ್ಟಿಯೆನುತ್ತೆ ಮದದಲಿ ।
ಬಂಡೆಯನು ಹಾಯ್ದವನ ತೆರದಿಂ ।
ದಂಡಲೆಯ ಬೇಕೆಲ್ಲರಿಂದೀ । ಭಂಡತನಕೆ ॥ ೧೧೭ ॥

**ಕಂದ**
ಮುನಿಪತಿಯಿಂತೊರೆಯುತೆ ನಿಜ ।
ವನದೆಡೆ ಗೈದಲ್ಕೆ ಬಳಿಕ ಯಾದವರೆಲ್ಲರ್ ॥
ಮನದೊಳ್ ರೋದಿಸೆ ಸಾಂಬನು ।
ಸನಿಹದಳಿರ್ಪವರ ಕೂಡೆ ಬಳಿಕಿಂತೆಂದಂ ॥ ೧೧೮ ॥

**ರಾಗ ನೀಲಾಂಬರಿ ರೂಪಕತಾಳ**
ಅಕಟಕಟೆಂತೇತಕೆ ಮತಿ । ವಿಕಳತೆಯಂದೀದಿನ ಯದು ।
ನಿಕರವ ನೆರಹುತೆ ಮುನಿಕುಲ । ಮುಕುರವ ಕೆಣಕಿದೆನೊ ॥ ೧೧೯ ॥

ಏತಕೆ ನಾರೀವೇಷವ । ನಾ ತಳೆದೆನೊ ಕೃತವರ್ಮನ ।
ನೇತಕೆ ಸೇರಿಸಿಕೊಂಡೆನೊ । ಘಾತಕವಾಯ್ತಲ್ಲ ॥ ೧೨೦ ॥

ಎಂತೈದಿತು ನವರಾತ್ರಿಯಿ । ದೆಂತೈದಿಹನೋ ಮುನಿಪತಿ ।
ಯಂತಕನಂತೀಯೆಡೆಗತಿ ಚಿಂತೆಯು ಬಂತಲ್ಲಾ ॥ ೧೨೧ ॥

ಆರೊಡನುಸುರಲಿ ದುಃಖವ । ನಾರಿಹರೆನ್ನನು ಪೊರೆಯುವ ।
ಧೀರರು ಜಗದೊಳಗಯ್ಯೋ । ತೋರದು ಗತಿ ಎನಗೆ ॥ ೧೨೨ ॥

**ಭಾಮಿನಿ**
ಇಂತವನು ಮರುಗುತ್ತೆ ಚಿಂತೆಯ ।
ನಾಂತಿರಲು ಕೃತವರ್ಮಕನು ತ ।
ನ್ನಂತರಂಗದೊಳೆಯ್ದೆ ಯೋಚಿಸಿ ಮತ್ತೆ ಸಾಂಬನನು ॥
ಸಂತವಿಸುತೀ ಕಷ್ಟವನು ದನು ।
ಜಾಂತಕನು ನೀಗುವನೆನುತೆ ನಿ ।
ಶ್ಚಿಂತೆಯಿಂ ಶ್ರೀಹರಿಯ ಬಳಿಗೈತಂದನವರೊಡನೆ ॥ ೧೨೩ ॥

## ಅಂಕ ೭. ಯಾದವರ ದುಃಖನಿವಾರಣೆ

**ರಾಗ ಸಾಂಗತ್ಯ ರೂಪಕತಾಳ**
ಇತ್ತಲಾ ಶ್ರೀಹರಿ ತನ್ನ ಮಂದಿರದೊಳು ।
ಮತ್ತಕಾಶಿನಿಯರ ನೆರಹಿ ॥
ನೆತ್ತವನಾಡುತ್ತಲಿರುತಿರಲಲ್ಲಿಗೆ ।
ಮತ್ತೆ ಬಂದರು ಸಾಂಬಾದಿಗಳು ॥ ೧೨೪ ॥

ಪಾದಕ್ಕೆ ವಂದಿಸಿ ನಿಂದು ದುಃಖಿಸುತಿರ್ಪ ।
ಯಾದವರನು ಕಂಡು ಹರಿಯು ॥

ಭೇದವನಾಂತಿರ್ಪುದೇಕೆನೆ ಕೃತವರ್ಮ ।
ನಾ ದಯಾನಿಧಿಯೊಡನೆಂದ ॥ ೧೨೫ ॥

**ರಾಗ ಕೇದಾರಗೌಳ ಅಷ್ಟತಾಳ**

ದೇವ ನಿನ್ನಾಜ್ಞೆಯಂತೀ ದಿನದುತ್ಸವ । ದಾ ವೇಳೆಯೊಳು ನಡೆವ ॥
ಪಾವನ ಕಾರ್ಯಕ್ಕೆ ವೇಷವ ಧರಿಸುತ್ತೆ । ನಾವು ಪೋಗುತಲಿರ್ದೆವು ॥ ೧೨೬ ॥

ನಾನೊಬ್ಬ ಪುರುಷನಂತಾ ಸಾಂಬನನುಪಮ । ಮಾನಿನಿಯಂದದಲಿ ॥
ಸಾನಂದದಿಂದೆ ವೇಷವ ಧರಿಸುತ್ತೆ ವಿ । ಧಾನದಿಂ ಪೋಗುವಾಗ ॥ ೧೨೭ ॥

ಮುನಿಕಣ್ವರೈತರೆ ನಾನು ವಿನೋದದಿಂ । ಘನಮಹಿಮಾನ್ವಿತರೆ ॥
ಮನದನ್ನೆಯಾದಿವಳೇನನು ಹೆರುವಳೆಂ । ದೆನೆ ಕನಲುತ್ತವರು ॥ ೧೨೮ ॥

ನಿನ್ನ ವಂಶವ ಕೊಲ್ವ ಮುಸಲವ ಹೆರುವಳೆಂ । ದೆನ್ನುತೆ ಮುನಿ ಪೋದನು ॥
ಬನ್ನವಾಯ್ತಿದರಿಂದಲಿನ್ನೇವೆನೆನಲಾಗ । ಪನ್ನಗಶಯನನೆಂದ ॥ ೧೨೯ ॥

**ವಾರ್ಧಕ**

ಇದು ಸತ್ಯವಾಗದಿರದಿದಕೆ ನೀವೊಂದಿನಿತು ।
ಬೆದರದಿರಿ ಜನಿಸಿದೊನಕೆಯನು ಕೊಂಡೊಯ್ದು ವಾ ।
ರಿಧಿಯ ಸೈಕತಶಿಲೆಯೊಳೆಡೆಬಿಡದೆ ತೇದದನು ನಿರ್ನಾಮವೆಸಗಿ ಬಳಿಕ ॥
ಮುದದಿಂದೆ ಬನ್ನಿರೆಂದಚ್ಯುತಂ ಬೆಸಸಲವ ।
ರಧಿಕ ತೋಷದೊಳಿರಲು ಮರುದಿನವೆ ಜನಿಸಿತಾ ।
ಯದುಕುಲವಿನಾಶಕಾರಕ ಮುಸಲವಾಸಾಂಬನುದರ ಪ್ರದೇಶದಿಂದೆ ॥ ೧೩೦ ॥

ಆಗಳಿಳೆ ನಡುಗಿತುಲ್ಕಾಪಾತವಾಯ್ತು ಬಿರು ।
ಸಾಗಿ ಬೀಸಿತು ಚಂಡಮಾರುತಂ ಧರಣಿಯಂ ।
ಸಾಗರದ ಜಲವೆಯ್ದೆ ಮುತ್ತಿ ಮುಸುಕಿತ್ತು ನಡುಹಗಲೆ ನರಿಗಳ್ ಕೂಗುತೆ ॥
ಸಾಗುತಿರಲಿದು ದುರ್ನಿಮಿತ್ತ ವೆಂದರಿತು ಬುಧ ।
ರಾಗಮಿಸಿ ಶಾಂತಿಕರ್ಮಂಗಳಂ ಗೆಯ್ಯೆ ಮುಂ ।
ದಾಗಿ ಯದುವೀರರೈತಂದರೊನಕೆಯನು ನಿರ್ನಾಮವೆಸಗುವೆವೆನ್ನುತೆ ॥ ೧೩೧ ॥

**ಕಂದ**

ಬಂದೆಲ್ಲರ್ ಮುಸಲದ ಬಳಿ ।
ನಿಂದದನೀಕ್ಷಿಸುತೆ ಪಿಡಿದು ದೇವಾಸುರರಾ ॥
ಮಂದರವ ಪೊತ್ತಂದದೊ ।
ಳಂದತಿ ಬಲದಿಂದೆ ಪೊತ್ತು ನಡೆಯುತ್ತಿರ್ದರ್ ॥ ೧೩೨ ॥

**ರಾಗ ಶಂಕರಾಭರಣ ಮಟ್ಟೆತಾಳ**

ಬಂದರು । ಯಾದವರು ಮುಸಲವನಾಂತು । ಬಂದರು ॥ ಪಲ್ಲವಿ ॥

ಬಂದರು ವಿಘ್ನೇಶನನ್ನು । ಮೋದ ।
ದಿಂದೆ ಪೂಜಿಸುತೆ ಮಕ್ಕಳನ್ನು । ದೂರ ।
ನಿಂದಿರೆಂದೆಚ್ಚರಿಸುತೆ ಸರ್ವರನು ಕರೆ ।
ತಂದೆತ್ತಿ ಪೋಪಂತೆ ಗೆಯ್ದು ನಿರ್ಣಯವನ್ನು ॥ ಅ.ಪಲ್ಲವಿ ॥

ಬಿಡದೆ ಯಾದವರೆಲ್ಲ ಕೂಡಿ । ಮತ್ತೆ ।
ತಡೆಯದೆಲ್ಲರು ಮನಮಾಡಿ । ಸೇರು ।
ತೊಡನೆತ್ತುವಂತೆ ಮಾತಾಡಿ । ಹಾಗೆ ।
ಪಿಡಿದೆತ್ತಲದನು ಮುಂದೂಡಿ । ಬೇಗ ।
ನಡಿಯಿಡುವಂತೆ ಸೂಚನೆಯನು ನೆರೆನೀಡಿ ।
ನಡೆದರು ಪೊತ್ತು ಕೊಂಡದನು ನಗಾಡಿ ॥ ಬಂದರು ॥ ೧೩೩ ॥

ಏರಿಳಿಯುತ್ತ ಪೋಗುತ್ತೆ । ಹೊತ್ತ ।
ಭಾರಕ್ಕೆ ಬಳಲಿ ಬಾಡುತ್ತೆ । ನಿಂದು ।
ಮಿರಿ ಸತ್ವವನು ತೋರುತ್ತೆ । ರೋಷ ।
ವೇರಿ ಗರ್ಜಿಸಿ ಹೂಂಕರಿಸುತೆ । ಧೀರ ।
ವೀರ ಯಾದವರೆಲ್ಲರದನ್ನೆದೆ ಹೂಡುತ್ತೆ ।
ಭೂರಿಸಾಗರದೆಡೆಗದನು ತಂದರು ಮತ್ತೆ ॥ ಬಂದರು ॥ ೧೩೪ ॥

**ಭಾಮಿನಿ**

ಧರೆಯ ಭಾರವ ಮಿರಿಸುವ ಭೀ ।
ಕರದ ಮುಸಲವ ಹೊತ್ತು ತಂದಾ ।
ಶರನಿಧಿಯ ತೀರದಲಿ ಯಾದವರಿಳುಹಿ ಮತ್ತದನು ।
ಮೆರೆವ ಸೈಕತಶಿಲೆಯ ಮೇಲಿ ।
ಟ್ಟರೆಯುತಿರ್ದರು ಬಿಡದೆ ವರ್ಷಗ ।
ಳೆರಡು ತೀರುವವರೆಗೆ ಹಗಲಿರುಳೆನ್ನದನುದಿನವು ॥ ೧೩೫ ॥

**ರಾಗ ಸಾಂಗತ್ಯ ರೂಪಕತಾಳ**

ಹೀಗವರರೆಯಲು ಮುಸಲವು ಶರಗಾತ್ರ
ವಾಗುಳಿಯಿತು ಸವೆಯುತ್ತೆ ॥
ಹೇಗಿದನಿನ್ನರೆಯುವುದೆಂದು ತಿಳಿಯದೆ ।
ಕೂಗುತೆ ಕುಳಿತಿರಲವರು ॥ ೧೩೬ ॥

ಕೃತವರ್ಮನೆಂದನೀ ಮುಸಲದ ತುಂಡಿನಿಂ ।
ದಿತರರಿಗಿರದಿನ್ನು ಬಾಧೆ ॥
ಜತನದಿಂದಿದನಬ್ಧಿಗೆಸೆಯುತೆ ನಾವೀಗ ।
ಜೊತೆಯಾಗಿ ಸಾಗುವ ಪುರಕೆ ॥ ೧೩೭ ॥

**ಕಂದ**
ಎಂದದನಬ್ಧಿಗೆ ಬಿಸುಡುತೆ ।
ಬಂದಾ ಹರಿಯೊಡನೆ ವಿಷಯಮಂ ನೆರೆಯರುಹು ॥
ತ್ತಂದದೊಳಿರುತಿರ್ದರ್ ನಿಜ ।
ಮಂದಿರದೊಳ್ ಬಹಳ ತೋಷದಿಂದವರೆಲ್ಲರ್ ॥ ೧೩೮ ॥

## ಅಂಕ ೮. ಮುಸಲಾಸ್ತ್ರಪ್ರದಾನ

**ರಾಗ ಭೈರವಿ ಝಂಪೆತಾಳ**
ಇತ್ತ ಭಿಲ್ಲನೆನಿಪ್ಪ ಮಿಂಗುಲಿಗನೊಂದು ದಿನ ।
ಹತ್ತಿರಕೆ ಕರೆದು ನಿಜ ಸತಿಯೊಡನೆ ಮುದದಿ ॥
ಚಿತ್ತಶುದ್ಧಿಯೊಳೆಂದನೆಲೆ ಭಿಲ್ಲಿ ಎನಗೆ ದೊರ ।
ಕಿತ್ತೊಂದು ಮಿನದರ ವಿಷಯವೇನೆಂಬೆ ॥ ೧೪೦ ॥

ಅದರ ಜಠರದೊಳೊಂದು ಶರ ದೊರಕಿತೆನಗೆ ನಾ ।
ನದನು ಕೊಂಡೊಯ್ದು ಶಬರೇಶಗೀಯಲ್ಕೆ ॥
ಮುದದಿಂದ ಕೊಡುವನೆನಗುಡುಗೊರೆಯನಲ್ಲದಿ ।
ನ್ನಧಿಕ ಧನ ದೊರೆವುದೆನಲವಳು ಪೇಳಿದಳು ॥ ೧೪೧ ॥

ಪತಿಯೆ ನೀನಲ್ಲಿಂದ ಪಡೆದುದನು ಕೊಟ್ಟೆನ್ನ ।
ಹಿತವ ಪರಿಪೂರ್ಣಗೊಳಿಸುತ್ತೆನ್ನ ಸುತರ ॥
ಜತನದಿಂ ಪಾಲಿಸುವುದೆನಲೊಪ್ಪುತವನು ನಿಜ ।
ಸತಿಯೊಡನೆ ನುಡಿದನೀ ರೀತಿಯಿಂದಾಗ ॥ ೧೪೨ ॥

ಹೋದ ನಾನಲ್ಲಿಂದ ಬರ್ಪವರೆಗಿಲ್ಲಿಯೇ ।
ಕಾದುಕೊಂಡಿರು ಜತನದಿಂದೆಮ್ಮ ಮನೆಯ ॥
ಮೋದದಿಂದೆನುತೊರೆದು ನಡೆದನವನಾವನದ ।
ಹಾದಿಯನು ಹಿಡಿದಸ್ತ್ರಸಹಿತ ಶೀಘ್ರದಲಿ ॥ ೧೪೩ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಜರನೆನುವ ಶಬರೇಶನಿತ್ತಲು । ಕರೆದು ತನ್ನನುಚರರನೀಕ್ಷಿಸಿ ।
ಸರಸದಿಂದೀಪರಿಯೊಳೊರೆದನು । ಭರದೊಳಾಗ ॥ ೧೪೪ ॥

ಮೆರೆವ ನಮ್ಮ ನಿಷಾದವನದೊಳು । ಹರಿ ಶರಭ ಮಹಿಷಾದಿಗಳ ದು ।
ರ್ಭರದ ಬಾಧೆಗಳಿರ್ಪವೇನೀ । ವರುಹಿರೆನಗೆ ॥ ೧೪೫ ॥

ದುರುಳ ದುರ್ಜನರ್ರೈದಿ ನಿಮ್ಮನು । ಬರಿದೆ ಪೀಡಿಸುತಿರ್ಪರ್ರೈ ನೆರೆ ।
ಹೊರೆಯ ಶಬರರು ಕಷ್ಟವನು ಕೊ । ಟ್ಟಿರುವರೇನೊ ॥ ೧೪೬ ॥

ಇಂದು ನಮ್ಮಿವನದೊಳತಿ ಸುಖ । ದಿಂದ ನಾವಿರುತಿಹೆವೆನಲು ನಡೆ ।
ತಂದನಾ ಎಡೆಗೊರ್ವ ಧೀವರ । ನಂದು ಮುದದಿ ॥ ೧೪೭ ॥

ವಂದಿಸುತೆ ನಿಂದವನನೀಕ್ಷಿಸು । ತೆಂದನಾ ಶಬರೇಶನೆಲವೊ ।
ಬಂದವನು ನೀನಾರೆನಲ್ಕವ । ನಂದು ನುಡಿದ ॥ ೧೪೮ ॥

**ರಾಗ ಮುಖಾರಿ ಏಕತಾಳ**

ವನದೊಡೆಯನೆ ಕೇಳು ಬೇಗ । ಪೇಳುವುದನ್ನು ।
ಮನದೊಲವಿಂದೆ ನೀನೀಗ ॥
ಘನವನನಿಧಿಯಿಂ । ದಿನನಿತ್ಯವು ಮಿ ।
ನನು ಹಿಡಿಯುತೆ ಜೀ । ವನವನು ನಡೆಸುವ ।
ಮನೆತನದವನೆ । ನ್ನನು ಸರ್ವರು ಭಿ ।
ಲ್ಲನೆನುತ್ತೀ ಮೇ । ದಿನಿಯೊಳು ಕರೆವರು ॥ ೧೪೯ ॥

ಎಂದು ಸಮುದ್ರಕೆಯ್ದುತ್ತೆ । ಗಾಳವ ಹಾಕು ।
ತೊಂದು ಮಿನನು ಹಿಡಿಯುತ್ತೆ ॥
ತಂದದರುದರವ । ನಂದದೆ ಸೀಳಲು ।
ಚಂದದ ಶರವೆನ । ಗಿಂದೇ ದೊರಕಿತು ।
ತಂದೆನು ಕಾಣಿಕೆ । ಎಂದಿದನೆಲೆ ಗುಣ ।
ಸಿಂಧುವೆ ರಕ್ಷಿಸು । ಮುಂದೆನುತಿತ್ತನು ॥ ೧೫೦ ॥

**ಭಾಮಿನಿ**

ಒಡನೆ ಧೀವರನಿತ್ತ ಬಾಣವ ।
ನಡವಿಯೊಡೆಯನು ನೋಡಿ ತೋಷದ ।
ಕಡಲೊಳಾಳುತ್ತಿದು ಮಹಾದಿವ್ಯಾಸ್ತ್ರವೆಂದೆನುತೆ ॥
ನುಡಿದು ನಿಜಶರನಿಧಿಯೊಳಿರಿಸುತೆ ।

ತಡೆಯದಾ ಧೀವರಗೆ ಬಹುವಿಧ ।
ನುಡುಗೊರೆಯನಿತ್ತವನ ಕಳುಹುತೆ ಸುಖದೊಳಿರುತಿರ್ದ ॥ ೧೫೧ ॥

## ಅಂಕ ೯. ಯಾದವರ ನಿರ್ನಾಮ

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ದ್ವಾರಕಾಪುರವರದೊಳಿತ್ತಲು । ತೋರಿದುತ್ಪಾತವನು ಕಾಣುತೆ ।
ಸಾರಸಾಕ್ಷನು ನುಡಿದನಿದು ಗಾಂ । ಧಾರಿ ಶಾಪ ॥ ೧೫೨ ॥

ಅಲ್ಲದಿರ್ದೊಡೆ ಧರೆಯು ಕಂಪಿಸಿ । ತಲ್ಲಣಿಸುವುದೆ ನರಿಗಳೀ ಹಗ ।
ಲೆಲ್ಲ ಕೂಗುವುದುಂಟೆ ನಾಡಿನೊ । ಳೆಲ್ಲೆಡೆಯೊಳು ॥ ೧೫೩ ॥

ಅರುಣವರ್ಷವು ಸುರಿವುತಿದೆ ಭೀ । ಕರ ಮಹಾನಿಲ ಸುಳಿವುತಿದೆ ದು ।
ರ್ಧರದ ಸಿಡಿಲಾರ್ಭಟಿಸುತಿದೆ ಜನ । ತರಹರಿಪುದು ॥ ೧೫೪ ॥

**ವಾರ್ಧಕ**
ಇದರ ಕುರಿತೀಗ ಯೋಚನೆಗೆಯ್ಯಬೇಕದಕೆ ।
ಮೊದಲಾಗಿ ಬರಲಿ ಕೃತವರ್ಮಸಾತ್ಯಕಿಸಾಂಬ ।
ಗದ ಮಿನಕೇತನಾದಿಗಳೆಂದು ದೂತರಂ ಕರೆದು ಕಳುಹಲ್ಕಾ ಕ್ಷಣ ॥
ಮುದದೊಳವರೆಲ್ಲರೈತಂದು ವಂದಿಸಿ ಮತ್ತೆ ।
ಸದಮಲಾತ್ಮಕನೊಳೇನಪ್ಪಣೆ ಎನಲ್ಕಾಗ ।
ಮದನಪಿತನವರೊಡನೆ ನುಡಿದನುತ್ಪಾತಶತಕದ ವಿಷಯವೆಲ್ಲವನ್ನು ॥ ೧೫೫ ॥

**ರಾಗ ಕೇದಾರಗೌಳ ಅಷ್ಟತಾಳ**
ಬಂಧುಬಾಂಧವರೆ ನೀವೆಲ್ಲರು ಕೇಳಬೇ । ಕಿಂದಿಲ್ಲಿ ಕಾಣಿಸುವ ॥ ದಂದುಗದುತ್ಪಾತಕಿನ್ನೇನನೆಸಗುವು ।
ದೆಂದು ಯೋಚನೆ ಗೆಯ್ದಿರೆ ॥ ೧೫೬ ॥

ಅದರಿಂದನಿಷ್ಟ ಸಂಭವಿಸದೆ ಪೋಗದು । ಮೊದಲಿದಕೇವೆವಿನ್ನು ॥
ಬೆದರದೆ ಯೋಚಿಸಿ ಪೇಳ್ವುದೆಂದೆನೆ ಸಾಂಬ ।
ನಿದಿರೆದ್ದು ನಮಿಸುತೆಂದ ॥ ೧೫೭ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಪಿತನೆ ಲಾಲಿಸು ಧರೆಯೊಳಾರೋ ।
ದಿತಿಸುತರು ದುಷ್ಕಾರ್ಯವೆಸಗುವ ।
ರತಿಶಯದೊಳವರನ್ನು ಕೊಲುವೆನು । ಕ್ಷಿತಿಗೆ ಕೆಡಹಿ ॥ ೧೫೮ ॥

ಒಡನೆ ಸಾತ್ಯಕಿ ನುಡಿದನಾರೋ ।
ದಡಿಗರನ್ನೆಯವೆಸಗುತಿರಲೀ ।
ಪೊಡವಿಯೊಳಗಿಂತಪ್ಪುದವರನು । ಕಡಿದು ಕೊಲುವೆ ॥ ೧೫೯ ॥

ಭರದೊಳೆದ್ದಾಗದನು ನುಡಿದನು ।
ಮೆರೆವ ಮಹದುತ್ಪಾತ ಶತಕ ।
ಕ್ಕಿರುವ ಕಾರಣವನ್ನು ಶೋಧಿಸಿ । ಬರುವೆನಿಂದು ॥ ೧೬೦ ॥

ಮಿನ ಕೇತನನಾಗ ನುಡಿದನು ।
ನಾನೆ ಪೊರಡುವೆನಿದನು ಶೋಧಿಸೆ ।
ನೀನನುಜ್ಞೆಯನೀಯಬೇಕನು । ಮಾನವಿಡದೆ ॥ ೧೬೧ ॥

ಆಗ ಕೃತವರ್ಮಕನು ನುಡಿದನು ।
ಹೇಗಿದನು ನಾನರಿಯ ಬಲ್ಲೆನು ।
ನಾಗಶಯನನೆ ನೀನು ಹೇಳಿದ । ಹಾಗೆ ಗೈವೆ ॥ ೧೬೨ ॥

ನಿನಗರಿಯದಿಹ ವಿಷಯವಾವುದು ।
ಘನಮಹಿಮ ದಯೆದೋರಿ ಪೊರೆಯೆಂ ।
ದೆನಲು ಹರಿ ಯೋಚಿಸುತೆ ನುಡಿದನು । ನೆನೆಯುತಾಗ ॥ ೧೬೩ ॥

**ರಾಗ ಕಾಂಭೋಜಿ ಝಂಪೆತಾಳ**

ಆದೊಡಾಲಿಪುದು ತಲೆದೋರಿದುತ್ಪಾತ ಕಾ ।
ವೇದವಿದ ಕಣ್ವಮುನಿಯನ್ನು ॥
ಹಾದಿಯೊಳು ನಿಲಿಸಿ ಪರಿಹಾಸವನು ಗೈದುದಿದ ।
ಕಾದಿ ಕಾರಣವೆನ್ನಬಹುದು ॥ ೧೬೪ ॥

ಇದರ ಪರಿಹಾರಕೀ ದಿನವೆ ನೀವೆಲ್ಲರತಿ ।
ಮುದದಿಂದ ಧರೆಯೊಳಿರುತಿರ್ಪ ॥
ಸದಮಲಮಹಾತೀರ್ಥದೊಳು ಮಿಂದು ಬಂದೊಡ ।
ಪ್ಪುದು ನಮಗೆ ಸುಕ್ಷೇಮವಮಿತ ॥ ೧೬೫ ॥

ಎಂದು ಹರಿ ನುಡಿಯಲವರೆಲ್ಲರತ್ಯಾನಂದ ।
ದಿಂದ ತೀರ್ಥಾಟನಕೆ ಪೊರಟು ॥
ನಿಂದಚ್ಯುತನ ಪಾದಕೆರಗುತಪ್ಪಣೆಯ ಪಡೆ ।
ದಂದೆ ನಡೆದರು ಮೋದದಿಂದ ॥ ೧೬೬ ॥

ಅಂತು ಯಾದವರೆಲ್ಲರೊಂದಾಗಿ ನಡೆಯುತ |
ತ್ಯಂತ ಶೀಘ್ರದೊಳು ಮುಂಬರಿದು ||
ಕಂತುಪಿತನನು ನೆನೆಯುತ ಪರಾಂಬುಧಿಯ ತಡಿಗೆ |
ಸಂತಸದೆ ಬಂದರವರಂದು || ೧೯೭ ||

ಅಂದು ಕಾರ್ತಿಕ ಶುದ್ಧ ಪೌರ್ಣಮಿ ಎನುತ್ತವರು |
ಬಂದಾ ಪ್ರಭಾಸತೀರ್ಥದೊಳು ||
ಮಿಂದು ತಡಿಗಡರುತಾಯೆಡೆಯೊಳೇ ನೆಲಸಿರ |
ಲ್ಕೆಂದನಾ ಸಾಂಬನೆಲ್ಲರೊಳು || ೧೯೮ ||

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಇಂದು ಕಾರ್ತಿಕ ಪೌರ್ಣಮಿಯ ದಿನ |
ದಂದು ರಾತ್ರೆಯ ವೇಳೆಯಲಿ ನಾ |
ವಂದದಿಂದುತ್ಸವವನತಿ ಸಾ |
ನಂದದಿಂದೀಯೆಡೆಯೊಳೇ | ನಡೆಸಬೇಕು || ೧೯೯ ||

ಅದಕ್ಕೆ ನೀವಿಂದೊಪ್ಪಿಗೆಯ ನಿ |
ತ್ತಧಿಕ ಸಹಕಾರವನ್ನು ನೀಡುವು |
ದಿದುವೆ ಮುಖ್ಯವೆನಲ್ಕೆ ಸರ್ವರು |
ಮುದದೊಳೊಪ್ಪಿಕೆ ಇತ್ತರು | ಸಹಯರಾಗಿ || ೧೮೦ ||

**ಭಾಮಿನಿ**

ಮತ್ತೆ ನೃತ್ಯದ ನಾರಿಯರ ಕರೆ |
ಸುತ್ತೆ ನರ್ತನಕಾಜ್ಞೆಯನು ತಾ |
ನಿತ್ತು ಗದ ಕಾಮಾನಿರುದ್ಧ ಪ್ರಮುಖರನು ಬರಿಸಿ ||
ಚಿತ್ತಶುದ್ಧಿಯೊಳೆಯ್ದೆ ಕುಳಿತಿರೆ |
ಮತ್ತಕಾಶಿನಿಯರ್ಕಳ್ಕೈತಂ |
ದುತ್ತಮದ ರೀತಿಯೊಳು ನರ್ತಿಸುತಿರ್ದರಂದೊಲಿದು || ೧೮೧ ||

**ರಾಗ ನವರೋಜು ಏಕತಾಳ**

ನಲಿದರು ನಾರಿಯರಂದು | ಬಹ | ಒಲವಿನೊಳೆಲ್ಲರು ಬಂದು ||
ಚೆಲುವನು ಬೀರುತ | ನಲವನು ತೋರುತ |
ಗೆಲವನು ಸಾರುತ | ನೆಲವನು ಗೀರುತ || ೧೮೨ ||

ಹುಬ್ಬನು ಹಾರಿಸುತಾಗ | ಮಹ | ದುಬ್ಬಿನೊಳೇರುತೆ ಬೇಗ ||
ಕೊಬ್ಬಿದ ನಾರಿಯ | ರಬ್ಬರಿಸುತಲಾ |
ಹಬ್ಬದ ದಿನದೊಳ | ಗುಬ್ಬುತೆ ನಲಿದರು || ೧೮೩ ||

ಕೊರಳನು ಕೊಂಕಿಸಿ ಮತ್ತೆ । ನಿಜ । ಕರಗಳ ಡೊಂಕಿಸುತೆತ್ತೆ ॥
ಸರಸದೊಳೆಲ್ಲರು । ಸುರಸುಂದರಿಯರ ।
ತೆರದಿಂ ಸಭೆಯೊಳು । ನೆರೆ ನರ್ತಿಸಿದರು ॥ ೧೭೪ ॥

**ಭಾಮಿನಿ**
ನಾರಿಯರು ನರ್ತಿಪುದನೀಕ್ಷಿಸಿ ।
ಭೂರಿ ಸಂತೋಷದೊಳು ಸಾಂಬನು ।
ಸೇರಿದವರೊಡನೆಂದ ನೀ ಕಾರ್ತಿಕಮಹೋತ್ಸವವು ॥
ಮಿರಿ ವೈಭವ ಪೂರ್ಣವಪ್ಪೊಡೆ ।
ಸಾರ ಮದ್ಯವ ಕುಡಿದು ಕುಣಿವುದು ।
ದಾರಿಯೆನಲೊಪ್ಪಿದರು ಸರ್ವರು ನಲವಿನಿಂದಾಗ ॥ ೧೭೫ ॥

**ಭೋಗ ಷಟ್ಪದಿ**
ಒಡನೆ ಮದ್ಯವನ್ನು ತರಿಸಿ ।
ಕುಡಿಯುತದನು ನಲಿಯುತಿರ್ಪ ।
ಜಡಜ ನೇತ್ರೆಯರಿಗೆ ಕೊಟ್ಟು ಮತ್ತೆ ಕುಡಿಯುತೆ ॥
ತಡೆಯದಧಿಕ ತೋಷದಿಂದ ।
ಬೆಡಗಿನಬಲೆಯರ್ಕಳೊಡನೆ ।
ಸಡಗರದೊಳು ನಲಿದರಿಂತು ಮತ್ತರಾಗುತೆ ॥ ೧೭೬ ॥

**ರಾಗ ನವರೋಜು ಏಕತಾಳ**
ಬೇಗನೆ ಸಾಂಬನು ಬಂದು । ಮದ ।
ನಾಗಮ ಕೋವಿದೆಗಂದು ॥
ರಾಗದೆ ಕೈಯನು । ಬಾಗಿಸಿ ಪಿಡಿಯು ।
ತ್ತಾಗಳೆ ನಡೆದು ಸ । ರಾಗದೆ ನಲಿದನು ॥ ೧೭೭ ॥

ಒಡನೆಯ ಸಾತ್ಯಕಿ ನಲಿದು । ಕಡು ।
ಬೆಡಗಿನ ಬಾಲೆಯನೊಲಿದು ॥
ಸಡಗರ ದಿಂ ಕರ । ಪಿಡಿಯುತೆ ಸಭೆಯೊಳು ।
ನಡೆಸುತೆ ಕುಣಿಯಲು । ತೊಡಗಿದನಾಕ್ಷಣ ॥ ೧೭೮ ॥

ಇವಳೆನಗೇ ಬೇಕೆಂದು । ನಿನ ।
ಗವಳೇ ಸಾಕೆನುತಂದು ॥
ಅವಿರಳ ರೋಷದೆ । ಜವದಿಂ ಸತ್ಯಕ ।
ಕುವರನ ನೂಕುತೆ । ತಿವಿದನು ಗದನು ॥ ೧೭೯ ॥

**ವಾರ್ಧಕ**

ಒಡನಿದನು ಕಂಡ ಯದುಬಲವೆರಡು ಪಾಲಾಗಿ ।
ಕಡಲ ಬಳಿಯೊಳ್ ಬೆಳೆದ ಶರಕಾಂಡಮಂ ಕಿತ್ತು ।
ಬಡಿದಾಡತೊಡಗಿದುದು ಕುಡಿದ ಮದ್ಯದ ಮರುಳಿನಿಂದೆ ತಮ್ಮಿರವ ಮರೆತು ॥
ನಡೆದುದವರೊಳಗೆ ಭೀಕರಸಂಕುಲಾಹವಂ ।
ಪೊಡವಿ ನಡುಗುವ ತೆರದೊಳಂದು ದೇವಾಸುರರು ।
ಬಿಡದೆ ಪಾಲ್ಗಡಲ ತಡಿಯೊಳ್ ನಡೆಸಿದನುವರದ ರೀತಿಯಿಂ ರಂಜಿಸಿದುದು ॥ ೧೮೦ ॥

**ಭಾಮಿನಿ**

ಬಿಡದೆ ಸಾಂಬನು ಮಕರಕೇತನ ।
ನೊಡನೆ ಕಾಳಗವೆಸಗಿದನು ತಡೆ ।
ತಡೆಯುತನಿರುದ್ಧನನು ಕೃತವರ್ಮಕನು ಮೂದಲಿಸಿ ॥
ತುಡುಕಿದನು ಗದನಾಗ ಖಡುಗವ ।
ಜಡಿದು ಸಾತ್ಯಕಿಯೊಡನೆ ಧುರವನು ।
ನಡೆಸುತೀ ಪರಿಯಿಂದೆ ಮೂದಲಿಸುತ್ತ ಪೇಳಿದನು ॥ ೧೮೧ ॥

**ರಾಗ ಸಾವೇರಿ ಮಟ್ಟೆತಾಳ**

ನಿಲ್ಲು ನಿಲ್ಲು ಸತ್ಯಕಾತ್ಮಜಾತ ಸಮರಕೆ ।
ಮಲ್ಲನಾದೊಡೀಗ ಬರ್ಪುದೆನ್ನ ಸರಿಸಕೆ ॥
ಬಿಲ್ಲ ಪಿಡಿದು ಬಾಣ ಬಿಡುತೆ ಬಾರೊ ಮುಂದಕೆ ।
ಕೊಲ್ಲದಿರೆನು ನಿನ್ನನೀಗ ನೋಳ್ಪುದೇತಕೆ ॥ ೧೮೨ ॥

ಬಾರದಿರೆನು ಗದನೆ ನಿನ್ನನಿಂದೆ ಕೊಲ್ವೆನು ।
ಮಾರಿ ಮಸಣಿಗಳಿಗೆ ಹಬ್ಬದೂಟವೀವೆನು ॥
ತೋರೊ ನಿನ್ನ ವಿಕ್ರಮವನು ಬೀರೊ ಕಡುಹನು ।
ವೀರತನವ ಮೆರೆವೆನೀಗ ತರಿದು ನಿನ್ನನು ॥ ೧೮೩ ॥

ಎಂದು ನುಡಿದು ಸತ್ಯಕಾತ್ಮಜಾತನಸಿಯನು ।
ಚಂದದಿಂದ ಪಿಡಿದು ಕಡಿಯೆ ಗದನು ತಡೆದನು ॥
ಮುಂದುವರಿದು ಗದೆಯನೆತ್ತಿ ಮತ್ತೆ ಬಡಿದನು ।
ಕಂದಿ ಕುಂದದವರ ಸಮರವೇನ ಪೇಳ್ವೆನು ॥ ೧೮೪ ॥

**ವಾರ್ಧಕ**

ಒಡನೆ ಸತ್ಯಕಸುತಂ ಕಡುಹಿನಿಂದೈತಂದು ।
ಖಡುಗವನ್ನೆತ್ತುತ್ತೆ ಕಡಿದು ಗದನಂ ಧರೆಗೆ ।
ಕೆಡಹಿ ಚಂಡಾಡಿದಂ ಕಡೆಗವನ ರುಂಡಮಂ ಕುಡಿದ ಮದ್ಯದ ಮದದೊಳು ॥
ಹುಡಿಯೊಳವನಾ ಮುಂಡವೆಡೆಬಿಡದೆ ಹೊರಳುತಿರೆ ।

ನಡೆತಂದು ಕೃತವರ್ಮನಡಿಗಡಿಗೆ ನೋಡಿ ಮುಂ ।
ದಡಿಯಿಟ್ಟು ಸಾತ್ಯಕಿಯ ತುಡುಕಿ ಬಳಿಕವನೊಡನೆ ನುಡಿದನತಿ ರೋಷದಿಂದ ॥ ೧೮೫ ॥

**ರಾಗ ಮಾರವಿ ಏಕತಾಳ**

ಏತಕೆ ಗದನಂ ಕೊಂದೀಪರಿಯ ವಿ । ಘಾತಕತನಗೆಯ್ದು ॥
ಪಾತಕಿ ನಿನ್ನನು ಕೊಲ್ಲದೆ ಬಿಡುವೆನೆ । ಭೂತಳದೊಳಗಿಂದು ॥ ೧೮೬ ॥

ಧುರಕೈತಂದರೆ ತರಿಯದೆ ಬಿಡುವೆನೆ । ದುರುಳನೆ ನೀನೇಕೆ ॥
ಬರಿದೇ ಯುದ್ಧಕೆ ಬರುತಿರುವೆಯೊ ಹೇ । ಮರುಳನೆ ನಡೆ ಮನೆಗೆ ॥ ೧೮೭ ॥
ಬುದ್ಧಿಯನೊರೆಯದಿರೆಲವೋ ಮೂಢನೆ । ಯುದ್ಧಕೆ ಬಾ ಮುಂದೆ ॥
ಸಿದ್ಧನು ನಾನಾಗಿಹೆನೀ ಕ್ಷಣದೊಳು । ಸದ್ದಡಗಿಸದಿರೆನು ॥ ೧೮೮ ॥

ಎಂದವನೊರೆಯುತೆ ಧನುವನು ನೆಗಹು । ತ್ತೊಂದಸ್ತ್ರವನೆಸೆಯೆ ॥
ಚಂದದಿ ಸತ್ಯಕ ನಂದನನದನಾ । ನಂದದೆ ಕಡಿದಿಡಲು ॥ ೧೮೯ ॥

ಕೃತವರ್ಮನು ರೋಷದೊಳನಲಾಸ್ತ್ರವ । ಧೃತಿಗೆಡದೆಸೆಯಲ್ಕೆ ॥
ಪ್ರತಿಜಲಶರದಿಂ ತರಿಯುತೆ ಸತ್ಯಕ । ಸುತನನುವರ ಗೆಯ್ದು ॥ ೧೯೦ ॥

**ಭಾಮಿನಿ**

ಬಳಿಕ ನಾನಾ ವಿಧದ ಬಾಣಾ ।
ವಳಿಗಳನು ಬಿಡುತವರು ಕಾದಿದ ।
ರಳವಿ ಗೆಡದತಿ ಧೈರ್ಯಮಾನಸರೆನಿಸುತಾ ಬಳಿಕ ॥
ಘಳಿಲನಾ ಸಾತ್ಯಕಿಯು ಖಡ್ಗವ ।
ಝುಳಪಿಸುತೆ ಕೃತವರ್ಮನನು ಕಡಿ
ದಿಳೆಗೆ ಕೆಡಹಲು ಕಂಡು ಕಾಮನು ಕನಲುತಿಂತೆಂದ ॥ ೧೯೧ ॥

**ರಾಗ ಆರ್ಯಸವಾಯ್ ಏಕತಾಳ**

ಎಲವೆಲವೋ ಹೇ ಧೂರ್ತನೆ ನೀನತಿ ।
ಛಲದಿಂ ಕೃತವರ್ಮನ ಕೊಂದು ॥
ಬಲಯುತನೆನಿಸಲು ಬಿಡುವೆನೆ ನಿನ್ನನು ।
ಕೊಲದಿರನೀ ಕಾಮನು ನೋಡು ॥ ೧೯೨ ॥

ನಿನ್ನಧಟೆನ್ನೊಳು ನಡೆಯದು ಕಾಮುಕ ।
ರನ್ನೀಕ್ಷಿಸುತಾ ಎಡೆಗಾಗಿ ॥
ಚೆನ್ನಾಗಿಯೆ ನಡೆ ನಿನ್ನನು ಬಿಡದೆ ।
ಮನ್ನಿಸುವರು ನೋಡವರುಗಳು ॥ ೧೯೩ ॥

ನಿನ್ನನು ಕೊಂದಾ ಮೇಲಲ್ಲಿಗೆ ಮನ।
ವನ್ನಿರಿಸುತೆ ನಾ ಪೋಗುವೆನು॥
ಪನ್ನತನಾದೊಡೆ ನಿಲ್ಲೀಕ್ಷಣಧುರ।
ಕೆನ್ನೊಡನತಿ ಧೈರ್ಯದೊಳೀಗ ॥ ೧೯೪ ॥

ಆದೊಡೆ ನೋಡಲು ಬಹುದೆನ್ನುತೆ ಸ।
ಕ್ರೋಧದೊಳಾ ಸಾತ್ಯಕಿ ಬಿಡದೆ॥
ಮೋದಲು ಗದೆಯಿಂದದನಾ ಕಾಮನು।
ಬೀದಿಗೆ ಬಿಸುಟನು ಸೆಳೆಯುತ್ತೆ ॥ ೧೯೫ ॥

ಒಡನೆಯೆ ಖಡುಗವ ಪಿಡಿಯುತೆ ಸಾತ್ಯಕಿ।
ನಡೆತರಲದನೀಕ್ಷಿಸಿ ಮದನ॥
ತುಡುಕುತೆ ಸೆಳೆದಾಕ್ಷಣ ಮುರಿದೆಸೆಯಲು।
ಕಡೆಗಾ ಸಾತ್ಯಕಿ ನಡೆತಂದು ॥ ೧೯೬ ॥

ಶರಕಾಂಡವ ಕಿತ್ತದರಿಂ ಮದನನ।
ಶಿರಕೆರಗುವ ವೇಳೆಯೊಳಾಗ॥
ಸ್ಮರ ನಿನ್ನೊಂದನು ನೆರೆಕಿತ್ತದರಿಂ।
ಶಿರಕೆರಗಿದನಾ ಸಾತ್ಯಕಿಯ ॥ ೧೯೭ ॥

**ಭಾಮಿನಿ**
ಇಂತವರು ಶರಕಾಂಡದಿಂ ಬಲು।
ಹಾಂತು ಬಡಿದಾಡುತ್ತೆ ಜವದಿಂ।
ದಂತಕನ ನಗರವನು ಸೇರಲ್ಕುಳಿದ ಯಾದವರು॥
ಪಂಥವಿಡಿದಲ್ಲಲ್ಲಿ ಬೆಳೆದಿ।
ರ್ಪಂಥ ಶರಕಾಂಡವನು ಕಿತ್ತ।
ತ್ಯಂತ ಭೀಕರ ಕದನವೆಸಗುತೆ ಮಡಿದರವರೆಲ್ಲ ॥ ೧೯೮ ॥

## ಅಂಕ ೧೦. ಶ್ರೀಕೃಷ್ಣನ ಅರಣ್ಯ ಪ್ರವೇಶ

**ರಾಗ ಭೈರವಿ ಝುಂಪೆತಾಳ**
ಇತ್ತಲಾ ದ್ವಾರಕೆಯೊಳಚ್ಯುತಂ ನಡುವಿರುಳ।
ಹೊತ್ತಿನೊಳು ಭೀಕರದ ಕನಸ ಕಂಡೆದ್ದು॥
ಹತ್ತಿರದೊಳಿರ್ಪ ಸತಿಸತ್ಯಭಾಮೆಯನು ಕರೆ।
ಯುತ್ತೆ ಪೇಳಿದನು ಬೇಸರದೊಳಿಂತೆಂದು ॥ ೧೯೯ ॥

ಸತಿಯೆ ನಾನಿಂದಿಲ್ಲಿ ನಿದ್ರಿಸುತ್ತಿರುವಾಗ ।
ಅತಿಶಯದ ಕನಸನೊಂದನು ಕಾಣುತೀಗ ॥
ಮತಿವಿಕಳನಂತಾಗಿ ಮುಂದೆ ನಮಗಿನ್ನೇನು ।
ಗತಿಯೆಂದು ತಿಳಿಯೆನೆನಲವಳು ಪೇಳಿದಳು ॥ ೧೦೦ ॥

**ರಾಗ ನಾದನಾಮಕ್ರಿಯೆ ಏಕತಾಳ**
ಯಾವ ಕನಸ ಕಂಡಿರಿಂದು ಪ್ರಾಣಕಾಂತ । ನೀವು ।
ಸಾವಧಾನದಿಂದೆ ಪೇಳಿ ಪ್ರಾಣಕಾಂತ ॥
ಭಾವನವರಿಗಾಯ್ತೆ ಕಷ್ಟ ಪ್ರಾಣಕಾಂತ । ನಿಮ್ಮ ।
ಮಾವನವರಿಗಾಯ್ತೆ ನಷ್ಟ ಪ್ರಾಣಕಾಂತ ॥ ೧೦೧ ॥

ದುರುಳರಿಂದನರ್ಥ ಬಂತೋ ಪ್ರಾಣಕಾಂತ । ನಮ್ಮ ।
ತರಳರಿಂಗೆ ಸೇಡು ಬಂತೊ ಪ್ರಾಣಕಾಂತ ॥
ಧರೆಯ ಜನರು ಮಡಿದರೇನೊ ಪ್ರಾಣಕಾಂತ । ಕಷ್ಟ ।
ಶರಧಿ ಬಂದು ಮುಸುಕಿತೇನೊ ಪ್ರಾಣಕಾಂತ ॥ ೧೦೨ ॥

ಸುಡುವ ಬೆಂಕಿ ಮುತ್ತಿತೇನೊ ಪ್ರಾಣಕಾಂತ । ನಮ್ಮ ।
ಕಡಲ ಮೇರೆ ಮಿರಿತೇನೊ ಪ್ರಾಣಕಾಂತ ॥
ನುಡಿವುದೆನ್ನೊಳೆಲ್ಲವನ್ನು ಪ್ರಾಣಕಾಂತ । ಎಂಬ ।
ಮಡದಿಯೊಡನೆ ನುಡಿದನವಳ ಪ್ರಾಣಕಾಂತ ॥ ೧೦೩ ॥

**ರಾಗ ಸಾಂಗತ್ಯ ರೂಪಕತಾಳ**
ತರುಣಿ ಕೇಳಂದು ತೀರ್ಥಾಟನೆಗೆನ್ನುತೆ ।
ತೆರಳಿದ ನಮ್ಮವರೆಲ್ಲ ॥
ಸುರೆಯನು ಕುಡಿಯುತೆ ಧುರದೊಳು ಮಡಿದ ಭೀ ।
ಕರವಾದ ಕನಸು ಕಾಣಿಸಿತು ॥ ೧೦೪ ॥

ಇದನು ಶೋಧಿಸಲೆಂದು ತೆರಳುವೆನಿಂದು ನಾ ।
ನಧಿಕ ಶೋಕದೊಳೆನಲಾಗ ॥
ಸುದತಿಯು ಮರುಗುತ್ತೆ ದೇವ ನಿಮ್ಮೊಡನೆ ನಾ ।
ನದನರಿಯಲು ಬರ್ಪೆನಿಂದು ॥ ೧೦೫ ॥

ಎಂದೆಂಬ ಸತಿಯೊಡನೆಂದನು ಹರಿಯು ನೀ ।
ನಿಂದೀಗ ಬರಬೇಡ ನಮ್ಮ ॥
ಮಂದಿರದೊಳು ಗಿರಿಜೆಯ ಪೂಜಾ ಸಪ್ತಾಹ ।
ವಿಂದಿಹುದದನು ನೀ ನಡೆಸು ॥ ೧೦೬ ॥

ನಿನ್ನಿಂದ ತೊಡಗಿದೀ ಪೂಜೆಯು ಮುಗಿಯುವ ।
ಮುನ್ನ ಬೇರೆಡೆಗೆ ಪೋಗುವುದು ॥
ಸನ್ನುತಮಲ್ತೆಂದು ತಿಳುಹುತೊಪ್ಪಿಸಿದನು ।
ತನ್ನವಳನ್ನು ಶ್ರೀಪತಿಯು ॥ ೧೦೭ ॥

**ವಾರ್ಧಕ**
ಹರಿಯು ನಿಜರಮಣಿಯನೊಡಂಬಡಿಸಿ ಕಾನನಕೆ ।
ಬರಲು ಕೇಳಿಸಿತಭ್ರವಾಣಿಯೊಂದೆಲೆ ದೇವ ।
ಪರಮತೀರ್ಥಾಟನೆಗೆ ಪೋದ ನಿನ್ನವರೆಲ್ಲ ಸುರೆ ಕುಡಿದು ಹೊಯ್ದಾಡುತೆ ॥
ಶರನಿಧಿಯ ತೀರದೊಳ್ ಮಡಿದರಾ ಗಾಂಧಾರಿ ।
ಯುರುತರದ ಶಾಪಪ್ರಭಾವದಿಂದೆನೆ ಕಣ್ವ ।
ರೊರೆದ ತೆರನಾಯ್ತೆಂದು ನೆನೆದು ಹರಿಯೊಂದು ತರುಮೂಲದೊಳ್ ಪವಡಿಸಿದನು ॥ ೧೦೮ ॥

## ಅಂಕ ೧೧. ಮುಸಲಾಸ್ತ್ರಪ್ರಯೋಗ

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಪರಮಕಾರ್ತಿಕ ಶುದ್ಧ ಪೌರ್ಣಮಿ ।
ಮರುದಿವಸ ಜರನೆಂಬ ಬೇಡರ ।
ದೊರೆಯು ತನ್ನವರೆಲ್ಲರನು ಕರೆ । ತರಿಸಿ ನುಡಿದ ॥ ೧೦೯ ॥

ಕಾಡಿನೊಳು ಮೃಗಬಾಧೆ ಹೆಚ್ಚಿದೆ ।
ಬೇಡಪಡೆಯನು ನೆರಹಿ ಬೇಟೆಯ ।
ನಾಡಲಿಂದೇ ಪೋಗಬೇಕು ಸ । ಗಾಢದಿಂದ ॥ ೧೧೦ ॥

ಆದಕಾರಣ ಪೊರಡಲೀಕ್ಷಣ ।
ಮೋದದಿಂ ಶಬರಾಳಿ ಎನ್ನುತೆ ।
ಸಾದರದೊಳವನೆದ್ದು ಪೊರಟನ । ದೇ ದಿನದೊಳು ॥ ೧೧೧ ॥

**ರಾಗ ಶ್ರೀರಂಜನಿ ಏಕತಾಳ**
ಬೇಟೆಯಾಡುತ್ತೆ ಬಂದನಂದು । ವ್ಯಾಧಾಳಿಯೊಡೆಯ ।
ಬೇಟೆಯಾಡುತ್ತೆ ಬಂದನಂದು ॥ ಪಲ್ಲವಿ ॥

ನೋಟಕೆ ಸಿಲುಕಿದ । ಕಾಟಿಗಳನು ಕಡಿ ।
ದೀಟಿಯೊಳೆರಲೆಯ । ಕೂಟವ ತರಿಯುತೆ ॥
ಬೇಟೆಯಾಡುತ್ತೆ ಬಂದನಂದು ॥ ೧೧೨ ॥

ಬಲ್ಲೆಗೆ ಬಡಿ ಬಡಿ । ದಲ್ಲಿಹ ಮೃಗಗಳ ।
ನೆಲ್ಲವ ತರಿಯುತ । ಗುಲ್ಲೆಬ್ಬಿಸುತಲಿ ॥
ಬೇಟೆಯಾಡುತ್ತೆ ಬಂದನಂದು ॥ ೧೧೩ ॥

ಇಕ್ಕೆಯೊಳಿರುತಿ । ರ್ಪೆಕ್ಕಲಗಳ ಕೊಂ ।
ದಿಕ್ಕುತೆ ಹುಲಿಗಳ । ಸೊಕ್ಕನು ನಿಲಿಸುತೆ ॥
ಬೇಟೆಯಾಡುತ್ತೆ ಬಂದನಂದು ॥ ೧೧೪ ॥

**ಭಾಮಿನಿ**

ಕಾಡಿನೊಳಗಿಂತವನು ಬೇಟೆಯ ।
ನಾಡುತ್ಯೆತಂದೆಲ್ಲರಿಂದೊಡ ।
ಗೂಡಿ ಬರುತಿರೆ ದೂರದಲಿ ಮರದೆಡೆಯೊಳಾತನಿಗೆ ॥
ನಾಡೆ ಕಾಣಿಸಿತೊಂದು ಮೃಗದ ನಿ ।
ಗೂಢ ಕರ್ಣದ್ವಯ ವದಕೆ ಗುರಿ ।
ಮಾಡಿ ಶಬರೇಶ್ವರನು ಮುಸಲಾಸ್ತ್ರವನು ತೆಗೆದೆಚ್ಚ ॥ ೧೧೫ ॥

ಒಡನೆ ಹಾ ಹಾ ಎಂಬ ನಾದವು ।
ಬಡಿಯಿತಾತನ ಕರ್ಣವನು ನೆರೆ ।
ನಡುಗುತವನಾ ದನಿಯು ಕೇಳಿಸಿದೆಡೆಗೆ ನಡೆತಂದು ।
ಬಿಡದೆ ನೋಡಲು ಬಿದ್ದು ಹೊರಳುವ ।
ಜಡಜನೇತ್ರನ ಕಂಡು ಪಾದಕೆ ।
ಪೊಡಮಡುತೆ ಹಲವಂದದಲಿ ಹಲುಬಿದನು ಹಲುಗಿರಿದು ॥ ೧೧೬ ॥

**ರಾಗ ನೀಲಾಂಬರಿ ರೂಪಕತಾಳ**

ಹರನೇ ನಾ ನಿಂತರಿಯದೆ । ಹರಿಯಂ ಘಾತಿಸಿದೆನೊ ಹಾ ।
ದುರಿತವು ಬಂದೊದಗಿತೆ ಪರಿ । ಹರಿಸುವರಾರಿದನು ॥ ೧೧೭ ॥

ಧರೆಯವರೆನ್ನೀ ಕೃತ್ಯವ । ನರಿತೊಡೆ ಬಳಿಕೇನೆಂಬರೊ ।
ಪರದೊಳು ನರಕವು ದೊರಕುತೆ । ನರಳುವ ಗತಿಯಾಯ್ತೆ ॥ ೧೧೮ ॥

ಹೇಗೀ ಪಾಪವ ನೀಗುತ । ಸಾಗಲಿ ಸದ್ಗತಿಗಯ್ಯೋ ।
ಸಾಗರ ಶಯನನೆ ನೀನು ಸ । ರಾಗದೆ ಪೊರೆ ಎನ್ನ ॥ ೧೧೯ ॥

**ಭಾಮಿನಿ**

ಎಂದು ಹಲವಂದದಲಿ ಹಲುಬುವ ।
ಮಂದಮತಿ ಶಬರನನು ಕಾಣುತೆ ।
ಮಂದರೋದ್ಧಾರಕನು ನುಡಿದನು ಬೆದರದಿರು ನಿನಗೆ ॥

ಮುಂದೆ ಪಾಪವು ಸೇರದಲ್ಲದೆ ।
ನಿಂದೆ ಹೊದ್ದದು ಬೆದರದಿರು ನಡೆ ।
ಎಂದವನ ಕಳುಹುತ್ತೆ ತರು ಮೂಲದೊಳು ಮಲಗಿರ್ದ ॥ ೨೨೦ ॥

## ಅಂಕ ೧೨. ದಾರುಕನಿಗೆ ಶ್ರೀಕೃಷ್ಣ ದರ್ಶನ

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ದ್ವಾರಕಾಪುರವರದೊಳಿತ್ತಲು । ವಾರಿಜಾಕ್ಷನ ಕಾಣದರಸುತೆ ।
ದಾರುಕನು ನಡೆತಂದನಡವಿಗೆ । ಘೋರನಂದು ॥ ೨೨೧ ॥

ಎಡೆಯೆಡೆಯ ತರುಗುಲ್ಮಲತೆಗಳ । ನಡು ನಡುವೆ ಬಿಡದರಸಿ ಸುತ್ತುತೆ ।
ಕಡೆಗೆ ನರಳುವ ದನಿಯನಾಲಿಸಿ । ಪುಡುಕಿ ಬರಲು ॥ ೨೨೨ ॥

ಒಂದು ಮರದಡಿಯಲ್ಲಿ ನರಳುತೆ । ನೊಂದು ಮಲಗಿದ ಹರಿಯನೀಕ್ಷಿಸಿ ।
ಬಂದು ವಂದಿಸಿ ಮನದ ಮರುಕದೊ । ಳೆಂದನಂದು ॥ ೨೨೩ ॥

**ರಾಗ ಕೇದಾರಗೌಳ ಅಷ್ಟತಾಳ**
ಏನಾಯ್ತು ನಿನಗೆ ಹೇ ದೇವ ನೀನೀ ರೀತಿ ।
ಕಾನನದೊಳು ಮಲಗಿ ॥
ಹಾನಿಗೀಡಾದುದೆಂತೆಂದರುಹೆನಗೆ ನಿ ।
ಧಾನದಿಂದೆನುತೆರಗೆ ॥ ೨೨೪ ॥

ಹರಿಯು ಕಣ್ತೆರೆದು ದಾರುಕನನೀಕ್ಷಿಸುತಾಗ ।
ಚೊರೆದನು ಸಾರಥಿಯೆ ॥
ಪರಮ ತೀರ್ಥಾಟನೆಗೆಂದು ಪೋಗಿಹ ಯದು ।
ವರರೆತ್ತ ಪೋದರೆಂದು ॥ ೨೨೫ ॥

ನೆರೆಯರಿಯಲು ನಾನು ಪುಡುಕುತ್ತೆ ನಡೆತಂದು ।
ಭರದಿಂದೀ ವನದೊಳಗೆ ॥
ತಿರು ತಿರುಗುತೆ ಸುತ್ತಿ ಸುಳಿಯುತ್ತೆ ಬಂದೆನು ।
ತರುಮೂಲದೀಯೆಡೆಗೆ ॥ ೨೨೬ ॥

ಆಗಳಂಬರ ವಾಣಿಯರುಹಿತೆಮ್ಮವರೆಲ್ಲ ।
ಸಾಗರದೆಡೆಗೆ ಪೋಗಿ ॥
ಬೇಗನೆ ಮದ್ಯವ ಸೇವಿಸಿ ಹೊಯ್ದಾಡಿ ।
ನೀಗಿದರಸುವನೆಂದು ॥ ೨೨೭ ॥

ಇದನಾಲಿಸಿದ ನಾನು ಕುಸಿದಿಲ್ಲಿ ಬೀಳಲು ।
ಮದಮುಖ ಶಬರನೊಬ್ಬ ॥
ಹೆದೆಗೆ ಬಾಣವ ಹೂಡಿ ಹೊಡೆದನೆನ್ನಡಿಗಿದು ।
ವಿಧಿಲೀಲೆಯಲ್ತೆ ಪೇಳು ॥ ೧೧೮ ॥

**ವಾರ್ಧಕ**
ಇನ್ನು ನೀನಿಲ್ಲಿ ನಿಲ್ಲದೆ ಪೋಗಿ ಗಜಪುರದೊ ।
ಳೆನ್ನ ವಿಷಯವ ಧರ್ಮಜಂಗರುಹಿ ವಾಸವನ ।
ಸನ್ನುತ ಕುಮಾರಕನ ನಿಂದೆನ್ನ ಬಳಿಗೆ ಬರ್ಪಂತೆ ಪೇಳುತ್ತೆ ಮತ್ತೆ ॥
ಖಿನ್ನನಾಗದೆ ನಮ್ಮ ಪುರಕೆ ನಡೆದೆನ್ನ ಮನ ।
ದನ್ನೆಯರಿಗಿದನರುಹೆನುತ್ತೆ ಕಳುಹಲ್ ನಮಿಸಿ ।
ಪನ್ನಗಾಧೀಶ ಶಯನನ ನೆನೆಯುತ್ತೈದಿದಂ ದಾರುಕಂ ಕರಿಪುರಕ್ಕೆ ॥ ೧೧೯ ॥

## ಅಂಕ ೧೩. ಶ್ರೀಕೃಷ್ಣನಿರ್ಯಾಣ

**ರಾಗ ಭೈರವಿ ಝಂಪೆತಾಳ**
ಒಂದು ದಿನ ಧರ್ಮಜನು ನಿಜಮಂದಿರದೊಳು ಕುಳಿ ।
ತೆಂದನನುಜರ ಕೂಡೆ ನಾವು ಹರಿಚರಣ ॥
ಸಂದರ್ಶನವ ಗೆಯ್ಯದಾಯ್ತು ಬಹು ಸಮಯವಿದ ।
ರಿಂದೆನಗೆ ಖೇದವತಿಶಯವಾಯ್ತೆನಲ್ಕೆ ॥ ೧೨೦ ॥

ಬಂದನಲ್ಲಿಗೆ ದಾರುಕನು ಬಳಿಕ ವಿನಯದಿಂ ।
ವಂದಿಸಲ್ಕವನ ಮನ್ನಿಸಿ ಯುಧಿಷ್ಠಿರನು ॥
ಚಂದದಿಂ ಕುಳ್ಳಿರಿಸಿ ಬಂದ ಕಾರಣವನುಸು ।
ರೆಂದೆನಲು ದುಃಖಿಸುತೆ ಹರಿಸೂತನೊರೆದ ॥ ೧೨೧ ॥

**ರಾಗ ಸಾಂಗತ್ಯ ರೂಪಕತಾಳ**
ಲಾಲಿಸು ಧರ್ಮಸಂಜಾತನೆ ಯಾದವ ।
ಜಾಲವನ್ಯೋನ್ಯ ಯುದ್ಧದೊಳು ॥
ಕಾಲನ ಪುರವನು ಸೇರಿತು ಮತ್ತೆ ಶ್ರೀ ।
ಲೋಲನು ಕಾನನದಲ್ಲಿ ॥ ೧೨೨ ॥

ಜರನೆಂಬ ಬೇಡನ ಬಾಣದ ಹತಿಯಿಂದೆ ।
ಧರೆಗುರುಳಿರ್ಪನೆಂದೆಂಬ ॥
ಮರುಕದ ಸಂಗತಿಯನು ನಿನ್ನೊಳರುಹಲು ।
ಹರಿಯಾಜ್ಞೆಯಿಂದೆ ಬಂದಿಹೆನು ॥ ೧೨೩ ॥

ಒಡನೆ ನೀನರ್ಜುನನನು ಕೃಷ್ಣನಲ್ಲಿಗೆ ।
ತಡೆಯದೆ ಕಳುಹಬೇಕಂತೆ ॥
ಜಡಜನಾಭನನುಜ್ಞೆಯಾಗಿದೆಯೆನುತಂದೆ ।
ನಡೆದನಾ ದ್ವಾರಕಾಪುರಕೆ ॥ ೧೩೪ ॥

**ವಾರ್ಧಕ**

ಅನುಜ ಪಾರ್ಥನನು ಯಮತನುಜನಾಕ್ಷಣ ಕರೆದು ।
ವನಜನಾಭನ ಬಳಿಗೆ ಘನವೇಗದಿಂದೆ ನಡೆ ।
ಯೆನುತೆ ಕಳುಹಲ್ಕವನು ಮನಮರುಕದಿಂದೆ ನಡೆದನು ಕಂಡ ದುಶ್ಶಕುನವ ॥
ಮನದೊಳೆಣಿಸದೆ ಹರಿಯ ನೆನೆದು ಮುಂಬರಿಯುತಿರೆ ।
ಮುನಿ ನಾರದನು ಬಂದು ಸನಿಹದೊಳ್ ನಿಲಲವನು ।
ವಿನಯದಿಂ ತಲೆವಾಗಲನುನಯದೆ ಪರಸುತಾ ಘನಮಹಿಮನಿಂತೆಂದನು ॥ ೧೩೫ ॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ವೀರ ಪಾರ್ಥನೆ ಕೇಳು ನೀನಾ । ನೀರಜಾಕ್ಷನ ಬಳಿಗೆ ಪೋಪ ವಿ ।
ಚಾರವರಿತಾನೀಗ ಬಂದೆನು । ಘೋರನೊಂದನು ತಿಳಿಸಲು । ನಿನ್ನ ಬಳಿಗೆ ॥ ೧೩೬ ॥

ಇಂದು ನೀನಾ ಹರಿಯ ಬಳಿಯನು । ಚಂದದಿಂ ಸೇರುತ್ತೆ ಮುಟ್ಟದಿ ।
ರೆಂದಿನಂದದೊಳಲ್ಲದೊಡೆ ಬಲು । ದಂದುಗವು ನಿನಗಪ್ಪುದು । ಜತನವಯ್ಯ ॥ ೧೩೭ ॥

ಒಡನೆ ಪಾರ್ಥನು ಮುನಿಗೆ ಮಣಿಯುತೆ । ನುಡಿದನಿದರಿಂದೆನಗೆ ಬಪ್ಪಾ ।
ತೊಡಕು ತೊಂದರೆಯೇನೆನಲು ಮುನಿ । ಮೃಡನು ತಡೆಯದೆ ನುಡಿದನು । ಪಾರ್ಥನೊಡನೆ ॥ ೧೩೮ ॥

ನಿನ್ನ ಶಕ್ತಿಯನವನು ಸೆಳೆವನು । ಬನ್ನ ನಿನಗಿದರಿಂದಲೊದಗುವು ।
ದೆನ್ನು ತಾ ಮುನಿ ನಡೆಯೆ ಪಾರ್ಥನು । ಖಿನ್ನನಾಗುತೆ ಪೋದನು । ಹರಿಯ ಬಳಿಗೆ ॥ ೧೩೯ ॥

**ಕಂದ**

ಇಂತೈತಂದಾ ಪಾರ್ಥಂ ।
ಚಿಂತೆಯೊಳುರೆ ನೊಂದು ಬೆಂದು ನರಳುತ್ತಿರ್ಪಾ ॥
ಕಂತುವಿನಯ್ಯನನೀಕ್ಷಿಸು ।
ತಂತರಿಸುತ್ತಂದು ಮಣಿಯೆ ಹರಿ ಇಂತೆಂದಂ ॥ ೧೪೦ ॥

**ರಾಗ ಸಾಂಗತ್ಯ ರೂಪಕತಾಳ**

ಏನಯ್ಯ ಪಾರ್ಥ ನೀನೀರೀತಿಯಿಂದನು । ಮಾನವನಾಂತು ಯೋಚಿಸುತೆ ॥
ಸಾನುರಾಗದೊಳೇಕೆ ಬಾರದಿರ್ಪೆಯೊ ಬಲ । ಹೀನನಾಗಿರ್ಪೆನ್ನ ಬಳಿಗೆ ॥ ೧೪೧ ॥

ಭಾವನಲ್ಲವೆ ನಾನು ಭಾರತಾಹವದೊಳು । ಬೋವನಾಗಿರಲಿಲ್ಲವೇನು ॥
ದೇವನಾಗಿಯೆ ಗೀತೆಯನು ಬೋಧಿಸಿಲ್ಲವೆ । ದೇವಕೀ ಸುತನು ನಾನಲ್ತೆ ॥ ೧೪೧ ॥

ಎಂದೊರೆದರು ವಿಜಯನು ಸನಿಹಕೆ ಬಾರೆ । ನೆಂದುಸುರಿದುದನು ಕೇಳಿ ।
ಮಂದರಧಾರಿಯು ಮಲಗಿದಲ್ಲಿಂದಲೆ । ನೊಂದಿಂತು ನುಡಿದನು ಗಜರಿ ॥ ೧೪೨ ॥

**ವಾರ್ಧಕ**

ಹಿಂದೆ ಗಜನೋಹಿಯೊಳ್ ಪೊರೆದ ನಾ ಶರಸೇತು ।
ಬಂಧನದೊಳೆಯ್ದೆ ರಕ್ಷಿಸಿದೆ ನಾ ಸೂತಸುತ ।
ದಂದಶೋಕಾಸ್ತ್ರದಿಂ ಕಾಯ್ದೆನಾ ಭಗದತ್ತನಸ್ತ್ರದಿಂ ತಲೆಗಾಯ್ದೆನು ॥
ಸಿಂಧುಭೂಪಾಲಕನ ಯುದ್ಧದೊಳ್ ಪೊರೆದೆ ನಾ ।
ಸಿಂಧುಸುತನಸಿರತ್ನದಿಂದೆ ಪಾಲಿಸಿದೆ ನಾ ।
ನಂದದಿಂದಶ್ವಮೇಧವ ಗೈಸಿದಂಥೆನ್ನನಿಂದು ಮರೆತೆಯೊ ಕೃತಘ್ನ ॥ ೧೪೩ ॥

**ರಾಗ ಸಾಂಗತ್ಯ ರೂಪಕತಾಳ**

ಎಂದೊರೆದೊಡನೆಯೆ ಪಾರ್ಥನು ದೂರದೊಳ್ ।
ನಿಂದೆಲೆದೇವ ನಾರದರು ॥
ಬಂದೆನ್ನೊಳೊರೆದರು ನಿನ್ನನು ಮುಟ್ಟುವು ।
ದೆಂದಿಗು ಹಿತವಲ್ಲವೆಂದು ॥ ೧೪೪ ॥

ಆದಕಾರಣ ಮುಟ್ಟಲಾರೆನೆಂದೆನಲು ದಾ ।
ಮೋದರನೊರೆದನಾ ಮುನಿಯು ॥
ಸಾಧಿಸಿ ಜಗಳಗಂಟಿಕ್ಕುವನವನೆಂದ ।
ಹಾದಿಯ ಹಿಡಿಯದಿರಯ್ಯ ॥ ೧೪೫ ॥

ಎನಗೆ ಬಾಯಾರಿಕೆಯಾಗುತಲಿದೆ ಬೇಗ ।
ನಿನಿತು ನೀರನು ತಂದುಕೊಟ್ಟು ॥
ಮನಕೆ ನೆಮ್ಮದಿಯ ನೀವೊಂದುಪಕಾರವ ।
ಘನತೆಯಿಂ ನೀನೆಸಗಯ್ಯ ॥ ೧೪೬ ॥

**ಭಾಮಿನಿ**

ಎಂದು ಕೃಷ್ಣನು ಪಾರ್ಥನಿದಿರೊಳು ।
ನೊಂದು ಯಾಚಿಸುತಿರಲು ಶಕ್ರನ ।
ನಂದನನು ಮನಕರಗಿ ಜಲವನು ತಂದು ಕುಡಿಸಲ್ಕೆ ॥
ಮಂದಹಾಸವ ಬೀರಿ ಪರಸು ।
ತ್ತಂದವನ ಶಕ್ತಿಯನು ಸೆಳೆಯುತೆ ।
ಮಂದರೋದ್ಧಾರಕನು ವೈಕುಂಠಕ್ಕೆ ತೆರಳಿದನು ॥ ೧೪೭ ॥

ಒಡನೆ ಪಾರ್ಥನು ಶಕ್ತಿಗುಂದುತೆ ।
ಪೊಡವಿಯೊಳು ಬಿದ್ದೆದ್ದು ಹಾಹಾ ।
ಜಡಜನಾಭನೆ ರಕ್ಷಿಸೆಂದಳುತಿರಲು ಮುರಹರನ ॥
ಮಡದಿಯರು ಪುರಜನರು ದಾರುಕ ।
ನೊಡನೆ ಜವದಿಂ ಬಂದು ಮರುಗುತೆ ।
ಕಡೆಗೆ ಪರಕರ್ಮವನು ವಿಧಿವಿಹಿತದೊಳು ಮುಗಿಸಿದರು ॥ ೨೪೮ ॥

ಮತ್ತೆ ಪಾರ್ಥನು ನಿಜಧನುವ ತಾ ।
ನೆತ್ತಲಾರದೆ ಧರೆಯೊಳದನೆಳೆ ।
ಯುತ್ತೆ ನಡೆವೆಣನಂತೆ ಬಂದಾ ದ್ವಾರಕೆಯೊಳಿರ್ದ ॥
ಚಿತ್ತದುಬ್ಬೆಗದಿಂದೆ ದಿನವಿ ।
ಪ್ಪತ್ತು ಕಳೆದರು ತನ್ನ ಪುರವರ ।
ದತ್ತ ಪೋಗದೆ ಚಿಂತೆಯಿಂದಾ ಎಡೆಯೊಳಿರುತಿರ್ದ ॥ ೨೪೯ ॥

## ಅಂಕ ೧೪. ದ್ವಾರಕೆಗೆ ದಸ್ಯುಗಳ ದಾಳಿ

**ರಾಗ ಭೈರವಿ ಝಂಪೆತಾಳ**
ಒಂದು ದಿನ ಕಾಲಮುಖನೆಂಬ ದಸ್ಯುವು ತನ್ನ ।
ಮಂದಿರಕೆ ನಿಜ ಸಹಾಯಕರನ್ನು ಬರಿಸಿ ॥
ಮಂದಹಾಸವ ಬೀರುತೆಂದನೆನ್ನಾತ್ಮೀಯ ।
ಬಂಧುಗಳೆ ಕೇಳಿರಿಂದೊಂದು ಪೊಸ ಸುದ್ದಿ ॥ ೨೫೦ ॥

ದ್ವಾರಾವತಿಯೊಳಿರ್ಪ ಯಾದವರು ಶ್ಯೆಮಿನೀ ।
ದ್ವಾರವನು ಪೊಕ್ಕಿರ್ಪರೆಂಬ ವಿಷಯವನು ॥
ಘೋರನೇ ಕೇಳ್ದು ಬಲ ರಾಮನಹಿಯಾಗುತ್ತೆ ।
ಸೇರಿರ್ಪನಂತೆ ಪಾತಾಳ ಲೋಕವನು ॥ ೨೫೧ ॥

ಹರಿಯಿದನು ಕೇಳುತ್ತೆ ವನದೆಡೆಗೆ ಪೋಗಿರಲು ।
ಜರನೆಂಬ ಶಬರನವನನು ಕೊಂದನಂತೆ ॥
ಪರಿಕಿಪೊಡೆ ನಮಗೆ ಸತ್ಕಾಲ ಸಮನಿಸಿತೇನ ।
ನೊರೆವಿರೀ ವಿಷಯದ ವಿಚಾರದೊಳು ನೀವು ॥ ೨೫೨ ॥

**ರಾಗ ಶಂಕರಾಭರಣ ಮಟ್ಟೆತಾಳ**
ಎಂದೆನಲ್ಕೆ ರುದ್ರಮುಖನು । ನಿಂದು ನುಡಿದನೀಗ ನಾವು ।
ಮುಂದುವರಿಯುತುಳಿದ ನರರ । ಕೊಂದು ತೀರಿಸಿ ॥

ಚಂದದಿಂದ ಸರ್ವಧನವ। ನಿಂದೆ ಸೂರೆಗೆಯ್ವುದುಚಿತ।
ವೆಂದೆನಲ್ಕೆ ಭದ್ರಮುಖನು। ಬಂದು ನುಡಿದನು ॥ ೧೫೩ ॥

ಒಡೆಯ ಲಾಲಿಸಿನ್ನು ನಾವು। ತಡೆಯದಲ್ಲಿಗೀಗ ಪೋಗಿ।
ಕಡವರವನು ಸೂರೆಗೆಯ್ದು। ಕಡಿದು ಸರ್ವರ ॥
ಕೆಡಹಿ ಬರ್ಪುದುಚಿತವೆನಲು। ದಡಿಗರೆಲ್ಲ ಸರಿಯಿದೆನುತೆ।
ನುಡಿಯಲಂದು ಕಾಲಮುಖನು। ಪಡೆಯ ನೆರಹುತೆ ॥ ೧೫೪ ॥

**ಶರಷಟ್ಪದಿ**
ಮತ್ತವರೈತಂ।
ದುತ್ತರ ದೆಸೆಯೊಳು।
ಮುತ್ತುತೆ ಕೋಟೆಗಳನು ಕೆಡಹಿ ॥
ಪತ್ತನವನು ಪೊ।
ಕ್ಕೆತ್ತೆತ್ತಲು ಸುಳಿ।
ಯುತ್ತುರೆ ಬಡಿದರು ಸರ್ವರನು ॥ ೧೫೫ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಮನೆಮನೆಯ ಪೊಕ್ಕಲ್ಲಿ ಕುಳಿತಿಹ।
ವನಿತೆಯರ ಪಿಡಿಪಿಡಿದು ಸೆಳೆದರು।
ಕನಕ ರಜತಾಭರಣವೆಲ್ಲವ। ಮುನಿಸಿನಿಂದ ॥ ೧೫೬ ॥

ಓಡಿ ಪೋಗುವ ಬಾಲಕರನುರೆ।
ಪೀಡಿಸುತೆ ಪಿಡಿದೈದೆ ಸುಲಿದರು।
ಜೋಡು ಬಳೆಸರ ಕಡಗಗಳನು ಸ। ಗಾಢದಿಂದ ॥ ೧೫೭ ॥

ಅರಮನೆಯ ನೆರೆಮನೆಯ ಶೋಭಿಪ।
ಗುರುಮನೆಯ ಪೊಕ್ಕಲ್ಲಿ ವಾಸಿಸು।
ತಿರುವವರನುರೆ ಪೀಡಿಸಿದರಂ। ದುರುತರದೊಳು ॥ ೧೫೮ ॥

ಅಂಗಡಿಗಳನು ಸೂರೆಗೊಳುತೆ ಸು।
ಮಂಗಲೆಯರನು ಪೀಡಿಸುತೆ ಸ।
ರ್ವಾಂಗ ಸುಂದರಿಯರನು ಪಿಡಿದರ। ನಂಗ ಧುರಕೆ ॥ ೧೫೯ ॥

ಇಂತು ದಸ್ಯುಗಳೆಯ್ದೆ ರೋಷವ।
ನಾಂತು ಪುರವನು ಸುಲಿವ ವಿಷಯವ।
ನಂತಕಾತ್ಮಜನನುಜನರಿಯು। ತ್ತಿಂತು ಬಗೆದ ॥ ೧೬೦ ॥

**ಭಾಮಿನಿ**

ಬಂದು ಮುತ್ತಿಹ ಧೂರ್ತರನು ನಾ ।
ನಿಂದು ತರಿಯದೆ ಬಿಡೆನೆನುತ್ತವ ।
ನಂದು ಗಾಂಡೀವವನು ನೆಗಹಲ್ಕಾರದುರೆನೊಂದು ॥
ಮುಂದೆ ನಾನಿನ್ನೇವೆನೆನ್ನುತೆ ।
ಕಂದಿಕುಂದುತೆ ಕುಳಿತಿರಲು ನಡೆ ।
ತಂದು ಮದಮುಖರವನನಣಕಿಸುತಾಗ ಪೇಳಿದರು ॥ ೧೯೧ ॥

**ರಾಗ ಆರ್ಯಸವಾಯಿ ಏಕತಾಳ**

ಎಲವೆಲವೋ ಹೇ । ಕಲಿಪಾರ್ಥನೆ ನೀ ।
ಬಲಯುತನಂದೆನುತೆಲ್ಲವರು ॥
ನೆಲದೊಳು ನಿನ್ನನು । ಸಲೆಪೊಗಳುವರೈ ।
ಛಲದಂಕನೆ ಬಾ ಬಿಲುವಿಡಿದು ॥ ೧೯೨ ॥

ಗುರುಕೃಪಭೀಷ್ಮರ । ತರಿದವ ನೀನೋ ।
ವರಕರ್ಣನ ನೀ ಕೊಂದಿಹೆಯೋ ॥
ಕುರುಧಾರುಣಿಯೊಳು । ಮೆರೆದಿರ್ಪಧಟನು ।
ನೆರೆ ತೋರಿಸು ನಮ್ಮೊಡನೀಗ ॥ ೧೯೩ ॥

ಹರಿ ಇಲ್ಲದೆ ದು । ರ್ಧರ ಧುರಗೆಯ್ವಾ ।
ಪರಿಯನು ನೀನೆಂತರಿತಿಹೆಯಾ ॥
ನರನಲ್ಲವೆ ಬಾ । ಪರಿಕಿಸುವೆವು ನಿ ।
ನ್ನುರುತರ ವಿಕ್ರಮವನ್ನೀಗ ॥ ೧೯೪ ॥

**ರಾಗ ಪಂತುವರಾಳಿ ಮಟ್ಟೆತಾಳ**

ಎಂದು ಮುಟ್ಟಿ ಮೂದಲಿಸಲು । ನೊಂದ ಹಂದಿಯಂತೆ ಪಾರ್ಥ ।
ನೆಂದು ಖಡ್ಗವನ್ನು ಪಿಡಿದು । ಬಂದು ದುರುಳರ ॥
ಮುಂದೆ ನಿಂದು ಬಹಳ ರೋಷ । ದಿಂದೆ ಧುರವನೆಸಗೆ ದಸ್ಯು ।
ವೃಂದದೊಡೆಯನಸಿಯನೆಳೆದ । ನಂದು ಪಾರ್ಥನ ॥ ೧೯೫ ॥

ಕರದ ಖಡ್ಗವನ್ನು ದಸ್ಯು । ವರನು ಸೆಳೆದ ಬಳಿಕ ನರನು ।
ಭರದೊಳಂದು ಮುಷ್ಟಿಯಿಂದ । ಶಿರಕೆ ಬಡಿಯಲು ॥
ಧರೆಗೆ ಬೀಳುತೆದ್ದು ರೋಷ । ಭರಿತನಾಗಿ ಧೂರ್ತರೊಡೆಯ ।
ನೆರಗೆ ನರನು ಮೂರ್ಛೆ ಹೊಂದಿ । ತಿರೆಗೆ ಬಿದ್ದನು ॥ ೧೯೬ ॥

**ಭಾಮಿನಿ**

ಬಳಿಕ ದಸ್ಯುಗಳೆಲ್ಲರಾ ಪುರ ।

ದೊಳಗೆ ಪೊಕ್ಕಲ್ಲಲ್ಲಿ ಶೋಭಿಪ।
ನಿಳಯ ನಿಳಯದೊಳುಳ್ಳ ಧನಕನಕಾದಿ ವಸ್ತುಗಳ॥
ತಳುವದೇ ಸುಲಿಸುಲಿದು ಸೂರೆಯ।
ಗೊಳುತೆ ಸತಿಯರ ಪಿಡಿದು ಪೀಡಿಸಿ।
ಗಳುವಕೈದಿದರಧಿಕ ಹರ್ಷದೊಳಂದು ನಲಿನಲಿದು ॥ ೨೬೭ ॥

ನರನು ಮತ್ತೆಚ್ಚೆತ್ತು ಧೂರ್ತರು।
ಪುರವ ಸುಲಿಯುತೆ ಪೋದ ವಿಷಯವ।
ನರಿತು ನೆರೆ ಮರುಗುತ್ತೆ ಬಳಿಕುಳಿದವರನೊಡಗೊಂಡು॥
ಪರಿತಪಿಸುತಾ ದಿನವೆ ಮಧುರಾ।
ಪುರಕೆ ನಡೆತಂದಲ್ಲಿ ವಜ್ರಗೆ।
ಧರೆಯ ಪಟ್ಟವ ಕಟ್ಟುತೈದಿದನಂದು ಗಜಪುರಕೆ ॥ ೨೬೮ ॥

## ಅಂಕ ೧೫. ಪರೀಕ್ಷಿತ ಪಟ್ಟಾಭಿಷೇಕ

**ರಾಗ ಭೈರವಿ ಝಂಪೆತಾಳ**
ಇತ್ತಲಿಭಪುರದೊಳಿನ ಸುತನಸುತನಧಿಕ ಸಂ।
ಪತ್ತಿನಿಂ ನೆರೆ ಮೆರೆಯುತಿರ್ದು ತನ್ನವರ॥
ಹತ್ತಿರವೆ ಕುಳ್ಳಿರಿಸಿ ತನ್ನ ಮನ ಮರುಕವನು।
ಬಿತ್ತರಿಸಿದನು ಬಹಳ ಖೇದದಿಂದಾಗ ॥ ೨೬೯ ॥

ಅನುಜರೇ ನಮ್ಮ ಹಿರಿಯಯ್ಯ ಮುಂತಾದವರು।
ವನಕೆ ತೆರಳುತ್ತಲ್ಲಿ ಮಡಿದ ವಿಷಯವನು॥
ನೆನೆಯೆ ಮನಕತಿ ದುಃಖವಪ್ಪುದಲ್ಲದೆ ಶಕ್ರ।
ತನಯ ನಾ ದ್ವಾರಕೆಗೆ ಪೋದವನು ಮರಳಿ ॥ ೨೭೦ ॥

ಬರಲಿಲ್ಲವೇಕೊ ಮತ್ತಾಯೆಡೆಯೊಳೇನಾಯ್ತೊ।
ಹರಿಯು ಹೇಗಿಹನೊ ಎಂದರಿಯದಾನಿಂದು॥
ಮರುಮರುಗುತಿಹೆನೆನಲು ವರವೃಕೋದರನಾಗ।
ಳೆರಗುತ್ತೆ ನುಡಿದನಾ ಧರ್ಮಸುತನೊಡನೆ ॥ ೨೭೧ ॥

**ರಾಗ ಮಾರವಿ ಏಕತಾಳ**
ಹಿರಿಯಣ್ಣನೆ ನೀ। ಮರುಗದಿರೀಕ್ಷಣ। ತೆರಳುತೆ ವಿಷಯವನು॥
ಅರಿದೈತರ್ಪೆನು। ಹರುಷದೊಳೆನೆ ಯಮ। ಳರು ಬಳಿಕುಸುರಿದರು ॥ ೨೭೨ ॥

ಇಂದೆಮಗಾಜ್ಞೆಯ | ನಂದದೊಳಿತ್ತೊಡೆ | ಮುಂದೈದುತೆ ನಾವು ||
ಚಂದದೊಳೆಲ್ಲವ | ಬಂದರುಹುವೆವಾ | ನಂದದೊಳಿರು ನೀನು || ೧೭೩ ||

ಎಂದವರೊರೆಯಲು | ಬಂದಾ ಪಾರ್ಥನು | ವಂದಿಸುತಗ್ರಜಗೆ ||
ನಿಂದತಿ ಖೇದದೊ | ಳಂದಿರೆ ಕಾಲನ | ನಂದನ ನಿಂತೊರೆದ || ೧೭೪ ||

**ರಾಗ ಕೇದಾರಗೌಳ ಅಷ್ಟತಾಳ**

ಏತಕೀಪರಿಯಿಂದ ಮೌನವನಾಂತನು | ಜಾತನೆ ದೂರದೊಳು ||
ಕಾತರದಿಂದೆ ನಿಂತಿರ್ಪ ಕಾರಣವ ಸು | ಪ್ರೀತಿಯಿಂ ಪೇಳೆನ್ನೊಳು || ೧೭೫ ||

ಹರಿಗೆ ಸುಕ್ಷೇಮವೆ ಬಲಭದ್ರ ದೇವನು | ಸರಸದಿಂದಿರುತಿಹನೆ ||
ಭರದಿಂದೆ ನೀನೆಲ್ಲ ವಿಷಯವ ನೊರೆ ಎನೆ | ಮರುಗುತ್ತೆ ಪಾರ್ಥನೆಂದ || ೧೭೬ ||

**ರಾಗ ಸಾಂಗತ್ಯ ರೂಪಕತಾಳ**

ಲಾಲಿಸಿ ಕೇಳಗ್ರಜಾತನೆ ಯಾದವ | ಜಾಲವೆಲ್ಲವು ಮದ್ಯವನ್ನು ||
ಲೀಲೆಯಿಂ ಸೇವಿಸುತನ್ಯೋನ್ಯ ಹೋರಾಡಿ | ಕಾಲನ ಪುರಕ್ಕೈದಲೊಡನೆ || ೧೭೭ ||

ಬಲನು ವೈರಾಗ್ಯದಿಂದಹಿಯಾಗಿ ಮತ್ತೆ ಭೂ | ತಲವನು ತೊರೆದ ತಲಕ್ಕೆ ||
ಜಲಮಾರ್ಗದಿಂದೆ ಪೋಗಲು ಹರಿ ವನದೆಡೆ | ಗಲೆಯುತ್ತೆ ಪೋದನು ಬಳಿಕ || ೧೭೮ ||

ಜರನೆಂಬ ಶಬರನಾ ವನದೊಳು ಹರಿಗೊಂದು | ಶರವನು ಬಿಟ್ಟವನನ್ನು ||
ಧರೆಗುರುಳಿಸಿದನಲ್ಲಿಗೆ ನಾನು ಪುಡುಕುತ್ತೆ | ತೆರಳಿದೆನಾಗ ಶ್ರೀಹರಿಯು || ೧೭೯ ||

ನೀರು ಬೇಕೆಂದೆನ್ನೊಳೊರೆಯಲು ಜಲವನು | ಭೋರನೆ ತಂದೀಂಟಿಸಲ್ಕೆ ||
ಸಾರಸಾಕ್ಷನು ಜಲದೊಡನೆನ್ನ ಬಲವನು | ಹೀರುತೆ ಮಡಿದನಾ ಬಳಿಕ || ೧೮೦ ||

ಅವನುತ್ತರ ಕ್ರಿಯೆಗಳನೆಲ್ಲ ಮಾಡಿಸು | ತವಿರಳ ದುಃಖದಿಂದಿರಲು ||
ಜವದಿಂದೆ ದಸ್ಯುಗಳೈ ತಂದು ಪುರವನು | ತವೆ ಸೂರೆಗೆಯ್ದುರೆನ್ನಿದಿರೆ || ೧೮೧ ||

ಬಲಹೀನನಾಗಿ ನಾನವರೊಳು ಕಾದುತ್ತೆ | ಸಲೆಸೋತು ಬಳಿಕ ದ್ವಾರಕೆಯ ||
ಲಲನೆಯರೊಂದಿಗೆ ಮಧುರೆಗೆ ಪೋಗಿ ಮ | ತ್ತೊಲಿದುಷಾತನಯ ವಜ್ರನಿಗೆ || ೧೮೨ ||

ಧರೆಯ ಪಟ್ಟವ ಕಟ್ಟಿದಂದೇ ದ್ವಾರಾವತೀ | ಪುರವು ಸಮುದ್ರ ಪಾಲಾಯ್ತು ||
ಭರದಿಂದ ಮತ್ತಿಲ್ಲಿ ಗೈತಂದೆನೆನೆ ಯಮ | ತರಳನಾಲೋಚಿಸುತೆಂದ || ೧೮೩ ||

**ವಾರ್ಧಕ**

ಹರಿ ಪೋದ ಮೇಲೆ ನಾವಿಲ್ಲಿರ್ಪುದನುಚಿತವು |
ತರಳನೆನಿಸಿದ ಪರೀಕ್ಷಿತಗೆ ಪಟ್ಟವ ಕಟ್ಟಿ |

ಸುರಲೋಕದೆಡೆಗೆ ತೆರಳುವುದುಚಿತವೆಂದೊರೆದು ಬಳಿಕ ತರಳನ ಬರಿಸುತೆ ||
ವರಸಿಂಹವಿಷ್ಟರದೊಳವನ ಕುಳ್ಳಿರಿಸುತ್ತೆ |
ನೆರೆದ ಯಾಚಕ ಜನಕೆ ಧನಕನಕಗಳನಿತ್ತು |
ಭರದಿಂದೆ ಪೊರಟನಾ ಧರ್ಮಜಂ ಸತಿ ಸಹೋದರ ಸಹಿತನಾಗಿ ಮತ್ತೆ || ೨೮೪ ||
ಇದನರಿತು ಪುರಜನರು ಬಂದಾ ಯುಧಿಷ್ಠಿರನ |
ಪದಕೆರಗಿ ಕಂಬನಿಗಳಂ ಸುರಿಸಿ ಮರುಗುತಿರೆ |
ವಿಧವಿಧದೊಳವರ ಮನ್ನಿಸಿ ಸಮಾಧಾನಮಂ ಗೆಯ್ದು ಯಮಸುತನು ತನ್ನ ||
ಸುದತಿ ಸಹಜಾತರಿಂದೊಡಗೂಡಿ ಪೋಗುತಿರೆ |
ಬದಿಯೊಳಿರ್ದೊಂದು ಶುನಕಂ ನೆಟ್ಟನವರೊಡನೆ |
ಬೆದರದೇ ಬರುತಿರ್ದುದತಿ ಚೋದ್ಯ ರೀತಿಯಿಂದವರಿಂತು ಮುಂಬರಿದರು || ೨೮೫ ||

## ಅಂಕ ೧೬. ಪಾಂಡವ ಸ್ವರ್ಗಾಭಿಗಮನ

**ರಾಗ ಶಂಕರಾಭರಣ ಮಟ್ಟೆತಾಳ**
ನಡೆದರು | ಪಾಂಡವರು ನಾಕದೆಡೆಗಾಗಿ | ನಡೆದರು || ಪಲ್ಲವಿ ||

ಬಿಡದೆ ಪರ್ವತವನ್ನು ಹತ್ತಿ | ಮತ್ತೆ |
ಕಡುಬಿಸಿಲಿನೊಳು ಮುಂದೊತ್ತಿ | ಬೇಗ |
ನಡೆದರು ಬೆದರದೆ ಬಹುದೂರ ಪರ್ಯಂತ |
ತಡೆಯದೆ ಬಳಿಕವರತ್ತಿತ್ತ ಸುತ್ತಿ || ಅನುಪಲ್ಲವಿ ||

ಸರದಿಯೊಳ್ ಮೊದಲು ಧರ್ಮಜನು | ಮತ್ತಿ |
ನ್ನೆರಡನೆಯವನು ವಾಯುಜನು | ಇಂದ್ರ |
ತರಳನು ಮೂರನೆಯವನು | ವೀರ |
ವರನಕುಲನು ಮತ್ತಿನವನು | ಐದ |
ರುರುತರ ಸುಸ್ಥಾನದೊಳು ಸಹದೇವನು |
ತೆರಳೆ ದ್ರೌಪದಿ ಹಿಂದೆ ಬಳಿಕ ಶುನಕನು || ೨೮೬ ||

**ರಾಗ ಸಾಂಗತ್ಯ ರೂಪಕತಾಳ**
ಇಂತವರೈದೆ ಮುಂಬರಿದು ಪೋಗುತ್ತಿರೆ |
ಕಾಂತೆ ದ್ರೌಪದಿ ಧರೆಗೊರಗೆ ||
ಚಿಂತೆಯಿಂ ಸಹದೇವನಿದನಣ್ಣನೊಳು ಪೇಳು |
ತಿಂತೇಕಾಯ್ತೆಂದು ಕೇಳಿದನು || ೨೮೭ ||

**ರಾಗ ಭೈರವಿ ಝಂಪೆತಾಳ**
ಅದಕೆ ಧರ್ಮಜನೆಂದನಿವಳು ಮದುವೆಯ ದಿವಸ |

ಮೊದಲಧಮ ಕರ್ಣನಂ ಕಂಡು ಕಡೆಗಣ್ಣ ॥
ತುದಿಯೊಳೀಕ್ಷಿಸುತೊಮ್ಮೆ ಬಯಸಿದುದರಿಂದೆ ಹೀ ।
ಗೊದಗಿತಿದನೆಣಿಸದೇ ನಡೆದು ಬಾ ಮುಂದೆ ॥ ೧೮೮ ॥

**ರಾಗ ಸಾಂಗತ್ಯ ರೂಪಕತಾಳ**
ಮತ್ತವರಂದು ಮುಂಬರಿಯಲು ಸಹದೇವ । ಸತ್ತಿಳೆಗಾಗಿ ಬೀಳಲ್ಕೆ ॥
ಕತ್ತೆತ್ತಿ ನೋಡಿದ ನಕುಲನಣ್ಣಂಗೊರೆಯುತ್ತೆ ಕೇಳಿದನು ಕಾರಣವ ॥ ೧೮೯ ॥

**ರಾಗ ಭೈರವಿ ಝಂಪೆತಾಳ**
ಆಗ ಧರ್ಮಜನೆಂದನಿವನಧಿಕ ಸುಜ್ಞಾನಿ ।
ಯಾಗಿ ತಾನರಿತ ವಿಷಯವನಿತರ ಜನಕೆ ॥
ಬೇಗನರುಹದೆ ಮುಚ್ಚಿ ಬಚ್ಚಿಟ್ಟ ಕಾರಣದೊ ।
ಳೀಗಳೀಗತಿಯಾಯ್ತು ನೀನು ನಡೆ ಮುಂದೆ ॥ ೧೯೦ ॥

**ರಾಗ ಸಾಂಗತ್ಯ ರೂಪಕತಾಳ**
ಬಳಿಕವರಂದು ಮುಂದ್ಐತರೆ ನಕುಲನು । ಘಳಿಲನೆ ಬೀಳಲು ನರನು ॥
ತಳುವದಣ್ಣಂಗಿದನರುಹಲ್ಕೆ ಯೋಚಿಸು । ತಿಳೆಯಧಿಪತಿಯುಸುರಿದನು ॥ ೧೯೧ ॥

**ರಾಗ ಭೈರವಿ ಝಂಪೆತಾಳ**
ಇವನು ಕೌಂತೇಯ ಮಾದ್ರೇಯರೆಂದೆಂಬ ಭೇ ।
ದವನು ನಮ್ಮೊಳಗೆ ಭಾವಿಸಿದನೆಳ್ಳನಿತು ॥
ಸವನಿಸಿತ್ತಿದರಿಂದೆ ಫಲವಿನಿತು ನೀನೀಗ ।
ಳವಿಚಲಿತ ಚಿತ್ತನಾಗದೆ ನಡೆಯೊ ಮುಂದೆ ॥ ೧೯೨ ॥

**ರಾಗ ಸಾಂಗತ್ಯ ರೂಪಕತಾಳ**
ಅಂದದನವರು ಯೋಚಿಸದೆ ಮುಂಬರಿಯಲು । ನೊಂದು ಪಾರ್ಥನು ಧರೆಗುರಳೆ ॥
ಗಂಧವಾಹಾತ್ಮಜನಿದನಣ್ಣಗೊರೆಯಲಾ । ಗೆಂದನು ಧರ್ಮಾತ್ಮ ಜಾತ ॥ ೧೯೩ ॥

**ರಾಗ ಭೈರವಿ ಝಂಪೆತಾಳ**
ಧರೆಯೊಳೆನ್ನನು ಗೆಲುವ ವೀರರಿಲ್ಲೆಂಬ ದು ।
ರ್ಧರದ ದುರಹಂಕಾರದಿಂದೆ ಕೊನೆಗಿವನು ॥
ಭರದಿಂದೆ ಬಿದ್ದನಿದನೆಣಿಸದೇ ಮುಂದೆ ನಡೆ ।
ಹರಿಯ ಪಾದವನು ಭಕ್ತಿಯೊಳು ನೆನೆಯುತ್ತೆ ॥ ೧೯೪ ॥

**ರಾಗ ನಾದನಾಮಕ್ರಿಯೆ ಏಕತಾಳ**
ಏತಕಿಂತು ಬಿದ್ದೆಯಯ್ಯೊ ತಮ್ಮ ತಮ್ಮಾ । ನಿನ್ನ ।
ರೀತಿಯಿಂದು ತಿಳಿಯದಾಯ್ತು ತಮ್ಮ ತಮ್ಮಾ ॥

ನೀತಿ ತಪ್ಪದವನು ನೀನು ತಮ್ಮ ತಮ್ಮಾ । ಹೀಗೆ ।
ಮಾತನಾಡದಿರ್ಪುದೇಕೆ ತಮ್ಮ ತಮ್ಮಾ ॥ ೧೯೫ ॥

ಮೊದಲು ಜನಿಸಿದವನು ನಾನು ತಮ್ಮ ತಮ್ಮಾ । ಜಗದೊ
ಳುದಿಸಿದವನು ಮತ್ತೆ ನೀನು ತಮ್ಮ ತಮ್ಮಾ ॥
ಬದಲಿ ಹೋಯ್ತು ಮರಣದಲ್ಲಿ ತಮ್ಮ ತಮ್ಮಾ । ನಿನ್ನೊ ।
ಳಿದಕೆ ಕಾರಣವನು ಕೇಳ್ವೆ ತಮ್ಮ ತಮ್ಮಾ ॥ ೧೯೬ ॥

ಬಿಟ್ಟು ಪೋದುದೇತಕೆಂದು ತಮ್ಮ ತಮ್ಮಾ । ಪೇಳು ।
ನೆಟ್ಟನೀಗಳೆನ್ನ ಕೂಡೆ ತಮ್ಮ ತಮ್ಮಾ ॥
ಕೆಟ್ಟು ಹೋದೆನಯ್ಯೊ ನಾನು ತಮ್ಮ ತಮ್ಮಾ । ಕೈಯ ।
ತಟ್ಟಿ ನಗುವರನ್ಯರೆನ್ನ ತಮ್ಮ ತಮ್ಮಾ ॥ ೧೯೭ ॥

**ವಾರ್ಧಕ**

ಅಂದು ಲಾಕ್ಷಾಗೇಹದುರಿಯಿಂದೆ ತಪ್ಪಿಸುತೆ ।
ಮಂದಮತಿಯೆನಿಸಿದ ಹಿಡಿಂಬನಂ ತರಿದು ಭರ ।
ದಿಂದೆ ಬಕ ಕಿಮ್ಮಿರ ಮಾಗಧಾದ್ಯರನಿಕ್ಕಿ ದುಷ್ಟ ಕೀಚಕ ಮುಖ್ಯರ ॥
ಕೊಂದಿಕ್ಕಿ ಕೌರವರನೆಲ್ಲರಂ ಯಮನ ನಿಜ ।
ಮಂದಿರಕೆ ಕಳುಹುತ್ತೆ ನಮ್ಮನುರೆ ಪೊರೆದಾತ್ಮ ।
ಬಂಧುವೆನಿಸಿದ ನಿನ್ನನೆಂದಿಗುಂ ತೊರೆಯೆನೆಂದಳುತೆ ಮೂರ್ಛಿತನಾದನು ॥ ೧೯೮ ॥

**ಭಾಮಿನಿ**

ಒಡನೆ ಸಿದ್ಧನೆನಿಪ್ಪ ಕೃಷಿಕನು ।
ತಡೆಯದಲ್ಲಿಗೆ ಬಂದು ತುಲಸಿಯ ।
ಗಿಡವನೊಂದನು ತಂದು ಬುಡಮೇಲಾಗಿ ಮಾಡುತ್ತೆ ॥
ಕಡೆಗೆ ಸೈಕತ ರಾಶಿಯೊಳು ನೆರೆ ।
ನೆಡುತೆ ಶತರಂಧ್ರಂಗಳಿರ್ಪಾ ।
ಕೊಡವ ಕೈಯೊಳು ಪಿಡಿದು ನೀರೆರೆಯುತ್ತಲಿರುತಿರ್ದ ॥ ೧೯೯ ॥

**ರಾಗ ಸಾಂಗತ್ಯ ರೂಪಕತಾಳ**

ಆಗ ಧರ್ಮಜನು ಬಿದ್ದಲ್ಲಿಂದ ಮೇಲೆದ್ದು । ಬೇಗನಾತನನೀಕ್ಷಿಸುತ್ತೆ ॥
ಹೀಗೇಕೆ ಮಾಡುವೆ ಬರಿದಿಂತು ದುಡಿದರೆ । ಹೇಗಯ್ಯ ಸಫಲನೆಂದೆನಿಪೆ ॥ ೨೦೦ ॥

ಎಂದ ಮಾತನು ಕೇಳಿ ಸಿದ್ಧನು ನಿನ್ನೊಳು । ಹೊಂದಿದೆ ಗಜಗಾತ್ರದೋಷ ॥
ಇಂದೆನ್ನೊಳಿಹ ದೋಷವಜಗಾತ್ರವೆನಲೆನ್ನ । ಕುಂದನೊರೆಯೆ ನೀನಯೋಗ್ಯ ॥ ೨೦೧ ॥

ಎನೆ ಧರ್ಮಜನು ಪೇಳಿದನು ನೀನು ನುಡಿದಂಥ । ಘನದೋಷವೆನ್ನೊಳೇನಿಹುದು ।
ಮನದೊಲವಿಂದೆ ಪೇಳೆನೆ ಸಿದ್ಧನೆಂದನು । ನಿನಗರಿಯದೊಡೆ ಪೇಳುವೆನು ॥ ೩೦೧ ॥

ಸತ್ತು ಹೋದವರ ಸಮಿಪದೊಳ್ ಕುಳಿತು ನಾ । ವತ್ತೊಡೆ ಫಲವೇನು ಬರಿದೇ ॥
ಹೊತ್ತು ಹಾಳಪ್ಪುದಲ್ಲದೆ ಬದುಕುವುದೆಂತು । ಮತ್ತೆನೆ ಯಮಜ ಯೋಚಿಸುತೆ ॥ ೩೦೩ ॥

ಇದು ಸರಿಯಹುದು ನಾನಿದನು ಯೋಚಿಸದಿಂದು । ಹದಗೆಟ್ಟು ಹಾದಿತಪ್ಪಿದೆನು ॥
ಮದನನಯ್ಯನೆ ಬಂದೀ ರೂಪದಿಂದೆನ್ನ ತಿ । ದ್ದಿದನೆಂದು ಭಾವಿಪೆನಿಂದು ॥ ೩೦೪ ॥

ಅನಿಲನಂದನನು ಮುಂಗೋಪಿಯಾಗಿರ್ದು ಮೇ । ದಿನಿಯೊಳು ಮೆರೆದುದರಿಂದೆ ॥
ಕೊನೆಗಾಲದಲ್ಲಿಂತು ಮಡಿದನೆಂದೆಣಿಸುತೆ । ಮನದ ಬೇಸರವ ನೀಗಿದನು ॥ ೩೦೫ ॥

**ವಾರ್ಧಕ**

ಮತ್ತೆ ಯಮನಂದನನು ಸಿದ್ಧನಂ ನೆರೆ ಮನ್ನಿ ।
ಸುತ್ತೆ ಶುನಕನ ಸಹಿತ ಮುಂಬರಿಯುತಿರಲು ದಿವ ।
ದತ್ತಣಿಂದೊಂದು ದಿವ್ಯ ವಿಮಾನವೈತಂದುದದರಿಂದೆ ಸುರದೂತನು ॥
ಚಿತ್ತಶುದ್ಧಿಯೊಳಿಳಿದು ಬಂದು ಯಮಜಂಗೆ ಮಣಿ ।
ಯುತ್ತೆ ನಿಂದಿರಲವನ ಕೂಡೆ ಧರ್ಮಜನು ನೀ ।
ನಿತ್ತ ಬಂದುದಕೇನು ಕಾರಣವೆನಲ್ಕೆ ಸುರದೂತನವನೊಡನೆಂದನು ॥ ೩೦೬ ॥

**ರಾಗ ಸುರುಟಿ ಏಕತಾಳ**

ಅವಧರಿಸಿಳೆಯೊಡೆಯ । ವಿಷಯವ । ವಿವರಿಸುವೆನು ಜೀಯ ॥
ದಿವದರಸನು ಕೊ । ಟ್ಟವಸರದಾಜ್ಞೆಯ ।
ತವೆ ಪಾಲಿಸಲೀ । ಭುವಿಗೈತಂದೆನು ॥ ೩೦೭ ॥

ಮಾನನಿಧಿಯೆ ನೀನು । ಈಗ ವಿ । ಮಾನವನೇರ್ದಿನ್ನು ॥
ಸಾನಂದದೆ ಬಂ । ದಾ ನಾಕದೆ ಸು ।
ಮ್ಮಾನದೊಳಿರು ದು । ಮ್ಮಾನವ ತೊರೆಯುತೆ ॥ ೩೦೮ ॥

ಎನೆ ಧರ್ಮಜನಾಗ । ಯೋಚಿಸಿ । ವಿನಯದೆ ಬಲುಬೇಗ ॥
ಶುನಕಸಹಿತ ನಾ । ನನಿಮಿಷ ನಗರಕೆ ।
ಮನದೊಲವಿಂ ಬ । ರ್ಪೆನು ನಿನ್ನೊಡನೆಯೆ ॥ ೩೦೯ ॥

ಎನಲಾ ಸುರಚರನು । ಬೇಡೈ । ಶುನಕನ ಬಿಡು ನೀನು ॥
ಮನದೊಲವಿಂದೊ । ರ್ವನೆ ಬಾ ಸುರಪತಿ ।
ಯನು ಕಾಣಲು ನಿನ । ಗನುಮತಿ ಇಹುದೈ ॥ ೩೧೦ ॥

**ವಾರ್ಧಕ**

ಅದಕೆ ಧರ್ಮಜನೆಂದನೆನ್ನನೀವರೆಗೆ ಬಿಡ |
ದಧಿಕ ಸುಪ್ರೀತಿಯಿಂದನುಸರಿಸಿ ಬಂದಿರ್ಪ |
ಮುದಿ ನಾಯಿಯಂ ಬಿಟ್ಟು ಬರಲಾರೆನೆಂದವಂ ಮುಂದೆ ನಡೆಯಲು ಶುನಕನು ||
ಮುದದಿಂದೆ ಧರ್ಮಪುರುಷನ ರೂಪಮಂ ಧರಿಸು |
ತಿದಿರು ಬಂದೆಲೆ ಮಗನೆ ಮೆಚ್ಚಿದೆನು ಪೋಗೀಗ |
ಳಿದು ನಿನ್ನನೈದೆ ಪರಿಕಿಸಲು ಗೆಯ್ದಿಹ ಕೃತ್ಯವೆಂದು ಮರೆಯಾದನಂದು || ೨೧೧ ||

**ಭಾಮಿನಿ**

ಮತ್ತೆ ಸುರಚರನೊಡನೆ ಯಮಸುತ |
ನುತ್ತಮಾಂಬರಯಾನವನು ನೆರೆ |
ಹತ್ತಿ ಮುಂಬರಿಯುತ್ತೆ ಮೊದಲಾ ಶ್ಯೆಮಿನೀಶ್ವರನ ||
ಪತ್ತನಕೆ ಪೋಗುತ್ತೆ ನರಕದ |
ಹತ್ತಿರವೆ ನಡೆತರಲು ನೆರೆ ಹೇ |
ಸುತ್ತೆ ಸುರದೂತನೊಳು ಯಮನಂದನನು ಪೇಳಿದನು || ೨೧೨ ||

**ದ್ವಿಪದಿ**

ಸುರಸೂತ ನೀನೇತಕೀದಾರಿಯಿಂದ |
ಕರೆತಂದುದೆಂದೊರೆಯೊ ಬೇಗ ದಯೆಯಿಂದ || ೨೧೩ ||

ನರಕಲೋಕದ ದೃಶ್ಯವನು ನೋಡಲಾರೆ |
ಕರಗುತಿದೆ ಹೃದಯವೆನ್ನದು ತಾಳಲಾರೆ || ೨೧೪ ||

ಆವ ಪಾಪವನೆಸಗಿದೆನೊ ನೋಡಲಿದನು |
ಸಾವಧಾನದೊಳೆನ್ನೊಡನೆ ಪೇಳು ನೀನು || ೨೧೫ ||

ಹಾದಿ ತಪ್ಪಿತೊ ನಿನಗೆ ಮೇಣಲ್ಲದಿನ್ನು |
ಬೇಧವರಿಯೆಯೊ ನಾಕ ನರಕವೆಂಬುದನು || ೨೧೬ ||

ಈಗ ಪೇಳಿದಕೆ ಕಾರಣವನೆನೆ ಚರನು |
ಬೇಗನುಸುರಿದನೈದೆ ಧರ್ಮಜಂಗದನು || ೨೧೭ ||

**ರಾಗ ಕೇದಾರಗೌಳ ಅಷ್ಟತಾಳ**

ಇದಕೆ ಕಾರಣವೆನಗರಿಯದು ಸುರಪನು | ವಿಧಿಸಿದ ಹಾದಿಯಲ್ಲಿ ||
ಮುದದಿಂದ ಕರೆತಂದೆನಿದರ ಕಾರಣವನ್ನು | ಮೊದಲಾಗಿ ತಿಳಿವೊಡೀಗ || ೨೧೮ ||

ಇಲ್ಲೆ ಶೋಭಿಸುತಿರ್ಪುದಾ ಯಮನರಮನೆ । ಯಲ್ಲಿಗೆ ಪೋಗಿ ನೀನು ॥
ಮೆಲ್ಲನಾತನ ಕೂಡೆ ಕೇಳಿದನೆಂದೆನ । ಉಲ್ಲಾಸದಿಂ ಪೊರಟ ॥ ೩೦೯ ॥

**ಕಂದ**

ಸುರಸೂತನೊಡನೆ ಯಮಜಂ ।
ಭರದಿಂ ನಿಜ ಪೂಜ್ಯ ಪಿತನ ದರ್ಶನಕೆಂದಾ ॥
ದರದಿಂ ಬರುತ್ತಿರ್ದಂ ಯಮ ।
ಪುರದತಿ ವೈಭವವನೀಕ್ಷಿಸುತ್ತಾ ಪಥದೊಳ್ ॥ ೩೨೦ ॥

## ಅಂಕ ೧೭. ಯಮನ ಒಡ್ಡೋಲಗ

**ರಾಗ ಭೈರವಿ ಝಂಪೆತಾಳ**

ಇತ್ತಲಾ ಶ್ಯಮಿನೀ ಪತ್ತನದೊಳಧಿಕ ಸಂ ।
ಪತ್ತಿನಿಂ ದಿನಸುತನು ಚಿತ್ತ ಶುದ್ಧಿಯಲಿ ॥
ಮಿತ್ತು ಮಸಣಿಯರ ಕರೆಸುತ್ತೆ ಹರಿಪೀಠವನು ।
ಮತ್ತೆ ತಾನೇರುತ್ತಲಿತ್ತನೋಲಗವ ॥ ೩೨೧ ॥

ಜ್ವರಮಹೋನ್ಮಾದ ಭೀಕರ ವಾತ ಕಫ ಭಗಂ ।
ದರ ರಕ್ತ ಮೇಹ ದುರ್ಧರಪಿತ್ಥ ಮುಖ್ಯ ॥
ವರ ರೋಗನಾಯಕರು ಸರಸದಿಂದಾ ಸಭೆಯೊ ।
ಳಿರುತಿರ್ದರತಿ ಭಯಂಕರ ರೂಪಿನಿಂದೆ ॥ ೩೨೨ ॥

ರಾಜ ಯಕ್ಷನು ಸಚಿವ ರಾಜನೆನಿಸುತೆ ಧರ್ಮ ।
ರಾಜನೆಡಬದಿಯೊಳು ವಿರಾಜಿಸುತ್ತಿರಲು ॥
ಸಾಜದಿಂ ಸೇನೆಗಧಿರಾಜನೆನಿಸುತೆ ಕುಷ್ಟ ।
ನೋಜೆಯಿಂದಿರ್ದನತಿತೇಜದಿಂ ಮುಂದೆ ॥ ೩೨೩ ॥

ವಂದಿಮಾಗಧರಾಗ ಬಂದು ಜಯ ಜಯವೆಂದು ।
ವಂದಿಸುತೆ ಕೊಂಡಾಡಿ ನಿಂದಿರಲು ಯಮನು ॥
ಚಂದದಿಂ ಕರಣಿಕನೊಳೆಂದನು ವಿಶೇಷವೇ ।
ನಿಂದಿನದೆನಲ್ಕೊರೆದನಂದದಿಂದವನು ॥ ೩೨೪ ॥

**ರಾಗ ಮುಖಾರಿ ಏಕತಾಳ**

ತರಣಿ ಸಂಜಾತನೆ ಕೇಳು । ವಂದಿಸುತೀಗ ॥
ಳೊರೆವೆನೆಲ್ಲವನು ಕೃಪಾಳು ॥
ದುರಿತವನೆಸಗುತೆ । ಧರೆಯೊಳು ಬಾಳಿದ ।

ದುರುಳರು ಸತ್ತೀ | ಪುರವನು ಸೇರುತೆ |
ಮರುಗುತಲಿಹನೀ | ಗುರುತರದಿಂದೆನೆ |
ಪರಿಭಾವಿಸುತಿಂ | ತೊರೆದನು ಕಾಲನು || ೨೧೫ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕರೆದು ತಾರ್ರೈ ಚಿತ್ರಗುಪ್ತನೆ | ಭರದೊಳಿಲ್ಲಿಗೆ ಮೊದಲು ಬಂದಿಹ |
ದುರುಳನನು ಬಳಿಕವನ ವಿಷಯವ | ನೊರೆಯೊ ಬೇಗ || ೨೧೬ ||

**ರಾಗ ಮುಖಾರಿ ಏಕತಾಳ**

ಒಡನೆಯೆ ಚಿತ್ರಗುಪ್ತಕನು | ಪಾಪಿಯ ಕಯ್ಯ |
ಪಿಡಿದೆಳೆದೊಯ್ದು ಪೇಳಿದನು ||
ಒಡೆಯನೆ ಲಾಲಿಸು | ಪೊಡವಿಯೊಳಿವನೆಡೆ |
ಬಿಡದಬಲೆಯರನು | ಕೆಡಿಸುತೆ ತನ್ನಯ |
ಮಡದಿಯನನುದಿನ | ಬಡಿ ಬಡಿಯುತೆ ಸಲೆ |
ಕಡೆಗಣಿಸಿಹನೆನ | ನುಡಿದನು ಶಮನನು || ೨೧೭ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಆದೊಡಿವನನು ಪಿಡಿಯುತುಕ್ಕಿನ | ಕಾದ ಕಂಭವನಪ್ಪಿಸೆಂದೆನೆ |
ಮೋದದಿಂದಂತೆಸಗಿದನು ಮ | ರ್ಯಾದೆಯಿಂದ || ೨೧೮ ||

ಎರಡನೆಯ ಪಾಪಿಯನು ಕರೆತಾ | ಕರಣಿಕನೆ ಬೇಗೆನಲು ಕರೆತಂ |
ದೊರೆದನಾಕೆಯ ವಿಷಯವನು ಪದ | ಕೆರಗುತವನು || ೨೧೯ ||

**ರಾಗ ಮುಖಾರಿ ಏಕತಾಳ**

ಇವಳು ತನ್ನಿನಿಯನ ಕೊಂದು | ಮಕ್ಕಳನೆಲ್ಲ |
ಜವನೆಡಗಟ್ಟುತೆ ನಿಂದು ||
ಜವದಿಂದುಪಪತಿ | ಭವನವ ಸೇರುತೆ |
ಭುವನದೊಳನ್ಯಾ | ಯವ ನೆಸಗುತಲ |
ತ್ಯವಿನಯಯುತೆಯಹ | ಯುವತಿಯೆನಲು ತ |
ನ್ನವರನು ನೋಡುತೆ | ರವಿಸುತನೆಂದನು || ೨೨೦ ||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಿಡದಿರೀಕೆಯನೀಗ ಬಂಧಿಸಿ | ಪಿಡಿದು ತಪ್ತ ಮಹಾಕಟಾಹಕೆ |
ಕೆಡಹಿರೆನೆ ನೂಕಿದರು ಚಾರರು | ತಡೆಯದಂದು || ೨೨೧ ||

ಮೂರನೆಯ ಧೂರ್ತನನು ಬರಿಸುತೆ | ತೋರಿಸೆನಗೊಂದೊರೆದ ಸೂರ್ಯ ಕು |
ಮಾರಕಗೆ ಕರಣಿಕನು ತೋರಿ ವಿ | ಚಾರ ಒರೆದ || ೨೨೧ ||

**ರಾಗ ಮುಖಾರಿ ಏಕತಾಳ**

ಧರಣಿಯೊಳಿವನನ್ಯಾಯವನು । ಗೆಯ್ದಿಹ ವೈಶ್ಯ ।
ವರನೆಂದೆನುವ ವಿಖ್ಯಾತಿಯನು ॥
ಧರಿಸುತ ಧರ್ಮದ । ಪರಮಾವಧಿಯನು ।
ನಿರತವು ಪೊಂದುತೆ । ನರರನು ಸೋಲಿಸಿ ।
ಸಿರಿಯನ್ನಾರ್ಜಿಸಿ । ಮೆರೆದಿರುವತಿ ನಿ ।
ಷ್ಕರುಣಿಯ ನೋಡೆನೆ ತರಣಿಜನೊರೆದನು ॥ ೩೩೩ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಈತನನು ಬಡಿಬಡಿದು ಬಳಿಕಾ । ಶಾತಕುಂಭದ ಶೂಲಕಿಕ್ಕೆನೆ ।
ದೂತರಂತೆಯೆ ಗೆಯ್ದರತಿ ನಿ । ರ್ಭೀತಿಯಿಂದ ॥ ೩೩೪ ॥

ಬಳಿಕ ನಾಲ್ಕನೆಯಾತನನು ಪಿಡಿ । ದೆಳೆದು ತಾರೆಂದೆನುವ ವೇಳೆಯೊ ।
ಳೊಳಗೆ ಬಂದೆರಗಿದನು ಯಮಜನು । ಘಳಿಲನಾಗ ॥ ೩೩೫ ॥

ಒಡನೆ ಯಮನಾತ್ಮಜನ ಪರಸುತೆ । ನುಡಿದನೆಲೆ ನಂದನನೆ ನೀನೆ ।
ನ್ನೆಡೆಗೆ ಬಂದುದರಿಂದ ತೋಷವ । ಪಡೆದೆ ನಾನು ॥ ೩೩೬ ॥

ಏತಕಿಲ್ಲಿಗೆ ಬಂದು ನೀನತಿ । ಕಾತರದೊಳಿರುತಿರ್ಪೆ ಪೇಳೆನೆ ।
ಸಾತಿಶಯದಿಂದೆರಗಿ ನುಡಿದನ । ಜಾತವೈರಿ ॥ ೩೩೭ ॥

**ರಾಗ ಸಾಂಗತ್ಯ ರೂಪಕತಾಳ**

ಪಿತನೆ ಕೇಳೆನ್ನನೀ ನಾಕಕ್ಕೆ ಕರೆದುಕೊಂ । ಡತಿಶಯದಿಂ ಬರ್ಪ ವೇಳೆ ॥
ಚಿತೆಯಿವ ನರಕದ ಹಾದಿಯಿಂದಲೆ ಸುರ । ಪತಿ ಬರಿಸಿದನೇಕೊ ತಿಳಿಯೆ ॥ ೩೩೮ ॥

ಅದನರಿಯುವ ಬಯಕೆಯೊಳಿಲ್ಲಿಗೈತಂದೆ । ನಿದನೆನಗರುಹುತೀ ಕ್ಷಣವೇ ॥
ಮುದವೀಯಬೇಕೆಂದು ಮಣಿದ ನಂದನನಿಗೆ । ಸದಮಲ ಯಮನುಸುರಿದನು ॥ ೩೩೯ ॥

ತರಳನೆ ನೀನಂದು ಭಾರತಾಹವದೊಳು । ಗುರುಕುಂಭ ಸಂಭವನನ್ನು ॥
ತರಿವ ವೇಳೆಯೊಳರಿಯದೆ ಸುಳ್ಳನೊಂದನು । ನೆರೆಯೊರೆದುದರಿಂದ ಹೀಗೆ ॥ ೩೪೦ ॥

ನರಕ ದರ್ಶನವಾಗಿ ನಿಷ್ಪಾಪಿಯೆನಿಸಿದೆ । ತೆರಳಿನ್ನು ನಾಕಲೋಕಕ್ಕೆ ॥
ಸುರರಲ್ಲಿ ನಿನ್ನನು ಸುಸ್ವಾಗತಿಸುವರು । ಸುರಪನು ಸನ್ಮಾನಿಸುವನು ॥ ೩೪೧ ॥

ಸುರಧರ್ಮ ಪೀಠವು ನಿನಗೆ ಸುಸ್ಥಿರವಾಗಿ । ದೊರಕುತೆ ಸುಖದಿಂದ ನೀನು ॥
ಮೆರೆದಲ್ಲಿ ಬಾಳೆಂದು ಪರಸುತ್ತೆ ಯಮನಂದು । ತರಳನ ಕಳುಹಿದನಾಗ ॥ ೩೪೨ ॥

**ವಾರ್ಧಕ**

ಸುರದೂತನೊಡನೆ ಪೊರಟಲ್ಲಿಂದೆ ಧರ್ಮಜಂ ।
ವರವಿಮಾನವನೇರಿ ಶ್ಯೈಮಿನೀ ನಗರಮಂ ।
ನೆರೆನೋಡಿದಾ ಬಳಿಕ ಮುಂಬರಿದು ಬಂದು ಬಳಿಕುಳಿದ  ದಿಕ್ಪತಿಗಳಿಗಿರ್ಪ ॥
ವರಮಹಾನಗರಂಗಳೆಲ್ಲಮಂ ಪರಿಕಿಸುತೆ ।
ಪರಿತೋಷವಾಂತೆಯ್ದೆ ತೆರಳಿ ಮತ್ತಲ್ಲಿಂದೆ ।
ಸುರಪತಿಯ ಭವನದೆಡೆಗಾಗಿ ಬರುತಿರ್ದನಂದಧಿಕ ಸಂತೋಷದಿಂದೆ     ॥ ೩೪೩ ॥

## ಅಂಕ ೧೮. ಸುಧರ್ಮಸಭೆಯ ಸನ್ಮಾನ - ಸಮಾರಂಭ

**ರಾಗ ಕಾಂಭೋಜಿ ಝಂಪೆತಾಳ**

ಒಂದು ದಿನ ಸುರಪತಿಯು ಸಕಲ ನಿರ್ಜರಗರುಡ ।
ಗಂಧರ್ವಮುಖ್ಯರಂ ಬರಿಸಿ ॥
ಚಂದದಿಂದೋಲಗವನಿತ್ತಿರಲು ಸಭಿಕರ್ಯೆ ।
ತಂದು ಕುಳ್ಳಿರ್ದರಂದಲ್ಲಿ    ॥ ೩೪೪ ॥

ವರುಣ ವಾಯು ಕುಬೇರ ಮುಖ್ಯದಿಕ್ಪತಿಗಳತಿ ।
ಸರಸದಿಂ ಬಂದು ನೆರೆದಿರಲು ॥
ಪರಮಕವಿಗಮಕಿಗಾಯಕನರ್ತಕಿಯರು ಬಂ ।
ದುರೆ ವಿರಾಜಿಸುತಿರ್ದರಲ್ಲಿ  ॥ ೩೪೫ ॥

ವರರಂಭೆಮೇನಕೆತಿಲೋತ್ತಮೆಯರೈತಂದು ।
ಭರದಿಂದೆ ನರ್ತನವ ಗೆಯ್ಯೆ ॥
ಸುರವಂದಿಮಾಗಧರು ಹರುಷದಿಂದೆಡಬಲದೊ ।
ಳಿರುತೆ ಸುರಪತಿಯ ಪೊಗಳಿದರು   ॥ ೩೪೬ ॥

ಆಗಳಾ ಸಭೆಗೋರ್ವ ದೂತನೈತಂದು ಶಿರ ।
ಬಾಗಿ ಸುರಪತಿಯಡಿಗೆ ಮಣಿದು ॥
ಬೇಗನೆ ಬಿನ್ನವಿಸಿದನು ವಿನಯದಿಂದೆ ಸರಿ ।
ಯಾಗಿ ಸರ್ವರು ಕೇಳುವಂತೆ          ॥ ೩೪೭ ॥

**ರಾಗ ಸಾರಂಗ ಅಷ್ಟತಾಳ**

ಅವಧರಿಸೆನ್ನೊಡೆಯ । ವಂದಿಸಿ ನಾನು । ವಿವರಿಸುವೀ ವಿಷಯ ॥
ದಿವದ ಬಾಗಿಲಿನೊಳು । ಸವಿನಯದಿಂದೆ ನಿ ।
ನ್ನವಸರದಾಜ್ಞೆಯ । ತವೆ ಪಾಲಿಸುತಲಿರ್ದೆ    ॥ ೩೪೮ ॥

ಆ ವೇಳೆಯೊಳು ಬಂತಯ್ಯ । ಧರ್ಮಜನಿರು । ವಾ ವಿಮಾನವು ಹೇ ಜೀಯ ॥
ನಾವೀಗ ಪೋಗುತೆ । ಸಾವಧಾನದೆ ಬಂದ ।
ಕೋವಿದ ಯಮಜನ । ನೋಡಿ ಸ್ವಾಗತಿಪುದು ॥ ೩೪೯ ॥

**ಭಾಮಿನಿ**

ಎಂದೊರೆದ ಚಾರಕನ ನುಡಿಯನು ।
ಚಂದದಿಂದಾಲಿಸಿದ ಮಘವನು ।
ವೃಂದ ವೃಂದಾರಕರ ನೆರಹುತೆ ವೈಭವದೊಳಂದು ॥
ಬಂದು ಯಮತನಯನನು ಬಹು ಮುದ ।
ದಿಂದೆ ಸತ್ಕರಿಸುತ್ತೆ ಶೋಭಿಸು ।
ವಂದಣವನೇರಿಸುತೆ ಮೆರವಣಿಗೆಯಲಿ ಕರೆತಂದ ॥ ೩೫೦ ॥

**ರಾಗ ಸಾಂಗತ್ಯ ರೂಪಕತಾಳ**

ಕರೆತಂದು ಮತ್ತೆ ಸುಪೀಠದೊಳವನ ನಾ ।
ದರದಿಂದೆ ಕುಳ್ಳಿರಿಸುತ್ತೆ ॥
ಸುರಪನು ಸಭೆಯೊಳು ಸೇರಿದ ಸರ್ವರೊ ।
ಳೊರೆದನು ಸಂತೋಷದಿಂದೆ ॥ ೩೫೧ ॥

ಸುರರೆಲ್ಲ ಕೇಳಿರೀ ಧರ್ಮಸಂಜಾತನು ।
ವರಶಶಿವಂಶದೊಳುದಿಸಿ ॥
ಪರಮ ಧಾರ್ಮಿಕ ಸತ್ಯಸಂಧನೆಂದೆನಿಸುತ್ತೆ ।
ಪರಮಾತ್ಮ ಭಕ್ತನಾಗಿಹನು ॥ ೩೫೨ ॥

ಧರೆಯೊಳೀವರೆಗಿವನನ್ನೃತವನೊರೆಯದ ।
ವರ ನೃಪನೆಂದೆನಿಸುತ್ತೆ ॥
ಮೆರೆದುದಲ್ಲದಜಾತಶತ್ರುವೆಂದೆನಿಸುತು ।
ವರ್ರೆಯೊಳು ಬಾಳಿದ ಮಹಿಮ ॥ ೩೫೩ ॥

ಆದಕಾರಣ ನಾನು ಸುರ ವಿಮಾನವನು ಮ ।
ತ್ತಾದರದೊಳು ಕಳುಹುತ್ತೆ ॥
ಮೋದದಿಂದಿಲ್ಲಿಗೆ ಬರಿಸುತೀ ದಿನ ನಮ್ಮ ।
ವೇದಿಕೆಯೊಳು ಕುಳ್ಳಿರಿಸಿದೆ ॥ ೩೫೪ ॥

ಧರೆಯೊಳು ಸಾಯದಿಲ್ಲಿಗೆ ದೇಹ ಸಹಿತಿಂತು ।
ಬರುವ ಯೋಗ್ಯತೆಯನು ಪಡೆದ ॥
ಪರಮ ಪುಣ್ಯಾತ್ಮರೀವರೆಗಿಲ್ಲದುದರಿಂದೆ ।
ಕರೆತಂದು ಗೌರವಿಸಿದೆನು ॥ ೩೫೫ ॥

ಇನ್ನೀತನಿಗೆ ನಮ್ಮ ಧರ್ಮಾಧಿಕಾರದ ।
ಸನ್ನುತ ಪಟ್ಟವ ಕಟ್ಟಿ ।
ಮನ್ನಿಸಿ ನಾಕದತ್ಯುನ್ನತ ಸುಸ್ಥಾನ ।
ವನ್ನೀವೆನೀಗ ನಾನೊಲಿದು ॥ ೩೫೬ ॥

ಇಂತೊರೆಯುತೆ ಧರ್ಮಪೀಠದೊಳಾತನ ।
ನಂತರಿಸದೆ ಕುಳ್ಳಿರಿಸುತೆ ॥
ಸಂತಸದೊಳು ಸುರಸುದತಿಯರಿಂದೆ ಸ ।
ಮಂತಾರತಿಯ ಬೆಳಗಿಸಿದ ॥ ೩೫೭ ॥

ಸುರದುಂದುಭಿಯು ಮೊಳಗಿತು ಸುಮವರ್ಷವು ।
ಸುರಿಯಿತು ಸುರರೆಲ್ಲರಾಗ ॥
ಕರವೆತ್ತಿ ಜಯ ಜಯವೆನಲು ನಾರಿಯರೆತ್ತಿ ।
ದರು ಮಂಗಲಾರತಿಯನ್ನು ॥ ೩೫೮ ॥

**ವಾರ್ಧಕ**
ಆಗವನ ಸತಿ ಸೋದರರ್ಕಳ್ಕೈತಂದವಗೆ ।
ಬಾಗಿ ವಂದಿಸಲವರ ಮನ್ನಿಸುತೆ ಬಳಿಕ ಶತ ।
ಯಾಗಮಂಗೆಯ್ದ ದೇವೇಂದ್ರನಾಸ್ಥಾನದೊಳು ಧರ್ಮಾಧಿಕಾರಿಯೆನಿಸಿ ॥
ನಾಗಸುರಗರುಡ ಗಂಧರ್ವರಿಂದನುದಿನ ಸ ।
ರಾಗದಿಂ ಸೇವೆಯಂ ಸ್ವೀಕರಿಸಿ ಬಳಿಕ ಸುಖ ।
ಸಾಗರದೊಳೋಲಾಡುತಿರಲಾಯ್ತು ಧರಣಿಯೊಳ್ ಭದ್ರಂ ಶುಭಂ ಮಂಗಲಂ ॥ ೩೫೯ ॥

## ಅಂಕ ೧೯. ಮಂಗಲಾಚರಣೆ

**ರಾಗ ಮೋಹನ ಆದಿತಾಳ**
ಮಂಗಲಂ ಜಯ ಮಂಗಲಂ ॥ ಪಲ್ಲ ॥

ಮಂಗಲ ಮನುಮುನಿಪಾಲನಿಗೆ । ಜಯ ।
ಮಂಗಲ ಸುಗುಣ ಸುಶೀಲನಿಗೆ ॥
ಮಂಗಲ ವರಗೋಪಾಲನಿಗೆ । ಶುಭ ।
ಮಂಗಲ ರಾಕ್ಷಸಕಾಲನಿಗೆ ॥
ಮಂಗಲಂ ಜಯ ಮಂಗಲಂ ॥ ೩೬೦ ॥

ಮಂಗಲ ದುರಿತ ನಿವಾರಕಗೆ । ಜಯ ।
ಮಂಗಲ ಭಕ್ತೋದ್ಧಾರಕಗೆ ॥

ಮಂಗಲ ಭಯ ಪರಿಹಾರಕಗೇ । ಶುಭ ।
ಮಂಗಲ ಮಧುಸಂಹಾರಕಗೆ ॥
ಮಂಗಲಂ ಜಯ ಮಂಗಲಂ ॥ ೩೬೧ ॥

ಮಂಗಲ ನಂದನ ಕಂದನಿಗೆ । ಜಯ ।
ಮಂಗಲ ಭಕ್ತಾನಂದನಿಗೆ ॥
ಮಂಗಲ ಸುಗುಣ ಮುಕುಂದನಿಗೆ ॥ ಶುಭ ।
ಮಂಗಲ ಜಯ ಗೋವಿಂದನಿಗೆ । ಮಂಗಲಂ ಜಯ ಮಂಗಲಂ ॥ ೩೬೨ ॥

**ಯಕ್ಷಗಾನ ಶ್ರೀಕೃಷ್ಣಪರಂಧಾಮ ಮುಗಿದುದು**

# ಯಕ್ಷಗಾನ ಚಂದ್ರಹಾಸ ಚರಿತ್ರೆ

## ಪಾತ್ರಗಳು

| | | |
|---|---|---|
| ಚಿತ್ರಧ್ವಜ | - | ಮಕರಧ್ವಜ ರಾಜನ ಮಗ - ಕುಂತಳದ ರಾಜ |
| ಲೀಲಾಂಗನೆ | - | ಚಿತ್ರಧ್ವಜನ ಹೆಂಡತಿ. |
| ಶೂರಸೇನ | - | ಸೌರಾಷ್ಟ್ರದ ಅರಸು |
| ದುಷ್ಟಬುದ್ಧಿ | - | ಕುಂತಳದ ಮಂತ್ರಿ |
| ಮದನ | - | ದುಷ್ಟಬುದ್ಧಿಯ ಹಿರಿಯ ಮಗ |
| ವಿಮಲ | - | ದುಷ್ಟಬುದ್ಧಿಯ ಕಿರಿಯ ಮಗ |
| ತಾರಾಕ್ಷಿ | - | ದುಷ್ಟಬುದ್ಧಿಯ ಹೆಂಡತಿ |
| ಮೇಧಾವಿ | - | ಕೇರಳದ ರಾಜ - ಚಂದ್ರಹಾಸನ ತಂದೆ |
| ಪದ್ಮರೇಖೆ | - | ಮೇಧಾವಿಯ ಹೆಂಡತಿ |
| ಸಾರಥಿ | - | ಮೇಧಾವಿಯ ಸಾರಥಿ |
| ದೂತಿ | - | ಚಂದ್ರಹಾಸನ ಸಾಕುತಾಯಿ |
| ಕುಳಿಂದ | - | ಚಂದನಾವತಿಯ ಒಡೆಯ |
| ಮೇಧಾವಿನಿ | - | ಕುಳಿಂದನ ಹೆಂಡತಿ |
| ಚಂದ್ರಹಾಸ | - | ಮೇಧಾವಿಯ ಮಗ |
| ವಿಷಯೆ | - | ದುಷ್ಟಬುದ್ಧಿಯ ಮಗಳು |

ಚಂಪಕಮಾಲಿನಿ - ಚಿತ್ರಧ್ವಜನ ಮಗಳು

ಚಂಡಸೇನ - ಶೂರಸೇನನ ತಮ್ಮ

ಗಾಲವ - ಕುಂತಳದ ರಾಜಪುರೋಹಿತ

ಕಾಳಿ - ಗ್ರಾಮದೇವತೆ

ಬ್ರಾಹ್ಮಣರು - ಚಾರಕರು - ಕಪ್ಪದ ದೂತರು - ಕಟುಕರು - ಸಖಿಯರು - ಇತ್ಯಾದಿ.

೧

**ಶಾರ್ದೂಲವಿಕ್ರೀಡಿತಂ**

ಶ್ರೀಗೋಪಾಲರಮೇಶಭಕ್ತವರದಂ ಕೌಂತೇಯರಕ್ಷಾಮಣಿಂ
ನಾಗಾರಾತಿಸುವಾಹನಂ ಮುರಹರಂ ಕ್ಷೀರಾಬ್ಧಿವಾಸಂ ಹರಿಮ್ ।
ವಾಗೀಶಾದಿಸಮಸ್ತದೇವನಮಿತಂ ಗೋಪಾಂಗನಾವೇಷ್ಟಿತಂ
ಯೋಗೀಶಂ ದುರಿತಾಂತಕಂ ನರಹರಿಂ ವಂದೇ ಸರೋಜಾಂಬಕಮ್ ॥ ೧ ॥

**ರಾಗ ನಾಟಿ ಝಂಪೆತಾಳ**

ಜಯ ಕಾತ್ಯಾಯನಿಪುತ್ರ । ಜಯ ಜಯತು ಗಜವಕ್ತ್ರ ।
ಜಯತು ಕೋಮಲ ಗಾತ್ರ । ಜಯತು ನುತಿಪಾತ್ರ ॥
ಜಯ ಜಯತು ಜಯತು ॥ ೨ ॥

ಪ್ರಥಮ ಪೂಜಿತ ವೀರ । ಶ್ರುತಿವೇದ್ಯ ಗಂಭೀರ ।
ನತಮೌಳಿಮಂದಾರ । ಜಿತದೈತ್ಯ ಶೂರ ॥
ಜಯ ಜಯತು ಜಯತು ॥ ೩ ॥

ಸ್ತಂಭಜನ್ಮನೆ ನಿನ್ನ । ನಂಬಿಹೆನು ನೀ ಎನ್ನ ।
ಬೆಂಬಿಡದೆ ಸಲಹೀಗ । ಶಂಭುಸುತ ಬೇಗ ॥
ಜಯ ಜಯತು ಜಯತು ॥ ೪ ॥

**ಭಾಮಿನಿ**

ನೀಲಮೇಘಶ್ಯಾಮ ನೀರಜ ।
ಲೋಲಲೋಚನ ಕಂಬುಕಂಠ ವಿ ।
ಶಾಲ ವಕ್ಷಸ್ಥಳ ಮನೋಹರವದನ ದಾಶರಥೇ ॥
ವಾಲಿಮಥನ ಸುರೇಶವಂದಿತ ।
ಕಾಲಕಾಲ ಕೃಪಾಬ್ಧಿ ಸೀತಾ ।
ಲೋಲ ಶ್ರೀರಘುರಾಮಮೂರುತಿ ನಡೆಸಲೀ ಕೃತಿಯ ॥ ೫ ॥

**ದ್ವಿಪದಿ**

ಹರಿ ಹರ ವಿರಿಂಚಿಗಳಿಗೆರಗಿ ಭಕ್ತಿಯಲಿ ।
ಸಿರಿ ವಾಣಿ ಪಾರ್ವತಿಗೆ ನಮಿಪೆ ವೈಭವದಿ ॥ ೬ ॥

ಹರಿಯ ಕಿಂಕರ ಚಂದ್ರಹಾಸಕಥನವನು ।
ಅರಿತ ತೆರದಲಿ ಕೃತಿಯ ಗೆಯ್ಯುವೆನು ನಾನು ॥ ೭ ॥

ಕೃತಿಯೊಳಗೆ ತಪ್ಪಿರಲು ತಿದ್ದಿ ಮೆರೆಸುವುದು ।
ಮತಿಯುತರ ಗುಣಗಳಿವು ಸಹಜವಾಗಿಹುದು ॥ ೮ ॥

ಹಿಂದೆ ದ್ವಾಪರದಂತ್ಯದೊಳಗೆ ಧರ್ಮಜನು ।
ಬಂಧುಹತ್ಯಕೆ ಬೆದರಿ ಹಯಮೇಧವನ್ನು ॥ ೯ ॥

ವಿರಚಿಸಲು ದೀಕ್ಷೆಯಂ ಕೊಂಡು ತುರಗವನು ।
ನರನ ಬೆಂಬಲ ಗೈದು ಕಳುಹೆ ಭೂವರನು ॥ ೧೦ ॥

ಕಲಿ ಕಿರೀಟಿಯು ಸಕಲ ಧರಣಿಪರ ಜಯಿಸಿ ।
ಸೆಳೆದು ಕಪ್ಪ ಸಮೇತ ಸೇನೆಗಳವೆರಸಿ ॥ ೧೧ ॥

ಬಂದು ಕುಂತಳಪುರದ ಹೊರಗಿನುಪವನದಿ ।
ಚಂದದಿಂದಿರೆ ತುರಗವಡಗಲಾ ಸ್ಥಳದಿ ॥ ೧೨ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎತ್ತ ಪೋದುದು ತುರಗವೆನುತಲಿ । ಚಿತ್ತದಲಿ ಯೋಚಿಸುವ ಕಾಲದಿ ।
ಕತ್ತಲೆಯ ಪರಿಹರಿಪ ಭಾಸ್ಕರ । ನುದಿಸಿದಂತೆ ॥ ೧೩ ॥

ಮುನಿಪ ನಾರದ ಬರಲು ನಮಿಸುತ । ಘನಮಹಿಮರೀ ದೇಶವ್ಯಾವುದು ।
ಜನಪನ್ಯಾರಿಹನಿಲ್ಲಿ ಕ್ರತುಹಯ । ಕಾಣದಿಹುದು ॥ ೧೪ ॥

ಅರುಹಬೇಹುದು ಕರುಣದಿಂದಲಿ । ಪರಮ ಸುeನಿಗಳು ನೀವೆನೆ ।
ನರನೆ ಕೇಳೀ ಪುರವ ಪಾಲಿಪ । ಧೊರೆಯ ಕಥೆಯ ॥ ೧೫ ॥

ಹರಿಯ ಭಕ್ತನು ಚಂದ್ರಹಾಸನು । ಪರಮ ಧಾರ್ಮಿಕ ಸಾಧುಗುಣಯುತ ।
ನಿರುವನೀತನ ಸುತರು ಹಯವನು । ಬಂಧಿಸಿಹರು ॥ ೧೬ ॥

ಧುರದೊಳಗೆ ತ್ರೈಭುವನದೊಳಗೀ । ಧರಣಿಪಾಲಗೆ ಸರಿಯ ಕಾಣೆನು ।
ಹರಿಯ ಕರುಣಾರಸಗಳೀತಗೆ । ಪೂರ್ಣವಿಹುದು ॥ ೧೭ ॥

ಎನಲು ನಮಿಸುತ ಧರ್ಮಜಾನುಜ । ಮುನಿಪ ಪೇಳೀ ನೃಪನ ಚರಿತೆಯ ।
ಚಿನುಮಯನ ದಯವೆಂತು ಈತನೊ । ಳೆನಲು ಪೇಳ್ದ ॥ ೧೮ ॥

ಆದಡಾಲಿಸು ನರನೆ ಪೇಳುವೆ । ಮೇದಿನಿಯೊಳೀತನ ಚರಿತ್ರೆಯ ।
ನಾದರದಿ ಕೇಳ್ದರಿಗೆ ಮುರಹರ । ನೊಲಿವ ದಯದಿ ॥ ೧೯ ॥

**ವಾರ್ಧಕ**

ಸುರಪಸುತ ಲಾಲಿಸೀ ಪುರಕೆ ಕುಂತಳವೆಂದು ।
ಧರೆಯೊಳಗೆ ನಾಮದಿಂ ಖ್ಯಾತಿಯಾಗಿಹುದಿದಕೆ ।
ಧೊರೆಯು ಮಕರಧ್ವಜನನಣುಗನಹ ಧಾರ್ಮಿಕಂ ಸುಗುಣ ಸಜ್ಜನಪ್ರೇಮನು ॥
ಧುರವಿಜಯ ಚಿತ್ರಧ್ವಜಾಖ್ಯ ನೃಪವರನಿಗಂ ।
ಪರಮಾಪ್ತನಹ ದುಷ್ಟಬುದ್ಧಿಯೆಂಬುವ ಸಚಿವ ।
ನಿರುತಿರಲ್ಕೊಂದು ದಿನ ಧರಣಿಪತಿಯೋಲಗಕೆ ಹರಿತಂದು ಮಂಡಿಸಿದನು ॥ ೨೦ ॥

**ರಾಗ ಕೇದಾರಗೌಳ ಅಷ್ಟತಾಳ**

ಧರಣಿಪಾಲನು ತನ್ನ ರಮಣಿ ಲೀಲಾಂಗನೆ । ವೆರಸಿಯೊಡ್ಡೋಲಗದಿ ॥
ಹರಿತಂದು ಮಂಡಿಸಿ ನಳಿನಾಕ್ಷಿಯಳ ಮುಖ । ಪರಿಕಿಸುತಿಂತೆಂದನು ॥ ೨೧ ॥

ತರುಣಿ ಕೇಳೆಲೆ ನಿನ್ನ ವರಿಸಿದ ಕಾರಣ । ಮೆರೆವುದು ಸಕಲ ಭಾಗ್ಯ ॥
ಧರೆಯೊಳೇಕಚ್ಛತ್ರಪತಿಯಾಗಿ ಪಾಲಿಪೆ । ಮರೆಯ ಮಾತಲ್ಲೆನಲು ॥ ೨೨ ॥

ಪತಿಯೆ ಲಾಲಿಸು ಎನ್ನ ಭಾಗ್ಯಂಗಳೇನಿದೆ । ಸುತಹೀನೆಯಾಗಿ ನಾನು ॥
ಪೃಥಿವಿಯೊಳ್ ವಂಧ್ಯತ್ವದಿಂದ ಬಾಳುವೆನೆಂತು । ಸತತ ಮನೋಚಿಂತೆಯು ॥ ೨೩ ॥

ಸತಿ ನೀ ಪೇಳಿದ ನುಡಿಯಹುದೆನ್ನ ಮನದೊಳು । ವ್ಯಥಿಪೆ ನಾನನುದಿನದಿ ॥
ಸುತವಿಹೀನಗೆ ಸ್ವರ್ಗಪದವಿಲ್ಲವೆಂಬುದು । ಶ್ರುತಿಸಾರವಚನ ಕೇಳೆ ॥ ೨೪ ॥

ಹಿಂದಿನ ಭವದೊಳು ಪಡೆದ ದುಷ್ಕರ್ಮದಿ । ಬಂದಿತೆಮಗೆ ವ್ಯಥೆಯು ॥
ಇಂದೀವರಾಕ್ಷಿ ನೀ ಮರುಗಬೇಡೆನುತಿರೆ । ಬಂದೆರಗುತ ದೂತನು ॥ ೨೫ ॥

**ಆರ್ಯಾ ಸವಾಯ್**

ಸಲಾಮು ಚಿತ್ರಧ್ವಜ ಮಹರಾಜ । ಸಲಾಮು ಭಾಸ್ಕರತೇಜ ॥
ಸಲಾಮು ವೈರಿವ್ರಾತಕುಠಾರಕ । ಸಲಾಮು ಕಲ್ಮಷಹಾರಕ ॥ ೨೬ ॥

ಸಾಮೀಯವರ ಪುರೋಹಿತ ಗಾಲವ । ಸ್ವಾಮೀಯವರ ಸವಾರಿಯು ॥
ಪ್ರೇಮದಿ ದ್ವಾರದೊಳೈತಂದಿರ್ಪರು । ಭೂಮಿಪಗರುಹೆನೆ ಬಂದೆವು ॥ ೨೭ ॥

ಗುಡುಗುಡಿಗೆನ್ನೊಳು ಗತಿಯಿಲ್ಲದೆ ಕಂ । ಗೆಡುವೆನು ಪಾದದ ಸೇವಕ ॥
ಪೊಡವಿಪ ಕಾಸೂ ವೀಸವ ನಿತ್ತರೆ । ಹುಡುಗ ಸಿಪಾಯಿಗೆ ಸಾಧಕ ॥ ೧೮ ॥

**ರಾಗ ಕೇದಾರಗೌಳ ಝಂಪೆತಾಳ**

ಚಾರಕನ ನುಡಿ ಕೇಳುತ । ಭೂವರನು । ಭೂರಿ ತೋಷವ ತಾಳುತ ॥
ಸಾರಿ ಮುನಿಪದಕೆರಗುತ । ಕರೆದೊಯ್ದು । ಚಾರು ಪೀಠವನೀಯುತ ॥ ೧೯ ॥

ಪರಿಪರಿಯ ಪೂಜಿಸುತಲಿ । ಗುರುವರರೆ । ಪರಮ ಸ್ವಾರಿಯು ದಯದಲಿ ॥
ಹರಿತಂದುದಪರೂಪವು । ಎನ್ನಿಂದ । ಸಿರಿಚರಣಕೇಂ ಕಾರ್ಯವು ॥ ೨೦ ॥

ಧರಣಿಪನ ನುಡಿಯ ಕೇಳಿ । ಪೇಳ್ದ ಗುರು । ಹರುಷಾಂಬುನಿಧಿಯೊಳಾಳಿ ॥
ದೊರೆ ನಿನ್ನ ಕಾಣದೀಗ । ಬಹು ದಿವಸ । ತೆರಳಿತದಕಾಗಿ ಬೇಗ ॥ ೨೧ ॥

ಬಂದೆನಲ್ಲದೆ ಕಾರ್ಯವು । ಮತ್ತಿಲ್ಲ । ಕಂದಿಹುದು ಮುಖಕಮಲವು ॥
ಇಂದೇನು ಕೊರತೆ ಪೇಳು । ಮನದೊಳಗೆ । ಕುಂದದೇ ಧೈರ್ಯ ತಾಳು ॥ ೨೨ ॥

ಧರೆಯನೇಕಚ್ಛತ್ರದಿ । ಪಾಲಿಸುವೆ । ಕೊರತೆಗಳಿದೇನು ಮನದಿ ॥
ಅರಿಗಳ್ಯಾರಿರ್ಪರದನು । ಹೇಳೆನಗೆ । ಪರಿಗಳೆಲ್ಲವ ಕೇಳ್ವೆನು ॥ ೨೩ ॥

**ರಾಗ ಶಂಕರಾಭರಣ ರೂಪಕತಾಳ**

ಮುನಿರಾಯ ಲಾಲಿಸು ಮನದೊಳಗಿರ್ಪುದ । ವಿನಯದಿ ಪೇಳುವೆ ನಾನು ॥
ಕನಕಭಂಡಾರಗಳಾನೆ ಸೇನೆಯು ರಾಷ್ಟ್ರ । ಘನ ಸಂಪತ್ತುಗಳಿರ್ದರೇನು ॥ ೨೪ ॥

ಪರದೊಳು ತಿಲಜಲಂಗಳನಿತ್ತು ಸ್ವರ್ಗದೊ । ಳಿರಿಸುವಂದವ ಮಾಳ್ಪ ಸುತರು ॥
ಧರೆಯ ಭಾರಕೆ ನಾನು ಪಡೆಯಲಿಲ್ಲೆನುತಲಿ । ಕೊರತೆಯೆನಲು ಮುನಿ ಪೇಳ್ದ ॥ ೨೫ ॥

ಪುರುಷಸಂತತಿ ನಿನಗಿಲ್ಲ ಪ್ರಾರಬ್ಧದಿ । ತರಳೆಯೋರ್ವಳು ಜನಿಸುವಳು ॥
ವರಿಸುವಳಾಕೆ ಶ್ರೀಹರಿಯ ಕಿಂಕರನನ್ನು । ದೊರೆಯಹನವನೆಯೀ ಪುರಕೆ ॥ ೨೬ ॥

ಎಂದು ಭೂವರನ ದುಃಖವನೊಡಬಡಿಸುತ್ತ । ಅಂಧಕಾರಿಯ ನೆನೆವುತ್ತ ॥
ಬಂದಂತೆ ಗಾಲವ ಮುನಿಪ ಹೋಗಲು ಭೂಪ । ನಂದು ಯೋಚಿಸಿದ ತನ್ನೊಳಗೆ ॥ ೨೭ ॥

**ರಾಗ ಕಾಂಭೋಜಿ ಝಂಪೆತಾಳ**

ತನಯ ವರ್ಜಿತನಾಗಿ । ರಾಜಕೀಯ ಕಾರ್ಯದೊಳು ।
ಮನವಿಟ್ಟು ಕಷ್ಟಗಳ । ನನುಭವಿಸಲ್ಯಾಕೆ ॥
ತನುಜೆಯುದ್ಧವಿಸುವಳ । ಭರ್ತ ಚಿನ್ಮಯ ಭಕ್ತ ।
ನೆನುತ ಮುನಿವಚನಗಳು । ಸಟೆಯಾಗದೈಸೆ ॥ ೨೮ ॥

ಹರಿಯು ತನ್ನಯ ಶರಣ । ರಿಂಗೆ ಬೇಕಾದುದನು ।
ಕರುಣಿಪನು ಸಹಜವಿದು । ಸ್ಮೃತಿಸಾರವಚನ ॥
ಪರರಿಂದಲೇನಹುದು । ಪರರ್ಯಾತಕವರಿಂಗೆ ।
ಕರುಣಿಸುವ ದಾತನಿರೆ । ಸರಿಯಲ್ಲವೆನಗೆ ॥ ೩೯ ॥

ಈ ರಾಜ್ಯಪದವಿಯನು । ಸಚಿವ ದುರ್ಮತಿಗೀಗ ।
ಭೋರನೊಪ್ಪಿಸಿ ನಾನು । ಸ್ವಸ್ಥ ಚಿತ್ತದೊಳು ॥
ನಾರಿ ಲೀಲಾಂಗನೆಯ । ಕೂಡಿ ಕೊಂಡಿಹೆನಿನ್ನು ।
ವಾರಿಜಾಕ್ಷನ ಪದವ । ನೆನೆವುತ್ತ ಸುಖದಿ ॥ ೪೦ ॥

**ಭಾಮಿನಿ**
ಧಾರಿಣಿಪನೀ ತೆರದಿ ಯೋಚಿಸಿ ।
ಚಾರರಿಂ ಸಚಿವನನು ಕರೆಸುತ ।
ಭೂರಿಸಂತೋಷದಲಿ ನೀನೀ ಧರೆಯ ಪಾಲಿಪುದು ॥
ಘೋರ ಪಾತಕಿಯಾಗಿ ಸಂತತಿ ।
ದೋರದಿದೆವೀ ರಾಜ್ಯವೀ ಸಂ ।
ಸಾರವೇಕೆನಗಿನ್ನು ದುರ್ಮತಿ ವಹಿಸು ನೀನಿದರ ॥ ೪೧ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಎನುತಲಾಕ್ಷಣ ರಾಜಮುದ್ರೆಯ । ಜನಪನಿತ್ತಾ ದುಷ್ಟಬುದ್ಧಿಗೆ ।
ವನಿತೆಯೊಡಗೊಂಡಾಗ ಸುಖದೊಳ । ಗಿರ್ದನಂದು ॥ ೪೨ ॥

ಪರಮ ವಿಭವದಿ ದುಷ್ಟ ಬುದ್ದಿಯು । ದೊರೆಯು ಸಂತತಿಹೀನನಾಗಿಹ ।
ಧರೆಯದೆನ್ನಯ ತರಳ ಮದನಗೆ । ದೊರಕಿತೆನುತ ॥ ೪೩ ॥

ಮನದಿ ನಾನರಿತಿರ್ದೆ ಪೂರ್ವದಿ । ತನಗೆ ತಾನಾಗಿಂದು ದೊರಕಿತು ।
ಘನತರದ ಪುಣ್ಯಗಳ ಗಳಿಸಿದೆ । ಪೂರ್ವ ಭವದಿ ॥ ೪೪ ॥

ಎಂದು ಹರುಷಾಂಬುಧಿಯೊಳಾಳುತ । ಚಂದದಿಂದಾ ರಾಷ್ಟ್ರಪ್ರಜೆಗಳ ।
ಬಂಧಿಸುತ ಭಂಡಾರವೆಲ್ಲವ । ತುಂಬಿಸಿದನು ॥ ೪೫ ॥

ಅರಿಗಳಿಲ್ಲದ ತೆರದಿ ಪಾಲಿಪೆ । ನಿರುವನೀ ಕುಂತಳದ ಪಾರ್ಶ್ವದಿ ।
ಧರಣಿಪನು ಸೌರಾಷ್ಟ್ರ ದೇಶಕೆ । ಶೂರಸೇನ ॥ ೪೬ ॥

ಧುರದೊಳಾತನ ಜಯಿಸಿ ಕಷ್ಟವ । ಹೊರಿಸಿ ತರುವೆನು ಮಿಕ್ಕರಾತನ ।
ತರಿವೆನೆನುತಾ ದುಷ್ಟಬುದ್ಧಿಯು । ಚರನ ಕರೆದು ॥ ೪೭ ॥

ಚಾರ ನಡೆ ಸೌರಾಷ್ಟ್ರ ದೇಶದ । ಶೂರಸೇನಗೆ ಪೇಳು ಸಾಮದಿ ।
ಸಾರಿ ಬಂದೆನಗೀಗ ಕಪ್ಪವ । ನೀಯಲೆನುತ ॥ ೪೮ ॥

ಬರನೊ ಬಾರನೊ ಎಂಬ ಪರಿಗಳ । ನರಿತು ಬೇಗದಿ ಬರುವುದೆನ್ನುತ ।
ತ್ವರೆಯೊಳಗೆ ಕಳುಹಲ್ಕೆ ದೂತನು । ಬಂದು ನೃಪಗೆ ॥ ೪೯ ॥

**ರಾಗ ಸಾರಂಗ ಅಷ್ಟತಾಳ**

ಶೂರಸೇನಾಖ್ಯ ಕೇಳು । ಪೇಳ್ವುದನೆಲ್ಲ । ಧೀರ ನಿನ್ನೊಡನೀಗಳು ॥
ಪಾರಮಾರ್ಥದೊಳರಿಕೆಯ ಗೈವೆ ಕುಂತಳ ।
ಧಾರಿಣೀಶನ ಮಂತ್ರಿಯಾಜ್ಞೆಯೇನೆಂಬೆನು ॥ ೫೦ ॥

ತಂದು ಕಪ್ಪವ ಸಾಮದಿ । ಒಪ್ಪಿಸಿ ಮುದ । ದಿಂದ ಪೋಗಲಿ ವೇಗದಿ ॥
ಮುಂದೆನ್ನನುಜ್ಞೆಗಳಂತೇ ನೀನಿರದಿರೆ ।
ಬಂಧಿಸಿ ರಣದೊಳು ಸೆರೆಯ ಪಿಡಿವನಂತೆ ॥ ೫೧ ॥

ಎರಡೆಂಟ ಯೋಚಿಸದೆ । ಕಪ್ಪವ ಕೊಂಡು । ಪೊರಡನುಮಾನಿಸದೆ ॥
ಪರಮ ವಿಕ್ರಮಿ ದುಷ್ಟಬುದ್ಧಿ ಕುಂತಳಪುರ ।
ಕರ ಸಾಗಿರ್ಪನು ದೊರೆ ಸುಮ್ಮನೆ ಇರುವನು ॥ ೫೨ ॥

**ರಾಗ ತೋಡಿ ಏಕತಾಳ**

ಏನೆಂದೆ । ದೂತ । ಏನೆಂದೆ ॥ ಪ ॥

ಏನೆಂದೆ ದೂತ ದುರ್ಬುದ್ಧಿ ಎಂಬವನು ।
ಹೀನ ಸಚಿವನಾಗಿ ಕಟ್ಟಾಜ್ಞೆಗಳನು ॥
ಕ್ಷೋಣಿಪನಾದೆನಗಿತ್ತನದೇನು ।
ಕ್ಷೀಣಬಲನಿಗಂಜಿ ಬರುವೆನೆ ನಾನು ॥ ಏನೆಂದೆ ॥ ೫೩ ॥

ನಡೆ ನಡೆ ಸುಮ್ಮನೆ ಕಪ್ಪಗಳನ್ನು ।
ಕೊಡುವವ ನಾನಲ್ಲ ನಾಲಿಗೆಯನ್ನು ॥
ಕಡಿದು ನೂಕಿಸುವೆನು ಸಾರು ಸಾರಿನ್ನು ।
ಬಡಿದಿಕ್ಕಿ ಮೆರೆವೆನು ಬರಲವನನ್ನು ॥ ೫೪ ॥

ಕುಂತಳೇಶನ ಅರಮನೆಯೊಳು ತಿಂದು ।
ಬಂತೀಗ ಮದಗಳು ಲುಚ್ಚನಿಗಿಂದು ॥
ಪಂಥ ಪೌರುಷಕಾಗಿ ಬೆದರುವನೆಂದು ।
ಇಂಥ ಮಾತುಗಳನ್ನು ಪೇಳ್ದನೆಯಿಂದು ॥ ೫೫ ॥

ಕಲಿಗಂಜದಿಹ ಶೂರಸೇನನು ನಾನು ।
ಬಲ ಸಹಿತೀಗವ ಬರಲಿ ಕಾಂಬುವೆನು ॥
ಇಳೆಯ ಪಾಲಕ ನಾನು ಸಚಿವನಾಗಿಹೆನು ।
ಛಲವಿಟ್ಟು ಕಾದದಿರ್ದರೆ ಬಾಳ್ವೆಯೇನು ॥ ೫೭ ॥

**ವಾರ್ಧಕ**

ಘೋರನೀ ಕ್ಷಣ ಪೋಗಿ ಪೇಳು ನಿಮ್ಮೊಡೆಯಂಗೆ ।
ಶೂರನಾದಡೆಯಿವನು ಬರಲಿ ಸಂಗರಕೀಗ ।
ತೋರುವೆನು ಕೈಚಳಕವೆನುತ ಕಳುಹಲ್ ಬೇಗ ಸಾರಿ ಸಚಿವನೊಳೆಂದನು ॥
ಧೀರ ಲಾಲಿಸು ನಿನ್ನ ನೇಮವಂ ಕೇಳ್ದವನು ।
ಭೂರಿ ಕೋಪಿಸುತೆಂದ ಸಮರಕ್ಕೆತಹುದೆಂದು ।
ಕ್ರೂರತನಗಳನೆಂತು ವರ್ಣಿಪೆನು ಚರಣದಲಿ ತೋರಿದಂದವ ಮಾಳ್ಪುದು ॥ ೫೮ ॥

**ರಾಗ ಮಾರವಿ ಏಕತಾಳ**

ಚರನಿಂತೆಂದುದ ಕೇಳುತ ಸಚಿವನು । ಗರಗರನಾಲಿಗಳ ॥
ತಿರುಹುತ ಧನು ಝೇಂಕರಿಸುತ ಸೇನೆಯ । ತರುಬುತಲಾಕ್ಷಣದಿ ॥ ೫೮ ॥

ಧಾರಿಣಿ ಕಂಪಿಪ ತೆರದಲಿ ನಡೆದನು । ಶೂರಸೇನನ ಪುರಕೆ ॥
ದ್ವಾರದಿ ನಿಂದಿಹ ಚರರ ನುಗ್ಗೊತ್ತಲು । ಭೂರಿ ಕೋಪದೊಳವರು ॥ ೫೯ ॥

ಆರೆಲೊ ಬಂದವ ನಿಂದಿರು ನಿಂದಿರು । ದ್ವಾರವ ಬಿಡೆವೀಗ ॥
ಸಾರೆಂದುಸಿರುತ ತಡೆದಿರೆ ಸಚಿವನು । ಚಾರರ ಬಂಧಿಸುತ ॥ ೬೦ ॥

**ರಾಗ ಕೇದಾರಗೌಳ ಅಷ್ಟತಾಳ**

ಪೇಳಿ ನಿಮ್ಮಪ್ಪನ ಕರೆತನ್ನಿ ರಣಕೀಗ । ಖೂಳನ ನೋಳ್ಪೆ ನಾನು ॥
ಕಾಲ ನಂದದಿ ದುರ್ಮತಿ ಬಂದೆ ನಿಮ್ಮ ಭೂ । ಪಾಲನ ತರಿವುದಕೆ ॥ ೬೧ ॥

ಎಂದುಸಿರುತ ಕಳುಹಲ್ಕೆ ಚಾರರು ನಡೆ । ತಂದೆರಗುತ ನೃಪಗೆ ॥
ಬಂದಿದೆ ದುರ್ಮತಿ ಸೈನ್ಯವು ದ್ವಾರದಿ । ಸಿಂಧುಘೋಷಗಳಂದದಿ ॥ ೬೨ ॥

ಲತ್ತೆಯನಿತ್ತೆಮ್ಮ ಕರಗಳ ಬಂಧಿಸಿ । ಕುತ್ತಿಗೆಮೇಲ್ ತಿವಿದು ॥
ಪೃಥ್ವಿಪ ನಿನ್ನನು ಕರೆತರೆ ಕಳುಹಲು । ವಿಸ್ತರಿಪರೆ ಬಂದೆವು ॥ ೬೩ ॥

**ರಾಗ ಕೇದಾರಗೌಳ ಝಂಪೆತಾಳ**

ಶೂರಸೇನನು ಕೇಳುತ । ಪಲ್ಗಡಿದು । ಮಾರರಿಪುವೆನೆ ಗಜರುತ ॥
ಕ್ರೂರ ಪಾಪಿಯು ಬಂದನೆ । ಯಮಪುರಕೆ । ಸಾರಿಸುವೆ ನಾ ಬೇಗನೆ ॥ ೬೪ ॥

ನೆರಹು ಸೇನೆಗಳೆನ್ನುತ । ಮಂತ್ರಿವರ । ಗೊರೆದು ಧನು ಶರ ಪಿಡಿಯುತ ॥
ಪೊರಡೆ ಬೆಂಗಡೆ ಸಚಿವನು । ಭೂರಿ ಬಲ । ವೆರಸಿ ಬರೆ ನರಪಾಲನು ॥ ೬೫ ॥

ದ್ವಾರದೊಳು ಮುತ್ತಿರ್ಪರ । ಕಂಡು ಖತಿ । ಯೇರಿ ಗರ್ಜಿಸೆ ಭೂವರ ॥
ಧೀರ ಬಾ ಬಾರೆನ್ನಲು । ದುರ್ಮತಿಯು । ಮಾರಾಂತು ಮುಂದೆ ನಿಲಲು ॥ ೬೬ ॥

೨

**ರಾಗ ಭೈರವಿ ಅಷ್ಟತಾಳ**
ಬಂದಾ ದುರ್ಮತಿಯ ಕಂಡು । ಸೌರಾಷ್ಟ್ರೇಶ । ನೆಂದನು ಕೋಪಗೊಂಡು
ಇಂದೆನ್ನ ಶರದೊಳು ತನುವನೀಗಲು ಇಂಥ ।
ಮಂದಬುದ್ಧಿಯು ಬಂದಿದೆ ॥ ೬೭ ॥

ಶೂರಸೇನನೆ ಕೇಳೆಲೋ । ಕಪ್ಪವನಿತ್ತು । ಭೋರನೆ ನೀ ತೆರಳೆಲೋ ॥
ವೀರನಾದಡೆ ಚಾಪವಿಡಿದು ಸಂಧಾನಿಸು ।
ಕ್ರೂರ ಕೋಪಗಳ್ಯಾತಕೋ ॥ ೬೮ ॥

ಎನೆ ಕೇಳಿ ನೃಪವರನು । ದುರ್ಮತಿ ಕೇಳು । ಜನಪತಿಯಾಗಿಹೆನು ॥
ಘನವೆ ಮಂತ್ರಿಗೆ ಸೋತು ಕಪ್ಪವನೀವುದೆಂ ।
ದೆನುತ ಶರವನೆಚ್ಚನು ॥ ೬೯ ॥

ಬರಿಯಹಂಕಾರಗಳು । ಎನ್ನೊಳು ತೋರ್ಪೆ । ಧರಣಿಪ ನೋಡೀಗಳು ॥
ಶರವೆಲ್ಲಿ ಪೋದುದೆಂದೆನುತಲಾಕ್ಷಣದೊಳು ।
ಮುರಿದು ನಿಂದಿರೆ ಸಚಿವ ॥ ೭೦ ॥

**ರಾಗ ಮಾರವಿ ಮಟ್ಟೆತಾಳ**
ಮರುಳೆ ಸಚಿವ ಹುಲ್ಲು ಶರವ ತರಿದೆನೆನುತಲಿ ।
ಗರುವೆ ಗೊಂಬೆ ಭಾಪು ತಾಳು ತಾಳೆನುತ್ತಲಿ ॥ ೭೧ ॥

ಮಸೆದ ಸಾಣೆಯಲಗಿದನ್ನು ಕಡಿಕಡಿಯೆನುತ ।
ವಸುಧೆಪಾಲ ಶರದ ಮಳೆಯ ಸುರಿದ ಗಜರುತ ॥ ೭೨ ॥

ದಿವ್ಯ ವಿಶಿಖದಿಂದ ಚಾಪಶರವ ಕಡಿದನು ।
ಹವ್ಯವಹನನೆನಲು ಸಚಿವ ಜ್ವಲಿಸಿ ನಿಂದನು ॥ ೭೩ ॥

ಕ್ರುದ್ಧನಾಗಿ ನೃಪತಿ ಖಡ್ಗ ತೂಗುತೆರಗಲು ।
ಬದ್ಧವೈರದಿಂದ ಸಚಿವ ಮುರಿದು ಕೆಡಹಲು ॥ ೭೪ ॥

ಪೂತು ಮಝುರೆಯೆನುತ ಗದೆಯೊಳೆರಗಲಾಕ್ಷಣ ।
ಖಾತಿಯಿಂದ ಸಚಿವ ಸೆಳೆದನತಿ ವಿಚಕ್ಷಣ ॥ ೭೫ ॥

ಮುಷ್ಟಿಯನ್ನು ಬಲಿದು ಭೂಪನೆತ್ತಿ ಹೊಯ್ಯಲು ।
ದುಷ್ಟಬುದ್ಧಿಯವನ ಗಳವ ಪಿಡಿದು ಕೆಡಹಲು ॥ ೭೬ ॥

**ಭಾಮಿನಿ**

ಶೂರಸೇನನ ಕಬರಿಯನು ಪಿಡಿ ।
ದಾರುಭಟಿಸುತ ಸಚಿವ ರೌದ್ರದಿ ।
ಕೂರಸಿಯ ಗಳಕಿತ್ತು ಪೇಳಿದನಾಗ ಮೂದಲಿಸಿ ॥
ಕ್ರೂರ ಪಾಪಿಯೆ ನಿನ್ನನೀಕ್ಷಣ ।
ಸಾರಿಸುವೆ ಯಮಪುರಕೆ ಕಾಯುವ ।
ಧೀರರಾರೈತಹರು ಕರೆಯೆಂದೆನುತ ಹೂಂಕರಿಸೆ ॥ ೭೭ ॥

**ರಾಗ ಮಧುಮಾಧವಿ ಏಕತಾಳ**

ಕಾಲನಂದದೊಳಿರ್ಪ ಸಚಿವನ ನೋಡಿ ।
ಭೂಲಲಾಮನು ದೈನ್ಯದಿಂದ ಗೋಳಾಡಿ ॥ ೭೮ ॥

ತಪ್ಪು ಮಾಡಿದೆನೆನ್ನ ಸಲಹೊ ನೀ ದಯದಿ ।
ಕಪ್ಪ ನಿಷ್ಕಾಯುತ ಕೊಡುವೆ ವಾರ್ಷಿಕದಿ ॥ ೭೯ ॥

ಕ್ಷಮಿಸಬೇಕೆನೆ ಕೇಳಿ ಹರುಷಗೊಳ್ಳುತ್ತಾ ।
ಕುಮತಿಯೆಂದನು ಕಪ್ಪ ತರಿಸೀಗೆಂದೆನುತ ॥ ೮೦ ॥

**ರಾಗ ಕೇದಾರಗೌಳ ಝಂಪೆತಾಳ**

ಧರಣಿಪತಿಯಾ ಕ್ಷಣದೊಳು । ಸಚಿವನನು । ಕರಕೊಂಡು ಪುರಕಾಗಳು ॥
ಪರಿಪರಿಯ ಮನ್ನಿಸುತಲಿ । ವಸನವಾ । ಭರಣ ರತ್ನವ ಮುದದಲಿ ॥ ೮೧ ॥

ತಂದು ಕಾಣಿಕೆಯೀಯುತ । ಮಂತ್ರಿಯೊಡ । ನೆಂದನಾ ಕ್ಷಣದಿ ನಗುತ ॥
ಹಿಂದೆ ಕೇರಳಧೀಶನು । ಮೇಧಾವಿ । ಬಂದೆನ್ನ ಜಯಿಸಿರ್ಪನು ॥ ೮೨ ॥

ಭೂರಿ ಬಲವಿಹುದವನೊಳು । ಸಂಗರದಿ । ಶೂರಗಿದಿರಿಲ್ಲ ಕೇಳು ।
ವೀರ ನಿನ್ನಯ ಸೈನ್ಯವ । ಕಳುಹಿಸಲು । ಸಾರಿ ಕೊಡುವೆನು ಸಮರವ ॥ ೮೩ ॥

ಧುರದೊಳಾ ದುರುಳನನ್ನು । ತರಿದವನ । ಪುರವನ್ನು ಕೈಗೊಂಬೆನು ॥
ಎರಡು ರಾಜ್ಯದ ಕಷ್ಟವ । ನಿನಗೀವೆ । ಕರುಣಿಸೈ ತವ ಸೈನ್ಯವ ॥ ೮೪ ॥

ನುಡಿಯ ಕೇಳುತ ಸಚಿವನು । ಮುಂದೆನಗೆ । ಕೊಡು ಕೋಟಿ ದ್ರವ್ಯವನ್ನು ॥
ಒಡನೆ ಪೋಗೆಂದೆನುತಲಿ । ಬೀಳ್ಕೊಟ್ಟ । ಸಡಗರದಿ ಬಲಸಹಿತಲಿ ॥ ೮೫ ॥

**ರಾಗ ಘಂಟಾರವ ಮಟ್ಟೆತಾಳ**

ಭರದಿ ಸಚಿವನ । ಸೈನ್ಯ ಕೂಡುತ ।
ಧರಣಿಪಾಲ ತಾ । ನೇಮಗೊಳ್ಳುತ ॥ ೮೬ ॥

ಪೊರಡೆ ಭೂಪನು । ಬೇಗ ಸಚಿವನು ।
ತೆರಳಿ ಕುಂತಳ । ಪುರವ ಕಂಡನು ॥ ೮೭ ॥

ಮೂರು ಪಯಣದಿ । ಸಾರಿ ತ್ವರ್ಯದಿ ।
ಕೇರಳಾಪುರ । ಕೈದೆ ಭೂವರ ॥ ೮೮ ॥

ಬಂದು ಕೋಟೆಯ । ಸುತ್ತ ಸೇನೆಯ ।
ಚಂದದಿಂದಲಿ । ನಿಲಿಸಿ ತ್ವರೆಯಲಿ ॥ ೮೯ ॥

**ಭಾಮಿನಿ**

ಚರನನೋರ್ವನ ಕರೆದು ಕೇರಳ ।
ದರಸನಲ್ಲಿಗೆ ತೆರಳು ಬೇಗನೆ ।
ಧುರದಿ ಪಿಂದಕೆ ಜಯಿಸಿ ಎನ್ನೊಳು ಕೊಂಡ ಕಪ್ಪವನು ॥
ಹರುಷದಿಂದಲಿ ಕೊಂಡು ಎನ್ನಡಿ ।
ಗೆರಗುತೀಕ್ಷಣವಿತ್ತು ಸಾರಲಿ ।
ಭರದಿ ಕಾಯುವೆನವನ ಹೀಗೆಂದೆನುತ ಕಳುಹಿದನು ॥ ೯೦ ॥

**ವಾರ್ಧಕ**

ನರನೆ ಕೇಳಿತ್ತ ಮೇಧಾವಿ ನೃಪನೈತಂದು ।
ಪರಮ ಸಿಂಹಾಸನದಿ ಮಂಡಿಸುತ ಜೋಯಿಸರ ।
ಕರೆಸಿ ಸತ್ಕರಿಸುತ್ತ ಕುಳ್ಳಿರಿಸಿ ವಿಭವದಿಂ ಚರಣಕಾನತನಾಗುತ ॥
ತರಣಿಯುದಯದೊಳೆನ್ನ ಸತಿ ಪದ್ಮರೇಖೆಯೊಳ್ ।
ತರಳ ಜನಿಸಿಹನಿಂದು ಜನನಸಮಯಗಳೆಂತೊ ।
ಕರುಣದಿಂದಲೆ ಗುಣಿಸಿ ನೋಡಿ ಪೇಳುವುದೆನಲ್ ಬೆರಳನೆಣಿಸುತಲೆಂದನು ॥ ೯೧ ॥

**ರಾಗ ಬೇಗಡೆ ಏಕತಾಳ**

ಕೇರಳಾಧಿಪ ಲಾಲಿಸೈ ನುಡಿಯ । ನಿನ್ನಾತ್ಮಭವ ಗುಣ ।
ಧೀರನಾಯುಷ್ಮಂತ ನೋಡಯ್ಯ ॥
ಭೂರಿ ಭಾಗ್ಯನುದಾರಿ ವಿಕ್ರಮಿ । ವಾರಿಜಾಕ್ಷನ ಪಾದ ಕಿಂಕರ ।
ತೋರುತಿದೆಯನುಮಾನ ಪೇಳ್ದರೆ । ಭೂರಿ ಚಿಂತೆಗಳುಂಟದೇತಕೆ ॥ ೯೨ ॥

ದಿವದಿ ಮೂಲದೊಳಾದಿ ಚರಣದಲಿ | ಸಂಭೂತನಾಗಿಹ |
ಕುವರ ಮಾತಾಪಿತರು ಬೇಗದಲಿ ||
ಜವನ ಪುರವನು ಕಾಂಬರೆಂಬುದು | ವಿವರಿಸಲು ಸಂಕಟಗಳಾಪುದು |
ಭುವನಪತಿ ತರಿಸೀಗ ಶಿಶುವನು | ತವಕದಿಂದಲೆ ನೋಳ್ಪ ಚಿಹ್ನೆಯ || ೯೩ ||

ನುಡಿಯ ಕೇಳುತಲಾಗ ಬಾಲನನು | ತಂದೀಯೆ ಪರಿಕಿಸಿ |
ಪೊಡವಿಪಾಲಗೆ ಪೇಳ್ದ ಭೂಸುರನು ||
ಎಡದ ಪಾದದೊಳಾರು ಬೆರಳಿವೆ | ಬಿಡದು ನಿಮಗೆ ಅರಿಷ್ಟವೆಂಬುದು |
ದೃಢದಿ ನಂಬಿಕೊ ನಾಥನಿಲ್ಲದೆ | ಹುಡುಗನಿಂಗತಿ ಕಷ್ಟವಪ್ಪುದು || ೯೪ ||

**ಭಾಮಿನಿ**
ಧರಣಿದೇವನ ನುಡಿಗೆ ಧರಣಿಪ |
ಸೊರಗಿ ಚಿಂತೆಯ ತಾಳಿ ಮನದೊಳು |
ಹರಿಯೆ ಗತಿಯೆಂದೆನುತ ಧನಧಾನ್ಯಾದಿ ದಾನವನು ||
ಹರುಷದಿಂ ಭೂಸುರರಿಗೀಯುತ |
ಲಿರಲು ಸೌರಾಷ್ಟ್ರೇಶ ಕಳುಹಿದ |
ಚರನು ನಡೆತಂದಾಗ ಪೇಳಿದ ನೃಪಗೆ ವಿಭವದಲಿ || ೯೫ ||

**ರಾಗ ಮುಖಾರಿ ಆದಿತಾಳ**
ಕೇರಳಾಧಿಪ ಲಾಲಿಸಯ್ಯ | ಸೌರಾಷ್ಟ್ರೇಶ |
ಶೂರಸೇನನು ಪೇಳ್ದ ಬಗೆಯ || ಪ ||

ಭೂರಿ ಮಾರ್ಬಲ ಕೂಡೀಗವನು | ಬಂದುಪವನದಿ |
ಡೇರೆಯನಿಕ್ಕಿ ಕಾಯ್ದಿರುವನು ||
ಮೀರಿಯವನನೀ ಬಂಧಿಸಿ ಪಿಂದಕೆ |
ಭಾರಿಯ ಕಪ್ಪವ ಸೆಳೆದುಕಿಮ್ಮಡಿ |
ಭೋರನೆ ಕೊಟ್ಟೀಗೆರಗಲು ಬದುಕುವೆ |
ಧಾರಿಣಿಪಾಲನ ನೇಮಗಳಿದು ಕೇಳ್ || ಕೇರಳಾಧಿಪ || ೯೬ ||

ಎಂದು ಈ ಪರಿ ಪೇಳಿ ನಿನ್ನ | ಕರೆತರೆ ಬೇಗ |
ದಿಂದಲಟ್ಟಿಹ ಭೂಪತಿಯೆನ್ನ ||
ಇಂದೀಗವನಿಗೆ ಕಪ್ಪವನೀಯದೆ |
ಮಂದಮತಿಯು ನೀ ರಣಕೈತಂದರೆ |
ಮುಂದಕೆ ಜೀವದೊಳಾಸೆಯನಿಡದಿರು |
ಬಂದಿದೆ ಐದಕ್ಷೌಹಿಣಿ ಸೇನೆಯು || ಕೇರಳಾಧಿಪ || ೯೭ ||

ತಡಿಬಿಡಿ ಮಾಡದೀಗ ನೀನು । ಬರದಿರೆ ನೋಡು ।
ಹುಡುಗ ಸಿಪಾಯಿ ನಾ ಬಿಡೆನಿನ್ನು ॥
ಸಡಗರ ಸುಡು ಸುಡು ಕರವಿಡಿದೆಳೆಯುತ ।
ಪೊಡವಿಪನಲ್ಲಿಗೆ ಬಿಡದೊಪ್ಪಿಸುವೆನು ।
ಕಡೆಗಾಲವು ನಿನಗೊದಗಿದೆ ಸಹಜವು ।
ನಡೆ ನಡೆಯೆನುತಲೆ ನಿಂದಿರೆ ಕಾಣುತ ॥ ಕೇರಳಾಧಿಪ ॥ ೯೮ ॥

**ರಾಗ ಘಂಟಾರವ ಏಕತಾಳ**

ದೂತನೆಂದುದಕಾ ಕ್ಷಣ ನೃಪವರ ।
ಖಾತಿಯಲಿ ನೂಕಿಸುತಲವನನು ।
ಸೂತನನು ಕರೆದೆಂದನು ॥ ೯೯ ॥

ಎಲವೊ ಸಾರಥಿ ರಥಕೀಗ ವೇಗದಿ ।
ಚಲಿಸುತಿಹ ಹಯಗಳನು ಬಂಧಿಸಿ ।
ನಿಲಿಸು ಬರುವೆನು ಸಮರಕೆ ॥ ೧೦೦ ॥

ಮಂದಿ ಮಾರ್ಬಲವೆರಸಿ ಸೇನಾನಿಯು ।
ಚಂದದಿಂ ಬಹುದೆಂದು ಸಚಿವನಿ ।
ಗೆಂದ ಭೂಪತಿಯಾಕ್ಷಣ ॥ ೧೦೧ ॥

ತಂಡ ತಂಡದಿ ಬರುವ ಸೇನೆಯ ಕೂಡಿ ।
ಕೊಂಡು ರಥಗಳನೇರಿಯಹಿತರ ।
ಕಂಡು ಭೂಮಿಪ ಕ್ರೋಧದಿ ॥ ೧೦೨ ॥

ಬಾರೆಲೋ ಶೂರಸೇನನೆನ್ನಿದಿರೊಳು ।
ಬಾರಿ ಸಮರದಿ ಗೆಲಿದೆ ಪಿಂದಕೆ ।
ತೋರು ನಿನ್ನಯ ಸಹಸವ ॥ ೧೦೩ ॥

ಎಂದ ಮಾತಿಗೆ ಸೌರಾಷ್ಟ್ರ ಭೂಮಿಪ ।
ನಂಧಕಾರಿಯ ತೆರದಿ ಗರ್ಜಿಸು ।
ತೆಂದನಾ ಮೇಧಾವಿಗೆ ॥ ೧೦೪ ॥

**ರಾಗ ಮಾರವಿ ಏಕತಾಳ**

ಎಲೆಯೆಲೆ ಕೇರಳಪಾಲಕನೆನ್ನೊಳು । ಛಲದೊಳು ನೀ ಕಾದಿ ॥
ಸುಲಿದಿಹೆ ಕಪ್ಪವ ನಿನ್ನನು ತರಿದೀ । ಪೊಳಲನೆ ಪಾಲಿಪೆನು ॥ ೧೦೫ ॥

ಯಾರ ಬಲದಿ ನೀ ಬಂದೆಯೊ ಎನ್ನೊಳು । ತೋರುವೆ ವಿಕ್ರಮವ ॥
ಕ್ರೂರನೆ ಪಿಂದಕೆ ಸಲಹಿದೆ ನೊಮ್ಮೆಗೆ । ಘೋರನೆ ಕೊಲ್ಲುವೆನು ॥ ೧೦೬ ॥

ಒಮ್ಮೆಗೆ ಕಪ್ಪವನಿತ್ತೆನು ಎಂಬುವ । ಹೆಮ್ಮೆಗಳ್ಯಾಕೀಗ ॥
ತಮ್ಮ ದುಷ್ಕರ್ಮವೆ ತಮಗರಿಯಾಪುದು । ಸಮ್ಮತವಿದು ನೋಡು ॥ ೧೦೭ ॥

**ರಾಗ ಶಂಕರಾಭರಣ ಮಟ್ಟೆತಾಳ**
ಕೇರಳೇಂದ್ರ ಗಜರುತಾಗ । ನೂರು ನೂರರಂತೆ ಶರವ ।
ತೂರಿ ಶೂರಸೇನ ರಥವ । ಮುಚ್ಚಿ ಮುಸುಕಿದ ॥ ೧೦೮ ॥

ಪುಡಿಯ ಗೈದು ಬರುವ ಶರವ । ಕೆಡೆದು ಸಿಂಹನಾದದಿಂದ ।
ಧಡಿಗ ಶೂರಸೇನನಿರಲು । ಕಾಣುತಾ ಕ್ಷಣ ॥ ೧೦೯ ॥

ಭಾರಿ ದಂಡ ಪರಶು ಮುಸಲ । ಮುದ್ಗರಂಗಳಿಂದ ಪೊಯ್ಯೆ ।
ಶೂರಸೇನ ಕುಲಿಶ ಖಡ್ಗ । ದಿಂದ ಮುರಿದನು ॥ ೧೧೦ ॥

ಕೆರಳಿ ಮೇಧಾವಿನೃಪನು । ಉರಗ ತಿಮಿರ ಶರವ ಬಿಡಲು ।
ಗರುಡ ಸೂರ್ಯ ಶರದೊಳದರ । ಶಮಿಸಿ ನಿಂದಿರೆ ॥ ೧೧೧ ॥

**ರಾಗ ಭೈರವಿ ಏಕತಾಳ**
ತೋರ್ಯೆ ಸಹಸವನೆನುತ । ಆ । ಕೇರಳಪತಿ ಗರ್ಜಿಸುತ ॥
ಧಾರಿಣಿ ಕಂಪಿಪ ತೆರದಿ । ಶರ । ತೂರುತಲಿರಲಾ ಕ್ಷಣದಿ ॥ ೧೧೨ ॥

ಧನುವನೆ ಮುಕ್ಕಡಿ ಗೈದು । ನೃಪ । ಘನತರದಸ್ತ್ರವ ತೆಗೆದು ॥
ಫಣೆಗದ ನೋಡುತ ಬಿಡಲು । ಶಿಖಿ । ಯೆನೆ ಜ್ವಲಿಸುತ ಶಿರ ಪೊಗಲು ॥ ೧೧೩ ॥

**ಭಾಮಿನಿ**
ಶೂರಸೇನನ ಶರವು ಕೊರೆಯುತ ।
ಕೇರಳೇಶನ ಫಣೆಯ ಭೇದಿಸೆ ।
ಸೂರ್ಯಮಂಡಲದಂತೆ ಭೂಪನ ಶಿರವು ನೆಲಕುರುಳೆ ॥
ಸಾರಥಿಯು ಕಂಡಾಗ ನೃಪನ ಶ ।
ರೀರವನು ರಥದೊಳಗೆ ಮಲಗಿಸಿ ।
ಭೂರಿವಿಕ್ರಮವನ್ನು ನೆನೆನೆನೆದಾಗ ದುಃಖಿಸುತ ॥ ೧೧೪ ॥

**ರಾಗ ನೀಲಾಂಬರಿ ಮಟ್ಟೆತಾಳ**
ಧರಣಿಪಾಲ ಧರ್ಮಶೀಲ । ತೊರೆದು ನಿನ್ನನು ॥
ಪರರ ಕೈಯೊಳೆಂತು ಮುಂದೆ । ಬಾಳಬೇಕಿನ್ನು । ಹೇಗೆ । ತಾಳಬೇಕಿನ್ನು ॥ ೧೧೫ ॥

ತರುಣಿ ಪದ್ಮರೇಖೆ ಚಿಕ್ಕ | ತರಳ ನಿನಗಿರೆ ||
ತೊರೆದು ಎಂತು ಪೋಪೆ ಕರುಣ | ವಿಲ್ಲವೈ ಧೊರೆ | ನಿ | ಷ್ಕರುಣಿಯೈ ಖರೆ || ೧೧೬ ||

ಎನುತ ಕಂಬನಿಯ ಬಿಡುತ | ಕೂಗಿ ಮರುಗುತ ||
ವನಿತೆ ಪದ್ಮರೇಖೆಯೆಡೆಗೆ | ಬಂದ ಹಲುಬುತ | ರಥ | ದಿಂದ ಧುಮುಕುತ || ೧೧೭ ||

**ಭಾಮಿನಿ**

ಸೂತನೋರ್ವನೆ ರಥವ ತಿರುಗಿಸಿ |
ಭೀತಿಯೊಳಗವನಿ ಳಿದು ಬರುತಿರೆ |
ಭೂತಳೇಶನ ರಮಣಿ ಮರುಗುತಲಾಗ ಕೇಳಿದಳು ||
ತಾತ ಪೇಳ್ ಮತ್ಕಾಂತನೆಲ್ಲಿಹ |
ರೀತಿ ಬೇರಾಗಿಹುದು ಪೇಳೆನೆ |
ಮಾತೆ ಕೇಳರಿ ಶೂರಸೇನನು ಸಮರ ದೊಳಗಿಂದು || ೧೧೮ ||

**ಕಂದ**

ದುರುಳನು ಎಮ್ಮಯ ನೃಪತಿಯ |
ಧುರದೊಳು ಮಡುಹಿದನೆನ್ನುತ ಸಾರಥಿ ಭರದಿಂ ||
ತರುಣಿಯ ಮುಂದಕೆ ಶವವ |
ನ್ನಿರಿಸಲ್ ಕಾಣುತೆ ಪತಿಯನ್ನಪ್ಪುತಲಾಗಳ್ || ೧೧೯ ||

**ರಾಗ ನೀಲಾಂಬರಿ ಆದಿತಾಳ**

ಹಾ ಹಾ ಪ್ರಾಣಕಾಂತ ನಿನ್ನ | ಮೋಹ ಬಿಟ್ಟು ಜಗದಿ ||
ದೇಹ ರಕ್ಷಿಸುವುದೆಂತು | ತ್ರಾಹಿಯೆಂಬೆ ಬಾರೊ || ೧೨೦ ||

ಮಕ್ಕಳಿಲ್ಲವೆಂದು ನೀನು | ದುಃಖಿಸುತ್ತಲಿರ್ದೆ ||
ರಕ್ಕಸಾರಿ ಕೊಟ್ಟ ಸುತನ | ಅಕ್ಕರಿಂದ ನೋಡೊ || ೧೨೧ ||

ಹಿತವೇ ವೈರಿನೃಪರೆದುರೊಳ್ | ಪತಿಯೆ ನಾನೆಂತಿರುವೆ ||
ಸುತನ ಸಲಹುವರೆ ಮುಂದೆ | ವ್ಯಥೆಯಲ್ಲವೆ ರಮಣ || ೧೨೨ ||

**ರಾಗ ನೀಲಾಂಬರಿ ರೂಪಕತಾಳ**

ಘೋರ ಪಾತಕಿ ಶೋಕಿಸ | ಲ್ಯಾರತಿ ಧೈರ್ಯವ ಪೇಳ್ವರು |
ವಾರಿಜನಾಭ ಮುಕುಂದನೆ | ಕ್ಷೀರಾಂಬುಧಿವಾಸ || ೧೨೩ ||

ನಂದಾತ್ಮಜ ಮುರವೈರಿಯೆ | ಕಂದನ ರಕ್ಷಿಸು ಎನುತಲೆ |
ಚಂದಿರಮುಖಿಯಾ ಶವವನು | ತಂದುರಿ ಮಾಡುತಲಿ || ೧೨೪ ||

ಕರುಣಿಸು ಏಳೇಳ್ ಜನ್ಮದಿ । ಎರೆಯ ಮೇಧಾವಿಯ ಶ್ರೀಹರಿ ।
ತರಳನ ರಕ್ಷಿಸು ರಕ್ಷಿಸು । ಎನುತಂಬುಜರೇಖೆ ॥ ೧೧೫ ॥

ಚಿತೆಯನ್ನೊಟ್ಟುತ ವೇಗದಿ । ಪತಿಯನು ಮಲಗಿಸಿ ದೃಢದಲಿ ।
ರತಿಪತಿಪಿತ ಗತಿಯೆನ್ನುತ । ಸತಿಯತಿ ವ್ಯಥಿಸುತಲಿ ॥ ೧೧೬ ॥

ಉರಿಯುವ ಯಜ್ಞೇಶ್ವರನಿಗೆ । ಭರದಿ ಪ್ರದಕ್ಷಿಣೆ ಗೈಯುತ ।
ತರುಣಿ ಪತಿವ್ರತೆ ಪೊಗುತಲೆ । ಎರೆಯನ ಕೂಡಿದಳು ॥ ೧೧೭ ॥

**ರಾಗ ಸಾಂಗತ್ಯ ರೂಪಕತಾಳ**

ಈ ರೀತಿ ಪದ್ಮರೇಖೆಯು ಚಿತೆಯೊಳು ಪೊಗೆ । ಚೀರಿ ಚೀರಳುತಿರೆ ಬಾಲ ॥
ಸಾರಿದಳೀಕೆಯ ದೂತಿಯೋರ್ವಳು ವೃದ್ಧ । ನಾರಿ ಬಂದಪ್ಪುತ ಶಿಶುವ ॥ ೧೧೮ ॥

ದೊರೆಕುಮಾರಕ ನೀನು ಪುಟ್ಟಿ ತಾಯ್ತಂದೆಯ । ತೊರೆದುಕೊಂಡೆಯೊ ವಿಧಿಯಕಟ ॥
ತರಳ ನೀನಿರ್ಪುದನರಿತರೆ ಶತ್ರುಗ । ಳಿರಿಸರು ನಿನ್ನ ಪ್ರಾಣವನು ॥ ೧೧೯ ॥

ದೊರೆರಾಯನರಸಿಗೆ ಪರಮಪ್ರಿಯಳು ನಾನು । ಮರೆಯೆ ನಿನ್ನನು ಧಾತ್ರಿ ಹೊರದು ॥
ತರಳ ನಾನದಕಾಗಿ ನಿನ್ನ ಶೋಕದಿ ಪ್ರಾಣ । ಪರಿತ್ಯಜಿಪೆನು ಮುಂದೀಗೆನುತ ॥ ೧೨೦ ॥

ತೊರೆದು ಈ ಪುರವನು ಪರ ರಾಷ್ಟ್ರದೊಳು ಪೋಗಿ । ಪರಿಪಾಲಿಪೆನು ನಿನ್ನನೀಗ ॥
ಇರಬಾರದರೆ ಕ್ಷಣವೆನುತಲಾ ಧಾತ್ರಿಯು । ತರಳನ ಕೊಂಡು ಸಾರಿದಳು ॥ ೧೨೧ ॥



**ರಾಗ ಕೇದಾರಗೌಳ ಅಷ್ಟತಾಳ**

ಇತ್ತಲಾ ಸೌರಾಷ್ಟ್ರಪತಿ ಶೂರಸೇನನು । ಮುತ್ತಿಕೊಂಡಾ ಪುರವ ॥
ಮತ್ತೆ ಸಚಿವ ಸೇನಾನಾಯಕ ಮುಖ್ಯರ । ಮುತ್ತಿ ಸೆರೆಯ ಪಿಡಿದು ॥ ೧೨೨ ॥

ಬೆದರಿರ್ಪ ಪುರಜನಗಳಿಗೆ ಧೈರ್ಯವ ಪೇಳಿ । ಮುದದಿಂದಲರಮನೆಗೆ ॥
ಮದಮುಖ ಪೊಕ್ಕು ಸಿಂಹಾಸನವೇರಿದ । ನಧಿಕ ಸಂಪ್ರೀತಿಯೊಳು ॥ ೧೨೩ ॥

ಅಟ್ಟಹಾಸದಿ ಮಣಿಕನಕ ಭಂಡಾರವ । ಕುಟ್ಟಿ ಬೇಕಾದುದನು ॥
ದುಷ್ಟಬುದ್ಧಿಗೆ ಭಂಡಿ ಭಂಡಿಯೊಳ್ ಸಾಗಿಸಿ । ದಿಟ್ಟ ತಾನಿರಲಿತ್ತಲು ॥ ೧೨೪ ॥

**ಭಾಮಿನಿ**

ತರಳನನು ತೆಗೆದಪ್ಪಿ ಧಾತ್ರಿಯು ।
ಮರುಗಿ ಗಿರಿಗಹ್ವರವ ತಿರುಗುತ ।

ತೆರಳಿ ಬಂದಳು ಕುಂತಳಾಪುರಕಾಗಿ ದುಗುಡದಲಿ ||
ತಿರಿದು ಮನೆ ಮನೆ ಪಾಲು ಬೆಣ್ಣೆಯ |
ಮರುಕದಿಂದಲೆ ಕುಡಿಸಿ ಶಿಶುವನು |
ಪೊರೆಯುತಿರ್ದಳು ಪಾಳು ಗೃಹವಿರಲದರೊಳೇನೆಂಬೆ || ೧೩೫ ||

**ರಾಗ ಕಾಂಭೋಜಿ ಅಷ್ಟತಾಳ**

ತೊಟ್ಟಿಲಿಲ್ಲವೊ ನಿನ್ನನಿಟ್ಟು ತೂಗುವುದಕ್ಕೆ | ಮುದ್ದು ಕಂದ ||
ಮತ್ತೆ | ಪುಟ್ಟ ಕೈಕೊರಳಿಂಗಾಭರಣಗಳಿಲ್ಲವೊ | ಮುದ್ದು ಕಂದ || ೧೩೬ ||

ವಸತಿಗೆ ಯೋಗ್ಯದ ಮನೆಯಿಲ್ಲ ನಿನಗೀಗ | ಮುದ್ದು ಕಂದ ||
ಚಲೋ | ಬಿಸಿನೀರ ಕಾಸಲು ಭಾಂಡಗಳಿಲ್ಲವೊ | ಮುದ್ದು ಕಂದ || ೧೩೭ ||

ಕುಡಿವರೆ ಹಾಲಿಲ್ಲ ಮೊಸರು ಬೆಣ್ಣೆಗಳಿಲ್ಲ | ಮುದ್ದು ಕಂದ ||
ನೀನು | ಪಡೆದ ಕರ್ಮಗಳೆಂತೊ ಎಣ್ಣೆ ಸೀಗೆಗಳಿಲ್ಲ | ಮುದ್ದು ಕಂದ || ೧೩೮ ||

ಎಳೆ ನಗೆಗಳ ನೋಳ್ಪ ತಂದೆ ತಾಯಿಗಳಿಲ್ಲ | ಮುದ್ದು ಕಂದ ||
ಈಗ | ಕಲಿಯಾದನೇ ಶೂರಸೇನ ದುರಾತ್ಮನು | ಮುದ್ದು ಕಂದ || ೧೩೯ ||

**ರಾಗ ಶಂಕರಾಭರಣ ತ್ರಿವುಡೆತಾಳ**

ಮರುಗಲೇತಕೆನುತ್ತ ಧಾತ್ರಿಯು | ತಿರಿದು ಪಾಲ್ ಮೊಸರೆಲ್ಲವ |
ತರಳನಿಗೆ ತಂದಿಕ್ಕಿ ಸಲಹುತ | ಲಿರ್ದಳಲ್ಲಿ || ೧೪೦ ||

ಮೂರು ವರುಷಗಳಾಗೆ ಬಾಲನು | ಹೆಜ್ಜೆ ಹೆಜ್ಜೆಯನಿಕ್ಕುತ |
ಜೋಲುತಿಹ ಮುಂಗುರುಳು ಕದಪಿನ | ತೊದಲು ನುಡಿಯು || ೧೪೧ ||

ಬಾಲಲೀಲೆಗೆ ತೋಷಪಡುತಲಿ | ಲಾಲಿಪರು ನಿನಗಿಲ್ಲದೆ |
ಬಾಳಿದಪೆಯೆಂತಕಟ ನಿನ್ನಯ | ವಿಧಿಯೆ ಹಾ ಹಾ || ೧೪೨ ||

ದಿನದಿನದಿ ದುಃಖಿಸುತ ಧಾತ್ರಿಯು | ಮನೆಮನೆಯ ತಿರಿದಿಕ್ಕುತ |
ಕನಿಕರದಿ ಸಲಹುತಲಿ ಪಂಚಕ | ವರುಷವಾಗೆ || ೧೪೩ ||

ಮರುಗಿ ದೇಹಗಳೆಲ್ಲ ಕ್ಷಯಿಸುತ | ತರುಣಿ ಘನತರ ರುಜೆಯಲಿ |
ಸೊರಗಿ ಜೀವವ ತೊರೆಯುತಂತಕ | ಪುರಕೆ ತೆರಳೆ || ೧೪೪ ||

**ರಾಗ ದೇವಡಿ ರೂಪಕತಾಳ**

ಸಲಹಿದ ಧಾತ್ರಿಯು ಗತಿಸಲು ಬಾಲನು |
ನಿಳಯ ನಿಳಯ ಬಾಗಿಲಿಂಗೆ ||

ಮೆಲುವೆನೆಂದರೆ ದಧಿಕ್ಷೀರಾನ್ನವಿಲ್ಲದೆ ।
ಅಳುಲುತ್ತ ತೊಳಲುತ್ತ ಬರಲು ॥ ೧೪೫ ॥

ಪರದೇಶಿಯಾಗಿ ಬೀದಿಗಳಲ್ಲಿ ತಿರುಗುವ ।
ತರಳನ ಕರೆದು ಕುಳ್ಳಿರಿಸಿ ॥
ತರುಣಿಯರಾ ಪುರದೊಳಗಿರ್ಪರೆಲ್ಲರು ।
ಪರಮ ಸುಂದರನನು ಕಂಡು ॥ ೧೪೬ ॥

ಯಾರ ನಂದನನೀತನ್ಯಾರೊ ನೃಪಾತ್ಮಜ ।
ಚಾರು ಲಕ್ಷಣ ಶೀಲವಂತ ॥
ಪಾರಮಾರ್ಥದೊಳೆಮ್ಮ ಬಾಲರ ಜೊತೆಯೊಳೀ ।
ಪೋರನ ಸಲಹುವೆವೆಂದು ॥ ೧೪೭ ॥

ಕರೆದು ಮೋಹದಿ ತಮ್ಮ ಭವನಕೆ ಸತಿಯರು ।
ಪರಿಮಳ ಗಂಧವ ತೀಡಿ ॥
ಮೆರೆವ ಕಸ್ತುರಿತಿಲಕವಿಟ್ಟಾ ಬಾಲಕನಿಂಗೆ ।
ಕುರುಳ ಬಾಚುತ ವೀಳ್ಯವಿತ್ತು ॥ ೧೪೮ ॥

ಪರಮ ಷಡ್ರಸದನ್ನದಿಂದ ಭೋಜನ ಗೈಸಿ ।
ತರಳರೊಡನೆ ಮಲಗಿಸುತ ॥
ಪರರಾದರೇನಿಂಥ ಹರಿಯ ಭಕ್ತನನತಿ ।
ಕರುಣದಿ ಸಲಹುತ್ತಲಿರಲು ॥ ೧೪೯ ॥

**ರಾಗ ಮಧುಮಾಧವಿ ತ್ರಿವುಡೆತಾಳ**
ತರಳರೊಡನಾಡುತ್ತ ಕುವರನು ।
ಪುರದ ಬೀದಿಯೊಳಿರಲಿಕೊಂದಿನ ।
ಕರಕೆ ಸಿಕ್ಕಿದುದೊಂದು ವೃತ್ತಾ । ಕಾರ ಶಾಲಗ್ರಾಮವು ॥ ೧೫೦ ॥

ಹರುಷದಿಂದಲಿ ಕೊಂಡು ಬಾಲನು
ಕರಿಯ ವರ್ಣದ ಗೋಲಿಯೆನ್ನುತ ।
ಲಿರಿಸಿದನು ಬಾಯೊಳಗೆ ಸುಲಭದಿ । ಬೇರೆ ಸ್ಥಳ ತನಗಿರದಿರೆ ॥ ೧೫೧ ॥

ತರಳ ಭೋಜನಗೈವ ಸಮಯದಿ ।
ಕರಕೆ ಕೊಂಡರ್ಚಿಸುತಲನುದಿನ ।
ಪರಮ ನೈವೇದ್ಯಗಳ ಗೈಯುತ । ಉಣ್ಣುತಿರಲಾ ಬಾಲನು ॥ ೧೫೨ ॥

**ರಾಗ ಭೈರವಿ ಝಂಪೆತಾಳ**

ಇರಲೊಂದು ದಿನ ದುಷ್ಟಬುದ್ಧಿಯೆಂಬುವ ಸಚಿವ ।
ಹರುಷದಿಂ ತನ್ನ ಗೃಹದೊಳಗೆ ॥
ಧರಣಿಯಮರರ ಕರೆಸಿ ಭೋಜನವ ಗೈಸುವರೆ ।
ಕಿರಿಯ ಸುತನಹನಮಲನೊಡನೆ ॥ ೧೫೩ ॥

ಕಂದ ಕೇಳ್ ಪಿತೃಕಾರ್ಯವಿಂದು ಸಂಭವಿಸಿಹುದು ।
ಒಂದು ಶತ ವಿಬುಧರನು ಕರೆಸು ॥
ಗಂಧಪುಷ್ಪಾಕ್ಷತೆಯನಿತ್ತು ಭೋಜನಗೈಸಿ ।
ಚಂದದಿಂ ಪೂಜಿಸುವೆನೀಗ ॥ ೧೫೪ ॥

ಪಿತನ ವಾಕ್ಯವ ಕೇಳುತಮಲ ಸಂಪ್ರೀತಿಯಲಿ ।
ಪೃಥಿವಿಸುರರಿಗೆ ಬಂದು ನಮಿಸಿ ॥
ಮತಿವಂತರೆಮ್ಮಲ್ಲಿ ಭೋಜನಕೆ ಬಹುದೆನ್ನು ।
ತತಿ ಜವದಿ ಪೇಳಿ ನಡೆಯಲ್ಕೆ ॥ ೧೫೫ ॥

**ರಾಗ ಘಂಟಾರವ ಏಕತಾಳ**

ತಟ್ಟನೇಳಿರಿ ದ್ವಿಜರು ಭೋಜನಕೀಗ ।
ದುಷ್ಟಬುದ್ಧಿಯು ಕಾದುಕೊಂಡಿಹ । ಸಿಟ್ಟು ಬರ್ಪುದು ತಡೆದರೆ ॥ ೧೫೬ ॥

ಸೋಮಜೋಯ್ಸರು  ಮಂಜಯ್ಯ ಉಡುಪರು ।
ಭೀಮಭಟ್ಟರು ನಾರ್ಣುಪಾಧ್ಯರು । ಮಡಿಯ ಚೇಲವ ಕೊಳ್ಳಿರಿ ॥ ೧೫೭ ॥

ಮಂಡಿಗೆ ಲಾಡು ಫೇಣಿ ಚಿರೋಟಿಯು ।
ಸಂಡಿಗೆಯು ಕಾಯ್ಗಡುಬು ಪಾಯಸ । ಉಂಡು ತೀರದು ಇಂದಿಗೆ ॥ ೧೫೮ ॥

ಹಣ್ಣುಗಡ್ಡದ ಸುಬ್ಬಾಭಟ್ಟರೆ ನಿಮ್ಮ ।
ಸಣ್ಣ ಮಾಣಿಯ ಕರೆರಿ ಬಪ್ಪುದು । ಎಣ್ಣೆಮೆಣಸಿನ ಖರಚೆಗೆ ॥ ೧೫೯ ॥

**ಕಂದ**

ಬರುತಿಹ ಭೂಸುರವರ್ಯರ ।
ಹರುಷದಿ ಕರೆತಂದಾಸನವೀಯುತೆ ಸಚಿವಂ ।
ಪರಿ ಪರಿ ಷಡ್ರಸಭೋಜ್ಯವ ।
ವಿರಚಿಸಿ ಬಡಿಸಲ್ ಭುಂಜಿಸಿ ನಲಿಯುತಲಾಗಳ್ ॥ ೧೬೦ ॥

**ರಾಗ ಸುರುಟಿ ಏಕತಾಳ**

ಹಸನವಾಯ್ತು ಮಂತ್ರಿ । ಮನಸಿಗೆ । ಕುಶಲವು ಸ್ವಾತಂತ್ರಿ ॥

ಎಸಗಿಹ ಭೋಜ್ಯದಿ ತೃಪ್ತರಾಗಿರುವೆವು ।
ಉಸಿರುವುದೇನಿದೆ ಧಾರ್ಮಿಕ ಕೇಳ್ಳೈ ॥ ೧೬೧ ॥

ಒರೆಯುತಲೀ ತೆರದಿ । ವಿಬುಧರು । ಹರುಷದಿ ವಿಧವಿಧದಿ ॥
ಕರದೊಳು ವೀಳ್ಯವ ಮಡಿಸುತ ಕುಳ್ಳಿರೆ ।
ತರಳರೊಳಾಡುತ ಕೇರಳಪತಿಸುತ ॥ ೧೬೨ ॥

ಮೆರೆಯುತ ಬರೆ ಬೇಗ । ವಿಬುಧರು । ತರಳನ ಕಂಡಾಗ ॥
ಪರಮ ಲಕ್ಷಣಯುತದಾರ ಕುಮಾರನು ।
ಒರೆಯೆನೆ ದುರ್ಮತಿ ಪೇಳಿದನವರಿಗೆ ॥ ೧೬೩ ॥

**ರಾಗ ಕೇದಾರಗೌಳ ಝಂಪೆತಾಳ**
ತಿರಿದು ತಿನ್ನುವ ಬಾಲರು । ಈ ಪುರದೊ । ಳಿರುತಿಹರು ಬಹಳ ಜನರು ॥
ತರಳನೀತನ ಪಡೆದನು । ಯಾರೊ ನಾ । ನರಿಯೆ ಪಾಮರನಲ್ಪನು ॥ ೧೬೪ ॥

ಎನ್ನ ರಾಜ್ಯದ ಕಾರ್ಯದಿ । ನಾನಿರ್ಪು । ದನ್ನು ತ್ಯಜಿಸುತ ವ್ಯರ್ಥದಿ ॥
ಸಣ್ಣ ಜನರ ವಿಚಾರವು । ಸರಿಯಲ್ಲ । ವೆನ್ನುವುದು ನೃಪಧರ್ಮವು ॥ ೧೬೫ ॥

ಒರೆಯಲೀ ಪರಿ ಕೇಳುತಾ । ದ್ವಿಜರಾಗ । ಲರುಹಿದರು ಬಾಲನೀತ ॥
ಪರದೇಶಿಯಲ್ಲವಯ್ಯ । ಲಕ್ಷಣದಿ । ದೊರೆಕುವರ ಕೇಳು ನುಡಿಯ ॥ ೧೬೬ ॥

ಮುಂದೆ ಕುಂತಳ ನಗರಿಗೆ । ದೊರೆಯಹನು । ಚಂದದಿಂದೀ ಬಾಲಗೆ ॥
ತಂದು ರಕ್ಷಿಸಿ ವಿದ್ಯವ । ಕಲಿಸು ಮುದ । ದಿಂದ ಮಾಡೀ ಕಾರ್ಯವ ॥ ೧೬೭ ॥

**ವಾರ್ಧಕ**
ಕ್ರೂರ ಮಕರಗಳಿಂದ ತುಂಬಿರ್ದ ಮಡುವಿನ ಗ ।
ಭೀರ ನಿರ್ಮಲ ಜಲವು ಶೋಭಿಸುವ ತೆರನಂತೆ ।
ಘೋರತರ ವಿಷವ ತನ್ನಾತ್ಮದೊಳಗಾವರಿಸಿ ಭೂರಿ ವಿನಯವ ತೋರುತ ॥
ಚಾರು ಲಕ್ಷಣದ ಶಿಶುವಂ ನೋಡಿ ಧರೆಯ ಬೃಂ ।
ದಾರಕರ ನುಡಿಗೊಪ್ಪಿದೋಲಿರ್ದು ಬಳಿಕ ಸ ।
ತ್ಕಾರದಿಂದಾ ವಿಪ್ರರಂ ಕಳುಹಿ ದುರ್ಮತಿ ಕಠೋರಭಾವವ ತಾಳುತ ॥ ೧೬೮ ॥

**ರಾಗ ಮಧ್ಯಮಾವತಿ ಅಷ್ಟತಾಳ**
ಘಾತವಾಯಿತಲ್ಲ । ಮನಕೆ ಬಲ್ ವಿ । ಘಾತವಾಯಿತಲ್ಲ ॥ ಪ ॥

ಭೂತಳಾಧಿಪ ಚಿತ್ರಧ್ವಜನು । ಬಹು ।
ಪಾತಕಿ ಸುತವರ್ಜಿತನು ॥

ಈತನಂತ್ಯದಿ ಕುಂತಳವ ಮಮ । ಜಾತ ಮದನನಿಗಿತ್ತು ಎನ್ನಯ ।
ಖ್ಯಾತಿಯನು ಪಸರಿಸುತ ಮೆರೆಮೆಂ । ಬಾತುರದಿ ನಾನಿರ್ದೆನ್ನೈಸಲೆ ॥ ೧೬೯ ॥

ಧರಣಿಯಮರರೆಂದಾ ನುಡಿಯು । ತಪ್ಪ ।
ಲರಿಯದು ಎನ್ನಾಶಾಕೃತವು ॥
ಬರಿದೆಯಾದುದು ನರಿಯು ಗಗನದಿ । ಮೆರೆವ ತರಣಿಯ ತಿಂಬೆನೆನುತಲಿ ।
ಗರುವಗೊಂಡಿಹ ತೆರದಿ ಪಾಮರ । ತರಳನೆನಗರಿಯಾದನಕಟಾ ॥ ೧೭೦ ॥

ಬೇರೆ ಯೋಚಿಪೆ ಯತ್ನಂಗಳನು । ಈ ।
ಪೋರನ ತರಿಯಲು ನಾನು ॥
ದಾರಿಯೊಂದಿದೆ ಚಿಗುರನುಗುರಿನೊ । ಊರಿ ಮುರಿಯುವ ತೆರನ ಮಾಳ್ಪನು ।
ಕ್ರೂರಕರ್ಮಿಗಳಾದ ಕಟುಕರ । ಚಾರುಮುಖದೊಳು ಕರೆಸಿ ಪೇಳುವೆ ॥ ೧೭೧ ॥

**ಭಾಮಿನಿ**

ಚರರೊಡನೆ ಕಟುಕರನು ಕರೆಸಲು ।
ಪರಮ ಘೋರಾಕಾರದೊಡಲಿನ ।
ದುರುಳರಾ ಕ್ಷಣ ಜವನ ಭಟರೆಂಬಂತೆ ಬಂದೆರಗೆ ॥
ಹರುಷದಿಂ ಮನ್ನಿಸುತ ಸಚಿವನು ।
ತರಳನಿವನೆನ್ನರಿಯು ವಿಪಿನಕೆ ।
ಭರದಿ ಕೊಂಡೊಯ್ದರಿದು ಕುರುಹನು ತಂದು ತೋರುವುದು ॥ ೧೭೨ ॥

**ರಾಗ ಲಾವಣಿ**

ದುಷ್ಟಬುದ್ಧಿಗೆರಗಿ ಝೋಕಿನಲಿ । ಕಟುಕರವನ ।
ರಟ್ಟೆಯನ್ನು ಪಿಡಿದು ವೇಗದಲಿ ॥ಪಲ್ಲವಿ॥

ದುಷ್ಟ ಬಾ ಬಾರೆಮ್ಮ ಕರಕೆ । ಥಟ್ಟನೀ ದಿನ ಸಿಕ್ಕಿಬಿದ್ದೆ ।
ಕುಟ್ಟೆವು ನಿನ್ನೀ ತಲೆಯ ನೋಡೆಲೊ । ಎಲೆ ಪೋರ ನಿನ್ನ ।
ನಟ್ಟಡವಿಗೊಯ್ವೆವು ಬಾರೆಲೊ ॥ ೧೭೩ ॥

ಅರರೆ ಮಂತ್ರಿ ಸಾಮ್ಯೋರಿಂಗೆ । ದುರುಳ ವೈರಿಯಾದ ಮ್ಯಾಗೆ ।
ಕರುಣವೇನು ಕಲ್ಲುಮುಳ್ಳೊಳು । ಎಳೆ ಎಳೆದಿವನ ।
ಕೊರಳನರಿಯಬೇಕು ತ್ವರೆಯೊಳು ॥ ೧೭೪ ॥

**ಭಾಮಿನಿ**

ತರಳನನು ಪಿಡಿದೆಳೆದು ಕಟುಕರು ।
ಪರಮ ಘೋರಾಕಾರ ವಿಪಿನಕೆ ।
ತರಲು ಕಾಲೊಡೆದಾಗ ಶೋಣಿತಧಾರೆ ಪರಿವುತಿರೆ ॥

ಉರಗವದನದೊಳಿರ್ಪ ಮೂಷಿಕ ।
ತೆರದಿ ಬಾಲನು ಹಲುಬಿ ಬಾಯೊಳ ।
ಗಿರುವ ಶಾಲಗ್ರಾಮ ಮಹಿಮೆಯೊಳರಿತು ಽನದಲಿ ॥ ೧೭೫ ॥

**ವಾರ್ಧಕ**

ಬಲಿಯಂತೆ ದಾನಮಂ ಗೆಯ್ಯಲಸದಳಮೆನಗೆ ।
ಚೆಲುವ ಪ್ರಹ್ಲಾದ ಧ್ರುವರಂದದೋಳ್ ಸುದೃಢದಿಂ ।
ನಿಲದೆನ್ನ ಸಲಹು ರುಕ್ಮಾಂಗದಾಖ್ಯನ ತೆರದೊಳೊಲಿಸಲಾರೆನು ವ್ರತದಲಿ ॥
ಹರಿಯೆ ನಾರದನಂತೆ ಭಜಿಸಲಾರೆನು ನಿನ್ನ ।
ಸಿರಿಚರಣ ಪಂಕಜದ ಮಧುರ ಮಕರಂದಮಂ ।
ನಿರತ ಸೇವಿಪ ದಿವ್ಯ ನಾಲಿಗೆಯನಿತ್ತೆನ್ನ ಪೊರೆಯಬೇಹುದು ಕರುಣದಿ ॥ ೧೭೬ ॥

**ರಾಗ ಸಾವೇರಿ ಆದಿತಾಳ**

ಪಾಲಿಸು ಕಮಲನೇತ್ರ । ಹರಿ ವಾಸುದೇವ ।
ಲೀಲಾಮಾನುಷ ಚಾರಿತ್ರ ॥
ಫಾಲಾಕ್ಷಸಖ ಕಂಸಾರಿ । ವಾಮನಮೂರ್ತೇ ।
ನೀಲಾಂಗ ದುರಿತಹಾರಿ ॥ ೧೭೭ ॥

ದೇವ ನಿನ್ನಂಶಾಂಶದಿ । ದಾನವ ಮನುಜ ।
ದೇವತೆ ಪಕ್ಷಿ ಮೃಗದಿ ॥
ಆವ ಚರಾಚರವ । ಹೃದಯದೊಳಿಟ್ಟು ।
ಕಾವೆ ದಯದಿ ಕೇಶವ ॥ ೧೭೮ ॥

ನಿನ್ನ ನಾಭಿಯ ಕಮಲದಿ । ಚತುರಾಸ್ಯ ತಾನು ।
ತ್ವನ್ನನಾದನು ಮೂಲದಿ ॥
ನಿನ್ನಾಜ್ಞೆಯಾದ ತೆರದಿ । ಗೈವೆನು ಸೃಷ್ಟಿ ।
ನಿನ್ನ ಬಿಟ್ಟಿಲ್ಲ ಜಗದಿ ॥ ೧೭೯ ॥

**ರಾಗ ಶಂಕರಾಭರಣ ತ್ರಿವುಡೆತಾಳ**

ಕಿವಿಗಳೊಳು ದಶ ದಿಕ್ಕು ನಾಸಾ । ವಿವರದೊಳಗಶ್ವಿನಿಗಳು ।
ಪವನಸಖ ಮುಖದೊಳಗೆಯುದರದಿ । ಸಪ್ತಶರಧಿ ॥ ೧೮೦ ॥

ಗಿರಿನಿಕರದೀಪ್ತಿಗಳು ಧಾರಾ । ಧರನಿಕರಕೇಶಂಗಳು ।
ತರುನಿಕರರೋಮಗಳು ಶ್ವಾಸವೆ । ಯಗ್ನಿಸಖನು ॥ ೧೮೧ ॥

ಪರಮ ನಿಗಮಕೆ ಮತ್ಸ್ಯ ಮಂದರ । ಧರಣಿಗೋಸುಗ ಕೂರ್ಮನು ।
ಧರಣಿಗಾಗಿ ವರಾಹ ನರಹರಿ । ಶರಣಗಾಗಿ ॥ ೧೮೨ ॥

ತಿರಿವ ಭಿಕ್ಷುಕ ಬಲಿಗೆ ಪರಶುವ | ಧರಿಸಿ ಕ್ಷತ್ರಿಯಮಥನಕೆ |
ದುರುಳ ದಶಕಂಧರಗೆ ಮನುಜನು | ತಿಳಿವರ್ಯಾರು ॥ ೧೮೩ ॥

ಮುರ ನರಕ ಕಂಸಾದಿ ಮಥನಕೆ | ಹರಿಯು ತ್ರಿಪುರರ ತರಿಯಲು |
ಪರಮ ಬೌದ್ಧ ಯುಗಾಂತ ಕಲ್ಕಿಯೆ | ಪಾಲಿಸೆನ್ನ ॥ ೧೮೪ ॥

ಹಲವು ದಿನಗಳ ತರ್ಪಣದ ಜಲ | ಜಲಧಿಗೈದುವ ತೆರದಲಿ |
ಹಲವು ದೈವದ ಭಜನೆಯರ್ಪಿತ | ವಹುದು ನಿನಗೆ ॥ ೧೮೫ ॥

**ಭಾಮಿನಿ**

ಘೋರ ಕಾನನದೊಳಗೆ ಬಾಲನ |
ಕ್ರೂರ ಕರ್ಮಿಗಳಬ್ಬರಿಸಿ ಖತಿ |
ಯೇರುತಾತನ ಚಂಡಿಕೆಯ ಪಿಡಿದಾಗ ಬಗ್ಗಿಸುತ ॥
ಪಾರಮಾರ್ಥಿಕವೇಕೆ ವೇಗದಿ |
ಪೋರನನು ಛೇದಿಸಿಯೆ ಕುರುಪನು |
ತೋರಬೇಕೆಮ್ಮೊಡೆಯಗೆನ್ನುತಲೆತ್ತೆ ಖಡ್ಗವನು ॥ ೧೮೬ ॥

**ರಾಗ ನೀಲಾಂಬರಿ ರೂಪಕತಾಳ**

ಹಿಂದಿನ ಭವದೊಳಗ್ಯಾರನು | ಬಂಧಿಸಿ ಹನನವ ಗೈದೆನೊ |
ಇಂದಿಗೆ ಪರರಿಂ ಮರಣವು | ಬಂದುದೆ ನಗಧರನೆ ॥ ೧೮೭ ॥

ಹೆತ್ತಿಹ ಮಾತಾಪಿತರನು | ಮತ್ತೇನಾದರೊ ಕಾಣೆನು |
ಸ್ವಸ್ಥದಿ ಮನೆ ಮನೆ ಬೇಡುತ | ನಿತ್ಯದೊಳಿರುತಿರ್ದೆ ॥ ೧೮೮ ॥

ಪರದೇಶಿಯು ನಾನ್ಯಾರಿಗು | ಕೊರತೆಯ ಪುಟ್ಟಿಸಲಿಲ್ಲವು |
ನಿರಪರಾಧಿಯ ಕೊಲ್ವರು | ಹರಿ ನೀ ಕಾಪಾಡೊ ॥ ೧೮೯ ॥

**ರಾಗ ಕಾಪಿ ಅಷ್ಟತಾಳ**

ತರಳನಿಂತಳುವುದ ಕಂಡು | ಆ |
ದುರುಳರು ಮರುಕವಗೊಂಡು ॥
ಅರಿಯದ ಬಾಲನ ಕೊಲುವರೆ ದುರ್ಮತಿ |
ಯೊರೆದನು ಪಾಪಿಯು ನಿರಪರಾಧಿಯನೀಗ ॥ ೧೯೦ ॥

ಹಿಂದೆ ಪಡೆದ ಕರ್ಮವೆಂದು | ಈ |
ಕಂದ ತಾನಳುವನಿಂದು ॥
ಮಂದಮತಿಗಳೆಮ್ಮ ಪೂರ್ವಕಲ್ಮಷದಿಂದ |
ಬಂದಿದೆಮಗೆ ಇಂಥ ಕಟುಕರ ವೃತ್ತಿಯು ॥ ೧೯೧ ॥

ಕೊಲಬಾರದೀ ತರಳನನು । ಕೊಂದು ।
ಫಲವೇನು ಶಿಶುಹತ್ಯಂಗಳನು ॥
ಗಳಿಸಲ್ಯಾತಕೆಯೆಂದು ಬಾಲನ ಮುದ್ದಿಸಿ ।
ಚೆಲುವ ಪಾದದೊಳಾರು ಬೆರಳಿರೆ ಕಂಡಾಗ ॥ ೧೯೨ ॥

ಕುರುಹ ತೋರಿಸಬೇಕೆಂದೆನುತ । ನಮ ।
ಗೊರೆದಿಹ ಸಚಿವನು ಮಾತ ॥
ಕಿರುಬೆರಳಿನೊಳೊಂದು ಅಧಿಕವಾಗಿಹುದನ್ನು ।
ಭರದಿ ಕತ್ತರಿಸಿಕೊಂಡ್ಹೋಗಿ ತೋರಿಸುವೆವು ॥ ೧೯೩ ॥

**ವಾರ್ಧಕ**

ಐದಲ್ಲದೊಂದು ಬೆರಳಿರ್ಪುದಂ ಬಳಿಕವರು ।
ಕೊಯ್ದು ಕುರುಪಂ ಕೊಂಡು ತಮ್ಮ ದಾತಾರನಡೆ ।
ಗೈದಿ ತೋರಿಸಲವನವರ್ಗಳಂ ಮನ್ನಿಸುತ ಕಳುಪಿ ಸುಖದೊಳಗಿರುತಿರೆ ॥
ಐದೆ ವರುಷದ ಬಾಲನಿತ್ತ ವಿಪಿನಾಂತರದಿ ।
ಕೊಯ್ದ ಬೆರಳಿನ ಗಾಯದುರಿಗೆ ಹಮ್ಮೈಸುತ್ತ ।
ಬೈದು ತನ್ನಯ ವಿಧಿಯ ಘೋರಡವಿಯೊಳಗೆಂತು ಬಾಳಿದಪೆನಕಟೆನ್ನುತ ॥ ೧೯೪ ॥

೪

**ರಾಗ ಮಧುಮಾಧವಿ ಏಕತಾಳ**

ಸುರಿವ ನೆತ್ತರಧಾರೆಯುರಿಗೆ ಬಾಲಕನು ।
ತರಹರಿಸುತ ಹರಿ ರಕ್ಷಿಸೆಂದವನು ॥ ೧೯೫ ॥

ಪರಮ ಶಾಲಗ್ರಾಮವೆದುರೊಳಗಿಟ್ಟು ।
ಧರೆಯೊಳೊಂದಿಸಿ ಭಕ್ತಿಯಿಂ ಪೊಡಮಟ್ಟು ॥ ೧೯೬ ॥

ಧರೆಯೊಳೆನ್ನಯ ಕಷ್ಟದೋಲ್ ಜೀವರಿಂಗೆ ।
ಕರುಣಿಸ ಬೇಡವೈ ವಂದಿಪೆ ನಿನಗೆ ॥ ೧೯೭ ॥

ಕಂದರ್ಪಪಿತ ದೇವ ಶ್ರೀಲಕ್ಷ್ಮೀಕಾಂತ ।
ಬಂದೆನ್ನ ಕಾಯೆಂದು ಮೂರ್ಛಿಸಲಿತ್ತ ॥ ೧೯೮ ॥

**ಭಾಮಿನಿ**

ಧರಣಿಯೊಳು ಮೈಮರೆತು ಬಾಲಕ ।
ನಿರಲಿಕಿತ್ತಲು ಚಂದನಾವತಿ ।
ಯರಸನಾದ ಕುಳಿಂದನೋಲಗವಿತ್ತು ವಿಭವದಲಿ ॥

ಚರನ ಕರೆದಿಂತೆಂದ ಶಬರರ ।
ತ್ವರಿತದಿಂ ಕರೆ ವನಕೆ ಬೇಂಟೆಗೆ ।
ಪೊರಡುವೆನು ಬಲ ಸಹಿತ ಬರಲೀ ಕ್ಷಣವೆ ಸಂತಸದಿ ॥ ೧೯೯ ॥

**ರಾಗ ಮಾರವಿ ಏಕತಾಳ**
ಅರಸನ ನುಡಿಗಾ ಚಾರನು ತ್ವರಿತದಿ । ಕರೆಯಲು ಶಬರನನು ॥
ಮರಿ ಮರಿ ನಾಯ್ಗಳ ತರುಬುತಲೇಳಲು । ಪರಿಕಿಸುತಾಗದನು ॥ ೧೦೦ ॥

ಭರದೊಳು ಶಬರಿಯರ್ರೈತಂದೆರೆಯರ । ಚರಣಕೆ ಬಾಗುತಲೆ ॥
ಬರುವೆವು ನಿಮ್ಮೊಡನೀ ದಿನ ಬೇಂಟೆಗೆ । ಹರುಷದಿ ನಾವೆನಲು ॥ ೧೦೧ ॥

ಹಸನಾಯ್ತುರರೆ ಶಭಾಸು ಬಲ್ ಝೋಕಿಲಿ । ಬಿಸಿ ಬಿಸಿ ಮಾಂಸವನು ॥
ಎಸಗುತ ಪಾಕವ ಮೆಲ್ಲುವ ವನದೋಳ್ । ಕುಶಲದಿ ಬಹುದೆನಲು ॥ ೧೦೧ ॥

ಮೀಟಾಗುತ ಸತಿಪತಿಗಳ್ ಕಾಟಕ । ರೋಟು ಮಂದಿ ದಿನದಿ ॥
ಬೇಟೆಯೊಳಟವಿಯ ಮೃಗಗಳ ತರಿವುತ । ಕೂಟದ ಸಂತಸದಿ ॥ ೧೦೨ ॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಬಂದು ಭೂಪತಿಗೆರಗೆ ಶಬರರ । ಚಂದದಿಂ ಮನ್ನಿಸುತಲವರೊಡ ।
ನೆಂದನೀ ದಿನ ಬೇಂಟೆಯಾಡುವ । ಮನದಿ ನಿಮ್ಮ ॥ ೧೦೪ ॥

ಕರೆಸಿದೆನು ನಡೆರೆನುತ ವೀಳ್ಯವ । ಕರುಣಿಸುತ ಹಯವೇರೆ ನೃಪತಿಯಂ ।
ಪರುಟವಿಸಿ ಮಾರ್ಬಲಗಳೆಡಬಲ । ತರುಬಿ ಬರಲು ॥ ೧೦೫ ॥

ಇಂತು ಶಬರರು ಶಬರಿಯರು ಸಹ । ಸಂತಸದಿ ಪೊರಮಟ್ಟು ಪುರವನು ।
ದಂತಿ ಹರಿಣಗಳಿರ್ಪ ಸೋವನು । ಪಿಡಿದು ಪೊಗಲು ॥ ೧೦೬ ॥

**ವಾರ್ಧಕ**
ಚಾಪ ಬಾಣಂಗಳೇತಕೆ ಬೇಂಟೆಗಂಗಜನ ।
ಚಾಪ ಬಾಣಂಗಳಿರ್ದಪವೆಮ್ಮೊಳೆಂಬೊಲಿಹ ।
ಚಾಪಲಭ್ರೂಲತೆಯ ಚಂಚಲಾಪಾಂಗದ ಪುಳಿಂದೆಯರ್ ತಮ್ಮ ತಮ್ಮ ॥
ಓಪರಂ ಬಳಿವಿಡಿದು ಬರುತಿರ್ದರಾಗ ಸ ।
ಲ್ಲಾಪದಿಂದೆಸೆವ ಹರಿ ಹರಿಣ ಕರಿ ಚಮರಿಗಳ ।
ರೂಪಂಗಳೆಮ್ಮೊಳಡಗಿಹವೆಂದು ಗರ್ವಿಸುತ ಶಬರಿಯರು ಸಂತಸದೊಳು ॥ ೧೦೭ ॥

**ರಾಗ ಭೈರವಿ ತ್ರಿವುಡೆತಾಳ**
ನಡೆದರಂದು । ಬೇಟೆಗೆ । ನಡೆದರಂದು ॥ ಪ ॥

ನಡೆದರಾ ಕ್ಷಣ ಬೇಟೆಯಾಡುತ । ಪಡೆಯ ತರುಬಿ ವಿನೋದದಿ ।
ಗಿಡನ ಪೊದರಿನೊಳಿರ್ಪ ಮೃಗಗಳ ಝಡಿದು ಹೊರಡಿಸಿ ಮೋದದಿ ।
ಸಡಗರದಿ ಶಬರಿಯರು ಬಲೆಯಲಿ । ಪಿಡಿದು ಶರಗಳ ವಿಭವದಿ ।
ಒಡನೆ ತಮ್ಮಯ ಪತಿಗೆ ತೋರುತ । ಕಡು ವಿನೋದದಿ ಹಿಗ್ಗುತಾಗಳು ॥ ನಡೆದರಂದು ॥೧೦೮॥

ಮತ್ತಗಜಗಳ ಭಲ್ಲೆಯಿಂದಲಿ । ನೆತ್ತಿಗಳ ಬಗಿಯುತ್ತಲಿ ।
ಕಿತ್ತು ಚಮರಿಯ ಮೃಗದ ಬಾಲವ । ಸುತ್ತಿ ಬೀಸುತ ಮುದದಲಿ ।
ಕತ್ತಿಯನು ಸೆಳೆಯುತ್ತ ವರಹನ । ಕತ್ತರಿಸಿ ಕೆಡಹುತ್ತಲಿ ।
ಮತ್ತೆ ತಮ್ಮಯ ಸತಿಯರಂಗಕೆ । ಯೆತ್ತಿ ರಕ್ತವನೆರಚುತಾಗಳು ॥ ನಡೆದರಂದು ॥ ೧೦೯ ॥

**ಭಾಮಿನಿ**

ಒಂದೆಸೆಯೊಳಾ ಶಬರವಿತತಿಯು ।
ಚಂದದಿಂ ಸೋವುತ್ತಲಿರುತಿರೆ ।
ಒಂದೆಸೆಯೊಳಿರುತಿರ್ಪ ಹರಿಣನ ಬೆರಸಿ ಭೂಪತಿಯು ॥
ಮುಂದೆ ಮುಂದ್ಯೆತರಲು ವಿಪಿನದೊ ।
ಳೊಂದೆಸೆಯ ಬಾಲಕನ ರೋದನ ।
ಬಂದು ಕರ್ಣಾಂತರದಿ ಬೀಳಲು ಕೇಳುತಾ ಕ್ಷಣದಿ ॥ ೧೧೦ ॥

**ರಾಗ ಕಾಂಭೋಜಿ ಝಂಪೆತಾಳ**

ಅರರೆ ಏನಾಶ್ಚರ್ಯ ವಿಪಿನಮಧ್ಯದೊಳೀಗ ।
ತರಳರಳುತಿಹ ಧ್ವನಿಯು ಕೇಳಿಸುತಲಿಹುದು ॥
ಬರಿದೆ ಮನಸಿನ ಭ್ರಮೆಯೊ ತರುಣಿಸುತರೊಡಗೂಡಿ ।
ತೆರಳುತಿಹ ಮಾರ್ಗಂಗಳೀಯೆಡೆಯೊಳಿಹುದೊ ॥ ೧೧೧ ॥

ಯಾರೆಂದು ಪರಿಕಿಸಲು ಬೇಕೆನುತಲಾ ಕ್ಷಣದಿ ।
ಧಾರಿಣೀಪತಿ ಮುಂದೆ ಮುಂದೆ ತಾ ಬರಲು ॥
ಚೀರಿ ರೋದಿಸಿ ಹರಿಯೆ ಶರಣು ಶರಣೆನ್ನುತ್ತ ।
ಧಾರಿಣಿಯೊಳೊಂದಿಸುವ ಬಾಲಕನ ಕಂಡು ॥ ೧೧೨ ॥

ಯಾರ ಸುತನಿವನಿಲ್ಲಿ ತಂದೆ ತಾಯ್ಗಳು ಮತ್ತೆ ।
ಬೇರೆ ಬಾಂಧವರನ್ನು ನೆನೆಯದೆಯೆ ಹರಿಯ ॥
ಭೂರಿ ಭಕ್ತಿಯೊಳೀತ ಸ್ತುತಿಗೈವನದರಿಂದ ।
ವಾರಿಜಾಕ್ಷನೆ ಒಡೆಯ ನದಕಾಗೀತನಿಗೆ ॥ ೧೧೩ ॥

ಹರಿಕೃಪೆಗಳಿಲ್ಲದಿರೆ ಘೋರ ವಿಪಿನಾಂತರದಿ ।
ಇರುವನೆಂತೆಲ್ಲರಿಗೆ ತರಳರನು ಕೊಡುವ ॥

ಮುರಹರನು ಸುತರಿಲ್ಲದೆನ್ನ ಮರುಕವ ನೋಡಿ ।
ಕರುಣಿಸಿದ ಮಮ ಪೂರ್ವ ಪುಣ್ಯದಿಂದಿವನ ॥ ೧೦೪ ॥

ಹತ್ತು ವಿಧಮುಂಟು ಸುತರದರೊಳೌರಸಪುತ್ರ ।
ನುತ್ತಮನು ಮೇಣಾತನಿಲ್ಲದಿರೆ ನರಗೆ ॥
ಮತ್ತುಳಿವ ಬಗೆಗಳಲಿ ಪಡೆಯಬೇಹುದು ಸುತರ ।
ತತ್ತನಯರೊಳಗಿವನು ತಾನೆ ದೊರಕಿಹನು ॥ ೧೦೫ ॥

**ಭಾಮಿನಿ**
ಕಂದ ನೀನ್ಯಾರಿಲ್ಲಿಗೇತಕೆ ।
ಬಂದೆ ನಿನ್ನಯ ಪೆಸರದೇನ್ನೈ ।
ತಂದೆ ತಾಯಿಗಳಾರು ಪೇಳೆನಲೆಂದನಾ ಕುವರ ॥
ಇಂದಿರೆಯು ತಾಯ್ ಎನಗೆ ಶ್ರೀಗೋ ।
ವಿಂದನೆನ್ನಯ ಪಿತನರಣ್ಯಕೆ ।
ತಂದು ಹಾಕಿದನವನೆ ಎನ್ನಲು ಕೇಳಿ ನೃಪವರನು ॥ ॥೧೦೬॥

**ರಾಗ ಕಲ್ಯಾಣಿ ಆದಿತಾಳ**
ತರಳ ಬಾರೊ । ನೀ । ಮರುಗದಿರೊ । ಹರಿಚರಣಾಬ್ಜಾಳಿ ಬಾರೋ ॥
ಸ್ಮರನುರುತರ ಲಾವಣ್ಯ ಗುಣಕರ ।
ತರುಣ ತರಣಿಕಿರಣೋಪಮ ಸುಂದರ ॥ ಪಲ್ಲವಿ ॥

ಶೂರನು । ನೀನೆನ್ನಯ ಸುಕುಮಾರನು ।
ರಾಕಾಶಶಿನಿಭಾಕಾರನು । ಮತ್ಪತ್ನಿಯ ಕರಕೀರನು ।
ಧೀರನು । ಸುಗುಣಾಕರ ಗಂಭೀರನು । ರಿಪುಗಳ ಹೃದಯಕುಠಾರನು ।
ಕಾರುಣ್ಯದಿ ಬಿಗಿದಪ್ಪುತ ತರಳನ ।
ಧಾರಿಣಿಪತಿ ಹಯವೇರಿದನಾ ಕ್ಷಣ ॥ ತರಳ ಬಾರೊ ॥೧೦೭॥

**ರಾಗ ಕೇದಾರಗೌಳ ಅಷ್ಟತಾಳ**
ಚಂದದಿ ಕುವರನನೆತ್ತಿ ಮೋಹದೊಳಾ ಕು । ಳಿಂದನು ವಿಭವದಿಂದ ॥
ಮಂದಿಯ ಕೂಡಿ ಪಟ್ಟಣಕೆ ಬೇಗದೊಳೈ । ತಂದು ಪೊಕ್ಕರಮನೆಯ ॥೧೦೮॥

ತರುಣಿ ಮೇಧಾವಿನಿಯನು ಕರೆದೆಂದನು । ಹರಿಯೆನಗೀ ಸುತನ ॥
ಕರುಣಿಸಿದನು ಇಂದು ಕಾನನಾಂತರದೊಳು । ಹರುಷದಿ ಸಲಹೆನಲು ॥೧೦೯॥

ಕಂದನ ತೆಗೆದಪ್ಪಿ ಮುದ್ದಿಸುತತ್ತಾ । ನಂದದಿ ಮೇಧಾವಿನಿ ॥
ಸುಂದರಾಂಗನ ನೋಡಿ ಹಿಗ್ಗುತ ಪತಿಯೊಡ । ನೆಂದಳು ವಿಭವದಿಂದ ॥೧೧೦॥

ಹರಿದುದೆನ್ನಯ ಬಂಜೆತನ ಪುತ್ರವತಿಯಾದೆ | ಹರಿಕರುಣದೊಳೆನ್ನಯ ||
ಪರಮಪುಣ್ಯದ್ರುಮಂ ಫಲಿಸಿತೆಂದೆನಲಾಗ | ಹರುಷದಿ ಭೂವರನು ||೧೧೦||

**ವಾರ್ಧಕ**

ಬಳಿಕ ನಗರದೊಳಾದುದುತ್ಸವಂ ಪಾರ್ವರ್ಗೆ |
ನಿಳಯದೊಳಗುಳ್ಳಖಿಳ ವಸ್ತುಗಳನೊಲಿದಿತ್ತು |
ಚೆಲುವಂಗೆ ವಿಧ್ಯುಕ್ತ ಜಾತಕರ್ಮವ ಗೈಸೆ ಬುಧರುತ್ತರೋತ್ತರವನು ||
ತಿಳಿದು ನಿರ್ಮಲ ಮುಖಾಂಬುಜದಿಂ ಶಶಾಂಕನಂ |
ಕಳಕಳಿಪನದರಿಂದ ಚಂದ್ರಹಾಸಾಖ್ಯನೆಂ |
ದಿಳೆಯೊಳೀತಂಗೆ ಪೆಸರಾಗಲೆಂದುಚ್ಚರಿಸಿ ನಾಮಕರಣವ ಗೈದರು ||೧೧೧||

**ಭಾಮಿನಿ**

ತರಳ ದಿನ ದಿನ ವರ್ಧಿಸುತಲಿರೆ |
ಧರಣಿಪಾಲಕ ಸಕಲ ವಿದ್ಯೆಯ |
ಗುರುಮುಖದಿ ಕಲಿಸುತ್ತ ಉಪನಯನವನು ಗೈದವಗೆ ||
ಸಿರಿವರನ ಪೂಜಿಸುತ ನಿತ್ಯದೊ |
ಳಿರಲು ಬಾಲಕ ಭಕ್ತಿಭಾವದಿ |
ವಿರಚಿಸುವನೇಕಾದಶೀವ್ರತಗಳನು ಶಶಿಹಾಸ ||೧೧೩||

**ರಾಗ ಮಧುಮಾಧವಿ ತ್ರಿವುಡೆತಾಳ**

ಇಂತು ವಿಭವದಿ ಚಂದ್ರಹಾಸನು | ಕಂತುಪಿತನಡಿಗಳನು ನೆನೆಯುತ |
ಸಂತಸದೊಳಿರೆ ಷೋಡಶಾಬ್ದಗ | ಳಾಗಲಿವಗೆ ವಿನೋದದಿ ||೧೧೪||

ಧರಣಿಪಾಲ ಕುಳಿಂದ ತವಕದಿ | ಧರೆಯ ಪಟ್ಟವ ಕಟ್ಟಲೆನುತಾ |
ಕರೆದು ಮಂತ್ರಿಯೊಳೆಂದನೊಂದಿನ | ಹರುಷಶರಧಿಯೊಳಾಳುತ ||೧೧೫||

ಕಂದ ಶಶಿಹಾಸಂಗೆ ಪಟ್ಟವ | ಚಂದದಿಂ ಗೈದಿನ್ನು ಸುಖದೊಳ |
ಗಿಂದಿನಾರಭ್ಯದಲಿ ನಾನಿಹೆ | ನೆಂದು ನೆನೆದಿಹೆ ಮನದಲಿ ||೧೧೬||

ಕರೆಸು ವಿಬುಧರ ರಂಜಕದೊಳೀ | ಪುರವ ಶೃಂಗರಗೈಸಮಾತ್ಯನೆ |
ನೆರಹು ಸಂಭಾರಗಳನೆನಲಾ | ಕ್ಷಣದೊಳವನು ತಡೆಯದೆ || ||೧೧೭||

ಕರೆಸಿ ವಿಪ್ರೋತ್ತಮರ ಪುರವನು | ಪರಮ ಶೃಂಗರಗೈಸಿ ವಿಭವದಿ |
ನೆರಹಿ ಸಂಭಾರಗಳ ಭೂಪತಿ | ಗೊಂದಿಸಿದನುರೆ ಸಚಿವನು ||೧೧೮||

**ಕಂದ**

ಹರುಷದಿ ಮಂಗಲಸ್ನಾನವ |

ವಿರಚಿಸಿ ವಸ್ತ್ರಾಭರಣದಿ ಶೋಭಿಪ ಸುತಗಂ ||
ವರ ವೇದೋಕ್ತದಿ ನೃಪವರ |
ಧರಣಿಗೆ ಪಟ್ಟವ ಗೈಸಲ್ ವಿಬುಧರ ಮುಖದಿಂ ||

**ರಾಗ ಮಾರವಿ ಏಕತಾಳ**
ಧರಣಿಪ ಸಿಂಹಾಸನದೊಳಗಿರುತಿಹ | ತರಳಗೆ ಮುದ್ರಿಕೆಯ ||
ಕರುಣಿಸಿ ಪೇಳಿದ ಪ್ರಜೆಗಳ ಸಲಹುವ | ಪರಿಗಳ ಸಂತಸದಿ ||೧೧೯||

ಸಿರಿವರಭಕ್ತನು ಮಾತಾಪಿತರಿಗೆ | ಹರುಷದಿ ವಂದಿಸುತ ||
ಪರಕೆಯಗೊಳ್ಳುತ ಸಚಿವನ ಕರೆದಿಂ | ತೊರೆದನು ಮೋದದಲಿ ||೧೨೦||

ಏಳು ಸುತ್ತಿನ ಕೋಟೆ ಕಟ್ಟಿಸು ನಗರಕೆ | ಸಾಲ್ಕೇರಿಯ ಮನೆಯ ||
ನೀಲ ಮಾಣಿಕ ಸೋಪಾನ ಕಾಸಾರವ | ಮೇಲುಪವನ ಗೈಸು ||೧೨೦||

ದಶಮಿಯೊಪ್ಪೊತ್ತಿನ ಭೋಜನವೇಕಾ | ದಶಿಯುಪವಾಸಗಳು ||
ಕುಶಶಯನಾರ್ಚನೆ ದ್ವಾದಶಿ ವ್ರತಗಳ | ನೆಸಗಲಿ ರಾಷ್ಟ್ರದೊಳು ||೧೨೧||

ಬರಲೇಕಾದಶೀ ಕರಿ ತುರಗವು ಪಶು | ತರಳ ತರುಣಿ ಪ್ರಜೆಯು ||
ಹರಿಪಾದೋದಕ ಹೊರತುಪಹಾರವ | ತೊರೆಯಬೇಕೆಂದೆನುತ ||೧೨೩||

ಭರದಿ ಡಂಗುರ ಹೊಯ್ಸು ಮಿಕ್ಕರೆನ್ನಾಜ್ಞೆಗೆ | ಶಿರವ ಛೇದಿಪೆನೆಂದು ||
ಪರಿಜನ ಪುರಜನ ರಾಷ್ಟ್ರಚಾತುರ್ವರ್ಣ | ದವರಿಗೆ ತಿಳಿಸೀಗ ||೧೨೪||

**ರಾಗ ಸಾಂಗತ್ಯ ರೂಪಕತಾಳ**
ವಸುಧೀಶನಾಜ್ಞೆಯೊಳ್ ಸಚಿವನು ಕೋಟೆಯ | ನೆಸಗುತುದ್ಯಾನಾದಿಗಳ ||
ಕುಶಲದಿ ಪುರುದೊಳು ಡಂಗುರ ಹೊಯ್ಸುತ್ತ | ಉಸಿರಿದನಂದು ಸಂತಸದಿ ||೧೨೫||

ದಶಮಿಯೊಂದೂಟವ ಗೈದೇಕಾದಶಿಯೊಳು | ಪಶುಹಯಗಜ ಮುಂತಾದುದನು ||
ಶಿಶುವೃದ್ಧಾದಿಗಳುಪವಾಸಿರ್ದು ದ್ವಾದಶಿ | ವ್ರತವಗೈವುದು ಸರ್ವಜನರು ||೧೨೮||

ಧರಣಿಪಾಲನ ನೇಮ ಮಿಕ್ಕು ಪೋದರೆ ನಿಮ್ಮ | ಶಿರವ ಛೇದಿಪನೆಂದು ಸಚಿವ ||
ಪರಿಜನ ಪುರಜನರೆಲ್ಲರ್ಗೆ ಬೋಧಿಸಿ | ಹರುಷದೊಳಿರಲೊಂದು ದಿವಸ ||೧೨೭||

**ವಾರ್ಧಕ**
ಭೂತಳೇಶ ಕುಳಿಂದ ಚಂದ್ರಹಾಸಾಖ್ಯನಂ |
ಪ್ರೀತಿಯಿಂದಲಿ ಕರೆದು ನುಡಿದನೆಲೆ ಮಗನೆ ವಿ |
ಖ್ಯಾತಮಾಗಿಹ ರಾಜಧಾನಿ ಕುಂತಳಮಿಲ್ಲಿಗಾರು ಯೋಜನವಿರ್ಪುದು ||
ಭೂತಳಮಿದಾ ನಗರದರಸಿಂಗೆ ಸಚಿವನಹ |

ಖ್ಯಾತ ದುರ್ಮತಿಗಾನು ನಿಷ್ಕಾಯುತ ದ್ರವ್ಯ ।
ಪ್ರೀತಿಯೊಳಗೀವೆ ಸಿದ್ಧಾಯಮಂ ಪ್ರತಿವರುಷ ಬಂದುದಾ ಕಾಲಮೀಗ ॥೧೩೮॥

**ರಾಗ ಮಧುಮಾಧವಿ ತ್ರಿವುಡೆತಾಳ**

ಧರಣಿಪತಿಗೆಂಟಂಶವಾತನ । ತರುಣಿಗೊಂದಂಶಗಳು ಮಂತ್ರಿಗೆ ।
ಕರವಮಿಕ್ಕುದನೀವೆನಯುತ । ದ್ರವ್ಯದೊಳಗೇ ಮುದದಲಿ ॥೧೩೯॥

ಕಂದ ಕೇಳ್ಳೆ ಪರಿಪರಿಯ ಧನ । ಕನಕ ಮುಂತಾದುದನು ಚರರೊಳು ।
ಇಂದು ತ್ವರೆಯೊಳು ಕಳುಹು ಲೇಖನ । ವಿತ್ತು ನೀನೆನಲಾಗಳು ॥೧೪೦॥

ಪಿತನ ಮಾತನು ಕೇಳುತಾ ಭೂ । ಪತಿಗೆ ಮಹಿಷಿಗೆ ದುಷ್ಟಬುದ್ಧಿಗೆ ॥
ಪ್ರತಿಪ್ರತಿಯ ದ್ರವ್ಯಗಳನೆಣಿಸುತ । ಗಂಟ ಕಟ್ಟಿಸುತಾ ಕ್ಷಣ ॥೧೪೧॥

ಹಸ್ತಿ ಹಯ ರತ್ನಾದಿ ಕರ್ಪೂರ । ಕಸ್ತುರಿಯು ಸೌವರ್ಣ ರಜತವ ।
ಪ್ರತ್ಯಪ್ರತ್ಯೇಕದೊಳು ಚಾರರೊ । ಳಿತ್ತು ಲೇಖನ ಸಹಿತಲಿ ॥೧೪೨॥

ಚಂದನಾವತಿಯರಸನಾಗಿಹ । ನಿಂದುಹಾಸನು ಕಪ್ಪ ಕಳುಹಿದ ।
ನೆಂದು ಮಂತ್ರೀಶ್ವರಗೆ ವೇಗದೊ । ಳಿತ್ತು ಬಹುದೆನೆ ನಡೆದರು ॥೧೪೩॥

**ಭಾಮಿನಿ**

ಚಾರರೇಕಾದಶಿಯ ದಿನದೊಳು ।
ಸಾರಿ ಕುಂತಳ ಪುರವ ಕಾಣುತ ।
ಭೂರಿ ಹರುಷದೊಳುಪವನಾಂತದಿ ನೆಲಸುತಾಗವರು ॥
ನೀರಜೇಕ್ಷಣಗೊಂದಿಸುತ ಕಾ ।
ಸಾರದೊಳು ಮಜ್ಜನವ ವಿರಚಿಸಿ ।
ವಾರಿಜಾಪ್ತಾಸ್ತಮನಕಾಲದಿ ಪೊಕ್ಕರಾ ಪುರವ ॥೧೪೪॥

**ರಾಗ ಜಂಜೂಟಿ ಅಷ್ಟತಾಳ**

ನೊಸಲಿನೊಳೂರ್ಧ್ವಪುಂಡ್ರವನು । ರಂ । ಜಿಸುವ ಧೌತಾಂಬರಂಗಳನು ॥
ಪೊಸ ತುಲಸೀಮಾಲೆ ಕೊರಳೊಳಗಳವಟ್ಟು ।
ಬಿಸಜನಾಭನ ಅಡಿಯ ನೆನೆವುತ । ಶಶಿಯಹಾಸನ ಚಾರರಾಗಲು ॥೧೪೫॥

ದುಷ್ಟಬುದ್ಧಿಗೆಯಭಿನಮಿಸಿ । ಬೇಗ । ಕೊಟ್ಟು ಲೇಖನ ಕಪ್ಪವಿರಿಸಿ ॥
ದಿಟ್ಟ ಕುಳಿಂದನ ಸುತ ಚಂದ್ರಹಾಸನು ।
ತಟ್ಟನಿದ ನಿಮಗೀಯಲೋಸುಗ । ವಟ್ಟಿಹನು ತ್ವರೆಯಿಂದಲೆಮ್ಮನು ॥೧೪೬॥

ಚರರ ನುಡಿಯ ಕೇಳ್ದು ಕನಲಿ । ಮೇಲ್ । ಬರಹವ ನೋಡಿ ಪತ್ರದಲಿ ॥
ಅರರೆ ಏನಾಶ್ಚರ್ಯ ಮುದ್ರೆ ಬೇರಾಗಿದೆ ।
ಮರುಳೊ ಮೂರ್ಖ ಕುಳಿಂದಾನ್ಯಾರಿಗೆ । ಕರುಣಿಸಿದ ಧೊರೆತನವನಿಂದಿಗೆ ॥೧೪೭॥

ಬಿಡಿಸಿ ಕಾಂಬುವೆ ಪತ್ರವೆನುತ । ಬೇ । ಗೊಡೆಯಲಕ್ಷರ ಪರೀಕ್ಷಿಸುತ ॥
ಒಡನೆ ಸಚಿವ ಶಂಕೆಗೊಂಡು ತನ್ನೊಳು ತಾನೆ ।
ಮಿಡುಕಿ ಮನದೊಳಗೊಕ್ಕಣೆಯ ತಾ । ಸಡಗರದಿ ವಾಚಿಸಿದನಾ ಕ್ಷಣ ॥೧೪೮॥

**ರಾಗ ಕೇದಾರಗೌಳ ಅಷ್ಟತಾಳ**

ಶ್ರೀಮತ್ತು ಸಕಲ ಐಶ್ವರ್ಯವಿರಾಜಿತ । ಸಾಮಂತಜನವಂದಿತ ॥
ಭೂಮಿಗಧಿಕ ಕುಂತಳಾಪುರಸಚಿವೇಂದ್ರ । ಸ್ವಾಮಿಯವರ ವೇದ್ಯಕೆ ॥೧೪೯॥

ಚಂದನಾವತಿ ಸೀಮೆಗಧಿಪತಿಯಾದ ಕು । ಳಿಂದಕುಮಾರಕನು ॥
ಚಂದ್ರಹಾಸನುಗೈವ ಬಿನ್ನಹಂಗಳು ಕ್ಷೇಮ । ವಿಂದಿನವರೆಗೆ ನಾವು ॥೧೫೦॥

ಕರುಣರಸವನಿಟ್ಟು ತಮ್ಮಯ ಕುಶಲವ । ಬರೆಸುವುದೈಸೆ ಮತ್ತೆ ॥
ಚರಣಕೆಮ್ಮಿಂದ ವಾರ್ಷಿಕದೊಳು ಕೈಕೊಂಬ । ಕರವ ನಾ ಕಳುಹಿರ್ಪೆನು ॥೧೫೧॥

ಹರುಷದಿ ಸ್ವೀಕಾರಗೈದು ಕಾರುಣ್ಯದಿ । ಬರೆಸುವುದುತ್ತರವ ॥
ಹೊರತು ಮಿಕ್ಕಾದತಿಶಯಗಳ ಕಾಣೆನು । ವಿರಚಿಪ ಬಿನ್ನಹವು ॥
ಈ ರೀತಿ ಬರೆದಿಹ ಲೇಖನಂಗಳ ನೋಡಿ । ಚಾರರೊಡನೆ ಮಂತ್ರಿಯು ॥
ಪೋರನ್ಯಾರೈ ಸುತಹೀನ ಕುಳಿಂದನು । ಭೋರನರುಹಿರೆನಲು ॥೧೫೨॥

**ರಾಗ ಮುಖಾರಿ ಏಕತಾಳ**

ಕೇಳು ಕೇಳಯ್ಯ ಸಚಿವರಾಯ । ಪೇಳ್ವೆವು ಜೀಯ ।
ಕೇಳು ಕೇಳಯ್ಯ ಸಚಿವರಾಯ ॥ಪ॥

ಧಾರಿಣೀಪಾಲ ಕುಳಿಂದನು । ಮೃಗಬೇಟೆಗೆಂದು ।
ಸಾರಿದ ಮುದದಿ ಪುಣ್ಯಾತ್ಮಕನು ॥
ಘೋರ ಕಾನನದೊಳು ಬಾಲಕನೋರ್ವನು ।
ಚೀರಿಚೀರಳುತಿರೆ ನಾಲಿಗೆಯಿಂದಲಿ ।
ವಾರಿಜಾಕ್ಷನ ದಿವ್ಯನಾಮವ ಸ್ಮರಿಸುತ ।
ಸೂರಿಯನಂದದಿ ಪ್ರಭೆ ಶೋಭಿಸುತಲಿ ॥೧೫೩॥

ಚರಣದಂಗುಲಿ ಖಂಡಿಸಿರಲು । ಧರೆಯೊಳೆಲ್ಲ ।
ಸುರಿದು ರಕ್ತವು ಪರಿವುತಿರಲು ॥
ಧರಣಿಪನಾತನ ಕಂಡತಿ ಪ್ರೇಮದಿ ।

ತರಳನ ತಂದತಿ ಸ್ನೇಹದಿ ಸಲಹುತ ।
ಲಿರುತಿರಲೀಚೆಗೆ ಚಂದನ ನಗರದ ।
ದೊರೆತನವಾತಗೆ ಇತ್ತಿಹ ಸುಖದೊಳು ॥೨೫೪॥

**ವಾರ್ಧಕ**
ಕೇಳಿ ವಿಸ್ಮಿತನಾದನಾ ದುಷ್ಟಬುದ್ಧಿ ನಾಂ ।
ಪಾಳಡವಿಯೊಳ್ ಪಸುಳೆಯಂ ಕೊಂದು ಬಹುದೆಂದು ।
ಹೇಳಿದರೆ ಚಂಡಾಲರಂದುಳುಹಿ ಬಂದಿರ್ಪರೆಂದು ತನ್ನೊಳಗೆ ತಿಳಿದು ॥
ತಾಳಿದಂ ದ್ವೇಷಮಂ ಚಿತ್ತದೊಳ್ ಪೊರಗೆ ಕರು ।
ಣಾಳುಗಳ ತೆರದೊಳಾ ಚಾರಕರ ಮನ್ನಿಸಿ ನಿ ।
ಜಾಲಯದೊಳಿಡಿಸಿದಂ ಶಶಿಹಾಸ ಕಳುಹಿರ್ದ ಸಕಲ ಸಿರಿವಸ್ತುಗಳನು ॥೨೫೫॥

೫೫

**ರಾಗ ಭೈರವಿ ಝಂಪೆತಾಳ**
ಇಂದುಹಾಸನ ದೂತರುಪವಾಸವಿರಬಾರ ।
ದೆಂದು ಬಾಣಸಿಯವರ ಕರೆಸಿ ॥
ಚಂದದಿಂ ಷಡ್ರಸದ ಭೋಜ್ಯಗಳನಣಿಮಾಡಿ ।
ಸೆಂದನೂಟಕೆ ಏಳಿರೆನುತ ॥೨೫೬॥

ಕರೆಯೆ ಬಹು ಪಾಪ ಏಕಾದಶಿಯೊಳ್ ಭೋಜನಕೆ ।
ಕರುಣಿಪುದು ಈ ದಿನದೊಳೆಮ್ಮ ॥
ಹರಿಯ ಪಾದೋದಕವು ಹೊರತು ಬೇರಿಲ್ಲೆಮಗೆ ।
ಬರಿದೆ ಪೀಡಿಸಬೇಡವೆನಲು ॥೨೫೭॥

ಎಂದಿನಂತಿಲ್ಲದೆ ಕುಳಿಂದ ಗರ್ವಿತನಾದ ।
ನಿಂದ ಸೊಕ್ಕಿದ ಭೃತ್ಯರಿವರು ॥
ತಂದು ಕಾರಾಗಾರದೊಳ್ ನಿಗಳಮಂ ಪೂಡಿ ।
ಬಂಧಿಸುವೆನೆನುತಿರಲ್ಕಿವರು ॥೨೫೮॥

ಕಷ್ಟವೇತಕೆ ಜೀಯ ಹರಿವಾಸರವ್ರತವು ।
ಭ್ರಷ್ಟರಾದಪೆವೆಂಬ ಭಯಕೆ ॥
ಮೃಷ್ಟಾನ್ನವೊಲ್ಲೆವೆಂದಿರ್ದೆವಲ್ಲದೆ ಬೇರೆ ।
ಅಟ್ಟಹಾಸಗಳಿಲ್ಲವೆಮಗೆ ॥೨೫೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಒಳ್ಳಿತಾದುದೆನುತ್ತ ಸಚಿವನು । ಖುಲ್ಲರಿವರೊಳಗೇಕೆ ಕ್ರೋಧವು ।
ಸಲ್ಲದೆನಗೆನುತವರನಾ ದಿನ । ಉಳುಹಿಕೊಂಡು ॥೧೬೦॥

ಇಷ್ಟಭೋಜ್ಯವ ಗೈಸಿ ಮರುದಿನ । ದುಷ್ಟಬುದ್ಧಿಯು ಚರರಿಗುಣಿಸುತ ।
ಹೃಷ್ಟಮಾನಸರಾಗಿ ಕಳುಹಿದ । ಪಿಂದಕವರ ॥೧೬೧॥

ತರಳ ಮದನನ ಕರೆದು ಪೇಳಿದ । ತೆರಳುವೆನು ನಾನೀಗ ಚಂದನ ।
ಪುರಕೆ ನಾ ಬರುವರೆಗೆ ರಾಜ್ಯವ । ವಹಿಸು ನೀನು ॥೧೬೨॥

ಎಂದು ನೇಮವನಿತ್ತು ಸಚಿವನು । ಅಂದು ಪೊರಮಡಲಾಗ ಕಾಣುತ ।
ನಂದನೆಯು ವಿಷಯೆ ಬಂದು ಪಿತನಿಗೆ । ನಮಿಸಲಾಗ ॥೧೬೩॥

**ರಾಗ ತುಜಾವಂತು ಝಂಪೆತಾಳ**

ಬಾರೆ ಸುಕುಮಾರಿ ಗುಣಶೀಲೆ ವೈಯಾರೆ ।
ನೀರಜಾಂಬಕಿ ಬಂದುದೇಕೆ ಶೃಂಗಾರೆ ॥
ನಾರಿಯರ ಜೊತೆಯಗಲುವವಳಲ್ಲ ನೀರೆ ।
ಕೀರವಾಣಿಯೆ ಮೌನವೇನು ನೀನುಸಿರೆ ॥೧೬೪॥

ಅರಿಕೆ ಮಾಡುವೆ ತಾತ ನಡು ಮಧ್ಯಾಹ್ನದೊಳು ।
ವಿರಚಿಸಲು ಭೋಜನವ ಹಿತವಹುದು ಕೇಳು ॥
ತೊರೆದು ಸಾಯಾಹ್ನದೊಳು ಭುಜಿಸೆ ದೇಹದೊಳು ।
ಪರಿತೋಷವಹುದುಂಟೆ ನೋಡು ಕರುಣದೊಳು ॥೧೬೫॥

ತರಳೆ ನಿನ್ನಯ ಮನವನರಿತೆ ಲಗ್ನವನು ।
ವಿರಚಿಸದೆ ಸರಿಯಾದ ಕಾಲದೊಳು ನಾನು ॥
ಮರೆತೆನೆಂಬುದಕಾಗಿ ಒರೆಯುವೆ ನೀನು ।
ಸರಿಯಾದ ವರನನ್ನು ಹುಡುಕಿ ತಹೆನಿನ್ನು ॥೧೬೬॥

**ಭಾಮಿನಿ**

ತರಳೆಯನು ತಕ್ಕೈಸಿ ಸಚಿವನು ।
ತೆರಳುವೆನು ನಾನೀಗ ಚಂದನ ।
ಪುರಕೆ ತ್ವರೆಯಲಿ ಬರುವೆ ಸೈರಿಸು ಸೈರಿಸಾವರೆಗೆ ॥
ಮೆರೆವ ನಿನ್ನಯ ರೂಪಿಗಿಮ್ಮಡಿ ।
ಪರಮ ಸುಂದರ ವರನ ತರುವೆನು ।
ತೆರಳು ಒಳಗೆನ್ನುತ್ತ ಮದನನ ಕರೆಯುತಿಂತೆಂದ ॥೧೬೭॥

**ರಾಗ ಸುರುಟಿ ಏಕತಾಳ**

ತರಳನೆ ಕೇಳೀಗ । ಚಂದನ । ಪುರಕೈದುವೆ ಬೇಗ ॥
ತ್ವರಿತದಿ ನಿನಗೇನಾಜ್ಞೆಯ ಬರೆವೆನೊ । ವಿರಚಿಸು ತಡಬಡ ಮಾಡದೆ ಮುದದಿಂ ॥೧೭೮॥

ಎನುತಲೆ ಸಚಿವರನು । ತೇಜಿಯ । ಘನತೆಯೊಳೇರಿದನು ॥
ದಿನಮಧ್ಯಾಹ್ನದ ಪಯಣದಿ ಕಂಡನು । ಮನವನು ತೋಷಿಪ ಚಂದನಾವತಿಯನು ॥೧೭೯॥

ಸಾಲು ಸಾಲಿನೊಳೆಸೆವ । ರತ್ನದ । ನೀಲಮಾಣಿಕ ಗೃಹವ ॥
ಏಳು ಸುತ್ತಿನ ಕೋಟೆ ಹೊಸತಾಗಿ ರಚಿಸಿದ । ಕಾಲುವೆ ಕೊಳ ಕಾಸಾರವ ಕಾಣುತ ॥೧೮೦॥

ದುರುಳ ಕುಳಿಂದಕನು । ಸೊಕ್ಕಿದ । ತರಳನ ತಂದಿವನು ॥
ಕೊರಳನರಿದು ನಾ ಸೆಳೆಕೊಂಬುವೆನೀ । ಪುರವನೆನುತಲಾ ಸಚಿವನು ಬರುತಿರೆ ॥೧೮೧॥

ಶಶಿಹಾಸನು ಮುದದಿ । ಸಭೆಯೊಳ । ಗೆಸೆದಿರೆ ವಿಷ್ಟರದಿ ॥
ವಸುಧೆಯೊಳೆರಗುತ ಚಾರರು ಪೇಳ್ದರು । ಎಸೆವ ದ್ವಾರದಿ ದುರ್ಮತಿ ಬಂದಿರುವುದ ॥೧೮೨॥

**ರಾಗ ಭೈರವಿ ಅಷ್ಟತಾಳ**

ಚರರೆಂದ ನುಡಿ ಕೇಳುತ್ತ । ಶಶಿಹಾಸನು । ತ್ವರಿತದಿ ಪೊರಮಡುತ ॥
ಧೊರೆ ಕುಳಿಂದಕ ಸಹ ಕಪ್ಪ ಕಾಣಿಕೆ ಗೊಂಡು ।
ಹರುಷದೊಳಿದಿರು ಬಂದು ॥೧೮೩॥

ಎರಗುತ್ತಲುಭಯರಾಗ । ಕಾಣಿಕೆಯಿತ್ತು । ಕರೆತಂದರೊಳಗೆ ಬೇಗ ॥
ಮೆರೆವ ಸಿಂಹಾಸನದೊಳಗೆ ಕುಳ್ಳಿರಿಸುತ್ತ ।
ಪರಿಯ ಕೇಳ್ದ ಕುಳಿಂದನು ॥ ॥೧೮೪॥

ಸ್ವಾರಿ ಬಲ್ವಪರೂಪದಿ । ಚಿತ್ತೈಸಿದ । ಕಾರಣವೇನ್ ಜವದಿ ॥
ಭೂರಿ ತೋಷಗಳಾಯ್ತು ಧರಣಿಪ ಪ್ರಜೆ ಪರಿ ।
ವಾರಗಳ್ ಸುಕ್ಷೇಮವೆ ॥೧೮೫॥

ಎನೆ ಕೇಳಿ ಸಚಿವರನು । ಕ್ಷೇಮವು ಸರ್ವ । ಜನರೀಗ ಕೇಳು ನೀನು ॥
ತನಯನ ಪಡೆದುದ ಕೇಳಿ ಬಂದೆನು ನೋಳ್ಪ ।
ಮನದೊಳ್ ಕುಳಿಂದಕನೆ ॥೧೮೬॥

ತರಳ ನೀತನು ವನದಿ । ಸಿಕ್ಕಿದನನ್ನು । ಕರತಂದೆನತಿ ಮೋಹದಿ ॥
ಧರೆಯ ಪಟ್ಟವಗೈದು ಹರುಷದೊಳಿರುವೆನು ।
ಕರುಣದಿ ಸಲಹುವುದು ॥೧೮೭॥

ಎಂದು ಕುಳಿಂದಕನು । ವಂದಿಸುತಾಗ । ಲಿಂದುಹಾಸಾಖ್ಯನನ್ನು ॥
ಚಂದದಿ ಸಚಿವನ ಕರಕೆ ಕೈಪಿಡಿಸಲು ।
ಮಂದಮತಿಯು ಮನದಿ ॥೧೭೮॥

**ವಾರ್ಧಕ**
ಘಾಡಿಸಿದ ನೃಪಲಕ್ಷಣಂಗಳಿಂ ಮೆರೆಯುವನ ।
ನೋಡಿ ವಿಸ್ಮಿತನಾಗಿ ತನ್ನ ಮನದೋಳ್ ಪಿಂತೆ ।
ಮಾಡಿಸಿದ ಕೃತ್ಯಮಂ ನೆನೆದು ಕಾಟುಕಜನರು ಎನ್ನ ವಂಚನಗೈದರೆ ॥
ಕೂಡೆ ಮನದೋಳ್ ಮರುಗಿ ಪುಸಿನಗೆಯ ನಗುತ ಕೊಂ ।
ಡಾಡಿ ಮನ್ನಿಸಿ ಎನಗೆ ನಿನ್ನ ಸುತನಂ ಕಂಡು ।
ಮೂಡಿದುತ್ಸಹವೆಂದನಾ ದುಷ್ಟಬುದ್ಧಿ ಕಪಟೋಕ್ತಿಯಿಂದಲಿ ನೃಪತಿಗೆ ॥೧೭೯॥

**ರಾಗ ಸಾರಂಗ ಅಷ್ಟತಾಳ**
ಕೇಳು ಕುಳಿಂದ ನೀನು । ಪುಣ್ಯಾತ್ಮನೆಂ । ದ್ಹೇಳುವೆ ಮುದದಿ ನಾನು
ಬಾಲನು ಗುಣವಂತ ಸಾತ್ತ್ವಿಕನೀತನು ।
ಪೇಳುವೆ ನುಡಿಯೊಂದನು । ಈತನೊಳ್ ನಾನು ॥೧೮೦॥

ಶಶಿಹಾಸ ಬಾರೊ ನೀನು । ಕಾರ್ಯವನೊಂದ । ನುಸಿರುವೆ ನಿನಗೆ ನಾನು ।
ಕುಶಲಪತ್ರವನೊಂದ ಬರೆದೀವೆ ಗುಟ್ಟಿನೊ ।
ಳಸಮ ವಿಕ್ರಮಿ ಕೊಳ್ಳಯ್ಯ । ನೀ ಕೇಳಯ್ಯ ॥೧೮೧॥

ತೆರಳಿ ಎನ್ನಯ ಪುರಿಗೆ । ಪತ್ರವನಿದ । ತ್ವರೆಯೊಳು ಮದನನಿಗೆ ।
ಪರರರಿಯದ ತೆರವಿತ್ತು ಬಾರೀ ಕ್ಷಣ ।
ನಿರುವೆ ನಾನಿಲ್ಲೆಂದನು । ಮಂತ್ರೀಶನು ॥೧೮೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಪ್ರೀತಿಯಿಂ ಪೇಳಿರ್ದ ಸಚಿವನ । ಮಾತು ನಿಶ್ಚಯವೆಂದು ಕೈಗೊಂ ।
ಡಾತತೂಕ್ಷಣ ಮುದ್ರಿಸಿದ ಲೇ । ಖನವ ಕೊಂಡು ॥೧೮೩॥

ತಂದೆಯಡಿಗೊಂದಿಸುತ ಪರಕೆಯ । ಗೊಂಡು ಮಾತೆಗೆ ನಮಿಸಲಾಕೆಯು ।
ಕಂದನನು ಬಿಗಿಯಪ್ಪಿ ಪಯಣವಿ । ದೆಲ್ಲಿಗೆನಲು ॥೧೮೪॥

ವರ ಸಚಿವನಾಜ್ಞೆಯಲಿ ಕುಂತಳ । ಪುರಕೆ ಪೋಗುವೆ ಬಹೆನು ತ್ವರೆಯಲಿ ।
ಕರುಣದಿಂದಪ್ಪಣೆಯ ಪಾಲಿಸಿ । ರೆನಲಿಕಾಗ ॥ ॥೧೮೫॥

ಸಿರಿವರನ ದಯದಿಂದ ಕಂಟಕ । ಬರದ ತೆರನಹುದಯ್ಯ ವೇಗದಿ ।
ಪುರಕೆ ಬಾರೆಂದೆನುತ ಪರಸುತ । ಲಾಗ ಕಳುಹೆ ॥೧೮೬॥

ಹರಿಶರಣ ಹರಿಯೇರಿ ತ್ವರೆಯಲಿ | ಪುರವ ಪೊರಮಟ್ಟೋರ್ವ ವೇಗದಿ |
ತೆರಳಿ ಕುಂತಳಪುರದೊಳುಪವನ | ದೊಳಗೆ ಇಳಿದ ||೧೮೭||

ರಾಜಿಪುದ್ಯಾನದಲಿ ನೃಪಸುತ | ತೇಜಿಯನು ಕಟ್ಟಿದನು ತರುವಿಗೆ |
ರಾಜಿಸುವ ನಿರ್ಮಲ ಸರೋವರ | ದೊಳಗೆ ಮಿಂದು || ||೧೮೮||

ಕಮಲಪುಷ್ಪವ ಕೊಯ್ದು ಭಕ್ತಿಯೊಳ್ | ಕಮಲನಯನಾರ್ಚನೆಯಗೈಯುತ |
ಕಮಲನಾಭನ ಭಕ್ತ ಪಾಥೇ | ಯವನು ಭುಜಿಸಿ ||೧೮೯||

**ಭಾಮಿನಿ**

ತರಿದು ಚಿಗುರನೆ ಹಾಸಿ ಮುರಹರ |
ಚರಣವನು ಧ್ಯಾನಿಸುತ ಮಲಗಲು |
ತ್ವರಿತದಿಂ ಬಂದಿರುವ ಮಾರ್ಗಾಯಸದಿ ನಿದ್ರೆಗಳು ||
ಭರದಿ ಮುಸುಕಲಿಕಿತ್ತ ದುರ್ಮತಿ |
ಯರರೆ ಪಾಪಿ ಕುಳಿಂದನೆನ್ನಯ |
ಸ್ಮರಣೆಯಿಲ್ಲದೆ ಸುತನ ಗರ್ವದಿ ಮಾಡಿಕೊಂಡೆಯಲಾ ||೧೯೦||

**ರಾಗ ಭೈರವಿ ಅಷ್ಟತಾಳ**

ಎಲೆ ಕುಳಿಂದಕನೆ ಕೇಳು | ಭೇದಿಸಿ ನಿನ್ನ |
ನೆಲನ ಕೊಂಬುವೆನು ತಾಳು ||

ಒಲಿದು ನಿನಗೆ ರಾಜ್ಯವಿತ್ತು ಕಾಪಾಡಿದೆ | ಸಲಿಗೆ ಬಂದುದೆ ಇನಿತು ||೧೯೧||
ನಿನ್ನಾಧೀನಗಳಲ್ಲದೆ | ಮಿಕ್ಕಿದುದೇನು |
ಮುನ್ನ ನೀನ್ಯೋಚಿಸದೆ ||
ಗನ್ನಘಾತಕ ಮಾತನ್ಯಾತಕೆಂಬುವೆ ನಿನ್ನ | ಪನ್ನಿಗಳ್ಯಾಕಿನಿತು ||೧೯೨||

ಯಾರ ಮಾತಿಲಿ ಕೋಟೆಯ | ಕಟ್ಟಿಸಿ ನೀನೀ |
ಪೋರನ ಕೈಕೊಂಡೆಯ ||
ಆರಾಮಕೂಪ ಛತ್ರಾದಿಗಳಿಡಿಸಿದ | ಕಾರಣವೇನೆಂದನು ||೧೯೩||

ನರಹರಿ ಕರುಣಿಸಿದ | ತೆರದಿ ಗೈದೆ |
ಒರೆಯುವದ್ಯಾತಕದ ||
ಬರಿದೆ ಎನ್ನೊಳು ನೀ ಕೋಪಿಸೆ ಎಂದಿಗು | ಸರಿಯುವನಲ್ಲ ಹಿಂದೆ ||೧೯೪||

**ರಾಗ ಶಂಕರಾಭರಣ ಮಟ್ಟೆತಾಳ**

ಕರದಿ ಧನುವ ಕೊಂಡು ದುಷ್ಟ | ಬುದ್ಧಿ ರೋಷದಿಂದಲಾಗ |
ದುರುಳ ನಿಲ್ಲು ನಿನ್ನ ಕರುಳ | ನುಗಿವೆನೆಂದನು ||೧೯೫||

ಧುರಸಮರ್ಥನಹುದೊ ನಿಲ್ಲು । ಯೆನುತಲಾ ಕುಳಿಂದ ರೋಷ ।
ವೆರೆದು ಶರವ ಬಿಟ್ಟ ಮಂತ್ರಿ । ವರಗೆ ಭರದಲಿ ॥೧೯೭॥

ಬರುವ ಶರವ ತರಿದು ಸಚಿವ । ನುರುತರಾಸ್ತ್ರವೆಸೆಯೆ ನೃಪನು ।
ಧರೆಯೊಳದರ ಚೂರ್ಣಗೈದು । ಕೆಡಹಲಾ ಕ್ಷಣ ॥೧೯೭॥

ದುಷ್ಟಬುದ್ಧಿ ನೃಪನ ಧನುವ । ತಟ್ಟನಾಗ ಕಡಿಯೆ ಗದೆಯೊ ।
ಳಟ್ಟಹಾಸದಿಂದ ಪೊಯ್ಯೆ । ಸೆಳೆದನದರನು ॥೧೯೮॥

ಅಸಿಯ ತಿರುಹುತಾಗ ನೃಪನು । ಎಸೆಯೆ ಸಚಿವನಂಗಕದರ ।
ಕಸಿದು ಬಿಸುಟ ಕ್ರೋಧದಿಂದ । ಮಂತ್ರಿಶೇಖರ ॥೧೯೯॥

ಮಲ್ಲಯುದ್ಧಕಾಗಿ ನಿಲಲು । ಖುಲ್ಲ ತಾಳು ತಾಳೆನುತ್ತ ।
ಮೆಲ್ಲನವನ ಸೆರೆಯ ಪಿಡಿದ । ಸಚಿವನಾಕ್ಷಣ ॥೨೦೦॥

**ಭಾಮಿನಿ**

ಉರಿಯ ಸೂಸುತ ಸಚಿವನಾತನ ।
ಭರದಿ ಕಾರಾಗೃಹದೊಳಿಡಿಸುತ ।
ಪರಮವಿಭವದಿ ಚಂದನಾವತಿಪುರವ ತನ್ನೊಶದಿ ॥
ಇರಿಸಿ ಬೆದರಿಹ ಜನರಿಗಭಯವ ।
ಕರುಣಿಸುತಲೇಕಾಧಿಪತ್ಯದಿ ।
ಮೆರೆದಿರಲು ಶಶಿಹಾಸ ನಿದ್ರೆಯೊಳಿರುವ ಕಾಲದಲಿ ॥೨೦೧॥

**ರಾಗ ಮಾರವಿ ಏಕತಾಳ**

ಇತ್ತಲು ಕುಂತಳಪತಿ ಚಿತ್ರಧ್ವಜ । ನತ್ಯಾನಂದದೊಳು ॥
ಇತ್ತಿರೆಯೋಲಗಕೈತಂದಿಹ ಗುರು । ಗಾಲವಗೊಂದಿಸುತ ॥೨೦೨॥

ಕರುಣೆಗಳಾಲಿಸಿ ಹಿಂದೆತಾವರುಹಿದ । ತೆರದೊಳಗೆನಗೀಗ ॥
ತರಳೆಯೋರ್ವಳು ಜನಿಸಿರ್ಪಳು ಬಲ್ಲಿರಿ । ವರುಷ ಷೋಡಶವಾಯ್ತು ॥೨೦೩॥

ಬಾಲಕಿ ಯೌವನದೊಳಗಿಹ ಚಂಪಕ । ಮಾಲಿನಿಯೆಂಬಳಿಗೆ ॥
ನೀಲನಿಭಾಂಗನ ಕಿಂಕರ ಪತಿಯೆಂ । ದ್ಹೇಳಿದಿರೈ ಎನಗೆ ॥೨೦೪॥

ಅರಿಯೆನು ಎಲ್ಲಿಹನೆಂಬುದ ಗುರುವರ । ನೊರೆಯಬೇಹುದು ದಯದಿ ॥
ತರಳೆಗೆ ಪರಿಣಯಕಾಲಗಳಾಯಿತು । ಚರಣಕೆ ವೇದ್ಯವಿದೆ ॥೨೦೫॥

**ರಾಗ ಸಾಂಗತ್ಯ ರೂಪಕತಾಳ**

ಧರಣಿಪಾಲಕ ತಾಳು ನಾಲ್ಕೆಂಟು ದಿನಗಳೊಳ್ ।

ತರಳೆಗೆ ಪರಿಣಯವಹುದು ||
ಹರಿಭಕ್ತ ಕೋಮಲಕಾಯ ಸದ್ಗುಣವಂತ |
ಹರಿತಹನಿಲ್ಲಿಗೆ ಕೇಳು ||೨೦೬||

ಅರಿತು ನಾ ಪೇಳುವೆ ತ್ವರೆಯೊಳಾತನಿಗಿತ್ತು |
ಧರೆಯ ಮೂರ್ಧಾಭಿಷೇಕವನು ||
ವಿರಚಿಸಲದು ಕೀರ್ತಿಯಹುದು ನಿನ್ನಂದದೊ |
ಳಿರರು ಪುಣ್ಯಾತ್ಮರೀ ಜಗದಿ ||೨೦೭||

ಇನಿತುಸಿರುತ ಮುನಿ ತೆರಳಲು ಜನಪನು ||
ಘನ ತೋಷದೊಳಗಿರಲಿತ್ತ ||
ಜನಪಕುಮಾರಿ ಚಂಪಕಮಾಲಿನಿಯ ಸಖಿ |
ವನಿತೆ ಮಂತ್ರಿಯ ಸುತೆ ವಿಷಯೆ ||೨೦೮||

ಬಂದಳು ಧರಣಿಪಾತ್ಮಜೆಯನ್ನು ಕಾಣುತ್ತ |
ಲೆಂದಳು ವಿನಯೋಕ್ತಿಯಿಂದ ||
ಚಂದದಿ ಜಲಕ್ರೀಡೆಯಾಡುವ ವನದೊಳು |
ಇಂದುಮುಖಿಯೆ ಏಳೆಂದಳು ||೨೦೯||

**ರಾಗ ಖಮಾಚು ಏಕತಾಳ**
ಕಾಳಾಹಿವೇಣಿ ಕೇಳೆ | ವಾಸಂತಿಕ | ಕಾಲಂಗಳೀಗ ಶೀಲೆ ||
ಏಳು ವಿಷಯೆ ನಿನ್ನ ಜೊತೆಯೊಳು ಬರುವೆನು |
ಬಾಲಕಿಯರ ಕರೆಯೆ | ಬೇಗನೆ ಪೋಗಿ |
ಬಾಲಕಿಯರ ಕರೆಯೆ ||೨೧೦||

ಧರಣಿಪಾತ್ಮಜೆಗಾಗಿ | ವಿಷಯೆ ಬೇಗ | ತರಳೆಯರನು ನೆರಹಿ |
ಸರಸಸುಗಂಧದ ಪರಿಮಳ ಝೋಂಪಿಲಿ |
ಪೊರಟರು ವಿಭವದಲಿ | ಕಡೆಗಣ್ಣಿನ |
ತಿರುಹಿನ ನೋಟದಲಿ ||೨೧೧||

ಮಂದಗತಿಗಳಿಂದಲಿ | ಸೊಕ್ಕಿದ ಕರಿ | ಯಂದದೊಳೊಲಿಯುತಲಿ ||
ಚಂದಿರಮುಖಿಯರ | ನಂದೀಕ್ಷಿಸಿ ವಿಟ |
ಮಂದಿಗಳ್ ಮೈಮರೆಯೆ | ಚೇತನಗೊಂಡು |
ಕುಂದಿ ಮೌನವತಳೆಯೆ ||೨೧೨||

**ಕಂದ**
ಸರಸಿಜನೇತ್ರೆಯರೀ ಪರಿ |

ಹರಿತಂದುಪವನಮಧ್ಯದಿ ಪೊಳೆಯುವ ನಿರ್ಮಲ ||
ಸರಸಿಯನಿಳಿಯುತಲೆಲ್ಲರು |
ಕರದಿಂ ಜಲಗಳನೆರಚುತಲಾಡಿದರಾಗಳ್ ||೨೧೩||

**ರಾಗ ಮುಖಾರಿ ಏಕತಾಳ**
ಆಡಿದರಂದು ಜಲಕೇಳಿಯನು | ಸುದತಿಯರೆಲ್ಲ |
ರಾಡಿದರಂದು ಜಲಕೇಳಿಯನು || ಪ ||

ಪಾಡಿ ಕೋಕಿಲಗಾನಂಗಳನು | ಚೆಲುವೆಯರಾಗ |
ನೋಡೀ ಕಮಲಪುಷ್ಪಂಗಳನು ||
ಮೂಡಿದ ಕುಚಕದನಾಲಿಂಗಿಸುತಲಿ |
ಕೂಡೆ ಬಗಸೆ ಜಲವೀಡಾಡುತ ಬಲು |
ಗಾಡಿಗಾರ್ತಿಯರೊಬ್ಬರೊಬ್ಬರನಪ್ಪುತ |
ಆಡಿದ ಪರಿಗಳನಿನ್ನೇನೆಂಬೆನು ||೨೧೪||

**ರಾಗ ಕೇದಾರಗೌಳ ಅಷ್ಟತಾಳ**
ಇನಿತು ಪರಿಯೊಳೆಲ್ಲರಾಡಿ ಮೇಲಕೆ ಎದ್ದು |
ಘನವೇಗ ಮಡಿಯುಡುತ ||
ವನದೊಳಗರಳಿದ ಸುಮಗಳ ಕೊಯ್ಯುತ್ತ |
ವನಿತೆಯರಿರಲಾಗಳು ||೨೧೫||

ಬಂದಳೋರ್ವಳೆ ವಿಷಯೆಯೊಂದು ಕಡೆಗೆ ಪುಷ್ಪ |
ಕೆಂದತಿ ಹರುಷದಿಂದ ||
ಚಂದದಿ ತಳಿರೊಳು ಮಲಗಿರ್ಪ ಪುರುಷನ್ಯಾ |
ರೆಂದು ಹತ್ತಿರ ಬಂದಳು ||೨೧೬||

ನೋಡಿ ಹಿಗ್ಗಿದಳಾಗ ನೃಪಕುಮಾರನ ಕಂಡು |
ಪಾಡಿ ಪೂರ್ವದ ಪುಣ್ಯವ ||
ಗಾಢ ನಿದ್ರಿಪನೀತನ್ಯಾರು ಲಕ್ಷಣದೊಳು |
ರೂಢಿಪಸುತನಹುದು ||೨೧೭||

**ರಾಗ ಸಾವೇರಿ ಆದಿತಾಳ**
ಸ್ಮರವಸಂತರ ಪೋಲುವ | ನೋಡಲು ಮತ್ತೆ |
ಸುರಪಜನಂತೆ ಕಾಂಬುವ || ಪ ||

ಪರಮ ಸುಂದರ ನಳಕೂಬರನಂದದೊ |
ಳಿರುವನೀತನ ಮಾತೆ ಪುಣ್ಯವೇನನೆಂಬೆನು || ಅ ಪ ||

ಎನ್ನ ಪಡೆದ ತಾತನು । ಚಂದನಾವತಿಗೆ ।
ಮೊನ್ನೆ ದಿವಸಪೋದನು ॥
ಎಣ್ಣ ಬೇಡೆಲೆ ತಕ್ಕ ವರನ ನಾ ತಹೆನೆಂದು ।
ಬಣ್ಣಿಸಿ ತೆರಳಿದ ಮನದನುಮಾನವು ॥೨೦೮॥

ವರಿಸಲೆನಗೆ ವರನ । ಕಳುಹಿರ್ಪನೇನೊ ।
ಪರಮ ಸುಂದರಕಾಯನ ॥
ಸರಿಯಿದೆಂದೆನುತಲಿ ವಿಷೆಯಾತನಂಗವ ।
ಪರಿಶೋಧಿಸಲು ಕಂಚುಕದಿ ಲೇಖನವ ಕಂಡು ॥೨೦೯॥

ಬಿಡಿಸಿ ಮೆಲ್ಲನೆ ನೋಡಲು । ತಂದೆಯ ಲಿಪಿಯು ।
ಒಡನೆ ಮೇಲಕೆ ತೋರಲು ॥
ಬೆಡಗಿನಿಂದದರನ್ನು ಒಡೆದು ಚಂದಿರ ಮುಖಿ ।
ಸಡಗರದಿಂದ ವಾಚನವನ್ನು ಗೈದಳು ॥೨೧೦॥

**ರಾಗ ಕಾಂಭೋಜಿ ಝಂಪೆತಾಳ**
ಸ್ವಸ್ತ್ಯಸ್ತು ಸುಕುಮಾರ । ಮದನನಿಂಗಾಶಿಷವ ।
ನಿತ್ತು ಬರೆದಿಹ ದುಷ್ಟ । ಬುದ್ಧಿಯಾಜ್ಞೆಗಳು ॥
ಮತ್ತೀಗ ಬಂದ ಶಶಿ । ಹಾಸನೆಂಬುವ ತರಳ ।
ನತ್ಯಂತಾಹಿತ ನಮಗೆ । ಮುಂದೆ ಕುಂತಳಕೆ ॥೨೧೧॥

ಅರಸನಹ ಸಾಮಾನ್ಯ । ದವನಲ್ಲ ನೀನಿವನ ।
ಪರಿಕಿಸಿದ ಕ್ಷಣದೊಳಗೆ । ಕುಲಗೋತ್ರಗಳನು ॥
ಬರಿದೇ ವಿಚಾರಿಸುತ । ಹೊತ್ತುಗಳೆಯದೆ ನೀನು ।
ಭರದಿ ವಿಷಮಂ ಕೊಟ್ಟ । ರದು ವಿಹಿತವೆನಗೆ ॥೨೧೧॥

ತರಳ ನೀನೆನ್ನ ಸುತ । ನಾದಡೀ ಕಾರ್ಯಗಳ ।
ತ್ವರಿತದೊಳು ಗೆಯ್ಯುತಿಹೆ । ಯೆಂದು ನಂಬಿರುವೆ ॥
ಸರುವಥಾ ಕಾಲಹರ । ಣವ ಗೆಯ್ಯ ಬೇಡವೈ ।
ಬರೆದಿರುವೆನಾಶಿಷದ । ಪತ್ರ ಸುಕುಮಾರ ॥೨೧೨॥



**ರಾಗ ಮಧುಮಾಧವಿ ತ್ರಿವುಡೆತಾಳ**
ಈತನೆಮಗೆ ಮಹಾಹಿತನು ಮೇ । ಣೀತನರಸಹನೆಮ್ಮ ಧರಣಿಗೆ ।
ಈತನಲಿ ಕುಲಶೀಲವಿದ್ಯವ । ನರಸಬೇಡೆಂದಿರುವುದು ॥೨೧೪॥

ಭರದಿ ವಿಷಮಂ ಕೊಟ್ಟು ಕಾರ್ಯವ । ತರಳ ನೀ ನೆರವೇರಿಸೆನುತಲಿ ।
ಬರೆದಿಹನು ಮತ್ತಿತನು ತ್ವರೆಯಲಿ । ಹಸ್ತದೋಷಗಳಿಂದಲಿ ॥೨೧೫॥

ಬರೆದ ವಿಷಮಂ ಎಂಬ ವಚನದಿ । ಕರದ ದೋಷಗಳಿಂದ ಯ ಎಂ ।
ದಿರುವದಕೆ ಬದಲಾಗಿ ಮ ಎಂ । ತಿರಲು ಬಹುದಿದು ತಪ್ಪಿದೆ ॥೨೧೬॥

ಎನುತ ತನ್ನಯ ಕಣ್ಣ ಕಾಡಿಗೆ । ಘನ ಜವದಿ ತೆಗೆದಾಗ ಬಾಲೆಯು ।
ವಿನಯದಿಂ ಮ ಎಂಬ ಲಿಪಿಯನು । ತಿದ್ದಿದಳು ಯ ಎನ್ನುತ ॥೨೧೭॥

**ಭಾಮಿನಿ**

ಸರಸಿಜಾಕ್ಷಿಯು ಲೇಖನವ ತಿರು ।
ತಿರುಗಿ ಪರಿಸುತಲಿದ್ದ ದೋಷವ ।
ಸರಿಪಡಿಸಿದಂತಾಯಿತೆನ್ನುತ ಮಡಿಸಿ ಕಂಚುಕದಿ ॥
ಇರಿಸಿ ಮೆಲ್ಲನೆ ಬಂದು ಸಖಿಯರ ।
ವೆರೆದು ಮಂದಿರ ಪೊಕ್ಕು ಮನದೊಳು ।
ಧರಣಿಪಾತ್ಮಜನನ್ನು ನೆನೆಯುತಲಿರಲು ಶಶಿಹಾಸ ॥೨೧೮॥

**ರಾಗ ಜಂಜೂಟಿ ಅಷ್ಟತಾಳ**

ಪರಿತ್ಯಜಿಸುತ ನಿದ್ರೆಗಳನು । ಮೇಲ್ । ಪರಿಕಿಸಲಾಗ ಭಾಸ್ಕರನು ॥
ಸರಿಯಲಸ್ತಮಯಕೆ ಸರಸಿಗೈತಂದಾಗ ।
ಕರಚರಣ ತೊಳೆದರ್ಘ್ಯವೀಯುತ ।
ಹರಿಯ ನೆನೆಯುತ ಹಯವನೇರ್ದನು ॥೨೧೯॥

ಹರಿಯೇರಿ ಬರುವನ ಕಂಡು । ಆ । ಪುರಜನರಾಶ್ಚರ್ಯಗೊಂಡು ॥
ಪರಮಪುರುಷನೀತನ್ಯಾರೆಂದು ಸರ್ವರು ।
ಹರುಷದೊಳು ನೋಡುತಿರೆ ಸಚಿವನ ।
ತರಳನಿಪ್ಪೆಡೆಗಾಗಿ ಬಂದನು ॥೨೨೦॥

ಚರನೋರ್ವ ಬಾಗಿಲೊಳಿರಲು । ಕಾಣು । ತ್ತೊರೆದ ದುರ್ಮತಿಯ ಬಾಲನೊಳು ।
ಹರಿತಂದಿರ್ಪನು ದ್ವಾರದೊಳಗೆ ಚಂದನಪುರ ।
ದರಸನಹ ಶಶಿಹಾಸನೆಂದೀ ।
ಗರುಹಿ ವೇಗದೊಳೆಂದು ಕಳುಹಲು ॥೨೨೧॥

ಎಂದಾ ಮಾತನು ಕೇಳಿಚರನು । ವೇಗ । ದಿಂದ ಮಂತ್ರಿಜನಲ್ಲಿಗವನು ॥
ಬಂದು ಸಾಷ್ಟಾಂಗದಿ ಚಂದನಾವತಿ ಧೊರೆ ।
ಚಂದ್ರಹಾಸನು ಭೇಟಿಗೆನ್ನುತ ।
ಬಂದು ಕಾಯ್ದಿಹ ದ್ವಾರದೊಳಗೆನೆ ॥೨೨೧॥

**ವಾರ್ಧಕ**

ದೂತನಿಂತೆನೆ ಮದನನಾಶ್ಚರ್ಯ ತಾಳುತಂ ।
ಶಾತಕುಂಭಾಲಂಕೃತಾಸನವನಿಳಿದು ಹರು ।
ಷಾತಿಶಯದಿಂ ಬಂದು ಚಂದ್ರಹಾಸನನಿದಿರ್ಗೊಳ್ಳುತತ್ಯಾದರದಲಿ ॥
ಪ್ರೀತಿಯಿಂದಪ್ಪಿ ಕರವಿಡಿದೊಡನೆ ಸಭೆಗೆ ತಂ ।
ದಾತನಂ ಕುಳ್ಳಿರಿಸಿ ಕುಶಲವೆ ಕುಳಿಂದ ಮ ।
ತ್ತಾತನರ್ಧಾಂಗಿ ಮುಂತಾದರಿಗೆ ಸುಖವಿಹುದೆ ಯಾತರಾಗಮನವೆನಲು ॥೩೩೩॥

**ರಾಗ ಕೇದಾರಗೌಳ ಝಂಪೆತಾಳ**

ಭೂಮಿಪಾಲಕ ಮುಖ್ಯರು । ಸಕಲ ಜನ । ಕ್ಷೇಮದಿಂದಿಹರೀಗಳು ॥
ಸ್ವಾಮಿ ನಿಮ್ಮಯ ತಾತನು । ಯೆನ್ನನತಿ । ಪ್ರೇಮದಿಂ ಕಳುಹಿರ್ಪನು ॥೩೩೪॥

ನೋಡೆನುತ ಪತ್ರಿಕೆಯನು । ಕೊಡಲದರ । ಗಾಢದಿಂ ವಾಚಿಸಿದನು ॥
ಕೂಡೆ ಹಿಗ್ಗುತ ಮನದಲಿ । ಶಿರವನೊಲೆ । ದಾಡಿ ಮುದದಲಿ ॥೩೩೫॥

ವಿಷಯೆ ಮೋಹಿಸುವಂದದಿ । ಕಾರ್ಯಗಳ । ನೆಸಗೆನುತಲಿದೆ ಪತ್ರದಿ ॥
ಬಿಸಜನಾಭನ ಭಕ್ತನು । ಸದ್ಗುಣನು । ಶಶಿಹಾಸನೇನೆಂಬೆನು ॥೩೩೬॥

ಹಿಂದೆ ಪಡೆದಿಹ ಪುಣ್ಯದಿ । ಮಮ ಭಗಿನಿ । ಗಿಂದಿವನು ದೊರೆತ ಭರದಿ ॥
ಚಂದವಾಯಿತು ಎನ್ನುತಾ । ಮದನ ಮುದ । ದಿಂದ ಪುಳಕಿತನಾಗುತ ॥೩೩೭॥

**ರಾಗ ಭೈರವಿ ಝಂಪೆತಾಳ**

ಇದ್ದವರನಾ ಸಭೆಯೊ । ಳಿರಿಸಿ ಶಶಿಹಾಸನಂ ।
ಗದ್ದುಗೆಗೆ ನೆಲೆಗೊಳಿಸಿ ಮದನ ॥
ತಿದ್ದಿದಕ್ಷರವೆಂದು । ತಿಳಿಯದವ ಗೋಪ್ಯದೊಳ ।
ಗೆದ್ದು ತನ್ನನುಜನಮಲನಿಗೆ ॥೩೩೮॥

ತೋರಿಸುತ ಪತ್ರವನು । ಪಿತನು ಬರೆದಿಹ ವಿಷಯ ।
ಶೂರನಹ ಶಶಿಹಾಸನಿಂಗೆ ॥
ಧಾರೆಯೆರೆಯುವುದೆಂದು । ಬರೆದಿಹನು ಪಿತನಾಜ್ಞೆ । ವಿ
ರದಾಂ ಗೈವೆನೀ ಕಾರ್ಯ ॥೩೩೯॥

ತ್ವರಿತದೊಳು ಶುಭ ಕಾರ್ಯ । ವಿರಚಿಸಲು ಬೇಕೆನುತ ।
ಪುರವ ಶೃಂಗರಗೈಸುತಾಗ ॥
ಭರದಿ ವಿಪ್ರೋತ್ತಮರ । ನುಜ್ಞೆಯೊಳಗಾ ರಾತ್ರೆ ।
ಪರಿಣಯವ ಗೈವೆ ತಾನೆಂದು ॥೩೪೦॥

ಪರಿಜನರ ಪುರಜನರ | ಸಕಲರನು ಕರೆಸಿದನು |
ಭರದೊಳಗೆ ವಂದಿಮಾಗಧರ ||
ಪರಮ ಸಂಗೀತಕರ | ಗಾಯಕರ ನರ್ತಕರ |
ಬರಿಸಿದನು ವಾದ್ಯಘೋಷಕರ ||೩೪೧||

ಮೆರೆವ ರಾಜಾಂಗಣದಿ | ಮಂಟಪವ ವಿರಚಿಸುತ |
ತರಣಿಕೋಟಿಪ್ರಭೆಯ ತೆರದಿ ||
ಇರಿಸಿದನು ದೀವಿಗೆಯ | ಭೂಸುರರ ಸಭೆಗೈದು |
ಪರಿಜನರ ಸಭೆಗಳನು ರಚಿಸಿ ||೩೪೨||

**ರಾಗ ಕೇದಾರಗೌಳ ಅಷ್ಟತಾಳ**

ಮಂಗಲ ಸ್ನಾನವ ಮಾಡಿಸಿ ವಿಷಯೆಗೆ | ಶೃಂಗರ ಗೈಸುತಲಿ ||
ಮಂಗಲ ಗೌರಿಯರ್ಚನೆಗೆ ಕುಳ್ಳಿರಿಸಿದರ್ | ಮಂಗಳಾಂಗಿಯರೆಲ್ಲರು ||೩೪೩||

ಸುದತಿಯರಾಗಳು ಮದನನುಜ್ಜೆಯೊಳ್ | ವಿಧುಹಾಸನನು ಕರೆದು ||
ಮುದದಿದೂರ್ವಾಂಕುರ ತೈಲವನೊತ್ತಿಮ | ಜ್ಜನಗೈಸೆ ವೇಗದಿಂದ ||೩೪೪||

ಕಲಶಕನ್ನಡಿಯಿಂದ ಮಂಟಪದೆಡೆಗಾಗ | ನಳಿನಲೋಚನೆಯರೆಲ್ಲ ||
ಚೆಲುವ ಮದುಮಕ್ಕಳ ತಂದು ನಿಲ್ಲಿಸಿದರು | ನಳಿನಾಕ್ಷ ರಮೆಯರಂತೆ ||೩೪೫||

**ವಾರ್ಧಕ**

ವರ ತಾರಕಾಕ್ಷಿಯೆಂತೆಂಬ ಸಚಿವನ ಪತ್ನಿ |
ಚರಣವಂ ಪ್ರಕ್ಷಾಳನಂ ಗೈಯೆ ಮದನನಾ |
ದರಿಸಿ ಮಧುಪರ್ಕಮಂ ಮಾಡಿ ಕನ್ಯಾವರಣದೊಳ್ ಕುಲಪರಂಪರೆಯನು ||
ಒರೆಯೆನಲ್ ಶಶಿಹಾಸನೆನಗೆ ವಾಮನಗೋತ್ರ |
ಮರವಿಂದನಾಭ ಪಿತ ನರಹರಿ ಪಿತಾಮಹಂ |
ಮುರಹರನೆ ಪ್ರಪಿತಾಮಹಂ ಕುಳಿಂದಕನೆನಗೆ ಗುರುವೆಂದನಾಗವರೊಳು ||೩೪೬||

**ರಾಗ ಕಲ್ಯಾಣಿ ಅಷ್ಟತಾಳ**

ಧಾರೆಯನೆರೆದನು ಮದನ | ಮುದ | ವೇರಿ ವಾದ್ಯವು ಗೀತಗಾನ ||
ಧಾರಿಣೀಸುರರಾಶೀರ್ವಚನವ ಗೈಯುತ್ತ |
ಭೋರನೆ ಮಂತ್ರಾಕ್ಷತೆಗಳ ತಳಿದರು ||೩೪೭||

ತರುಣಿಯೆಲ್ಲರು ಕೂಡಿ | ವಧೂ | ವರರಿಂಗಾರತಿಗಳ ಮಾಡಿ ||
ಅರಸಿನೆಣ್ಣೆಯ ಗೈಸಿ ವರವೀಳ್ಯವನ್ನಿತ್ತು |
ಪರಿ ಪರಿ ಶೋಭಾನಂಗಳ ಪೇಳಿ ನಲಿದರು ||೩೪೮||

**ರಾಗ ಧವಳಾರ**

ಮುತ್ತಿನ ಹಸೆಯೊಳು ಚಂದ್ರಹಾಸನನು ।
ಒತ್ತಿಲಿಕುಮಾರಿ ವಿಷೆಯನು ।
ಅರ್ತಿಯೊಳ್ ಕುಳ್ಳಿರಿಸುತ್ತಲಿ ಬಂದಿಹ ।
ಮುತ್ತೈದೆರೆಲ್ಲರು ಪಾಡಿ ವಿನೋದದಿ ।
ಮುತ್ತಿನಾರತಿಯ ಸುಳಿದರು ॥ ಶೋಭಾನೆ ॥೩೪೯॥

ತರುಣಿಯರೊಟ್ಟಾಗಿ ವಿಭವದೊಳಾಗ ।
ಅರಸಿನೆಣ್ಣೆ ವಿಷಯೆ ಕರಕಿತ್ತು ಬೇಗ ॥
ಹರಿಯ ಕಿಂಕರ ಚಂದ್ರಹಾಸನ ಗಲ್ಲಕೆ ।
ಸರಸದಿ ತಿವುರಿಸಿ ನಲಿಯುತಲೆಲ್ಲರು ।
ಹರಳಿನಾರತಿಯ ಸುಳಿದರು ॥ ಶೋಭಾನೆ ॥೩೫೦॥

ನಾರಿಕೇಳವು ಕ್ರಮುಕ ಕದಳಿಫಲವನು ॥
ಭೂರಿ ತೋಷದೊಳಾಗ ನಾಗವಲ್ಲಿಯನು ॥
ನಾರಿಯರೆಲ್ಲರು ಮಡಿಲ ತುಂಬಿಸುತಲಿ ।
ವಾರಿಜಗಂಧಿ ವಿಷಯೆಯ ಸನ್ಮಾನಿಸಿ ।
ರತ್ನದಾರತಿಯ ಬೆಳಗಿರೆ ॥ ಶೋಭಾನೆ ॥೩೫೧॥

**ವಾರ್ಧಕ**

ಈ ರೀತಿ ಲಗ್ನಮಂ ಗೈದು ಗಾಲವಮುನಿಗೆ ।
ಭೂರಿ ದ್ರವ್ಯವನಿತ್ತು ಮದನ ಸಂಪ್ರೀತಿಯಿಂ ।
ಧಾರಿಣೀಸುರ ಗೀತನಟನಗಾಯಕರಿಂಗೆ ಹಾಸ್ಯ ವೈತಾಳಿಕರ್ಗೆ ॥
ಸೇರಿರುವ ಸಕಲರನು ತರವರಿತು ಸತ್ಕರಿಸಿ ।
ಭಾರಿ ಭಂಡಾರಮಂ ಬರಿಗೈದನರೆ ಕ್ಷಣದಿ ।
ಯಾರು ಸರಿಯಿಲ್ಲಿವನ ತ್ಯಾಗಮಂ ಪೋಲುವರೆ ಧಾರಿಣಿಯೊಳೆನುತಿರ್ದರು ॥೩೫೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮದನನಾಕ್ಷಣ ಚಂದ್ರಹಾಸಗೆ । ಮದಗಜವು ಹಯ ಪಶು ಸಹಸ್ರವ ।
ವಿಧವಿಧಾಭರಣಂಗಳಿತ್ತನು । ತೋಷದಿಂದ ॥೩೫೩॥

ಧರಣಿಸುರರಿಗೆ ಭಕ್ಷ್ಯ ಭೋಜ್ಯದಿ । ಹರುಷದಿಂದುಪಚರಿಸಿ ಮಂತ್ರಿಜ ।
ಭರಿತ ದಕ್ಷಿಣೆಯಿತ್ತು ಕಳುಹಲು । ಪೊಗಳುತವರು ॥೩೫೪॥

ಕೊಟ್ಟ ದ್ರವ್ಯಗಳೆಲ್ಲ ತಮ್ಮಯ । ಬಟ್ಟೆಯೊಳು ಗಂಟಕ್ಕಿ ವಿಭವದಿ ।
ಮಟ್ಟೆಯನು ಪೊತ್ತಾಗ ಬಳಲುತ । ಪೋಗುತಿರಲು ॥೩೫೫॥

ಅನಿತರೊಳಗಾ ದುಷ್ಟಬುದ್ಧಿಯು । ತನಯ ವಿಷಮಂ ಕೊಟ್ಟು ಕೊಂದನೊ ।
ಘನಮದೋನ್ಮತದಿಂದ ಮರೆತನೊ । ನೋಳ್ಪೆನೆಂದು ॥೩೫೬॥

ಪೊರಟು ಸಚಿವನು ಚಂದನಾವತಿ । ಪುರವ ತೊರೆದಲ್ಲಿಂದ ಬರುತಿರೆ ।
ಉರಗನೊಂದಿದಿರಾಗಿ ಪರಿವುತ । ಲೆಂದುದಿವಗೆ ॥೩೫೭॥

ನಿನ್ನ ಭಂಡಾರದಲಿ ಬಹುಧನ । ವನ್ನು ಇಂದಿನವರೆಗೆ ಕಾಯುತ ।
ಚೆನ್ನವಾಗಿರುತಿರ್ದೆ ಸೂರೆಯ । ಗೈದಮದನ ॥೩೫೮॥

ನರರ ತೆರದೊಳಗಿನಿತು ಪೇಳುತ । ಉರಗ ವೇಗದೊಳೊಂದು ಬಿಲದಲಿ ।
ತೆರಳೆ ಕೇಳ್ದಾಶ್ಚರ್ಯಪಡುತಲಿ । ಮಂತ್ರಿ ಮನದಿ ॥೩೫೯॥

**ಭಾಮಿನಿ**

ನರಗೆ ಯೌವನಮದವು ಸಿರಿಮದ ।
ಬರಲು ಪ್ರಭುತನ ದುಷ್ಟಪ್ರಕೃತಿಗ ।
ಳಿರಲಿದರೊಳೊಂದ್ಯಾವ ಗುಣಗಳು ಸಾಕು ಮತ್ತೇನು ॥
ತರಳನಿಂಗೀ ನಾಲ್ಕು ಘಟಿಸಿದೆ ।
ಮರುಳು ತಾನಿನ್ನೇನ ಗೈದನೊ ।
ಬರಿದೆ ಕಳುಹಿದೆನಿಂದುಹಾಸನ ಪತ್ರಿಕೆಯನಿತ್ತು ॥೩೬೦॥

**ರಾಗ ಭೈರವಿ ಝಂಪೆತಾಳ**

ಬರುತಿರಲು ಕುಂತಳದ ಪುರಸಮೀಪದೊಳವನು ।
ಮೆರೆವ ವಾದ್ಯದ ರಭಸ ಕೇಳೆ ॥
ಅರರೆಯೇನದ್ಭುತಗಳೆಂದು ಹಂಬಲಿಸುತಿರೆ ।
ಧರಣಿವಿಬುಧರ ಕಾಣುತವನು ॥೩೬೧॥

ಎಲ್ಲಿಗೈದಿರಿ ನೀವು ದಣಿದು ನಿಮ್ಮಯ ಶಿರಗ ।
ಳಲ್ಲಿ ಪೊತ್ತಿಹಗಂಟಿದೇನು ॥
ಎಲ್ಲವನು ವಿಸ್ತರದಿ ಪೇಳುವುದು ದಯದಿಂದ ।
ತಲ್ಲಣಿಪೆ ನಾನು ಮನದೊಳಗೆ ॥೩೬೨॥

ಅರುಹುವೆವು ಕೇಳ್ ನಿನ್ನ ತರಳೆ ವಿಷಯೆಂಬವಳ ।
ಹರಿ ಶರಣ ಶಶಿಹಾಸನಿಂಗೆ ॥
ಪರಿಣಯವ ಗೈದ ತವ ತರಳ ಮದನನು ನಿನ್ನೆ ।
ಭರಿತ ದ್ರವ್ಯವನಿತ್ತನೆಮಗೆ ॥೩೬೩॥

ಹೊರಿಸಿದನು ಕೋಟ್ಯಾನುಕೋಟಿ ಸಂಖ್ಯೆಯೊಳೆಲ್ಲ ।
ಬರಿಗೈದ ಭಂಡಾರಗಳನು ॥
ತರಳನಾದರು ತ್ಯಾಗ ಗೈದ ನಿನ್ನಿಂದಧಿಕ ।
ಸರಿಗಾಣೆವವನ ಸಾಹಸಕೆ ॥೩೬೪॥

**ವಾರ್ಧಕ**

ಕೂರ್ದಸಿಯನಿಳುಹಿದಂತಾಯ್ತು ಕರ್ಣದೊಳಾಗ ।
ಕಾರ್ದವಕ್ಷಿಗಳರುಣ ಜಲವನತ್ಯುಗ್ರದಿಂ ।
ಮೀರ್ದನೇ ತನ್ನ ನೇಮವನಕಟ ಮಗನೆಂದು ಪಲ್ಗಡಿವುತ್ತೈತಂದನು ॥
ಸಾರ್ದ ಸಂತೋಷದಿಂ ಮದನ ಬಂದೆರಗಲ್ಕೆ ।
ಚೀರ್ದು ಸುತನಂ ಬೈದು ಮಂತ್ರಿ ನಿಜಸದನಮಂ ।
ಸೇರ್ದು ಕೋಪಾಟೋಪದಿಂದ ಸುತನಂ ನೋಡಿ ಗರ್ಜಿಸುತ್ತಿರಲಾಗಳು ॥೩೬೫॥

**ರಾಗ ಕಾಂಭೋಜಿ ಝಂಪೆತಾಳ**

ಪಿತನ ಕೋಪಕೆ ಮದನ ದೈನ್ಯವೃತ್ತಿಯೊಳೆಂದ ।
ಖತಿಯೇಕೆ ಜೀಯ ನಿಮ್ಮಡಿಯಾಜ್ಞೆಯಂತೆ ॥
ಪ್ರತಿಪಾಲಿಸಿದೆ ಹೊರತು ಎನ್ನ ದೋಷಗಳೇನು ।
ಹಿತದಿ ಶಶಿಹಾಸನಿಗೆ ಕೊಟ್ಟೆ ಭಗಿನಿಯನು ॥೩೬೬॥

**ರಾಗ ಪುನ್ನಾಗ ಅಷ್ಟತಾಳ**

ಏನೆಲೋ । ಪೋರ । ಏನೆಲೋ ॥ ಪ ॥

ಏನೆಲೋ ಪೋರ ನೀ ಗೈದ ಕಾರ್ಯಗಳು ।
ಜ್ಞಾನಶೂನ್ಯನೆ ಕೆಟ್ಟ ಮೂರ್ಖ ಕೃತ್ಯಗಳು ॥
ನಾನೇನ ಬರೆದಿಹೆ ನೋಡ್ದೆಯ ನೀನು ।
ಹೀನ ಪಾಪಿಯೆ ಬಾಳಿಕೊಂಡಿರ್ದರೇನು ॥೩೬೭॥

**ರಾಗ ಕಾಂಭೋಜಿ ಝಂಪೆತಾಳ**

ಜ್ಞಾನಿ ನಾನಹುದೆಂದು ತಿಳಿದು ನಿಮ್ಮಾಜ್ಞೆಯನು ।
ಮಾನದಿಂ ಗೈದಿಹೆನು ದುಷ್ಕಾರ್ಯವಲ್ಲ ॥
ಹಾನಿ ಯಾವುದು ತಮಗೆ ನಾನಿರ್ದ ದೆಸೆಯಿಂದ ।
ಸಾನುರಾಗದಿ ತಾತ ಬೆಸಸಿರೆಂದೆನಲು ॥೩೬೮॥

**ರಾಗ ಪುನ್ನಾಗ ಅಷ್ಟತಾಳ**

ಕೋತಿಯ ಕೈಗಿತ್ತ ಮಾಣಿಕದಂತೆ ।
ಭೂತ ಬಾಯ್ದೆರೆದಿರೆ ಸೆರೆಸಿಕ್ಕಿದಂತೆ ॥

ಚೂತದ ಮರವೆಂದು ತಲೆ ಜಪ್ಪಿದಂತೆ ।
ಜಾತ ನೀ ಜನಿಸಿದೆ ಹೆಮ್ಮಾರಿಯಂತೆ ॥೨೭೯॥

**ರಾಗ ಕಾಂಭೋಜಿ ಝಂಪೆತಾಳ**
ದೊರೆತಿರುವ ಮಾಣಿಕವ ಕನಕದೊಳು ಕಟ್ಟಿಹೆನು ।
ಸೆರೆಪಿಡಿವ ಭೂತಗಳನುರಿವ ರಂಜಕದ ॥
ಪರಮಚೂತದ್ರುಮಕೆ ಮಲ್ಲಿಕೆಯ ಲತೆಯನ್ನು ।
ಹರುಷದೊಳಗ್ಹಬ್ಬಿರ್ಪ ಮನದಿ ಗ್ರಹಿಸದರ ॥೨೮೦॥

**ರಾಗ ಪುನ್ನಾಗ ಅಷ್ಟತಾಳ**
ಭಂಡಾರ ದ್ರವ್ಯವ ಪರರಿಗೆ ತೆತ್ತು ।
ಮಂಡೆಯ ಬಡಿವಗೆ ತಂಗಿಯನಿತ್ತು ॥
ಕಂಡೋರ ಮನೆ ಮನೆ ತಿರಿಯುವ ಹೊತ್ತು ।
ಲಂಡಿ ನಿನಗೆ ವನವಾಸವೆ ಗೊತ್ತು ॥೨೮೧॥

**ರಾಗ ಕಾಂಭೋಜಿ ಝಂಪೆತಾಳ**
ಇದ್ದ ಕಾಲದಿ ಧರ್ಮ ಗೈದು ಸದ್ಗತಿಯನ್ನು ।
ಹೊದ್ದುವುದು ಮಾನವಗೆ ಕೀರ್ತಿಯಾಗಿಹುದು ॥
ಮುದ್ದು ಸುಕುಮಾರ್ತೆಯಳನಿತ್ತಿಹೆನು ಕರುಣದಲಿ ।
ಪದ್ಮನಾಭನ ಭಕ್ತ ಶಶಿಹಾಸನಿಂಗೆ ॥೨೮೨॥

ಕ್ಷಿತಿಗೆ ಕೌತುಕವೇನು ಪಿತನ ಮಾತಿಂಗೆ ರಘು ।
ಪತಿಯು ತೆರಳಿದ ವನಕೆ ಹಿಂದೆ ತ್ರೇತೆಯೊಳು ॥
ಪಿತ ಬರೆದ ಪತ್ರಿಕೆಗಳಂತೆ ಗೆಯ್ಯುವೆನೆಂಬ ।
ಮತಿಯಿಂದ ಮಾಡಿದಕೆ ವನವಾಸಮೆನಗೆ ॥೨೮೩॥

**ರಾಗ ನಾದನಾಮಕ್ರಿಯೆ ಅಷ್ಟತಾಳ**
ಗನ್ನಗತಕಿ ಬಾಯ ಮುಚ್ಚೆಲೊ । ಎನ್ನ । ಕಣ್ಣಮುಂದಿರಬೇಡ ಸಾರೆಲೋ ॥
ಕುನ್ನಿಯಂದದೊಳ್ಯಾಕೆ ಕೂಗುವೆ । ಎಲು । ವನ್ನು ಖಂಡಿಸಿ ಸೊಕ್ಕ ಮುರಿಯುವೆ ॥೨೮೪॥

ಹಿಂದೆ ಪ್ರಹ್ಲಾದನು ಹರಿಯನ್ನು । ನೆನೆ । ದೊಂದೆ ಬುದ್ಧಿಯೊಳಿರೆ ತಾತನು ॥
ಮಂದಮತಿಯು ಕೋಪಗೊಂಡನು । ಅದ । ರಂದ ವ್ಯರ್ಥದಿ ಕೂಗುವೆ ನೀನು ॥೨೮೫॥

ಎಲೆ ಪಾಪಿ ಸಕಲ ಸಾಮ್ರಾಜ್ಯವ । ನಾನು । ಗಳಿಸಿಹೆನೇಕಚ್ಛತ್ರವ ॥
ಪೊಳೆವ ಸಿಂಹಾಸನವೇರಲು । ಕೆಟ್ಟ । ಕುಲಗೇಡಿ ನಿನಗಿಲ್ಲ ಋಣಗಳು ॥೨೮೬॥

ದಶರಥಸತಿ ಕೈಕೆಯೆಂಬಳು । ತನ್ನ । ಬಸಿರೊಳ್ ಪುಟ್ಟಿದ ಸುತಗಾಗಳು ॥
ವಸುಧೆಯೆ ಸ್ಥಿರವೆಂಬ ಮನದೊಳು । ಮೂಢ । ಎಸಗಿದ ಕಾರ್ಯವೇನಾಯ್ತು ಹೇಳು ॥೩೭೭॥

ಸೂತಶೌನಕ ಗಾರ್ಗ್ಯರಂದದಿ । ಪು । ರಾತನ ಕಥೆಗಳ ಗರ್ವದಿ ॥
ಪಾತಕಿ ಯಾಕೆನ್ನೊಳುಸಿರುವೆ । ನಿನ್ನ । ಘಾತಿಸಿ ಮತ್ಪ್ರಾಣ ನೀಗುವೆ ॥೩೭೮॥

ಯಾತಕೆ ಪಾಪಬುದ್ಧಿಗಳನ್ನು । ಮಮ । ತಾತ ನೀ ಬರೆದ ಲೇಖನವನು ॥
ಪ್ರೀತಿಯೊಳ್ ನೋಡಿ ಗೈದಿಹೆ ನಾನು । ಇಂಥಾ । ಮಾತು ಸಲ್ಲದು ಹಿರಿಯನು ನೀನು ॥೩೭೯॥

ಕುನ್ನಿಗೆ ಹಂಸತೂಲಿಕವನ್ನು । ಬಹು । ಚೆನ್ನಾಗಿ ಹಾಸುವುದ್ಯಾಕಿನ್ನು ॥
ಪನ್ನಿಗಳ್ ಸಾಕು ಸಾಕೆಲೊ ಮೂಢ । ಪತ್ರ । ವನ್ನು ತೋರಿಸು ನೋಡುವೆ ಗಾಢ ॥೩೮೦॥

ಎನೆ ಕೇಳಿ ಪತ್ರವ ತಂದನು । ಅತಿ । ವಿನಯದೊಳೊಪ್ಪಿಸಿ ನಿಂದನು ॥
ಘನ ಕ್ರೋಧದೊಳಗಾಗ ಸಚಿವನು । ಲೇ । ಖನವನ್ನು ಬಿಡಿಸುತ್ತ ನೋಡ್ದನು ॥೩೮೧॥

**ವಾರ್ಧಕ**
ವಿಷವ ಮೋಹಿಸುವಂತೆ ಕೊಡುವದೆನಲೀತಂಗೆ ।
ವಿಷಯೆ ಮೋಹಿಸುವಂತೆ ಲೇಖನದ ಬರೆಹ ತಾಂ ।
ವಿಷಮವಿದು ವಿಧಿಕೃತವೊ ತನ್ನ ಕರದೋಷಗಳೊ ಶಶಿಹಾಸನೊಂಚನೆಗಳೊ ॥
ವ್ಯಸನವಿದು ಮದನನಲಿ ತಪ್ಪಿಲ್ಲ ವಿಪ್ರರೆನ ।
ಗುಸಿರಿದರು ಮೊದಲೆನಗೆ ಪುಸಿಯದೆಂದಾ ಮಂತ್ರಿ ।
ವಿಷಮಬುದ್ಧಿಯೊಳೊಂದುಪಾಯ ಮನ್ಮನದೊಳಗೆ ನೆನೆದು ಚಿಂತಿಸುತಿರ್ದನು ॥೩೮೨॥

**ರಾಗ ಸಾಂಗತ್ಯ ರೂಪಕತಾಳ**
ಮಂಜುಲ ಹರಿದ್ರದಿಂದ ಶೋಭಿಪ ತನು ।
ರಂಜಿಪ ರತ್ನಭಾಸಿಕದಿ ॥
ಅಂಜಲಿ ಬದ್ಧದೊಳಾ ವಧೂವರರಾಗ ।
ಲಂಜುತ ನಡೆತಂದು ನಮಿಸೆ ॥೩೮೩॥

ಮರಿಗಿಣಿಗಳ ಕಂಡು ಮಾರ್ಜಾಲನಿರುವಂತೆ ।
ಹೊರಗೆ ತೋಷಿಸುತಾಗ ಮಂತ್ರಿ ॥
ಭರದೊಳು ಶಶಿಹಾಸನನು ಬಿಗಿದಪ್ಪುತ ।
ತರಳೆಯ ಮುದ್ದಿಸುತೆಂದ ॥೩೮೪॥

**ರಾಗ ಬೇಗಡೆ ಏಕತಾಳ**
ತರಳೆ ಕೇಳೌ ಎನ್ನ ನುಡಿಯಂತೆ । ಒದಗಿರ್ಪ ಪತಿಯು ।
ಸರಿಯು ಬಂದುದೆ ಮನಕೆ ಗುಣವಂತೆ ॥
ಸರಸಿಜಾಸನ ಬರೆದ ತೆರದಲಿ । ಪರಮ ಸುಂದರನಿವನು ದೊರೆತನು ।
ಹರುಷದೊಳಗಿರು ಮುಂದಕೆನುತಲೆ । ಭರದಿ ಶಶಿಹಾಸಂಗೆ ಪೇಳಿದ ॥೩೮೫॥

ತರಳ ಕೇಳೀ ದಿವಸ ರಾತ್ರೆಯೊಳು । ಪೊರಟೋರ್ವನ್ನೈದಿ ।
ಪುರಿಯ ಹೊರಗೆ ಶ್ಮಶಾನಭೂಮಿಯೊಳು ॥
ಇರುವ ಚಂಡಿಕೆಯನ್ನು ಪೂಜಿಸಿ । ತಿರುಗಿ ಬಹುದಿದುಯೆಮ್ಮ ಕುಲದೊಳು ।
ಮೆರೆವ ಪದ್ಧತಿಯಿರ್ಪುದೊಂದಿದು । ಮರೆಯಬೇಡೆಂದರುಹಿ ಸಚಿವನು ॥೩೮೬॥

ಹರಿಯ ಭಕ್ತನ ತೋಷಪಡಿಸುತ್ತ । ದುರ್ಮಂತ್ರಿ ತನ್ನೊಳು ।
ಪರಮಚಿಂತಾಂಬುಧಿಯೊಳಾಳುತ್ತ ॥
ದುರುಳನೀತನ ಕೊಲ್ಲದಿರ್ದರೆ । ತರಳನಿಗೆ ಸಾಮ್ರಾಜ್ಯ ದೊರೆಯದು ।
ಶಿರವನರಿಸುವೆನೆನ್ನ ತರಳೆಗೆ । ಬರುವ ವೈಧವ್ಯಗಳಿಗಂಜೆನು ॥೩೮೭॥

**ಭಾಮಿನಿ**
ಕರೆದು ಕಟುಕರಿಗೆಂದ ನಿಶಿಯೊಳು ।
ತೆರಳಿ ಚಂಡಿಕೆ ಗೃಹದಿ ನೀವಿರೆ ।
ತರಳನೋರ್ವನು ಬಹನು ನೋಡದೆ ಶಿರವ ಛೇದಿಪುದು ॥
ದುರುಳರಿರ ನೀವ್ ಹಿಂದೆ ಗೈದಿಹ ।
ತೆರದಿ ಬಿಟ್ಟರೆ ನಿಮ್ಮನರಿವೆನು ।
ತೆರಳಿರೀ ಕ್ಷಣವೆಂದು ಕಳುಹುತ ಸಚಿವನಿರಲಿತ್ತ ॥೩೮೮॥

**ರಾಗ ಶಂಕರಾಭರಣ ಅಷ್ಟತಾಳ**
ಇತ್ತ ಚಿತ್ರಧ್ವಜ ಯೋಚಿಸುತ । ಮುನಿ ।
ಪೋತ್ತಮ ಗಾಲವಗೊಂದಿಸುತ ॥
ಪುತ್ರಿಯ ಪತಿಯೆಲ್ಲಿಹನೆನುತ । ಕೇಳ ।
ಲರ್ತಿಯೊಳ್ ಪೇಳ್ದನು ಮುನಿ ನಗುತ ॥೩೮೯॥

ಧರಣಿಪ ಕೇಳ್ ಚಂದ್ರಹಾಸನನ್ನು । ಬೇಗ ।
ಕರೆಸೀಗ ಕೊಡು ನಿನ್ನ ಪುತ್ರಿಯನ್ನು ॥
ಧರೆಯನಾತಗೆ ಕಟ್ಟು ಪಟ್ಟವನ್ನು । ಬಹು ।
ತ್ವರಿತದಿ ಮಾಡೀ ಕಾರ್ಯವನ್ನು ॥೩೯೦॥

ಧರಣಿಪ ಕೇಳುತ ಮದನನನು । ಬೇಗ ।
ಕರೆಸಿ ಪೇಳಿದ ಚಂದ್ರಹಾಸನನು ।
ತ್ವರೆಯೊಳು ಕರೆತಹುದೆನಲವನು । ಆಗ ।
ಬರುತಿರೆ ದಾರಿಯೊಳ್ ಶಶಿಹಾಸನು ॥೩೯೧॥

**ರಾಗ ತೋಡಿ ಅಷ್ಟತಾಳ**
ಕರದಿ ಗಂಧಾಕ್ಷತೆಯು ಪುಷ್ಪಗ । ಳಿರಿಸಿ ಚಂಡಿಕೆ ಪೂಜೆಗೋಸುಗ ।
ತೆರಳುತಿಹನನು ಕಂಡು ಮಂತ್ರಿಜನು ॥
ಬರವಿದೆಲ್ಲಿಗೆ ನಿಮ್ಮನೀ ಕ್ಷಣ । ಕರೆದುತಹುದೆಂದೆನುತ ಧರಣಿಪ ।
ನರುಹಿ ಎನ್ನನು ಕಳುಹಿಸಿರ್ಪನು ॥೩೯೨॥

ಎಂದ ಮದನನ ನುಡಿಯ ಕೇಳುತ । ಚಂದ್ರಹಾಸನು ಪೇಳ್ದ ನಿನ್ನಯ ।
ತಂದೆಯಾಜ್ಞೆಗಳಂತೆ ನಾನೀಗ ॥
ಚಂದದಿಂ ಚಂಡಿಕೆಯನರ್ಚಿಸ । ಲೆಂದು ಪೋಗುವೆ ಕಡೆಗೆ ಬಹೆನೆನ ।
ಲೆಂದನಾತಗೆ ಮದನನುತ್ತರವ ॥೩೯೩॥

ಪಿತನ ನೇಮಗಳಂತೆ ಪೂಜೆಯ । ನತಿಶಯದಿ ನಾ ಮಾಡಿ ಬರುವೆನು ।
ಪೃಥಿವಿಪಾಲನು ಕಾದುಕೊಂಡಿಹನು ॥
ಮತಿಯುತನೆ ಪೋಗೆಂದು ಕಳುಹುತ । ನತಿ ಜವದಿ ಮಂತ್ರಿಜನು ಚಂಡಿಯ ।
ಹಿತದಿ ಪೂಜಿಪೆನೆಂದು ಪೋಗುತಿರೆ ॥೩೯೪॥

**ವಾರ್ಧಕ**
ಖಳರಂತರಂಗ ಪ್ರವೇಶದ ವಿವೇಕಮಂ ।
ಬಳಸಿದರಿಷಡ್ವರ್ಗಮೊತ್ತರಿಸಿ ಮುರಿವಂತೆ ।
ಪೊಲಬರಿಯದೊಳಪೊಗುವ ಮದನನಂ ಕಂಡು ದುರ್ಮತಿ ಕಳುಹಿದಾ ಕಟುಕರು ॥
ಕೊಲೆಗಡುಕ ಚಂಡಾಲರುಗಿದ ಕೈದುಗಳಿಂದ ।
ಗಳದ ಮೇಲೆತ್ತಿ ಪೊಯ್ದಿರಿದು ಕೆಡಹಲ್ಕಾಗ ।
ನಳಿನಾಕ್ಷನಾಮಗಳನುಚ್ಚರಿಸಿ ಮಂತ್ರಿಸುತನಿಳೆಗೆ ಬಿದ್ದಸು ತೊರೆದನು ॥೩೯೫॥

**ರಾಗ ಸಾರಂಗ ಅಷ್ಟತಾಳ**
ಶಶಿಹಾಸ ಬರಲಿತ್ತಲು । ಕಾಣುತ ಭೂಪ । ಕುಶಲದಿ ಮನ್ನಿಸಲು ॥
ಬಿಸಜಾಕ್ಷಿ ಚಂಪಕಮಾಲಿನಿಯನು ಗುರು ।
ವುಸಿರಿದಂದದಿ ಗೈದ ಗಾಂಧರ್ವಲಗ್ನವ ॥೩೯೬॥

ವರ ಸುಮೂಹೂರ್ತದೊಳು । ಧಾರಿಣಿಪಾಲ । ಗುರುವಿಟ್ಟ ಲಗ್ನದೊಳು ॥
ಹರಿಭಕ್ತ ಶಶಿಹಾಸನಿಂಗೆ ಪಟ್ಟವ ಕಟ್ಟಿ ।
ನೆರೆದ ಭೂಸುರರಿಗೆ ದಕ್ಷಿಣೆಯಿತ್ತನು ॥೩೯೭॥

ತೋಷದೊಳಾ ಕ್ಷಣದಿ | ಪೀಠದಿ ಶಶಿ | ಹಾಸನಿರಲು ಭರದಿ ||
ಭೂಸುರರೆಲ್ಲ ವೇದೋಕ್ತ ಮಂತ್ರಾಕ್ಷತೆ |
ಆ ಸುರರೆಲ್ಲರು ನಲಿದಾಡಲೆಸೆದರು ||೩೯೮||

**ರಾಗ ಕೇದಾರಗೌಳ ಅಷ್ಟತಾಳ**

ಭೇರಿ ತಮ್ಮಟೆ ಕಹಳಾರವದಿಂದಲಿ | ವಾರಿಜಾಕ್ಷನ ಭಕ್ತನ ||
ಏರಿಸಿ ಮದಕರಿಮೇಲೆ ಅಂಬಾರಿಯೊಳ್ | ಭೂರಿ ಸಂತೋಷದಲಿ ||೩೯೯||

ಮೆರವಣಿಗೆಗೆ ಪೊರಡಿಸಲು ಸಂಭ್ರಮದಿಂದ | ಲರರೆ ಇದೇನೆನ್ನುತ ||
ತೆರಳಿ ಬಂದಾ ಮಂತ್ರಿ ಶಶಿಹಾಸನನು ಕಂಡು | ಕೆರಳುತ್ತಲಿಂತೆಂದನು ||೪೦೦||

ಚಂಡಿಕಾದೇವಿಯ ಪೂಜೆಗೆಯ್ಯದೆ ನೀ ಕೈ | ಕೊಂಡ ಕಾರ್ಯಗಳ್ಯಾವುದೊ ||
ಪುಂಡುತನಗಳೇನೆಂದೆನಲಂತರದಿ ಭಯ | ಗೊಂಡು ಪೇಳಿದ ಮಾವಗೆ ||೪೦೧||

ತೆರಳುತ್ತಲಿರೆ ಪೂಜೆಗಾಗಿ ನಾ ದಾರಿಯೊಳ್ | ಭರದಿ ನಿಮ್ಮಯ ಸುತನು ||
ಧರಣಿಪನಲ್ಲಿಗೆ ಪೋಗೆಂದು ಕಳುಹಿ ತಾ | ತೆರಳಿದನರ್ಚನೆಗೆ ||೪೦೨||

ಬರೆ ನೃಪಾಲಕ ತನ್ನ ಕುವರಿಯನಿತ್ತನು | ಪುರದ ಪಟ್ಟವ ರಚಿಸಿ ||
ಮೆರವಣಿಗೆಗೆ ಎನ್ನ ಕಳುಹಿರ್ಪನೆನೆ ಕೇಳಿ | ಕೊರೆಯೆ ಕರ್ಣಾಂತದಲಿ ||೪೦೩||

**ರಾಗ ಸಾಂಗತ್ಯ ರೂಪಕತಾಳ**

ಅರರೆ ನಾನೆಣಿಸಿದಕೆ ವಿಧಿಯೊಂದನೆಣಿಸಿತೆ |
ತರಳನ ಕೊಲಿಸಿದೆನೆನುತ ||
ಮರುಗುತ್ತ ಸಚಿವನು ನಿಶಿತಕಾಲವಿದೆಂದು |
ಕರದಿ ಖಡ್ಗವಗೊಂಡು ನಡೆದ ||೪೦೪||

ಏಳು ಸುತ್ತಿನ ಕೋಟೆ ಪುರಗಳ ದಾಟುತ್ತ |
ಕಾಳಗತ್ತಲೆಯೊಳಗೋರ್ವ ||
ಬೀಳುತೇಳುತ ಸುಡುಗಾಡಿನೊಳುರಿಯುವ |
ತೋಳು ಮುರಿದಪೆಣಗಳನು ||೪೦೫||

ಮುರಿದೆದೆಗುಂಡಿಗೆಯುರಿದ ಕೇಶಗಳುಳ್ಳ |
ತರ ತರ ಕುಣಪರಾಶಿಯನು ||
ಪರಿಕಿಸುತುರಿವ ಕೊಳ್ಳಿಯನೊಂದ ಪಿಡಿಯುತ್ತ |
ತಿರುಹಿಬೀಸುತ ಪೋಗುತಿರಲು ||೪೦೬||

ತಂಡ ತಂಡದ ಭೂತ ವೇತಾಳ ವಿತತಿಯು ।
ಹಿಂಡುಗೂಡುತ ಕುಣಿಯುತಲಿ ॥
ರುಂಡಮಾಲೆಯನಾಂತು ಬಿಟ್ಟ ಮಂಡೆಗಳಿಂದ ।
ಕಂಡು ದುರ್ಮತಿಯೆಡೆಗೈದಿ ॥೪೦೭॥

**ರಾಗ ಮಧ್ಯಮಾವತಿ ಅಷ್ಟತಾಳ**
ನೋಡಿ ಮೂರ್ಖನ । ಮೆಲ್ಲುವ ನಾವು । ರೂಢಿಭಾರಕನ ॥ ಪಲ್ಲವಿ ॥

ಖೋಡಿಯ ಗಂಟಲ ಮುರಿದು । ಎದೆ । ಗೂಡಿನ ಮಾಂಸವ ತೆಗೆದು ।
ಗಾಢದಿಂದಲೆ ಸುತ್ತಮುತ್ತಲು । ಕೂಡಿ ಕುಳಿತು ತಿಂದು ತೇಗುವ ।
ಮೂಢನಿವನತಿ ಪಾಪಿಯಧಮನು । ಓಡಿ ಬನ್ನಿರಿಯೆನುತಲೈತರೆ ॥೪೦೮॥

ಪರಿಕಿಸಿ ದುರ್ಮತಿಯಾಗ । ತಾನು । ತಿರುಹಿ ಖಡ್ಗವನಿಂತು ಬೇಗ ॥
ಮರುಳು ಭೂತಗಣಂಗಳೇತಕೆ । ಬರಿದೆ ಬಂದೀಗೆನ್ನ ಕೈಯಲಿ ।
ಶಿರವನೀವಿರಿ ಪಥವ ಬಿಡಿರೆಂ । ದೊರೆಯೆ ಖತಿಯೊಳಗಾಗ ಗಣಗಳು ॥೪೦೯॥

**ರಾಗ ಶಂಕರಾಭರಣ ಮಟ್ಟೆತಾಳ**
ಕೆಟ್ಟ ನೀಚನೆನುತಲಾಗ । ಸುಟ್ಟ ಕೊಳ್ಳಿಗಳನು ತೆಗೆದು ।
ಥಟ್ಟನಿವನ ಪೊಯ್ಯೆ ಸಚಿವ । ನಟ್ಟಹಾಸದಿ ॥೪೧೦॥

ತಿರುಹಿ ತಿರುಹಿ ಖಡ್ಗದಿಂದ । ಉರಿವ ಕೊಳ್ಳಿಗಳನು ಕಡಿಯೆ ।
ದುರುಳ ತಾಳೆನುತ್ತ ಗಣಗ । ಳಂದು ಖತಿಯಲಿ ॥೪೧೧॥

ಸುತ್ತಮುತ್ತ ತರುಬುತಾ ಕ । ಗ್ಗತ್ತಲೆಯೊಳೆಲುವು ಮಾಂಸ ।
ರಕ್ತಗಳನು ತೂರುತಿವನ । ತತ್ತರಿಸಲು ॥೪೧೨॥

ಭರದೊಳಿವನ ಚಂಡಿಕೆಯ । ಕರದಿ ಪಿಡಿದು ಗಣಗಳಾಗ ।
ಮೆರೆವುತಿರಲು ನಭದಿ ದೇವಿ । ನುಡಿದಳಾ ಕ್ಷಣ ॥೪೧೩॥

ಬಿಡಿರಿ ಗಣಗಳ್ಯಾತಕಿವನ । ತಡೆಯಬೇಡಿ ಧೂರ್ತನಿವನು ।
ನಡೆವ ಯಮನ ಪುರಕೆ ತಾನೆ । ತೊಡಕು ಬೇಡೆನೆ ॥೪೧೪॥

ಥಟ್ಟನಿವನ ಬಿಟ್ಟು ಗಣಗ । ಳಷ್ಟು ಕಾಣದಾಗ ಸಚಿವ ।
ನೆಟ್ಟನೈದಿ ಚಂಡಿಕೆಯ । ಗೃಹದಿ ನೋಡಲು ॥೪೧೫॥

**ಭಾಮಿನಿ**
ಕಿರುನಗೆಯು ಕಣ್ಗುಬ್ಬು ಪೊಳೆಯುವ ।
ಮೆರೆವ ತಿಲಕದ ಮುರಿದ ಮೀಸೆಯ ।

ಸುರಿವ ರಕ್ತಗಳಿಂದ ನೆನೆದಿಹ ಕೇಶಪಾಶಗಳ ॥
ಮುರಿದೆದೆಯ ಗೂಡುಗಳ ಚೂರ್ಣದಿ ।
ತರಳ ಬಿದ್ದಿರೆ ದುಷ್ಟಬುದ್ಧಿಯು ।
ಬರಸೆಳೆದು ಬಿಗಿದಪ್ಪಿ ಚುಂಬಿಸುತಾಗಲಡಿಗಡಿಗೆ ॥೪೧೬॥

**ರಾಗ ನೀಲಾಂಬರಿ ರೂಪಕತಾಳ**

ಕಂದನೆ ಹಾ ಹಾ ಮದನನೆ । ಬಂದಿಹ ಎನ್ನನು ನೋಡದೆ ।
ಸುಂದರ ಮೌನದಿ ಮಲಗಿದೆ । ಚಂದದಿ ಮಾತಾಡೋ ॥೪೧೭॥

ಎನ್ನಯ ಮೋಸಗಳೆನ್ನನು । ತಿನ್ನುವುದಾಯಿತೆ ಹರ ಹರ ।
ಚೆನ್ನನೆಯೇಳ್ ನಿನ್ನನುಜೆಯ । ಬಣ್ಣಿಸು ನೀ ಬಾರೋ ॥೪೧೮॥

ಬರಿದೇ ವೈರವನಿಕ್ಕುತ । ನರಹರಿಭಕ್ತಿಗೆ ಕೆಡುಕನು ।
ಪರಿ ಪರಿ ಯೋಚಿಸಿ ಕೆಟ್ಟೆನು । ತರಳನೆ ಕೇಳ್ ನೀನು ॥೪೧೯॥

ಭರಿತದಿ ತುಂಬಿದ ದ್ರವ್ಯವ । ಧರಣಿಯ ಸುರರಿಗೆ ಮುದದಲಿ ।
ತರಳನೆ ತ್ಯಾಗವ ಮಾಡಿದೆ । ಮೆರೆದೆಯೊ ಖ್ಯಾತಿಯಲಿ ॥೪೨೦॥

ಧರಣಿಪ ನಿನಗೇನೊರೆದನು । ತರಳನೆ ಎನಗದ ತಿಳಿಸದೆ ।
ತ್ವರಿತದಿ ಬಂದೀಯೆಡೆಯಲಿ । ತೊರೆದೆಯೊ ಜೀವವನು ॥೪೨೧॥

ಮುಂದೀ ಕುಂತಳಪುರವದು । ಚಂದದಿ ದೊರಕಿತು ನಿನಗೆನು ।
ತಿಂದಿನವರೆಗಿರುತಿರ್ದೆನು । ಸಂದೆಯೊ ಶಿವ ಶಿವನೆ ॥೪೨೨॥

**ವಾರ್ಧಕ**

ಕಂಬನಿಯೊಳರುಣಾಂಬುವಂ ತೊಳೆದು ಮುಂಡಾಡಿ ।
ಹಂಬಲಿಸಿ ಬೆರಗಾಗಿ ನಂದನನು ಪೋದೆನೆಂ ।
ತೆಂಬಳವಿಗಾ ಮಂತ್ರಿ ಸೈರಿಸದೆ ಮುಂಗಡೆಯ ಕಂಬಮಂ ಧುಮುಕಲಾಗ ॥
ಕುಂಬಳದ ಕಾಯಂತೆ ಚೆಪ್ಪಾಗಿ ನಿಜ ಮಸ್ತ ।
ಕಂ ಬಿರಿದು ಬಿದ್ದನುರ್ವಿಗೆ ಪೋದುದಸು ಕಾಯ ।
ದಿಂ ಬಳಿಕ ನಂದಿದ ಸೊಡರ್ಗಳೆನೆ ಮೃತರಾಗಿ ಸುತತಾತರಿರುತಿರ್ದರು ॥೪೨೩॥

**ರಾಗ ಕಾಂಭೋಜಿ ಝಂಪೆತಾಳ**

ಇರುಳಿನೊಳಗೀ ಪರಿಯು । ನಡೆದುದನು ಪುರಜನರು ।
ಅರಿಯದಿರೆ ಮನದೊಳಗೆ । ಕುಂತಳಾಪುರಕೆ ।
ಹರಿಭಕ್ತನಹ ಚಂದ್ರ । ಹಾಸಂಗೆ ಪಟ್ಟಗಳು ।
ವಿರಚಿಸಿರೆ ದುರ್ಮತಿಯು । ಸೈರಿಸದೆ ಮನದಿ ॥೪೨೪॥

ತೆರಳಿದನು ವನಕೆಂದು । ಪುರದಿ ವಾರ್ತೆಗಳಿರಲು ।
ಪರಿಶೋಭಿಸುತ ತರಣಿ । ಯುದಿಸೆ ಪೂರ್ವದೊಳು ॥
ಹರಿತಂದ ಶಾಂಭವಿಯ । ನರ್ಚಿಸುವ ಭೂಸುರನು ।
ಒರಗಿರುವ ಸುತಪಿತರ । ನೋಡಿ ನಡುಗುತಲಿ ॥೪೧೫॥

ಅರಮನೆಗೆ ಬರಲಾಗ । ಶಶಿಹಾಸ ಸಂಭ್ರಮದಿ ।
ಹರಿಪೂಜೆಯನು ಗೈದು । ವೋಲಗದೊಳಿರಲು ॥
ಸುರಿವ ಕಂಬನಿಯಿಂದ ಭೂಸುರನು ಪೇಳಿದನು ।
ಗಿರಿಜೆಯಾಲಯದೊಳಗೆ । ನಿನ್ನೆ ರಾತ್ರಿಯೊಳು ॥೪೧೬॥

ದುಷ್ಟಬುದ್ಧಿಯು ಮದನ । ರೀರ್ವರತಿ ಕೋಪದಲಿ ।
ಕುಟ್ಟಿ ಹೊಯ್ದಾಡಿದರೊ । ಕಾಣೆ ನಾನದರ ॥
ಸೃಷ್ಟಿಯೊಳು ತಲೆವೊಡೆದು । ಕರುಳುಗಿದು ಬಿದ್ದಿಹರು ।
ದಿಟ್ಟ ಲಾಲಿಸು ಸಟೆಯ । ನುಡಿಯಲ್ಲ ಜೀಯ ॥೪೧೭॥

**ಭಾಮಿನಿ**
ಧರಣಿಸುರನಿಂತೆನಲು ಕೇಳುತ ।
ಭರದಿ ಪುರಜನ ತಾರಕಾಕ್ಷಿಯ ।
ಕರೆಸಿ ಜೊತೆಗೊಂಡಾಗ ತೆರಳಿದನಂದು ಶಶಿಹಾಸ ॥
ಶಿರವೊಡೆದು ಬಿದ್ದಿಹರನೀಕ್ಷಿಸಿ ।
ಮರುಗುತಿರೆ ಪುರಜನಗಳೆಲ್ಲರು ।
ತರುಣಿ ತಾರಕನಯನೆ ಮೂರ್ಛಿಸುತಾಗ ಚೇತರಿಸಿ ॥೪೧೮॥

**ರಾಗ ನೀಲಾಂಬರಿ ಏಕತಾಳ**
ಪತಿಯೆ ನಿನ್ನ ಬಿಟ್ಟು ನಾನು । ಹಿತದೊಳೆಂತು ಬಾಳ್ವೆ ॥
ಸುತನ ಪ್ರೇಮದಿಂದ ಸಲಹಿ । ಗತಿಯ ಕಾಂಬುದಾಯ್ತೆ ॥೪೧೯॥

ಕೆಟ್ಟ ವೈಧವ್ಯದಲಿ ನಾನು । ಸೃಷ್ಟಿಯೊಳೆಂತಿರುವೆ ॥
ಹೊಟ್ಟೆ ಹಾಳಾಯ್ತೀಗ ಕಂದ । ಬಿಟ್ಟೆರ್ಪುದು ಹೇಗೆ ॥೪೨೦॥

ಸುತಪತಿವಿಹೀನೆ ಎನ್ನ । ವ್ಯಥೆಯ ಕೇಳ್ವರ್ಯಾರು ॥
ಹಿತವೆ ಎನ್ನ ತೊರೆದು ನೀವು । ಗತಿಸಿದಿರೆ ಶಿವನೆ ॥೪೨೧॥

**ರಾಗ ಸಾಂಗತ್ಯ ರೂಪಕತಾಳ**
ಈ ರೀತಿಯಲಿ ತಾರಕಾಕ್ಷಿ ಶೋಕಿಸುತಿರೆ ।
ವಾರಿಜನಾಭನ ಭಕ್ತ ॥

ಭೂರಿ ಚಿಂತೆಯ ತಾಳಿ ಸೈರಿಸುತಾಕೆಯ ।
ಕೂರಸಿಯನು ಕೊಂಡು ಕರದಿ ॥೪೩೧॥

ಪುಂಡರೀಕಾಕ್ಷನ ಭಕ್ತ ನಾನಾದರೆ ।
ಖಂಡಿತ ಬದುಕಿಪೆನೆಂದು ॥
ಚಂಡಿಕೆಯೆದುರೊಳು ಚತುರಶ್ರಮಾಗಿಹ ।
ಕುಂಡವ ತೆಗೆಸುತಗ್ನಿಯನು ॥೪೩೨॥

ಧರಣಿಸುರರ ಮಂತ್ರಘೋಷದೊಳ್ ಸ್ಥಾಪಿಸಿ ।
ಕರದೊಳಗಿಹ ಖಡ್ಗದಿಂದ ॥
ಭರದಿ ತನ್ನಯ ದೇಹದೊಳಗಿರ್ಪ ಮಾಂಸವ ।
ನರಿದುರಿಯೊಳು ಹೋಮಿಸುತಲಿ ॥ ॥೪೩೪॥

**ವಾರ್ಧಕ**

ಬಾಳಿ ಫಲವೇನಿನ್ನು ಧರೆಯ ಭಾರಕನಾಗಿ ।
ಮೂಲೋಕದಪಹಾಸ್ಯವೆನುತ ಮನದೊಳು ಖತಿಯ ।
ತಾಳಿ ಪೂರ್ಣಾಹುತಿಗೆ ಶಿರವನರಿದಪೆನೆಂದು ಖಡ್ಗಮಂ ಪೂಡುತಾಗ ॥
ಕಾಳಿ ನೀನಖಿಳ ಶಕ್ತಿಗಳ ರೂಪಂಗಳಂ ।
ತಾಳಿ ಸರ್ವಾತ್ಮಕನ ಕೂಡೆ ರಮಿಸುವೆಯಲಾ ।
ವ್ಯಾಳಶಯನಗೆ ಸಮರ್ಪಿತಮಾಗಲೆಂದೆನುತ ಗಳಕೆ ಖಡ್ಗವನಿರಿಸಲು ॥೪೩೫॥

**ರಾಗ ನವರೋಜು ಏಕತಾಳ**

ಹರಿಯ ಕಿಂಕರ ನೀನು । ಈ । ಪರಿಯ ಸಾಹಸವೇನು ॥
ದರುಶನವಿತ್ತಿಹೆ ನಿನಗೋರ್ವಗೆ ಬೇ ।
ರಿರುವರು ತಿಳಿಯರೆಂದೆನುತಲಿ ಚಂಡಿಯು ॥೪೩೬॥

ಕೇಳು ನೀನೆಲೊ ಬಾಲ । ನಾ । ಪೇಳುವುದ ಗುಣಶೀಲ ॥
ಖೂಳ ಸಚಿವ ತಾ ಗೈದ ಕುಮಂತ್ರದಿ ।
ಕಾಲನಲ್ಲಿಗೆ ಪೋದ ಸಹಸವಿದ್ಯಾತಕೆ ॥೪೩೭॥

ವರವ ಬೇಡೈ ನೀನು । ಅತಿ । ಹರುಷದೊಳೀವೆನು ನಾನು ॥
ದುರುಳ ಸಚಿವಗಾಗಿ ಹರಣವ ತೊರೆಯಲು ।
ಮರುಳನೊ ಸುಮ್ಮನೆ ಮನದೊಳು ಯೋಚಿಸು ॥೪೩೮॥

**ಭಾಮಿನಿ**

ಚಿತ್ತಜಾಂಬಕಿ ಪಾಲಿಸಾದರೆ ।
ಸತ್ತವರನೀರ್ವರನು ಎಬ್ಬಿಸು ।

ಚಿತ್ತಜನ ಪಿತ ಭಕ್ತಿಯೆನ್ನೊಳು ನಿಲಿಸು ಸ್ಥಿರವಾಗಿ ‖
ಮತ್ತಿದರನುಳಿದೇನು ಬೇಡೆನೆ ।
ಸತ್ತವರನೀಕ್ಷಿಸಲು ದೇವಿಯು ।
ಸ್ವಸ್ಥದಿಂದಲೆ ಮೇಲಕೆದ್ದರು ಕಾಣುತೆಡಬಲವ ‖೪೩೯‖

**ರಾಗ ಸಾಂಗತ್ಯ ರೂಪಕತಾಳ**
ಸುತ್ತಲು ನಿಂದಿಹ ಜನರ ಕಂಡಾಶ್ಚರ್ಯ ।
ವೆತ್ತುತಾ ಸಚಿವನಾ ಕ್ಷಣದಿ ।
ಚಿತ್ತದಿ ಕರಗುತ್ತ ಶಶಿಹಾಸನೊಡನೆಂದ ।
ಮತ್ತೆ ಕಾರುಣ್ಯಭಾವದಲಿ ‖೪೪೦‖

ತರಳತನದಿ ನಿನ್ನ ಕಟುಕರೊಳಡವಿಗೆ ।
ಕೊರಳ ಕೊಯ್ಯಲು ಕಳುಹಿದೆನು ‖
ಬರೆದುಕೊಟ್ಟೆನು ಪತ್ರ ವಿಷವ ಕೊಡೆನ್ನುತ್ತ ।
ತರಳನಾಗಿಹ ಮದನನಿಗೆ ‖೪೪೧‖

ನಿಲಿಸಿದೆ ಚಂಡಾಲರನ್ನು ಮೋಸದಿ ನಿನ್ನ ।
ಕೊಲುವರೀ ಚಂಡಿಕಾಲಯದಿ ‖
ಚೆಲುವ ನಿನ್ನನು ಪೂಜೆಗಟ್ಟಿದೆ ಎನ್ನಯ ।
ಖಳ ಕೃತ್ಯವೆನಗಾಯಿತಯ್ಯ ‖೪೪೨‖



**ರಾಗ ಕೇದಾರಗೌಳ ಅಷ್ಟತಾಳ**
ಕರಗುತೀ ಪರಿ ಮಂತ್ರಿ ಶಶಿಹಾಸನೊಡನೆಂದ ।
ಪರಮ ಕಾರುಣ್ಯದಲಿ ‖
ಹರಿಭಕ್ತ ನಿನ್ನೊಳು ನೆನೆದೆನು ದ್ರೋಹವ ।
ಕರುಣದಿ ಕ್ಷಮಿಸೆಂದನು ‖೪೪೩‖

ಮಂದಮತಿಯು ನಾನು ಚಂದನಾವತಿಯೊಳು ।
ಕಂದ ನಿನ್ನಯ ತಾತನ ‖
ಬಂಧಿಸಿರುವೆ ಕಾರಾಗಾರದಿ ಬಿಡಿಸೀಗ ।
ಲೆಂದೆನೆ ಕೇಳುತಲಿ ‖೪೪೪‖

ಶಶಿಹಾಸನೆಂದನು ಗುರುಗಳು ನೀವೆನ ।
ಗೆಸಗಿದ ಕಾರ್ಯಗಳು ‖

ಹಸನಾದುದೆನಗೆ ನಿಮ್ಮಿಂದ ನಾ ಧನ್ಯನೆಂ ।
ದುಸಿರುತ್ತಲಿರೆ ಚಂಡಿಯು ॥೪೪೫॥

ಕೇಳಯ್ಯ ಶಶಿಹಾಸ ಕೇರಳದರಸ ಮೇ ।
ಧಾವಿ ಬಾಲಕನು ನೀನು ॥
ಮೂಲ ನಕ್ಷತ್ರದಿ ಪುಟ್ಟಿದೆ ತಿಂಗಳೊಂ ।
ದಾಗಿರೆ ನಿನಗಾಗಳು ॥೪೪೬॥

ದುರುಳ ಸೌರಾಷ್ಟ್ರದ ಶೂರಸೇನನು ಬಂದು ।
ಧುರವೆಸಗಿದ ಮೂರ್ಖನು ॥
ತರಳ ನಿನ್ನಯ ತಾತನನುಕೊಂದು ಧರೆಯನ್ನು ।
ಹರುಷದೊಳಾಳುತಿಹ ॥೪೪೭॥

ಕೊಡುವೆ ವೈಷ್ಣವ ಶಕ್ತಿಯಿದರಿಂದಲಾತನ ।
ಬಡಿದು ನಿನ್ನಯ ರಾಜ್ಯವ ॥
ಒಡನೆ ಕೊಳ್ಳೆನುತಲಿ ಶಶಿಹಾಸನಿಂಗೀಯೆ ।
ಅಡಿಗೆ ವಂದಿಸುತಾಗಳು ॥೪೪೮॥

**ವಾರ್ಧಕ**

ತ್ರಾಹಿ ಪಾರ್ವತಿ ಚಂಡಿ ವಾರಾಹಿ ಕೌಮಾರಿ ।
ತ್ರಾಹಿ ಶಂಕರಿ ಗೌರಿ ಗಿರಿಜೆ ಭ್ರಾಮರಿ ದುರ್ಗೆ ।
ತ್ರಾಹಿ ಮಹಿಷಘ್ನೆ ಧೂಮ್ರಾಕ್ಷಮರ್ದಿನಿ ಕಾಳಿ ತ್ರಾಹಿ ಶುಂಭನಿಷೂದಿನಿ ॥
ತ್ರಾಹಿ ವೈಷ್ಣವಿ ಬ್ರಾಹ್ಮಿ ರುದ್ರಾಣಿ ನರಸಿಂಹೆ ।
ತ್ರಾಹಿ ದಾಕ್ಷಾಯಣಿಯೆ ಭೈರವಿ ಜಗನ್ಮಾತೆ ।
ತ್ರಾಹಿ ಕಾತ್ಯಾಯನಿ ಕರಾಳಿ ಶೂಲಿನಿ ದೇವಿ ತ್ರಾಹಿಯೆಂದಡಿಗೆರಗಲು ॥೪೪೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮೊಳಗಿದವು ದುಂದುಭಿಗಳಭ್ರದಿ ।
ನಲಿದು ಪೂಮಳೆಗರೆಯೆ ದಿವಿಜರು ।
ಘಳಿಲನಾಕ್ಷಣ ಚಂಡಿಯಂತ । ರ್ಧಾನ ತಳೆಯೆ ॥೪೫೦॥

ಪರಮ ವಿಭವದಿ ಚಂದ್ರಹಾಸನು ।
ವರ ಸಚಿವಸುತ ಸಹಿತ ವೇಗದೊ ।
ಳರಮನೆಗೆ ಬಂದಾಗ ನೃಪತಿಗೆ । ಯರುಹಿ ಬೇಗ ॥೪೫೧॥

ವನಿತೆಯರ ಕೂಡುತ್ತ ಸುಖದೊಳ ।
ಗಿರಲುವೊಂದಿನ ಸಚಿವ ತನ್ನಯ ।
ತನಯ ಮದನಗೆ ಮಂತ್ರಿಪದವಿಯ । ನಿತ್ತು ಮುದದಿ ॥೪೫೨॥

ಪರಮ ತೋಷದೊಳಿರುವ ಕಾಲದಿ ।
ಹರಿಶರಣ ಶಶಿಹಾಸ ತನ್ನೊಳು ।
ಗಿರಿಜೆ ಪೇಳಿದ ಮಾತ ನೆನೆವುತ । ಮದನಗೆಂದ ॥೪೫೩॥

ಶೂರಸೇನನ ತರಿದು ಎಮ್ಮಯ ।
ಕೇರಳವ ಕೈಕೊಂಬೆ ಸೇನೆಯ ।
ಭೋರನೀ ಕ್ಷಣ ಕರೆಸುಯೆನುತಾ । ಜ್ಞೆಗಳನಿತ್ತ ॥೪೫೪॥

ದೊರೆಯ ನೇಮವ ಕೇಳ್ದು ಮದನನು ।
ಬರಿಸೆ ಚತುರಂಗವನು ವಿಭವದಿ ।
ಪೊರಟು ರಥವೇರುತ್ತ ಚಂದನ ಪುರಿಗೆ ಬರಲು ॥೪೫೫॥

**ಭಾಮಿನಿ**

ಕಾರಮಂದಿರಕೈದಿ ಪಿತನನು ।
ಭೂರಿ ತೋಷದಿ ಬಿಡಿಸಿ ನಿಳಯಕೆ ।
ಸಾರಿ ಮಾತೆಗೆ ನಮಿಸಿ ಸಕಲವನರುಹಿಯಾ ದಿನದಿ ॥
ವಾರಿಜಾಕ್ಷನ ಭಕ್ತ ಸೇನಾ ।
ವಾರಿಧಿಯು ಸಹಿತಲ್ಲಿ ನೆಲಸುತ ।
ಮಾರನೆಯ ದಿನವೈದಿ ಕಂಡನು ಕೇರಳಾಪುರವ ॥೪೫೬॥

**ರಾಗ ಭೈರವಿ ಝಂಪೆತಾಳ**

ಚಾರಕನ ಕರೆದೆಂದ ಕೇರಳವ ಸೆಳೆದಿರ್ಪ ।
ಶೂರಸೇನನ ಬಳಿಗೆ ಪೋಗಿ ॥
ಕ್ರೂರತನದಿಂ ಪಿತನ ಕೊಂದು ಸೆಳೆದಿಹ ರಾಜ್ಯ ।
ಭೋರನೀ ಕ್ಷಣ ಬಿಡಲಿಯೆನುತ ॥೪೫೭॥

ಬಂದು ಮರೆಹೊಂದಿದರೆ ಕಾವೆನಾತನ ದಯದೊ ।
ಳಿಂದುಹಾಸನು ಪೇಳ್ದನೆಂದು ॥
ಮಂದಮತಿಯೊಳು ತಿಳುಹು ಬರದಿರಲು ನಾನವನ ।
ಕೊಂದು ಕಳೆವೆನೆನುತ್ತ ಕಳುಹೆ ॥೪೫೮॥

ಚರಣಕೆರಗುತ ಚರನು ಭರದಿ ಬಂದಾ ನೃಪಗೆ ।
ಒರೆದ ಕೇಳೆಲೊ ಮೂರ್ಖತನದಿ ॥

ಧುರದಿ ಮೇಧಾವಿಯನು ಕೊಂದೆಯಾತನ ತರಳ ।
ಪುರದ ಬಾಹೆಯೊಳೀಗ ಬಂದು ॥೪೫೯॥

ವಾರಿಧಿಯ ತೆರನಂತೆ ಭೂರಿ ಸೇನೆಯ ತರುಬಿ ।
ಸಾರಿ ಬಂದಿಹನವಗೆ ನೀನು ॥
ಘೋರನೆರಗುತ ರಾಜ್ಯವೀಯೆನಲು ಕಿಡಿಗೆದರಿ ।
ಚಾರಕನ ನೂಕಿಸುತಲೆಂದ ॥೪೬೦॥

**ರಾಗ ಮಧ್ಯಮಾವತಿ ಅಷ್ಟತಾಳ**
ಧೀರನ್ಯಾರಿವನು । ರಣಕೆ ಬಂದ । ಘೋರನ್ಯಾರಿವನು ॥ ಪ ॥

ಸಾರಿ ನಾನೀಗಲೆ ಧುರದಿ । ಬಂದ । ಚೋರನ ತರಿವೆನು ಮುದದಿ ॥
ಕೇರಳದ ಮೇಧಾವಿಗೋರ್ವನು । ಪೋರ ಪುಟ್ಟಿಹನೆಂಬ ವಾರ್ತೆಯ ।
ನೂರ ಜನಗಳು ಪೇಳುತಿರ್ಪರು । ಘೋರನೀತನ ತರಿವೆನೀಗಳೆ ॥೪೬೧॥

ಕರಿ ರಥ ವಾಜಿ ಸಂದಣಿಸಿ । ಬೇಗ । ಬರಲೆಂದು ಮಂತ್ರಿಯೊಳ್ ಸಹಸಿ ॥
ಒರೆದು ತನ್ನಯ ತಮ್ಮನಾಗಿಹ । ಧುರವಿಜಯನಾ ಚಂಡಸೇನನ ।

ಕರೆದು ಪೇಳಿದ ಸಮರಕೀ ಕ್ಷಣ । ಪೊರಡು ಸನ್ನಹವೆರಸಿ ಬೇಗನೆ ॥೪೬೨॥
ತ್ವರೆಯೊಳು ಮಾರ್ಬಲ ಕೂಡಿ । ನೃಪ । ಬರುತಿರೆ ಶಶಿಹಾಸ ನೋಡಿ ॥

ಕರದ ಧನು ಝೇಂಕರಿಸಿ ನಿಂದಿರೆ । ತೆರಳುತಾ ಕ್ಷಣ ಚಂಡಸೇನನು ।
ಧುರಕೆ ತರುಬುತ ಬಂದು ಮಾರಾಂ । ತಿರಲು ಖತಿಯೊಳಗುಭಯ ಸೈನ್ಯವು ॥೪೬೩॥

**ಭಾಮಿನಿ**
ಇಂತು ಭೂಪತಿ ಸಮರಕೆಂದು ಮ ।
ಹಾಂತ ಧನು ಶರ ಪಿಡಿದು ನಿಂದಿರೆ ।
ಪಂಥದಿಂದಲಿ ಮದನ ಮುಂಬರಿದಾಗ ಬರುತಿರಲು ॥
ಹೊಂತಕಾರಿಯೆ ಭಾಪುನಿಲ್ಲೆಂ ।
ದಂತಕನ ತೆರನಂತೆ ಗರ್ಜಿಸಿ ।
ನಿಂತನೆದುರೊಳು ಧುರಕೆ ರೋಷದಿ ಚಂಡಸೇನಾಖ್ಯ ॥೪೬೪॥

**ರಾಗ ಮಾರವಿ ಮಟ್ಟೆತಾಳ**
ಅರರೆ ಚಂಡಸೇನ ಬೇಡ ಸಮರ ಸಲ್ಲದು ।
ದೊರೆಗೆ ನಮಿಸಿ ಶರಣು ಹೊಂದೆ ನಿನಗೆ ಲೇಸದು ॥೪೬೫॥

ಎಂದ ಮಾತ ಕೇಳಿ ಚಂಡಸೇನನೆಂದನು ।
ಮಂದಮತಿಯೆ ಕೆಣಕಿ ನೋಡೆನುತ್ತಲೆಚ್ಚನು ॥೪೬೬॥

ಬರುವ ಶರವ ತರಿದು ಮದನ ಖಾತಿಯಿಂದಲಿ ।
ಅರಸನನುಜ ಪಿಡಿದ ಧನುವ ಮುರಿದ ಭರದಲಿ ॥೪೬೭॥

ಚಾಪಪೋಗೆ ಗದೆಯ ತಿರುಹುತಾಗ ಬಡಿದನು ।
ಕೋಪದಿಂದ ಮದನನದರ ಪಿಡಿದು ಸೆಳೆದನು ॥೪೬೮॥

ಅಸಿಯ ಕೊಂಡು ಚಂಡಸೇನನೆತ್ತಿ ಹೊಯ್ಯಲು ।
ಕಸಿದು ಮದನನವನ ಶಿರದ ಮೇಲೆ ಬಡಿಯಲು ॥೫೬೯॥

**ಭಾಮಿನಿ**

ಶಿರವು ಖಂಡಿಸಿ ಚಂಡಸೇನನು ।
ಧರೆಗುರುಳೆ ಪಲ್ಗಡಿದು ತಮ್ಮನ ।
ನರಿದು ಕೆಡಹಿದನ್ಯಾರೆನುತ್ತಲಿ ಶೂರಸೇನಾಖ್ಯ ॥
ಉರಿಗಿಡಿಯನುಗುಳುತ್ತ ನೇತ್ರದಿ ।
ಬರಲು ಹೂಂಕರಿಸುತ್ತ ಸಮರಕೆ ।
ಪರಿಕಿಸುತ ಶಶಿಹಾಸನೈತಂದಾಗ ಮಾರಾಂತ ॥೪೭೦॥

**ರಾಗ ಭೈರವಿ ಅಷ್ಟತಾಳ**

ಎಲೆ ಶೂರಸೇನ ಕೇಳು । ಸಂಗರವೆಂಬ । ಛಲವನ್ನು ಬಿಟ್ಟೀಗಳು ॥
ಘಳಿಲನೊಂದಿಸಿ ಎನ್ನ ರಾಜ್ಯವನಿತ್ತರೆ । ಉಳುಹುವೆ ಪ್ರಾಣಂಗಳ ॥೪೭೧॥

ತಂದೆಯೋರ್ವನು ಗರ್ವದಿ । ಕಾದುತಲೆನ್ನೊ । ಳಂದು ಪೋದನು ವ್ಯರ್ಥದಿ ॥
ಇಂದು ನಿನ್ನನು ಪಿತನೆಡೆಗೆ ಸೇರಿಸುವೆನು । ಮಂದಮತಿಯೆ ನೋಡೆಲೋ ॥೪೭೨॥

ಕಡಿದು ನಿನ್ನಯ ಶಿರವ । ಶೋಣಿತದೊಳು । ಕೊಡುವೆನು ತರ್ಪಣವ ॥
ಮಡಿದ ಪಿತನ ತೃಪ್ತಿಪಡಿಸುವೆ ಪಾಮರ । ನುಡಿವೆ ಏತಕೆ ನಿಲ್ಲೆಲೊ ॥೪೭೩॥

ಶೂರಸೇನನು ಕೋಪದಿ । ಚಾಪಕೆ ತಿರು । ವೇರಿಸುತತಿ ಜವದಿ ॥
ಕ್ರೂರ ಬಾಣಗಳನ್ನು ಬಿಡಲು ಕತ್ತರಿಸುತ್ತ । ಭೋರನೆ ನಿಂದಿರಲು ॥೪೭೪॥

**ರಾಗ ಶಂಕರಾಭರಣ ಮಟ್ಟೆತಾಳ**

ಭಳಿರೆ ನಿನ್ನ ಸಹಸವನ್ನು । ಒಲಿದು ತೋರು ತೋರೆನುತ್ತ ।
ಘಳಿಲನೆಚ್ಚ ಸಾಹೆಯಲಗ । ಶೂರಸೇನನು ॥೪೭೫॥

ಮುರಿದು ಕೆಡಹಿ ಚಂದ್ರಹಾಸ । ಮರುಳೆ ಸಾಯಬೇಡೆನುತ್ತ ।
ಪರಮ ನೀತಿ ಪೇಳೆ ಕೇಳ । ದವನು ಶೌರ್ಯದಿ ॥೪೭೬॥

ಉರಗ ತಿಮಿರ ವಹ್ನಿ ಮರುತ । ಕ್ರೌಂಚ ಮುಸಲ ಪರಶುವೆಂಬ ।
ತರತರಾಸ್ತ್ರ ವೆಚ್ಚು ಬೊ । ಬ್ಬಿರಿದು ನಿಂದನು ॥೪೭೭॥

ತಂಡ ತಂಡ ಶರಗಳನ್ನು । ತುಂಡು ಗೈದು ಚಂದ್ರಹಾಸ ।
ಚಂಡಿ ತನಗೆಯಿತ್ತ ಶರವ । ನೆಸೆದ ಗಜರುತ ॥೪೭೮॥

**ಭಾಮಿನಿ**

ಘೋರನಾ ಶರ ಬಂದು ಎರಗುತ ।
ಶೂರಸೇನನ ಶಿರವ ಛೇದಿಸಿ ।
ಧಾರಿಣಿಗೆ ಕೆಡಹಲ್ಕೆ ಸೈನ್ಯಗಳೆಲ್ಲವೋಡುತಿರೆ ॥
ಸಾರುತಿಹರಿಂಗಭಯ ಕೊಡುತಲಿ ।
ತೋರಿ ಕರುಣವ ಚಂದ್ರಹಾಸನು ।
ಭೇರಿಕಹಳಾರವವ ಗೈಸುತ ಪೊಕ್ಕನರಮನೆಯ ॥೪೭೯॥

**ರಾಗ ಕೇದಾರಗೌಳ ಅಷ್ಟತಾಳ**

ಕರೆಸಿ ಪುರೋಹಿತರನು ವೇಗದಿಂದಲಿ ।
ಪರಮ ಮನ್ನಣೆ ಗೆಯ್ಯುತ್ತ ॥
ಧರಣಿಪಟ್ಟವ ಕಟ್ಟಿಕೊಂಡು ವಿಧ್ಯುಕ್ತದಿ ।
ಪುರದೊಳುತ್ಸವ ಗೈಸಿದ ॥೪೮೦॥

ಪುರಕೆ ಮಂತ್ರಿಯನಿಟ್ಟು ಕುಂತಳನಗರಿಗೆ ।
ತೆರಳಿ ಚಿತ್ರಧ್ವಜಗೆ ॥
ಎರಗಿ ನಡೆದ ವೃತ್ತಾಂತವ ಪೇಳಲು ।
ಹರುಷದೊಳ್ಹರಸಿದನು ॥೪೮೧॥

ಭರಿತಾನಂದದೊಳಾಗ ಕೇರಳ ಕುಂತಳ ।
ವರ ಚಂದನಾವತಿಯು ॥
ಮೆರೆವ ಸೌರಾಷ್ಟ್ರ ದೇಶಗಳನ್ನು ಕುಶಲದಿ ।
ಪರಿಪಾಲಿಸುತಲಿರಲು ॥೪೮೨॥

ಹಿರಿಯ ಪಟ್ಟದ ರಾಣಿ ವಿಷಯೆ ಮತ್ತೆರಡನೆ ।
ತರುಣಿ ಚಂಪಕಮಾಲಿನಿ ॥
ಪರಮಾಹ್ಲಾದದಿ ಪತಿಸೇವೆ ಗೆಯ್ಯುತಲಿರೆ ।
ಮುರಹರಭಕ್ತನಿಗೆ ॥೪೮೩॥

ತರಳನೋರ್ವನು ವಿಷಯೆಯೊಳು ಮಕರಧ್ವಜ ।
ನೆರಡನೆ ತರುಣಿಯೊಳು ॥
ಮೆರೆವ ಪದ್ಮಾಕ್ಷನು ಜನಿಸಲಾನಂದದಿ ।
ಧರೆಯ ಪಾಲಿಸುತಿರ್ದನು ॥೪೮೪॥

ನರನೆ ಕೇಳ್ಕೈ ನಿಮ್ಮ ಮಖವಾಜಿ ಕಟ್ಟಿದ ।
ಧರಣಿಪನಾತ್ಮಜರು ॥
ಧುರದೊಳೀತನಿಗಿದಿರಿಲ್ಲ ಶ್ರೀಹರಿಭಕ್ತ ।
ಪರಮಾಪ್ತನಹ ನಿನಗೆ ॥೪೮೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ನರಗೆ ನಾರದನಿಂತು ಪೇಳುತ । ಸರಿಯಲಂಬರಕತ್ತ ಮುರಹರ ।
ತೆರಳಿ ಬಂದಾ ಚಂದ್ರಹಾಸನ । ಮನ್ನಿಸುತಲಿ ॥೪೮೬॥

ತುರಗವನು ಬಿಡಿಸುತ್ತಲಾತನ । ಕರೆದುಕೊಂಡ್ಯೆದಿದರು ಹಸ್ತಿನ ।
ಪುರಿಗೆ ಧರ್ಮಜನೆಜ್ಞ ಪೂರೈ । ಸುವರೆ ಭರದಿ ॥೪೮೭॥

ಹರಿಯ ಭಕ್ತನ ಚರಿತೆಗಳ ನಾ । ನರಿತ ತೆರದಲಿ ಗೈದೆ ತಪ್ಪಿರೆ ।
ಪರಮ ವಿದ್ವಜ್ಜನರು ತಿದ್ದುತ । ಮೆರೆಸಿರಿದನು ॥೪೮೮॥

ಕ್ರೋಧಿ ವತ್ಸರ ಗ್ರೀಷ್ಮಋತು ವಾ । ಷಾಢ ಬಹುಳ ದ್ವಿತೀಯದಲಿ ನಾ ।
ಮಾಧವನ ದಯದಿಂದಲೀ ಕೃತಿ । ಪೂರ್ಣಗೈದೆ ॥೪೮೯॥

ಧರೆಯೊಳುತ್ತಮ ತೀರ್ಥರಾಜಾ । ಪುರದೊಳಿಹ ಮಹ ತುಂಗಭದ್ರೆಯ ।
ಮೆರೆವ ದಕ್ಷಿಣಕೂಲದೊಳಗಿಹ । ಪನಸಪುರದ ॥೪೯೦॥

ಧರೆಯಮರ ನಾಗೇಂದ್ರ ಶಾಸ್ತ್ರಿಯ । ತರಳನಾದ ನೃಸಿಂಹನೆಂಬನು ।
ವಿರಚಿಸಿದ ಧರೆಯೊಳಗೆ ಮರೆಸುವು । ದೆಲ್ಲವಿದನು ॥೪೯೧॥

**ಮಂಗಲ**
**ರಾಗ ಧವಳಾರ ಆದಿತಾಳ**
ಮಂಗಲ ಮಂಗಲ ನರಹರಿಗೆ ।
ಮಂಗಲ ಮಂಗಲ ಮುರಹರಗೆ ॥
ಮಂಗಲ ಮಂಗಲ ನಗಧರ ರಘುಕುಲ ।
ಪುಂಗವ ಸೀತಾರಾಮನಿಗೆ ॥
ಮಂಗಲಂ ಜಯ ಮಂಗಲಂ ॥೪೯೨॥

ಮಂಗಲ ಮಂಗಲ ಮತ್ಸ್ಯನಿಗೆ ।
ಮಂಗಲ ಮಂಗಲ ಕೂರ್ಮನಿಗೆ ॥
ಮಂಗಲ ವರಹವತಾರ ನೃಸಿಂಹಗೆ ।
ಮಂಗಲ ವಾಮನಮೂರುತಿಗೆ ॥
ಮಂಗಲಂ ಜಯ ಮಂಗಲಂ ॥೪೯೩॥

ಮಂಗಲ ಭಾರ್ಗವರಾಮನಿಗೆ ।
ಮಂಗಲ ದಶರಥರಾಮನಿಗೆ ॥
ಮಂಗಲ ಗೋಕುಲವಾಸ ಶ್ರೀಕೃಷ್ಣಗೆ ।
ಮಂಗಲ ಬೌದ್ಧಕಲ್ಕ್ಯರಿಗೆ ॥
ಮಂಗಲಂ ಜಯ ಮಂಗಲಂ ॥೪೯೪॥

***ಯಕ್ಷಗಾನ ಚಂದ್ರಹಾಸಚರಿತ್ರೆ ಮುಗಿದುದು***

# ಯಕ್ಷಗಾನ ವಿಷಯೆ ಕಲ್ಯಾಣ ಎಂಬ ಚಂದ್ರಹಾಸಾಖ್ಯಾನ

## ಪಾತ್ರಗಳು

**ಪುರುಷ ಪಾತ್ರ :**

ಮೇಧಾವಿ - ಕೇರಳ ದೇಶದ ರಾಜ
ಮಾರ್ತಾಂಡ - ಪದ್ಮಪುರದ ರಾಜ
ಚಂದ್ರಹಾಸ - ಮೇಧಾವಿಯ ಮಗ
ದುಷ್ಟಬುದ್ಧಿ - ಕುಂತಳದ ಮಂತ್ರಿ
ಕುಳಿಂದ - ಚಂದನಾವತಿಯ ಒಡೆಯ
ಮದನ - ದುಷ್ಟಬುದ್ಧಿಯ ಮಗ
ಸುಬುದ್ಧಿ - ಕುಂತಳದ ರಾಜ
ಗಾಲವ - ಕುಂತಳ ರಾಜಪುರೋಹಿತ

**ಸ್ತ್ರೀ ಪಾತ್ರ :**

ಶೀಲೆ - ಮೇಧಾವಿಯ ಹೆಂಡತಿ
ಮುದುಕಿ - ಚಂದ್ರಹಾಸನ ಸಾಕುತಾಯಿ
ಮೇಧಾವಿನಿ - ಕುಳಿಂದನ ಹೆಂಡತಿ

ವಿಷಯೆ - ದುಷ್ಟಬುದ್ಧಿಯ ಮಗಳು

ಚಂಪಕಮಾಲಿನಿ - ಕುಂತಳರಾಜನ ಮಗಳು

ತಾರಾಕ್ಷಿ - ದುಷ್ಟಬುದ್ಧಿಯ ಹೆಂಡತಿ

ಶ್ರೀ ಕಾಳಿ - ಕುಂತಳದ ವನದೇವತೆ

**ಇತರ ಪಾತ್ರಗಳು :**

ಬ್ರಾಹ್ಮಣರು

ಕಟುಕರು

ಕಪ್ಪದ ದೂತರು

ಚಾರಕರು

ಸಖಿಯರು

ಹುಡುಗರು (ಬಾಲಚಂದ್ರಹಾಸನೊಂದಿಗೆ ಆಡುವವರು)

೧

**ಶಾರ್ದೂಲವಿಕ್ರೀಡಿತ ವೃತ್ತ**

ರಾಕೇಂದೂವದನಂ ಸಮುದ್ರ ಭವನಂ ಲೋಕೇಶ್ವರಂ ಮಾಧವಂ ।
ನಾಕೇಶ್ಯಾದ್ಯಮರಾರಿವಂದಿತಪದಂ ಖದ್ಯೋತಕೋಟಿಪ್ರಭಂ ।
ಶ್ರೀಕಾಂತಂ ಕರುಣಾಕರಂ ವಿಧಿಪಿತಂ ಕಾಕಾರಿವಿಪ್ರಪ್ರಿಯಂ ।
ಸಾಕಾರಂ ವರನೀಲಲೋಹಿತಸಖಂ ಧ್ಯಾಯಾಮಿ ದಾಮೋದರಂ ॥೧॥

**ರಾಗ ನಾಟಿ ಝಂಪೆತಾಳ**

ಜಯತು ಸರಸಿಜನೇತ್ರ । ಜಯತು ಪರಶಿವ ಪುತ್ರ ।
ಜಯತು ಶರಣರ ಮಿತ್ರ । ಜಯತು ಕರಿವಕ್ತ್ರಾ ॥
ಜಯತು ಜಯ ಜಯತೂ ॥೧॥

ತರಣಿಕೋಟಿ ಪ್ರಕಾಶ । ದುರಿತವಿಘ್ನವಿನಾಶ ।
ಕರದಿ ಪರಶೂಪಾಶ । ವರದಾಗಣೇಶಾ ॥
ಜಯ ಜಯತು ಜಯತೂ ॥೨॥

ಹಾರ ಕೊಡಲಿನಮುತ್ತ । ನೀರಗಿರಿಸುತೆ ಪೆತ್ತ ॥
ಧೀರಯೆನಗೊಲಿದಿತ್ತ । ಬೀರುತವ ಚಿತ್ತಾ ॥
ಜಯತು ಜಯತು ಜಯತೂ ॥೪॥

**ಭಾಮಿನಿ**

ಕ್ಷೀರಸಾಗರಜಾತೆಗೊಂದಿಸಿ ।

ವಾರಿಜೋದ್ಭವ ಸತಿಗೆರಗಿಭವ ।
ನಾರಿಗಭಿನಮಿಸುತ್ತ ತ್ರೈಮೂರ್ತಿಗಳ ಧ್ಯಾನಿಸುತಾ ॥
ನಾರದಾದಿ ಮುನೀಶ ಸುಮನಸ ।
ವಾರಕಾನತನಾಗಿ ಗುರುಚರ ।
ಣಾರವಿಂದಕೆ ಮಣಿದು ಪಿರಿಯರ ನೆನೆದು ಶರಣೆನುತೆ ॥೫॥

**ದ್ವಿಪದಿ**

ಪೂರ್ವ ಕವಿಗಳ ನೆನೆದು ಭಕುತಿಪರನಾಗಿ ॥
ಊರ್ವಿಯೊಳಗೆಸೆವ ಕವಿನಿಪುಣರಿಗೆ ಬಾಗಿ ॥೬॥

ಒಂದು ದಿನ ವಿಷಯೆ ಜಲಕೇಳಿಗೆಂದೆನುತಾ ॥
ಬಂದು ರಮಣನ ಲಾಭಗೈದ ಕಥೆ ಸಹಿತಾ ॥೭॥

ಪರಮ ಜೈಮಿನಿ ವಿರಳವಾಗಿ ಭಾರತದಿ ॥
ಬರೆದಿರ್ಪ ಶಶಿಹಾಸ ಚರಿತವನು ಮುದದಿ ॥೮॥

ಸಿದ್ಧಿಗಣಪನ ಪೂರ್ಣ ಕೃಪೆಯೊಳಾನೊರೆದೆ ॥
ತಿದ್ದಿ ವಾಚಿಪುದಿದನು ಸುಮತಿಗಳು ಬಿಡದೆ ॥೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಸಿಂಧುತನಯನ ಮೊಮ್ಮ ಮೊಮ್ಮ ಮ । ದಾಂಧರಿಪುಮರ್ದನ ಪರೀಕ್ಷಿತ ।
ನಂದನಗೆ ಭಾರತವ ಜೈಮಿನಿ । ಚಂದದಿಂದಾ ॥೧೦॥

ಕಥಿಸುತಿರೆ ಜನಮೇಜಯಾಖ್ಯನು । ಮತಿಗೆಡದೆ ಅವ ಸ್ತಬ್ಧನಾಗಿರೆ ।
ಯತಿವರೇಣ್ಯನಿದೇನೆನಲು ಜನ । ಪತಿಯುಸುರ್ದಾ ॥೧೧॥

ಗೋತ್ರವಧೆ ಕಿಲ್ಬಿಷದ ಭೇದಕೆ । ಭ್ರಾತೃಸಹಿತಶ್ವವನು ಬಿಡಲಾ ।
ವೃತ್ರಹಾಸುತ ಕಪ್ಪಕೆನುತಲೆ । ಯಾತ್ರೆಗೈಯ್ಯೇ ॥೧೨॥

ಹರಿತರಲು ಸೌರಾಷ್ಟ್ರ ನಗರಿಗೆ । ಹರಿಯೊಳಾಹರಿತನಯ ಕಾಯಲ್ ।
ಹರಿಯುಹರಿಸಲು ಧುರವ ಕರಸಹ । ಬರಲು ಭೂಪಾ ॥೧೩॥

ಹರಿಯು ಹರಿತಂದೆಡೆಗೆ  ಮೇಲ್ ಹರಿ । ಮರುಗೆ ಹರಿಕೇತುಗೆ ತತುಕ್ಷಣ ।
ಹರಿಶಯನಸುತ ಪುತ್ರ ಪೇಳಿದ । ಪರಿಯೊಳೀಗಾ ॥೧೪।

ಕಂಸಶಾಸನಭಕ್ತನಾದ ಹಿ । ಮಾಂಶು ಹಾಸನು ಜನಿಸಿ ರಾಜ್ಯ ।
ಭ್ರಂಶವಾಯ್ತೆಂಬಾ ಕಥೆಯೊಳ್ಮನೆ । ದಂಶವಿಹುದೂ ॥೧೫॥

ಸಂಶಯವು ಬಿಡುವಂತದರ ಸಾ । ರಾಂಶವೆಲ್ಲವವರಗಯ್ಯೆ ।
ವಂಶಗೇಡಿಯು ದುಷ್ಟಬುದ್ಧಿ ಪ್ರ । ಸಂಶೆಗೂಡೀ ॥೧೬॥

ಕುಸುಮ ಶರತಾಪದೊಳು ಬಾಲಗೆ । ವಿಷಯೆ ದೊರಕಿದಳೆಂತು ಬಳಿಕಾ ।
ವಸುಧೆಗಧಿಪತಿಯಾಗಿ ಕಾಳಿಯೊ । ಲಿಸಿದನೆಂತೂ ॥೧೭॥

ವಿವರಿಸಲು ಬೇಕೆಂದು ವರ ಪದ । ಕುವಲಯದಿ ಕೆಡದಿರ್ದ ಭೂಪನ ।
ಸವಿನುಡಿದು ತಕ್ಕೈಸಿ ವ್ಯಸನವ । ಸವರಿಸುರ್ದಾ ॥೧೮॥

**ರಾಗ ಕಾಂಭೋಜಿ ಝುಂಪೆತಾಳ**

ಧಾರುಣೀಪತಿ ಕೇಳು । ಕೇರಳಾಧಿಪ ತಾನು ।
ದಾರಗುಣ ಮೇಧಾವಿ । ಶೂರನೊಂದಿನದೀ ॥
ಸೇರಿ ಸಭೆಯೊಳ್ ತನ್ನ । ವೀರ ಮಂತ್ರಿಯ ನೋಡಿ ।
ಸಾರತರ ಕ್ಲೇಶವಿ । ಸ್ತಾರದಲಿ ಪೇಳ್ದಾ ॥೧೯॥

ಪುತ್ರನಿಲ್ಲದ ಮನುಜ । ನುತ್ಕೃಷ್ಟನಹನೆ ಸುರ ।
ಶತ್ರುವಲ್ಲವೆ ಬರಿದೆ । ಧಾತ್ರಿಪತಿಯೆನಿಸೀ ॥
ಚಿತ್ರಗುಪ್ತರ ಪರಮ । ಮಿತ್ರನಲ್ಲದೆ ಕಮಲ ।
ಪತ್ರಾಕ್ಷಸಖನಹನೆ । ಗೋತ್ರರಿಪುವವನೂ ॥೨೦॥

ಅಜನೃಪಾಲನಸುತನು । ಕುಜನನಾದನೆ ಸುತರ ।
ತ್ಯಜಿಸದಿರು ಅಂತ್ಯದಲಿ । ನಿಜಪದವಿ ಗಳಿಸೀ ॥
ದ್ವಿಜಗಮನ ಚರಣಪಂ । ಕಜಭ್ರಮರವೆನಿಸಿರ್ಪ ।
ರುಜುಸುತರ ದರ್ಶನವೆ । ವಿಜಯವೀಭವಕೆ ॥೨೧॥

**ವಾರ್ಧಕ**

ಎನಗೆ ಪುತ್ರೋತ್ಸವಂ ಎಂದಹುದೊ ತಕ್ಷಣದಿ ।
ಘನತರದ ಸತ್ರಾದಿದೇವ ಮಂದಿರಗಳಿಂ ।
ಮನದೊಳಿಹ ತೆರಗೈದು ತೆಗೆಸಿ ಕಾರಾಗೃಹಂ ಕರೆಸಿ ಭೂಸುರನಿಕರಕೆ ॥
ಅನುಸರಿಸು ವಸ್ತು ನೂರೊಂದು ಬಳ್ಳದ ಮುತ್ತ ।
ನನುಪಮ ಸುವರ್ಣ ಶತಭಾರ ಮುನ್ನೂರು ಕಾಂ ।
ಚನವಿಭೂಷಿತ ಸುರಭಿಗಳನು ಮನ್ನಿಸುವೆನಾನಖಿಲಯಾಚಕವರ್ಗವಾ ॥೨೨॥

**ಕಂದ**

ಈತನ ನುಡಿಯಾಲಿಸಿ ಸಿರಿ ।
ನಾಥನು ತನಯಂಗೆಚ್ಚರಿಸಲ್ ಶೀಲೆಯು ।

ಮೋದದಿ ಧರಿಸಿದ ಗರ್ಭದ ।
ಬಾಧಕಮಂತಾಳದೆ ಸಖಿಗೊರೆದಳ್ ಇರಮಂ ॥೧೩॥

**ರಾಗ ನೀಲಾಂಬರಿ ಮಟ್ಟೆತಾಳ**
ಸುತರುಗಳಿಲ್ಲದ ಜನ್ಮಕೆ । ಗತಿ ದೊರಕದೆನುತ್ತಲಿ ಭೂ ।
ಪತಿಯೊಳು ಬೆರೆದುದರಿಂದಾ । ಗತಿ ತೀರಿತು ಸುಗುಣೀ ॥೧೪॥

ಒಡಲೋಳೊಂದೆಡೆ ಪಿಡಿವುದು । ತೊಡೆಯೋಳ್ ನಾಡಿಗಳೆಳೆವುದು ।
ಜಡಜಾಕ್ಷಿಯೆ ಪಿಡಿಯೆನ್ನನು । ನಡುತುಂಡಿಸುತಿಹುದೂ ॥೧೫॥

ಸರಸಿಜೋದ್ಭವನೆಸಗಿದ । ಉರುತರ ಕಷ್ಟವನ್ಯಾರದು ।
ಹರಿಪರು ಸುಮ್ಮನೆ ಮರುಗೀ । ಮರುಳೆಯು ಆದೆನೆಲಾ ॥೧೬।

**ಭಾಮಿನಿ**
ಆರು ಸಲಹುವರೆಂದು ಮರುಗುವ ।
ಚಾರುವದನೆಗೆ ದುರ್ಮುಹೂರ್ತದಿ ।
ತಾರಮೂಲಾರಿಷ್ಟ ಭಾಗದಿ ಜನಿಸಿದನು ಕುವರಾ ॥
ಆರು ಬೆರಳಡಿಯಿಂದ ಧರೆಯನು ।
ತೂರುತಿರಲಾ ಸೂಲಗಿತ್ತಿಯರ್ ।
ದೂರಿದರು ನೃಪಗಿದನು ತಕ್ಷಣ ಕರೆಸಿದನು ಬುಧರಾ ॥೧೭॥

**ವಾರ್ಧಕ**
ಕನಕವಸನಾಭರಣ ಗೋಮಹಿಷಿಯಜಗಳಿಂ ।
ಮಿನುಪನವರತ್ನ ಧಾರುಣಿ ಪಾತ್ರಫಲಗಳಿಂ ।
ಧನಧಾನ್ಯ ಕೃಷ್ಣಾಜಿನ ವಸ್ತು ವ್ಯಜನದಿಂ ಗಂಧಚಂದನಗಳಿಂದೇ ॥
ಜನಪ ಬುಧ ಸಂತತಿಯ ದಾನಧರ್ಮದಿ ತಣಿಸಿ ॥
ಘನಬಂಧನದೊಳಿರ್ದಸೆರೆಯಾಳ್ಗಳಂ ಬಿಡಿಸಿ ।
ಅನುಪಮದ ವಿಪ್ರರೋಳ್ ಜನ್ಮ ಲಿಖಿತಂಬರೆಸಿ ಎರಗಿದಂ ಫಲವ ಬಯಸೀ ॥೧೮॥

**ರಾಗ ಪುನ್ನಾಗ ಆದಿತಾಳ (ಪಾಲಿಸೋ ಪಾವನ ಚರಿತ ಎಂಬಂತೆ)**
ಭಾದಸರಾಗ ಕೈಪಲ್ಲವಮಡಿದೂ ॥ ಮೋದವಗೊಳ್ಳದೆ ಪೇಳ್ದರು ತಿಳಿದೂ ॥ ಪಲ್ಲವಿ ॥

ಹೇಧರಣಿಪ ಜಿಂಹೆ ಸೇರಿದೆ ಒಂದೇ ॥
ಆದರಿಸುವದೆಂತೈ ಕೇಳ್ದರೆ ಮುಂದೆ ॥೨೦॥

ತಾರಾಮೂಲಾರಿಷ್ಟ ಭಾಗದಿ ಶುಭವೂ ॥
ದೋರದು ನಿನಗಿದೆ ಶೀಘ್ರದಿ ಮೃತಿಯು ॥೨೦॥

ವೀರರೀರಾಜ್ಯವ ಕೊಂಬರು ಧುರದೀ ।
ದಾರಿಯ ಕಾಣೆವು ಪಾರಹ ತೆರದೀ ॥೩೧॥

ತಟ್ಟನೆ ಭೂಸುರನಿಕರಕೆ ದಾನಾ ॥
ಕೊಟ್ಟರೆ ಶಾಂತಿಯಿಂದಾಹುದೈಶಮನಾ ॥೩೩॥

ಭಟ್ಟರನೆಲ್ಲರ ಕರೆಸುವುದೀಗಾ ॥
ಗಟ್ಟಿಯ ಮಾಳ್ಪೆವು ಅವನಿಯ ಭೋಗಾ ॥೩೪॥

**ಭಾಮಿನಿ**
ಪಾರ್ವರಿಂತೆನುತಿರಲು ಧರಣಿಪ ।
ನೂರ್ವಿಗೊರಗಿರಲಾಗ ಪ್ರಜೆಗಳು ।
ಚೀರ್ವಧ್ವನಿಗೇಳುತ್ತ ಪದ್ಮಪುರಾಧಿಪತಿತನಯಾ ॥
ಸಾರ್ವಜನಸಹಿತೈದೆ ಕೇರಳ ।
ದೋರ್ವಚರಗಂ ಬರೆದು ಸುಣ್ಣವ ।
ದೂರ್ವುದೆಂದಟ್ಟಿದ ರಣಾಗ್ರಕೆ ತೆರಳಿ ಬಹುದೆನುತಾ ॥೩೫॥

**ರಾಗ ಲಾವಣಿ ಏಕತಾಳ (ಆರೆಲೆ ಹುಡುಗಿ ಎಂಬಂತೆ)**
ಆಗದಾಗದು ನೃಪತಿ । ಬಾಗಿಲೊಳಿರುವ ವೃತ್ತಿ ॥
ಸಾಗದೆಮ್ಮೊಳು ಬಹುಭೀತಿ ॥ ಹೋಗುವೆವೀಗಾ । ಸಾಗದೆಮ್ಮೊಳು ಬಹುಭೀತೀ ॥೩೬॥

ಮದಮುಖರಾಜರಿಂದು । ಕುದುರೆ ಸಹಿತ ಬಂದು ।
ಒದೆದೆಮ್ಮ ನೂಕಿದರೂ । ಸದೆದು ಮತ್ತೆ । ಒದೆದೆಮ್ಮ ನೂಕಿದರೂ ॥೩೭॥

ರಟ್ಟೆಯ ಕಟ್ಟಿ ಜೂಟ । ಮೆಟ್ಟಿಕೊಟ್ಟರು ಲಾಟ ।
ಇಬ್ಬರು ನೀಟ ಗೀಟಾ । ಮೂಗಿನ ಮೇಲೆ । ಇಟ್ಟರು ನೀಟ ಗೀಟಾ ॥೩೮॥

**ರಾಗ ಮಾರವಿ ಏಕತಾಳ**
ಚಾರರ ನುಡಿಯನು ಕೇಳುತ ನೇತ್ರದಿ । ಸೋರಿಸುತುರಿಗಿಡಿಯಾ ॥
ಚೋರರರಸೀಳ್ವೆನು ಕಡಿದೊಟ್ಟೆಲ್ಲರ । ತೋರಿಸುವೆನು ವಿಜಯಾ ॥೩೯॥

ಸತ್ಯವು ಭೂಸುರರೆಂದಾ ನುಡಿಯದು । ಮಿಥ್ಯವಹುದೆ ಧುರವಾ ।
ಮೃತ್ಯುವು ತಂದಿದೆ । ಕ್ಷತ್ರಿಯ ಧರ್ಮದಿ । ಹತ್ತುವೆ ಸುರಪುರವಾ ॥೪೦॥

ಸಿದ್ಧವ ಮಾಡೈ ಸಚಿವನೆ ಸೈನ್ಯವ । ಯುದ್ಧಕೆ ಬಹುತ್ವರದೀ ॥
ಸದ್ದಡಗಿಸುತಲಿ ಬದ್ಧೀನರ । ಹೊದ್ದಿಪೆ ಜವಪುರದೀ ॥೪೧॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಥಟ್ಟನಸ್ತ್ರವ ಪಿಡಿದು ಕರಿಗಳ । ಬಿಟ್ಟು ರಥವನು ಏರಿ ಕುದುರೆಯ ।
ಕಟ್ಟಿ ಮುಂದಕೆ ತೆರಳಿ ದರುಶನ । ಗೊಟ್ಟು ಪೇಳ್ದ ॥೪೧॥

ಹೇಳು ನಿನ್ನಭಿಧಾನ ಸುಮ್ಮನೆ । ಕಾಳಗವ ಬಯಸಿರ್ಪುದೇನಿದು ।
ಖೂಳ ನಿನ್ನಸುವಪ್ಪಿಸುವೆನಾ । ಕಾಲನಿಂಗೇ ॥೪೩॥

ಕನ್ನೇಯೀವೆಯ ಪೆಸರು ಮಾರ್ತಾಂ । ಡೆನ್ನುವರು ಕಾಳಗದೊಳೀಪುರ ।
ವೆನ್ನದೆನಿಸಲು ಬಂದೆ ಕೊಲ್ಲುತ । ನಿನ್ನನೀಗಾ ॥೪೪॥

**ರಾಗ ಘಂಟಾರವ ಅಷ್ಟತಾಳ**

ಕೇಳುತೆದ್ದನು ರೋಷದಿ ಭೂಪಾಲ ।
ಕಾಲಭೈರವನಂತೆ ಘರ್ಜಿಸಿ । ಕೀಲಿಸಿದ ಶರವಂದನೂ ॥೪೫॥

ಕಿಚ್ಚಿನಂದದಿ ಬರುತಿಹ ಶರವನ್ನು ।
ನುಚ್ಚುನುರಿಯನು ಮಾಡಿ ಮರುಶರ । ವೆಚ್ಚನಾಕ್ಷಣ ಭೂಪಗೇ ॥೪೬॥

ಕಡಿಯುತಸ್ತ್ರವ ಪ್ರತಿಬಾಣದೊಳು ರಿಪು ।
ಪಡೆಯ ಮುಸುಕಿದನೇನನೆಂಬೆನು । ಕಡುಪರಾಕ್ರಮದಿಂದಲೀ ॥೪೭॥

**ವಾರ್ಧಕ**

ಚೀರಿತು ತುರಂಗಮಂ ಶರಘಾತದಿಂಸೇನೆ ।
ಕಾರಿದುದು ರುಧಿರಮಂ ಭುವಿಯಿಂದ ಸ್ಯಂದನಂ ।
ಹಾರಿ ಗಗನಾಂತರಕೆ ಧಾತ್ರಿಯೊಳ್ ಬೀಳೆಯಮನೂರ ಸೇರಿದ ಸೂತನೂ ॥
ವೀರಮಾರ್ತಾಂಡ ಮೂರ್ಛಿಸಲೊರೆದ ಮೇಧಾವಿ ।
ತೋರೆಲವೋ ನಿನ್ನ ಕೈಚಳಕ ಮಂಬರಿದೆ ಧುರ ।
ಧೀರರೊಳ್ಕಾದಲ್ಕೆ ನಗದಿಹರೆ ರಥದೊಳಗೆ ಹೊರಳುವುದು ಥರವೆ ನಿನಗೆ ॥೪೮॥

**ಕಂದ**

ಶರದಿಂ ಮೂರ್ಛಿಸಿ ರಥದೋಳ್ ।
ಒರಗಿರೆಯೆಚ್ಚರುತತಿಧೈರ್ಯದೊಳಿರುತಾಗಳ್ ।
ಕರದೋಳ್ ಚಾಪವ ಧರಿಸುತ ।
ಸುರಿಸುತೆ ಶಿಲಿಮುಖ ಮಳೆಯನ್ನೊರೆದನು ರವದಿಂ ॥೪೯॥

**ರಾಗ ಭೈರವಿ ಅಷ್ಟತಾಳ**

ಒಮ್ಮೆಯನ್ನನು ಧುರದೀ । ಗೆದ್ದಿಹೆನೆಂಬ । ಹಮ್ಮಿನಲಿರ್ಪೆ ಭರದಿ ॥
ನಮ್ಮೊಳು ಬವರದಿ ಹಳಚಿ ಬಾಳಿದರುಂಟೆ । ಬೊಮ್ಮ ಶರದಘಾತದೀ ॥೫೦॥

ಎಂದು ಚಾಪದೊಳು ಶರವ । ಬೇಗದೊಳಿಟ್ಟು ॥
ಮುಂದೆ ಹಾರಿಸಲು ಶೂರಾ । ಇಂದಿರೆಯರಸನ ವಿಶಿಖದಿ ಕಡಿದವ । ನಿಂದಿಸುತಿರೆ ಭೂವರಾ॥೫೧॥

ಮೂಢ ನಿನ್ನನು ಗೆಲ್ಲುವಾ । ಮೋಡಿಯ ಬಲ್ಲೆ । ನೋಡು ಭೈರವಶರ ॥
ಹೂಡಿಹೆನೆನುತೆಸೆಯಲು ಭೂಪನರಸಿದ । ಗಾಢದಿ ಸುರಪುರವ ॥೫೨।

**ರಾಗ ಕೇದಾರಗೌಳ ಅಷ್ಟತಾಳ**
ಧರಣಿಪಾಲಕನನ್ನು । ತರಿದು ಶ್ಯಾಮಿನಿಪುರ ।
ವರಕೈಸಿ ತಾನು ಬೇಗಾ ॥
ಹರಿತಂದು ನೃಪನಮಂ । ದಿರದಿ ವಾಸವಗೆಯ್ಯೆ ।
ಮರುಗುತ್ತ ಶೀಲೆಯಾಗಾ ॥೫೩॥

ಕರೆದೋರ್ವ ಮುದಿದೂತಿ । ಗೊರೆದಳೆನ್ನಯ ಚಿಕ್ಕ ।
ತರುಣನ ಕೊಂಡು ನೀನೂ ॥
ಪರಿಪಾಲಿಸುವುದೀತ । ತರಳನಾಗಿಹ ನಿಂಗೆ ।
ತೆರೆಯದೆ ಕಾಯೆ ಇನ್ನೂ ॥೫೪॥

ಎಂದಾಲಿಪಿಸುತಲಿ । ನಂದನನನು ಬಿಟ್ಟು ।
ಮುಂದೈದಿ ಕಾಳಗದೀ ॥
ಹೊಂದಿದೆ ರಮಣ ಹ್ಯಾ । ಗೆಂದು ಚಿಂತಿಸಿದಳು ।
ನಿಂದೊಡಲತಾಪದೀ ॥೫೫॥

**ರಾಗ ಸಾವೇರಿ ಆದಿತಾಳ**
ಉಡುರಾಜನಂತಾಮೊಗಾ । ಕಂದಿಹುದ್ಯಾಕೆ ।
ನುಡಿಯೇಳು ಕಾಂತಾ ಬೇಗಾ ॥
ಪಡೆಯನೇ ರಾಜ್ಯಭೋಗಾ । ಕೈಗೊಂಡು ಬಹು ।
ಸಡಗರದೋರು ಈಗಾ ॥೫೬॥

ಎಂತಳಿದೆಯೋ ಭೂವರಾ । ರಣದಿ ಬಲ ।
ವಂತರೊಳಗೆ ನೀಶೂರಾ ॥
ಚಿಂತಿಸುತಿಹ ಜನರಾ । ಪಾಲಿಸದಿರೆ ।
ಎಂತುಳಿಯುವುದೆ ಶಿರಾ ॥೫೭॥

ಕಂದನ ಬಯಸಿ ಇಂತೂ । ವೈರಾಗ್ಯವೇನೂ ।
ಬಂದಿಹನಿದಕೋ ಮುಂತೂ ॥
ಚಂದಿರವದನನಿಂತೂ । ಮಾತಾಡದಿರೆ ।
ಮುಂದೆ ಜೀವಿಸುವುದೆಂತೂ ॥೫೮॥

**ಭಾಮಿನಿ**

ಹಲುಬೆ ಬಹುಪರಿ ಮರುಳರಂದದಿ ।
ಅಲೆಯದಿರೆ ಭೂಪಾಲನಕ್ಷಿಯು ।
ವಲಿದ ಸುರಕಾಂತೆಯರ ಸೊಬಗಿಂಗೆನುತ ನಿಶ್ಶೈಸೀ ॥
ಜ್ವಲನ ರಥಮಂಯೇರಿ ಪತಿಯೊಳು ।
ಛಲದಿ ಬೆನ್ನಟ್ಟಿದಳು ಕಾಮುಕ ।
ಲಲನೆಯರ ಜೊತೆಗೊಡದೆ ಕೇಳ್ ಸಹಗಮನ ಮಾರ್ಗದಲೀ ॥೫೯॥

**ರಾಗ ಮಧುಮಾಧವಿ ತ್ರಿವುಡೆತಾಳ**

ಸುದ್ದಿಗೊಡಿಸದೆ ಅರಿನೃಪಾಲಗೆ । ವೃದ್ಧೆ ತರಳನು ಸಹಿತ ಕುಂತಳ ।
ಕೆದ್ದುಗಮಿಸಲ್ ಬಳಲಿ ಭುವಿಯೊಳು । ಬಿದ್ದು ಅಳುತಾ ॥೬೦॥

ಇಡಲು ತೊಟ್ಟಿಲೆಲ್ಲಿಹುದು ಬಾಲಗೆ । ತೊಡಿಗೆಯೆಲ್ಲಿದೆ ನಿಳಯವಿಲ್ಲವು ।
ಬಿಡದೆರೆಯೆನೀರ್ಗುಡಿಯೆ ಕ್ಷೀರವ । ಕೊಡುವೆನೆಂತೂ ॥೬೧॥

ಧರಣಿಪತಿ ಮೇಧಾವಿ ಸತಿಸಹ । ಪರಕೆಯೊಳು ಪಡೆದೀಗ ನಿನ್ನನು ।
ಪರಿಕಿಸದೆ ನಾಕದೊಳು ಸೇರ್ದರು । ಜರಡೆಗಿತ್ತು ॥೬೨॥

ಬಾಲಲೀಲೆಯ ನೋಡಿ ಹಿಗ್ಗುತ । ಲಾಲನೆಗಳಿಲ್ಲೆಂದು ಚಿಂತಿಸಿ ।
ಪಾಲುಬೆಣ್ಣೆಯ ಬೇಡಿ ಚಿಣ್ಣನ । ಪಾಲಿಸಿದಳೂ ॥ ॥೬೩॥

ಶೀಲ ನಡೆ ನುಡಿಗಲಿಯೆ ಬಾಲನು । ಮೇಲೆ ರುಜೆ ಬಂದಡಸಿ ಜರಡೆಯು ।
ಕಾಲನೆಡೆಗೈದಿರಲು ಪಸುಳೆಯು । ಘೋಳಿಡುತಲೀ ॥ ॥೬೪॥

**ರಾಗ ನವರೋಜು ಏಕತಾಳ**

ಯೇಳವ್ವಾ ಮಲಗುವುದೇ । ಹಸು ।
ಬಹಳವಾಗಿಯೆ ದಣಿದೇ ॥
ಬಾಳೆಖರ್ಜೂರ ಕಿ । ತ್ತಳೆದ್ರಾಕ್ಷೆಫಲವು ಸೀ
ಯಾಳವನ್ನಿತ್ತೆನ್ನ । ಪಾಲಿಸು ದಯದೊಳು ॥೬೫॥

ಯಾತಕೆ ಮೌನದೊಳಿರುವೇ । ಕಡು ।
ಭೀತಿಯ ನಾ ತಳೆದಿರುವೇ ॥
ಕೂತು ಮುದ್ದಿಸುತೆನ್ನ । ಮಾತನಾಡಿಸು ತಾಯೆ ।
ರೀತಿಯಲ್ಲವು ಸುಮ್ಮ । ನೇತರ ಮುನಿಸಿದು ॥೬೬॥

**ರಾಗ ಕಲ್ಯಾಣಿ ಆದಿತಾಳ (ಧಾಟಿ : ಹಿಡಿದ ವ್ರತವಾ ಬಿಡೆನು ಎಂಬಂತೆ)**

ತೊಡುವಿಗೀಯದಿರುವೆಯೆನ್ನುತ್ತಾ । ಮಲಗಿಹಳೆಂದು ।

ಪಿಡಿದು ಕಯ್ಯನಾಗಯಳೆಯುತ್ತಾ ||
ಕೊಡುಕೊಡೆಂದು ಛಲವದೋರುತ್ತಾ | ಕಂಬನಿದುಂಬಿ |
ಕೆಡಹಿಶವದ ಮೇಲೆ ಬೀಳುತ್ತಾ ||೬೭||

ಅಳುತ ಹಟದೋಳೀರ್ಪಬಾಲನಾ | ಪುಷ್ಕರಣಿಗ್ರೈವ |
ಲಲನೆ ವ್ಯೂಹ ಪಿಡಿಯುತೀತನಾ ||
ಎಲವೋ ಮುಟ್ಟಬೇಡ ಶವವನ್ನೂ | ಬಾ ಎಂದು ಕರದಿ |
ಜಲವಪೊಯ್ದಾಮೇಲೆ ಅವನನ್ನು ||೬೮||

ಮುಟ್ಟಿಕಟಿಯೊಳಿಡುತ ಒಯ್ದರೂ | ಬಾಲನಕ್ಷುಧೆಗೆ |
ಕೊಟ್ಟು ಗೋಕ್ಷೀರವನು ಪೊರೆದರೂ ||
ಪುಟ್ಟ ತರುಣ ಸುಗುಣನೆಂಬರೂ | ಪೊಂದುಡಿಗೆಯನ್ನು |
ಇಟ್ಟು ಸೊಬಗ ನೋಡಿ ನಲಿದರೂ ||೬೯||



**ಭಾಮಿನಿ**
ಕುರುಕುಲಾನ್ವಯ ದೀಪ ಲಾಲಿಸು |
ತರುಣಿಯರ ಲಾಲನೆಯೊಳಾ ಹಿಮ |
ಕರನವೋಲ್ ದಿನದಿನಕೆ ಹೆಚ್ಚಿದನಧಿಕತೇಜದಲೀ ||
ಪುರವಳಯದೊಳಗಿರ್ಪ ಬಾಲರ |
ನೆರವಿಯನು ಕೂಡಾಡಿ ಮನೆ ಮನೆ |
ತಿರಿದು ಜೀವಿಸುತಿರ್ದವಿಧಿಯನು ಮೀರ್ಪರಾರೆಂದಾ ||೭೦||

**ರಾಗ ಕಾಪಿ ಅಷ್ಟತಾಳ**
ದ್ವಾರದಿ ದೇಸಿಗನಾಗಿ | ನಿಂತ | ಪೋರನ ಪಾಲಿಸಿ ಭಾಗಿ |
ಕೋರುವೆನೆನಗೆ ಕಜ್ಜಾಯ ಸಕ್ಕರೆಗೊಟ್ಟು |
ಭೋರನೆ ಕಳುಹಿರಿ | ಯಾರಿಲ್ಲದಬಲನ ||೭೧||

ಚಿಣ್ಣನ ನುಡಿಗೆ ಬಾಲೆಯರು | ಮೋಹ | ವನ್ನು ತಾಳುತ ಮರುಗುವರು |
ಬನ್ನಬಡವಗನ್ನವಿತ್ತು ತಮ್ಮಯ ಸುತ |
ರನ್ನು ಜೊತೆಯಗೈದು | ಮನ್ನಿಸೆ ತರಳನ ||೭೨||

ಆಡುವ ತರುಣನ ನೋಡಿ | ತಾನು | ಜೋಡಿಗೆ ಬಹೆವೆಂದು ಬೇಡಿ ||
ಕೂಡಿ ಬಾಲರೊಳಾಡಿ ಮನೆಗೈದಿ ತೋಷದಿ |
ಲಾಡುಲಡ್ಡಿಗೆಯಿಂ ಮು | ದ್ದಾಡಿ ಭೋಜನಗೊಂಡು ||೭೩||

ಜೊತೆಯ ಬಾಲರನೆಲ್ಲ ಕರೆದು । ಮಂದ । ಗತಿಯೊಳು ಬರುತಿರೆ ನಲಿದು ॥
ಪಥದೊಳು ಚೆಲುವ ಸಾಲಿಗ್ರಾಮವ ಕಂಡು ।
ಅತಿ ತೋಷದಿಂ ಬಾಲ । ತತಿಗುಸುರಿದನಿಂತು ॥೭೪॥

**ರಾಗ ಪಂತುವರಾಳಿ ಆದಿತಾಳ (ಪಾಲಿಸು ಕರುಣಾಕಟಾಕ್ಷದಿ ಎಂಬಂತೆ)**
ಬಾಲರೆ ನೋಡಿರಿತ್ತ ಮೋದದಿ । ಶಿಲೆ ।
ನೀಲವರ್ಣದೊಳಿದೆ ಚಂದದಿ ॥
ಗೋಲಿಯಾಟಕ್ಕೆ ಅನು । ಕೂಲವಾಗಿದೆ ಮುಂದೆ ॥ ಬಾಲರೆ ॥೭೫॥

ಬಟ್ಟೆಯೋಳ್ತಾ ಪುಣ್ಯವಶದಿಂದಾ । ಎನ್ನ ।
ದೃಷ್ಟಿಗೆ ಬಂತಲ್ಲಾ ಬಲು ಚಂದಾ ॥
ಬಟ್ಟಗಲ್ಲಿಂತು ವರ್ತುಳಮಾಗಿ ತೋರ್ಪುದೂ ॥ ಬಾಲರೆ ॥೭೬॥

ಇಡುತಾಗ ಅದ ತನ್ನ ಬಾಯೊಳೂ । ಬಾಲ ।
ರೊಡನರುಹಿದನಾಗ ಮುದದೊಳೂ ॥
ತೊಡಗೆಯಾಟಕ್ಕೆ ಬೇಗ । ಪಡೆಕೂಡಿ ಬನ್ನಿರೀಗಾ ॥ಬಾಲರೆ॥ ॥೭೭॥

**ವಾರ್ಧಕ**
ಕುಂತೀಕುಮಾರವಂಶಜ ಕೇಳು ಪಟ್ಟಣದೊ
ಳಿಂತರ್ಭಕರೊಳಾಟ ನೆರೆದಿರಲು ಅರಸೆನಿಪ ।
ಕುಂತಳೇಂದ್ರನ ಮಂತ್ರಿ ದುಷ್ಟಬುಧ್ಧಿಯ ಸಭೆಯೊಳೊಂದಿನಂ ಒಪ್ಪಿರಲ್ಕೆ ॥
ಸಂತೋಷದಿಂ ನರ್ತನಾದಿಗಾಯನಗಳಿಂ ।
ಕಾಂತೆಯರಿಗುಡುಗೊರೆಯನಿತ್ತು ಮನ್ನಿಸುತಲಾ ।
ನಂತರದೊಳೊರೆದು ಕಟ್ಟಳೆಯನೆಲ್ಲಾ ಪ್ರಜೆಗೆ ಚಿಂತಿಸಿದ ತನ್ನ ಮನದೀ ॥೭೮॥

**ರಾಗ ಕಲ್ಯಾಣಿ ಅಷ್ಟತಾಳ (ಬೆದರಲ್ಯಾತಕ್ಕೆ ನಾರಿ ಎಂಬಂತೆ)**
ಪದವಿಯು ದೊರಕಿತಲ್ಲಾ । ವಿದುಧರನ ದಯದೀ । ಪದವಿಯು ದೊರಕೀತಲ್ಲಾ
ಮುದಿನೃಪತನುಜೆಯ । ಮದುವೆಯನೆಸಗುತ ।
ಪದವಿದಳಿಯಗೆಂದು । ವಿಧಿಸದಿರನಲಾ ॥ ಪಲ್ಲವಿ ॥

ದೊರಕಿರುತ್ತಿರಲು ಪಟ್ಟಾ । ತಾ ಮರಳಲು । ತರಳ ಮದನನು ಕೆಟ್ಟಾ ॥
ಹುರುಪಿನೋಳ್ ಜರೆ ನೃಪ । ಗರುಹಲು ತರಳಗೆ ।
ದೊರೆಗೊಳುವದು ಸಲೆ । ಪುರವು ವಿಶಿಷ್ಟಾ ॥೭೯॥

ಪೊಡವಿಸುರರ ಕರೆಸೀ । ಪಾಯಸ ಭಕ್ಷ । ಕಡುಬು ಸಹಿತ ಬಡಿಸೀ ॥
ಕೊಡಿಸುತ ದಕ್ಷಿಣೆ । ಯಡಿಗೆರಗಲು ಸುಖ ।
ಬಡುವದೆಂದೆನುತಲಿ ನಡೆವರು ಪರಸೀ ॥೮೦॥

**ರಾಗ ಬೇಗಡೆ ಅಷ್ಟತಾಳ (ಅರರೇ ಬಲ್ ಮೋಸವಾಯಿತೂ ಎಂಬಂತೆ)**

ಎಂದು ಯೋಚನೆಬಂದು ಮನದೊಳಗೇ । ಪರಿಚಾರನಂಕರೆ ।
ದೆಂದವಿಪ್ರರ ಸಂದಣಿಯ ಮನೆಗೇ ॥
ಇಂದುಕರೆತಾ । ರೆಂದೆನಲ್‌ಚರ । ನಂದು ಭೂಸುರ । ವೃಂದಸಹಿತೈ ।
ತಂದು ಪೇಳಲು । ವಂದಿಸುತಲಾ । ನಂದದಿಂದಕರೆ । ತಂದಬಿಡದಿಗೇ ॥೮೧॥

ವಿಪ್ರ ಉಡುಪಡೆಯ ಪ್ರಕಾಶಿಕೆಗೆ । ತಾವಿಂದುಯೆಂದು ಬ ।
ಹು ಪ್ರಸಿದ್ಧವು ಈ ಪೃಥ್ವಿಯೊಳಗೇ ॥
ಸ್ವಪ್ರಯೋಜನ । ದ ಪ್ರಯತ್ನದೊ । ಳು ಪ್ರವರ್ತಿಸ । ಲಿ ಪ್ರದೇಶಕೇ ।
ಕ್ಷಿಪ್ರದೊಳುತಾ । ವು ಪ್ರವೇಶಿಸೆ । ನಾ ಪ್ರಭುವು ಇ । ನ್ನೀ ಪ್ರಜೆಗಳಿಗೇ ॥೮೨॥

ಆರು ಕರ್ಮದಿ ಸೇರಿ ಭೂಮಿಯಲೀ । ಸುರರಾಗಿ ಕಿಲ್ಬಿಷ ।
ದೂರ ಮಾಡುತ ಪಾರಮಾರ್ಥದಲೀ ॥
ಸಾರಿ ಮೋಕ್ಷದ । ದಾರಿಯನು ಸಂ । ಸಾರ ಬಂಧವ । ತೀರಿ ಪರಚರ ।
ಣಾರವಿಂದವ । ಭೂರಿಯೂಟಕೆ । ಕೋರಿ ಧ್ಯಾನಿಸೆ । ತೋರಿತಿದಿರಲೀ ॥೮೩॥

**ಭಾಮಿನಿ**

ಎಂದು ಅಷ್ಟಾರ್ಘ್ಯಾದಿವಿಧಿಯಿಂ ।
ದಂದು ಭೋಜನಗೈಸಿ ದಕ್ಷಿಣೆ ।
ಯಿಂದ ಸತ್ಕರಿಸಲ್ಕೆ ಹೊರಗೈತಂದು ಭೂಸುರರೂ ।
ಚಂದದಾಸನವೇರಿ ತರಳರ
ವೃಂದವಾಟಗಳಾಡಿ ನಲಿಯುವ ।
ಅಂದವನು ಪರಿಕಿಸುತ ನುಡಿದರು ಸಚಿವರೊಳು ಮುದದಿ ॥೮೪॥

**ರಾಗ ಸೌರಾಷ್ಟ್ರ ಅಷ್ಟತಾಳ**

ಬಾಲರ ನಡುವೆ ಸುಧಾಕರನಂತಿರ್ಪ । ಬಾಲನ್ಯಾರೈ ॥ ನಿಂತು ।
ಗೋಲಿ ಇಂದೆಲ್ಲರ ಕೂಡಿ ಕ್ರೀಡಿಸುತೀರ್ಪ । ಬಾಲನ್ಯಾರೈ ॥೮೫॥

ರಾಜಲಕ್ಷಣ ಸಾಧುಹರಿಭಕ್ತನೆನಿಸುವ । ಬಾಲನ್ಯಾರೈ ॥ ಮುಂದೆ ॥
ಮಾಜದೆ ಧರಣಿಪಾಲಕನಾಗಿ ಮೆರೆಯುವ । ಬಾಲನ್ಯಾರೈ ॥೮೬॥

ಕುಂತಳಾವನಿಪತ್ಯನೃಪಜಾತೆ ಸಹಗಂಟು । ಬಾಲನ್ಯಾರೈ ॥ ಇನ್ನು ॥
ಚಿಂತಿಸದಿವನ ಪಾಲಿಸು ಮುಂದೆ ಸುಖವುಂಟು । ಬಾಲನ್ಯಾರೈ ॥೮೭॥

**ವಾರ್ಧಕ**

ಕ್ರೂರನಕ್ರಾಕುಲದೊಳಿಡಿದರ್ದಪೆರ್ಮಡುಗ ।
ಭೀರನಿರ್ಮಲಜಲದೊಳೆಸೆವಂತೆ ಮನದೋಳ್ಕ ।

ಘೋರತರ ಭಾವವಂ ತಳೆದು ಬಹಿರಂಗದೋಳ್ ವಿನಯಮುಳ್ಳಾತನಾಗಿ ॥
ಚಾರುಲಕ್ಷಣದ ಶಿಶುವಂ ನೋಡಿ ಧರೆಯ ವೃಂ ।
ದಾರಕರ ನುಡಿಗೊಪ್ಪಿದಂತಿರ್ದುಬಳಿಕಸ ।
ತ್ಕಾರದಿಂದಾ ವಿಪ್ರರಂ ಕಳುಹುತಂ ದುಷ್ಟಬುದ್ಧಿ ಚಿಂತಿಸುತಿರ್ದನೂ ॥೮೮॥

**ರಾಗ ಮಧುಮಾಧವಿ ಆದಿತಾಳ (ಹಂಸಕೇತನಾದಿಗಳೆಲ್ಲ ಕೇಳಿ ಎಂಬಂತೆ)**
ಇಂತುಗೈದರೆ ವಿಪ್ರರು ಉರಿಯಾ ।
ಸಂತೇಭೋಗವು ಪೇಳ್ವೆನು ಪರಿಯಾ ॥ ಪಲ್ಲವಿ ॥

ಕುಂತಳಾಧೀಶನಿಂಗಾ । ದಂತಿಗಮನೆ ಭೃಂಗ ।
ಕುಂತಳೆ ಜನಿಸಿರ । ಲಂತನ್ನ ಸುತಗೇ ॥
ಯಂತ ನಿಶ್ಚಯದೀ ಭೂ । ಕಾಂತೆ ಸಹಿತ ಘನ ।
ಸಂತಸಬಡುತಿರೆ । ಬಂತೆಲ್ಲಿಯಪಘಾತ ॥೮೯॥

ನಾನು ಯೋಚಿಪ ಕೃತ್ಯ । ಮಾನದಿರದು ಸತ್ಯ ।
ಮಾನವರೊಳು ಬಾಲ । ಮಾನಿಪನರರರೇ ॥
ಕಾಣದಾದೆನು ದಾರಿ । ಹಾನಿಯಪ್ಪುದೆ ವಿಪ್ರ ।
ರಾನುಡಿ ಜಗದೊಳು । ಯೇನಗಯ್ಯಲಿದಕ್ಕೆ ॥೯೦॥

ಬಿಟ್ಟರೆ ನಾಂ ದಯದಿ । ಕೆಟ್ಟು ಪೋಪೇಂಜವದಿ ।
ಅಟ್ಟಿ ಘೋರಡವಿಯೊ । ಳಿಟ್ಟು ಖಡ್ಗದಲೀ ।
ಕುಟ್ಟಿ ಕೆಡಹಿ ಬಲಿಗೊಟ್ಟರೀತಗೆ ರಾಜ ।
ಪಟ್ಟವೆಲ್ಲಿದೆ ಗತಿ । ಗೆಟ್ಟು ಹೋಗುವನೀತಾ ॥೯೧॥

**ಕಂದ**
ಎಂದಾ ಪಶುಘಾತಕರಂ ।
ಸಂದಣಿ ಸಹಿತಂ ಕರೆಸಲ್ಕವರೈದಾಗಳ್ ॥
ಬಂದಿರುವೆಮ್ಮೊಳು ಕಾರ್ಯವು ।
ಮುಂದರಿವಂತಾಜ್ಞೆಯನೀಯನಲವನೊರೆದಂ ॥೯೨॥

**ರಾಗ ಭೈರವಿ ಝಂಪೆತಾಳ**
ಧನದಾಸೆಯಿರೆ ನಿಮಗೆ । ತನಯರೊಳಗಾಡುತಿಹ ।
ದಿನಮಣಿಯ ತೆರದ ಬಾಲನಲೀ ॥
ಕನಿಕರವ ತೊರೆದೆತ್ತಿ । ವನಕೈದಿ ಸುರಗಿಯಲಿ ।
ಹನನವನುಯೆಸಗಿ ಶೀಘ್ರದಲಿ ॥೯೩॥

ಹೊಡದ್ದಲ್ಲುಗಳ ಕೆಡಹಿ । ಕೊಡುತಲೀತನ ಜವಗೆ ।
ತಡೆಯದಿಲ್ಲಿಗೆ ಬರುತ ಮನಕೇ ।
ಒಡಬಡುವ ಕುರುಹನಿ । ತ್ತಡಿಗೆರಗಲೀವೆಧನ ।
ಬಿಡಿರಿ ವ್ಯಥೆಗಳ ದರಿದ್ರತೆಗೆ । ॥೯೪॥

ಬಾಲನೆಂದಿವನತನು । ಸೀಳದೈತರೆ ನಿಮಗೆ ।
ಬಾಳಗೊಡುವೆನೆ ಎನ್ನ ಪುರದಿ ॥
ಕಾಳು ಮಾಡದೆ ಬಿಡೆನು । ದಾಳಿಯೇತಕೆ ಬರಿದೆ ।
ಯೇಳಿ ತೆರಳಿರಿ ಬಾಲನೊಡನೆ ॥೯೫॥

**ವಾರ್ಧಕ**
ಕಾಳರಕ್ಕಸರಂದು ಪ್ರಹ್ಲಾದನಂಪಿಡಿದ ।
ವೋಲುಮಂತ್ರೀಶನಾಜ್ಞೆಯಗೊಂಡು ಪಾಪಿಗಳು ।
ಬಾಲರೊಡನಾಡ್ವನಂ ಪೆಗಲೊಳೇರಿಸಿ ವನಕೆ  ಒಯ್ಯುತಿರೆ ಬಾಲನಾಗಾ ॥
ಘೋಳಿಡುತ ಹರಿಕೃಷ್ಣ ಕೇಶವಾಚ್ಯುತಯೆನಲು ।
ಖೂಳರಿಂಗಿಹುದೆ ದಯ ವನದಿಭೋಜನಮಿಹುದು ।
ತಾಳೆನುತೆ ಪುಸಿಮಾತನಂ ಪೇಳಿ ಪೋಪರೊಳು ಭಾಳಮಂ ನೋಡಿ ಒರೆದ ॥೯೬॥

**ರಾಗ ನೀಲಾಂಬರಿ ಮಟ್ಟೆತಾಳ**
ಸುಳ್ಳನು ಪೇಳುತ ಕಾಡಿಗೆ । ಕೊಲ್ಲಲು ಒಯ್ವಿರಿ ನೀತಿಯು
ಇಲ್ಲದೆ ನಿಮ್ಮಯ ಬಾಲರ । ತಳ್ಳಿಗೆ ಬಂದಿಹೆನೇ ॥೯೭॥

ಸಾಣೆಯ ಕೂರಸಿಯಿಂದಲಿ । ಪ್ರಾಣದಹಾನಿಯ ಗೈವರು ।
ಕಾಣೆನುಪಾಯವ ಭಕ್ತರ । ಧೀನನೆ ಸಲಹೆನ್ನಾ ॥೯೮॥

ಕರಿವರದನೆ ಹರಿಮಾಧವ । ಸಿರಿಯರಸನೆ ಪರಿಪಾಲಿಸು ।
ಕರುಣವ ತೋರದೀ ಖುಡುಗದಿ । ಶಿರವರಿವರು ಬಿಡದೆ ॥೯೯॥

ಸ್ಫುಟನುಡಿಯೊಳು ತವನಾಮವ । ಪಠಿಸದೆ ಯಮನನು ಕಾಂಬೆನು ।
ವಟುವೆನುತೆನ್ನನು ಬಿಡುವರೆ । ಕಟುಕರು ಕರುಣದೊಳು ॥೧೦೦॥

ಬಿಂಕದಿ ಪಿಡಿದೆನ್ನನು ಭರ । ದಿಂ ಕಡಿವರ್ಖುಡುಗದಿ ಶಿರ ॥
ಶಂಕರ ಸಖ ಮಮತೆಯೊಳೀ । ಕಿಂಕರನನು ಸಲಹೋ ॥೧೦೧॥

**ರಾಗ ಪಂತುವರಾಳಿ ಏಕತಾಳ (ಯಾರ್ಮ್ಯಾಪೋರೀ ವಿಪಿನ ಎಂಬಂತೆ)**
ಬಿಡದೇ ಪೊರೆಯೋ ದೇವಾಯೆಂಬ । ಹುಡುಗನನ್ನು ಕಂಡು ।
ಖಡುಗವಿಳಿಸಿ ನಿಂತು ತಮ್ಮೊಳು । ನುಡಿದರ್ಮೋಹಗೊಂಡು ॥೧೦೨॥

ಯೇಟೇ ಲಾಭಗಳ್ ಹೋದರು ಈ ಗೋ । ಳಾಟವು ಬೇಡವೆಂದು ॥
ಈಟೀ ಬಿಸುಟು ಖೂಳ ಮಂತ್ರಿಯ । ಕಾಟಕೆ ಬೈದರಂದು ॥೧೦೩॥

ಬರಿ ಮಾತಿರ್ಕಾತರಳನ ಚರಣದಿ । ಬೆರಳೊಂದಿರುವುದು ಜಾಸ್ತಿ ॥
ಕುರುಹಿಗೆ ಕೊರೆದು ತೋರೆ ಇನಾಮಿಗೆ । ಸೆರಗ ನೆಲದೋಳ್ ಹಾಸ್ತಿ ॥೧೦೪॥

ಬಿಟ್ಟಾ ಬಾಲನ ಮಂತ್ರಿಯ ಚರಣಕೆ । ಥಟ್ಟನೆಯೆರಗಲಾಗಾ ॥
ಬೆಟ್ಟಾ ತೋರುತ ಕೋರಲು ಧನುವನು । ಕೊಟ್ಟು ಕಳುಹಿದನಾಗಾ ॥೧೦೫॥

**ಭಾಮಿನಿ**
ಘೋರವಿಪಿನದೊಳಿತ್ತ ಬಾಲನು ।
ಚೀರುತೆಂದನು ಯೇನಿದಕಟಾ ।
ಮಾರಮಣ ದಯದೋರಿ ಸಲಹೈ ಶರಣರಕ್ಷಕನೇ ॥
ಸೇರಿ ಜೊತೆಯನು ತೋಷದಿಂದಲಿ ।
ಕ್ಷೀರ ಪಾಲೋಗರವ ಸವಿವುತ ।
ಭೂರಿಯಾಟಗಳಾಡ್ವ ತೆರನನುಗಯ್ಯೊ ಮುರಹರನೇ ॥೧೦೬॥

**ರಾಗ ನೀಲಾಂಬರಿ ಏಕತಾಳ (ಅಕಟಕಟಾ ರಣಧೀರಾ ಎಂಬಂತೆ)**
ಶ್ರೀಲಕುಮಿಪತಿ ಮೊರೆಯ । ಲಾಲಿಸದೆ ಇರುತಿಹೆಯ ।
ಪಾಲಿಪರ್ಯಾರಿಹರೆನಗೇ । ಪೇಳೆಲೋ ನೀದಯದೊಳಗೇ ॥೧೦೭॥

ತರಳರೊಳಾಡುತ ಇರಲು । ತೊರೆಸುತ ಇಲ್ಲಿಗೆ ತರಲು ॥
ದುರುಳರಿಗೇನೆಸಗಿರುವೆ । ಬೆರಳನುಕೊಯ್ವುದು ತರವೆ ॥೧೦೮॥

ಹಸಿವನು ತಾಳುವದೆಂತು । ಬಿಸಿಲಿನೊಳಿರ್ಪೆನು ಇಂತು ॥
ಅಶನವನೀವರ ಕಾಣೆ । ಪಸರಿಸುತಿರ್ಪುದು ಬೇನೆ ॥೧೦೯॥

ಆಡುವ ಬಾಲರು ಮರವು । ಕಾಡಿದು ನನ್ನಯ ಗೃಹವು ॥
ಓಡುತಲಿರ್ಪುದು ಮೃಗವು । ನೋಡಲು ತೋರ್ಪುದು ಭಯವು ॥೧೧೦॥

**ವಾರ್ಧಕ**
ಬಸಿವ ನೆತ್ತರ ಗಾಯದೆಡದಡಿಯ ವೇದನೆಗೆ ।
ಪಸುಳೆ ಹರಿಹರಿಯಂದೊರಲ್ದಳುತಿರಲ್ಕಣ್ಣೊ ।
ಳೊಸರ್ವ ಭಾಷ್ಪಂಗಳಿಂ ಮಿಂದವಂ ಕಡುಗಷ್ಟದಿಂ ನೊಂದು ಬೆಂಡಾಗುತ ॥
ಹಸಿವು ನೀರಡಿಕೆಯಂ ತೊರೆದಲ್ಲಿ ನಿಂದುಪಚ ।
ರಿಸುವರಂ ಕಾಣದಾ ಬಾಲ ಚಿಂತಿಸುತಿರಲ್ ।
ದಶರೂಪಕಾಯದಿರ್ಪನೆ ವ್ಯಾಧಪತಿಮನವ ಮಾಡಿದಂ ಬೇಟೆಗಂದು ॥೧೧೧॥

**ರಾಗ ಸೌರಾಷ್ಟ್ರ ಮಟ್ಟೆತಾಳ (ನಡೆಯಲೋ ಮುರಾರಿ ಸುಖದೊಳೂ ಎಂಬಂತೆ)**

ಬಂದನಾ ಕುಳಿಂದ ಬೇಟೆಗೆ | ಚಂದನಾವತೀಶ ಬೇಗ |
ಬಂದನಾ ಕುಳಿಂದ ಬೇಟೆಗೇ ‖ ಪಲ್ಲವಿ ‖

ಇಂದುಮಾರಮಂದ ಗಂಧವ | ಅಂದವರಿಯ
ಲೆಂದು ನಾರಿವೃಂದದಿಂದವ |
ಬಂದು ಹಂದಿಗಳನು ನಾಯಿ | ಯಿಂದ ಕೊಂದು ಮಂದಿಯೊಡನೆ |
ಮುಂದ ಮುಂದಕೈದಿ ಮೃಗವ | ತಂದು ತಂದು ನೂಕೆ ಬಲೆಗೆ ‖ ಬಂದನಾ ‖೧೧೨‖

ಕಡಿದು ಕಡವ ಝುಡಿದು ಸಿಂಗವ | ಕೆಡಹಿ ಕರದಿ |
ಪಿಡಿದು ನಡುವ ಕೊಡಹಿ ಮಂಗವ |
ನಡೆದ ತಡೆಯುತಡಚಿ ಕರಿಯ | ನಿಡದೆ ಪೊಡೆಯುತಡಗಿದರಿಯ |
ಬಿಡದೆ ಮಡುಹಿ ಗಿಡದೊಳಿರುವ | ಗಿಡಗ ಪಡೆಯ ಪೊಡವಿಗಿಡುತ ‖ ಬಂದನಾ ‖೧೧೩‖

ಹರಿಣವನ್ನು ತರಿಯಲೆನ್ನತ | ತುರಗವೇರಿ |
ತೆರಳುತಾ ಕುಳಿಂದ ಬೆರಸುತಾ |
ತ್ವರದಿ ಪೋಗಿ ಹರಿಯ ಜಪಿಸು | ತಿರುವ ತರಳನಿರವ ನೋಡಿ |
ಹರುಷ ಧರಿಸಿ ಸರಿಸಕೈದಿ | ವರಿಸಿ ರುಧಿರ ವರೆದನಾಗಾ ‖ ಬಂದನಾ ‖೧೧೪‖

**ರಾಗ ಕೇದಾರಗೌಳ ಅಷ್ಟತಾಳ**

ಕಾಮ ಸುಂದರ ಸಮ | ಕೋಮಲಾಂಗನೆ ಪೆತ್ತ | ಸಾಮಜಗಾಮಿನಿಯ |
ನಾಮವಾವುದು ಪಡೆ | ದಾಮಹಿಮನದಾವ | ಭೂಮಿಯನಾಳ್ವನಯ್ಯಾ ‖೧೧೫‖

**ರಾಗ ತೋಡಿ ಆದಿತಾಳ**

ಸರಸಿಜಭವಾಂಡ ಪುರವು | ಸಿರಿಯು ಮಾತೆ ಹರಿಯು ತಾತ |
ಹೊರತು ಮಾತಾಪಿತರ ಕಾಣೆ | ಪುರವ ಬರವಾ ಪೇಳು ನೀನೇ |

**ರಾಗ ಕೇದಾರಗೌಳ ಅಷ್ಟತಾಳ**

ಕಂದ ಕೇಳೆಲೋ ನಾನು | ಚಂದನವತಿ ನೃಪ | ಬಂದಿಪೆ ಬೇಟೆಗೆಂದು ‖
ತಂದು ಪಾದವ ಬೆರ | ಳೊಂದ ಛೇದಿಸಿದನಾ | ರೆಂದು ನೀ ಪೇಳು ಇಂದು ‖೧೧೬‖

**ರಾಗ ತೋಡಿ ಆದಿತಾಳ**

ತರಳರೊಡನೆ ಪುರದೊಳಾಡು | ತ್ತಿರಲು ಕರಿಯಮಯ್ಯ ಮನುಜ |
ರಿರದೆ ಕರೆದು ತಂದೀಚರಣ | ತರಿದು ನಡೆದರಿಂದಿಲ್ಲಶನ | ‖೧೧೭‖

**ರಾಗ ಕೇದಾರಗೌಳ ಅಷ್ಟತಾಳ**

ಸುತಹೀನೆಯನುತೆನ್ನ | ಸತಿ ಚಿಂತಿಪಳು ವಂಶ | ರತುನ ವಾಗಿರ್ಪೆ ನೀನೇ |
ವ್ಯಥಿಸದಿರೆಲವೋ ಶ್ರೀ | ಪತಿ ರಕ್ಷಿಪನು ನಿನ್ನ | ಹಿತದಿ ಬಾರೆನ್ನೊಡನೇ ||೧೧೮||

**ರಾಗ ತೋಡಿ ಆದಿತಾಳ**

ಕಡಿಯ ಬಾಧೆ ತಡೆಯದವನು | ನಡೆವುದೆಂತು ಅಡಿಯನಿಡುತ |
ಪಿಡಿದು ಕರವ ರಕ್ಷಿಸೆನುತ | ಹುಡುಗನೊರೆಯೆ ಪಿಡಿದನೀತ || ||೧೧೯||

**ರಾಗ ಕೇದಾರಗೌಳ ಅಷ್ಟತಾಳ**

ಭರದಿ ಬಾಲನ ಕೂಡಿ | ತುರಗವನಡರುತ್ತ | ಕೊರಡಿಂದ ಸೂಚಿಸಲು ||
ಅರೆನಿಮಿಷದಿವಾಜಿ | ತೆರಳಿ ಸೈನ್ಯವ ಸೇರೆ | ಒರೆದನು ಕಾಂತೆಯೊಳು ||೧೨೦||

೩

**ರಾಗ ಮುಖಾರಿ ಏಕತಾಳ**

ಸುದತಿ ಮೇಧಾವಿನಿ | ಮೃದು ಮಧುಭಾಷಿಣಿ | ವಿಧುಮುಖಿ ನೋಡಿತ್ತ ||
ಸದಮಲ ಶ್ರೀಹರಿ | ಪದಸೇವಕನನ್ನು | ಪದುಮಾಂಬಕನಿತ್ತ ||೧೨೧||

ಹರಿಣಮೃಗವ ತರಿ | ದೊರಸಲು ತೆರಳುತ | ತರಳನಿರವ ಕಂಡು ||
ಪರಸುತಲೆಮಗಿವ | ತರಳನೆಂದೆನುತಲಿ | ಮರಳಿದೆ ಮುದಗೊಂಡು ||೧೨೨||

ಇನಿಯನೆ ಲಾಲಿಸು | ಚಿನುಮಯ ನೆಮ್ಮಯ | ಘನಚಿಂತೆಯ ನೋಡಿ ||
ತನಯನ ಇತ್ತಿಹ | ಕನಕಾಭರಣಕೆ | ಮನವನೀಗ ಮಾಡಿ ||೧೨೩||

ನಿನ್ನಯ ಸುಕೃತವ | ಬಣ್ಣಿಸಲಸದಳ | ಪನ್ನಗನಿಭವೇಣಿ ||
ಚೆಣ್ಣನ ತನುವಿನ | ಬಣ್ಣಕೆಸರಿಸಮ | ಪೆನ್ನಿಪುದೇ ಮಿಸುನಿ ||೧೨೪||

**ಭಾಮಿನಿ**

ವನಜಮುಖಿ ತೋಷದೊಳು ಒಣಗಿದ |
ಕೊಣದಿ ಜಲಮಾದಂತೆ ಕತ್ತಲೆ |
ಮನೆಗೆ ಮಣಿದೀಪಾದ ತೆರದಿಂ ದಾನವಾಂತಕನು ||
ಮನವೊಲಿದು ದಯಗೈದನಿಂದಿಗೆ |
ಮುಣುಗಿದುದು ಮಮಬಂಜೆತನ ಕುವ |
ರನಿಗೆ ಕನಕಾಭರಣ ರಚಿಸೆಂದರಸಗರುಹಿದಳು ||೧೨೫||

**ರಾಗ ಕಾಂಭೋಜಿ ಝಂಪೆತಾಳ**

ಮಡದಿಯಳ ನುಡಿಗೊಪ್ಪಿ | ಎಡಬಲದೊಳಿಹ ತನ್ನ |

ಪಡೆಗೂಡಿಸಡಗರದಿ । ನಡೆತರುತಪುರಕೇ ॥
ಹೊಡಿಸುತಲಿ ಡಂಗುರವ । ನಿಡಿಸಿ ತೋರಣ ಹೊರಗೆ ।
ನುಡಿಸಿ ಕಾಳೆಯಕರಸಿ । ಪೊಡವಿ ವಿಬುಧರನೂ ॥೧೨೭॥

ಕನಕಪೀಠವನಿಡುತ । ಮಣಿದು ಕುಳ್ಳಿರಿಸುತಲೀ ।
ಮನದ ತೋಷದೊಳೊರೆದ । ಘನಮಹಿಮರೊಡನೇ ॥
ವನಕೆ ಪೋದೆನುಜವದಿ । ಹನನಗೈಯಲು ಮೃಗವ ।
ಜನುಮದ್ರುಮ ಫಲವಾಯ್ತು । ತರಳನಿವದೊರಕೀ ॥೧೨೭॥

ತೊಲಗಿತೆನ್ನಯ ವ್ಯಸನ । ಚೆಲುವನಾಮವನಿವಗೆ
ಒಲಿದಿರಿಸಿರೈ ವಿಪ್ರ । ರಲಗಿಸುತ ಬೆರಳಾ ॥
ತಿಳಿದೆವೈ ಗಣಿತದೊಳು । ಜಲಜರಿಪುವನು ನೋಡಿ ।
ಕಳಕಳಿಸಿ ನಗುತೀರ್ಪ । ಸಲುವುದದೆ ಪೆಸರು ॥೧೨೮॥

ಚಂದ್ರಹಾಸನು ಎನುತ । ನೀಂ ಧೃಡದಿ ಕರೆಯೂರ್ವಿ
ಗಿಂದ್ರನಾಗುವ ಹರಿಗೆ । ತಾಂ ಧ್ರುವನ ತೆರದೀ ॥
ಚಂದ್ರರವಿಗಳ ಕೀರ್ತಿ । ಮಂದಗೈಯ್ಯುತ ಮೆರೆಯು
ವಂ ದುಷ್ಟಕರಿನೃಪ ಮೃ । ಗೇಂದ್ರನಿವನೆನಿಸೀ ॥೧೨೯॥

**ಭಾಮಿನಿ**
ಲಕ್ಷಣದೊಳೆಸೆಯುವ ಕುಮಾರನಿ
ಗಕ್ಷರವಬರೆದೋದಿಸಲು ಹರಿ ।
ಪಕ್ಷಿವಾಹನ ಎನುತಿರಲ್ಕವ ರೋಷದೊಳ್ ಗುರುವೂ ॥
ಅಕ್ಷಿದೆರದ್ವಾಚಿಸೆನೆ ತರಳನು ।
ಲಕ್ಷಿಸದೆ ಶ್ರೀಪತಿಯ ಧ್ಯಾನಿಸೆ ।
ತಕ್ಷಣದಿ ನಡೆತಂದವನ ತಾತಂಗೆ ವಿವರಿಸಿದ ॥೧೩೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಚಿತ್ತವಿಸು ಶಬರೇಶ ಶ್ರೀಗಣ । ವೆತ್ತಿ ಸೂಚಿಸಿ ಇಡದೆ ತಾ ಮನ ।
ಚಿತ್ತಜನ ಪಿತನೆಂದು ವಾಚಿಪ । ನಿತ್ಯಬಾಲಾ ॥೧೩೧॥

ಎಂದಮಾತನು ಕೇಳಿ ನುಡಿದ ಕು । ಳಿಂದತಾ ಹರಿಭಕ್ತನಿವನದ ।
ರಿಂದ ಶಿಕ್ಷೆಯು ಸಲದು ಶ್ರೀಗೋ । ವಿಂದ ಕಾವಾ ॥೧೩೨॥

ಎನುತಲುಪನಯನಾದಿ ಕಾರ್ಯವ । ತನಯನಿಗೆ ರಚಿಸಲ್ಕೆ ಹರಿದಿನ ।
ವನು ಬಹಳ ಭಕ್ತಿಯಲಿಗೈವುತ । ದಿನವನೂಕೆ ॥೧೩೩॥

ಕೆಲವು ಕಾಲಾಂತರದಿ ತರಳಗೆ | ಕಳೆಯೆ ಷೋಡಶ ವರುಷವಂದಿನ |
ಬಿಲು ಶರವ ಹಿಡಿದಾಗ ತಾತನ | ಬಳಿಯ ಸಾರ್ದ ||೧೩೪||

**ರಾಗ ಸುರಟಿ ಏಕತಾಳ**

ಧರಣಿಪ ಹರುಷದೊಳೂ | ಸಭೆಯನು | ನೆರಹಿರೆ ವಿಭವದೊಳು ||
ತರಳನು ಭರದೊಳು | ಎರಗುತಲರಸಗೆ ||
ಪೊರಟನು ಪರನೃಪ | ರರಿಯಲು ಧುರದೊಳು ||೧೩೫||

ಕೂಡುತ ಸೈನ್ಯಗಳ | ರಿಪುಗಳ | ನಾಡಿನ ವಸ್ತುಗಳ ||
ಪೂಡಿಸಿ ರಥದೊಳು | ಗಾಢದಿ ಮರಳುತ |
ನೋಡುತ ಜನಕನ | ಜೋಡಿಸಿ ಕರಗಳ ||೧೩೬||

ತನಯನ ಸಾಹಸಕೆ | ಪೇಳಿದ | ಇನಿತಿದೆಯನ್ನೆಣಿಕೆ ||
ಜನಪತಿತನವನು | ನಿನಗನುಕರಿಸುವೆ |
ನೆನತಲಿ ಬುಧರನು | ವಿನಯದಿ ಕರಸುತ ||೧೩೭||

ಬಳಗವ ಕೂಡುತಲಿ | ಶುಭಮಂ | ಗಲ ಸುಮುಹೂರ್ತದಲಿ ||
ನೆಲನಾಧಿಪತ್ಯವ | ವಲವಿನೊಳೀಯಲು |
ಕುಲದೀಪನುಗೆಲ | ವಿಲಿ ನಲಿದಿರ್ದನು ||೧೩೮||

**ರಾಗ ಸಾಂಗತ್ಯ ರೂಪಕತಾಳ**

ಕುಶಲದಿ ಜನಪತಿತ್ವವ ತಾಳಿ ಶಶಿಹಾಸ | ವಸುಧೆಯ ಸಲಹುತ್ತಲಿರಲು |
ದಶಮಿ ಇಂದೆನುತುತ್ಸಾಹದೊಳಿರ್ದು ನಿಶೆಯೊಳು | ಅಶನವ ತೊರೆದು ಭಕ್ತಿಯೊಳು ||೧೩೯||

ಉದಯಿಸೆ ಖದ್ಯೋತ ಹೊರದೆಗೆಯುತ ವೃತ್ತ | ಸದಮಲ ಸಾಲಿಗ್ರಾಮವನು ||
ಮುದದೊಳಗಭಿಷೇಕ ಗಂಧಾಕ್ಷತೆಗಳಿಂದ | ವಿಧವಿಧ ಪೂ ದುರ್ವಾರ್ಚನೆಯ ||೧೪೦||

ಎಸಗಿ ನೈವೇದ್ಯ ಮಂಗಳ ನೀರಾಜನ ಮಂತ್ರ | ಕುಸುಮವನರ್ಪಿಸಿ ಬಳಿಕ ||
ಅಸಮಗುಣಾಢ್ಯನು ಎರಗಿ ತೀರ್ಥವಗೊಂಡು | ನಿಶಿಯೊಳು ಗೈದು ಜಾಗರವ ||೧೪೧||

ಮರುದಿನ ದ್ವಾದಶಿಯೊಳು ಪಾರಣೆಯಗೈದು | ಪುರಜನರ್ಗೂಡಿ ಭುಂಜಿಸುತಾ ||
ನೆರವೇರಿಸುವದೇಕಾದಶಿ ವ್ರತ ನಮ್ಮಯ | ನೆರೆಜನರೆಂದು ನೇಮಿಸಿದ ||೧೪೨||

**ರಾಗ ಶಂಕರಾಭರಣ ತ್ರಿವುಡೆತಾಳ**

ಈತೆರದೊಳಿರುತಿರೆ ಕುಳಿಂದಕ | ಜಾತನೊಡನರುಹಿದನು ಮಗನೇ |
ಖ್ಯಾತ ಕುಂತಳನೃಪ ನೀ ನಗರಕೆ | ನಾಥನೆನಿಸಿ ||೧೪೩||

ಪಾಲಿಸುತ್ತಿರಲೆನಗೆ ರಾಜ್ಯವ | ಶೀಲತಾ ಕರುಣಿಸಿದನದರಿಂ |
ಕಾಲಕಾಲಕು ಸಲುವುದೈಕರ | ಬಾಲ ಕೇಳು ||೧೪೪||

ಜರೆಯಡಸಲಾಮಾತ್ಯನಿಗೆಪುರ । ದೊರೆತನವನಿತ್ತಿಹನು ಕಪ್ಪವ ।
ತೆರುವುದಾತಗೆ ಗಾಲವಗೆ ನೃಪ । ನರಸಿಗೆಂದ ॥೧೪೫॥

**ವಾರ್ಧಕ**

ಪಿತನ ಮಾತಂ ಕೇಳ್ದು ಚಂದ್ರಹಾಸಂ ಮಹೀ ।
ಪತಿಗೆ ಮಹಿಷಿಗೆ ಮಂತ್ರಿದುಷ್ಟಬುದ್ಧಿಗೆ ಪುರೋ ।
ಹಿತಗಾಲವಂಗೆ ಸಲಿಸುವರೆ ಧನವನದ ಸಂಗಡಕೆ ತಾನಾಹವದೊಳು ॥
ಪ್ರತಿಭೂಪರಂ ಜಯಿಸಿ ತಂದ ವಸ್ತುಗಳನಂ ।
ಕಿತದಿಂದೆ ಕಟ್ಟಿ ಶಕಟೋಷ್ಟ್ರಕರಿವಾಜಿಗಳ್ ।
ಶತಸಂಖ್ಯೆಯಿಂದ ಕಳುಹಿದನಾಪ್ತರಂ ಕೂಡಿ ಕೊಟ್ಟು ಕುಂತಳನಗರಿಗೆ ॥೧೪೬॥

**ಕಂದ**

ತಟನಿಯೊಳು ಸ್ನಾನಗೈದಾ ।
ನಿಟಿಲಾಂಬಕ ಸಖನಂ ಧ್ಯಾನಿಸುತವರಾಗಳ್ ।
ಉಡುಪತಿಹಾಸನ ನೇಮದಿ ।
ದೃಢಭಕ್ತಿಯನಿಟ್ಟಾ ನಿಶಿಯೊಳ್ ಸೇರಿದರರಮನೆಯಂ ॥೧೪೭॥

**ರಾಗ ಭೈರವಿ ಅಷ್ಟತಾಳ**

ಮಿಹಿರನುದಿಸೆ ಸಭೆಗೈವುತ್ತಾ । ರಾತ್ರಿ । ಯಹಿವರ್ಜಿತನಾದೆನೆನ್ನುತ್ತಾ ॥
ಬಹುತೋಷಗೊಳೆ ದ್ವಾರಪಾಲನೂ । ಬೇಡು । ತ್ತಿಹರು ಅಪ್ಪಣೆಯೀರ್ವರೆಂದನೂ ॥೧೪೮॥

ಕೊಡಲು ಆಜ್ಞೆಯ ಚಾರ ಮರಳುತ್ತಾ । ದ್ವಾರ । ಬಿಡಲಾಗ ಸಭೆಯನ್ನು ಸೇರುತ್ತಾ ॥
ಕೆಡಹಿ ಮಂಡೆಯ ಮಂತ್ರಿಪಾದದಿ । ಗಂಟ । ನಿಡುತ ಪೇಳ್ದರು ಬಹು ಮೋದದಿ ॥೧೪೯॥

ದೊರೆಕುಳಿಂದಜನೀ ಪಟ್ಟವ । ನಾಳು । ತ್ತಿರಲು ಇತ್ತಿಹನು ವಿಶಿಷ್ಟವ ॥
ಕರ ಮಿಕ್ಕದನರಾಣಿ ಗಾಲವ । ರಿಂಗೆ ತೆರುತಗೊಂಬುದು ಸಮಭಾಗವ ॥೧೫೦॥

**ವಾರ್ಧಕ**

ಏನಿದೆತ್ತಣಕೌತುಕದ ನುಡಿ ಕುಳಿಂದಂಗೆ ।
ಸೂನುಜನಿಸಿರ್ದಪನೆ ಬಂಜೆಯಾಗಿಹಳವನ ।
ಮಾನಿನಿ ವಿಚಿತ್ರಮೆನಲಾಚರರ್ ಜೀಯ ಪುಸಿಯಲ್ಲವಂ ಬೇಟೆಗೈಯ್ಯೆ ।
ಕಾನನದ ಮಧ್ಯದೊಳನಾಥನಾಗಿಹ ಶಿಶು ನಿ ।
ಧಾನಮಿರೆ ಕಂಡೆತ್ತಿಕೊಂಡು ಬಂದಾತ್ಮಜ ವಿ ।
ಧಾನದಿಂದೋವಿದಂ ಪ್ರೀತಿ ಮಿಗೆ ಚಂದ್ರಹಾಸಾಭಿಧಾನದೊಳೆಂದರು ॥೧೫೧॥

**ಭಾಮಿನಿ**

ಕೇಳಿ ವಿಸ್ಮಿತನಾಗಿ ಸಚಿವನು ।
ಪಾಳಡವಿಯಲಿ ಕೊಲ್ಲೆ ಪಸುಳೆಯ ।

ಹೇಳಿದರೆ ಚಾಂಡಾಲರೀಪರಿ ಗೈದರೇಯೆನುತ ।
ತಾಳಿ ದ್ವೇಷವ ಚಿತ್ತದೊಳು ಕರು ।
ಣಾಳುಗಳ ತೆರನಂತೆ ಮನ್ನಿಸಿ ।
ಏಳಿ ಭೋಜನಕೆನಲು ಒಲ್ಲೆವೆನಲ್ಕೆ ರೋಷದೊಳು ॥೧೫೨॥

**ರಾಗ ಭೈರವಿ ಏಕತಾಳ**

ತುಚ್ಛವೆ ನಮ್ಮಯ ವರ್ಣ । ನಿಮ್ಮ । ಹುಚ್ಚ ಬಿಡಿಸುವೆನು ಪೂರ್ಣ ।
ಹೆಚ್ಚಿದಿರ್ಕೈ ಗರ್ವದಲೀ । ತಲೆ । ಗೊಚ್ಚುವೆನ್ನೈ ಖಡ್ಗದಲೀ ॥೧೫೩॥

ಭಂಗಿಪೆನ್ನೈ ಜಪಸರವ । ಬೆಳ । ತಿಂಗಳು ಹೋಲುವ ಗೊಳವ ।
ಅಂಗದ ಬೂದಿಯನೊರೆಸಿ । ತು । ರಂಗದೊಳಿಕ್ಕುವೆಯಳಸಿ ॥೧೫೪॥

ಮೂಢ ಕುಳಿಂದಕ ಬಂದು । ದಯ । ಮಾಡೆಂದೊರೆಯಲಿಕಂದು ।
ನೋಡುವೆನಯ್ಯ ಕಡೆಗೆ । ಎಂ । ದಾಡಲ್ ಚಾರರು ನಡುಗೆ ॥೧೫೫॥

**ರಾಗ ಕಲ್ಯಾಣಿ ಅಷ್ಟತಾಳ (ಇವಳ್ಯಾವ ಲೋಕದ ಸತಿಯೋ ಎಂಬಂತೆ)**

ಕರವ ಜೋಡಿಸಿ ನಿಂತರೆಲ್ಲಾ । ಪೇಳ್ದ । ರಿರಿಸದೆ ಖತಿಯ ಲಾಲಿಪುದೆಮ್ಮ ಸೊಲ್ಲ ॥
ಹರಿದಿನವಾದ ಕಾರಣದೀ । ಊಟ । ತೊರೆದೆವಲ್ಲದೆ ಬೇರೆ ಇಲ್ಲೆಮ್ಮ ಮನದೀ ॥೧೫೬॥

ಮೃಷ್ಟಾನ್ನ ಭುಜಿಸಲೀ ದಿನದೀ । ವ್ರತ । ಭ್ರಷ್ಟರೆಂದೆನುತ ನೂಕುವರು ನರಕದೀ ।
ಕಷ್ಟಕಂಜುವೆವು ನಾಳೆಯೊಳು । ನಿನ್ನ । ಇಷ್ಟವ ಸಲಿಸಿ ಪೋಗುವೆವು ಪ್ರೀತಿಯೊಳು ॥೧೫೭॥

ಎನಲೊಪ್ಪಿ ಮಂತ್ರಿ ಮನ್ನಿಸುತ । ಮರು । ದಿನದಿ ಭೋಜನಗೈಸಿ ಮರಳಿಸಲಿತ್ತ ।
ಕಿನಿಸಿನಿಂ ಚಂದನಾವತಿಗೆ । ಪೋಗ । ಲನುಗೆಯ್ಯೆ ಜಾತೆ ವಿಷಯೆ ಬಂದು ಎರಗೆ ॥೧೫೮॥

**ರಾಗ ಜಂಜೂಟಿ ಅಷ್ಟತಾಳ**

ತಂದೆ ಕೇಳೆನ್ನ ಬಿನ್ನಪವ । ನೀನು । ನಂದನದೊಳ್ ಪೊಯ್ದು ಜಲವ ।
ಚಂದದಿ ಪೊಗೆದ ಚೂತದ ಲತೆ ಪೂತುದು ।
ಮುಂದಿನ್ಯೋಚನೆ ಎಸಗದೇತಕೆ । ನಿಂದಿರುವೆಯ್ಯೆ ತಿಳಿದಿರ್ಪೆಯ ॥೧೫೯॥

ಕೋಗಿಲೆ ಸ್ವರ ಕೀರ ನುಡಿಯ । ಕೇಳು । ತ್ತಾಗಳರಿತು ಜಾತೆ ಬಗೆಯ ॥
ತಾಗಿದನಂಗನ ಶರವ ಮರ್ದಿಪಡೆ ಸ ।
ರಾಗದಿಂ ಪರಿಣಯವನೆಸಗುವೆ । ನೀಗಿ ಕಳೆ ವಿರಹವನು ತೋಷದಿ ॥೧೬೦॥

ವ್ಯಥಿಸದಿರಹುದು ಶೀಘ್ರದೊಳು । ಎಂದು ।
ಸುತೆಯ ಮನ್ನಿಸುತ ಬಾಲನೊಳು । ಚತುರೆಯೆಂದಿರ್ಪುವೆಂದಾಗೆ ಚಂದನಾ ।
ವತಿಯ ಸೇರಲು ತಿಳಿದು ವ್ಯಾಧರ । ಪತಿಗೆ ಚರನೈತಂದು ನುಡಿದನು ॥೧೬೧॥

**ವಾರ್ಧಕ**

ರಿಪುಮಥನ ಕೇಳ್ ಕುಳಿಂದಂ ಬಹಳ ವೈಭವದೊ ।
ಳುಪಚರಿಸಿ ತನ್ನ ನಂದನ ಚಂದ್ರಹಾಸನಂ ।
ವಿಪುಲಪರಿತೋಷದಿಂದೊಡೆಯರಿಗೆ ಕಾಣಿಕೆಯನಿಡಿಸಿ ಕಾಣಿಸಿದ ಬಳಿಕ ॥
ವಿಪಿನದೊಳ್ತನಗೀ ಕುಮಾರಕಂ ಮುಂಗೈದ ।
ತಪದ ಫಲದಿಂ ತಾನೆ ದೊರೆಗೊಂಡನೀತನಂ ।
ಕೃಪೆಯಿಂದ ನೀವೆ ಪಾಲಿಸಪೇಳ್ವುದೆಂದು ನಿಜಪತಿಗೆ ಕೈವರ್ತಿಸಿದನು ॥೧೬೨॥

**ರಾಗ ಭೈರವಿ ಝಂಪೆತಾಳ**

ಮಧುರೋಕ್ತಿಯಂ ಬಹಳ । ಮುದಗೊಂಡ ತೆರನಂತೆ ।
ವಿಧುಹಾಸನನು ನೋಡೆ । ಹೃದಯಾಗ್ನಿಯುದಿಸೀ ।
ಅಧಮ ಚಾಂಡಾಲರವ । ರೊದಗಿಸಿದರೀ ತಾಪ ।
ನಿಧನಗೆಯ್ಯಲೆಂತು । ಬುಧರೆಂದ ನುಡಿಯ ॥೧೬೩॥

ಧರಣಿಸುರರೆಂದ ನುಡಿ । ಗೆರಡುಹುದೆ ಬಾಲನಿವ ।
ಮೆರೆಯುವನು ಸುತನಿಂಗೆ । ಅರಿಯೆನಿಸಿ ಜಗದಿ ।
ಬರಿಯ ಬೆದರಿಕೆಗೆ ಹಿಂ । ಜರಿಯುವನೆ ಬಲಯುತನು ।
ಗರಳವನು ಊಡಿ ಯಮಪುರಕೆ ಕಳುಹುವೆನು ॥೧೬೪॥

ಮಾಡುತೀಪರಿ ಕೃತಕವಾಡಿದ ಕುಳಿಂದಕಗೆ ।
ಮೂಡಿತುತ್ಸಹ ಇವನ ನೋಡಿ ಮನದೊಳಗೆ ।
ಜೋಡಿರದು ಇವಗೆಂದು । ಗಾಢದೊಳಗವನ ಮು ।
ದ್ದಾಡಿಯರುಹಿದನಿತ್ತು । ಗೂಢಲಿಖಿತವನು ॥೧೬೫॥

**ರಾಗ ಶಂಕರಾಭರಣ ಅಷ್ಟತಾಳ**

ಕೇಳಯ್ಯಾ । ಪೇಳ್ವೆ । ಕೇಳಯ್ಯಾ ॥ ಪಲ್ಲವಿ ॥

ಕೇಳಯ್ಯಾ ಪೇಳ್ವೆ ಚಂದಿರಹಾಸ ಪರಿಯ ।
ಪೇಳದನ್ಯರಿಗೆ ನೀ ಗೈವುದೀಕೃತಿಯ । ಕೇಳಯ್ಯಾ ॥ ॥ ಅನು ಪಲ್ಲವಿ ॥

ಗುಟ್ಟಾಗಿ ಕೊಡುವೆ ಲಿಖಿತಮಿದ ಪಿಡಿದು
ಥಟ್ಟನೆ ಪೊರಟು ಕುಂತಳಕೆ ಪೋಗುವುದು ॥
ಪಟ್ಟಿದೊಳಿಹ ಮದನನ ಮಾತ್ರ ಕರೆದು ।
ಕೊಟ್ಟು ಬಾ ನಿನಗೆ ಮುಂದಕೆ ತೋಷವಹುದು ॥೧೬೬॥

ದೊರೆಯುವುದಯ್ಯಾ ಮಂಗಲವು ಸರ್ವರಿಗೆ ।
ಚರರ ನಾಲ್ವರ ಕೂಡಿ ತೆರಳೆಮ್ಮ ಪುರಿಗೆ ।

ಬರಿದೆ ಕಾಲವ ಕಳೆಯುವುದೇನು ಹೀಗೆ ।
ತುರಗವನಡರಿ ಬಿಜಯಗಯ್ಯೋ ಬೇಗೆ ॥೧೬೭॥

ಎನಲಾಜ್ಞೆಗೊಪ್ಪಿ ಮಂತ್ರಿಗೆ ಪೊಡಮಡುತ ।
ಜನಕನಿಗೆರಗಿ ನೇಮಗೊಂಡು ಮತ್ತಾ ॥
ಜನನಿಗೊಂದಿಸಿ ನೇಮವೀಯುವದೆನುತ ।
ವಿನಯದೋಳ್ ಬೇಡ ಬಾಲಗೆ ಪೇಳ್ದಳಿನಿತ ॥೧೬೮॥

**ವಾರ್ಧಕ**

ಲೇಸು ಕಂದನೆ ಪೋಪುದೈ ಸಂತತಂ ನಿನ್ನ ।
ವಾಸುದೇವಂ ಕಾಯಲನುಕೂಲೆಯಾಗಿಹ ವ ।
ಧೂಸಮನ್ವಿತನಾಗಿ ರಾಜ್ಯಮಂ ಪಡೆಯೆಂದು ಪರಸಿ ಬೀಳ್ಕೊಡುತಲಂದು ॥
ಸೇಸೆ ತಳಿದಾರತಿಯನೆತ್ತಿ ತಿಲಕವ ತಿದ್ದ ।
ಲಾಸಮಯದೋಳ್ ನಾಲ್ವರನುಚರರ್ಗೂಡಿ ಶಶಿ ।
ಹಾಸಮಾರ್ಗದಿ ಬರುತ ಕಂಡನೈ ಶುಭಶಕುನ ನೂತನ ವಧೂವರರನು ॥೧೬೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತರುಣಿಯರು ಪೂಸರವನೀಯಲು । ಧರಿಸಿ ಕಂಠದಿ ತೆರಳಿ ಮುಂದಕೆ ।
ಧರಣಿಸುರರೀರ್ವರಿಗೆ ಮಣಿಯುತ । ಹರುಷ ತಾಳ್ದು ॥೧೭೦॥

ಶಕುನ ಶುಭಮಾಗಿಹುದು ಮುಂದಕೆ । ಸಕಲ ಸಿದ್ಧಿಯಹುದಹುದು ಎನುತಾ ।
ವಿಕಸಿತಾಂಬುಜವದನ ಪರಿಚಾ । ರಕರ ಕೂಡಿ ॥೧೭೧॥

ಮುಂಬರಿದು ಬರುತಿಲು ಕುಂತಳ । ವೆಂಬ ನಗರೋದ್ಯಾನವನವಿದಿ ।
ಗೊಂಬ ತೆರನಿರುತಿರಲು ನೋಡಿದ । ನಂಬರವನು ॥೧೭೨॥

ತರಣಿ ನಡುನಭಕೇರಲೀಪರಿ । ಚರರ ನಿಲಿಸುತ ಹರಿಯ ಬೇಹಿಗೆ
ತೆರಳಿದನು ಉಪವನದೊಳರಸುತ । ಸರಸಿಯಿರವ ॥೧೭೩॥

**ಭಾಮಿನಿ**

ನೋಡಿ ವಿಸ್ಮಿತನಾಗಿ ಉಪವನ ।
ರೂಢಿಯೊಳು ಮಿಗಿಲೆನಿಪುದಮಮಾ
ವೋಡದಿಹ ಮಂದಾನಿಲನು ತಾ ನೋಡುವರೆ ಸೊಬಗ ।
ಪಾಡಹನೆ ತಾನೆನುತ ಮುಂದಕೆ ।
ಮಾಡಿ ಮನನಾಲ್ದೆಸೆಯ ತರುವಿನೊ ।
ಳಾಡುತಿಹ ಕಲಕೀರವಾಣಿಯ ಕೇಳಿ ಸಂತಸದಿ ॥೧೭೪॥

**ರಾಗ ಕಾಂಭೋಜಿ ತಾಳ**

**(ಏನನುಸುರಲಿ ಮಾನಿನಿಯಚಲು | ವಾನನದ ಪರಿಗೆ ಎಂಬಂತೆ)**

ಭಾರಿ ಸಂಭ್ರಮ | ದೋರುವುಪವನ | ನಾರಿಯಳ ಬಗೆಗೆ ॥ ಬಣ್ಣಿಸಿ |
ತೀರ ನಭದಾ | ಕಾರದುಡಿಗೆಯ | ಬೀರಿಹಳು ಧರೆಗೆ |  ಯೆನುತಾ
ತಾರೆಯೊಲ್ ಸುಮ | ಭೂರಿಯುದುರುತ | ಧಾರುಣಿಯ ಬೆಳಗೆ | ಪ್ರತಿನಭ |
ದೋರೆನೆಂದೆಲೆ | ಯೇರಿಸಿಹಳು ಮ | ಹೀರುಹಗಳ್ ಹೆಗೆಗೆ ॥ ಬಳಿಕಾ ॥
ಬೇರೆ ಸುಮಗಳ  | ನಾರಿ ಧರಿಸಲು | ನೀರೆ ಪುಷ್ಪಿಣಿ | ದೂರಿರೆನುತಾ ॥
ಸೂರಿಯನಕರ | ಸಾರಲೊಂದೆಸೆ | ಆರಡಿಯು ತಾ | ಸೇರಿತಿಲ್ಲಿಗೆ ॥೧೭೫॥

ಸಾಧುಮೃಗಗಳು | ವ್ಯಾಧರಟ್ಟುಳಿ | ಬಾಧೆಗಳುಕುತಲೀ | ಮಾತೆಯ |
ಆದರಣೆಯೊಳು | ಮೋದಗೊಳಲನು | ವಾದವೆನ್ನುತಲೀ | ಪಕ್ವಸು |
ಸ್ವಾದು ಫಲಗಳು | ಪೋದವೆನುತಲಿ | ಪಾದಪಂಗಳಲೀ | ಖಗಗಳು
ರೋದಿಸಲು ಶುಕ | ವಾದಿಪುದವಿರ | ಳಾದ ಶಬ್ದದಲೀ ಕೋಗಿಲೆ ॥
ಯೂದುತಿಹ ಶೃತಿ | ನಾದಕಿವಿ ಗಾ | ಲ್ಹಾದಮೀಯುವ | ಧೀದರೆಗೆ ಸಿರಿ |
ಪಾದವನತಾ | ನಾದಳಿಗೆ ಧೊರೆ | ಯಾದವನು ಸುಕೃ | ತೋದಯನಲ್ಲೈ ॥೧೭೬॥

ಕುಂದಚಂಪಕ | ಮಂದರದಸುವ | ಗಂಧಜನರುಗಳಾ | ಧರೆಯೊಳಾ |
ನಂದಗೊಳಿಸುವ | ದೆಂದು ಅರುವಿಗೆ | ತಂದ ರೋಷದೊಳಾ | ಭೋಗಿಯ |
ವೃಂದಕುಣಿಯುವ | ವೆಂದುಯೆಣಿಸುತ | ಕುಂದಿ ಮುಡಿವಾಳಾ | ಶೀತಳ |
ಚಂದನವುಕಿರಿ | ಗಂಧಸಹಿತ್ವಲ | ನಿಂದ ಬೇರುಗಳ | ಬೆಳೆಸುತ ॥
ಗಂಧವಾಹನ | ತಿಂದುಸುಖಿಪರಾ | ನಂದಗೊಳಿಸುವ | ದೆಂದು ಮನವನು |
ತಂದಿಹವುನಿಜ | ವೆಂದು ತಿಳಿಯುತ | ಲಂದುಗಮಿಸಿದ | ಮುಂದೆ ವನದೊಳು ॥೧೭೭॥

ಳ

**ಭಾಮಿನಿ**

ಸುಮನಸಾಧಿಪನಾಳ್ವವನವದು |
ಸಮವಹುದೆ ನಂದನವಿದಕೆ ನಾ |
ನಮಿತತೋಷವ ತಳೆದೆನೆಂದರಸಿದನು ವಾರಿಯನು ॥
ಕಮಲಹಂಸಾದಿಗಳ ಸಂಗದೊ |
ಳಮಲವಾಗಿರುತಿರ್ಪ ಸರಸಿಯ |
ಹಿಮಕರಾಸನು ನೋಡಿ ವಿವರಿಸುತಿರ್ದ ಮನದಿರವ ॥೧೭೮॥

**ರಾಗ ಯಮುನಾ ಕಲ್ಯಾಣಿ ಅಷ್ಟತಾಳ**

**(ಅಮಮಾಯೇನ್ ಬೆಡಗುಗಾರ್ತಿಯೊ ಕನ್ಯೆ ಎಂಬಂತೆ)**

ಅಹಹಾ ಯೇನ್ ಸೊಗಸುದೋರುವುದಿಲ್ಲಿ । ನೇತ್ರ ।
ಸಹ ಹರುಷವ ತಾಳ್ವ ತೆರದಲ್ಲಿ ॥ ಪಲ್ಲವಿ ॥

ವಾರಿ ಕನ್ನಡಿಯಂತೆ ಹೊಳಪಿಂದ । ಕಣ್ಗೆ ।
ತೋರಿ ರಾಜಿಪುದೆಂತು ಬಲು ಚಂದ ॥
ನೀರಾನೆ ಶಕುಲಿದರ್ಧುರದಿಂದ । ತಾನು
ಭೂರಿನಿರ್ಮಲವಾದುದೊಲವಿಂದ ॥೧೭೯॥

ನಳಿನ ಪ್ರಫುಲ್ಲಮಾಗಿರೆ ನೋಡಿ । ಕೋಕ ।
ಜಲದೊಳೆ ಹಂಸಗಳ್ ಪಡೆಗೂಡಿ ॥
ಸುಳಿದಾಡುತ್ತಿರೆ ಸ್ವೇದವನು ಬಿಟ್ಟು । ಕರ ।
ದಳಿಯಮನ್ನಿಪುದೇಕೆ ಮಧುಗೊಟ್ಟು ॥ ॥೧೮೦॥

ಕಡುಚೋದ್ಯವರರೆ ಮಂಟಪದಂತೆ । ಸುಮ ।
ವಿಡಿದರ್ದಗಿಡವು ತೋರುತ ಮುಂತೆ ॥
ದಡವ ಶೃಂಗರಿಸಿರ್ಪುದೆನುತಾಗ । ತನ್ನ ।
ತೊಡಿಗೆಯ ಕಳಚಿ ಮಿಂದನು ಬೇಗ ॥೧೮೧॥

**ವಾರ್ಧಕ**
ರಾಜೀವಮಾದಿಯಾದಲರ್ಗಳಂ ತಂದುಹರಿ ।
ಪೂಜೆಯಂ ಮಾಡಿ ತಾತಂದ ಪಾಥೇಯಮಂ ।
ಭೋಜನಂಗೈದು ವಿಶ್ರಮಕಾಗಿ ತಳಿತ ಮಾಮರದ ನೆಳಲಂ ಸಾರ್ದನು ॥
ಆ ಜಾಗದೊಳ್ ತಳಿರಪಾಸಿ ಮಲಗಿರಲೊಯ್ಯ ।
ನೇ ಜಾಗರವತೊರೆದು ನಿದ್ರಾಂಗನೆಯ ಸೇರೆ ।
ಸೋಜಿಗವಿದೆಂಬಂತೆ ಹಂಸತಲ್ಪವದಾಯ್ತು ರಾಜೋಪವನ ತರಳಗೆ ॥೧೮೨॥

**ಭಾಮಿನಿ**
ಕುಂತಿಸುತ ಪೌತ್ರಜನೆ ಕೇಳೆಲೊ ।
ಇಂತು ಮಲಗಿರುತ್ತಿರ್ಪ ಸಮಯದಿ ।
ಕುಂತಳೇಂದ್ರನಜಾತೆ ಚಂಪಕಮಾಲಿನಿಗೆ ಸಖಿಯು ।
ಸಂತತಂ ಮಂತ್ರಿಸುತೆಯಾಗಿರ ।
ಲಂತರಿಸದಿವರೀರ್ವರಲ್ಲಿ ವ ।
ಸಂತಕಾಲದಿ ವಾರಿ ಕೇಳಿಗೆ ಸಖಿಸಹಿತ ಪೊರಡೆ ॥೧೮೩॥

**ರಾಗ ಬೇಗಡೆ ತ್ರಿವುಡೆತಾಳ**
**(ಸತಿಶಿರೋಮಣಿ ಪ್ರಭಾವತಿ ಎಂಬಂತೆ)**
ಜಲಕೇಳಿಗೆನುತ ಬಂದರು ಕೋಮಲೆಯರು ।

ಕಲಹಂಸನಡೆಯಿಂದ ಉರಗವೇಣಿಯರು ।
ಕುಲಿಶಾಭ ರದನೆಯರ್ ಜಲಜಗಂಧಿಯರು ।
ಅಳಿಕುಂತಳೆಯರು ಕಾಯಜನ ರನ್ನೆಯರು ॥
ತಳಿರಡಿಯ ಕೆಂದುಟಿಯ ಬೆಳಗಾಯ್ ।
ಮೊಲೆಯ ನೈದಿಲೆಗಣ್ಣವರ ಕೋ ।
ಗಿಲೆಯಸ್ವರ ಶುಕನುಡಿಯ ನವಿಲ್ ನಡೆ ।
ಕಲಭಮದಯಾನೆಯರು ಜೊತೆಯೊಳು ॥
ಸಲಿಲದೆಡೆಗೆಬಂದರೆಲ್ಲರು । ಜಲಕೇಳಿಗೆಂದು ।
ಸಲಿಲದೆಡೆಗೆ ಬಂದರೆಲ್ಲರು ॥೧೮೪॥

**ರಾಗ ಪುನ್ನಾಗ ಅಷ್ಟತಾಳ**
**(ಕೇಳೋ ದಾನವಕುಲಮೌಳಿಮಾನಿತನೆ ಎಂಬಂತೆ)**
ತರಳೆಯರೊಡಗೂಡಿ । ಬರುತಿರೆ ವನದಿ ॥
ಸರಸಿಯೊಂದನು ನೋಡಿ । ಪಿರಿದೂ ಸಂತಸದಿ ॥೧೮೫॥

ನಳಿನನೇತ್ರೆಯರೆಲ್ಲ । ಕೊಳದೊಳಗಿಳಿದು ।
ತೊಳಕಿಜಲವನಾಗ । ಸೊಗಸಿನೊಳ್ ನಲಿದೂ ॥೧೮೬॥

ಮದಗಜ ವ್ರಜದಂತೆ । ಕದಡುತ್ತ ಮುದದಿ ।
ಮದನ ಸುಂದರಿಯ । ರಾಡಿದರಿಂತು ನದದಿ ॥೧೮೭॥

**ರಾಗ ಘಂಟಾರವ ಆದಿತಾಳ (ಲಲನೆ ಕೇಳೆಲೆ ನಿನ್ನ ಎಂಬಂತೆ)**
ಹರಿಣನೇತ್ರೆಯರೆಲ್ಲಾ । ಪರಿಪರಿ ಕ್ರೀಡಿಸಿ ।
ಸರಸಿದಂಡೆಯ ಸಾರಿ । ವರಿಸಿಯಂಗವನು ॥೧೮೮॥

ಧರಿಸಿ ನೂತನ ವಸ್ತ್ರ । ನಿರಿವಿಡಿದುಟ್ಟಾಗ ।
ಕುರುಳ ತಿದ್ದುತ ಫಣೆ । ಗಿರಿಸಿ ಕುಂಕುಮವ ॥೧೮೯॥

ಮುದದಿ ಚೆನ್ನವ ತೊಟ್ಟು । ಮಧುವ ಜಿಹ್ವೆಯೊಳಿಟ್ಟು ।
ವಿಧುಮುಖಿಯರು ವಟ್ಟು । ವದಗಿನೊಳ್ ಪೊರಟು ॥೧೯೦॥

ವಿಧವಿಧ ಸುಮಗಳ । ಚದುರೆಯರ್ ಸೂಡುತ್ತ ।
ಪದುಮಾಕ್ಷಿಯರು ನಂದ । ನದಿ ಪೋದರ್ ನಗುತ ॥೧೯೧॥

ಬಳಿಕೋರ್ವರೋರ್ವರು । ನಲವಿಂದ ಪಾಡುತ್ತ ।
ಅಲರುಗಳ್ ಮುರಿಯುತ್ತ । ಚರಿಸೆಯಗಲುತ್ತ ॥೧೯೨॥

ಲಲಿತಚಂಪಕನಾಸೆ । ಖಲಮಂತ್ರಿಜಾತೆಯು ।
ನೆಳಲೊಳಿರ್ಪನ ನೋಡಿ । ಗೆಲುವಿಂದ ಪ್ರಹುಡಿ ॥೧೯೩॥

**ವಾರ್ಧಕ**
ತೋಳತಲೆದಿಂಬಿಗನ ತಳಿರ್ದಸೆಯ ಮೇಲೆ ತಂ ।
ಗಾಳಿಗೊಡ್ಡಿದ ಮಯ್ಯ ಸೊಗಸಿಂದೆ ಮರದು ನಿ ।
ದ್ರಾಲೋಲನಾಗಿ ಮಲಗಿಹ ಚಂದ್ರಹಾಸನಂ ಕಂಡು ಸೈವೆರೆಗಾಗುತೆ ।
ಮೇಲಕುಪ್ಪರಿಸಿ ತಲೆಕೆಳಗಾಗಿ ಬಿದ್ದಡಂ ।
ಲೋಲಲೋಚನೆಗೆ ಪಾಸಟಿಯಹರೆ ತನ್ನವರು ।
ಸೋಲದವರ್ಯಾರೆಂಬ ತೆರನಿರ್ಪನಾರಿ । ಮ್ಮರಿಯೆನ್ನೈ ತಿಳಿವೆನೆಂದು ॥೧೯೪॥

**ರಾಗ ಬೇಗಡೆ ಏಕತಾಳ**
**(ಯೇನಿದೂ ನಿಮ್ಮಲ್ಲಿ ಸಂವಾದ ಎಂಬಂತೆ)**
ಚಿತ್ತಜನುತಾ ಕತ್ತಿಯನು ಧರಿಸಿ । ಸುತ್ತಿರುಗಿ ಮೂರು ಜ ।
ಗತ್ತು ಯವ್ವನ ಪೊತ್ತವನ ಬೆರಸಿ ॥
ಕತ್ತರಿಸಿ ದಣಿಯುತ್ತ ಗಮನಿಸಿದನಿತ್ತ ಖರೆಯದೆ ಯತ್ತಿಗೊಲಿದಡ ।
ರುತ್ತಿಹನ ಶಿರ ಕುತ್ತಿಯಲಗೆ ತುತ್ತೆನೆಸಿ ಕಲೆಯೆತ್ತಿಹನೆ ಪುಸಿ ॥೧೯೫॥

ಅಂತರಿಕ್ಷದಿ ಸಂತತವು ನಡೆದು । ತಾ ಭೂರಿಶ್ರಮವ ।
ನಾಂತು ಭೂಮಿಗೆ ಸಂತಸದೊಳಿಳಿದು ॥
ಇಂತು ಮಲಗಿಹನೆಂತೆನಲು ಸರಿ । ಯಂತಹದು ಹಿಮನೆಂತ ನುಡಿವರು ।
ಅಂತಿರಲಿ ಮೃಗದಂತೆಸವ ಕಲೆ । ಯಂತೊರೆಯಮಲೆ ಭ್ರಾಂತಿಗೊಳಿಪುದು ॥೧೯೬॥

ಸುರರೊಳಾವನೊ ಗರುಡಗುಹ್ಯಕನೊ । ಅಲ್ಲದಡೆ ಮತ್ತಾ
ಸುರಪಜಾತನೊ ವರ ದಿವಾಕರನೊ ॥
ಮರುಳು ನಾನಹೆ ಧರಣಿಗೇತಕೆ । ಬರುವರೋರ್ವರೆ ಸುರರು ಸೂರಿಯ
ಚರಿಪನಬ್ಧಿ ಸ್ಮರನ ಹರನುದ್ಧರಿಸಿದನೊ ಚಂದಿರನೊ ಈತನು ॥೧೯೭॥

**ಕಂದ**
ಪರರಂ ಪೀಡಿಪ ಕ್ರೂರರ್ ।
ಮರಣವ ಪಡೆಯರು ಸರ್ವಥಾ ನಿಶ್ಚಯ ಜಗದೊಳ್ ॥
ಒರೆಯದ ಸೋಜಿಗಮನ್ನಾರ್ ।
ಅರುಹುವರೆನ್ನುತೆ ವಾರಣನಡೆ ಬಿಸುಸುಯ್ದಳ್ ॥೧೯೮॥

**ರಾಗ ಹಿಂದೂಸ್ಥಾನಿ ಕಾಪಿ ರೂಪಕತಾಳ**
**(ಸರಿಯಾದೀ ತರುಣಿಮಣಿಗೆ ಎಂಬಂತೆ)**

ಹರನ ಫಣೆಯ ಕಿರಣದೆಡೆಯೊ | ಳಿರುತಹರಣ ಪೊರೆದರಿಹರೆ |
ಕರಿಸಿನಿಟಿಲದುರಿಯೊಳ್ ಜೀವ | ತೊರೆದು ಮರಳಿ ಬರುವದಿಹುದೇ ||೧೯೯||

ಸರ್ಪನಧರ ಪೊಕ್ಕು ತಿರುಗಿ | ಬರ್ಪರಿಹರೆ ನೋಡೆಯನಿಲ |
ದರ್ಪಕಂ ಚಂದ್ರಮರುಬದುಕಿ | ತೋರ್ಪರಮಮ ಚೋದ್ಯ ಜಗದೀ ||೨೦೦||

ಕೊಲುತ ಹರನು ಮೆಲುತಪಾವು | ಸಲಹಿಕೋಮಲೆಯರ ಕೊಲೆಯ |
ಗೊಳಿಸೆ ಕರುಣದಿಂದ ಶಿವನ | ತಲೆಯ ತೊರೆದನಾಗ ವಿಧುವು ||೨೦೧||

**ರಾಗ ಸಾರಂಗ ಅಷ್ಟತಾಳ**

**(ಕೇಳಿತ್ತಾ ಧರಣೀಪಾಲ ಎಂಬಂತೆ)**

ಒರೆಯಲೆಂತೀ ಹದನ | ರೂಪವ ನೋಡಿ | ಮರುಳಾದೆನ್ನೈ ಇವನ ||
ಸರಿಹೋಲಿಸಿದೆ ಸ್ಮರಶರ ಚಂದ್ರ ಪವನಂಗೆ
ನರನಲ್ಲದಿರನೀತ | ಪರಮ ಸುಂದರ ಖ್ಯಾತ ||೨೦೨||

ಜಲಜಾಸ್ತ್ರ ಕಾರ್ಮುಕದಿ | ಮಾರ್ಗಂವಿಟ್ಟ | ಬಲಹೀನೆಯಂ ಧುರದಿ ||
ಕೊಲದಂತೆಯನ್ನ ಬೆಂಬಲಕಾಗಿ ಚಲುವನ
ಜಲರುಹೋದ್ಭವ ಗೈದು | ಕಳುಹಿದ ಕರುಣದಿ ||೨೦೩||

ಪೂಗೋಲನುರು ಬಾಧೆಗೆ | ಬೆಚ್ಚುತಲಂದು | ಪೋಗಲಾತನ ಬಳಿಗೆ ||
ಆಗ ನಾಚುತ ಹಿಂದಕ್ಕಾಗಿ ಬರುವಳೊಮ್ಮೆ
ಹೇಗೆ ತಾಳುವೆನೆಂದು | ಬೇಗ ಸಾರುವಳೊಮ್ಮೆ ||೨೦೪||

ನೆರೆಯಲೆತ್ನವೆನೆಂದು | ಎಣಿಸಿ ಕಾಲ | ಸರಿಯಲ್ಲವೆನುತ ನೊಂದು ||
ಸೆರಗಿನೋಳ್ ತಾತನು | ಬರೆದ ಲೇಖನ ನೋಡಿ |
ಪರಿಕಿಸುತವಳಾಗ | ಬೆರಗಾಗಿ ವಾಚಿಸಿ ||೨೦೫||

**ವಾರ್ಧಕ**

ಶ್ರೀಮತ್ಸಚಿವ ಶಿರೋಮಣಿ ದುಷ್ಟಬುದ್ಧಿ ಸು |
ಪ್ರೇಮದಿಂ ತನ್ನ ಸುತ ಮದನಂಗೆ ಮಿಗೆ ಪರಸಿ |
ನೇಮಿಸಿದ ಕಾರ್ಯಮೀ ಚಂದ್ರಹಾಸಂ ಮಹಾಹಿತನೆಮಗೆ ಮೇಲೆ ನಮ್ಮ ||
ಸೀಮೆಗರಸಾದಪಂ ಸಂದೇಹಮಿಲ್ಲಿದಕೆ |
ಸಾಮಾನ್ಯದವನಲ್ಲ ನಮಗೆ ಮುಂದಕೆ ಸರ್ವ |
ಥಾಮಿತ್ರನಪ್ಪನೆಂದೀತನಂ ಕಳುಹಿದೆವು ನಿನ್ನ ಬಳಿಗಿದನರಿವುದು ||೨೦೬||

**ಭಾಮಿನಿ**

ಹೊತ್ತುಗಳೆಯದೆ ಖಳನಿವನ ಕುಲ |

ವಿತ್ತ ವಿದ್ಯಾವಯಸು ನೀ ನೋ ।
ಡುತ್ತಿರದೆ ಕೊಡು ವಿಷವ ಮೋಹಿಸುವಂತೆ ಬಾಲಕಗೆ ॥
ಉತ್ತರರೋತ್ತರವಹುದೆನುತಲಿರೆ ।
ಮತ್ತಕಾಶಿನಿ ಲಿಪಿಯ ನೋಡುತ ।
ಚಿತ್ತದಲಿ ಬೇರೊಂದ ನೆನೆದಳು ವಿಧಿ ವಶದಿ ತರಳೆ ॥೨೦೭॥

**ರಾಗ ಮುಖಾರಿ ಆದಿತಾಳ**
**(ಸುರನದೀಜಾತ ಲಾಲಿಸಯ್ಯ ಎಂಬಂತೆ)**
ಅರರೇ ತಪ್ಪಿಹುದೊಂದಕ್ಷರದೀ । ಕರ ರಾಪಿನ ಭರದೀ ।
ಅರರೇ ತಪ್ಪಿಹುದೊಂದಕ್ಷರದೀ ॥ ಪಲ್ಲವಿ ॥

ಸುರನರೋರಗರಿಂಥ ಸೊಬಗ । ಧರಿಸಿರ್ಪರೆ ಭುಜಗಾ ।
ಭರಣಾದ್ರಿಯಾದಿ ಸುಂದರ ಪೂಗ ॥
ಸರಿ ಬರುವುದೆ ಸ್ಮರ । ಶರವದನೆಗೆ ಸುರ ।
ತರುಣಿಯರೊಳು ಮನ । ವಿರಿಸಲಿವನು ಸುತೆ ।
ಗ್ವರನಿರುವನೆ ಇವ । ನ್ವೊರತೆನುತಲಿ ಪಿತ ।
ಪರಿಪರಿ ಭ್ರಮಿಸುತ । ಬರೆದಿಹ ಪ್ರೇಮದಿ ॥೨೦೮॥

ವಿಷಯೆ ವರಿಪುದೆಂಬ ಭಾವ । ವಿಷವಾಗಿದೆ ದೋಷ ।
ಎಸಗೆ ಗೈಯ್ಯುವೆ ಯತ್ನವಹವ್ವಾ ॥
ವ್ಯಸನವಿದೇತಕೆ । ಉಸುರುವುದಾರಿಗೆ
ವಿಷಯವ ತಿದ್ದುತ । ಹೊಸತನ ಗೈಯ್ಯಲು ।
ನಸುನಗೆಯಿಂದಿಹ । ಶಶಿಸಮರೂಪನು ।
ವಶವೆನಗಾಗುವ ಪಶುಪತಿದಯದೀ ॥ ॥೨೦೯॥

ಎಂದಾಗ ನಖದೊಳದರ ತಿದ್ದೀ । ಕಂಚುಕದ ತುದಿಗೆ ।
ಬಂಧಿಸಿ ಹರುಷ ನಿಧಿಯೊಳದ್ದಿ ।
ಸುಂದರ ತವ ಮುಖ । ಎಂದಿಗೆ ತೋರುವೆ
ಎಂದೆನುತಲಿ ಸುಮ । ಗಂಧಿನಿ ಸಖಿಯರ ।
ವೃಂದವ ಸೇರುತ । ನಿಂದಿರೆಸುಮ್ಮನೆ ।
ಚಂದಿರವದನೆಯ । ರೆಂದರು ಮುದದೀ ॥೨೧೦॥

**ರಾಗ ಕಲ್ಯಾಣಿ ಏಕತಾಳ**
**(ಯಾತಕಿಂಥ ಬುದ್ಧಿ ಬಂತು ಎಂಬಂತೆ)**
ಎತ್ತ ಪೋಗಿ ಬಂದೆ ಹೀಗೆ । ಮಿತ್ರೆ ಪೇಳೂ ॥ ಕೋಮ ।
ಲುತ್ತಮಾಸ್ಯ ಕಂದಿತ್ಯಾಕೆ । ಮಿತ್ರೆ ಪೇಳು ॥೨೧೧॥

ಯಾತಕಿಂತು ಮೌನ ಸುಗುಣೆ । ಮಿತ್ರೆ ಪೇಳೂ ॥ ಮತ್ತಾ ।
ವಾತ ಕಂಪ ಬೀರದಿರನೆ । ಮಿತ್ರೆ ಪೇಳು ॥೨೧೨॥

ತೋಷವಿಹುದು ಕ್ಲೇಶದಲ್ಲೇ । ಮಿತ್ರೆ ಪೇಳು ॥ ನಿನ್ನಾ ।
ವೇಷಬೇರಾಗಿಹುದು ಬಲ್ಲೆ । ಮಿತ್ರೆ ಪೇಳು ॥೨೧೩॥

**ರಾಗ ಪಂಚಘಾತ ಮಟ್ಟೆತಾಳ**

**(ತಾತ ಫಲುಗುಣ ಎಂಬಂತೆ)**

ಸಾಕು ನಿಮ್ಮಯ ಈ ಕುಚೇಷ್ಟೆಯು ।
ಟೀಕೆಯಾದುದು ಯಾಕೆ ಪೇಳ್ವುದು ॥೨೧೪॥

ಶುಕ ಸುಭಾಷಿಣಿ ಸತಿ ಶಿರೋಮಣಿ ।
ಅಕಲು ದೋರದೆ ಮುಖವು ಬಾಡಿದೆ ॥೨೧೫॥

ಖಗನ ತಾಪದಿ ಮೊಗವು ಬಾಡಿದೀ ।
ಬಗೆಗೆ ಮಾತಿದು ಸೊಗಸು ದೋರದು ॥೨೧೬॥

ಲಘುವನೀವಳು ಅಘವಿನಾಶಳು ।
ವಿಘಟದೋರಳು ಮಘವ ಪಾಲಳೂ ॥೨೧೭॥

**ಕಂದ**

ಈ ಚದುರೆಯು ನಿಜಭಾವವ ।
ತಾ ಚದರುವಳೆನುತಾವ್ ದೂರೆ ಉದಯದೋಳ್ ॥
ಮಾಜದೆ ನೀ ಸಲಹಿವಳಂ ।
ಯೇ ಝುಷಕೇತಾರಿಯ ಪ್ರೀತೆಯೆ ನಮಿಪೆವು ನಿನ್ನಂ ॥೨೧೮॥

**ರಾಗ ಸಾಂಗತ್ಯ ರೂಪಕತಾಳ**

ಸರಸಿಜಮುಖಿಯರು ನೆರೆದೆಲ್ಲರೊಂದಾಗಿ । ಸರಸವಾಡುತಲಿರಲಂದು ॥
ಪರಿಕಿಸಿ ನಭಭ್ರಮರಾರಿ ಮಾಲಿನಿ ಪೇಳ್ದ । ಆರರೆ ವೇಳೆಯಾಯಿತೆಂದು ॥೨೧೯॥

ಮದಗಜಯಾನೆ ಮಂದಿರಕೈದಿ ಸಖಿಯರ । ಮುದದಿಂದ ಮನ್ನಿಸಿ ಕಳುಹೆ ॥
ಸುದತಿ ಶಿಖಾಮಣಿ ವಿಷಯೆ ಮಂದಿರ ಸಾರೆ । ಮದನಾಸ್ತ್ರದಿಂದ ಸುಟ್ಟುರುಹೆ ॥೨೨೦॥

ಈ ಮಹಾತಾಪ ಸೈರಿಸಲಪಾಯವಿರದೇಳು । ಮಾಳಿಗೆಯನು ಸೇರುತಲಿ ॥
ಕಾಮಸನ್ನಿಭರೂಪ ಬರುವ ಮಾರ್ಗವ ನೋಡಿ । ಕಾಮಿನಿಯಿರೆ ನಿರೀಕ್ಷೆಯಲಿ ॥೨೨೧॥

ಸರಸದೊಳ್ ಕಾಮಿನಿಯು ಪೇಳ್ದಳು ತಾಯೆ । ಪರಮಪಾವನೆ ಲೋಕಮಾತೆ ।
ಕರಗಿಸಬೇಡಮ್ಮ ಸಖಿಯಭೀಷ್ಟವನೀಯೆ । ಎರಗಿ ವಂದಿಪೆ ಗಿರಿಜಾತೆ ॥೨೨೨॥

ಸಲಹಿದ ಗಿಳಿಯ ನೋಡಲು ಉಣ್ಣದಿರ್ಪಳು । ಒಲಿದು ಮಾತಾಡಳೆಮ್ಮೊಡನೆ ॥
ಖಳ ಶಂಬರಾರಿ ಇಂತೆಸಗಿರ್ಪ ಶಿವೆ ನೀನು । ಮುಳಿಯಲು ದುಷ್ಟನು ಕೆಡನೆ ॥೧೧೩॥

**ವಾರ್ಧಕ**

ವಿಜಯ ಮೊಮ್ಮಜ ಕೇಳ್ವುದೈ ಚಂದ್ರಹಾಸನಂ ।
ಬುಜಮಿತ್ರನಪರಾಹ್ನಕೈದಲ್ಕೆ ನಿದ್ರೆಯಂ ।
ತ್ಯಜಿಸಿ ಮೊಗದೊಳೆದು ಮುಕ್ಕುಳಿಸಿ ಕರ್ಪುರ ವೀಳೆಯಂಗೊಂಡು ಬಳಿಕ ಬಿಗಿಸಿ ॥
ನಿಜವಾಜಿಯಂ ಬಂದಡರ್ದನುಚರರ್ವೆರಸಿ ।
ರುಜುವಾದ ಶಕುನಂಗಳಂ ಕಾಣುತೊಲಿದುಪೌ ।
ರಜನಮಿವನಾರೆಂದು ಕೇಳುತಿರೆ ನಗರಮಂ ಪೊಕ್ಕು ನಡೆತರುತಿರ್ದನು ॥೧೧೪॥

**ರಾಗ ಭೈರವಿ ಝಂಪೆತಾಳ**

ಆ ಸಮಯದೊಳಗೆ ರಾಜಾಸನದಿ ಮದನನೆಂ ।
ಬಾ ಸುಗುಣನೇರಿರಲು ವಾಸವನ ತೆರದಿ ॥
ದಾಸಿಯರು ಚಾಮರವ ಬೀಸುತಿರೆ ಧಾರುಣಿಸು ।
ವಾಸಿನಿಯರ್ ಗಾಯನದಿ ತೋಷಗೊಳಿಸಿದರು ॥೧೧೫॥

ಆ ಮದನ ಗೈದಿರುವ ನೇಮದೊಳು ಕೋಶಪತಿ ।
ತಾ ಮುದದಿ ಮನ್ನಿಸಿದ ಕಾಮಿನಿಯರೊಲಿಯೆ ।
ಭೂಮಿಸುರರೆಲ್ಲರನು ಹೇಮದಲಿ ಸತ್ಕರಿಸೆ ।
ಸ್ವಾಮಿಯೆನುತೋರ್ವ ಚರನಾ ಮಹಿಮಗೊರೆದ ॥೧೧೬॥

ಜೀಯ ತವ ತಾತನ ವಿಧೇಯ ಹೊರಬಾಗಿಲೊಳು ।
ಕಾಯುವನು ಅಪ್ಪಣೆಯನೀಯುವೆನು ಅವಗೆ ॥
ತಾ ಯೆನಗೆ ಧನವಗಾಂ ಜೀಯ ಕೊಳೆಯೆನಲಾಗ ।
ಪ್ರೀಯದೊಳು ಪೀಠವನು ತಾ ಇಳಿದು ನಡೆದ ॥೧೧೭॥

**ರಾಗ ಕೇದಾರಗೌಳ ಅಷ್ಟತಾಳ**

ತ್ವರಿತದಿ ನಡೆತಂದು ಹೊರಬಾಗಿಲೊಳಗಿರ್ಪ । ವರ ಚಂದ್ರಹಾಸನನು ॥
ಕರವಿಡಿಯುತಲಿ ಸತ್ಕರಿಸಿ ತಾ ಕರೆದೊಯ್ದು । ಹರುಷದೊಳಿಂತೆಂದನು ॥೧೧೮॥

ನಿತ್ಯ ಸೌಖ್ಯವ ಪಡೆದಿರ್ಪರೆ ಪ್ರಜೆ ಜನ । ಸ್ತುತ್ಯ ಕುಳಿಂದಕನು ॥
ಸತ್ಯ ಸುಗುಣ ಕಾಂತಾಮಣಿ ಸರ್ವರು । ಅತ್ಯಂತ ಕ್ಷೇಮಿಗಳೆ ॥೧೧೯॥

ಚರಣ ದರ್ಶನವಾವ ಪರಿಗಾದುದೆನುತಲಿ । ಅರಿಯೆನೆನಲ್ಕೀತನು ॥
ಭರದಿ ಲೇಖನವಿತ್ತ ಪೊರೆದೆಲ್ಲ ವಿವರಿಸಿ । ತೆರೆದು ವಾಚಿಸು ಎಂದನು ॥೧೨೦॥

ಎದ್ದಾಗ ಶಶಿಹಾಸನನು ಪ್ರೀತಿಯಿಂದಲಿ । ಗದ್ದುಗೆಯನು ಏರಿಸಿ ॥
ಸದ್ದುಗಯ್ಯದೆ ಗೌಪ್ಯದೊಳುಕೋಣೆಯಂ ಸೇರಿ । ಮುದ್ರೆಯೊಡೆದು ವಾಚಿಸಿ ॥೧೩೦॥

**ವಾರ್ಧಕ**

ಲೇಸಾದುದಯ್ಯನಿಂದೆನಗೆ ನೇಮಿಸಿ ಕಳುಹಿ ।
ದೀಸು ವಕ್ಕಣೆಗಳ್ ಮಹಾಹಿತಂ ತನಗೀತ
ನೀ ಸೀಮೆಗರಸಾದಪಂ ಸರ್ವಥಾಮಿತ್ರನಪ್ಪವಂ ನಿಶ್ಚಯವಿದು ॥
ಮೋಸವೆ ಕುಲಾಚಾರ ಗತಿಯಾನಾರೈವಡೆ ವಿ ।
ಲಾಸದಿಂ ವಿಷಯೆ ಮೋಹಿಸುವಂತೆ ಕೊಡುವೆನಿದ ।
ಕೋಸರಿಸಲ್ಯಾಕೆ ತಂಗಿಗೆ ತಕ್ಕವರನೀತನೆಂದು ಮದನಂ ತಿಳಿದನು ॥೧೩೧॥

**ರಾಗ ಮಾರವಿ ಏಕತಾಳ (ಬಡವರು ನಾದ್ಯೆನೀವೇ ಎಂಬಂತೆ)**

ಅನುಜೆಗಿವನು ಸಮ । ನೆನಿಸುವ ವರನಹ । ಮನುಮಥಪ್ರತಿರೂಪ ॥
ಘನಮಹಿಮನು ಇವ । ನನು ಪೊಗಳಲಹುದೆ । ಅನುಜೆಯನೀಯುವೆನು ॥೧೩೩॥

ಪೊಡವಿ ಸುರರಕರೆ । ಸಡಿಗೆರಗುತಲವ । ನುಡಿದನು ಮೋದದೊಳು ॥
ಕೊಡುವೆನಿವಗನುಜೆ । ಹುಡುಗರುಭಯರಿಗೆ । ಉಡುಬಲವಿಂದಿಹುದೆ ॥೧೩೪॥

ಭೂಸುರನಿಕರ ಉ । ಲ್ಲಾಸದಿ ನಲಿಯುತ । ರಾಶಿಕೂಟವ ನೋಡಿ ॥
ಹೇಸುಗುಣನೆ ಶಶಿಹಾಸಗೆ ವಿಷಯಗೆ । ಲೇಸು ದಿನವೆ ಇಂದು ॥೧೩೫॥

**ರಾಗ ಶಂಕರಾಭರಣ ತ್ರಿವುಡೆ ತಾಳ**

ಮಂಗಲವು ದೋರುವುದೆನುತ ಮದ । ನಂಗರುಹೆ ತೋಷಿಸುತ ಪುರವನು ।
ಶೃಂಗರಿಸಿ ತೋರಣದಿ ಹೊಡೆಸುತ । ಡಂಗುರವನು ॥೧೩೬॥

ಜನನಿ ತಾರಾಕ್ಷಿಯನು ಕರೆಸುತ । ಮಣಿದು ಪೇಳಿದನೀತಗನುಜೆಯ ।
ಜನಪನಾಜ್ಞೆಯೋಳಿವೆ ತವಕ್ರಮ । ಕ್ಷಣದಿ ಗೈಸು ॥೧೩೭॥

ಕಂದನರುಹಿದ ನುಡಿಯ ಕೇಳ್ದವ । ಳಂದು ಸತಿಯರ ವೆರಸಿ ತಮ್ಮಯ ।
ದಂದುಗದೊಳಿರಲಾಗ ವಿಷಯೆಗೆ । ಯಂದಳ್ ಸಖಿಯು ॥೧೩೮॥

ಇಂದುವದನೆಯೆ ನಿನ್ನ ಬಯಕೆಯ । ಇಂದು ಮದನನು ತೀರಿಪನು ವರ ।
ಇಂದುಹಾಸನುರೂಪಿನೊಳಗವ । ಇಂದಿರೆಯಜ ॥೧೩೯॥

**ಕಂದ**
ಈ ಪರಿ ಯೋಚಿಸಿ ಸಚಿವಂ ।
ಸಾಫಲ್ಯವದಾಯ್ತಿಷ್ಟತೆ ಎಂದಿರಲಾಗಂ ।
ಗಾಬರಿಯೊಳ್ ಬಂದಿಹನಂ ।
ಆ ಭೂಮಿಪನರಿದಿದಿರ್ಗೋಳ್ಕುತತಾನೊರೆದಂ ॥೩೦೦॥

**ರಾಗ ಕಾಂಭೋಜಿ ಝಂಪೆತಾಳ**
ವಿರತಿಯಾಂತಿರುತಿರ್ಪೆ । ವಿರಚಿಸುವೆನ್ನೈತಪವ ॥
ವಿರಸನಾಗದೆನೀ ಸಾ । ವಿರದೆ ಸುಖಿಯಾಗಿ ॥
ವರ ಪೌರೋಹಿತ ಗಾಲ । ವರ ನೇಮದಂತೆ ಪುರ ।
ವರದ ಪಟ್ಟವನಾಳು । ವರನಾಗಿವಳಿಗೆ ॥೩೦೧॥

ಸುಂದರಾಂಗಿಯನಾಗ । ಗಂಧರ್ವವಿಧಿಯಿಂದ ।
ಚಂದಿರಾಸ್ಯನಿಗಿತ್ತು । ಯಂದ ಗಾಲವಗೆ ।
ವಂದಿಸುವೆನ್ನೈಯಾಜ್ಞೆ । ಇಂದೀವುದೆನುತ ನೃಪ ।
ನಂದನಂ ದಾಟುತಲಿ । ಮುಂದೆ ವನಸಾರ್ದ ॥೩೦೨॥

ಮುಂತೆ ಶಶಿಹಾಸ ನೃಪ । ನೆಂತ ನಗರದಿ ತೋರೆ ।
ಕಾಂತಮಣಿಸಹನಾಗಿ । ದಂತಿಯನು ನಡೆಸಿ ।
ಸಂತಸದೊಳೈತರಲು । ಮಂತ್ರಿವರ ನೋಡುತಲಿ ।
ಚಿಂತಿಸಿದ ಭ್ರಮೆಗೊಂಡು । ಅಂತರದಿ ಮುಳಿದು ॥೩೦೩॥

**ವಾರ್ಧಕ**
ಗಾಲವರ ಮತದೊಳೆನ್ನಂ ಕರೆಸದಿಂದು ಭೂ ।
ಪಾಲಂ ಕುಳಿಂದತನಯಂಗಿಳೆಯನೊಪ್ಪಿಸಿವ ।
ನಾಲಯಕೆ ತೆರಳಿದನೆ ಮದನನಿದ್ದೇಂಗೈದನೆಂದು ಪಲ್ಮೊರೆದು ಮಗನ ।
ಮೇಲೇ ಕೋಪಿಸುತಿರ್ದನನ್ನೆಗಂ ಭ್ರಮರಾರಿ ।
ಮಾಲಿನೀವೆರಸಿ ಮಾವನ ಕಾಣಲೆಂದುಙಂ ।
ಡಾಲಮಸ್ತಕದಿಂದಲಿಳಿತಂದು ಶಶಿಹಾಸನೆರಗಿದಂ ಸಚಿವನಡಿಗೆ ॥೩೦೪॥

**ರಾಗ ಭೈರವಿ ಏಕತಾಳ**
ಪರಶಿವೆಯನು ಪೂಜಿಸಲು । ನಾ । ನರುಹಿರೆ ನಿನ್ನೊಳು ಮೊದಲು ॥
ಮರೆಯುತ ಮೂಢತೆಯೊಳಗೆ । ಏಂ । ಜರುಗಿದೆ ಪೇಳುವದೆನಗೆ ॥೩೦೫॥

**ರಾಗ ಕೇದಾರಗೌಳ ಅಷ್ಟತಾಳ**

ಮದನವೈರಿಯ ಪ್ರೀತೆ । ಪದವ ಪೂಜಿಸಲು ನಾ । ಮುದದಿ ಪೋಪ ವೇಳೆಗೆ ॥
ಚದುರ ಭಾವನು ತಡೆ । ಸಿದನೃಪನೆಡೆಗೈದಿ । ಪದವಿದನಾಳ್ವುದಕೆ ॥೨೦೬॥

**ರಾಗ ಭೈರವಿ ಏಕತಾಳ**

ಕಟ್ಟಳೆಯನು ಮೀರುತಲಿ । ನೃಪ । ಪಟ್ಟವ ನಾಳ್ವುದೆನುತಲಿ ।
ಕೊಟ್ಟೆಯ ಮನವ ಶಿವೆಯು । ಮುಳಿ । ಸಿಟ್ಟರಿಹಳೆ ತಾಸಿರಿಯು ॥೨೦೭॥

**ರಾಗ ಕೇದಾರಗೌಳ ಅಷ್ಟತಾಳ**

ಅಂಗಜರಿಪು ಪ್ರಿಯೆ । ತುಂಗವಿಕ್ರಮೆಯ ಪಾ । ದಂಗಳ ಪೂಜಿಸಲು ।
ಭರವಾಗದ ತೆರ । ನಂಗಯ್ಯೆ ಮುದದಿ ಭಾ । ವಂ ಗಮಿಸಿರ್ದಪನು ॥೨೦೮॥

**ರಾಗ ಭೈರವಿ ಏಕತಾಳ**

ನಿನ್ನೊಳು ಪೇಳಿದ ಕೃತಿಗೆ । ಪರ । ರನ್ನು ಕಳುಹಿದುದು ಹೇಗೆ ॥
ಚನ್ನಾಯಿತೆ ಉಸುರೆನಗೆ । ನಡೆ । ಸಿನ್ನು ರಥವನೀ ಮನೆಗೆ ॥೨೦೯॥

**ರಾಗ ಕೇದಾರಗೌಳ ಅಷ್ಟತಾಳ**

ಇಡಳು ನಮ್ಮೊಳು ಹೆಚ್ಚು । ಕಡಿಮೆಯೆಂದೆನುತಲೆ । ನಡೆದ ಭಾವನಲ್ಲಿಗೆ ॥
ನುಡಿದಡೇಂ ಫಲವಿನ್ನು । ನಡೆವೆನೆನ್ನುತಲಾಗ । ಅಡಿಯಿಟ್ಟನೈ ಮೆಲ್ಲಗೆ ॥೨೧೦॥

**ಭಾಮಿನಿ**

ಇಂತಳಿಯ ತೆರಳಲ್ಕೆ ಸಚಿವನು ।
ಚಿಂತಿಸಿದ ಪರರಳಿವ ಬಯಸಲ ।
ದೆಂತಹುದು ದುರ್ಯೋಚನೆಯಲಿ ಪತಂಗನಾದೆನಲ ।
ಇಂತೆನುತೆ ಪೊರಟಾಗ ಭೂತದ ।
ಸಂತತಿಯ ಲೆಕ್ಕಿಸದೆ ನೀತಿಯೊಳ್ ।
ಮುಂತೆ ನಡೆದನು ಚಿತೆಯ ಕಾಷ್ಠವ ಪಿಡಿದು ಬೆಳಕಿಂಗೆ ॥೨೧೧॥

**ಕಂದ**

ಚಂಡಿಯ ಭವನಂ ಸೇರುತ ।
ತುಂಡಿಸಿ ಮಡಿದಿಹ ಒಂದೇ ಘಾಯದ ಸುತನಂ ।
ಕಂಡತಿಶೋಕದೊಳಾಗಂ ।
ಮುಂಡನು ತಳ್ಕಿಸಿ ಹಲುಬಿದ ಬಹು ಪರಿಯಿಂದಂ ॥೨೧೨॥

**ರಾಗ ನೀಲಾಂಬರಿ ಆದಿತಾಳ**

**(ಅಹುದೆಯನ್ನಯರಮಣ ಎಂಬಂತೆ)**

ತರಳಾ ಏಳೇಳು ಬೇಗ । ತಾತಗೆ ಮನೋ । ಹರುಷವನೇಳಿಸೀಗ ॥

ಅರಸನೆನಗೆ ಏನ । ವಿರಚಿಸವರೆದಿಹ ।
ಅರುಹು ಸುಮ್ಮನೆ ಕೋಪ । ತರವಲ್ಲ ಕುಲದೀಪ ॥೨೧೩॥

ತಂದಿಹನೋಲೆ ನೋಡು । ಚಂದಿರಹಾಸ । ಗಿಂದನುಜೆಯುನು ನೀಡು ॥
ಬಂದಿಹ ವಿಬುಧರ । ಸಂದಣಿಯನು ದ್ರವ್ಯ ।
ದಿಂದ ತಣಿಸುಬೈದೆ । ನೆಂದು ಕೋಪಿಸದಿರು ॥೨೧೪॥

ಭಕ್ತನಾಗುತ ಹರಿಯ । ಶೂಲಿಯಧ್ಯಾನಾ । ಸಕ್ತನೆನಿಸಿ ತನಯ
ಶಕ್ತ ನೀನಹೆ ಜೀವ ಮುಕ್ತಿಗೆ ಅಳಿವಿದು ।
ಯುಕ್ತವಲ್ಲವು ಏಳು । ಶಕ್ತಿಯನೊಲಿಸಲು ॥೨೧೫॥

**ರಾಗ ಆನಂದಭೈರವಿ ಏಕತಾಳ**

ಹೀನನಾದೆನಯ್ಯೋ ಮಗನೇ । ಕಾಣದಾದೆನು ಪಥವನೇ ॥
ಯೇನನು । ಗಯ್ಯ । ಲಿ ನಾನು ॥೨೧೬॥

ನಾಗಶಯನ ಭಕ್ತನಿಗೆ । ನಾಗೈದಿರುವ ದೋಷವೆನಗೆ ॥
ತಾಗಿತು । ದೆಸೆ । ಮಾಗಿತು ॥೨೧೭॥

ಕಂದ ನಿನಗೆ ನವಗ್ರಹರು । ಒಂದೇ ಸಮದ ಪ್ರೀತರಹರು ।
ಕೊಂದೆನು । ನಾನೇ । ಮುಂದೇನು ॥೨೧೮॥

**ಭಾಮಿನಿ**

ಮಗನೆ ನಿನ್ನನು ಮಡುಹಿ ಜಗದೊಳು ।
ಹಗೆಗೆ ಊಳಿಗವಾಗಿ ಜೀವಿಸೆ ।
ನಗಜೆ ಶಿವೆ ಮತ್ತಾ ಮತಂಗರು ಸುಡಲಿ ದೇಹವಿದು ॥
ಒಗೆವೆನಸುವೆಂದೆನುತ ಕೆಲಕಂ ।
ಬಗಳ ಪಾಯ್ದೊಡೆಯಲ್ಕೆ ಶಿರವೆಮ ।
ನಗರವನ್ನೇರಿದ ವಿರಾಗದಿ ಪೊಸತಿದೆನೆ ಜಗದೀ ॥೨೧೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತ ಮಡಿದಿರಲುಭಯರೂ ರವಿ । ಕತ್ತಲೆಯ ಹರಿಸಲ್ಕೆ ಧರಣಿ ಸು ।
ರೋತ್ತಮರಿದರ್ಚನೆಗೆ ಸಮಯವೆ । ನುತ್ತ ಬರಲು ॥೨೨೦॥

ಐದು ಮೊಗನರ್ಧಾಂಗಿ ಭವನದಿ । ಕೊಯ್ದು ತನುವನು ಪಾಯ್ದು ಕೋಪದಿ ।
ಬೈದು ನುಡಿದರಿದಾರು ನೀಚರು । ಗೈದರಿಂತು ॥೨೨೧॥

ನಿನ್ನೆ ಇವನಳಿಯಂಗೆ ನೃಪತಿಯು । ಕನ್ನೆ ಸಹಿತಿತ್ತಿಹನು ಪದವಿಯ ।
ತನ್ನ ಸುತನೊಡನೇಕಿವನು ಮೃತಿ । ಯನ್ನು ತಳೆದ ॥೨೧೧॥

ಸೂಚಿಸುವೆನಿದನರಸಗೆಂದಾ । ಲೋಚನೆಯೊಳೈದಲ್ಕೆ ನವನೃಪ ।
ಚಾಚಿರಲು ಶಿರವಡಿಗೆ ಕೇಳೈ । ಪೇಚನೆಂದ ॥೨೧೩॥

ಭೂತನಾಥೆಯ ಗೃಹದಿ ಸಚಿವನು । ಘಾತನಾದನು ಸುತಸಹಿತಲೆನೆ ॥
ಭೀತನಾಗುತ ಪೊರಟನಾ ನೃಪ । ವ್ರಾತ ಸಹಿತ ॥೨೧೪॥

**ರಾಗ ಸಾಂಗತ್ಯ ರೂಪಕತಾಳ**
ಇಂದುಹಾಸನು ಸರ್ವ । ಬಂಧು ಜನರ ಕೂಡಿ । ಬಂದು ಕಾಳಿಕೆಯ ಸಮ್ಮುಖಕೆ ॥
ನಿಂದತಿದುಗುಡದೊ । ಳೆಂದ ತನ್ನಯ ಭಾಗ್ಯ । ನಂದಿ ಹೋದುದೆ ದೈವವಶದಿ ॥೨೧೫॥

ಕಡು ಶೋಕತಾಳ್ವರ್ಗೆ । ನುಡಿದ ಚಿಂತಿಸದಿರಿ । ದೃಢಭಕ್ತಿ ಧ್ಯಾನಕ್ಕೀಯಭವೆ ॥
ಕೊಡುವಳೀರ್ವರ ಜೀವ । ಎಡರಾಗಲಿದಕೆ ಶ್ರೀ । ಒಡೆಯನ ಸಾಲೋಕ್ಯ ಪಡೆವೆ ॥೨೧೬॥

ಗೆಲುವಿನೊಳ್ ಕುಂಡದಿ । ಜ್ವಲನ ಸ್ಥಾಪನೆಗೈದು । ಬಲಿದೀಪ ಮುಂತಾಗಿ ರಚಿಸಿ ॥
ತಿಲಕುಶ ಆಜ್ಯಾದಿ । ಗಳಲಿ ಹೋಮವಗಯ್ಯೆ । ಕುಳಿತನು ವಿಪ್ರರ ಬಳಸಿ ॥೨೧೭॥

**ವಾರ್ಧಕ**
ಹೇಳಲೇನೈ ಭೂಪ ಚಂದ್ರಹಾಸಂ ಬಳಿಕ ।
ಬಾಳಿಂದೆ ನಿಜದೇಹ ಮಾಂಸವಂ ಕೊಯ್ಕೊಯ್ದು ।
ಬೀಳೆ ಪೂರ್ಣಾಹುತಿಗೆ ಶಿರವನರಿದಪೆನೆಂದು ಖಡ್ಗಮಂ ಗೋಣ್ಗೆ ಪೂಡಿ ॥
ವೇಳೆಗಳೆಯದೆ ಸಮರ್ಪಣೆ ಗೈವೆಶಿರಮಿದಂ ।
ಕಾಳಿ ನೀ ಲಕ್ಷ್ಮೀ ಒಪ್ಪಿಕೊಯೆಂದು ಕೂರಸಿಯ ।
ಮೇಲಕೆತ್ತಲ್ ಚಂಡಿ ಶಾಂತ ರೂಪಂದೋರುತಾನಾಗಳಿಂತೆಂದಳು ॥೨೧೮॥

**ರಾಗ ಮಧ್ಯಮಾವತಿ ಅಷ್ಟತಾಳ**
**(ಆರೋ ಬಂದವರೊ ಎಂಬಂತೆ)**
ಧೀರ ಕಡಿಯದಿರೊ । ಖಂಡವನೀಗ । ಧೀರ ಕಡಿಯದಿರೊ ॥ಪ॥

ಧೀರ ನಿನ್ನಯ ಭಾವಭಕ್ತಿಗೆ । ಸೂರೆ ಹೋಗುತ ಸಾರಿ ಬಂದೆನು ।
ಪೋರಪ್ರಾಯದಿ ತೀರಿಪೋಪಡೆ । ಕೂರಸಿಯನೀನೇರಿಸಿರ್ಪೆಯ ॥ಅ.ಪ॥

ವಾರಿಜಾಸನ ಭಕ್ತ ನೀನು । ಬಿಡು । ಕೂರಸಿಯನು ಪೇಳ್ವೆ ನಾನು ॥
ಪಾರಮಾರ್ಥಿಕಿಯಾತ್ಮ ವಧೆಯಲಿ । ಘೋರಕಿಲ್ಬಿಷವಿಹುದು ಸುಮ್ಮನೆ ।
ಕ್ರೂರಕಾರ್ಯವ ಗಯ್ಯುವೆಯ ಸುಕು । ಮಾರ ಯೋಚಿಸಿ ನೋಡು ಮನದಲಿ ॥೨೧೯॥

ನೀತಿಬಾಹಿರ ದುಷ್ಟಾಧಮನು । ತಾಳ್ದ । ಜಾತಸಹಿತ ಮರಣವನು ॥
ಭೂತಳಕೆ ಬಹುಭಾರವೀಯುವ । ಪಾತಕರೊಳತಿ ನೀಚನಾಗಿಹ ।
ಯಾತಕಿವಗಳುತಿರ್ಪೆ ಸುಮ್ಮನೆ । ಖ್ಯಾತಬೇಡ್ವರವೆರಡನೀವೆನು ॥೨೨೦॥

**ರಾಗ ಖಮಾಚ್ ಆದಿತಾಳ (ಶ್ರೀ ಸದಾಶಿವ । ಸಾಸಿರ ನಾಮ ಎಂಬಂತೆ)**
ಶ್ರೀ ಮಹೇಶ್ವರಿ । ಕಾಮರಿಪುಸತಿ । ತಾಮರಸನಯನೆ ॥ ಪಲ್ಲವಿ ॥

ಸೋಮವದನೆಸುರ । ಸ್ತೋಮಪಾಲಕಿ ಗುಣ ।
ಧಾಮೆ ದೈತ್ಯಾಂತಕಿ । ಭೀಮಪರಾಕ್ರಮೆ ॥ ಶ್ರೀಮಹೇಶ್ವರಿ ॥ ಅನು ಪಲ್ಲವಿ ॥

ಹೋಮದಾ । ಸಮಯದಿ ನೀ ಪೇಳಿದ । ಸಾಮದಾ । ನುಡಿಗೊಪ್ಪದಿರುವುದ ।
ಕ್ಷಾಮದಾ । ಹರೆಸಾರ್ವದ ನಿನ್ನಯ । ನಾಮದಾ । ಆ ಮೋದಾ ॥
ಈ ಮನುಜನಿಗೀಯೇ । ದಯದಲಿ । ಸಾಮಜಾಸ್ಯತಾಯೇ । ಭಜಕರ ।
ಕಾಮಿತಾರ್ಥವನು । ಪ್ರೇಮದಿಂದ ಕೊಡು ।
ವಾ ಮಹಿಮೆ ಪೊರೆ । ಕ್ಷಾಮವಿದೂರೆ । ಶ್ರೀಮಹೇಶ್ವರಿ ॥೨೨೧॥

ದಾತರ । ನಾ ಕಾಣೆನು ಸಪ್ತ । ಮಾತರ । ನೀ ಕಾಯುವೆ ಭಕ್ತ
ನಾಥರ । ಮದ್ಭಾವದೊಳಿರ್ಪು । ದೀತೆರ । ಈ ತಾರಾ ॥
ನಾಥದಿನಪರಿವರ । ಕಡೆವರೆ । ಗೇತರ ಜನುಮ ಬರಲದರೊಳು ।
ನಾ ತಳಮಳಿಸದೆ । ದೈತ್ಯರಿಪುವ ಚರ ।
ಣಾತಿಶಯದಿ ಮನ । ವಾತಿರಲೆನುತಲಿ । ಶ್ರೀಮಹೇಶ್ವರಿ ॥೨೨೧॥

ದೇವಿಯೇ । ಭವವಾರಿಧಿ ಲಂಘಿಪ । ನಾವೆಯೇ । ನಿಟಿಲಾಕ್ಷಮಿಹಿರ ರಾ ।
ಜೀವಿಯೇ । ತದ್ಭಕ್ತ ಜನದಿ ಸಮ । ಭಾವೆಯೇ । ಸೋವಿಯೇ ॥
ಭಾವ ಮಾವರಿಂದು । ಮಡಿದಿಹ । ರಾವಕಾರಣೆಂದು । ತಿಳಿಯೆನು ।
ಕಾವುದೀರ್ವರನು । ಜೀವವಿತ್ತು ಕರು ।
ಣಾವಲೋಕನದೊ । ಳೀವುದು ವರವ ॥ ಶ್ರೀಮಹೇಶ್ವರೀ ॥ ॥೨೨೩॥

**ವಾರ್ಧಕ**
ನಗಜೆ ಕರುಣಿಸು ವರವನೆನೆ ದೇವಿ ಪೇಳಿದಳು ।
ಮಗನೆ ತನಗಿಷ್ಟರವರಾ ಬಾಲ್ಯದಿಂದೆ ನೀ ।
ನಗಧರಧ್ಯಾನ ಪರನಾಗಿರ್ಪೆ ನಿನ್ನ ಚರಿತವನೋದಿ ಕೇಳ್ವವರ್ಗೆ ॥
ಮಿಗೆ ವರ್ಧಿಪುದು ಮುಕುಂದಾಭಿರತಿ ಮುಂದೆ ಕಲಿ ।
ಯುಗದೊಳೆನ್ನಾಜ್ಞೆ ಯಿದು ಹರಿಭಕ್ತ ನಿನಗೆ ಬೆಳ ।
ಗಿಗೆಯಾಗದಿರ್ಪುದೆ ನಿನ್ನ ವಾಂಛಿತಕಿನ್ನು ಕಡೆಯುಂಟೆ ಹೇಳೆಂದಳು ॥೨೨೪॥

**ಕಂದ**

ಎಂದಕ್ಷಿಯ ಮುಚ್ಚಲು ಶಿವೆ
ಬಂದಿಹ ವೈಷ್ಣವ ಶಕ್ತಿಯನೀವುತಲವಗಂ ।
ಮುಂದಕೆ ಜಯಿಸರಿಗಳ ನೀಂ ।
ನೆಂದುಪದೇಶಿಸಿ ಮಂತ್ರವ ಮಣಿಯುತಲೊರೆದಂ ॥೩೩೫॥

**ರಾಗ ಸಾವೇರಿ ಏಕತಾಳ**

**(ನೀನೇ ದಯಾಳು ನಿರ್ಮಲಚಿತ್ತ ಎಂಬಂತೆ)**

ತಾಯೆ ಪಾರ್ವತಿದೇವಿ । ಶ್ರೀಯೆ ಶಾರದೆ ಸರ್ವಾ ।
ಚ್ಛಾಯೆ ವೈಷ್ಣವ ಮಹಂ । ಮಾಯೆಯೆ
ತೋಯಜಾಕ್ಷಿಯೆ ವರ । ವೀಯುತಲಹಿತ ನಿ ।
ಕಾಯಕಂಜದವೋಲು । ಆಯುಧ ಪಿಡಿಸಿದೆ ॥೩೩೬॥

ಆರಜೈಸೆ ವಿವೇಕ । ಕೂರಸಿಯನು ಕೊಂಡು ।
ಘೋರದುರಿತದೊಳು । ಸೇರದೆ ॥
ಮೂರು ದುಃಖದೊಳಾನು । ಪಾರುಗಾಣುವ ಯತ್ನ ।
ದೋರಿ ಸಲಹೆಯನ್ನ ॥ ವಾರಾಹಿ ದಯದೊಳು ॥೩೩೭॥

ಮೋಕ್ಷದಾಯಕಿ ವಿರೂ । ಪಾಕ್ಷ ರಮಣಿ ಶಕ್ತೆ ।
ಸಾಕ್ಷಾದ್ಭೂಮಾತೆ ಯುತ್ಪ । ಲಾಕ್ಷಿಯೆ ।
ದಾಕ್ಷಾಯಣಿಯೆ ಖಲ । ಶಿಕ್ಷೆಯೆ ಕರುಣಕ ।
ಟಾಕ್ಷದೊಳಗೆ ಯನ್ನ । ಪೇಕ್ಷೆಯ ಸಲಿಸಿದೆ ॥೩೩೮॥

**ರಾಗ ಕಾಂಭೋಜಿ ಝಂಪೆತಾಳ**

ದೇವತತಿ ಭಾಪೆನಲು ದೇವದುಂದುಭಿ ಮೊಳಗೆ ।
ದೇವದೇವನ ರಮಣಿ । ದೇವಿಯಡಗಿದಳು ॥
ಜೀವಗಳೆದೊರಗೆ ಸಂಜೀವನದೊಳೇಳ್ವತೆರ ।
ಜೀವಿಸಿದರವರು ರಾಜೀವಮುಖಿ ದಯದೆ ॥೩೩೯॥

ಕಳೆದು ಮೂರ್ಛೆಯನೇಳೆ ತಿಳಿದು ಚಂದಿರಹಾಸ ।
ಭಳಿರೆಂದಪ್ಪಿದನು ಮಾತುಳ ಮೈದುನರನು ॥
ತಲೆಬಾಗಿ ಸಚಿವ ತನ್ನಳಿಯನೋಳ್ ಪೇಳ್ದನೆಲೆ ।
ಉಳಿಸಿದ್ಯೆ ನೀನೇ ಪಿತನಲೆಯೆಂದ ತನಗೆ ॥೩೪೦॥

ಮಾಧವನ ಪದಭಕ್ತನಾದ ನಿನಗಾನು ಅಪ ।
ರಾಧವನು ಗೈದಿಹೆನು ಭೇದವೆಣಿಸುತಲಿ ॥

ಆದುದರಿಂದೆಮಗೆ ಸೂದನತೆ ಇನ್ನುಸುತ |
ರಾದನಮ್ಮನು ಕ್ಷಮಿಸು ನೀ ದಯದಿ ಬಿಡದೆ ||೩೪೧||

**ಭಾಮಿನಿ**

ಭೂವಲಯದೊಳು ಗತಿಸಿದವರಿಗೆ |
ಜೀವ ಬರಿಸಿದರುಂಟೆ ನಿನಗೆಣೆ |
ಯಾವನಿರ್ಪನು ಯನಲು ನುಡಿದನು ಮಾವಗೊಂದಿಸುತ ||
ಕಾವನಾವನು ಕೊಲುವನಾವನು |
ಭಾವಿಸಲ್ಕದು ವಿಷ್ಣುಮಾಯವು |
ನೀವು ಪೊಗಳುವಿರ್‍ಯಾಕೆಯೆನ್ನನು ಭಜಿಸಿ ದೇವಿಯನು ||೩೪೨||

**ರಾಗ ಕೇದಾರಗೌಳ ಅಷ್ಟತಾಳ**

ಪೇಳಿದೀಪರಿ ಮಾತ | ಕೇಳಿ ಮನದಿ ಮಂತ್ರಿ | ತಾಳಿರೆ ತೋಷವನೂ
ಕಾಳಿಗೊಂದಿಸಿ ಬಂಧು | ಜಾಲದೊಡನೆ ರಾಜ | ನಾಲಯವನು ಸೇರ್ದನು ||೩೪೩||

ಬಂಧನ ಹರಿಸಿ ಕು | ಳಿಂದನ ಕರೆತಂದು | ಮುಂದೆ ಶ್ರೀದೇವಪೊರೆ
ಇಂದಿರೆಯರಸಗೋ | ವಿಂದನೆಯೆನುತವ | ಸುಂಧರೆಯಾಳುತಿರೇ ||೩೪೪||

ಪಿರಿಯಾಕೆಯಿಂದ ಕುವರ ಮಕರಧ್ವಜ | ಕಿರಿಯ ರಾಣಿಯೊಳೊಗೆದ ||
ತರಳ ಪದ್ಮಾಕ್ಷನೆಂಬರು ಶೂರರೀರ್ವರೋಳ್ ಹರುಷದಿಂದಿರುತಿರ್ದನೂ ||೩೪೫||

**ವಾರ್ಧಕ**

ಬುದ್ಧಿಪೂರ್ವಕಮಿಲ್ಲದಿಹ ಬಾಲಕಂಗೆ ಪರಿ |
ಶುದ್ಧ ಸಾಲಿಗ್ರಾಮ ಶಿಲೆಯ ಸಂಸರ್ಗದಿಂ |
ದದ್ಭುತದ ಸಾಮ್ರಾಜ್ಯ ಪದವಿ ಕೈಸೇರ್ದುದೆನಲಿನ್ನು ಬೇಕೆಂದು ಬಯಸೀ ||
ಶ್ರದ್ಧೆಯೋಳ್ ಪ್ರತಿದಿನದೊಳರ್ಚಿಸುವ ನರನಾವ |
ಸಿದ್ಧಿಯಂ ಪಡೆದಪನೊ ತನಗದರ ಪುಣ್ಯದಭಿ |
ವೃದ್ಧಿಯಂ ಬಣ್ಣಿಸುವಡರಿದೆಂದು ನರಗೊರೆದ ನಾರದಂ ಭೂಪ ಕೇಳು ||೩೪೬||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಭಾರತದ ಜೈಮಿನಿಯು ಪೇಳಿಹ | ಸಾರಮೆನಿಪಿದನೆಕ್ಷಗಾನದಿ |
ಪೂರಗೈದೆ ವಿನಾಯಕನುಮತಿ | ದೋರಿದಂತೆ ||೩೪೭||

ಮಾಲೆಕೊಡಲೊಳು ಶಂಭು ನಾಮವ | ತಾಳಿ ಸುತನಾಗಿರ್ಪ ಗಣಪಗೆ |
ಪಾಲಿಪುದು ತಪ್ಪಿರಲು ಸುಜ್ಞರು | ಲೀಲೆಯಿಂದ ||೩೪೮||

ಇಂದು ಸುತವಾಸರ ತ್ರಯೋದಶಿ | ದುಂದುಭಿಯ ವೈಶಾಖ ಬಹುಳದಿ |
ಚಂದದಿಂ ಪೂರ್ಣತೆಯಗೊಳಿಸಿದ | ಮಂದರಧರ ||೩೪೯||

**ರಾಗ ಭೈರವಿ ಚಾಪುತಾಳ**

ಜಯಮಂಗಲಂ ನಿತ್ಯ ಶುಭಮಂಗಲಂ || ಪಲ್ಲವಿ ||

ನಿಗಮವನು ತಂದವಗೆ ನಗಧರಿಸಿ ನಿಂದವಗೆ |
ಜಗವನೆತ್ತಿದಗೆ ನರ | ಮೃಗಮಾದಹರಿಗೆ ||
ಮಗುವಾಗಿ ಬೇಡಿದಗೆ | ಭೃಗುರಾಮನಾದವಗೆ |
ಮಗಳನ್ನೊಡನ ತರಿದ | ಖಗಕುಲಾಧಿಪಗೇ ||
ಜಯಮಂಗಲಂ ನಿತ್ಯ ಶುಭಮಂಗಲಂ || ||೩೫೦||

ಬಿಲ್ಲ ಹಬ್ಬದೊಳಂದು | ಖುಲ್ಲ ಕಂಸನ ಕೊಂದು |
ಗೊಲ್ಲರನು ಕಾದ ಸಿರಿ ನಲ್ಲಕೃಷ್ಣನಿಗೇ ||
ಮೆಲ್ಲನಂಬರ ತೂರೆ | ನಲ್ಲೆಯರ ಬಳಿ ಸಾರಿ |
ಅಲ್ಲಿ ಬತ್ತಲೆಯತೋರ್ದಗೆ ಕಲ್ಕ್ಯಗೇ ||
ಜಯಮಂಗಲಂ ನಿತ್ಯ ಶುಭಮಂಗಲಂ ||೩೫೧||

ಸಡಗರದಿ ಬಹುಲೀಲೆ | ನಡೆಸಿರುವನಿಗೆ ಮಾಲೆ |
ಕೊಡಲ ನಾರಾಯಣಗೆ | ಜಡಜನಾಭನಿಗೆ ||
ಕಡಲಬಾಲೆಯಧವಗೆ | ಬಡವರನು ಕಾವವಗೆ |
ಮೃಡಸಖಗೆ ತ್ರೈಲೋಕ್ಯ | ದೊಡೆಯ ಮಂಗಲನಿಗೆ ||
ಜಯಮಂಗಲಂ ನಿತ್ಯ ಶುಭಮಂಗಲಂ ||೩೫೨||

***ಯಕ್ಷಗಾನ ವಿಷಯೆ ಕಲ್ಯಾಣ ಮುಗಿಯಿತು.***

# ಯಕ್ಷಗಾನ ಬಭ್ರುವಾಹನ ಕಾಳಗ

## ಪಾತ್ರಗಳು

| | | | | |
|---|---|---|---|---|
| ಪಾಂಡವರು | ಮೇದೋಹೋತ | ವೇದವ್ಯಾಸ ಮಹರ್ಷಿ | ಹನುಮಂತ | ಶ್ರೀಕೃಷ್ಣ |
| ಹಂಸಕೇತ | ವೃಷಕೇತು | ಬಭ್ರುವಾಹನ | ಮೇಘನಾದ | ಸುಬುದ್ಧಿ |
| ಪ್ರದ್ಯುಮ್ನ | ಚಿತ್ರಾಂಗದೆ | ಕುಂತಿ-ಸುಭದ್ರೆ - ದ್ರೌಪದಿಯರು | | ಅನುಸಾಲ್ವ |
| ಪ್ರಮೀಳೆ | ಉಲೂಪಿ | ಘೋರಭೀಷಣ | ದೇವಕಿ ಯಶೋದೆಯರು | |

ದೂತಿಯರು, ಯೋಜನಸ್ತನಿ, ಲಂಬೋದರಿ, ಚಾರಕರು, ಕರಣಿಕರು, ಪುಂಡರೀಕಫಣಿ, ಮಹಾಶೇಷ, ಧೃತರಾಷ್ಟ್ರ ಫಣಿ, ಫಣಿಗಳು, ಬ್ರಾಹ್ಮಣರು, ಸೈನಿಕರು ಮುಂತಾದವರು.

೧

**ಶಾರ್ದೂಲವಿಕ್ರೀಡಿತಂ**

ಶ್ರೀಕಾಂತಂ ಖಲಕೌರವಾದಿನಿಧನೇ ಸಾಕಂ ಪರಂ ಕಾರಣಂ
ನಾಕೇಂದ್ರಾದ್ಯವತಾರಕೈರ್ವರಗುಣೈಃ ಭೂಕಾಮುಕೈಃ ಪಾಂಡವೈಃ ।
ಪಾಕಾರಿಸ್ತುತವಾಹಮೇಧಕರಣೇ ಸಾಕಾಂಕ್ಷಪಾರ್ಥಕ್ರಿಯಾ
ನೌಕಾನಾಏಕಮರ್ಜುನಪ್ರಣಯಿನಂ ಹೈಕಾಂತಿಸೇವ್ಯಂ ಭಜೇ ॥

**ರಾಗ ನಾಟಿ ಝಂಪೆತಾಳ**

ಶರಣು ಶಶಿಧರಪುತ್ರ ಶರಣು ಸಕಲಪವಿತ್ರ ।
ಶರಣು ಕೋಮಲಗಾತ್ರ । ಶರಣು ಸುಚರಿತ್ರ
ಶರಣು ವಿದ್ಯವಿಧಾತ್ರ ಶರಣು ಸುರಗಣಮಿತ್ರ ।
ಶರಣು ವಿಘ್ನವಿಚಿತ್ರ ಶರಣು ಭವಹೋತ್ರ ॥
ಶರಣು ಶರಣು ॥೧॥

ಹಿಮಕರನೊಳಿದಿರಾಗಿ ಶಾಪವನು ಮುನಿದಿತ್ತೆ ।
ದ್ಯುಮಣಿಕೋಟಿಪ್ರಕಾಶ ಇಭವದನವೇಷ ॥
ಅಮರಾರಿಕುಲನಾಶ ಅಮಿತಗುಣಗಣಧೀಶ ।
ಸುಮನಸಾದ್ಯರ ಪೋಷ ಸುಪ್ರಸಿದ್ಧೇಶ ॥
ಜಯತು ಜಯತು ॥೨॥

ಅಜ ವಿಷ್ಣು ದೇವತೆಗಳಂಬುನಿಧಿಮಥನದಲಿ ।
ಭಜಿಸಿ ನಿನ್ನನು ಕರೆಯೆ ನೀ ಬಾರದಿರಲು ॥
ಭಜಕರನು ಬಿಟ್ಟು ಪೋಗುವುದಕ್ಕೆ ಆಲಸ್ಯ ।

ರಜತಪುರದೊಳು ವಾಸ ಭಳಿರೆ ವಿಘ್ನೇಶ ।
ಶರಣು ಶರಣು ॥೩॥

**ರಾಗ ಸೌರಾಷ್ಟ್ರ ಏಕತಾಳ**
ಅಂಬ ಶಾರದೆ ಜಗ । ದಂಬ ಮಹಾಕಾಳಿ ॥
ಶುಂಭನಿಶುಂಭಾರಿ । ನಂಬಿದೆ ಪದವ ॥೪॥

ಶಂಭುಶಿವನ ರಾಣಿ । ವರದೆ ಕಲ್ಯಾಣಿ ॥
ಕಂಬು ಕಂಠಿನಿ ಕಾಮ । ಜನನಿ ಶರ್ವಾಣಿ ॥೫॥

ತಾಯೆ ಭಾರತಿ ಮಹಾ । ಮಾಯೆ ತುಂಬುರ ವೀಣಾ ॥
ಗಾನೆ ಸನ್ಮತಿಯಿತ್ತು । ಬಾಯೊಳು ನೆಲಸೆ ॥೬॥

**ದ್ವಿಪದಿ**
ಗುರುವಿನಂಘ್ರಿಯ ಭಜಿಸಿ ಗಾರ್ಗ್ಯಗೌತಮರ ।
ಚರಣಕಾನತನಾಗಿ ಚಂದ್ರಭಾಸ್ಕರರ ॥೭॥

ಬ್ರಹ್ಮ ಹರಿ ನಾರದರಿಗೊಮ್ಮೆ ಕೈಮುಗಿದು ।
ಗಮ್ಮನೆರಗುವೆನು ದಿಕ್ಪಾಲಕರಿಗೊಲಿದು ॥೮॥

ತರಳನಾಡಿದ ಕೃತಿಯ ತಪ್ಪಿರಲು ನೋಡಿ ।
ಸರಿಯಾಗಿ ಜನರು ತಿದ್ದುವುದು ಕೃಪೆ ಮಾಡಿ ॥೯॥

**ವಾರ್ಧಕ**
ಭಾರತಿಯ ಬಲಗೊಂಡು ಸೂತಶೌನಕಗೆರಗಿ ।
ನಾರದಾದ್ಯರ ವ್ಯಾಸಮುನಿಯಂಘ್ರಿಯಂ ಸ್ಮರಿಸಿ ।
ಭಾರತಾಮೃತಶರಧಿಯೊಳಗೆ ಪಿರಿದಾಗಿರುವ ಅಶ್ವಮೇಧದ ಕಥೆಯನು ॥
ಧಾರಿಣಿಯೊಳರಿವಂತೆ ಯಕ್ಷಗಾನಕ್ರಮದಿ ।
ಸಾರವಿದು ಪೇಳುವೆನು ಶ್ರುತಿತಾಳಬಂಧದಿಂ ।
ವಾರಿಧಿಯ ತಡಿಯಲಿಹ ಉಡುಪಿಯಲಿ ನೆಲಸಿರುವ ಶ್ರೀಕೃಷ್ಣನ ಕಟಾಕ್ಷದಿ ॥೧೦॥

**ರಾಗ ಮಾರವಿ ಝಂಪೆತಾಳ**
ಇಂದುಕುಲಜಾತಜನಮೇಜಯಗೆ ಭಾರತವ ।
ನಂದೊಲಿದು ಪೇಳ್ದ ವೈಶಂಪಾಯಮುನಿಪ ॥೧೧॥

ಹೀಗೆ ಕುರುಕುಲವೆಂಬ ಕಾನನವ ಸಂಹರಿಸಿ ।
ಯಾಗವನು ಕೈಗೊಂಡನಾಗ ಧರ್ಮಜನು ॥೧೨॥

ರಣಕೆ ವಾಜಿಯ ಬಿಟ್ಟು ಬಭ್ರುವಾಹನನೊಡನೆ ।
ಸೆಣಸಿ ಮಡಿದನು ಪಾರ್ಥ ಮಣಿನಗರದೊಳಗೆ ॥೧೩॥

**ರಾಗ ಶಂಕರಾಭರಣ ತ್ರಿವುಡೆತಾಳ**

ಮುನಿಕುಲಾಧಿಪ ಪಾಂಡುತನಯರ ।
ಘನ ಪರಾಕ್ರಮವೆತ್ತಲಡಗಿತು ।
ವನಜನಾಭನ ಕರುಣದಳತೆಯು । ಕನಸಿದೇನೈ ॥೧೪॥

ವಾಸವನ ಸುತ ಹರ ಸುರಾದ್ಯರೊ ।
ಳೀಸು ಕಾಳಗವಾಗಿ ಪಡೆದಿಹ ।
ಪಾಶುಪತ ಮುಂತಾಗಿ ಹೋಯ್ತೇ । ಗಾಸಿಯಾಗಿ ॥೧೫॥

ಆ ಸುಭದ್ರಾಪತಿಗೆ ಸಾರಥಿ ।
ವಾಸುದೇವನು ಇರಲು ಮೋಹದ ।
ಪಾಶವಡಗಿತೆ ರಣದಿ ಬೀಳುವ । ಮೋಸವೇನೈ ॥೧೬॥

ಮಗನೆ ಬಿಡು ಬಿಡು ಮನದ ಚಂಚಲ ।
ವಗಣಿತಾತ್ಮನು ಕಲಿ ಧನಂಜಯ ।
ವಿಗಡ ಶಾಪದಿ ಮಡಿದನಲ್ಲದೆ । ಪಗೆಗಳುಂಟೆ ॥೧೭॥

ಚಿಂತ್ಯರಹಿತನು ಕೃಷ್ಣ ನಿಮ್ಮಯ ।
ಸಂತತಿಗೆ ಹೊಣೆಯಾಗಿ ಪಾಲಿಪ ।
ನಂತಕನ ಸದೆಬಡಿದು ಆಳುವ । ರಂತೆ ಧರೆಯ ॥೧೮॥

ಜಗದ ರಾಜ ಕುಮಾರರೊಳಗೀ ।
ಬಗೆಯ ಕಾಣೆನು ಕಥೆಯ ಕೇಳುವ ।
ಸೊಗಸು ನಿನ್ನದು ಬೇರೆ ಪೇಳ್ವೆನು । ಮಖದ ಕಥೆಯ ॥೧೯॥

**ಭಾಮಿನಿ**

ತಂದೆ ಮುನಿಪತಿ ಕರುಣಿಸಿದ ಕಥೆ ।
ಯಿಂದ ಗೆಲಿದನು ದುರಿತದುಃಖವ ।
ನೊಂದುಳಿಯದೆನಗರುಹಬೇಕೆಂದೆರಗಿದನು ಪದಕೆ ॥
ಮಂದಹಾಸದೊಳೆತ್ತಿ ಕರುಣಾ ।
ಸಿಂಧು ತಕ್ಕೈಸುತ್ತ ನುಡಿದನು ।
ಕಂದ ಕೇಳೈ ಪಾಂಡವರ ಸುಕೃತಾಬ್ಧಿಕಥನವನು ॥೨೦॥

**ದ್ವಿಪದಿ**

ಧಾರಿಣೀಪತಿ ಕೇಳು ದಂತಿನಗರದಲಿ ।
ನೂರೊಂದು ಸುತರುದಿಸೆ ಧೃತರಾಷ್ಟ್ರನೃಪಗೆ ॥೧೨೧॥

ಸಾರಿ ವಿದ್ಯೆಯ ಕಲಿತು ಪಾಂಡವರ ಕೂಡಿ ।
ಮಾರುತಿಯ ಕೆಣಕಿದರು ದಿನ ದಿನದಿ ನೋಡಿ ॥೨೨॥

ಅವರೊಳೆರಡಿಲ್ಲೆಂದು ದ್ವೇಷವನು ತಾಳಿ ।
ಅವನಿಯೊಳಗಿರ್ದರಿಂದ್ರಪ್ರಸ್ಥವಾಳಿ ॥೨೩॥

**ವಾರ್ಧಕ**

ಅರಸ ಕೇಳರ್ಜುನಂ ಸಕಲ ತೀರ್ಥಕ್ಷೇತ್ರ ।
ಚರಿಸಿ ಬರೆ ಶೇಷಸುತೆ ಲೂಪಿ ಚಿತ್ರಾಂಗದಾ ।
ತರುಣಿಯರು ಬಿಡದೆ ಭೋಗಂಗೊಂಡು ಹರುಷದೊಳಗಾಗ ಸುತನಂ ಪಡೆದರು ॥
ಮರುದಿವಸ ಫಲುಗುಣಂ ಇರದೆ ಯತಿವೇಷದಿಂ ।
ಪರಮದ್ವಾರಕೆ ಪೊಕ್ಕು ಶ್ರೀಕೃಷ್ಣನನುಜೆಯಹ ।
ವರ ಸುಭದ್ರೆಯ ಕೂಡಿಕೊಂಡು ನಡೆದನು ಪುರಕೆ ಮುರಹರನ ಕರುಣದಿಂದ ॥೨೪॥

ಸೋಮ ಕುಲಸಂಜಾತ ಲಾಲಿಸೈ ಮುಂಗಥೆಯ ।
ಭೂಮಿಗೋಸುಗ ಗೆಯ್ದು ಸಮರದಲಿ ಕೌರವರ ।
ಸ್ತೋಮವನು ಯಮಸದನಕಟ್ಟಿ ವರ ಪಾಂಡವರು ಹಸ್ತಿನಾವತಿಯೊಳಿರಲು ॥
ಭೂಮಿಪಾಲಕ ಯುಧಿಷ್ಠಿರನೊಂದು ದಿನ ತಾನು ।
ಪ್ರೇಮದಿಂದನುಜರೊಡಗೂಡುತಾಲೋಚಿಸಿದ ।
ನಾ ಮಹಾ ಬಂಧುಹತ್ಯಾಪಾತಕವು ಬಿಡದೆ ಬಾಧಿಸುವುದೆಂದೆನುತಲಿ ॥೨೫॥

**ರಾಗ ಶಂಕರಾಭರಣ ರೂಪಕತಾಳ**

ಆ ಸಮಯದಿ ಯಮಸೂನು ಕಂಗಳ ನೀರು ।
ಸೂಸಿ ದುಃಖದೊಳಿರಲಾಗ ॥
ಈಶಸನ್ನಿಭ ಸುರವಾಸವಾರ್ಚಿತ ವೇದ ।
ವ್ಯಾಸ ಬಂದನು ಇಭಪುರಿಗೆ ॥೨೬॥

ಯೋಗೀಂದ್ರನನು ಇದಿರ್ಗೊಂಡು ಪೀಠವನಿತ್ತು ।
ಆಗ ಶಾಸ್ತ್ರೋಕ್ತ ಸತ್ಕರಿಸಿ ॥
ಬೇಗದಿಂದಲಿ ಪಾಂಡುಸುತರು ಪಾದಕೆ ಬೀಳೆ ।
ಯೋಗೀಂದ್ರನೊಲಿದು ತಕ್ಕೈಸಿ ॥೨೭॥

ಕಂದ ನಿನ್ನಯ ಮೊಗ ಕಂದಿತೇತಕೆ ರಾಜ್ಯ ।
ಬಂದುದಿಲ್ಲವೆ ಕಾಳಗದಲಿ ॥
ಒಂದೆ ಕುಲದಿ ಪುಟ್ಟಿ ಅಗ್ರಜಾದಿಗಳನ್ನು ।
ಕೊಂದ ಪಾತಕಕೇನು ಮುನಿಪ ॥೧೮॥

**ರಾಗ ಶಂಕರಾಭರಣ ಅಷ್ಟತಾಳ**

ಧಾತ್ರಿಗಾಗಿ ಕಾದುವಲ್ಲಿ । ಪುತ್ರಮಿತ್ರರೆಂಬುದುಂಟೆ ।
ಕ್ಷತ್ರಿಯರಲಿ ಜನಿಸಿದವರ್ಗೀ । ಚಿತ್ರವೇನಯ್ಯ ॥೧೯॥

ಹತ್ತು ವರುಷದ ಬಾಲರಿಗೆ । ಶಸ್ತ್ರವಿದ್ಯಾಭ್ಯಾಸ ಕಲಿಸಿ ।
ದುತ್ತಮ ಹಿರಿಯರ ಕೊಂದದ್ದು । ಕ್ಷತ್ರಿಯೇ ಮುನಿಪ ॥೨೦॥

ಲೇಸಾಯಿತಯ್ಯ ನಿನ್ನೊಳು । ಈಸು ಜ್ಞಾನವಿದ್ದ ಮೇಲೆ ।
ಪಾಶಕ್ಕೆ ಸಿಲುಕುವರೇ ಭೂ । ಮೀಶ ಕೇಳಯ್ಯ ॥೨೧॥

ಈಶನಾಣೆಳ್ಳಿನಿತು ರಾಜ್ಯ । ದಾಸೆಯಿಲ್ಲವಡವಿಯೊಳು ।
ಕೇಶವನ್ನ ಭಜಿಸಿರುವೆವು । ವ್ಯಾಸ ಮುನಿರಾಯ ॥೨೨॥

ಸೋಮವಂಶಜ ಕೇಳ್ ಹಿಂದೆ । ರಾಮ ರಾವಣನ ವಧೆಗೆ ।
ಪ್ರೇಮದಿ ಕಯ್ಗೊಂಡ ಯಜ್ಞ । ನೀ ಮಾಳ್ಪುದೀಗ ॥೨೩॥

ಶ್ಯಾಮ ವರ್ಣ ಕುದುರೆ ಯಾವ । ಸೀಮೆಯೊಳುಂಟೆಂಬುದರಿಯೆ ।
ಭೂಮಿಸುರರ್ಗೆ ಕೊಡುವುದೇನು । ಹೇ ಮಹಾಮುನಿಪ ॥೨೪॥

ತಡೆಯದೆ ಪೋಗಿ ಯೌವನಾಶ್ವ । ನೊಡನೆ ಕಾದಿ ಕುದುರೆ ತರಿಸು ।
ಒಡವೆ ಹಿಮಾಚಲದಿ ತೋರಿ । ಕೊಡುವೆ ನಾ ಭೂಪ ॥೨೫॥

ಬಡವರಂತೆ ಇರದೆ ವಿಪ್ರರ್ । ಹಿಡಿದ ದಾನ ವಸ್ತುಗಳನು ।
ತಡೆವರಿಂಗೆ ಪಾತಕವಿ । ಮ್ಮಡಿಸಿತ್ತೈ ಮುನಿಪ ॥೨೬॥

ಪೊಡವಿಯೊಳು ಬಿಟ್ಟ ವಸ್ತು । ಪೊಡವೀಶಗಲ್ಲದೆ ಮಿಕ್ಕ ।
ಒಡೆಯರುಂಟೆ ತರುವುದಕ್ಕೆ । ಬಿಡು ಚಿಂತೆ ಭೂಪ ॥೨೭॥

ಬಿಡದೆ ಭೀಮಾರ್ಜುನರಿಂದ । ಕಡು ಬೇಗ ಕೃಷ್ಣನ ಕರೆಸು ।
ಹಿಡಿ ದೀಕ್ಷೆ ಅಂಜದಿರೆಂದು । ನಡೆದ ಮುನಿರಾಯ ॥೨೮॥

**ರಾಗ ಶಂಕರಾಭರಣ ತ್ರಿವುಡೆತಾಳ**

ಮುನಿಪ ತನ್ನಾಶ್ರಮಕೆ ತೆರಳಲು ।

ಮನದಿ ಯಮಜನು ಚಿಂತಿಸಿ ||
ಅನಿಲಜಗೆ ನೇಮಿಸಿದ ಕರೆವ | ದನುಜಹರನ ||೩೯||

ಭೀಮ ಕೇಳ್ಳೆ ಬಲು ದಿನಾಯಿತು |
ಸ್ವಾಮಿ ಪೋಗಿ ಸದ್ಗುಣ ||
ಧಾಮನಿಲ್ಲದೆ ನಡೆವುದೆಂತೈ | ಹೋಮ ನಮಗೆ ||೪೦||

ರಾಮ ದೇವಕಿ ವಸುದೇವಾದ್ಯರು |
ಪ್ರೇಮದಿಂದವರೆಲ್ಲರು ||
ಕಾಮನಯ್ಯನು ಬರಲಿ ಸತಿಯರ | ಸ್ತೋಮ ಸಹಿತ ||೪೧||

ಅಪ್ಪಣೆಯ ಕೊಂಡರುಹಿ ಕುಂತಿಗೆ |
ಕೀಚಕಾರಿಯು ಭೋಜನ ||
ಕರ್ಪೂರವೀಳ್ಯವ ಕೊಂಡು ನಡೆದನು | ತೇರನೇರಿ ||೪೨||

**ರಾಗ ಕಾನಡ ಆದಿತಾಳ**
ವಾರಣಾಪುರ ಪೊರವಂಟನು ಭೀಮ |
ಕಾರಣೀಕರ ಕರೆತರಲು ನಿಸ್ಸೀಮ ||೪೩||

ದೇವ ಕೃಷ್ಣಾರ್ಜುನನ ಭಾವ ತಾನಾಗಿ |
ನಾ ಹೋದರಲ್ಲಿಗೆ ನುಡಿಯ ಲೇಸಾಗಿ ||೪೪||

ಧರಣೀಶನಪ್ಪಣೆ ಮೀರದೀ ಪಾಟಿ |
ದ್ವಾರಕೆ ಕಂಡ ಕುಶಸ್ಥಳ ದಾಟಿ ||೪೫||

**ರಾಗ ಕೇದಾರಗೌಳ ಅಷ್ಟತಾಳ**
ಧಾರಿಣೀಪತಿ ಕೇಳು ದ್ವಾರಕಾನಗರದ | ದ್ವಾರದ ಸಂಭ್ರಮವ ||
ಭೂರಿ ಮಾಣಿಕ ಮುತ್ತು ಹವಳದ ಕೆಲಸವು | ಕ್ಷೀರಸಾಗರದಂದದಿ ||೪೬||

ಓರಂತೆ ನೆಲಗಟ್ಟು ಹೊರಚಾವಡಿಯ ಮೇಲೆ | ಹೇರಾಳ ವಸ್ತುಗಳ ||
ತೋರಣ ಕುರುಜು ಮೇರುವೆ ವಜ್ರಕದಗಳು | ಮಾರುತತನಯ ಕಂಡ ||೪೭||

ಒಡನಿದ್ದ ಸೇನೆಯ ಹೊರಬಾಗಿಲೊಳಗಿಟ್ಟು | ವರ ರಥದಿಂದಿಳಿದು ||
ಪರಿಚಾರಕರ ಲೆಕ್ಕಿಸದೆ ಭೀಮನೊಳಪೊಕ್ಕ | ಕಡಲಶಯನನ ಬಳಿಗೆ ||೪೮||

**ಭಾಮಿನಿ**
ಅನಿಲತನಯನು ಭರದಿ ಬಂದಾ |
ವನರುಹಾಕ್ಷನ ಚೇಷ್ಟೆಯಲಿ ಮುನಿ |

ಜನಕಸಾಧ್ಯನ ಭೋಜನದ ಗೃಹಕಾಗಿ ನಡೆತಂದ ||
ವನಿತೆಯರು ಚಾಮರವ ಬೀಸುವ |
ಘನತರದ ಭಕ್ಷ್ಯಗಳನುಣುತಿರೆ |
ನೆನೆವ ಭಕ್ತ ಕುಟುಂಬಿ ಭೀಮನ ಕಂಡು ಸತ್ಕರಿಸಿ ||೪೯||

**ರಾಗ ತೋಡಿ ಅಷ್ಟತಾಳ**
ವಾತಜ ನೀನಿತ್ತಲೇತಕೋಸುಗ ಬಂದೆ |
ಮಾತೆ ಕುಂತಿಗೆ ಕ್ಷೇಮವೆ ||
ಭೂತಳಾಧಿಪ ಫಲುಗುಣ ಮಾದ್ರಿತನಯರು |
ಸ್ವಸ್ಥದೊಳಿಹರೇನಯ್ಯ ||೫೦||

ಅಡವಿಯ ಬಿಟ್ಟ ಮೇಲ್ ಹರುಷವೆ ನಿನ್ನಯ |
ಒಡಲಿಗೆ ತೃಪ್ತಿಯೇನೈ ||
ಅಡಿಗೆ ಮಾಡಿಸಿದೆನು ಬದಲೊಂದು ನಿನಗಾಗಿ |
ಒಡನುಂಬುದು ಕೇಳಯ್ಯ ||೫೧||

**ರಾಗ ಭೈರವಿ ಝಂಪೆತಾಳ**
ಸರ್ವದಾಯಕ ಕೇಳು ಸಕಲ ರಕ್ಷಕ ನೀನು |
ಓರ್ವ ಬಂದರೆ ಮನೆಗೆ ಅಂಜುವರೆ ಹೀಗೆ ||೫೨||

ಊರ್ವೀಶ ನೀನಲ್ಲ ಊರು ಉಂಬಳಿಯಿಲ್ಲ |
ಸರ್ವಗುಣವೆಲ್ಲಿಹುದು ಗೋವಳರ ಮತಕೆ ||೫೩||

ಸಾರಸಾಂಬಕ ಸಕಲವರಿತು ನೀನೀ ಹಲವು |
ನಾರಿಯರ ಕೂಡಿರುವ ಚೋರತನವೇನೈ ||೫೪||

ಯಾಗದೀಕ್ಷೆಯ ಹಿಡಿದು ಅಣ್ಣ ಧರ್ಮಜನಿಹನು |
ಬೇಗ ಬರಹೇಳಿದನು ಸರ್ವರಿಗು ನಿಮಗು ||೫೫||

ಯೋಗಿ ವೇದವ್ಯಾಸ ಸಕಲ ಋಷಿಗಳು ಪಾದ |
ಕಾಗಿ ಹಾರಯ್ಸುವರು ವಾಗೀಶಪಿತನೆ ||೫೬||

**ಭಾಮಿನಿ**
ಭೀಮ ಕೋಪಿಸಿಯೆದ್ದ ಸಮಯಕೆ |
ಕಾಮಪಿತ ತಕ್ಕಯ್ಸಿ ನುಡಿದನು |
ಆ ಮಹಾ ಆರೋಗಣೆಯ ಗೃಹಕಯ್ದಿ ಹರುಷದಲಿ ||
ಭಾಮೆಯರ ಸಂಗೀತದಿಂ ಹರಿ |

ಚಾಮರದ ಬೆಡಗಿನಲಿವುಣ್ಣುತ ।
ಸ್ವಾಮಿ ಕರ್ಪುರವೀಳ್ಯವನಿಲಜಗಿತ್ತು  ಪೊರವಂಟ ॥೫೭॥

ಅನಿಲಜನ ಕೂಡುತ್ತಲಾ ದಿನ ।
ವನಜನಾಭನು ಬಂದು ತನ್ನನು ।
ನೆನೆವ ಭಕ್ತರನರಸಿಕೊಂಡಯ್ತಂದ ಗಜಪುರಿಗೆ ॥
ಘನಚರಿತ್ರವ ಕೇಳ್ದು ಧರ್ಮಜ ।
ನನುಜರಾದ್ಯರ ಕೂಡುತಿದಿರ್ಗೊಂ ।
ಡನಿಮಿಷಾವಳಿ ಮೆಚ್ಚಲೆರಗಿದ ಪಾದಪದ್ಮದಲಿ ॥೫೮॥

**ವಾರ್ಧಕ**

ಇಂತು ಹರಿ ಮೆಯ್ದೋರಲಾ ಬಳಿಕ ಭೂಮಿಪಂ ।
ಕಂತುಪಿತನಂ ಸ್ಮರಿಸೆ ಕುದುರೆಯಂ ಒಪ್ಪಿಸುವೆ ।
ವೆಂತೆನುತ ಭೀಮ ಕರ್ಣಜ ಮೇಘನಾದರು ಮಹಾಂತ ಶೌರ್ಯವ ತಾಳುತ ॥
ನಿಂತು ಬೆಸನಂ ಬೇಡಿ ಭದ್ರಾವತೀ ನಗರ ।
ಮಂ ತವಕದಿಂ ಪೊಕ್ಕು ಯೌವನಾಶ್ವನ ಗೆಲ್ದು ।
ಪಂಥದಿಂದಶ್ವ ಸಹಿತಾ ನೃಪತಿ ಧರ್ಮಜಗೆ ಸಂತಸದೊಳೊಪ್ಪಿಸಿದರು ॥೫೯॥

೨

**ರಾಗ ಸಾಂಗತ್ಯ ರೂಪಕತಾಳ**

ಜನನಾಥ ಕೇಳಯ್ಯ ಜಗದ ಜೀವನು ನಿಮ್ಮ ।
ನ್ವಯಕೆ ಬೆಂಬಲವಾದಪರಿಯ ॥
ಅನುಜರ ಕಯ್ಯ ಕರೆಸಿಕೊಂಡು ಯಮಜಾತ ।
ಮುನಿಕುಲಾಧಿಪರ ಭೂಮಿಪರ ॥೬೦॥

ಇಂತು ಸಕಲ ಜನಸಹಿತ ಕೂಡಿರಲಾಗ ।
ಕಂತು ಪಿತನನುಜ್ಞೆಯಲಿ ॥
ಅಂತರಹಿತನನು ಸ್ಮರಿಸುತ್ತ ಬರೆ ಮುನಿ ।
ಅಂತಕಾತ್ಮಜನಿದಿರ್ಗೊಂಡು ॥೬೧॥

ಬಾದರಾಯಣನಿಗೆ ಭದ್ರಪೀಠವನಿತ್ತು ।
ಪಾದವತೊಳೆದು ಪೂಜಿಸುತ ॥
ಆದಿಮೂರುತಿ ಕೃಷ್ಣ ಯಮಜ ಪಾಂಡವರ್ ಸಹ ।
ವೇದವ್ಯಾಸನ ತೀರ್ಥ ಧರಿಸಿ ॥೬೨॥

**ಭಾಮಿನಿ**

ಪಾಂಡವರು ಪದಕೆರಗಲಾ ಮಾ ।
ರ್ತಾಂಡ ತೇಜದ ಮುನಿಪ ಪೇಳಿದ ।
ಮಂಡಲೇಶ್ವರ ರಚಿಸು ಶಾಲೆಯ ಶಾಸ್ತ್ರವಿಧಿಯಿಂದ ॥
ಚಂಡ ಋಷಿಕುಲ ವಿಪ್ರಮುಖದಲಿ ।
ಕೊಂಡು ದೀಕ್ಷೆಯ ಯಮಜ ಯಜ್ಞದ ।
ಕುಂಡವನು ರಚಿಸಿದನು ವೇದವ್ಯಾಸನಾಜ್ಞೆಯಲಿ ॥೬೩॥

**ರಾಗ ಶಂಕರಾಭರಣ ತ್ರಿವುಡೆತಾಳ**

ತಂದು ಯಾಗದ ಹಯವ ಪನ್ನೀ । ರಿಂದ ಮೀಯಿಸಿ ಮೆಯ್ಯೊಳು ॥
ಪೊಂದೊಡಿಗೆಯಾಭರಣವಿಟ್ಟರು । ಚಂದವಾಗಿ ॥೬೪॥

ಹೊನ್ನ ಕಡಗವು ಗೆಜ್ಜೆ ಪಾದದೊ । ಳಿನ್ನು ಬಿಗಿದು ಕೊರಳಿಗೆ ॥
ರನ್ನ ಮುತ್ತಿನ ಸರಗಳಿಟ್ಟರು । ಚೆನ್ನವಾಗಿ ॥೬೫॥

ಶ್ಯಾಮಕರ್ಣಿಕೆ ಗಂಧಕುಸುಮಾ । ಕ್ಷತೆಗಳಿಂದಾ ಪೂಜಿಸಿ ॥
ಭೂಮಿಪಾಲಕ ಲಿಖಿತ ಕುದುರೆಯ । ಹಣೆಗೆ ಕಟ್ಟಿ ॥೬೬॥

**ಭಾಮಿನಿ (ಅರ್ಧ)**

ಸಕಲ ರಾಯರ ಕಪ್ಪಗೊಂಬುದ ।
ಕಕಟ ಪರಪೀಡನವುಯೆನ್ನುತ ।
ವಿಕಳಮತಿಯಲಿ ನಡೆದ ಧರ್ಮಜ ಕೃಷ್ಣನೆಡೆಗಾಗಿ ॥

**ರಾಗ ಮಾರವಿ ಝಂಪೆತಾಳ**

ಪುಂಡರಿಕನಾಭನಡಿ । ಗೆರಗಿ ಯಮಸೂನು ಭಯ ।
ಗೊಂಡು ಪೇಳಿದ ಮುಂದೆ । ದಂಡು ನಡೆವುದಕೆ ॥೬೭॥

ಮುರಹರನು ಹಯಮೇಧ । ತುರಗದೊಡನರ್ಜುನಗೆ ।
ಧುರವ ಜಯಿಸೆಂದಿತ್ತ । ಪರಮ ಶಕ್ತಿಯನು ॥೬೮॥

ಸೇನಾಧಿಪತ್ಯವನು । ಮೀನಕೇತನಗಿತ್ತು ।
ಮಾನನಿಧಿ ಕರ್ಣಜಗೆ । ಸೇನೆ ಬೆಂಬಳಿಯ ॥೬೯॥

ನವಕುಸುಮದಲಿ ಪೂಜೆ । ನವಗ್ರಹಂಗಳಿಗಿತ್ತು ।
ದಿವಿಜೇಂದ್ರಸುತ ನಮಿಸೆ । ದಿವಿಜರಿಗೆ ದ್ವಿಜಗೆ ॥೭೦॥

ಕಂತುಪಿತನಡಿಗೆರಗಿ । ಕಾಲಾತ್ಮ ಭೀಮನಿಗೆ ।
ನಿಂತು ತಲೆವಾಗಿದನು । ಕುಂತಿಯಡಿಗೆರಗಿ ॥೭೦॥

**ರಾಗ ದೇಶಿ ಝಂಪೆತಾಳ**

ಬಲವಂತನಾಗು ನೀ ಬಲುಭಾಗ್ಯ ನೀನಾಗು ।
ಜಲಜಾಕ್ಷನನು ಭಜಿಸಿ ಜಾಣನಾಗು ॥ ಪ ॥

ಬಲುಭಟರೊಡನೆ ಪಂಥ ಬಳಸದಿರು ಹಯಕಾಗಿ ।
ನೆಲೆಯರಿತು ಮಾಡು ಸಂಧಿಯ ಶೀಘ್ರದಿ ॥
ಒಳವ ಸಾಧಿಸಿಕೊಂಡು ಅಲ್ಲಲ್ಲಿ ಅರಿಗಳೊಳು ।
ಗೆಲವಾಗಲೆನುತೆತ್ತಿದಳು ಮಗನ ಶಿರವ ॥೭೧॥

ಮುನ್ನ ದ್ರೌಪದಿಯ ಮದುವೆಗೆ ಪೋಗಿ ಧನುವೆತ್ತಿ ।
ಉನ್ನತಿಕೆಯಿಂದಲೂರ್ವೀಶರಂ ಗೆಲಿಸೆ ॥
ಪನ್ನಗಧ್ವಜನ ಗಂಧರ್ವರಲಿ ಬಿಡಿಸಿದಗೆ ।
ಕನ್ನೆ ಸೌಭದ್ರೆ ಸೇಸೆಯನಿಟ್ಟಳು ॥೭೩॥

**ರಾಗ ನಾದನಾಮಕ್ರಿಯೆ ಝಂಪೆತಾಳ**

ಬಿಸಜಾಕ್ಷಸಖ ಧನಂಜಯಗೆ । ಚೆಲ್ವ ।
ಬಿಸಜಗಂಧಿನಿಯರಾರತಿಯೆತ್ತಿರೆ ॥ ಪ ॥

ವೃಷಕೇತುವಿಗೆ ಸತ್ಯಭಾಮೆ ರುಗ್ಮಿಣಿಯರು ।
ಅಸಮ ಮೋಹದಲಿ ಆರತಿಯೆತ್ತಿರೆ ॥೭೪॥

ಸತಿ ಶಿರೋಮಣಿ ದ್ರೌಪದಿ ಸುಗುಣೆಯರೆಲ್ಲ ।
ಸಿತವಾಹನಗಾರತಿಯೆತ್ತಿರೆ ॥ ॥೭೫॥

**ವಾರ್ಧಕ**

ಕೇಳು ಜನಮೇಜಯನೆ ಮುರಹರನ ಬೀಳ್ಕೊಂಡು ।
ಏಳಕ್ಷೌಹಿಣಿ ಬಲಂ ಪೊರಮಡಲ್ ಫಲುಗುಣಂ ।
ಛೀಳಿಡುವ ಕಪಿಯಬ್ಬರಣೆಯಿಂದ ರಥವೇರಿ ಧನುವಿಡಿದು ಝೇಗೆಯ್ದನು ॥
ಆಳುತನವುಬ್ಬೇರಿ ಸಾಲ್ವ ಸಾತ್ಯಕಿ ಸಾಂಬ ।
ಮೇಳವಿಸಿ ವೃಷಕೇತು ಯವನಾಶ್ವ ಕೃತವರ್ಮ ।
ಕಾಳಗಕೆ ರಥವೇರಿ ಪ್ರದ್ಯುಮ್ನ ಅನಿರುದ್ಧನಾ ಸುವೇಗಾದಿ ಭಟರು ॥೭೬॥

**ರಾಗ ಕಾಂಭೋಜಿ ಝಂಪೆತಾಳ**

ಕಾಲಪಾಳಯದಂತೆ ಕಮಠನೆದೆ ಬಿರಿವಂತೆ ।

ಮೂಲಬಲ ಯಾಗಹಯ ಸಹಿತ ॥
ಮೂರುಲೋಕದ ಗಂಡ ಇಂದ್ರಸುತ ತೆಂಕುಮುಖ ।
ವಾಗಿ ನೀಲಧ್ವಜನ ಪುರಕೆ ॥೭೭॥

ಕಟ್ಟಿ ಕುದುರೆಯ ಕಾದಿ ಜಯವ ಕಾಣದೆ ಕಪ್ಪ ।
ಕೊಟ್ಟು ನೀಲದ್ವಜನು ಇರಲು ॥
ದಿಟ್ಟೆಯಾತನ ಕಾಂತೆಯಿಂದ ಸುರನದಿ ಶಾಪ ।
ತಟ್ಟಿತರ್ಜುನಗೆ ಬೆಂಬಿಡದೆ ॥೭೮॥

ರಕ್ಕಸಾರಿಯ ನೆನೆದು ವಿಜಯ ನೀಲಧ್ವಜನ ।
ಪಕ್ಷದೊಡಗೂಡಿ ಬಲಸಹಿತ ॥
ದೀಕ್ಷೆತುರಗದ ಬೆಂಬಳಿಯಲಿ ಮಾರ್ಬಲ ಸಹಿತ ।
ದಕ್ಷಿಣಕೆ ನಡೆತಂದರೊಲಿದು ॥೭೯॥

ಪುಂಡರಿಕವದನೆ ಪುರುಷನ ಶಾಪ ಪರಿವುದಕೆ ।
ಪಾಂಡವರ ಯಾಗಹಯ ಪಿಡಿಯೆ ॥
ಕಂಡು ಸಿತವಾಹನನು ಸೌಭರಿ ಮುನಿಯಾಜ್ಞೆಯಲಿ ।
ಚಂಡಿಯನು ಬಿಡಿಸಿ ಬೀಳ್ಕೊಡಲು ॥೮೦॥

ಭಾಮೆಯನು ಉದ್ಧರಿಸಿ ಬಲಸಹಿತ ನಡೆತಂದು ।
ಆ ಮಹಾ ಹಂಸಧ್ವಜ ಪುರಕೆ ॥
ಭೀಮಾನುಜನು ಪಾಳ್ಯ ಹೊರಬಾಗಿಲೊಳಗಿಟ್ಟು ।
ಶ್ಯಾಮಕರ್ಣಕೆಯನೊಳಪೊಕ್ಕು ॥೮೧॥

**ರಾಗ ಕೇದಾರಗೌಳ ಅಷ್ಟತಾಳ**
ಭಾಪುರೇ ಹಯ ಭಾಗ್ಯದ ಹಿರಿದು ।
ಭೂಪ ನೋಡಿದ ಫಾಲಲಿಖಿತದ ಬಿರುದು ॥ ಭಾಪುರೇ ॥ ಪ ॥

ಕಾಪಿನ ಭಟರನುಮಾನಿಸಿ ಕುದುರೆಯ ।
ತೋಪಿನೊಳಗೆ ಕಟ್ಟಿ ತರಿಸಿ ಮಾರ್ಬಲ ಸಹ ।
ತಾ ಕಾದಲೆನುತ ಬಂದು ॥ ತೀರದೆ ಹಂಸ ।
ಕೇತು ತಾ ತೊಲಗಿದನಂದು । ಅರ್ಜುನನೊಳು
ಸುಧನ್ವ ಸುರಥರು ಇದಿರಾಗಿ ನಿಂದು ॥೮೨॥

**ಭಾಮಿನಿ**
ಕಂಸಹರ ಪಗೆಯಾಗಿಯರ್ಜುನ ।
ವಂಶರತುನ ಸುಧನ್ವ ಸುರಥರ ।

ಹಂಸವಾಹನ ವಿಷ್ಣು ಮಹದೇವಾಸ್ತ್ರದಿಂ ಕೆಡಹಿ ॥
ಹಂಸಕೇತನು ಮರುಗಿ ತನ್ನಯ ।
ಹಿಂಸೆ ಗತಿಗೇನೆನಲು ದಾನವ ।
ಧ್ವಂಸಿ ನಯದುಕ್ತಿಯಲಿ ಸಹಯಕೆಂದೊಡಂಬಡಿಸಿ ॥೮೩॥

**ರಾಗ ತೋಡಿ ಅಷ್ಟತಾಳ**
ಮರಾಳಕೇತನ ನಗರವ ಮೀರಿ । ಮುರ ।
ಹರ ಗಜಪುರಕತ್ತ ಸಾರಿ ॥
ನರನ ಮಾರ್ಬಲ ಬಹ । ಪರಿಯ ಕಾಣುತ ತುಂಡು ।
ದೊರೆಗಳೆಲ್ಲರು ಕಪ್ಪ । ಹೊರಿಸಿ ತಂದಿತ್ತರು ॥೮೪॥

**ವಾರ್ಧಕ**
ಬಳಿಕ ಪಾರಿಪ್ಲವಧರಿತ್ರಿಯಿಂದಾ ಹಯಂ ।
ತಳೆದುದತಿ ವೇಗದಿಂದಖಿಳ ದೇಶಂಗಳಂ ।
ಕಳೆದು ಬರೆ ವನಿತಾಮಯದ ರಾಜ್ಯದೊಳಸೀಮೆಗುತ್ಸಾಹದಿಂದಾಗಳು ॥
ಫಲುಗುಣನ ಸೇನೆ ನಡೆದುದು ಕೂಡೆ ಭಾರದಿಂ ।
ದಿಳೆ ಮುಂದೆ ಕೂರ್ಗಡಿಸೆ ಮಗುಳೊಂದೆಡೆಯೊಳು ।
ಬ್ಬಳಿಸಿದುವೊ ಮಂದಿ ಕುದುರೆಗಳೆಂಬ ತೆರನಂತೆ ಸಂದಣಿಸಿತೇವೇಳ್ವೆನು ॥೮೫।

**ರಾಗ ಕಾಂಭೋಜಿ ಝಂಪೆತಾಳ**
ಆಲಿಸವನೀಶ ಸ್ತ್ರೀ ರಾಜ್ಯವನ್ನಾಳ್ವ ಪ್ರ ।
ಮೀಳೆಯೆಂಬುವಳು ಅರಸಾಗಿ ॥
ಓಲಗದೊಳಿರ್ದಳತಿ ವಿಭವದಿಂ ಸ್ತ್ರೀಜನರ ।
ಮೇಳವೆಸೆಯಲ್ಕೆ ಲೇಸಾಗಿ ॥೮೬॥

ಪರಿವಾರ ಪ್ರಜೆ ಪ್ರಧಾನರು ಸಾವಂತರು ಕೆಲರು ।
ಪರಿಜನರು ಪುರಜನರುಯೆಲ್ಲ ॥
ಮೆರೆವ ಹೆಣ್ಣುಗಳಲ್ಲದಿಲ್ಲದೀ ರಾಜ್ಯದೊಳ್ ।
ಪುರುಷರೆಂಬವರೊಬ್ಬರಿಲ್ಲ ॥೮೭॥

ಫಲುಗುಣನ ತುರಗವದು ಪುರವ ಪೊಕ್ಕುದ ಕಂಡು ।
ತಳವಾರರಯ್ತುಂದರಸಿಗೆ ॥
ನಲವಿನಿಂ ಪದಕೆ ತಲೆವಾಗಿ ಬಿನ್ನಯ್ಸಿದರು ।
ಲಲನೆಯರ ಕುಲಶಿರೋಮಣಿಗೆ ॥೮೮॥

**ರಾಗ ಮಾರವಿ ಏಕತಾಳ**
ಕನ್ನೆಯರಸಿ ದೇವಿ ನಿನ್ನ ಸೀಮೆಯೊಳೊಂದು ।

ಚೆನ್ನಾದುತ್ತಮ ಹಯವು ।
ತನ್ನಿಚ್ಛೆಯಿಂದ ನಮ್ಮುಪವನವನೆ ಪೊಕ್ಕು ।
ದಿನ್ನೇನ ಪೇಳುವೆನು ॥೮೯॥

ಮೂರು ಲೋಕದ ಗಂಡ ನರನೆಂಬಾತನು ಬಲು ।
ಧಾರಿಣೀಶ್ವರರ ಕೂಡಿ ॥
ಚಾರುತುರಗದ ಮೇಲಾರ್ರೈಕೆಯಿಂದ ।
ಸ್ವಾರಿಗೆಯ್ದಿಹುದು ನೋಡಿ ॥೯೦॥

ಮುಖತುರಗದ ಫಾಲದೊಳಗಿರುತಿಹುದೊಂದು ।
ಲಿಖಿತವ ಕಂಡು ನಾವು ॥
ವಿಕಸಿತಾಂಬುಜವಕ್ತ್ರೆ ತಂದೆವೆಂದೀಯೆ ಭಾ ।
ವಕಿ ವಾಚಿಸಿದಳದನು ॥೯೧॥

**ರಾಗ ಕಾಂಭೋಜಿ ಝಂಪೆತಾಳ**

ಸೋಮವಂಶಾಂಬುನಿಧಿರಾಕೇಂದು ಭೂಭುಜ ।
ಸ್ತೋಮಾಗ್ರಗಣ್ಯ ಪಾಂಡುವಿನ ॥
ಪ್ರೇಮದ ಸುಪುತ್ರ ಧರ್ಮಜನ ಕ್ರತುಹಯವ ನಿ ।
ಸ್ಸೀಮರಿದ ಕಟ್ಟಿ ಕಾದುವುದು ॥೯೨॥

ಚಂಡವಿಕ್ರಮರು ಕಟ್ಟಲು ಹಯವ ಮೂಲೋಕ ।
ಗಂಡನರ್ಜುನನವರ ಗೆಲಿದು ॥
ದಂಡಿಸುವನೆಂದು ಲೇಖನವ ವಾಚಿಸೆ ಕೇಳ್ದು ।
ಮಿಂಡೆದ್ದು ನಗುತಿರ್ದಳಾಗ ॥೯೩॥

**ವಾರ್ಧಕ**

ಆಲಿಸಿದಳಾಗ ಲಿಖಿತಾರ್ಥಮಂ ಸ್ವಾರ್ಥಮಂ ।
ಏಳಿಗೆಯ ನರನಂತರಂಗಮಂ ಸಂಗಮಂ ।
ಬಾಳುವೆಂ ಪಾರ್ಥನೊಳ್ ಯೋಗಮಂ ಭೋಗಮಂ ಪಡೆವಡಿದು ಸಮಯವೆನುತ ॥
ಆಲೋಚಿಸಿದಳಾ ಪ್ರಮೀಳೆ ಗುಣಜಾಲೆ ಜನ ।
ಪಾಲಕನ ಅಶ್ವವನು ಹಿಡಿತರಿಸಿ ಕಟ್ಟಿ ನಿಜ ।
ಪಾಳೆಯದ ಸೇನಾನಿವಂತೆಯರ ಕಾಂತೆಯರ ಕರೆಸಿದಳ್ ಧುರಕಾಗಲು ॥೯೪॥

**ರಾಗ ಅಹೇರಿ ಝಂಪೆತಾಳ**

ಎದ್ದಳಾಹವಕಾ ಪ್ರಮೀಳೆ । ಉಭಯ ।
ಯುದ್ಧದೊಳಗರ್ಜುನನ ಗೆಲುವರೆ ಸುಶೀಲೆ ॥
ಎದ್ದಳಾವಹಕಾ ॥ ಪ ॥

ದಿಟ್ಟೆ ಹರುಷಿಸಿ ನರನ ಮುಟ್ಟಿ ಕಾದುವೆನೆಂದು ।
ತಟ್ಟನೆ ಚತುರ್ಬಲವನೊಟ್ಟುಗೂಡಿಸಿ ನೇಮ ।
ಗೊಟ್ಟು ಕಳುಹಲ್ಕವರ ತಟ್ಟಿಗನುಕುಲವಾಗಿ ।
ಕಟ್ಟಿ ಚಲ್ಲಣವ ಬಿಗಿದುಟ್ಟು ಕಾಸೆಗಳ ಮೊಲೆ ।
ಗಟ್ಟುಗಳ ಮೇಲೆ ಬೆಳಕಿಟ್ಟೆಸೆವ ಹಾರಗಳ ।
ನಿಟ್ಟು ಮೊಗ ಫಣೆಗಳಲಿ ಬೊಟ್ಟುಗಳನಿಡುತ ಜಗ ।
ಜಟ್ಟಿಯರ ತೆರನಂತೆ ಥಟ್ಟನೇ ನಡೆತರಲು ॥
ಎದ್ದಳಾಹವಕಾ ॥೯೫॥

ಮರಿದುಂಬಿಗುರುಳೆ ಅಹಿವೇಣಿ ಪಲ್ಲವಪಾಣಿ ।
ಮಿರುದರ್ಪ ವಿಧುಪಾಲೆ ಮಣಿದರ್ಪಣಕಪೋಲೆ ।
ಮೆರೆವ ತಿಲಕವನಿಟ್ಟು ಮಣಿಭೂಷಣವ ತೊಟ್ಟು ।
ಧುರದ ಸನ್ನಹ ತರಿಸಿ ಧನುಶರಂಗಳ ಧರಿಸಿ ।
ವರ ರಥವನೇರುತಿರೆ ಮಂದಿಗಳು ಪೊಗಳುತಿರೆ ।
ಪೊರಟಳತಿ ಸಂಭ್ರಮದಿ ಪೊಡೆವ ಭೇರೀರವದಿ ।
ಬರುತರ್ಜುನನು ಬೇಗ ಬರಲಿಯಿದಿರೆನುತಾಗ ।
ಕರೆಯಲಟ್ಟುತಲಂದು ಖಡುಗಮಂ ಕೊಂಡು ॥
ಎದ್ದಳಾಹವಕಾ ॥೯೬॥

ಬಾಣ ಬತ್ತಳಿಕೆ ಸಹ ಬತ್ತಿಸಾಯುಧಗಳಂ ।
ಆನೆ ಹಯ ರಥಗಳನಡರ್ದಾಹವಕೆ ಚೆಲುವ ।
ಮಾನಿನಿಯರಯ್ತರಲ್ ಕಂಡರ್ಜುನನು ತನ್ನ ।
ಸೇನೆ ಸುಭಟಾವಳಿಯೊಳೆಂದನೀ ಪೆಣ್ಣನಕೆ ।
ಮಾನಸದಿ ಮರುಳಾಗಿ ಮೆಯ್ಗೊಡದಿರೆನುತ ರವಿ ।
ಸೂನುಸುತ ಮೊದಲಾದವರಿಗೆ ಬುದ್ಧಿಯ ಪೇಳ್ದು ।
ತಾನೆ ರಥವೇರಿ ತವಕಿಸುವ ತರಳಾಕ್ಷಿಯರ ।
ಸೈನಿಕಕ್ಕಿದಿರಾಗಿ ನಡೆಯಲರಸಾಗಿರುವ ।
ಏಣಾಕ್ಷಿ ಬಂದಿದಿರು ನುಡಿಸಿದರಳುಕುತರ್ಜು ।
ನನು ಬಳಿಕ ಮಾತಾಡಿಸಿದಳರ್ಜುನನೊಳು
ಎದ್ದಳಾಹವಕಾ ॥೯೭॥

೨

**ರಾಗ ಭೈರವಿ ಅಷ್ಟತಾಳ**
ಪಾರ್ಥನೆಂಬವನೆ ನೀನು । ನಿನ್ನಶ್ವವ ।
ಸ್ವಾರ್ಥದಿ ಕಟ್ಟಿದೆನು ॥

ವರ್ತಿಪ ಉಭಯ ಯುದ್ಧಗಳುಂಟು ನಿನಗೇನು ।
ಅರ್ತಿಯು ಮುಂದಿನ್ನೇನು ॥೯೮॥

ಪೆಣ್ಣಿನೊಡನೆ ಯುದ್ಧವು । ಮಾಳ್ಪರೆ ಅಗ್ರ ।
ಗಣ್ಯರು ಕೇಳ್ ನಿಜವು ॥
ಬಣ್ಣವೆಲ್ಲವ ಬಿಡು ಹಯವನೆನ್ನಯ ಮಾತ ।
ಮನ್ನಿಪುದುಚಿತವಿದು ॥೯೯॥

ತರುಣಿಯರೊಳು ಸೆಣಸಿ । ಜೀವಿಸಬಲ್ಲ ।
ಗರುವನಾತನೆ ಸಾಹಸಿ ॥
ಸ್ಮರನಶಾಸ್ತ್ರದೊಳಿಂತೊರೆವುದು ನೀನದ ।
ನರಿತುದಿಲ್ಲವೆ ಸಾಹಸಿ ॥೧೦೦॥

ಅರಸು ನೀನೀ ರಾಜ್ಯಕೆ । ಆಯುಧಗಳ ।
ಧರಿಸಿಹೆ ನೋಡಲಿಕೆ ॥
ಸರಿಯೆ ವೇಶ್ಯೆಯರಂತೆ ಸ್ಮರನಾಗಮದ ಮಾತ ।
ನರುಹುತಲಿರುವೆಯೇಕೆ ॥೧೦೧॥

ಪೆಂಡಿರು ಈ ರಾಜ್ಯದಿ । ಪುರುಷರನ್ನು ।
ಕಂಡೆವೆಂದರೆ ಇಲ್ಲವು ॥ ಭೂ ।
ಮಂಡಲದೊಳಗುಳ್ಳ ಗಂಡುಸರೆಮ್ಮಯ ।
ಗಂಡರು ಕೇಳ್ ನಿಜವು ॥೧೦೨॥

ಪುರುಷ ಕಾಮಿಗಳು ನೀವು । ನಿಮ್ಮ ಕೂಡಿದ ।
ನರರಿಗೇಳಿಗೆಯಿಲ್ಲವು ॥
ವಿರಹ ಹೆಚ್ಚಿದ ವಿಷ ಸ್ತ್ರೀಯರೆಂಬುದ ಕೇಳಿ ।
ಮರುಳಾಹರಲ್ಲ ನಾವು ॥೧೦೩॥

ವಿಷಸ್ತ್ರೀಯರಲ್ಲ ನಾವು । ಪೂರ್ವದ ಪುಣ್ಯ ।
ವಶದಿಂದೆಮ್ಮಯ ಸಂಗವು ॥
ರಸೆಯೊಳುದೊರಕಲು ಪೊಸ ಜವ್ವನರ ಮಾಡಿ ।
ರಸಿಕದಿ ಕೂಡುವೆವು ॥೧೦೪॥

ಜಾಲವಿದ್ಯೆಯು ನಿಮ್ಮಲಿ । ಪುಟ್ಟಿಹುದೆಂದು ।
ಕೇಳಿಹೆ ಪೂರ್ವದಲಿ ॥
ಜಾಲವೆಮ್ಮೊಳು ನಡೆಯದು ಹಯವನು ಬಿಡು ।
ಲೋಲಾಕ್ಷಿ ವಿನಯದಲಿ ॥೧೦೫॥

ಪ್ರಣಯಕಲಹದೊಳಗೆ । ಸೋಲಿಸಬಲ್ಲ ।
ಡನುವಾಗು ಬೇಗೆನಗೆ ॥
ಮನವೊಡಂಬಡದಿರೆ ರಣದಿ ಕಾದುವೆ ಹಯ ।
ವನು ಬಿಡೆ ಕೇಳ್ ನಿನಗೆ ॥೧೦೬॥

ಹೆಂಗೊಲೆಗಳುಕಿ ನಾನು । ಪೇಳ್ದರೆ ಮಾತ ।
ಹಂಗಿಸಿ ನುಡಿದೆ ನೀನು ॥
ಭಂಗಿಸುವೆನು ಕೇಳು ಸಾರಿದೆ ನಮ್ಮ ತು ।
ರಂಗವ ಬಿಡುವುದಿನ್ನು ॥೧೦೭॥

**ರಾಗ ಶಂಕರಾಭರಣ ಮಟ್ಟೆತಾಳ**

ಭಂಗಿಸುವ ಸಹಸಗಳ ರ । ಣಾಂಗಣದಲಿ ತೋರೆನುತ್ತ ।
ಹಿಂಗದಸ್ತ್ರವೆಸೆದಳಾ ಕು । ರಂಗಲೋಚನೆ ॥೧೦೮॥

ಮುಂಗೊಳಿಸುವಸ್ತ್ರಗಳ ಕಡಿದು । ಹಿಂಗದವಳ ಶ್ರವಣ ನಾಸಿ ।
ಕಂಗಳನ್ನು ಕತ್ತರಿಪೆನೆಂ । ದಂಗವಿಸಿದನು ॥೧೦೯॥

ಬಿಡಲು ಮೋಹನಾಸ್ತ್ರವನ್ನು । ಕಡಿದಳಾ ಪ್ರಮೀಳೆ ಶರವ ।
ತೊಡುತಲಿರ್ದಳಗಣಿತಾಸ್ತ್ರ । ಗಡಣವಾಗಲು ॥೧೧೦॥

ತುಡುಕಿದವು ಶರೌಘ ಪಾರ್ಥ । ನೊಡಲ ಪೊಕ್ಕುದೇನನೆಂಬೆ ।
ಕಡುಗಿ ಕೋಪದಿಂದ ಕಡೆಯ । ಮೃಡನೊಲಾದನು ॥೧೧೧॥
ಕೊಲುವೆನಿವಳನೆನುತಮೋಘ । ಹಿಳುಕಿ ಪೂಡಲಾಗಲಭ್ರ ।
ದೊಳಗೆ ವಾಣಿಯಾದುದೀ ಹೆಂ । ಗೊಲೆಗೆ ಹೇಸದೆ ॥೧೧೨॥

ಮುಳಿದು ಸಾಸಿರಬುದ ಸೆಣಸೆ । ಗೆಲಲಿಕರಿಯದಿವಳನಿಂದು ।
ಹರುಷವಾಂತು ವಿನಯದಿಂದ । ಒಲಿಸಿಕೊಂಬುದು ॥೧೧೩॥

**ಭಾಮಿನಿ**

ಆಲಿಸಿದನಂಬರದ ನುಡಿಯನು ।
ಕೋಲನಿಳುಹಿಯೆ ಯೌವನಾಶ್ವ ಮ ।
ರಾಳಧ್ವಜ ಮುಖ್ಯರೊಳಗಾಪ್ತಾಲೋಚನೆಯ ಮಾಡಿ ॥
ಬಾಲಕಿಯ ಕೊಲಲನುಚಿತವು ನಯ ।
ಚೋಳಿಯಿಂದನುಕರಿಸೆನಲ್ಕೆ ಪ್ರ ।
ಮೀಳೆಯನು ತನ್ನೆಡೆಗೆ ಬರಿಸುತ ನುಡಿದ ವಿನಯದಲಿ ॥೧೧೪॥

**ರಾಗ ಸಾವೇರಿ ರೂಪಕತಾಳ**

ಎಣಿಕೆ ಬೇರೆ ಗುಣಮಣಿಯೆ ಪ್ರಮೀಳೆ ಕೇಳ್ ।
ಮನಮೆಚ್ಚಿದೆನು ನಿನಗೆಣೆಗಾಣೆ ಶೀಲೆ ॥ ಪ ॥

ಅಗ್ರಭವನು ಅಶ್ವಮೇಧದೀಕ್ಷೆಯ ಕೊಂಡ ।
ನುಗ್ರ ತಾಪದಿ ಒಂದು ವರುಷ ॥
ನಿರ್ಗಮಿಸುವುದು ಸ್ತ್ರೀಸಂಗಗಳೆನುತಲ ।
ನುಗ್ರಹವೆಮಗೆಮ್ಮ ಗುರುನಿರೂಪವು ॥೧೧೫॥

ಪುಸಿಯಲ್ಲ ಕೇಳಿಭಪುರಿಗೆ ತೆರಳು ಕಂಸ ।
ದ್ವಿಷನ ದರ್ಶನವಪ್ಪುದಲ್ಲಿ ॥
ವಿಷವಧುತ್ವವು ಪೋಗಿ ಶುಚಿಯಪ್ಪೆ ಹಯಮೇಧ ।
ವೆಸಗುತಲಂತ್ಯದಿ ವರಿಸುವೆ ನಿನ್ನ ॥೧೧೬॥

ಧೀರ ಕೇಳ್ ನಿನ್ನಂಗಸಂಗಕೆನ್ನಯ ಮನ ।
ಸೂರೆಹೋದುದು ಸುಖಕ್ಕೆಳಸಿ ॥
ಮೂರು ಲೋಕದ ವೀರ ಎನಗಂಡ ನೀನಾಗು ।
ಮೀರೆನೆಂದಭಯವ ಕೊಡು ಪೋಪೆ ನಾನು ॥೧೧೭॥

ಎನಲು ನಂಬುಗೆಯ ಕೊಟ್ಟನು ಪಾರ್ಥ ತಾ ಮತ್ತೆ ।
ಇನಿಯಳ ಮಾಡಿಕೊಂಡಾಳ್ವೆ
ಸನುಮತವಿದು ಕೇಳು ಅನುಮಾನಬೇಡೆನೆ ।
ವಿನಯದಿಂ ಪಾರ್ಥನ ಅಡಿಗೆರಗಿದಳು ॥೧೧೮॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇನ್ನು ಕೇಳ್ ಮಖಹಯವನೊಪ್ಪಿಸಿ । ರನ್ನದೊಡವೆ ಸುವಸ್ತುನಿಕರ ಸು ।
ವರ್ಣವಸ್ತುವನಿತ್ತು ಪಾರ್ಥನ । ಮನ್ನಿಸಿದಳು ॥೧೧೯॥

ಕೇಳು ಜನಮೇಜಯನೆ ಪಾರ್ಥನ । ಬೀಳುಕೊಂಡಿಭಪುರಿಗೆ ಸೇನಾ ।
ಜಾಲ ಸಹಿತಯ್ತಂದಳಾಗ ಪ್ರ । ಮೀಳೆ ಮುದದಿ ॥೧೨೦॥

**ರಾಗ ಕಾಂಭೋಜಿ ಝಂಪೆತಾಳ**

ಗಜನಗರಿಗಾಕೆಯನು ಕಳುಹಿ ತುರಗದ ಕೂಡೆ ।
ವಿಜಯನಯ್ತರೆ ಮುಂದೆ ಭರದಿ ॥
ಅಜ ಮನುಜ ಗೋಶ್ವ ಮಹಿಷಾದಿಗಳ ಪಾಲಿಸುತ ।
ವ್ರಜದಂದದಲಿಹ ದೇಶಗಳ ॥೧೨೧॥

ಕಳೆದು ಮುಂದಯ್ತರಲು ತೊಗಲುಡಿಗೆ ವಕ್ರಾಂಗಿ ।
ಗಳನೊಂದು ಕಂಗಳುಳ್ಳವರ ॥
ಪೊಸಲ ಕಳೆದುತ್ತುಂಗನಾಸಿಕದವರ ರಾಜ್ಯ ।
ದೊಳು ಪೊಕ್ಕು ಮೀರಿ ಮತ್ತೆಸೆವ ॥೧೨೨॥

ನೆತ್ತಿಕೋಡೆರಡುಳ್ಳವರನೊಂದು ಕೋಡವರ ।
ಕತ್ತೆಮೊಗಕುದುರೆಮೊಗದವರ ॥
ಮತ್ತೆ ಮೂರಕ್ಷಿಯುಳ್ಳವರ ದೇಶಂಗಳನು ।
ಸುತ್ತಿ ಮುಂದಯ್ತಂದ ಪಾರ್ಥ ॥೧೨೩॥

**ವಾರ್ಧಕ**

ಧಾರಿಣೀಶ್ವರ ಲಾಲಿಸೇನೆಂಬೆ ಬಲುತರ ವಿ ।
ಕಾರದೇಶಂಗಳಂ ಕಳೆವುತ್ತಲಾ ಹಯಂ ।
ಘೋರಭೀಷಣನೆಂಬ ಕೌಣಪನ ಪಟ್ಟಣದ ಬಾಹ್ಯೋಪದೇಶದೆಡೆಗೆ ॥
ಸಾರಿ ಬರುತರ್ಜುನಂ ಸಕಲ ಸೈನಿಕಸಹಿತ ।
ಕ್ರೂರನಾಗಿಹ ವಜ್ರಪುರದರಸುಭೀಷಣಂ
ಮೂರ್ ಕೋಟಿ ಕಾಳರಕ್ಕಸರೆಂಬವರು ಖೂಳಗೆ ಸರಿಸವನೊಳಿರುವರಾ ॥೧೨೪॥

**ಭಾಮಿನಿ (ಅರ್ಧ)**

ಮತ್ತೆಯಾತಗೆ ಬ್ರಹ್ಮರಾಕ್ಷಸ ।
ಉತ್ತಮನುಯೆಂದೆನಿಪ ಗುರು ಬಲು ।
ಧೂರ್ತ ಮೇದೋಹೋತನೆಂಬುವ ಪಾಪಿಯಾಚಾರ್ಯ ॥೧೨೫॥

**ವಾರ್ಧಕ**

ಅಡವಿಯೊಳು ಆಹಾರ ಹುಡುಕುತಿರಲಾ ನರನ ।
ಪಡೆ ನಡೆವುದಂ ಕಾಣುತಾ ಬ್ರಹ್ಮರಾಕ್ಷಸಂ ।
ತುಡುವೆದ್ದು ಬಾಯ ಚಪ್ಪರಿಸುತ್ತ ಫಲುಗುಣನ ಪಡೆಗಿಡೆಯನೆಲ್ಲ ಪಿಡಿದು ॥
ತಡೆಗಡಿದು ರಕ್ತಮಂ ಕುಡಿಯದಿರೆನೆಂದೆನುತ ।
ಬಿಡದೆ ಬಾಯ್ದೆರೆದಟ್ಟಹಾಸದಿಂ ಪಥವಿಡಿದು ।
ನಡೆತಂದನಾ ಘೋರಭೀಷಣನ ಬಳಿಗಾಗ ಸಡಗರದೊಳೇನೆಂಬೆನು ॥೧೨೬॥

**ರಾಗ ಮಾರವಿ ಏಕತಾಳ**

ಬಂದನಾ ಮೇದೋಹೋತ ಪುರೋಹಿತ । ಬ್ರಹ್ಮರಕ್ಕಸನಾಗಿ ॥
ವೃಂದದಿದಾನವನೋಲಗಗೊಟ್ಟಾ । ಭೀಷಣನೆಡೆಗಾಗಿ ॥೧೨೭॥

ಕುರಿಚರ್ಮವು ಮಕುಟಕೆ ಸುತ್ತಿದ ಎಳೆ । ಗರುಳಿನ ಚೆಲುವಿಕೆಯು ॥
ಮಿರುಪುವ ಜುಂಜುರಗೂದಲು ಪಣೆಗೊ । ಪ್ಪಿರುವ ದಂತಾಕ್ಷತೆಯು ॥೧೨೮॥

ಪೊಸದೊಂಪೆಯೆಲುವಿನ ಕುಂಡಲಿ ಕರಿ । ಮುಸುಡ ಕಮಂಡಲವು ।
ಹಸಿದೊಗಲಿನ ಧೋತ್ರ ಸೊಗಹಕೆ ಬಲು । ನುಸಿ ನೊಣಗಳ ರವವು ॥೧೨೯॥

**ರಾಗ ಸೌರಾಷ್ಟ್ರ ಅಷ್ಟತಾಳ**

ವರ ಮೇದೋಹೋತನನು । ಕಾಣುತ ಭಕ್ತಿ ।
ವೆರಸಿ ಭೀಷಣ ದೈತ್ಯನು ॥
ಹರುಷದಿಂದಿರ್ಗೊಂಡು ಕರೆತಂದು ಸಿಂಹವಿ ।
ಷ್ಟರದಿ ಕುಳ್ಳಿರಿಸಿ ಬೇಗ ॥೧೩೦॥

ಪಾದಯುಗವ ತೊಳೆದು । ಮಸ್ತಕದಿ ಸಿ ।
ದ್ಧೋಕದವನು ತಳಿದು ॥
ಸಾದರದಿಂ ಚಂದದಿಂದಲಿ ಪೂಜೆಯ ।
ಗೆಯ್ದು ಮತ್ತಿಂತೆಂದನು ॥೧೩೧॥

ಪುಣ್ಯಸಾಗರನೆ ನಿನ್ನ । ದಿವ್ಯಾಂಘ್ರಿಕಾ ।
ರುಣ್ಯದಿ ಧರೆಯೊಳೆನ್ನ ॥
ಪುಣ್ಯಕೆ ಸರಿಯುಂಟೆ ನೀ ಬಂದ ಕಾರ್ಯವೇ ।
ನೆನ್ನುತ ಬೆಸಗೊಂಡನು ॥೧೩೨॥

**ರಾಗ ಕೇದಾರಗೌಳ ಅಷ್ಟತಾಳ**

ಘನ ತೋಷವಾಯ್ತು ಕೇಳ್ ಖಳರಾಯ ಬಹಳ ಮ ।
ನ್ನಣೆ ಗೆಯ್ದೆ ಭಕ್ತಿಯಿಂದ ॥
ಮನುಜಾನಿಮಿಷದಾನವರೊಳ್ ನಿನ್ನೈಶ್ವರ್ಯ ।
ಕೆಣೆಯುಂಟೆ ಬಿಡು ಶಭಾಸೈ ॥೧೩೩॥

ವೀರ ಕೇಳಾದಡಿನ್ನೊಂದುಂಟು ಪೇಳ್ವೆನು ।
ಘೋರನೆ ಗ್ರಹಿಸಿಕೊಂಡು ॥
ಕಾರಿಯವನು ಗೆಯ್ದೆಯಾದರೆ ನಿನಗೆಣೆ ।
ಮೂರುಲೋಕದೊಳಿಲ್ಲವೈ ॥೧೩೪॥

ಕಾರಿಯವೇನದ ಬೇಗದಿ ಪೇಳಿರಿ ।
ತೀರಿಸಿ ಕೊಡುವೆನೆಂದು ॥
ಘೋರನೆಯುರುಹಲ್ಕೆ ಕೇಳುತ್ತಲಾ ಕ್ಷಣ ।
ಪೇಳಿದನಸುರೇಂದ್ರಗೆ ॥೧೩೫॥

**ರಾಗ ಸಾಂಗತ್ಯ ರೂಪಕತಾಳ**

ದನುಜೇಶ ಕೇಳ್ ತವ ಪಿತನ ಕೊಂದವ ಭೀಮ ।

ನನುಜನರ್ಜುನನು ಬಂದಿಹನು ॥
ಎಣಿಕೆಯಿಲ್ಲದ ಚಾತುರಂಗವಿಹುದು ನಿನ್ನ ।
ಘನ ಪುಣ್ಯವೇನ ಪೇಳುವೆನು ॥೧೩೬॥

ತಾತನ ಕೊಂದವನನುಜನ ಕೊಂದು ಮ ।
ತ್ತಾತನ ಕೂಡಿ ಬಂದಿಹರ ॥
ತಾ ತರಿಸುತ ಹಿಡಿದೀ ಕ್ಷಣ ನರಮೇಧ ।
ಪ್ರೀತಿಲಿ ಮಾಡೆಂದನಾಗ ॥೧೩೭॥

**ರಾಗ ಕೇದಾರಗೌಳ ಅಷ್ಟತಾಳ**

ಎಂದ ಮಾತನು ಕೇಳಿ ನರಮೇಧಯಾಗವ । ಚಂದದಿ ಗೆಯ್ದವರು ॥
ಹಿಂದೆ ಯಾರುಂಟು ಋತ್ವಿಜರಾರು ವಿಧಿಯ ಪೇ । ಳಿಂದೆನಲಿಂತೆಂದನು ॥೧೩೮॥

**ರಾಗ ಕಾಂಭೋಜಿ ಝಂಪೆತಾಳ**

ತರಳ ಕೇಳ್ಳೈ ಪೂರ್ವದಲಿ ರಾವಣಾಸುರನು ।
ನರಮೇಧಯಾಗವನು ರಚಿಸಿ ॥
ಧರೆಯ ಮೂರನು ಜಯಿಸಿದರಿಯೆಯಾ ಋತ್ವಿಜರ ।
ಪರಿಯನುಸಿರುವೆನೊಲಿದು ಕೇಳು ॥೧೩೯॥

ನರರ ನರ ಜನಿವಾರ ನರರ ತಲೆ ಜಪಸರದಿ ।
ನರನೊಸಲ ಧೋತ್ರದಿಂದೆಸೆವ ॥
ಪಿರಿದೆನಿಪ ಒಂಟೆಯೆಲುವಿನ ಕುಂಡಲಂಗಳಿಂ ।
ಕರಿಶಿರಕಮಂಡಲುಗಳಿಂದ ॥೧೪೦॥

ಉರಗಜದ ಬೆನ್ನಿನಸ್ಥಿಯ ಉಟ್ಟ ಈ ಭಯಂ ।
ಕರ ರೂಪಿನಿಂ ವಿರಾಜಿಸುವ ॥
ಪರಿಪರಿಯ ಮಾಂಸೋಪಹಾರದಿಂ ತಲೆಮಿದುಳ ।
ಹರುಷದಿಂ ತಿಂದು ಕುಳಿತವರ ॥೧೪೧॥

ಚೈತ್ರ ವೈಶಾಖ ಜ್ಯೇಷ್ಠಾಷಾಡದೊಳು ಮದ್ಯ ।
ನೆತ್ತರಂ ಕುಡಿದು ದೀಕ್ಷೆಯಲಿ ॥
ಇನಿತು ಚಾತುರ್ಮಾಸ್ಯವ್ರತವನುರೆ ಸಾಧಿಸುವ ।
ವರ ವಿಪ್ರರನು ಕೇಳಯ್ಯ ॥೧೪೨॥

ನರಮೇಧ ಗೆಯ್ಯುವಡೆ ಪಿರಿದು ನಿಷ್ಠೆಗಳುಂಟು ।
ಮೆರೆವ ಚಾತುರ್ಮಾಸ್ಯದೊಳಗೆ ॥

ಸುರನೆತ್ತರಿನ ಪಾನದೊಳಗಿರಲು ಬೇಕುದಕ ।
ಸ್ಪರುಶವಾಗದು ವ್ರತಂಗಳಿಗೆ ॥೧೪೩॥

ಮಾಸೋಪವಾಸಿಗಳ ಮಿಥುನ ಮಾಂಸಗಳಿಂದ ।
ಪೋಷಣವು ಶ್ರಾವಣಕೆ ಕೇಳು ॥
ಭಾಷಿಸುವ ಯತಿಮಾಂಸ ಭಾದ್ರಪದಕೊದಗಿಸುವ ।
ವೀಸು ನಿಷ್ಠೆಯ ಬಿಡದೆ ತಾಳು ॥೧೪೪॥

ತರುಣಿಯರ ಜಡೆಮುಡಿಯು ಶಿರಬುರುಡೆ ಕರುಳ್ಗಳನು ।
ವರಿಸಬೇಕಾಶ್ವಯುಜನಕೆ ॥
ಮೆರೆವ ಎಳೆವೆಣ್ಗಳೆದೆಗುಂಡಿಗೆಯ ನರಮಾಂಸ ।
ವುಣುತಿರಲು ಬೇಕು ಕಾರ್ತಿಕಕೆ ॥೧೪೫॥

ಮಾರ್ಗಶಿರ ಪುಷ್ಯ ಮಾಘಾದಿ ಫಾಲ್ಗುನ ತಾಪ ।
ಸರ್ಗಳುದರದ ಮಾಂಸವನ್ನು ॥
ಶೀಘ್ರದಿಂ ಭಕ್ಷಿಸಿಯೆ ವ್ರತವ ನೆರೆ ಸಾಧಿಸಿದ ।
ವರ್ಗಳೇ ಋತ್ವಿಜೋತ್ತಮರು ॥೧೪೬॥

ವಟವೃಕ್ಷದೊಳು ವಾಸವಾಗಿರ್ಪ ರನ್ನವರ ।
ದಿಟವಹ ಕಾರಣಿಕರವರ ॥
ಪಟುಪರಾಕ್ರಮಿಯೆ ನೀ ತಂದೆಜ್ಞವನುಗೆಯ್ಯೆ ।
ಘಟಿಪುದು ಜಯವು ರಣಾಗ್ರದೊಳು ॥೧೪೭॥

**ವಾರ್ಧಕ**
ದಿನದಿನಕೆ ದಾನವರ ದಂಪತಿಸಹಸ್ರಮಂ ।
ವಿನಯದಿಂ ಮಾನವರ ಮಾಂಸಭೋಜನದಿಂದ ।
ದಣಿಸಬೇಕಾದವರನುಪಚರಿಸಿ ದೀಕ್ಷೆಯಂ ತಾಳ್ದು ಮಂಟಪವ ರಚಿಸಿ ॥
ಘನ ವೇಗದಿಂದಯ್ದಿ ಪಾರ್ಥನಂ ಪಿಡಿದು ತಾ ।
ರೆನಲು ಮೇದೋಹೋತನಿಂತೆಂದುದಂ ಕೇಳ್ದು ।
ಘನಪರಾಕ್ರಮಿ ಶರಧಿಯಂತೆ ಭೋರ್ಗುಡಿಸಿ ಕಲ್ಪಾಂತಕನವೋಲ್ ಕನಲ್ದ ॥೧೪೮॥

**ರಾಗ ಭೈರವಿ ಏಕತಾಳ**
ಸಿಡಿಲಂದದೊಳಾರ್ಭಟಿಸಿ । ಕೆಂ । ಗಿಡಿಯುಗುಳುತ ಭೋರ್ಗುಡಿಸಿ ॥
ನುಡಿಯನು ಕೇಳ್ದಾ ಸಾರ । ಎನ್ನ । ಪಡೆದನ ಮಡಿದಿಹ ವೈರ ॥೧೪೯॥

ತಾಳ್ದಪೆನೇ ತಾನಿನ್ನು । ನೀ । ಪೇಳ್ದತಿ ಹಿತ ವಾಕ್ಯವನು ॥
ಕೇಳ್ದಾಂ ಮರೆವೆನೆ ಭರದಿ । ನರ । ಬಾಧಿಪನೇ ಸಂಗರದಿ ॥೧೫೦॥

ಕಾದಿ ಪಿತನ ಕೊಂದವನ । ನಿಜ । ಸೋದರನೆನಿಪರ್ಜುನನ ॥
ಸಾಧಿಸಿ ಪಿಡಿದವನನ್ನು । ನರ । ಮೇಧಕೆ ಪಶುವೆನಿಸುವೆನು ॥೧೫೧॥

ಘಾತಿಸದೆಳೆತರಬೇಕೇ । ಸ । ತ್ತಾತಪನಹನೇ ಮಖಕೆ ॥
ಆತನೆರಡು ಸರಳಿಂದ । ಸ । ತ್ತಾತಪನಾದಪನೆಂದ ॥೧೫೧॥

ಅದಕೆ ಪುರೋಹಿತನೆಂದ । ಕೊ । ಲ್ಲದೆ ತಂದರೆ ಬಹು ಚಂದ ॥
ಒದಗಿಲಿ ನಡೆಯಿಂದೆಂದ । ತಾ । ನದ ಕೇಳುತಲಿದಿರೆದ್ದ ॥೧೫೨॥

**ವಾರ್ಧಕ**

ಕೂಡಿದಂ ಮೂರ್ಕೋಟಿ ರಕ್ಕಸರ ನಿಮಿಷದಿಂ ।
ಪೂಡಿದಂ ಕಾಂಚನ ವರೂಥಮಂ ಸಲೆ ಸಜ್ಜು ।
ಮಾಡಿದಂ ಬಿಲ್ತಿರುವನಳವಡಿಸಿ ಪರಬಲವ ತಾಗಿದಂ ತವಕದಿಂದ ।
ನೋಡಿದಂ ಪಾರ್ಥನ ಪತಾಕಿನಿಯ ಧನುವಿಂಗೆ ।
ಪೂಡಿದಂ ಮಾರ್ಗಣವ ಪಟುಭಟರ ಕಾಯದೊಳ್ ।
ಮಾಡಿದಂ ಗಾಯಮಂ ಪಾರ್ಥನಡಹಾಯ್ದು ಭೋರ್ಗುಡಿಸುತ್ತಲಿಂತೆಂದನು ॥೧೫೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲವೊ ನರಗುರಿ ಸಿಕ್ಕಿದೆಯಲಾ ।
ಬಲು ದಿನದೊಳಾ ನಿನ್ನ ರಕುತವ ।
ಬಲಿಯ ಕೊಡಬೇಕೆನುತಲಿರ್ದೆನು । ಸುಲಭದಿಂದ ॥೧೫೪॥

ಪುಣ್ಯವಶದಿಂದೆನಗಿದನು ಮು ।
ಕ್ಕಣ್ಣ ದೊರಕಿಸಿಕೊಟ್ಟನಲ್ಲದೆ ।
ನಿನ್ನ ಇಚ್ಛೆಯಿದಲ್ಲ ಮಾನವ । ಕುನ್ನಿ ಕೇಳೈ ॥೧೫೫॥

ಸೊಕ್ಕ ಮುರಿದಪೆ ನಿನ್ನ ನರಮೇ ।
ಧಕ್ಕೆ ಪಶುವೆನಿಸುವೆನು ನೋಡಾ ।
ರಕ್ಕಸರಿಗಾಹಾರವಾದೆಲೊ । ಸಿಕ್ಕಿ ಮರುಳೆ ॥೧೫೬॥

ಜನಕನನು ಕೊಂದವನ ಸುಮ್ಮನೆ ।
ನಿನಗೆ ನಿಮಿಷಾರ್ಧದಲಿ ಯಮಪ ।
ಟ್ಟಣವ ತೋರ್ಪೆನು ತಾಳೆನಲು ಪಾ । ರ್ಥನು ಕನಲ್ದ ॥೧೫೭॥

**ರಾಗ ಕಾಂಭೋಜಿ ಝಂಪೆತಾಳ**

ಗಾಂಡೀವಧನುವ ಝೇಂಕರಿಸಿ ಮಾರ್ಗಣವ ಕೋ ।
ದಂಡಕ್ಕೆ ಸೇರಿಸುತ ಭರದಿ ॥

ಖಂಡಪರಶುವಿನ ಕೋಪಕ್ಕಯ್ದು ಮಡಿಯೆನಲು ।
ಚಂಡವಿಕ್ರಮನೆಂದ ಮುನಿದು ॥೧೫೮॥

ಎಲವೊ ಪಾತಕಿ ಬರಿದೆ ಗಳಹದಿರು ನಿನ್ನಪ್ಪ ।
ನಳಿದು ಪೂರ್ವದಿ ರಣಾಗ್ರದಲಿ ॥
ಬಲುಪರಾಕ್ರಮಿಯಣ್ಣ ಭೀಮಸೇನನ ಕೈಗೆ ।
ತಲೆಯ ತೆತ್ತುದನರಿಯೆ ಮರುಳೆ ॥೧೫೯॥

ತಾತರ ಸಮೀಪದೊಳ್ ಜಾತರಿರ್ಪುದು ಸಹಜ ।
ನೀತಿಪಥವನ್ನರಿಯೆ ಧೂರ್ತ ॥
ಆತನಿರ್ಪೆಡೆಗೆ ನಿನ್ನನೆ ಕಳುಹಿಕೊಡುವೆನೆನು ।
ತಾತನಂ ತೆಗೆದಚ್ಚ ಪಾರ್ಥ ॥೧೬೦॥

ದನುಜ ಬೆದರದೆಯೆಂದನೆಲವೊ ಮನುಜಾಧಮನೆ ।
ಬಗುಳು ನೀ ಬಾಯ್ಗೆ ಬಂದಂತೆ ॥
ಬಿಗಿದು ನಿನ್ನಯ ಕರುಳ ಮೃತ್ಯುದೇವತೆಗೆ ಸೊಗ ।
ಸಿಂದಲುಣಬಡಿಸುವೆನು ತಾಳು ॥೧೬೧॥

ಎಂದು ಕೇಶಾಕೇಶಿಯಿಂದ ಹೊಯ್ದಾಡಿದರು ।
ಇಂದ್ರಸುತ ಘೋರಭೀಷಣರು ॥
ಹಿಂದೆ ಕಲಿ ಭೀಮಬಕರಿಂದಾದ ರಣರಂಗ ।
ಕಿಂದುನೂರ್ಮಡಿಯಾಯ್ತು ರಣವು ॥೧೬೨॥

**ಭಾಮಿನಿ**
ಗಂಡುಗಲಿ ರಣರಂಗ ಜಗದೋ ।
ರ್ದಂಡ ತ್ರಿಭುವನಗಂಡ ಕಲಿಮಾ ।
ರ್ತಂಡ ಭಾಸುರಗಂಡ ಗಂಡರ ಗಂಡ ಭೇರುಂಡ ॥
ಕೆಂಡ ಕಾರುತ ಕೊಂಡಶರ ಕೋ ।
ದಂಡಕೇರಿಸಿ ಖಂಡಲಾತ್ಮಜ ।
ಕೊಂಡೆಸೆಯಲು ಪ್ರಚಂಡ ಖಳ ಭೂಮಂಡಲಕೆ ಬಿದ್ದ ॥೧೬೩॥



**ವಾರ್ಧಕ**
ಧರಣೀಂದ್ರ ಲಾಲಿಸೈ ಭೀಷಣಂ ಮೂರ್ಛೆಗೊಂ ।
ಡೊರಗಲಾಕ್ಷಣದೊಳಾ ಯೋಜನಸ್ತನಿಯೆಂಬ ।

ದುರುಳೆ ಮೂರ್ಕೋಟಿ ರಕ್ಕಸಿಯರಂವೆರಸಿ ಲಂಬೋದರಿಯು ಸಹಿತ ಕನಲಿ ॥
ತರಣಿಯುಪಟಳಕಂಜಿ ನಿಶಿ ಹಲವು ರೂಪಾಗಿ ।
ನರನ ಪಡೆಯಂ ಮುಸುಕುವಂತೆ ಕಾರೊಡಲ ಭೀ ।
ಕರಮಾದಕೋರ್ದಾಡೆ ಮಸೆವುತ್ತ ಊರ್ಧ್ವಕೇಶಿಗಳಾರ್ಭಟಿಸಿ ಬಂದರು ॥೧೬೪॥

**ರಾಗ ಆರಭಿ ಅಷ್ಟತಾಳ**

ಯಾವ ಮೂಢಾತ್ಮಕರೋ । ಇಲ್ಲಿ ಬಂದಿಹರ್ ।
ಯಾವ ಮೂಢಾತ್ಮಕರೋ ॥ ಪ ॥

ಅಂಗಂಗವನು ತರಿತರಿದು । ಬೇಗ । ಕೆಂಗೆಂಡದಲಿ ಹುರಿ ಹುರಿದು ॥
ತಿಂದು ರಕ್ತವ ಪಾನ ಮಾಡುತ । ತಂಗಿಯಂದಿರನೆಲ್ಲ ಕರೆಸುತ ।
ಬೆಡಗಿನಿಂದೌತಣವ ಮಾಡುತ । ಹಿಂಗರಣ ಮುಂಗರಣ ತೋರ್ಪೆವು ॥ ಯಾವ ॥೧೬೫॥

ನರಮಾಂಸ ಕರುಳ್ಗಳ ಮೆಲದೆ । ಬಲು । ದಿನವಾಯಿತೀಕ್ಷಣ ನಿಲದೆ ॥
ಹುರಿದು ಕರುಳನೆ ಕಚ್ಚಿ ಪರ್ರನೆ । ಹರಿದು ತೊಗಲಿನ ನರವ ತುಪ್ಪದಿ ।
ಹುರಿದು ಘಮ್ಮನೆ ಘರಘರನೆ ನಾವ್ । ಸರಸದಿಂ ನುಗ್ಗರಿದು ತಿಂಬೆವು ॥ ಯಾವ ॥೧೬೬॥

**ವಾರ್ಧಕ**

ಗರಳಗಾಳಿಯೊ ಹರನ ಕಣ್ಗಿಚ್ಚೊ ಮೇಣು ಕೇ ।
ಸರಿಯ ಝೇಂಕಾರವೋ ಜವನ ಕೋಲಾಹಲವೊ ।
ವರ ಸಿಡಿಲಗಿಚ್ಚೋರವೊ ದಾವಾಗ್ನಿಯಾಟೋಪವೋಯೆಂಬ ತೆರನಾಗಲು ॥
ಶರಧಿಯೋಲ್ ರಕ್ಕಸಿಯರಯ್ತರಲ್ ಫಲುಗುಣಂ ।
ಬೆರಳಸನ್ನೆಯೊಳು ಹನುಮಂತನಂ ಕರೆಯಲ್ಕೆ ।
ಎರಡನೆಯ ಜವನ ಕೋಪಾಂತು ಧರಣಿಗೆ ಹಾಯ್ದು ಮೂಲೋಕವಲ್ಲಾಡಲು ॥೧೬೭॥

**ರಾಗ ಶಂಕರಾಭರಣ ಮಟ್ಟೆತಾಳ**

ಅಷ್ಟ ದಿಕ್ಕು ನಡುಗೆ ಕಾರ । ಬೆಟ್ಟದಂತೆ ಸೆಳೆದು ವಜ್ರ ।
ಮುಷ್ಟಿಯನ್ನು ಪಿಡಿದು ಪೇಳ್ದ । ದಿಟ್ಟ ಜನರಿಗೆ ॥
ಕೆಟ್ಟ ದನುಜೆಯರಿರ ನಿಮ್ಮ । ರಟ್ಟೆಯನ್ನು ಮುರಿದು ಯಮನ ।
ಪಟ್ಟಣಕ್ಕೆ ಪೋಪ ಬಗೆ ಹೆ । ಬ್ಬೆಟ್ಟ ತೀರ್ಪೆನು ॥೧೬೮॥

ಮಂಗ ನಿನಗೆ ಮೋರೆಯಲ್ಲಿ । ಕಂಗಳಿಲ್ಲ ನಮ್ಮ ದೇಹ ।
ದಂಗಗಳನು ನೋಡಿ ಬರಿದೆ । ಪೆಂಗನಾದೆಲಾ ॥
ನುಂಗೆ ಹುರಿದು ತುತ್ತಿಗಿಲ್ಲ । ದಂಗಮೈಸೆ ನಿನ್ನ ಬಿಸಿ ರ ।
ಕ್ತಂಗಳೋಕುಳಿಯನೆಯಾಡಿ । ಭಂಗಿಸುವೆವು ॥೧೬೯॥

ಘೋರ ಪಾಪಿಗಳಿರ ಬುದ್ಧಿ | ಮದ್ಯಪಾನವೇರಿ ತಲೆಗೆ |
ಯೇರಿ ಕಣ್ಣು ಕಾಣದೆಂದು | ತೋರುತಿದೆಯೆಲೆ ||
ಮಾರಿಗಳಿಗೆಯಿತ್ತು ಟೆಂಕ | ಊರ ಪೊಗಿಸದಿರೆನೆನಲ್ಕೆ |
ಮಾರುತೀಯ ಕುರುಹ ತಿಳಿದು | ವೋರ್ವೆ ನುಡಿದಳು ||೧೭೦||

**ರಾಗ ಸೌರಾಷ್ಟ್ರ ಅಷ್ಟತಾಳ**
ಅಕ್ಕ ನೋಡಿವ ಕಾಡಕಪಿಯಲ್ಲ ಬಲವಂತ | ನೀತ ಕಾಣೆ || ಮೊದ
ಲರ್ಕನ ಹಣ್ಣೆಂದು ತಿನಲೊದಗಿದ ಮಂಗ | ನೀತ ಕಾಣೆ ||೧೭೧||

ಸೀತೆಯ ನೋಡಿಯುಂಗುರವ ನೀಡಿದ ಮಂಗ | ನೀತ ಕಾಣೆ || ಮುಂ |
ದೊತ್ತುತ ವನದಲಿ ಲೋಲಾಡಿದ ಕೋತಿ | ಯೀತ ಕಾಣೆ ||೧೭೨||

ಲಂಕೆಯನಗ್ನಿಯಿಂದುರುಹಿದ ವಾನರ | ನೀತ ಕಾಣೆ || ಮತ್ತೆ |
ಲಂಕೆಯೊಳಗೆ ರಾವಣನ ಮೀಸೆಯುರಿಸಿದ | ನೀತ ಕಾಣೆ ||೧೭೩||

ಧಿಂಕಿಟ್ಟು ಶರಧಿಯ ಹಾರಿದ ಕೋಡಗ | ನೀತ ಕಾಣೆ || ಪೊಕ್ಕು |
ಲಂಕೆಯೊಳ್ ಲಂಕಿಣಿಯನು ಕೊಂದ ಮರ್ಕಟ | ನೀತ ಕಾಣೆ ||೧೭೪||

ಸೇತುವೆಗಾಗಿ ಬೆಟ್ಟವ ಪೊತ್ತ ಮುದಿಮಂಗ | ನೀತ ಕಾಣೆ || ಪೋಗಿ |
ಪಾತಾಳದಸುರರ ಕೊಂದಿಹ ಮರ್ಕಟ | ನೀತ ಕಾಣೆ ||೧೭೫||

ಭಯವಹುದಿವನ ಮೊಗವ ನೋಡಲೆನಗಿನ್ನು | ಅಕ್ಕ ಕೇಳೆ ||
ಮುಂದೆ | ಲಯವಹುದಲ್ಲದೆವುಳಿವ ಸಂಗತಿಯಿಲ್ಲ | ಅಕ್ಕ ಕೇಳೇ ||೧೭೬||

**ರಾಗ ತೋಡಿ ಅಷ್ಟತಾಳ**
ಬೆದರಲೇಕೀ ಪರಿ ತಂಗಿ ಮರ್ಕಟನನ್ನು |
ತುದಿಮೊಲೆಯಿಂದಿರಿದು ||
ಸದೆಯದಿದ್ದರೆ ಯೋಜನಸ್ತನಿಯೆಂದೆಂಬ |
ಪೆಸರ ಪೇಳಲುಬಹುದೆ ||೧೭೭||

ಒಂದು ತುತ್ತಾಗದೀ ಮಂಕು ಮರ್ಕಟ ತುದಿ |
ಹೊಂದದೆನ್ನಯ ಕುಕ್ಷಿಗೆ ||
ತಿಂದರೆ ತಿಲಮಾತ್ರ ಹಶು ಮಾಣದೆಂಬುದ |
ರಿಂದ ಬಿಟ್ಟೆವು ಕಡೆಗೆ ||೧೭೮||

ಸ್ವಾದ ನೋಡಲಿಕೆಷ್ಟು ತಿನಬೇಕೆ ಎಳ್ಳಿನ |
ಷ್ವಾದರುಂಡರು ಸಾಲದೆ ||

ಆದಾಯ ಬಂದುದ ಬಿಡಬೇಡ ತಿಂದು ವಿ ।
ನೋದದಿ ಕುಣಿದಾಡುವ ॥೧೭೯॥

ಇಂತು ತಮ್ಮೊಳು ಮಾತನಾಡುತಿರಲು ಹನು ।
ಮಂತ ದೈತ್ಯೆಯರ ನೋಡಿ ॥
ಅಂತಕನೋಲ್ ಕೋಪಾಟೋಪದಿಂದಲಿ ಖತಿ ।
ಯಾಂತು ಗರ್ಜಿಸುತೆಂದನು ॥೧೮೦॥

**ರಾಗ ಭೈರವಿ ಏಕತಾಳ**

ಎಲೆಲೆ ಪಿಶಾಚಿಗಳಿರ ರಣರಂಗದಿ । ತೊಲಗದಿರೀ ಕ್ಷಣವೆ ॥
ತಲೆಯ ಮುರಿದು ಶಾಕಿನಿ ಡಾಕಿನಿಯರ । ಬಳಗಕುಣಿಸದಿರೆನು ॥೧೮೧॥

ಮಾನವರುಗಳ ಸಹಾಯದಿ ಬಂದೀ । ದಾನವರನು ಕೆಣಕಿ ॥
ವಾನರ ಜೀವಿಸು ನಿನ್ನಯ ತಲೆ ಸು । ಮ್ಮಾನದಿ ತಿಂದಪೆವು ॥೧೮೨॥

ಎಂದ ಮಾತನು ಕೇಳುತಂದನಿಲಾತ್ಮಜ । ಬಂಧಿಸಿಯಸುರೆಯರ ॥
ಸಿಂಧುವಿನಾಚೆಗೆ ಹಾಕಲು ಗಗನದೊ । ಳಿಂದ್ರಾದ್ಯರು ನಲಿಯೆ ॥೧೮೩॥

**ಭಾಮಿನಿ**

ಇತ್ತ ಮೂರ್ಛೆಯೊಳ್ ಬಿದ್ದ ಖಳನೆ ।
ಚ್ಚತ್ತು ಖಡ್ಗವ ತುಡುಕಿ ಹೂಂಕರಿ ।
ಸುತ್ತ ಪಾರ್ಥನ ಗಳವ ಕೊಳ್ಳದೆ ಬಿಡೆನು ತಾನೆನುತ ॥
ಮತ್ತೆ ಕದಳೀವನವನುರೆ ನು ।
ಗ್ಗೊತ್ತಿ ಬಹವೋಲ್ ಪಟುಭಟರ ಸದೆ ।
ವುತ್ತ ಬರೆ ನೋಡುತ್ತ ಪಾರ್ಥನು ಗರ್ಜಿಸುತಲೆಂದ ॥೧೮೪॥

**ರಾಗ ಶಂಕರಾಭರಣ ಮಟ್ಟೆತಾಳ**

ಖಳರ ಸಹಸ ಸಾವತನಕ ಬೇಟೆಗೆಯ್ದುದು ।
ಕುಲಸ್ವಭಾವ ನಿನ್ನ ಬಿಡುವುದುಂಟೆ ಲೇಸಿದು ॥೧೮೫॥

ಹಲವು ಮಾತಿನಿಂದಲೇನೆನುತ್ತ ಪಾರ್ಥನು ।
ಖಳನ ಕರದ ಖಡುಗವನ್ನು ಕಡಿದು ಬಿಸುಟನು ॥೧೮೬॥

ಮತ್ತೆ ಶೂಲವನ್ನು ಕೊಂಡು ದೈತ್ಯ ಪಾರ್ಥನ ।
ಎತ್ತಿ ಬಿಡಲಿಕಾಗ ವಿಜಯ ಕಡಿದನಾ ಕ್ಷಣ ॥೧೮೭॥

ಮನುಜ ನೀನು ವ್ಯರ್ಥವಾಗಿ ಸಾಯಬೇಡೆಲಾ ।
ತಲೆಯ ಕೊಂಬೆನೀಗ ನಿಮಿಷದೊಳಗೆ ನೋಡೆಲಾ ॥೧೮೮॥

ಧನುವನೊದರಿಸುತ್ತ ಘೋರ್ಗುಡಿಸಿ ಭೀಷಣ ।
ಕನಲಿ ಗರ್ಜಿಸುತ್ತ ಪೇಳ್ದ ಖಳರ ಭಾಷಣ ॥೧೮೯॥

ಎಲವೊ ಮನುಜ ಕೇಳು ನೀನು ಬಯಸಿ ಬಾಣವ ।
ನಿಮಿಷದೊಳಗೆ ತೋರುತಿಹೆನು ಎನ್ನ ಶೌರ್ಯವ ॥೧೯೦॥

ನಿನ್ನ ಪಿಡಿದು ಈಗ ಯಜ್ಞಪಶುವ ಮಾಳ್ಪೆನು ।
ಎನ್ನ ಪಿತನ ವೈರವೀಗ ನಿಲಿಸಿ ಕೊಡುವೆನು ॥೧೯೧॥

ಎನುತ ಬಿಟ್ಟ ಬಾಣವೃಷ್ಟಿ ಕಂಡು ಪಾರ್ಥನು ।
ಕನಲಿ ಕಡಿದು ಪ್ರತಿಶರೌಘ ಬಿಡಲು ದೈತ್ಯನು ॥೧೯೨॥

ಭರದಿ ಕಡಿದು ಮಾಯದಸ್ತ್ರವನ್ನು ಎಸೆಯಲು ।
ಉರುತರದಲಿ ಮಾಯವಾದುದೇನ ಪೇಳ್ವೆನು ॥೧೯೩॥

ಎಲ್ಲಿ ನೋಡೆಯಲ್ಲಿ ಕಾಸಾರಮುನಿಯ ಆಶ್ರಮ ।
ಎಲ್ಲಿ ನೋಡೆ ಯಜ್ಞಶಾಲೆ ದೇವಪೂಜೆಯು ॥೧೯೪॥

ಮನದಿ ನೋಡಿ ಪಾರ್ಥ ಬೆದರಿ ವೈಷ್ಣವಾಸ್ತ್ರವ ।
ಕನಲಿ ಬಿಡಲಿಕಾಗ ಮಾಯೆ ಸವರಿತೆಲ್ಲವ ॥೧೯೫॥

ಮಾಯೆ ಸವರಲಿಕ್ಕೆ ಖಳನು ರೋಷದಿಂದಲಿ ।
ಬಾಯ ಬಿಡುತ ಪಿಡಿದು ಒಯ್ವೆನೆಂದು ಭರದಲಿ ॥೧೯೬॥

ಬರುವುದನ್ನು ಕಂಡು ಪಾರ್ಥ ಬೆದರಿ ಸ್ಮರಿಸಿ ಹರಿಯನು ।
ಧನುವಿಗೇರಿಸಿದನು ಸರಳನಾಗ ವಿಜಯನು ॥೧೯೭॥

ಹತ್ತು ಬಾಣದಿಂದಲವನ ಮಸ್ತಕವನು ।
ಕತ್ತರಿಸುತ ಬಿಸುಟ ರಣಸಮರ್ಥ ಪಾರ್ಥನು ॥೧೯೮॥

**ಭಾಮಿನಿ (ಅರ್ಧ)**
ಚಿಂತಿಸುತ ಕಪಟವನು ಕಾಣುತ ।
ಲಿಂತು ಮುರಿದಾ ಭೀಷಣಾದ್ಯರ
ಕೌಂತೆಯನು ಬಲಸಹಿತ ದಕ್ಷಿಣಮುಖಕೆ ನಡೆತಂದ ॥೧೯೯॥

**ದ್ವಿಪದಿ**

ಭೂಪಾಲ ಕೇಳಿಂತು ಭೂರಿ ಬಲ ಸಹಿತ |
ದ್ವೀಪದ್ವೀಪವ ತೊಳಲಿ ದಿವಿಜೇಂದ್ರತನಯ ||೧೦೦||

ಗುಣವನಧಿ ಕೃಷ್ಣನನು ನೆನೆದು ನಡೆತಂದು |
ಮಣಿ ನಗರದಾ ಸಿರಿಯ ದೂರದೊಳ್ ಕಂಡು ||೧೦೧||

ಉಪವನದ ಮಧ್ಯದೊಳಗಿರುವ ತರುಲತೆಯ |
ಅಪರಿಮಿತ ಫಲ ಪುಷ್ಪ ಜಾಜಿ ಸೇವತೆಯ ||೧೦೨||

ಗೋಪುರದ ಚಾವಡಿಯ ಗೋಮೇಧಿಕದಲಿ |
ರೂಪಿಸಿದ ರೂಹುಗಳನೇಕ ಚಿತ್ರದಲಿ ||೧೦೩||

ನಗರದ್ವಾರದ ಮುಂದೆ ನವರತ್ನಕಂಭ |
ಸೊಗಸು ಇಮ್ಮಡಿಸುತಿದೆ ಸೂರ್ಯನಾ ಬಿಂಬ ||೧೦೪||

ಮಿಗೆ ಕುರುಜು ಮೇರುವೆಯು ಕಂಭ ಕಂಭದಲಿ |
ಬಗೆಬಗೆಯ ಚಿತ್ರಕವ ಬರೆದ ಬೊಂಬೆಯಲಿ ||೧೦೫||

ಹೇಮದಲಿ ರಚಿಸಿರುವ ಬಾಗಿಲ ಕವಾಟ |
ಸ್ತೋಮದಲಿ ಕೆತ್ತಿಸಿದ ಮಾಣಿಕದ ಮಾಟ ||೧೦೬||

ನೋಡಿ ಫಲಗುಣ ಹಂಸಕೇತನೊಡನಂದು |
ರೂಢಿಪಾಲಕನಿದಕದಾರು ಹೇಳೆಂದು ||೧೦೭||

ತುರಗ ತಡೆದೆಮ್ಮೊಡನೆ ತರುಬಿ ನಿಲುವಾತ |
ಅರಸು ಮಗನಾರಿದಕೆ ಪೇಳ್ ಹಂಸಕೇತ ||೧೦೮||

ಕೇಳಿದಾಕ್ಷಣ ಹಂಸಕೇತ ನಸುನಗುತ |
ಪೇಳಿದನು ಮಣಿಪುರದ ಸಂಗತಿಯನಾತ ||೧೦೯||

**ರಾಗ ಸೌರಾಷ್ಟ್ರ ಅಷ್ಟತಾಳ**

ನರನೆ ಕೇಳೀ ರಾಜ್ಯದರಸು ಶೇಷನ ಮೊಮ್ಮ |
ಬಭ್ರುವಾಹನ || ದಿಟ್ಟ |
ಪರಮ ಸದ್ಗುಣಿಯೀತ ಪರಮಾತ್ಮನ ಭಕ್ತ |
ಬಭ್ರುವಾಹನ ||೧೧೦||

ನೀತಿಶಾಸ್ತ್ರದೊಳತಿ ಖ್ಯಾತನೆಂದೆನಿಸುವ ।
ಬಭ್ರುವಾಹನ ॥ ಪುರು ।
ಹೂತನಾತ್ಮಜ ನಿನ್ನ ಕುದುರೆ ಕಟ್ಟುವನೀತ ।
ಬಭ್ರುವಾಹನ ॥೨೧೧॥

ಸಂಗರದೊಳಗತಿ ಖ್ಯಾತನೆಂದೆನಿಸುವ ।
ಬಭ್ರುವಾಹನ ॥ ರಣ ।
ರಂಗದೊಳಿದಿರಿಲ್ಲ ಬಲುಕಪ್ಪಗೊಂಬಾತ ।
ಬಭ್ರುವಾಹನ ॥೨೧೨॥

**ರಾಗ ಮಾರವಿ ಏಕತಾಳ**
ಮರಾಳಧ್ವಜನ ನುಡಿ ನರನು ಲಾಲಿಸಿ ಕೇಳೆ ।
ಭರದಿಂದಂಬರವಿಳಿದು ಪಕ್ಷಿನಿವಾಳಿ ॥೨೧೩॥

ಮೃತ್ಯುವಿನಂತೆ ಮಸ್ತಕದಿ ನಿಂತು ಕಾಲೂರಿ ।
ಗುರುತದವಶಕುನವ ಪಾರ್ಥಗೆ ತೋರಿ ॥೨೧೪॥

ಯೌವನಾಶ್ವ ಮುಂತಾಗಿ ಅವಶಕುನವ ಕಂಡು ।
ಅವನಿಪರೆಲ್ಲ ಮನದಿಯಂಜಿ ಭ್ರಮೆಗೊಂಡು ॥೨೧೫॥

**ಭಾಮಿನಿ**
ಧಾರಿಣೀಪತಿ ಕೇಳು ಫಲುಗುಣ ।
ನೀ ಪರಿಯೊಳಿರುತಿರಲು ಅತ್ತಲು ।
ವಾರಿಧಿಯ ಘೋಷದಲಿ ಪೊಕ್ಕುದು ಅಶ್ವ ಮಣಿಪುರಕೆ ॥
ವೀರ ವನಪಾಲಕರು ನೋಡುತ ।
ಸಾರಿ ವನದೊಳು ಪೊಕ್ಕು ಕುದುರೆಯ ।
ಕಾರ ನೋಡಲು ಭಯದಿ ಪೇಳ್ದರು ಬಭ್ರುವಾಹನಗೆ ॥೨೧೬॥

**ರಾಗ ಕಾಪಿ ಏಕತಾಳ**
ಸಲಾಮು ತಕ್ಕೋ ಮಣಿಪುರದೊರೆಯೆ ।
ಗುಲಾಮ ನಿನ್ನ ಮಗ ದಿವಾಳಿ ಹನುಮ ।
ಭರದೀ ಬಂದೆ ನಿನ್ನ ದರುಶನಕೆ ॥
ಏ ಪರಾಕು ದೊರೆಯೆ ॥೨೧೭॥

ಎದೆಯೊಳು ದಡುಬುಡುಗುಟ್ಟುತಯ್ತೆ ।
ಬೆದರಿಕೆಯಿಂದ ಬಾಯಾರುತಯ್ತೆ ।

ಅಭಯ ಕೊಟ್ಟರೆ ಪೇಳ್ವೆ ನಮ್ಮ ಸ್ವಾಮಿ ||
ಏ ಪರಾಕು ದೊರೆಯೆ ||೧೦೮||

ಗಜಪುರದರಸನ ತಮ್ಮ ಪಾರ್ಥ |
ಭರದಿ ಯಾಗದ ಹಯವ ಕೊಂಡು |
ಭರದಿ ನಮ್ಮುಪವನಕೆ ಬಂದನೆ ||
ಏ ಪರಾಕು ದೊರೆಯೆ ||೧೦೯||

ಭರದಿ ನಮ್ಮುಪವನದೊಳಗೆ ಇರುವ |
ಬಂಗೀಬರಮನ ಹಿಡಿದುಕೊಂಡು |
ಬರೆದ ಸುಣ್ಣ ಅವನ ಮೂಗಿಗೆ ||
ಏ ಪರಾಕು ದೊರೆಯೆ ||೧೧೦||

ಹೋಗು ಹೋಗು ಛೀ ಸೂಳೆಯರವನೆ |
ಸಾಕಿದವನ ಕರೆತಾರೆಂದು |
ಭೀಕರದಿಂದ ಬಡಿದಟ್ಟಿದರೆನ್ನ ||
ಏ ಪರಾಕು ದೊರೆಯೆ ||೧೧೧||

ಮರುಗಾ ಮಲ್ಲಿಗೆ ಶೇವಂತಿಗೆಯು |
ಸುರಗಿಬುಡವು ಸಹಿತಲಾಗ |
ತರಿದೊಟ್ಟಿದರೆನ್ನ ಭಂಗಿಬುಡಸಹಿತ ||
ಏ ಪರಾಕು ದೊರೆಯೆ ||೧೧೨||

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಕಾಯದಲಿ ಕಳವಳಿಸಿ ಚಾರಕ |
ರಾಯನರ್ಜುನಿಗೆರಗಿ ಪೇಳ್ದರು |
ಜೀಯ ಬಂದರು ನಮ್ಮ ಪುರಕರಿ | ರಾಯರುಗಳು ||೧೧೩||

ಆಯದಲಿ ಪೊಕ್ಕಿರುವರೆಂಬವು |
ಪಾಯದಲಿ ಉಪವನದ ಮಧ್ಯದಿ |
ವಾಹಿನಿಯ ನಿಲಿಸುತ್ತ ಬಿಟ್ಟರು | ವಾಜಿ ಪುರಕೆ ||೧೧೪||

ಮುತ್ತಿದುದು ಸೇನಾಸಮುದ್ರವು |
ಕತ್ತರಿಸಿ ವನ ಕೆಡಹೆ ಕರಿಗಳು |
ಚಿತ್ತವಿಸು ರಣಧೀರ ಅಭಯವ | ನಿತ್ತು ನಮಗೆ ||೧೧೫||

**ಭಾಮಿನಿ (ಅರ್ಧ)**

ಚರರಿಗಭಯವನಿತ್ತು ಫಲುಗುಣಿ ।
ಪುರದ ದುರ್ಗವ ಬಲಿದು ಕುದುರೆಯ ।
ಕರೆದು ಕಾವಲನಿತ್ತು ತೆರಳಿದ ಸಿಂಹವಿಷ್ಟರಕೆ ॥

**ರಾಗ ಕೇದಾರಗೌಳ ಅಷ್ಟತಾಳ**

ಉತ್ತಮ ಮಣಿಪುರದರಸನ ಚಾವಡಿ । ಹತ್ತು ಸಾವಿರ ಕಂಭದಿ ॥
ಕೆತ್ತಿದ ಹವಳ ಮಾಣಿಕ ಮುತ್ತು ವೈಡೂರ್ಯ । ರತ್ನದ ಪ್ರಭೆಗಳಲಿ ॥೧೧೭॥

ಸುತ್ತಗೋಡೆಯ ಮೇಲೆ ಸುರನರಲೋಕದ । ವಿಸ್ತರಗಳ ರಚಿಸಿ ॥
ಪುತ್ಥಳಿಬೊಂಬೆಯ ನಿಲಿಸಿದರಾನೇಕ । ವಸ್ತು ಪಟ್ಟಾವಳಿಯ ॥೧೧೭॥

ಕಂಭಕಂಭದೊಳ್ ಬರೆಸಿದ ರತ್ನ ಖಚಿತದ । ಬೊಂಬಾಳ ದೀವಿಗೆಯು ॥
ಬಿಂಬದೋಲಗಕಾಗಿ ಭಟ ಬಭ್ರುವಾಹನ । ಸಂಭ್ರಮದಲಿ ಬಂದನು ॥೧೧೮॥

ॐ

**ಭಾಮಿನಿ**

ಓಲಗವನಿತ್ತಖಿಳ ರಾಯರ ।
ಜಾಲವನು ಮನ್ನಿಸುತ ಫಲುಗುಣಿ ।
ಮೂಲಮಂತ್ರಿ ಸುಬುದ್ಧಿಯೊಡನಿಂತೆಂದನೀ ಹದನ ॥
ಕೋಲನಾಯಕರಾದ ದೊರೆಗಳು ।
ಮೇಳವಿಸಿಕೊಂಡಿರಲಿ ಧರಣೀ ।
ಪಾಲಕರ ಕುದುರೆಂಬುದೇನಾಯ್ತೆಂದು ಬೆಸಗೊಂಡ ॥೧೧೯॥

**ರಾಗ ಮಾರವಿ ಏಕತಾಳ**

ಆರ ವಾಜಿ ನೋಡಿರಯ್ಯ । ವೀರ ಮಂತ್ರೀಶ ॥
ಗಾರು ಆಗದಿರಿ ಕಂಡು । ಭೂರಿ ಮಾರ್ಬಲದ ದಂಡು ॥
ಆರ ಮಾಜಿ ನೋಡಿರಯ್ಯ ॥ ಪ ॥

ಮಲ್ಲಭಟರೊಡಗೂಡಿ । ಮಸ್ತಕದ ಲಿಖಿತ ನೋಡಿ ॥
ಬಲ್ಲಿದ ವಾಜಿಯನೆನ್ನ । ಬಳಿಗೆ ತಾರಯ್ಯ ಮುನ್ನ ॥೧೨೦॥

ತಂದು ಹಯವ ಮಂತ್ರೀಶನು । ಇಂದ್ರಜಾತತನಯನ ॥
ಮುಂದೆ ನಿಲಿಸಿ ಮಸ್ತಕದಿ । ಬಂಧಿಸಿರುವ ಲಿಖಿತ ಬಿಚ್ಚಿ ॥೧೨೧॥

**ಭಾಮಿನಿ (ಅರ್ಧ)**

ಪತ್ರಿಕೆಯ ಕಲಿ ಬಭ್ರುವಾಹನ ।
ನಿತ್ತು ಕರಣಿಕರೊಡನೆ ವಾಚಿಸೆ ।
ವಿಸ್ತರಿಸಿ ಕೇಳಿದರು ಪರಿವಾರಾದಿ ನಾಯಕರು ॥

**ರಾಗ ತೋಡಿ ಅಷ್ಟತಾಳ**

ಸೋಮವಂಶಜ ಸಾಧುಗುಣ ಧೀರ ಯಮಜಾತ ।
ಭೀಮಬಲಾನ್ವಿತನು ॥
ಭೂಮಿಗಧಿಕವಾದ ಭಟ ಮೂರು ಲೋಕದ ।
ಭೂಮಿಪಾಲರೊಳ್ ಶ್ರೇಷ್ಠನು ॥೧೩೧॥

ಹಸ್ತಿನಪುರಪತಿ ಅಜವಿಷ್ಣುಹರಪ್ರೀತಿ ।
ಸ್ವಸ್ಥದಿಂದಲಿ ಪಡೆದು ॥
ವಿಸ್ತರದಲಿ ರಚಿಸಿದ ಯಜ್ಞಹಯವಿದು ।
ಶಕ್ತಿಗಾರರು ಕಟ್ಟುದು ॥೧೩೩॥

**ರಾಗ ಆನಂದಭೈರವಿ ಅಷ್ಟತಾಳ**

ಚಿತ್ರಾಂಗದೆಯ ನಂದನ । ಓಲೆಯ ನೋಡಿ ವಿ ।
ಚಿತ್ರವಾಯಿತು ಎಂದನು ॥
ಹಸ್ತಿನಾಪುರಪತಿಯೆನಗೆ ಒಡೆಯನಲ್ಲ ।
ಸ್ವಸ್ತಿರವೇನು ಪಾಂಡವರು ತಾ ಶಿವನಂತೆ ॥೧೩೪॥

ಕರೆದು ಕಾವಲಿಗಟ್ಟಿದ । ಬಭ್ರುವಾಹನ ।
ತುರಗ ಲಾಯದಿ ಕಟ್ಟಿದ ॥
ಪರಮಂಡಲೀಕರ ನೆರಹಿ ಪಾರ್ಥನೊಡನೆ ।
ಧುರಕೆ ನಿಲ್ಲುವುದೆಂದು ಒರೆದ ಮಂತ್ರೀಶಗೆ ॥೧೩೫॥

**ಭಾಮಿನಿ (ಅರ್ಧ)**

ದೇವಿ ಚಿತ್ರಾಂಗದೆಯ ದೂತಿಯು ।
ಕೋವಿದಶ್ವವ ತಡೆದ ಪಾರ್ಥಿಯ ।
ಠೀವಿಯನು ನೋಡುತ್ತ ಮರೆಯಲಿ ನಿಂದು ಭಯಗೊಂಡು ॥

**ರಾಗ ರೇಗುಪ್ತಿ ಅಷ್ಟತಾಳ**

ತುರಗ ಲಿಖಿತ ದಾಳಿ । ತರುಣಿ ಕಟಕಿ ಕೇಳಿ ।
ಅರಸಿಗರುಹಲೆಂದು । ಹರುಷದಿಂದಲಿ ಬಂದು ॥೧೩೬॥

ಮಾತೆಯೆನ್ನ ಬಿನ್ನಪವ । ಪ್ರೀತಿಯಿಂದ ಲಾಲಿಸವ್ವ ।
ಭೂತಳೇಶರಿಂದುಕುಲ । ಜಾತರು ಧರ್ಮಾನುಜರಂತೆ ॥೧೩೭॥

ಯಾಗವ ರಚಿಸಿ ಕಪ್ಪ । ಕಾಗಿ ಹಯಗೊಂಡು ಪಾರ್ಥ ।
ಸಾಗಿ ಬಂದ ನಮ್ಮ ಮೇಲೆ । ಸುಳ್ಳಲ್ಲ ಸುಗುಣಶೀಲೆ ॥೧೩೮॥

**ಭಾಮಿನಿ (ಅರ್ಧ)**
ಮಿತ್ರೆ ಕಟಕಿಯ ನುಡಿಯ ಕೇಳುತ ।
ಪುತ್ರನನು ಕೋಪದಲಿ ಬಯ್ಯುತ ।
ಮತ್ತೆ ಚಿತ್ರಾಂಗದೆಯು ಕೇಳ್ದಳು ಅರ್ಜುನನ ಹದನ ॥

**ರಾಗ ಸಾವೇರಿ ಆದಿತಾಳ**
ಅಹುದೆ ಎನ್ನಯ ರಮಣ । ಏ ಸಖಿಯೇ ।
ಅಹುದೆ ಎನ್ನಯ ರಮಣ ॥ ಪ ॥

ಅಹುದೇನೆ ಪಾರ್ಥನೆಂಬವನ ಕಾಣದೆ ಬಲು ।
ದಿನವಾಯಿತದರಿಂದ ಬಳಲಿ ಬೆಂಡಾದೆನು ॥ ಅಹುದೆ ॥ ಅ ॥

ಚಂದ್ರಗಾವಿಯ ಶಾಲೆ । ಕೊಡುವೆ ನುಡಿ ।
ಚಂದದಿಂದಲಿ ಬಾಲೆ ।
ಇಂದ್ರನಂದನನಿದಿರಾಗಿ ಮಣಿಪುರಕೆ ।
ಬಂದ ಸಕಲ ಸೇನೆಯಿಂದೆಂಬ ವಾರ್ತೆಯ ॥ ಅಹುದೆ ॥೧೩೯॥

ಹಸ್ತಕಡಗವೀವೆ । ಪೇಳೆನಗದು ।
ಸ್ವಸ್ಥದಿಂದಲಿ ಬಾಲೆ ॥
ಹಸ್ತಿನಾಪುರಾಧೀಶ ಅರಿಗಳೆದೆಗಂಕುಶ ।
ಸ್ವಸ್ತಿರವೇನೆ ಸಹಜಾತ ಬಂದಿಹ ಸೇನೆ ॥ ಅಹುದೆ ॥೧೪೦॥

**ವಚನ**
ಇಂತೆಂದು ಚಿತ್ರಾಂಗದೆಯು ನುಡಿಯಲಾಗಿ ಸಖಿಯು ಏನೆಂದಳು ಎಂದರೆ -

**ರಾಗ ತೋಡಿ ಏಕತಾಳ**
ತಾಯೆ ಕೇಳ್ ಫಲುಗುಣನ । ಜಾಯೆಯೆಂದರಿಯದೆ ।
ಆಯತಪ್ಪಿತು ಮುಂದು । ಪಾಯವೇನಿದಕೆ ॥೧೪೧॥

ಚಿತ್ರಾಂಗದೆಯೆ ನಿನ್ನ । ಪುತ್ರ ವಾಜಿಯ ಕಟ್ಟಿ ।
ಮಂತ್ರಿಗೊರೆದ ಹರ । ನೇತ್ರಕೋಪದಲಿ ॥೧೪೨॥

ಸೇನೆಗಪ್ಪಣೆಕೊಟ್ಟು । ತಾನೆಯರ್ಜುನನೊಳ್ ಮುಂ ।
ಜಾನೆ ನಿಲ್ಲುವ ಮರಿ । ಯಾನೆಕೇಳವ್ವ ॥೧೪೩॥

**ಭಾಮಿನಿ (ಅರ್ಧ)**
ಸಿಂಗರಿಸಿಯುರಗೇಂದ್ರನಂದನೆ ।
ಯಂಗಜನ ಮದದಾನೆಯಂದದಿ ।
ಅಂಗನೆಯರೊಡಗೂಡಿ ಬಂದಳು ಮಗನ ಪೊರೆಗಾಗಿ ॥

**ರಾಗ ದೇಶಿ ಅಷ್ಟತಾಳ**
ನಾರಿ ಚಿತ್ರಾಂಗದೆ । ಬಂದಳ್ ಹರುಷದಿಂದ ।
ಸಾರಸನೇತ್ರೆಯು ತನ್ನ । ಪುರುಷನ್ನ ಪೊಗಳುತ್ತ ॥೧೪೪॥

ಅಂದಣವಿಳಿದು ತಾಯಿ । ಗೊಂದಿಸೆ ಬಭ್ರುವಾಹನ ।
ಕಂದನ ಕಾಣುತ ಕೋಪ । ದಿಂದ ಬಿಗಿದಪ್ಪಿದಳು ॥೧೪೫॥

**ರಾಗ ನೀಲಾಂಬರಿ ತ್ರಿವುಡೆತಾಳ**
ಮಗನೆ ನೀ ಮತಿಗೆಟ್ಟು ನಡೆವರೆ । ಕುಂತಿ ।
ಮಗನ ವಾಜಿಯ ಕಟ್ಟಿ ತಡೆವರೆ ॥
ಸೊಗಸೆ ಸಿಂಹನೊಡನೆ ವೃಷಭಗೆ । ಹಗೆ ।
ಮಿಗುವರಿದರೆ ಬದುಕುವುದ್ಧೇಗೆ ॥೧೪೬॥

ವಾರಿಧಿ ಮಥಿಸೆ ಅಮೃತಕಾಗಿ । ವಿಷ ।
ದೋರಿದಂತೆ ಪುಟ್ಟಿದೆ ಕಂದ ॥
ವೀರ ಅರ್ಜುನನ ವೈಭವದಿಂದ । ಕರೆ ।
ತಾರೆಲೋ ನಿನಗೆ ಒಳ್ಳಿತು ಕಂದ ॥೧೪೭॥

ಕಟ್ಟಾಳು ನರ ಮೂರುಲೋಕಕೆ । ಅಶ್ವ ।
ಕೊಟ್ಟೊಡಂಬಡಿಸಿ ವಿವೇಕಕೆ ॥
ಕೃಷ್ಣಮೈದುನನೊಳು ಛಲ ವ್ಯರ್ಥ । ನಿನ್ನ ।
ದಿಟ್ಟತನಕೆ ಅಂಜುವನೆ ಪಾರ್ಥ ॥೧೪೮॥

ಮಂದಬುದ್ಧಿಯನು ನೀ ಮಾಡದೆ । ಮುಂದೆ ।
ಕುಂದನೊಂದನು ನಮಗೆ ತಾರದೆ ।
ತಂದೆಗೆರಗೊ ನೀ ವೈಭವದಿಂದ । ಕರೆ ।
ತಂದು ಪಾದಕೆರಗೆಲೊ ಕಂದ ॥೧೪೯॥

**ವಚನ**

ಇಂತೀ ಚಿತ್ರಾಂಗದೆಯು ನುಡಿಯಲಾಗಿ ಬಭ್ರುವಾಹನನು ಏನೆಂದನು ಎಂದರೆ -

**ರಾಗ ಕಾಂಭೋಜಿ ಏಕತಾಳ**

ತಪ್ಪ ಪಾಲಿಸಿಕೊಂಬುದೆಲೆ ತಾಯೆ । ಎನ್ನ ।
ಅಪ್ಪನೆಂದರಿಯದಾದೆನೆಲೆ ತಾಯೆ ॥೨೫೦॥

ಕ್ಷತ್ರಿಪಂಥಕಾಗಿ ನಾನು ಎಲೆ ತಾಯೆ । ಕೃಷ್ಣ ।
ಮಿತ್ರನ ವಾಜಿಯ ತಡೆದೆನೆಲೆ ತಾಯೆ ॥೨೫೧॥

ತಾತನೆಂಬುದೆಂತು ಪೇಳು ಎಲೆ ತಾಯೆ । ಅವನ ।
ಜಾತನು ನಾನೆಂಬುದೆಂತು ಎಲೆ ತಾಯೆ ॥೨೫೨॥

ಬುದ್ಧಿಯೇನಿದಕೆ ಪೇಳು ಎಲೆ ತಾಯೆ । ಮುಂದೆ ।
ಸಿದ್ಧಿಯಾಗುವಂತೆ ಮಾಡು ಎಲೆ ತಾಯೆ ॥೨೫೩॥

**ವಚನ**

ಇಂತೆಂದು ಬಭ್ರುವಾಹನನು ನುಡಿಯಲಾಗಿ ಚಿತ್ರಾಂಗದೆಯೇನಂದಳು ಎಂದರೆ -

**ರಾಗ ತೋಡಿ ಏಕತಾಳ**

ಕಂದ ಕೇಳೆಲೊ ಪಾರ್ಥ । ನಂದು ತೀರ್ಥಯಾತ್ರೆಗೆ ।
ಬಂದು ಕೂಡಿದ ನೆನ್ನ । ಮಿಂದಾರು ದಿವಸ ॥೨೫೪॥

ಇಂದುಕುಲಜನೊಲಿ । ದಂದು ಗರ್ಭವ ತಾಳ್ದೆ ।
ತಂದೆಗೊಪ್ಪಿಸು ರಾಜ್ಯ । ವೆಂದಳಾ ಜನನಿ ॥೨೫೫॥

ನಡನಡುಗಿ ಬಭ್ರುವಾಹನ । ನುಡಿಯ ಕೇಳುತ ಮಾತೆ ।
ಯಡಿಗೆರಗಿ ಬೀಳ್ಗೊಂಡ । ಕಡು ಹರುಷದಿಂದ ॥೨೫೬॥

**ಭಾಮಿನಿ (ಅರ್ಧ)**

ಜನನಿಯತ್ತಲು ಕಳುಹಿ ಫಲುಗುಣಿ ।
ಮನದಿ ಹರುಷವ ತಾಳಿ ತನ್ನೊಳು ।
ವಿನಯದಿಂ ಮಂತ್ರಿಯನು ಕರೆದಿಂತೆಂದನೀ ಹದನ ॥

**ರಾಗ ತೋಡಿ ಅಷ್ಟತಾಳ**

ಏನಯ್ಯಾ । ಮಂತ್ರಿ । ಏನಯ್ಯಾ ॥
ಏನಯ್ಯ ಲೂಪಿಚಿತ್ರಾಂಗದೆಯರ ಮಾತು ।
ಆ ಪಾಂಡುತನಯನೆನಗೆ ತಾತನಂತೆ ॥ ಏನಯ್ಯಾ ॥ ಪ ॥

ಭಾಷೆಗುರುತವಿತ್ತು ತೆರಳಿದನಂದು ॥
ವಾಸವಸುತ ಯಜ್ಞನೆವದಿಂದ ಬಂದು ॥
ಬೇಸರಿಲ್ಲದೆ ಬೇಗ ಕರೆದು ತಾರೆಂದು ।
ಆ ಶೇಷಸುತೆಯೆನಗರುಹಿದಳಿಂದು ॥ ಏನಯ್ಯಾ ॥೧೫೭॥

ಮೊದಲೆ ತುರಗ ಕಟ್ಟಿದೆನು ಮನಕಾಗಿ ।
ಸದರ ನಿಲ್ಲುವುದಕ್ಕೆ ಬೆದರಿ ನಾ ಪೋಗಿ ॥
ಪದಕೆರಗಿದರೆ ಹಯವು ಮುಂತಾಗಿ ।
ಚದುರ ಕೇಳುವನಲ್ಲವಿದಕೆ ಲೇಸಾಗಿ ॥ ಏನಯ್ಯಾ ॥೧೫೮॥

**ರಾಗ ಭೈರವಿ ಝಂಪೆತಾಳ**
ರಾಜರಾಜಾಧೀಶ । ಅರಿತರೆಮಗದು ದೋಷ ।
ವಾಜಿ ಕಟ್ಟಿದರೇನು । ಪರಿಹರಿಪೆ ನಾನು ॥೧೫೯॥

ತಾಯಿ ಪೇಳಿದ ಮೇಲೆ । ತಪ್ಪು ತಿಳಿಯಿತು ಎನಗೆ ।
ಕಾಯಬೇಕೆಂದೆರಗು । ಹಯವಿತ್ತು ನರಗೆ ॥೧೬೦॥

ನಗರವನು ಶೃಂಗರಿಸು । ನವರತ್ನಗಳ ತರಿಸು ।
ದಿವಿಜೇಂದ್ರಸುತಗೆರಗು ಯಾಗಹಯವಿತ್ತು ॥೧೬೧॥

ಕೈಯ ಮೀರುವ ಮೊದಲೆ । ಕರೆಸು ವೈಭವದಿಂದ ।
ಅಯ್ಯಗೊಪ್ಪಿಸು ರಾಜ್ಯ । ನಿಖಿಳ ಸಂಪದವ ॥೧೬೨॥

**ಭಾಮಿನಿ**
ಏನನೆಂಬೆನು ಅರಸ ಕುಂತೀ ।
ಸೂನುವಿನ ಕಾಣಿಕೆಗೆ ತೆಗೆಸಿದ ।
ಮಾಣಿಕವ ಮುತ್ತುಗಳ ವೈಢೂರ್ಯಾದಿ ವಸ್ತುಗಳ ॥
ಮಾನನಿಧಿ ಪಾರ್ಥಜನು ತರಿಸಿದ ।
ಮಾನಿನಿಯರಾ ನಾಗನಗರದ ।
ನಾನ ಪರಿಮಳ ಗಂಧಕಸ್ತುರಿ ವಸ್ತ್ರದಾಭರಣ ॥೧೬೩॥

**ರಾಗ ಸಾವೇರಿ ಝಂಪೆತಾಳ**
ಬಂದಾ ಬಭ್ರುವಾಹನ । ಬಲು ವಾದ್ಯರವದಿಂದ ॥
ಇಂದ್ರಜಾತನಕಾಂಬೆ । ನೆಂಬ ತವಕದಲಿ ॥ ಪ ॥

ಅಂದಣವೇರಿಯಧ್ವರತುರಗವು ಸಹ ।
ಪೊಂದಳಿಗೆಯ ಸೇಸೆಗೊಂಡು ॥

ಮಂದಯಾನೆಯರ್ ಮುತ್ತು ಕಲಶಗನ್ನಡಿಸೊಗ ।
ಸಿಂದ ಪಿಡಿದು ಬರೆ ಮಂದಿಘೋಷದಲಿ ॥೧೬೪॥

ಪ್ರಮುಖಾದಿಗಳು ಕೇಳಿ ಪ್ರಬಲ ಪಾಂಡವರಿಗೆ ।
ರಮಣಿಯೈವರಿಗೊರ್ವಳಂತೆ ॥
ಯಮಜಾತನೆಲ್ಲರ್ಗೆ ಹಿರಿಯ ಭೂಪತಿಯಂತೆ ।
ಎಮಗೆ ಕಾಂಬುವುದಕೆ ಅಣಿಯು ಎಂತಹುದೊ ॥೧೬೫॥

ತಂಡತಂಡದಿ ಪಾಠಕರ ವೀಣಾರವದಿಂದ ।
ಹಿಂಡು ಸತಿಯರ ಶೋಭಾನದಿ ॥
ಅಂಡಲ ಬಿರಿವುತಯ್ತಂದು ಪಾರ್ಥನ ಪಾದ ।
ಕಂಡೆರಗಿದ ಹಯವಿತ್ತು ತಾ ಮುದದಿ ॥೧೬೬॥

**ಭಾಮಿನಿ (ಅರ್ಧ)**
ಬಭ್ರುವಾಹನ ಪದಕೆ ಮಾಣಿಕ ।
ಮುತ್ತು ರತ್ನವ ಸುರಿದುಯೆರಗಲು ।
ವಿಭ್ರಮಿಸಿ ಫಲುಗುಣನು ಇವನಾರೆಂದು ಬೆಸಗೊಂಡ ॥

**ರಾಗ ಕಾಂಭೋಜಿ ಏಕತಾಳ**
ಆವ ರಾಯನಾತ್ಮಜನೊ ವೀರನೀತ । ನಮ್ಮ ।
ಕೋವಿದಶ್ವ ತಡೆದುಕೊಂಡ ವೀರನೀತ ॥೧೬೭॥

ಮಂತ್ರಿಮಾರ್ಬಲಗಳಿದ್ದು ವೀರನೀತ । ಹಯ ।
ಮುಂತಾಗಿ ಮರಳಿ ತಂದ ವೀರನೀತ ॥೧೬೮॥

ಯಾತರ ಕುಲಾಧಿಪನೊ ವೀರನೀತ । ಬಂದು ।
ಸೋತು ಪಾದ ಕಟ್ಟಿಕೊಂಡ ವೀರನೀತ ॥೧೬೯॥

ಷಂಡರಂತೆ ಬಂದು ಬೇಗ ವೀರನೀತ । ನಮಿಸೆ ।
ಗಂಡುಸಲ್ಲವೇನೊ ನೋಡೆ ವೀರನೀತ ॥೧೭೦॥

**ವಚನ**
ಇಂತೆಂದು ಅರ್ಜುನನು ನುಡಿಯಲಾಗಿ ಬಭ್ರುವಾಹನನು ಏನೆಂದನು ಎಂದರೆ -

**ರಾಗ ರೇಗುಪ್ತಿ ಅಷ್ಟತಾಳ**
ತಾತ ಬಿನ್ನಪ ಕೇಳೆನ್ನ । ಮಾತ ಲಾಲಿಸೋ ॥
ಭೂತಳೇಶ ನಾ ಮಾಡಿದ । ಪಾತಕವುದ್ಧರಿಸಯ್ಯ ॥೧೭೧॥

ಪಾರ್ಥಿವಪಂಥದಿ ಹಯ । ಕರ್ತವ್ಯವೆಂದು ಕಟ್ಟಿದೆ ।
ತೀರ್ಥಯಾತ್ರೆಗೆ ನೀ ಬಂದ । ಗುರ್ತ ಪೇಳ್ದಳು ಜನನಿ ॥೨೭೨॥

ತಾಯಿ ಚಿತ್ರಾಂಗದೆ ಲೂಪಿ । ಪ್ರೀಯದಿ ಸಾಕಿದರೆನ್ನ ।
ಪ್ರೀಯೆಯುಳ್ಳಡೆ ನಿನಗೆ । ಸ್ತ್ರೀಯರು ಬರಪೇಳ್ದರಯ್ಯ ॥೨೭೩॥

ನಿನ್ನ ತನುಜ ಬಭ್ರುವಾಹನ । ನೆಂಬ ಪೆಸರಿನಿಂದಲೀಗ ।
ಉನ್ನತ ಮಣಿಪುರದಿ । ಮಾನ್ಯಾಧಿಪತಿ ನಾನಾದೆ ॥೨೭೪॥

ಸಹಜ ಧರ್ಮಜನ ಯಜ್ಞ । ವಾಜಿ ತಡೆದ ತಪ್ಪಿಗಾಗಿ
ಮೂಜಗದವೀರ ನಿನಗೆ । ರಾಜ್ಯವೊಪ್ಪಿಸಿ ಕೊಡುವೆ ॥೨೭೫॥

**ವಾರ್ಧಕ (ಅರ್ಧ)**
ಭೂಪಾಲ ಕೇಳಿಂತು ಬಭ್ರುವಾಹನ ನುಡಿಯೆ ।
ಕೋಪದಿಂ ಕೌಂತೇಯ ಮೊಗವ ತಿರುಹುತ್ತಿರಲು ।
ಈ ಪರಿಯಿದೇನೆಂದು ಅನುಸಾಲ್ವ ಹಂಸಧ್ವಜಾದಿಗಳು ಇಂತೆಂದರು ॥

**ರಾಗ ನವರೋಜು ಅಷ್ಟತಾಳ**
ಇಂದ್ರಜಾತ ಕೇಳು ಮಾತ । ಇಂದುಕುಲಾಧಿಪ ಖ್ಯಾತ ।
ಕಂದನೊಳಿಷ್ಟು ಕೋಪವಿದೇಕೆ ಪರಾಕೆ ॥೨೭೬॥

ಅರ್ಕಲಾವಣ್ಯನಾಗಿರ್ಪ । ಮದನ ನಿನ್ನಂತೆ ರೂಪ ।
ಪ್ರಕೃತಿ ತಿಳಿದು ಮಾತಾಡಯ್ಯ ಪರಮಪ್ರಿಯ ॥೨೭೭॥

ತಪ್ಪಿಗೆ ಅಂಜುವನಲ್ಲ । ತಾಮಸದೊಳು ಕುಂದಿಲ್ಲ ।
ಅಪ್ಪನೆಂಬ ಭಕ್ತಿಗಾಗಿ ಬಂದಲೇಸಾಗಿ ॥೨೭೮॥

**ರಾಗ ಮಧುಮಾಧವಿ ಆದಿತಾಳ**
ಹಂಸಕೇತನಾದಿಗಳೆಲ್ಲ ಕೇಳಿ । ವಂಶಾಪರಾಧಿಗುಪಾಯವ ಪೇಳಿ ॥ ಪ ॥

ಎನ್ನಾತ್ಮಜನಾದರೆ ತಡೆದ ಯಜ್ಞದ ವಾಜಿ ।
ಬಿನ್ನಾಣದಲಿ ತಂದು ಮರಳಿಯಿತ್ತು ॥
ಹೊನ್ನಕಾಣಿಕೆ ಕೊಟ್ಟು ಹೊರಳಿ ಪಾದದ ಮೇಲೆ ।
ತನ್ನೊಳು ಭೀತಿಗೊಂಡು ತಲೆಯ ತಗ್ಗಿಪನೆ ॥ ಹಂಸಕೇತ ॥೨೭೯॥

ಚಿತ್ರಾಂಗದೆಯು ತನ್ನ ಮಿತ್ರರೊಡನೆ ಕೂಡಿ ವಿ ।
ಚಿತ್ರ ಗರ್ಭವ ತಾಳಿ ಪಡೆದೀತನ ॥

ಕ್ಷತ್ರಿಕುಲದವರು ಶರಣುಬರುವುದುಂಟೆ ।
ಪುತ್ರ ಗಂಧರ್ವರ ಕುಲಕೆ ಪುಟ್ಟಿದನೀತ ॥ ಹಂಸಕೇತ ॥೨೮೦॥

ಕಂದರೆನಗೆ ಇಲ್ಲ ಕಾಂತೆ ಸುಭದ್ರೆಯೊಳು ।
ನಂದನನಭಿಮನ್ಯುವೊರ್ವ ತಾ ಪುಟ್ಟಿ ॥
ಮುಂದುವರಿದು ರಣದಿ ಮುರಿದುರಾಯರನೆಲ್ಲ ।
ಸಂದನು ಸುರಪುರಕೆ ಇಂದುಕುಲಾಧಿಪನು ॥೨೮೧॥

**ಭಾಮಿನಿ**
ಫಲುಗುಣನು ನುಡಿಯಲ್ಕೆ ಮೀಸೆಯ ।
ನಲುಗಿ ತಿರುಹುತ ಬಭ್ರುವಾಹನ ।
ನನಲನಂತಕ್ಷಿಗಳು ಕೆಂಪಡರಿದುವು ನಿಮಿಷದಲಿ ॥
ಎಲವೊ ಎನ್ನಯ ಜನನಿಯಿಕ್ಕಿದ ।
ಬಲೆಗೆ ಸೈರಿಸಿದೊಮ್ಮೆ ನಿನ್ನಯ ।
ತಲೆಯಕೊಂಬೆನು ತೃಣಕೆ ಬಲಸಹಿತೆಂದು ಗರ್ಜಿಸಿದ ॥೨೮೨॥

**ರಾಗ ಶಂಕರಾಭರಣ (ಪಂಚಾಗತಿ) ಮಟ್ಟೆತಾಳ**
ತಾತ ಫಲುಗುಣ । ಕೇಳು ನಿನ್ನಯ ।
ಜಾತನೆನಿಸುವೆ । ಜನರ ಮಧ್ಯದಿ ॥೨೮೩॥

ಚಿತ್ರಾಂಗದೆಯರ । ಬೈದು ಭಂಗಿಸಿ ।
ಪುತ್ರನಲ್ಲೆಂದು । ಜರೆದೆಯೆನ್ನನು ॥೨೮೪॥

ಎನ್ನ ಉದ್ಭವ । ವೈಶ್ಯನೆಂದೆಲಾ ।
ಮುನ್ನವಾಡಿದ । ಗುರುತ ಕಟ್ಟಿಕೊ ॥೨೮೫॥

ನಿನ್ನ ರಣದಲಿ । ಕೆಡಹದಿರ್ದರೆ ।
ಪನ್ನಗೇಂದ್ರನ । ಮೊಮ್ಮನೇಯಲ್ಲ ॥೨೮೬॥

ಮಿತ್ರ ಕೃಷ್ಣನ । ಕರೆಸಿಕೊಂಡಿರು ।
ಕ್ಷತ್ರಿ ಪಂಥವ । ನೀಗತೋರುವೆ ॥೨೮೭॥

ಮಂತ್ರಿಶೇಖರ । ಮಾನಿನೀಯರ ।
ಮೊತ್ತ ನಡೆಯಲಿ । ಪುರಕೆ ಶೀಘ್ರದಿ ॥೨೮೮॥

ಕುಂತಿಸುತನೊಳು । ಕಾದುವುದಕ್ಕೆ ।
ಪಂಥವುಳ್ಳಡೆ । ಕರೆಸು ಪಾಳ್ಯವ ॥೨೮೯॥

ಕುಂತಿಯಾತ್ಮಜ । ಕೇಳೊ ನಿನ್ನಯ ।
ಪಂಥವೇ ನಿನ್ನ । ತಲೆಯ ಕೊಂಬೆನು ॥೨೯೦॥

## ೬

**ವಾರ್ಧಕ**

ಸಿಂಧೂರನಗರಪತಿ ಕೇಳ್ ಬಭ್ರುವಾಹನಂ ।
ತಂದ ಸಕಲ ಸುವಸ್ತು ತಳಿಗೆ ಸತಿಯರ ಸೇಸೆ ।
ಪೊಂಗಲಶಗನ್ನಡಿ ಸಹಿತ ವಾದ್ಯರವದಿಂದ ಮರಳಿಸಿದ ಮಣಿನಗರಕೆ ॥
ಮಂದಿ ತುರಗಾನೆಗಳ್ ರಥ ರಾಜಕುವರರಂ ।
ಸಂದಣಿಸಿ ಮಂತ್ರೀಶ ನೆರಹೆ ರಣರಂಗದೊಳ್ ।
ನಿಂದು ಬಿಲು ಝೇಗೆಯ್ದು ಕಲಿ ಬಭ್ರುವಾಹನಧನಂಜಯರ್ ಸಂಗರದೊಳು ॥೨೯೧॥

**ದ್ವಿಪದಿ**

ಸೃಷ್ಟಿಪಾಲಕ ಕೇಳು ಕರ್ಣ ಕೌಂತೆಯರ ।
ದಿಟ್ಟತನಕೆರಡುಮಡಿ ಕಲಿ ಬಭ್ರುವಾಹನ ॥೨೯೧॥

ಸೀತೆಯಣುಗರು ವನದಿ ಕಾಳಗವ ಬಲಿದು ।
ಭೂತಳಾಧಿಪ ರಾಮಲಕ್ಷ್ಮಣರ ಗೆಲಿದು ॥೨೯೨॥

ಎಂದ ಮಾತಿಗೆ ನಮಿಸಿ ಭೂಪಕುಶಲವರೊಳ್ ।
ತಂದೆ ರಾಮನು ಸೋತ ಪೇಳೆನಗೆ ವಿವರ ॥೨೯೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳು ಭೂಮಿಪ ಸುರರಿಗೋಸುಗ ।
ಶ್ರೀಲಲಾಮನು ಬಳಿಕಯೋಧ್ಯಾ ।
ಪಾಲ ದಶರಥನಿಂಗೆ ತಾನೇ । ಬಾಲನಾಗಿ ॥೨೯೪॥

ಮುನಿಯ ಯಾಗವ ಕಾಯ್ದು ಶೂಲಿಯ ।
ಧನುವ ಮುರಿದಾ ಜನಕತನುಜೆಯ ।
ನನುವಿನಿಂದೊಲಿಸುತ್ತ ನಿಜ ಪುರ । ವರಕೆ ಮರಳಿ ॥೨೯೫॥

ಪಿತನನುಜ್ಞೆಗೆ ಸತಿಯನುಜ ಸಹಿ ।
ತತಿಶಯದಿ ವನದೊಳಗೆ ಇರುತಂ ।
ದತುಳಬಲ ಖರದೂಷಣಾದ್ಯರ । ಹತವ ಗೆಯ್ದು ॥೨೯೬॥

ಕಂಡ ಕಾಂಚನಮೃಗದ ನೆವದಿಂ ।
ಕೊಂಡುಪೋಗಲು ಸತಿಯ ರಾವಣ ।
ಚಂಡವಿಕ್ರಮ ತರಣಿಜನ ಬಲ । ಗೊಂಡು ಭರದಿ ॥೧೯೭॥

ಶರಧಿಬಂಧನ ಗೆಯ್ದು ಲಂಕೆಯ ।
ನಿರದೆ ಮುತ್ತುತ ರಾವಣಾದ್ಯರ ।
ತರಿದು ಸೀತೆಯ ಕೊಂಡು ಮರಳಿದ । ಹರುಷದಿಂದ ॥೧೯೮॥

ಬಂದು ನಿಜ ರಾಜ್ಯವನು ಪಾಲಿಸು ।
ತೆಂದ ಜನರಪವಾದಕೋಸುಗ ।
ವಿಂದುಮುಖಿಯನು ಕಳುಹಿಸುತ್ತಿರ । ಲಂದು ವನಕೆ ॥೧೯೯॥

**ಭಾಮಿನಿ**
ಅರಸ ಕೇಳಿಂತಿರುತ ಸೀತೆಯು ।
ಮೆರೆವ ಕುವರದ್ವಯವ ಪಡೆಯಲು ।
ಧರಣಿಪತಿ ಶ್ರೀರಾಮಚಂದ್ರನು ಯಾಗವನು ರಚಿಸಿ ॥
ತೆರಿಗೆ ತುರಗದ ನೆವದಿಸುತರೊಡ ।
ನಿರದೆ ಸಂಗರಮುಖದಿ ಮೂರ್ಛಿಸಿ ।
ಪರಮಋಷಿ ವಾಲ್ಮೀಕಿಯಿಂ ಸತಿಸುತರನೊಡಗೊಂಡು ॥೨೦೦॥

**ಕಂದ**
ಕ್ಷಿತಿಯಂ ಪಾಲಿಸುತಿಹನೆಂ ।
ಬತಿಶಯ ಕಥೆಯಂ ಪೇಳಿದೆ ನಿನಗೋಸುಗವಿ ॥
ನ್ನತುಳಾನಂದದಿ ಕೇಳ್ಕೈ ।
ಕ್ಷಿತಿಪತಿಯೊರೆವೆಂ ಶಕ್ರಜ ಪಾರ್ಥಿಯ ರಣಮಂ ॥೨೦೧॥

**ವಾರ್ಧಕ**
ಪೃಥ್ವಿಪಾಲಕ ಕೇಳು ಅರ್ಬುದ ಗಜಾವಳಿಯು ।
ಹತ್ತು ಕೋಟಿ ವರೂಥ ರಾಜಕುವರರು ಸಹಿತ ।
ಸುತ್ತಕೂಡಿದ ಪದಾತಿಗಳು ಮೂರರ್ಬುದಂ ಎರಡರ್ಬುದಶ್ವಂಗಳು ॥
ಮತ್ತೆ ಸರಳಿನ ಭಂಡಿಯ್ಯೆವತ್ತು ಸಾಸಿರಂ ।
ಸುತ್ತ ಮಂತ್ರಿ ಸುಬುದ್ಧಿ ಕರೆಕರೆದು ನೆರಹುತಿರೆ ।
ನಿತ್ತು ರಣರಂಗದೊಳ್ ಕಲಿ ಬಭ್ರುವಾಹನಂ ಚಾಪಟಂಕಾರದಿಂದ ॥೨೦೨॥

**ರಾಗ ಸಾಂಗತ್ಯ ರೂಪಕತಾಳ**
ಭೂಪಾಲ ಕೇಳಯ್ಯ ಭಟ ಬಭ್ರುವಾಹನ ।
ನೀ ಪರಿಯಿಂದಿರುತಿರಲು ॥

ಶ್ರೀಪತಿ ಶರಣೆಂದೇರಿಸಿ ಗಾಂಡೀವವ ಪಾರ್ಥ ।
ತಾಪಿಸಿದನು ಜಗತ್ತ್ರಯವ ॥೨೦೩॥

ವೃಷಕೇತು ಸಾಂಬ ಸಾತ್ಯಕಿಯರ ಬಳಿಯಲಿ ।
ಅಸಮ ಕಿರೀಟಿನಿಂದಿಹನು ॥
ಮಸಗಿದಂಬುಧಿಯಂತೆ ಮಿಗೆ ಗರ್ಜಿಸುತ ಸೇನೆ ।
ಬಿಸಜಾಕ್ಷಸುತನ ನೇಮದಲಿ ॥೨೦೪॥

ಚೂಣಿಪಡೆಯ ನೂಕಿದರು ಪದಚರರನ್ನು ।
ಕಾಣಿಸಿದರು ಗಾಯ ಕೆಡಹಿ ॥
ಹೂಣಿಗಾರರು ಒದ್ದು ಮುರಿಯಲ್ಕೆ ಕುದುರೆಯ ।
ಶೋಣಿತಮಯವಾಯ್ತು ರಣದಿ ॥೨೦೫॥

ಆನೆಸಂಕುಲ ಬಹ ಹದನವರಿತು ಬಭ್ರು ।
ವಾಹ ಸಂಹರಿಸಿ ಮುಂಬರಿದು ॥
ಮಾನವಾಧಿಪರ ಲೆಕ್ಕಿಸದೆವೊಳಗೆ ಪೊಕ್ಕು ।
ತಾನೆ ರಣದೊಳಿದಿರಾದ ॥೨೦೬॥

**ಭಾಮಿನಿ (ಅರ್ಧ)**
ತಂದೆಯೊಳು ಮಾರ್ಮಲೆಯಬಾರದು ।
ಎಂದು ನೋಡಿದರೆನ್ನ ಜರೆದೆಲ ।
ಇಂದು ನಿನ್ನನು ಕಾಯ್ವ ಭಟನಾರೆಂದು ಗರ್ಜಿಸಿದ ॥

**ರಾಗ ಶಂಕರಾಭರಣ ಮಟ್ಟೆತಾಳ**
ಎಂದ ಮಾತ ಕೇಳಿ ಸಾಲ್ವ । ಇಂದ್ರಮೊಮ್ಮನ ॥
ಮುಂದೆ ರಥವ ಚಾಚಿ ಪೇಳ್ದ । ನೊಂದು ವಾಕ್ಯವ ॥೨೦೭॥

ತಂದೆಯೊಡನೆ ತರುಬೆ ನಿಲುವ । ದಂದವಾವುದೊ ॥
ಎಂದು ನಗುತ ಹತ್ತು ಬಾಣ । ದಿಂದಲೆಸೆದನು ॥೨೦೮॥

ದಾನವನ್ನ ಶರವ ಬಭ್ರು । ವಹನ ತರಿದನು ॥
ಭಾನುಮಾರ್ಗದಿಂದ ಖಳನ । ಗಾರುಗೆಡಿಸಿದ ॥೨೦೯॥

ಬೊಬ್ಬಿಡುತ್ತಲಸುರನೆಚ್ಚ । ಬಹಳ ವಿಸ್ಮಯ ॥
ಇಬ್ಬರಂಗದೊಳಗೆ ಸೋಲು । ವಿಲ್ಲದಾಯಿತು ॥೨೧೦॥

ಆರು ಕಣೆಗಳಿಂದ ಪಾರ್ಥ । ತೇರ ಕಡಿದನು ॥
ಸಾರಥಿಯ ಗೆಲಿದು ಖಳನ । ಗಾರುಗೆಡಿಸಿದ ॥೨೧೧॥

ಪಂಥವೇರಿ ಗದೆಯ ಕೊಂಡು । ನಿಂತು ಕಾದಿದ ॥
ಕುಂತಿಸುತನ ತನಯನಸ್ತ್ರ । ದಿಂದಲೊರಗಿದ ॥೨೧೨॥

**ಭಾಮಿನಿ (ಅರ್ಧ)**
ಸಾಲ್ವರಕ್ಕಸ ಬೀಳಲಾ ಕ್ಷಣ ।
ಮಾರ್ಮಲೆವ ಭಟರಿಲ್ಲದಾಯಿತು ।
ಪಲ್ ಮೊರೆದು ಪ್ರದ್ಯುಮ್ನ ತಾ ನಡೆತಂದನಾಹವಕೆ ॥

**ರಾಗ ದೇಶಿ ಅಷ್ಟತಾಳ**
ಮಣಿಪುರಾಧೀಶ ಕೇಳೆನ್ನ ಮಾತ ।
ಮಣಿದು ಯೆನ್ನೊಳು ಮೊದಲೆ ಬಂದರೆ । ರಣವು ನಿನಗೇಕೆಂದನು ॥೨೧೩॥

ಎಣಿಕೆ ತಪ್ಪಿತುಯೆನ್ನೊಳು ಇದಿರಾಗಿ ।
ಸೆಣಸಿ ನೋಡೆಂದೆನುತ ಮನ್ಮಥ । ಮೊನೆಗಣೆಗಳಿಂದೆಚ್ಚನು ॥೨೧೪॥

ಭಾಪುರೇ ಫಾಲಲೋಚನದಲಿ ಬೆಂದ ।
ಕೋಪವೆನ್ನೊಳು ತೋರದಿರುಕಣೆ । ಮಾಪು ಗೆಯ್ ಬಲವುಳ್ಳಡೆ ॥೨೧೫॥

ಐದು ಬಾಣದಿ ಅಸುರಾರಿತನಯನ ।
ಮೈದುನನು ನೀನೆನುತ ಬಾಣವ । ಹೊಯ್ದು ರಥ ಪುಡಿಗೆಯ್ದನು ॥೨೧೬॥

ಖಂಡಲಾತ್ಮಜಸುತನು ಇಕ್ಕಡಿಗೆಯ್ದು ।
ಚಂಡಶರವನುಯೆಸೆಯಲಾಮಸೆ । ಗೊಂಡು ಮದನನು ಬೆದರಿದ ॥೨೧೭॥

ಮತ್ತೆ ಬೇರೊಂದು ಮಣಿರಥದೊಳಗೇರೆ ।
ಚಿತ್ತಜನ ಮೇಲೆಸೆದು ಕಣೆಗಳ । ಕತ್ತರಿಸಿ ಧನು ಕವಚವ ॥೨೧೮॥

ಫುಲ್ಲನಾಭನ ಸುತ ಫಲುಗುಣಿಯೊಳು ।
ಎಲ್ಲ ಆಯುಧದಲ್ಲಿ ಕಾದಿದ । ರಲ್ಲಿ ಜಯವನು ಕಾಣದೆ ॥೨೧೯॥

ಪದಚರನಾಗಿ ಪರಿಪರಿಯಲಿ ಕಾದಿ ।
ಬೆದರಿತೆಣ್ದೆಸೆಯಳುಕಿ ಮನದಲಿ । ಮದನ ಮೂರ್ಛೆಯ ಕೊಂಡನು ॥೨೨೦॥

**ವಾರ್ಧಕ**
ಕ್ಷೋಣೀಂದ್ರ ಕೇಳ್ ಮುಂದೆ ಪ್ರದ್ಯುಮ್ನ ಮೆಯ್ಮರೆಯೆ ।

ಬಾಣದಿಂ ಸಾಂಬ ಸಾತ್ಯಕಿ ಸುವೇಗರ ಕೆಡಹಿ ।
ಕ್ಷೋಣಿಯೊಳಗೊರಗೆ ಯವನಾಶ್ವ ನೀಲಧ್ವಜರ್ ಬಭ್ರುವಾಹನನ ಧುರದಿ ॥
ಕಾಣಿಸಿದ ಮೇಲಸುರ ಸಾಲ್ವ ಕೃತವರ್ಮರಂ ।
ಕೇಣಮಿಲ್ಲದೆ ಕದಳಿವನವ ಗಜ ಪೊಕ್ಕಂತೆ ।
ಸೇನೆ ಸವರಲ್ ಕಂಡು ಫಲುಗುಣಂ ರೋಷದಿಂ ವೃಷಕೇತಗಿಂತೆಂದನು ॥೩೧೧॥

**ರಾಗ ಭೈರವಿ ಝಂಪೆತಾಳ**
ಕಂದ ಪೋಗೈ ಶೀಘ್ರದಿಂದ ಹಸ್ತಿನಪುರಕೆ ।
ಒಂದುಳಿಯದೆಮಜ ಮಾ । ಧವರೊಡನೆ ಪೇಳು ॥೩೧೨॥

ಮುಖತುರಗ ಹೋಗಾಡಿ । ಮುಂಬರಿದು ಮಾರ್ಬಲವು ।
ಮುಖವಾಗಿ ಸಾಗಿದರು । ಯಮನ ಪಟ್ಟಣಕೆ ॥೩೧೩॥

ನಷ್ಟವಾಯಿತು ಸೇನೆ । ನಾವುಳಿವ ಪಾಡಿಲ್ಲ ।
ದಿಟ್ಟ ಮಣಿಪುರಾಧೀಶ । ನೊಡನೆ ಕಾಳಗದಿ ॥೩೧೪॥

ಅವಶಕುನ ಮುಂತಾಗಿ । ಅವನಿಪಾಲಗೆ ಪೇಳು ।
ಬವರ ಕೊಡುವೆನು ನಾನು । ಬಲುಭಟನೊಳಿಲ್ಲಿ ॥೩೧೫॥

ಇಂದುಕುಲತಿಲಕ ನಿ । ನ್ನಿಂದ ಸುಗತಿಯು ನಮಗೆ ।
ಮುಂದೆ ಗಜಪುರ ಬಾಳ್ವೆ । ಕೆಡಿಸದಿರು ಪೋಗು ॥೩೧೬॥

ಕುವರನನು ಬಿಗಿದಪ್ಪಿ । ಕಣ್ಣನೀರಲಿ ಪಾರ್ಥ ।
ಬಲು ಮಮತೆಯಲಿ ಮೆಯ್ಯ । ತಡವರಿಸಿ ನುಡಿದ ॥೩೧೭॥

**ಭಾಮಿನಿ (ಅರ್ಧ)**
ನುಡಿಯ ಕೇಳುತ ಕರ್ಣತನಯನು ।
ನಡುನಡುಗಿ ಬೆವರಿಡುತ ಕಾಯದಿ ।
ಒಡಲುರಿಯ ತಾಪದಲಿ ನುಡಿದನು ಬಿಕ್ಕಿಬಿರಿದಳುತ ॥

**ರಾಗ ಕೇದಾರಗೌಳ ಅಷ್ಟತಾಳ**
ತಂದೆ ಸುರಪುರದಿ ನಿಂದ ಕಾರಣ ನೀವು । ತಂದು ಸಲಹಿದಿರೆನ್ನ ।
ಇಂದು ನಿಮ್ಮಯ ಪಾದವಗಲಿ ಪೋದರೆ ಸುರ । ವೃಂದವು ನಗದಿಹುದೆ ॥೩೧೮॥

ಏಕಪತ್ನೀವ್ರತವೇಕವಚನ ನಮ । ಗೇಕೆಂದು ತಪ್ಪಿದರೆ ॥
ನಾಕದೊಳಗೆ ಸುರ ಸಭೆಯಿಂದ ಹಿರಿಯರು । ನೂಕೆ ನರಕಕಿಳಿಯುವರು ॥೩೧೯॥

ಪಗೆಯವರೊಡನೆ ನಿಮ್ಮನು ಬಿಟ್ಟು ಪೋದರೆ । ಮಗನೆಂಬರೆ ಲೋಕದಿ ॥
ನಗಧರಾದ್ಯರು ನಿಮ್ಮ ಬಗೆಯರಿಯದೆವುಂಟೆ । ಮಿಗೆ ಚಿಂತಿಸುವುದೇತಕೆ ॥೩೩೦॥

ಬೊಪ್ಪ ಈ ಭಟನ ಕಾಳಗದಲ್ಲಿ ಹಿಡಿತಂದು । ಒಪ್ಪಿಸುವೆನು ಪಾದಕೆ ॥
ಅಪ್ಪಣೆಯೆನಗಿತ್ತು ಕಳುಹು ಯಜ್ಞದ ವಾಜಿ । ಕಪ್ಪ ಸಹಿತ ಕೊಂಬೆನು ॥೩೩೧॥

**ಭಾಮಿನಿ**

ಶ್ವೇತವಾಹನಗೆರಗಿ ಕರ್ಣಜ ।
ಪ್ರೀತಿಯಲಿ ಬೀಳ್ಗೊಂಡು ರಥವ ಮ ।
ಹಾತಿಶಯ ರೋಷದಲಿಯಡರಿದ ಚಾಪ ಧ್ವನಿಗೆಯ್ದು ।
ಭೂತಳಕೆ ಮೆಯ್ಮರೆದ ಸೇನೆಯ
ನೂತನವ ಕಾಣುತ್ತಲಾ ವೃಷ ।
ಕೇತುವರ್ಜುನಿಗಸ್ತ್ರಸಾರದಿ ಮುಸುಕುತಿಂತೆಂದ ॥೩೩೨॥

**ರಾಗ ಶಂಕರಾಭರಣ ಮಟ್ಟೆತಾಳ**

ತನ್ನ ಪಿತನ ಬಲವ ಗೆಲಿದು । ಘನ್ನಘಾತಕ ಬಭ್ರುವಾಹನ ।
ಎನ್ನೊಡನೆ ಸೆಣಸಿ ನೋಡು । ಕರ್ಣಜಾತನು ॥೩೩೩॥

ಪಗೆಯ ಕರ್ಣ ಗೆಲಿದು ಪಾರ್ಥ । ಮಗನ ವಧೆಗೆ ಎನ್ನ ಕೈಯ ।
ಬಗೆಯ ವಿಂಗಡಿಸಿದನೆನುತ । ನಗುತಲೆಚ್ಚನು ॥೩೩೪॥

ಹಿರಿಯ ಪೇಳ್ದ ಮಾತಿಗಾಗಿ । ಮರೆಯಲಾಗದೆನುತಲದ್ರಿ ।
ಶರವನೆಚ್ಚು ಫಲುಗುಣಿಯನು । ಕೆರಳಿಸಿದನು ॥೩೩೫॥

ಅಳಿವ ಭಟನ ಆಳುತನಕೆ । ಇಳೆಯೊಳಗೆ ಜೋಡಿಲ್ಲೆನುತ್ತ ।
ಪೊಳೆವ ವಜ್ರದಿಂದ ಕಡಿದು । ಬೀಳಲೆಚ್ಚನು ॥೩೩೬॥

ಕಾಯದಾಸೆಯೆನಗೆ ಇಲ್ಲ । ಕಾಯ್ದು ನಿನ್ನ ಬಿಡುವನಲ್ಲ ॥
ಕಾಯ್ದುಕೊಳ್ಳೆನುತ್ತ ಕರ್ಣಿ । ಗಾಯಗಾಣಿಸೆ ॥೩೩೭॥

**ಭಾಮಿನಿ**

ಎಚ್ಚರಿಸಿ ನುಡಿ ನುಡಿಯೆ ಕರ್ಣಜ ।
ಹೆಚ್ಚಿತಿಬ್ಬರಿಗಾಳುತನವನು ।
ಮುಚ್ಚಳವ ತೆಗೆದಿಟ್ಟ ಉರಗನ ಕ್ರೂರ ಫಣದಂತೆ ॥
ಅಚ್ಚರಿಯನೇನೆಂಬೆ ಕರ್ಣಜ ।
ನೆಚ್ಚು ಕಡಿದನು ತೇರು ತೇಜಿಯ ।
ಕೊಚ್ಚೆ ಕೆಡಹುತ ಸೇನೆಯನು ಕಿರಿಯಯ್ಯಗಿಂತೆಂದ ॥೩೩೮॥

**ರಾಗ ಮಾರವಿ ಅಷ್ಟತಾಳ**

ನೋಡಿದೆಯಾ । ಬೊಪ್ಪ । ನೋಡಿದೆಯಾ ॥ ನಿಮಗೆ ।
ಜೋಡಿಲ್ಲ ಜಗದೊಳೆಂಬಂತೆ ।
ಮಾಡುವೆನು ಕಣ್ಣಮುಂದೆ ॥ ನೋಡಿದೆಯಾ ॥ ಪ ॥

ಬಭ್ರುವಾಹನ ತನ್ನ ತಾಯಿ । ಗೊಬ್ಬ ಮಗನಾಗಿಂತಿರ್ಪ ।
ಅಬ್ಬರಿಸಿಕೊಂಡು ನಮ್ಮ ಸರ್ಬ ಬಲವನು ॥
ಇಬ್ಬರು ನಾವೆಂಬ ಮನದಿ ವಿಭ್ರಮಿಸಬೇಡ ಬಹಳ ।
ಕೊಬ್ಬಿದ ಸೇನೆಯ ಗೆಲಿದು ಉರ್ವಿಗೊರಗಿಸದೆ ಬಿಡೆನು ॥ ನೋಡಿದೆಯಾ ॥೨೩೯॥

ತೆಬ್ಬ ಬಿಗಿದ ಬಿಲ್ಲ ಧ್ವನಿಗೆ ಗರ್ಭವೊಡೆವಂತೆ ಕರ್ಣಿ ।
ಪೆರ್ಬುಲಿ ಮೃಗದೊಳ್ ಪೊಕ್ಕಂತೆ ಸರ್ಬರನೆಚ್ಚು ॥
ಆರ್ಭಟಿಸಿ ಚಾಪವಿಡಿದು ಬಭ್ರುವಾಹನ ತರಿದು ಮತ್ತೆ ।
ಕೂರ್ಗಣೆಯಿಂದಲಿ ಕರ್ಣಿ ಕಾರ್ಗೋಲ ಚಾಪ ಕಡಿದ ॥ ನೋಡಿದೆಯಾ ॥೨೪೦॥

ಬಲ್ಲೆ ನಿನ್ನ ಬಗೆಯನೆಂದು ಫಾಲಾಕ್ಷನಂದದಿ ಕರ್ಣಿ ।
ಮಲ್ಲ ಪಾರ್ಥಜಗೆ ಸರಳಿನಲ್ಲಿ ಬಿಗಿದನು ॥
ಭಲ್ಲೆ ಭಿಂಡಿವಾಲ ಮುಸಲದಲ್ಲಿ ಮುದ್ಗರ ಭುಸುಂಡಿ ।
ಶಲ್ಯ ಕುಂತ ಖಡ್ಗ ಗದೆಗಳಲ್ಲಿ ಸೆಣಸಿದರೀರ್ವರು ॥ ನೋಡಿದೆಯಾ ॥೨೪೧॥

ಕಾದಿ ದಣಿದು ಕರ್ಣಜಾತ ಕ್ರೋಧದಿಂದ ಹರಿಸೆ ರಥವ ।
ನಾದಿಮೂರ್ತಿ ಸೂರ್ಯನ ತೇಜದಿ ನೊಂದು ॥
ಮಾಧವನ್ನಭಜಿಸಿ ಸಂಪಾತಿಯಂತೆ ಬಭ್ರುವಾಹನ ।
ರಾಧೇಯಾತ್ಮಜನ ರಥವ ಸಾಗಿಸಿಕೊಂಡೊಯ್ದಾಗಸಕೆ ॥ ನೋಡಿದೆಯಾ ॥೨೪೨॥

ವೀರ ವೃಷಕೇತುವಿಳಿದು ಕಾರಿ ಕೆಂಡಗಂಗಳಿಂದ ।
ಮೂರು ಬಾಣದಿ ಗಗನಕೆ ಹಾರಿಸಿ ಮತ್ತೆ ॥
ತೋರಿ ಫಲುಗುಣಗೆ ಕರ್ಣಿಯೇರಿದ ಠಾವ ನೋಡೆಂದು ।
ವೀರ ಬಭ್ರುವಾಹನ ಮತ್ತೆ ಪುಟನೆಗೆದು ಧರೆಗೆ ಬಂದ । ನೋಡಿದೆಯಾ ॥೨೪೩॥

**ರಾಗ ಪಂಚಾಗತಿ ಮಟ್ಟೆತಾಳ**

ಬಲ್ಲಿದೆಯಲಾ । ಭಾಸ್ಕರಜಸುತ ॥
ಮಲ್ಲರಂಗದೊಳಗೆ ಸೋಲಿ । ಸಿನ್ನು ನೋಡುವ ॥೨೪೪॥

ಗದೆಯ ಕೊಂಡರು । ಗಾಢ ಗರ್ವದಿ ॥
ಕದನದಾಯ ಕಂಡು ಲೋಕ । ಬೆದರಿತಾಗಳೆ ॥೨೪೫॥

ಹೊಯ್ದನಭ್ರಕೆ । ಒರಗೆ ಕರ್ಣಜ ॥
ಬಯ್ದು ವಿಧಿಯ ಮರುಗಿದನು । ಸುಯ್ದು ಫಲುಗುಣ ॥೩೪೬॥

ಎಚ್ಚರೆದ್ದನು । ಇನಜನಂದನ ॥
ನೆಚ್ಚ ಗಾಯಕಾಗಿ ಪಾರ್ಥ । ಮೂರ್ಛೆಗೊಂಡನು ॥೩೪೭॥

ಸಂತವಿಸಿದರು । ಸೂತಮುಖದಲಿ ॥
ಪಂಥವೇರಿ ಗದೆಯ ಕೊಂಡು । ನಿಂತುಕಾದಲು ॥೩೪೮॥

ಶೇಷಮೊಮ್ಮನು । ಸ್ವರ್ಣಗರ್ಭ ಮ ॥
ಹಾ ಶರವ ಪೂಡಿ ಕರ್ಣ । ಜಾತಗೆಂದನು ॥೩೪೯॥

ಚಿತ್ತಜಯ್ಯನ । ಭಜಿಸುಯೆನ್ನುತ ॥
ಮತ್ತೆ ಬಾಣ ಬಿಡಲು ಶಿರವ । ಕತ್ತರಿಸಿದುದು ॥೩೫೦॥

**ವಾರ್ಧಕ**
ವಸುಧೇಶ ಕೇಳಿಂತು ವೃಷಕೇತು ಮಡಿಯಲ್ಕೆ ।
ವಶಮಿಲ್ಲದಂತಾಯ್ತು ಸರ್ವೇಂದ್ರ್ಯ ಫಲುಗುಣಗೆ ।
ವೃಷಕೇತುವಿನ ಮುಂಡ ಕನಲ್ದೆದ್ದು ಚಿತ್ರಾಂಗದೆಯ ಸುತನ ಬಲ ಸವರಿತು ॥
ಅಸಮ ಗಾಂಡೀವಿ ಶಿರ ಪಿಡಿದು ತೊಡೆಯೊಳಗಿಟ್ಟು ।
ಬಸವಳಿದು ಬಿಗಿದಪ್ಪಿ ಚುಂಬನವ ಗೆಯ್ದು ಮಿಗೆ ।
ಶಶಿಕುಲದ ಬಾಳ್ವೆಯಳಿದುದೆ ಕಂದ ಹಾಯೆಂದು ಹಮ್ಮೈಸಿ ಶೋಕಿಸಿದನು ॥೩೫೧॥

**ರಾಗ ನೀಲಾಂಬರಿ ಆದಿತಾಳ**
ಕರ್ಣಜಾತ ಕಾಮರೂಪ ಮ । ಹಾರ್ಣವಪ್ರತಾಪ ॥
ವರ್ಣ ನಾಲ್ಕರಲಿ ನಿನ್ನ ಪೋಲ್ವ ವೀರರುಂಟೆ ॥೩೫೨॥

ಶಾಪವಶವಲ್ಲದಿಂಥಾ । ಪಾಪ ನಮಗುಂಟೆ ।
ಈ ಪರಿಯೊಳಳಿದ ಮೇಲೆ । ಯಜ್ಞವೇತಕಿನ್ನು ॥೩೫೩॥

ಇಂದು ಎನ್ನೊಡನೆ ಕೋಪ । ದಿಂದ ಇರಲೇಕೆ ॥
ಮುನ್ನಿನಂತೆ ಮಾತನಾಡು । ಮೌನವ ನೀ ಬಿಡು ॥೩೫೪॥

ಸೊಗಸಾಯಿತೆ ಕೃಷ್ಣ ನಿನಗೆ । ಮಿಗೆ ಪೇಳ್ವುದಿನ್ನೇನು ॥
ಮಗನೆ ನಿನ್ನ ಮಡುಹಿದಂಥ । ಪಗೆಯವ ನಾನಾದೆ ॥೩೫೫॥

ಕಂದ ಸುಭದ್ರೆ ಕುಂತಿಯರ್ಗೆ । ನೆಂದು ಪೇಳಲಿನ್ನು ॥
ಚಂದ್ರನಂಥ ಕುವರ ನಿನ್ನ । ಕೊಂದೆನೆಂಬೆನೆಂತು ॥೩೫೬॥

**ಭಾಮಿನಿ**
ಅರ್ಜುನನು ಬಿಗಿದಪ್ಪಿ ಮುದ್ದಿಸಿ ।
ಪ್ರಜ್ವಲಿಪ ಕರ್ಣಜನ ಶಿರವನು ।
ವಜ್ರ ಮಾಣಿಕ ಮೌಕ್ತಿಕದ ಕುಂಡಲ ಕಿರೀಟವನು ॥
ಸಜ್ಜನರು ದುಃಖಿಸಲು ವರ್ಣಿಸಿ ।
ನಿರ್ಜರೇಂದ್ರನ ಸೂನು ಮರುಗಲು ।
ಮೂರ್ಜಗವು ಬೆರಗಾಗೆ ವೃಷಕೇತುವಿನ ಮರಣದಲಿ ॥೩೫೭॥

೭

**ರಾಗ ನೀಲಾಂಬರಿ ರೂಪಕತಾಳ**
ಯಾರಿಗೆ ಪೇಳಲಿ ನಾನು ಈ ಶೋಕಾಂಬುಧಿಯನ್ನು ।
ವೀರ ವೃಷಕೇತುವನು ಎಂತು ಮರೆಯಲಿ ॥ ಪ ॥

ಕಂದ ನಿನ್ನಯ ತ್ರಾಣದಿಂದಲಾಯಿತು ಯಜ್ಞ ।
ವೆಂದಾಕ್ಷಣಕೆ ಪೋಗಿ ಯೌವನಾಶ್ವಾಧಿಪರ ॥
ತಂದು ಸಹಾಯಕಿತ್ತೆ ಅನುಸಾಲ್ವರನು ಗೆಲ್ದೆ ।
ಸಿಂಧೂರನಗರದ ಸಿರಿಯೆ ಎನ್ನಣುಗ ॥೩೫೮॥

ಎಂದು ದುಃಖಿಸಿ ಚಾಪಕೊನೆಯಲ್ಲಿ ಮೊಗವಿಟ್ಟು ।
ಇಂದ್ರನಂದನನು ಚಿಂತಿಸುತಿರಲಾಗ ॥
ಮಂದಹಾಸದಿ ಬಭ್ರುವಾಹನ ಪೇಳಿದನಾಗ ।
ಮಂದಮತಿಯೆ ವೇಶ್ಯಜನೆಂದೆನ್ನ ಜರೆದೆಯ ॥೩೫೯॥

**ರಾಗ ರೇಗುಪ್ತಿ ಅಷ್ಟತಾಳ**
ಮಾತೆಯೆನ್ನ ಚಿತ್ರಾಂಗದೆ । ಮಾನಿನಿಯರೊಳ್ ವಿಖ್ಯಾತೆ ।
ಕಾತರಿಸಿ ಕುರೂಪಿಟ್ಟು । ಸೋತೆ ನೀ ಸಂಗರದೊಳು ॥೩೬೦॥

ಮಿತ್ರಜಾತ ಕರ್ಣನಿಗೆ । ಮತ್ಸರದಿಂದ ಗೆಲಿದೆ ।
ಪುತ್ರ ವೃಷಕೇತು ಪಗೆ । ಪೂರ್ಣವಾಯಿತೇನೊ ನಿನಗೆ ॥೩೬೧॥

ಪ್ರಾಣದಾಸೆಗಾಗಿ ತಂದು । ಪೊಡವಿಪಾಲರನ್ನು ಕೊಂದು ।
ಕಣನೇರಿ ಕಾದುವೆಯೊ । ಕುದುರೆ ಬಿಟ್ಟು ಪೋಪೆಯೊ ॥೩೬೨॥

**ಭಾಮಿನಿ**
ನುಡಿಯ ಕೇಳುತ ಪಾರ್ಥ ಕೋಪದಿ ।
ಕಿಡಿಯಿಡುತ ಗಾಂಡೀವವೊದರಿಸೆ ।

ಅಡಿಮಗುಚಲಂಬುಧಿಗಳಲ್ಲಾಡಿದವು ಗಿರಿನಿಕರ ।
ಕಡು ಭಯಂಕರ ಬಿಲ್ಲಬೊಬ್ಬೆಗೆ ।
ಹೊಡಕರಿಸಿ ಮುದುರಿದವು ದಿಗ್ಗಜ ।
ಪೊಡವಿ ತಲೆಕೆಳಗಾಗಲದ್ಭುತಧ್ವನಿಗೆ ಜಗ ಬೆದರೆ ॥೩೯೩॥

**ರಾಗ ಶಂಕರಾಭರಣ ಮಟ್ಟೆತಾಳ**

ಏನೆಲವೊ ಬಭ್ರುವಾಹ । ನೆನ್ನ ಜರೆದೆಲಾ ॥
ಮಾನವರು ಎನಗೆ ಇದಿರೆ । ಯೆನುತಲೆಚ್ಚನು ॥೩೯೪॥

ಗಾಯವಡೆದು ಬಭ್ರುವಾಹನ । ಕಾಯ ಕಂಪಿಸೆ ॥
ತೋಯಜಾತ್ಮಜನ್ನ ಶರವ । ನೆಚ್ಚು ಗರ್ಜಿಸಿ ॥೩೯೫॥

ಕ್ಷೀಣಬಲನೆ ತಾನು ಶಿವನ । ಏಣೆಗಾರನು ॥
ಕಾಣಬಹುದೆನುತ್ತ ಸರಳ । ಶ್ರೇಣಿ ಸುರಿದನು ॥೩೯೬॥

ಚಿತ್ರಾಂಗದೆಯ ತನಯನದನು । ಕತ್ತರಿಸಿದನು ॥
ಮತ್ತೆ ಮಾರುತಾಸ್ತ್ರದಿಂದ । ಮುರಿಯಲೆಚ್ಚನು ॥೩೯೭॥

ಪರಿಹರಿಸೆ ವಿಜಯನೆಚ್ಚ । ಪರ್ವತಾಸ್ತ್ರವ ॥
ತರಿದು ಬಿಸುಟ ವಜ್ರದಿಂದ । ಉರಗಮೊಮ್ಮನು ॥೩೯೮॥

ಕಾಮಹರನ ಕಣೆಯ ಕನಲಿ । ಪಾರ್ಥನೆಸೆಯಲು ॥
ಸೋಮದತ್ತದಿಂದ ಪಾರ್ಥಿ । ಸಂತವಿಸಿದನು ॥೩೯೯॥

**ರಾಗ ಪಂಚಾಗತಿ ಮಟ್ಟೆತಾಳ**

ಖುಲ್ಲ ಫಲುಗುಣ ಕಾದ । ಲೇಕೆ ಸುಮ್ಮನೆ ॥ ಹರ ।
ನಲ್ಲಿ ಪಡೆದ ಬಾಣವನ್ನು । ತೋರು ಥಮ್ಮನೆ ॥೩೮೦॥

ಹರನ ಪಾಶುಪತಕೆ ನೀನು । ಗುರಿಯೆ ನೋಡೆಂದು ॥ ಬಡ ।
ಹೋರಿ ಹೋಗೆಂದೆಸೆದನು । ವಾರುಣಾಸ್ತ್ರವ ॥೩೮೧॥

ಯಾತಕೀ ಪೊಳ್ಳು ಕಣೆಗ । ಳೆಂದು ತುಂಡಿಸಿ ॥ ಬಾಣ ।
ವ್ರಾತದಿಂದ ಪಾರ್ಥನ ಸಾ । ರಥಿಯ ಖಂಡಿಸಿ ॥೩೮೨॥

**ಭಾಮಿನಿ**

ಹಲವು ವೀರರ ಗೆಲಿದ ಕಣೆಗಳು ।
ಅಲಸಿದವು ಕಾಳಗದಿ ಕೌರವ ।
ಕುಲವ ಸಂಹರಿಸಿರ್ದ ಅಸ್ತ್ರಗಳಂದು ಪುಸಿಯಾಯ್ತು ॥

ಗೆಲವು ಇನ್ನೆಲ್ಲಿಹುದೊ ಶಾಪದ ।
ಬಲುಮೆಯೆಂತುಟೊ ಶಿವ ಶಿವಾ ಫಲು ।
ಗುಣನ ಸಾರಥಿ ಮಡಿದು ಕೈಗುಂದಿತು ರಣಾಗ್ರದಲಿ ॥೩೭೩॥

**ರಾಗ ನಾದನಾಮಕ್ರಿಯೆ ಮಟ್ಟೆತಾಳ**
ನಮ್ಮ ಭಾವ ಕೃಷ್ಣನೆಂದು । ನಂಬಿ ಗುರುಹಿರಿಯರ ಕೊಂದು ।
ಬ್ರಹ್ಮರುದ್ರರೆನಗೆ ಸಹಾಯ । ವೆಂಬ ಗರ್ವದಿ ॥
ಬ್ರಹ್ಮರುದ್ರರೆನಗೆ ಸಹಾಯ । ವೆಂಬ ಗರ್ವದಿಂದ ಕಾದಿ ।
ಕರ್ಮವೊದಗಿತೆನ್ನ ಕಂದ । ಕರ್ಣಜಾತಗೆ ॥ ಕರ್ಣಜಾತಗೆ ॥೩೭೪॥

ಚಂಡ ಚಿತ್ರಸೇನನ ಗೆಲಿದು । ಕೊಂಡು ಬಂದೆ ಕುರುಪತಿಯ ।
ಖಾಂಡವನವನಗ್ನಿಗಿತ್ತು । ದಿಂಡುದರಿದೆನು ॥
ಖಾಂಡವನವನಗ್ನಿಗಿತ್ತು । ದಿಂಡುದರಿದು ದೇವಗಜ ಭೂ ।
ಮಂಡಲಕ್ಕೆ ಇಳುಹಿದೆನು । ಮಾತೆಗೋಸುಗ ॥ ಮಾತೆಗೋಸುಗ ॥೩೭೫॥

ಕೃಷ್ಣನೊಡನೆ ದ್ರೋಹವೆಸಗಿ । ನಟ್ಟ ನಡುವೆ ಬಂದ ಗಯನ ।
ಸೃಷ್ಟಿಯಿರುವ ತನಕ ಭಾಷೆ । ಕೊಟ್ಟು ಉಳುಹಿದೆ ॥
ಸೃಷ್ಟಿಯಿರುವ ತನಕ ಭಾಷೆ । ಕೊಟ್ಟು ಉಳುಹಿ ಹುಡುಗನೊಡನೆ ।
ಭ್ರಷ್ಟವಾಯಿತೆನ್ನ ಜನ್ಮ । ಹುಟ್ಟಿ ಕುಲದೊಳು ॥ ಹುಟ್ಟಿಕುಲದೊಳು ॥೩೭೬॥

**ಭಾಮಿನಿ**
ಪಿತನ ಚಿಂತೆಯ ಕಂಡು ಚಿತ್ರಾಂ ।
ಗದೆಯ ಸುತ ಪರಿಹಾಸ್ಯ ನುಡಿದನು ।
ಅತಿಶಯದ ಶಸ್ತ್ರಾಸ್ತ್ರ ನಿನಗಿರೆ ಮಥನವೇಕೆಂದ ॥
ಅತಿರಥ ಮಹಾರಥರನೆಲ್ಲರ ।
ಹತವ ಮಾಡಿದೆನೆಂಬ ಶೌರ್ಯದ ।
ಸ್ಥಿತಿಯ ನಿನ್ನೊಳು ನೀನೆ ಪೊಗಳಿದರೇನು ಫಲವೆಂದ ॥೩೭೭॥

**ರಾಗ ನಾದನಾಮಕ್ರಿಯೆ ಮಟ್ಟೆತಾಳ**
ಗೌರಿಯರಸನೊಡನೆ ಗೆಲಿದ । ಶೌರ್ಯವೆತ್ತ ಹೋಯಿತೆಲವೊ ।
ಕೌರವರನು ಸಂಹರಿಸಿದ । ಶೌರ್ಯವೆಲ್ಲಿದೆ ॥
ಕೌರವರನು ಸಂಹರಿಸಿದ । ಶೌರಿಯನ್ನು ಭಜಿಸುಯೆನುತ ।
ತೀವ್ರ ಬಾಣದಿಂದಲವನ । ತೇರನೆಚ್ಚನು ॥೩೭೮॥

ಕೃಷ್ಣನನ್ನು ಕಾಂಬ ಸುಕೃತ । ದುಷ್ಟರಿಂಗೆ ಸಾಧ್ಯವಹುದೆ ।
ಕೆಟ್ಟು ನುಡಿಯದೆಮನ ಪುರಕೆ । ಬಟ್ಟೆಯರಸಿಕೊ ।

ಕೆಟ್ಟು ನುಡಿಯದೆಮನ ಪುರದ । ಬಟ್ಟೆಯರಸುಯೆನುತ ಬಾಣ ।
ಬಿಟ್ಟು ಬಭ್ರುವಾಹನವನ । ದಟ್ಟ ಮುರಿದನು ॥೨೭೯॥

ಬೇರೆಯೊಂದು ಮಣಿವರೂಥ । ವೇರಿ ಬಭ್ರುವಾಹನಸ್ತ್ರ ।
ಸಾರದಿಂದ ಮುಸುಕಿದನು । ವೀರ ವಿಜಯನ ॥
ಸಾರದಿಂದ ಮುಸುಕಿದನು । ವೀರ ವಿಜಯನದರ ತರಿದು ।
ಸೂರ್ಯನಸ್ತ್ರದಿಂದ ಸೇನೆ ಸೇರಿತೆಮನಲಿ ॥೨೮೦॥

**ಭಾಮಿನಿ**
ಅರಸ ಕೇಳರ್ಜುನನು ಸಿಡಿಲಿನ ।
ಗರ ಹೊಡೆದ ವಟವೃಕ್ಷದಂತಿರೆ ।
ತಿರುವನೇರಿಸಿ ತುಡುಕುವರೆ ಹೆಳವಾದವಸ್ತ್ರಗಳು ॥
ಮರವೆಯಾಯಿತು ಮಂತ್ರತಂತ್ರಗ ।
ಳಿರದೆ ತಲೆಕೆಳಗಾಗಿ ಹೋಯಿತು ।
ಸರಸವಾಗಿರೆ ಕಂಡು ಚಿತ್ರಾಂಗದೆಯ ಸುತ ನುಡಿದ ॥೨೮೧॥

**ರಾಗ ಭೈರವಿ ತ್ರಿವುಡೆತಾಳ**
ಜಾಣನಹುದಹುದೋ । ಭಳಿರೆ ಶಸ್ತ್ರ । ತ್ರಾಣನಹುದಹದೋ ॥ ಪ ॥

ದ್ರೋಣನೊಲಿದಿತ್ತಸ್ತ್ರಶಸ್ತ್ರವು । ಕಾಣದೆಡೆಯಲಿ ಹೋಯಿತೇ ।
ಏಣಗರ್ಭನ ಹರಿಹರರ ಕ । ಟ್ಟಾಣಿ ಕಣೆಗಳು ಹೋಯಿತೇ ॥
ತ್ರಾಣವನು ಕಂಡಿತ್ತ ದಿಗಧಿಪ । ಬಾರ್ಣಗಳು ಪುಸಿಯಾದುವೇ ।
ಸಾಣೆಯಲಗಿನ ಸರಳ ಮೇಘವ । ಕಾಣಿಸುತ ಪಾರ್ಥನ ಪಚಾರಿಸಿ ।
ಜಾಣನಹುದಹುದೋ ॥೨೮೨॥

ಎಚ್ಚಬಾಣವ ವಿಜಯನೆಡೆಯಲಿ । ಕೊಚ್ಚಿ ಮಹಶರ ಪೂಡಿದ ।
ಅಚ್ಯುತನ ನೆನಹಿನಲಿ ಸೇನೆಯ । ನುಚ್ಚುನುರಿಯನು ಮಾಡಿದ ॥
ಮೆಚ್ಚಿ ಸುರರು ಪೂಮಳೆಯ ಕರೆಯುತ । ಅಚ್ಚರಿಯವನು ಕಾಣುತ ॥
ನಿಶ್ಚಟನನೆದೆಗಯ್ದು ಸರಳನು । ಎಚ್ಚು ರಥದಲಿ ಮೂರ್ಛೆಗೆಯ್ಸಿದ ॥
ಜಾಣನಹುದಹುದೋ ॥೨೮೩॥

ರೋಷದಲಿ ಕಲಿ ಬಭ್ರುವಾಹನ ಮ । ಹಾಸ್ತ್ರವನು ತೆಗೆದ್ದೂಡಿದ ।
ಈಶ ಇಂದ್ರಾದಿಗಳು ದಿಗಧಿಪ । ರಾ ಸುರರು ಕೊಂಡಾಡುತ ॥
ಏಸು ಕಣೆಯರ್ಜುನನು ಎಸೆದರೆ । ಬೇಸರದೆ ಪುಡಿಮಾಡುತ ।
ಸೂಸಿ ಕಿಡಿಯ ಜ್ವಾಲೆ ಶರ ಸಿತ । ವಾಹನನ ಶಿರ ಕಡಿದು ಹಾಯ್ದುದು ॥
ಜಾಣನಹುದಹುದೋ ॥೨೮೪॥

ಅಕ್ಷಭಾರದ ಚಾಪವನು ಬಿಡ । ಲಾ ಕ್ಷಣಕೆ ಪೆಣವೊರಗಿತು ॥
ಅಕ್ಷಯದ ಬತ್ತಳಿಕೆ ಬೆನ್ನಿನೊ । ಳೀಕ್ಷಿಸುತ ಜನ ಮರುಗಿತು ॥
ಯಕ್ಷ ಕಿನ್ನರ ಇನ ಹಿಮಾಂಶುಗೆ । ಪಕ್ಷದಲಿ ಮನ ಕರಗಿತು ।
ಪಕ್ಷಿವಾಹನಯೆನುತ ಮಹಶಿರ । ಚಕ್ಷುಮಂಡಲ ತಿರುಗಿ ಬಿದ್ದುದು ।
ಜಾಣನಹುದಹುದೋ ॥೩೮೫॥

**ಭಾಮಿನಿ**

ಪೃಥಿವಿಪಾಲಕ ಕೇಳ್ ಮಹಾಶಿರ ।
ಸ್ತುತಿಸಿ ಕೇಶವ ಮಾಧವೆನುತಲೆ ।
ಕ್ಷಿತಿಗೆ ಕರ್ಣಜನೊಡನೆ ಬಿದ್ದುದು ಮೋಹಪಾಶದಲಿ ॥
ವ್ರತ ಭಯಂಕರ ಪಾರ್ಥ ಭಾಗೀ ।
ರಥಿಯ ಶಾಪದಿ ಕಾರ್ತಿಕೈಕಾ ।
ದಶಿಯ ಕುಜವಾರದಲಿ ಮಡಿದನು ವಂಶದ್ರುಮದಂತೆ ॥೩೮೬॥

**ದ್ವಿಪದಿ**

ಮರಳಿದರು ಸುರವರರು ಮರುಗಿಯಂಬರದಿ ।
ತೆರಳಿದನು ಬಭ್ರುವಾಹನನು ಸಂಭ್ರಮದಿ ॥೩೮೭॥

ವಾದ್ಯವೀಣಾರವದಿ ಪೊಡೆವ ಭೇರಿಯಲಿ ।
ಪದ್ಯ ಪಾಠಕರಿಂದ ಪೊಗಳೆ ಹರುಷದಲಿ ॥೩೮೮॥

ಮಂತ್ರಿ ಮಾರ್ಬಲ ಸಹಿತ ಮಣಿಪುರಕೆ ಬಂದು । ಮ ।
ಹಾಂತ ಪ್ರಜೆಗಳು ಸಹಿತ ಕಾಣಿಸಿದರಂದು ॥೩೮೯॥

**ಭಾಮಿನಿ (ಅರ್ಧ)**

ಇಂತು ಪ್ರಜೆಪರಿವಾರಸಹಿತಲೆ ।
ಸಂತಸದಿ ಪುರಬಾಹ್ಯೆಯೊಳಗಿರೆ ।
ಅತ್ತ ಚಿತ್ರಾಂಗದೆಯು ಲೂಪಿಯು ಚಿಂತಿಸುತ ಕೂಡೆ ॥

**ರಾಗ ಯರಕಲಕಾಂಭೋಜಿ ತ್ರಿವುಡೆತಾಳ**

ಚಿತ್ರಾಂಗದೆಯೆ ನಾನು । ಚಿಂತಿಸಿ ಕಬರಿ ಬಾ ।
ಚುತ್ತ ಗೋಪುರದೊಳಿರೆ ॥
ಮೃತ್ಯು ಪೋಲುವ ಗೌಳಿ । ಮುಡಿಗೆನ್ನ ಕೆಡೆದುದು ।
ಮುತ್ತೈದೆ ತನಕೆ ಶುಭವೇನೆ ಕೋಕಿಲಗಾನೆ ॥೩೯೦॥

ಅಕ್ಕ ಲೂಪಿಯೆನಗೆ । ಎಡಗಣ್ಣಿನಲಿ ಬಹಳ ।
ದುಃಖ ಸುರಿವುತಿದೇಕೆ ॥

ಮಕ್ಕಳ ಮಣಿ ಬಭ್ರುವಾಹ ಪಂಥಗಳಿಂದ |
ಮಿಕ್ಕು ನಡೆವನೆ ಹೇಳು ಅರ್ಜುನನೊಳು ||೩೯೧||

ಮಡದಿ ರನ್ನಳೆ ಮಂತ್ರಿ | ನುಡಿಯ ಮೀರದಿರೆಂದು
ಹುಡುಗನಿಗರುಹಿದೆನು ||
ತಡೆದ ವಾಜಿಯನಿತ್ತು ಅಡಿಗೆರಗಿದರೆಮ್ಮ |
ಬಿಡುವೆವೆ ಸುರಪಜಾತ ಲೋಕ ಪ್ರಖ್ಯಾತ ||೩೯೨||

**ಭಾಮಿನಿ**
ಭೋಗಿರಾಜನ ಸುತೆಯುವೊಳಗಣ |
ಬಾಗಿಲಲಿ ಕಾಯುತಿರೆ ತೋಯದ |
ಮೇಘಕತಿ ಬಾಯಾರಿ ಕಪ್ಪೆಗಳಿರುವ ತೆರನಂತೆ ||
ಆಗ ಬಂದಳು ಕಟಕಿ ಪೇಳಿದ |
ಆಗಮವ ಕೇಳುತ್ತ ತರುಣಿಯ |
ರಾಗ ಕ್ಲೇಶದೊಳಿರಲು ಬಂದನು ಬಭ್ರುವಾಹನನು ||೩೯೩||

**ದ್ವಿಪದಿ**
ತೋರಣದ ಮೇಲ್ಗಟ್ಟು ಕುರುಜು ಮೇರ್ವೆಯಲಿ |
ಆರತಿಯ ಕಯ್ಗೊಂಡು ಕೇರಿಕೇರಿಯಲಿ ||೩೯೪||

ಪಿತನ ಛೇದಿಸಿ ಬಂದ ಬಭ್ರುವಾಹನನ |
ಸ್ಥಿತಿಗೆ ಪುರಜನವು ಶಂಕಿಸಿ ನುಡಿವುತಿರಲು ||೩೯೫||

ನಾರಿ ಚಿತ್ರಾಂಗದೆ ಲೂಪಿಮರುಗುವ ಪರಿಯ |
ವೀರ ಕೇಳುತ ತಿಳಿದು ಪೊಕ್ಕನರಮನೆಯ ||೩೯೬||

**ಭಾಮಿನಿ (ಅರ್ಧ)**
ಮಾತೆ ಚಿತ್ರಾಂಗದೆಗೆಯೆರಗುತ |
ಯಾತಕೀ ಕ್ಲೇಶಗಳುಯೆನುತಿರೆ |
ಸೋತವನು ತಾನಲ್ಲ ರಣದಲಿ ನಿಮ್ಮ ಸತ್ಯದಲಿ ||

**ರಾಗ ಸೌರಾಷ್ಟ್ರ ಅಷ್ಟತಾಳ**
ಮಂಗಲಯೋಗದಿ ಮರುಗುವೆಯೇತಕೆ | ಅಮ್ಮ ಕೇಳು || ಇಂಥ |
ಸಂಭ್ರಮಕಾಲದಿ ಶೋಕ ಮಾಡುವುದುಂಟೆ | ಅಮ್ಮ ಕೇಳು ||೩೯೭||

ನಿನ್ನ ಮಾತಿನ ಮೇಲೆ ಅಡಿಗೆರಗಿದೆ ಹೋಗಿ | ಅಮ್ಮ ಕೇಳು || ಆತ |
ನುನ್ನತ ಕುರುಪಿಟ್ಟು ಜರೆದೆನ್ನ ನುಡಿದನು | ಅಮ್ಮ ಕೇಳು ||೩೯೮||

ಅಪಜಯ ನಮಗಿಲ್ಲವಿಂದಿನ ರಣದಲಿ । ಯಮ್ಮ ಕೇಳು ॥ ಬಲು ।
ಅಪರಿಮಿತವು ಸೇನೆ ಕೆಡಹಿದ ನಾನಿಂದು । ಅಮ್ಮ ಕೇಳು ॥೩೯೯॥

ಅಂಗಜ ಅನುಸಾಲ್ವಾದಿಗಳ ಸಂಹರಿಸಿದೆ । ನಮ್ಮ ಕೇಳು ॥ ರಣ ।
ರಂಗದೊಳಗೆ ರಾಜಕುವರರ ಮಡುಹಿದೆ । ನಮ್ಮ ಕೇಳು ॥೪೦೦॥

ವಿಜಯಾನಿರುದ್ಧರ ಕೆಡಹಿದೆ ನಾನಿಂದು । ಅಮ್ಮ ಕೇಳು ॥ ಬಲು ।
ಭುಜಪರಾಕ್ರಮಿ ಕರ್ಣತನಯನ ಮಡುಹಿದೆ । ನಮ್ಮ ಕೇಳು ॥೪೦೧॥

**ಭಾಮಿನಿ**

ಕಂದನಾಡಿದ ನುಡಿಯ ಕೇಳುತ ।
ಚಂದ್ರಮುಖಿ ಹೆಮ್ಮೈಸಿ ಬೀಳುತ ।
ಬೆಂದ ಹುಣ್ಣಿಗೆ ಹುಳಿವೆರಸಿದಾ ತೆರದಿ ಬಸವಳಿದು ॥
ಚಂದವಾಯಿತು ಪಿತನ ಛೇದಿಸಿ ।
ಅಂದಚಂದವ ಕೆಡಿಸಿದೆನ್ನಯ ।
ಮಂದಮತಿ ಪಗೆ ತೀರಿತೇ ಮತ್ಕಾಂತನೊಳು ನಿನಗೆ ॥೪೦೨॥

**ರಾಗ ಕಾಂಭೋಜಿ ಏಕತಾಳ**

ಏನು ನಮ್ಮೊಳ್ ಹಗೆಯು ಬಂತು । ಕಂದಾ ಕಂದಾ ॥ ಮುತ್ತೈದೆ ತನಕೆ ।
ಮಾನಭಂಗ ತರಿಸಿದಲ್ಲೊ । ಕಂದಾ ಕಂದಾ ॥೪೦೩॥

ದಾನವಾರಿ ಮೈದುನನು । ಕಂದಾ ಕಂದಾ ॥ ರಣದಲಿ ಮತ್ತು ।
ಸೇನೆಸಹಿತ ಮಡಿದನೇನೊ । ಕಂದಾ ಕಂದಾ ॥೪೦೪॥

ಭಾಷೆಗುರುತವಿತ್ತುಯೆಮಗೆ । ಕಂದಾ ಕಂದಾ ॥ ಬರುವನೆಂದು ।
ಆಸೆಯಿಂದ ಕಾದಿರ್ದೆವು । ಕಂದಾ ಕಂದಾ ॥೪೦೫॥

ದೇಶಾದಿ ದೊರೆಗಳೆಲ್ಲ । ಕಂದಾ ಕಂದಾ ॥ ಕೂಡಿ ರಣದಿ ।
ವಾಸವಸುತನಳಿದನೇನೊ । ಕಂದಾ ಕಂದಾ ॥೪೦೬॥

ಇಂದುವಂಶವಳಿಯಿತೇನೋ । ಕಂದಾ ಕಂದಾ ॥ ನಿನ್ನ ಉದ್ಭವ ।
ಅಂದಚೆಂದ ಕೆಡಿಸಿತಲ್ಲೊ । ಕಂದಾ ಕಂದಾ ॥೪೦೭॥

ಮಂದಮತಿಗಳಾದೆವಲ್ಲೋ । ಕಂದಾ ಕಂದಾ ॥ ನಿನ್ನ ಕಳುಹಿ ।
ಮುಂದೆಮಗಿನ್ನೇನು ಗತಿಯೊ । ಕಂದಾ ಕಂದಾ ॥೪೦೮॥

ಧರ್ಮಜ ನಕುಲ ಕೃಷ್ಣರು । ಕಂದಾ ಕಂದಾ ॥ ಕೇಳುತಲಿದ ।
ವರ್ಮವ ಬೆಳಸುವರಲ್ಲೋ । ಕಂದಾ ಕಂದಾ ॥೪೦೯॥

ಶರ್ಮವಿಡುವ ವಾತಜನು । ಕಂದಾ ಕಂದಾ ॥ ನಿನ್ನಯ ಶೌರ್ಯ ।
ಧರ್ಮಕೆ ಇನ್ನೇನು ಮಾಳ್ಪೆ । ಕಂದಾ ಕಂದಾ ॥೪೧೦॥

ಕಾಮಸ್ವರೂಪನರ್ಜುನನ । ಕಂದಾ ಕಂದಾ ॥ ದೊರೆಕುವರರನ್ನು ।
ಯಾರಿಂದ ಜೀವಿಸುವೆ ನೀನು । ಕಂದಾ ಕಂದಾ ॥೪೧೧॥

**ಭಾಮಿನಿ**

ಪೃಥ್ವಿಪಾಲಕ ಕೇಳು ಪಾರ್ಥನ ।
ಪತ್ನಿಯರು ಮೆಯ್ಮರೆದು ಗೋಳಿಡೆ ।
ಮತ್ತೆ ಲೂಪಿ ದಾಳಿಂಬ ದ್ರುಮದಲಿ ಕುರುಹುಗಳ ನೋಡಿ ॥
ಚಿತ್ರಾಂಗದೆ ದುಃಖದಲಿ ತನ್ನಯ ।
ಪುತ್ರನನು ಕರೆಕೊಂಡು ಸತಿಯರ ।
ಮೊತ್ತ ಸಹಿತಲಿ ನಡೆದು ಬಂದಳು ಆ ರಣಾಂಗಣಕೆ ॥೪೧೨॥

**ರಾಗ ಆನಂದಭೈರವಿ ಏಕತಾಳ**

ಪುತ್ರಶೋಕದಲ್ಲಿ ಸೂರ್ಯ । ಮಿತ್ರಮಂಡಲವ ಬಿಟ್ಟು ।
ಧಾತ್ರಿಯೊಳೇಕೊರಗಿದ । ನೆಂದರು । ಬಲು । ನೊಂದರು ॥೪೧೩॥

ಸೋಮವಂಶವಳಿಯಿತೆಂದು । ತಾಮಸದೊಳಗಯ್ತುಂದು ।
ಕಾಮಸ್ವರೂಪನರ್ಜುನನ । ಕಂಡರು । ಭ್ರಮೆ । ಗೊಂಡರು ॥೪೧೪॥

ಕರ್ಣಜ ಪಾರ್ಥರ ಶಿರವ । ವರ್ಣಿಸಿ ನಾಗಕನ್ನೆಯರು ಮ ।
ಹಾರ್ಣಘೋಷದಿ ಬಾ । ಯಾರುತ್ತ । ಮೋಹ । ದೋರುತ್ತ ॥೪೧೫॥

**ಭಾಮಿನಿ**

ಪತಿಯ ಶಿರವನು ಕಂಡು ಚಿತ್ರಾಂ ।
ಗದೆಯು ಧೊಪ್ಪನೆ ಕೆಡಹಿಯವನಿಗೆ ।
ಯತಿಶಯದ ರೋದನದಿ ಬಿದ್ದುರುಳಿದಳು ಹುಡಿಯೊಳಗೆ ॥
ಗತಿಯೆಮಗೆ ದಾರೆಂದು ಚಿತ್ರಾಂ ।
ಗದೆಯು ಶಿರದಲಿ ಮೆಯ್ಯ ಚಾಚುತ ।
ಸುತನು ಕಂಟಕನಾದನೇಯಕಟಕಟ ನಿನಗೆಂದು ॥೪೧೬॥

**ರಾಗ ನೀಲಾಂಬರಿ ಝಂಪೆತಾಳ**

ದೇವತಾಂಶಜನೆ ರಣಧೀರ । ಎನ್ನರಸ ।
ದಾವಾಗ್ನಿಯುಳಿಯದೆ ದೇವೇಂದ್ರ ಸುಕುಮಾರ ॥ ಪ ॥

ಈಶ್ವರಾಜ್ಞೆಯಲಿ ಜನಿಸಿದರು । ಪಾಂಡವರು ।
ವಿಶ್ವದಿಗಧಿಪನು ಮೈದುನನು ಮಾಧವನು । ನಿಮ್ಮ ।
ಶಾಶ್ವತಕೆ ಹೊಣೆಯಾದ ಕೃಷ್ಣನಗಲಿದನೆ ॥೪೧೭॥

ಸಹಾಯವಾಗಿರೆ ಸಚರಾಚರರು । ಪ್ರಾಣವನು ।
ಮಾಯಕದಿ ಕದ್ದೊಯ್ದ ಭಟನ್ಯಾರು । ನಿಮಗಿನ್ನು ।
ಬಾಯ ಬಡಿದನೆ ಬ್ರಹ್ಮನೆಂದು ತರುಣಿಯರು ॥೪೧೮॥

**ಭಾಮಿನಿ**

ಮಗನೆ ಈ ವೈಧವ್ಯ ದುಃಖವು ।
ಸೊಗಸಿದಾಯಿತೆ ನಿನಗೆ ಖಡುಗವ ।
ತೆಗೆದು ನಮ್ಮೀರ್ವರ ಶಿರಂಗಳನಿಳುಹು ಬೇಗದಲಿ ॥
ಅಥವ ಪೊತ್ತೆನು ಪಿತನ ಛೇದಿಸಿ ।
ಹಗೆಗನಾದೆನು ಪಾಂಡುಸುತರಿಗೆ ।
ಮೊಗವ ಕೃಷ್ಣನಿಗೆಂತು ತೋರುವೆನೆನುತ ಚಿಂತಿಸಿದ ॥೪೧೯॥

**ರಾಗ ನೀಲಾಂಬರಿ ಏಕತಾಳ**

ಕ್ಷತ್ರಿಯಲ್ಲವೆಂಬುದಕ್ಕೆ । ಶಿರವರಿದೆನು ।
ಅತ್ತು ನೀವು ಸಾಯಲೇಕೆ ॥
ಪುತ್ರ ನಾ ಮಾಡಿದ ತಪ್ಪಿಗೆ । ಪೊಗುವೆ ವೀತಿ ।
ಹೋತ್ರನಾಹುತಿಮುಖಕೆ ॥೪೨೦॥

ಪಾಪ ಧರಿಸಿ ಇರಲೇಕೆ । ಈ ದೇಹವಗ್ನಿ ।
ಕೂಪಕೆ ಅರ್ಪಿಸುವೆ ನಾನು ॥
ಧೂಪ ಕರ್ಪೂರ ಶ್ರೀಗಂಧ । ಕಾಷ್ಠಗಳನ್ನು ।
ಈ ಪರಿಯಲಿ ತರಿಸಿದ ॥೪೨೧॥

ಸಿತವಾಹನನ ರಕ್ಷೆಗೆ । ಬರುವನೀಗ ।
ಶತಪತ್ರದಳಲೋಚನ ॥
ಖಾತಿಯಿಂದೆಮಜ ಭೀಮ । ಬರುವನಕ ।
ಹುತವಾಹನನ ಪೊಗುವೆ ॥೪೨೨॥

**ಭಾಮಿನಿ (ಅರ್ಧ)**

ಚಂಡವಿಕ್ರಮ ನುಡಿದ ನುಡಿಯನು ।
ಪುಂಡರಿಕಲೋಚನೆಯು ಕೇಳುತ ।
ಕೊಂಡವನು ರಚಿಸದಿರು ಸಾಕೆಂದಳು ನಯೋಕ್ತಿಯಲಿ ॥

**ರಾಗ ಘಂಟಾರವ ಝುಂಪೆತಾಳ**

ಜಾತ ಕೇಳ್ಳೆ ನಿನ್ನ ತಾತನೆಬ್ಬಿಸುವುದಕೆ ।
ಪಾತಾಳಗೊಳಗಿಹುದು । ಮತ್ತೆ ಸಂಜೀವ ॥೪೧೩॥

ದಕ್ಷಮುಖಭಂಗನೊಳು । ತಕ್ಷಕಾದ್ಯರು ಕೂಡಿ ।
ರಕ್ಷಣೆಗೆ ಕೊಂಡಿಹರು । ಪಕ್ಷೀಂದ್ರಭಯದಿ ॥೪೧೪॥

ನರರಿಗಸದಳವಲ್ಲಿ । ನಾಗಲೋಕವನಿಳಿದು ।
ತರುವ ವೀರರ ಕಾಣೆ । ತೀವ್ರ ಫಣಿಯೊಡನೆ ॥೪೧೫॥

**ಭಾಮಿನಿ (ಅರ್ಧ)**

ಮಾತೆಯಂಘ್ರಿಗೆ ನಮಿಸಿ ಚಿಂತೆಗ ।
ಳೇತಕಂಜದಿರೆಂದು ಕರ್ಣಜ ।
ಪಾರ್ಥರನು ಜೀವಿಸುವೆ ನೇಮವ ಪಾಲಿಸೆನಗೆಂದ ॥

**ರಾಗ ಸೌರಾಷ್ಟ್ರ ಝುಂಪೆತಾಳ**

ಲೇಸು ಕಾರ್ಯವ ತೋರಿದೆ । ಎನಗವ್ವ । ಈ ಸುಗುಣನೆಬ್ಬಿಸುವೆ ॥
ಈಶನಾ ಪಣೆಯೊಳಿರಲಿ । ಸಂಜೀವ । ವಾಸವನ ಮರೆಯೊಳಿರಲಿ ॥೪೧೬॥

ತಾರದಿರೆ ನಿನ್ನ ಸುತನೆ । ನಾನಲ್ಲ । ಸರಸಿಜೋದ್ಭವ ತಡೆವನೆ ॥
ಒರಗಿಸುವೆ ನಿಮಿಷದೊಳಗೆ । ಈಯದಿರೆ । ಉರಿಸುವೆನು ನಾಗಕುಲವ ॥೪೧೭॥

ತಮ್ಮ ಕರ್ಣಜಪಾರ್ಥರ । ಹರಿಸುತರ । ನೊಮ್ಮೆಯೆಬ್ಬಿಸದಿರ್ದರೆ ॥
ಧರ್ಮಜನ ಯಜ್ಞ ತಡೆದ । ಭವವೆನಗೆ । ಬ್ರಹ್ಮನಿರುವನಕ ಬಿಡದು ॥೪೧೮॥

**ಭಾಮಿನಿ**

ಮಗನೆ ಮರುಳಾಗದಿರು ನಿನ್ನನು ।
ಬಗೆವನಲ್ಲಾ ಶೇಷರಾಜನು ।
ಬಗೆಯು ಬೇರುಂಟೆಂದು ಕರೆದಳು ಪುಂಡರಿಕಫಣಿಯ ॥
ಸುಗುಣೆ ಶಿರ ಕೆಡದಂತೆ ಕಚ್ಚಿಸಿ ।

ಮಿಗೆಯು ಶೇಷಂಗಿತ್ತು ಗುರುತವ ।
ವಿಗಡ ಸಂಜೀವನವ ತಾರೆಂದಟ್ಟಿದಳು ತರಳೆ ॥೪೧೯॥

**ರಾಗ ಮಾರವಿ ಆದಿತಾಳ**

ಲೂಪಿಯೊಳಪ್ಪಣೆಗೊಂಡು । ಉರಗ ತಾ ನಡೆತಂದು ।
ಅಪರಿಮಿತ ಸಭೆಯಲ್ಲಿ । ಉರಗೇಂದ್ರನೊಡನೆ ॥೪೨೦॥

ಕಂಡೊಡೆಯಗೆರಗಿ । ಪುಂಡರೀಕ ಗುರುತದ ।
ಕುಂಡಲವ ಮುಂದಿಟ್ಟು ಉ । ದ್ದಂಡದೊಳ್ ನುಡಿದ ॥೪೨೦॥

ದೇವ ಪಾಂಡವರು ಕೌ । ರವರ ಮರ್ದಿಸಿ ಯಜ್ಞ ।
ಭಾವ ಕೃಷ್ಣನನುಜ್ಞೆ । ಯಿಂದ ರಚಿಸಲು ॥೪೨೧॥

ತುರಗದೊಡನರ್ಜುನನು । ತಿರುಗಿ ಬಭ್ರುವಾಹನನ ।
ಪುರದಿ ವಾಜಿಯ ಬಿಟ್ಟು । ರಣದೊಳು ಮಡಿದ ॥೪೨೩॥

ನಿನ್ನ ಮಗಳು ಲೂಪಿ । ತನ್ನ ದುಃಖದಿಂದಲಿ ।
ಎನ್ನನಟ್ಟಿದಳ್ ಸಂಜೀ । ವನವ ತಾರೆನುತ ॥೪೨೪॥

**ಭಾಮಿನಿ**

ಖಂಡಪರಶುವು ಮೂರು ಲೋಕದ ।
ಗಂಡನರ್ಜುನನಿಳೆಯ ಕಪ್ಪವ ।
ಕೊಂಡು ವಾಜಿಯ ಬಿಟ್ಟು ಮಡಿದನೆ ಬಭ್ರುವಹನನಲಿ ॥
ದಂಡಧರ ಹಿರಿಯಯ್ಯ ಮೃತ್ಯುವ ।
ಕಂಡು ನಮಿಸುವ ನಮಗೆ ರಾಜ್ಯವ ।
ಕೊಂಡು ಕೊಡಿಸಿದ ಕೃಷ್ಣಸಾರಥಿ ವಜ್ರಕವಚವಲಾ ॥೪೨೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳಿದನು ಕೌಂತೆಯನ ಭಂಗವ । ತಾಳಿದನು ಕುಂಡಲವ ದುಃಖವ ।
ಭಾಳ ಸಭೆಯಲಿ ಶೇಷ ನುಡಿದನು । ವ್ಯಾಳಕುಲಕೆ ॥೪೨೬॥

ನೋಡಿದಿರೆ ಧೃತರಾಷ್ಟ್ರ ಮುಖ್ಯರು । ಬೇಡುವರು ಸಂಜೀವಮಣಿಯನು ।
ನೀಡುವೆನು ನಮ್ಮಳಿಯ ಜೀವನ । ಮಾಡುವುದಕೆ ॥೪೨೭॥

**ವಚನ**

ಇಂತೆಂದು ಶೇಷರಾಜನು ನುಡಿಯಲಾಗಿ, ಧೃತರಾಷ್ಟ್ರ ಉರಗನು ಏನೆಂದನು ಎಂದರೆ -

**ರಾಗ ದೇಶಿ ಏಕತಾಳ**

ಆಗದಾಗದು ಫಣಿಪಾಲ । ಸಾಧನವನಿ ।
ತ್ತಾಗಲೆ ಬಂತೆಮಗೆ ಕಾಲ ‖
ಈಗ ಸಂಜೀವನ ನರರಿಗೆ ಕೊಟ್ಟರೆ ।
ನಾಗವೈರಿಯು ಕೊಲುವಾಗ ಬರುವುದೆ ‖ ಆಗದಾಗದು ‖ ಪ ‖

ಮರೆವು ಮನುಜರಿಗೆ ಗಾಢ । ತಂದ ವಸ್ತುವ ।
ಮರಳೀಯಬೇಕೆಂದು ನೋಡಾ ‖
ಸರಸಿಜಭವ ಫಣೆಯಲಿ ಬರೆದ ಲಿಪಿ ।
ಬರೆಸಿ ಮುನಿಗಳಂತೆ ಸ್ಥಿರದಿ ಬಾಳುವರೆ ‖ ಆಗದಾಗದು ‖೪೩೮‖

ನರಲೋಕದವರಲ್ಪಾಯುಷ್ಯದವರು । ಸಜ್ಜನರಂತೆ ।
ಪರರುಪಕಾರವನರಿಯರು ‖
ಧುರದೊಳಳಿದ ಲೂಪಿವರನ ರಕ್ಷಿಸದೀಗ ।
ನರನ ಸಾರಥಿ ಮುರಹರನು ಬಿಡುವನೆ ‖ ಆಗದಾಗದು ‖೪೩೯‖

**ಭಾಮಿನಿ**

ದುಷ್ಟ ಧೃತರಾಷ್ಟ್ರುರಗಮಂತ್ರಿಗೆ ।
ವಿಷ್ಣುರೂಪನನಂತ ಕೋಪಿಸಿ ।
ಕಷ್ಟವನು ಗಳಿಸುತ್ತ ಕೆಡಿಸುವಿರುರಗಲೋಕವನು ‖
ನಷ್ಟವಾಗದು ನರನ ಪ್ರಾಣವು ।
ಕೃಷ್ಣರಾಯನ ಕಯ್ಯೊಳಿಹುದೆಲೆ ।
ಭ್ರಷ್ಟ ಹೋಗೆಂದೆನುತ ಕರೆದನು ಪುಂಡರಿಕಫಣಿಯ ‖೪೪೦‖

**ರಾಗ ತೋಡಿ ಏಕತಾಳ**

ಪುಂಡರೀಕ ನೀ ಬಾರಯ್ಯ । ಪೋಗಿ ಲೂಪಿಗೆ ।
ಕುಂಡಲಂಗಳ ತೋರಯ್ಯ ‖
ಕಂಡೆಯ ನಮ್ಮುಕ್ತಿಗಳ ಕೇಳದಿರುವ ।
ಪುಂಡು ಫಣಿಗಳು ಮಣಿಯ ಕೊಡದಿಹ ಪಾಡು ।
ನೀ ನೋಡು । ಬಹ ಕೇಡು । ಲೂಪಿಯೊಳ್ ಮಾತಾಡು ‖೪೪೧‖

ಒಪ್ಪಿ ಉರಗ ನಡೆದ । ರಣದೊಳು ಕಾ ।
ದಿಪ್ಪ ಲೂಪಿಯೊಳ್ ನುಡಿದ ‖
ಒಪ್ಪುಗೊಡದಿರುವ ಫಣಿಗಳ ಸಂಗತಿ ।
ತಪ್ಪದೆ ಬಭ್ರುವಾಹನನು ಲಾಲಿಸಿ ಕೇಳಿ ।
ಫಣಿಚಾಳಿ । ರೋಷವ ತಾಳಿ । ಕೆಟ್ಟಿತೀಹಾಳಿ ‖೪೪೨‖

**ಭಾಮಿನಿ**

ಕುಂಡಲದ ಕುರುಹವನು ಕಾಣುತ ।
ಪುಂಡು ಫಣಿಗಳಿಗ್ಹಾಸ್ಯವಾಯಿತೆ ।
ಹಿಂಡಿ ಕಳೆವೆನು ಕರ್ಣದೋಲೆಯ ನಾಗಹೆಂಡಿರನು ॥
ಕೆಂಡವನು ಕಾರುತ್ತರೋಷದಿ ।
ಚಂಡವಿಕ್ರಮಿ ಪಾರ್ಥಿ ಧನು ಕೈ ।
ಗೊಂಡು ಚಾಪವನೆರಗಿ ಜನನಿಗೆ ಪೊರಟನಾ ಕ್ಷಣಕೆ ॥೪೪೪॥

**ರಾಗ ನೀಲಾಂಬರಿ ಅಷ್ಟತಾಳ**

ತಾಯಿಗೊಂದಿಸಿ ಬಿಲ್ಲ ಪಿಡಿದನು । ಅಶ್ವ ।
ಲಾಯಕೆರಗಿ ಮೀಸೆಗಡಿದನು ॥೪೪೫॥

ಮೂರು ಲೋಕದ ವೀರ ಮಡಿದರೆ । ಮಣಿ ।
ಕ್ರೂರ ಫಣಿಗಳು ಕೊಡದೆ ತಡೆದರೆ ॥೪೪೬॥

ನಾಗನಗರವನು ಸುಟ್ಟು ತರಿಸುವೆ । ರತ್ನ ।
ಈಗ ಪಾರ್ಥನ ಪ್ರಾಣ ಬರಿಸುವೆ ॥೪೪೭॥

ಎಣಿಸದಿರವ್ವ ಬಹಳ ಪರಿಯನು । ಶೇಷ ।
ಮಣಿ ಸಹಿತಲೆ ಕೊಂಡು ಬರುವೆನು ॥೪೪೮॥

ಬಿಡದೆ ಸೈನ್ಯವ ಪಾರ್ಥಿ ನಡೆಸಿದ । ಬೇಗ ।
ಸಡಗರದಲಿ ಮಾರ್ಗ ಬಿಡಿಸಿದ ॥೪೪೯॥

**ಭಾಮಿನಿ**

ಭೂಮಿಯನು ಹೊಡೆದಬ್ಬರಕೆ ದಿಗು ।
ಸ್ತೋಮ ಬೆದರಿತು ದಿಗ್ಗಜಾವಳಿ ।
ತಾಮಸಕೆಯೆದೆ ಬಿರಿದು ಕೂರ್ಮನು ಬಳಲಿ ಬಸವಳಿದ ॥
ಆ ಮಹಾನಾಗರಿಕ ಕುಲ ನಿ ।
ಸ್ಸೀಮ ಫಲುಗುಣಿಯೆಚ್ಚು ತರಿದನು ।
ಭೀಮಬಲ ಶೇಷಂಗೆ ದೂರಿತು ಅಖಿಳ ಫಣಿನಿಕರ ॥೪೫೦॥

**ದ್ವಿಪದಿ**

ಜೀಯ ಜಗದೊಳಗಿಲ್ಲ ಜೋಡು ಅರ್ಜುನಿಗೆ ।
ಕಾಯಲಾಗದೆ ನಮ್ಮ ಕಣೆಯ ಪ್ರಜ್ವಲಕೆ ॥೪೫೧॥

ಧೃತರಾಷ್ಟ್ರ ಮರೆಗೊಂಡು ಧುರದಿ ಬಸವಳಿದು ।
ಅತಿಶಯದ ಫಣಿಸೇನೆ ಹೇರಾಳ ಅಳಿದು ॥೪೫೧॥

ಗರಳ ಸುರಿವುತ ನಾವು ಗೆಲಿದವನ ಪಡೆಯ ।
ಸರಳನೊಡ್ಡಿನೊಳಿಪ್ಪತ್ತೊಂದು ಸಾವಿರವ ॥೪೫೨॥

ನರನ ಮಗ ಕೋಪಿಸುತ ನಾಗಸಂತತಿಯ ।
ಸರಳಿನಲಿ ಸಂಹರಿಸಿ ತುಂಬಿದನು ಕ್ಷಿತಿಯ ॥೪೫೪॥

ಸಿತವಾಹನಗೆ ಸಂಜೀವನವ ಕೊಡಿರೆನುತ ॥
ಪ್ರೀತಿಯಹುದೆಮಗಿನ್ನು ಕೃಷ್ಣನೊಡನೆನುತ ॥೪೫೫॥

ಆ ಮಣಿಯು ಪಾರ್ಥನಿಗೆ ಮಾಧವನು ಇರಲು ।
ಈ ಮಣಿಯ ನೆವದಿಂದ ನಮ್ಮ ಕೊಲುತಿರಲು ॥೪೫೬॥

ಎಂದ ಮಾತಿಗೆ ಅಹಿಪನಂಜದಿರಿಯೆನುತ ।
ಮಂದಮತಿ ಧೃತರಾಷ್ಟ್ರನೊಡನೆ ಕೋಪಿಸುತ ॥೪೫೭॥

ಧರ್ಮ ಉಪಕಾರಗಳ ತಡೆದ ದುಷ್ಟರಿಗೆ ।
ಕರ್ಮವುಣಿಸದೆ ಬಿಡದು ಕೇಳಿರೈ ಕಡೆಗೆ ॥೪೫೮॥

**ಭಾಮಿನಿ (ಅರ್ಧ)**

ಫಣಿಪನಹಿಗಳ ಬಯ್ದು ಸಂಜೀ ।
ವನ ಸುವಸ್ತುವ ಕೊಂಡು ಮೊಮ್ಮನ ।
ಗುಣ ಪರಾಕ್ರಮ ಪೊಗಳಿ ಪೊರಟನು ಆ ರಣಾಂಗಣಕೆ ॥

**ರಾಗ ಶಂಕರಾಭರಣ ಏಕತಾಳ**

ಶೇಷನೆದ್ದು ಸಿಂಗರಿಸಿ । ಆ ಸುರತ್ನವನ್ನು ಕೊಂಡು ।
ಸಾಸಿರ ಚಕ್ರಂಗಳಿಂದ ಬಿಜಯಂಗೆಯ್ದನು ॥೪೫೯॥

ಬಭ್ರುವಾಹನನ್ನು ನೋಡಿ । ಬಹಳ ಪ್ರೀತಿಯನ್ನು ಮಾಡಿ ।
ಇಬ್ಬರೊಂದಾಗಿ ಪೋದರಿಳೆಯ ಭೂಮಿಗೆ ॥೪೬೦॥

**ಭಾಮಿನಿ**

ಚಿತ್ತವಿಸು ಭೂಪಾಲ ಸಕಲ ಸು ।
ವಸ್ತು ಮಣಿಸಹಿತಾಗಿ ಶೇಷನು ।
ಪೌತ್ರನನು ಕರೆಕೊಂಡು ಕೃಷ್ಣಾರ್ಜುನರ ದರುಶನಕೆ ॥
ಅತ್ತಲಾ ಧೃತರಾಷ್ಟ್ರ ಉರಗನು ।

ಕೌಂತೆಯರ ಶಿರವನ್ನು ಮಾಯದಿ ।
ಉತ್ತರಾಬ್ಧಿಯೊಳಡಗಿ ಸಿಟ್ಟನು ನಾಚಿ ಖತಿಗೊಂಡು ॥೪೯೧॥

**ರಾಗ ನೀಲಾಂಬರಿ ತ್ರಿವುಡೆತಾಳ**

ಶಿರವ ಕಾಣದೆ ಚಿತ್ರಾಂಗದೆ ತಾನು । ಲೂಪಿ ।
ಯರಸಿದಳೆಂಟು ದಿಕ್ಕುಗಳನ್ನು ॥
ಮಗನ ದೂರುವುದಿನ್ನು ಸುಮ್ಮನೆ । ಅಕ್ಕ ।
ಪಗೆಯವರೊಯ್ದರೊ ಘಮ್ಮನೆ ॥೪೯೨॥

ಏನು ವಿಘ್ನಗಳೆಂದು ತಿಳಿಯದು । ತಂಗಿ ।
ಮುತ್ತೈದೆತನ ನಮಗುಳಿಯದು ॥
ತಾಳಬಲ್ಲೆವೆ ಈ ವೈಧವ್ಯವ । ತಂಗಿ ।
ಕೇಳೀಗ ಜೀವವುಳಿಯದು ಕಾಣೆ ॥೪೯೩॥

ಕ್ಲೇಶವ ಬಿಡುತ ಮನದೊಳಗಂದು । ಶೇಷ ।
ಬಂದನೊ ಇಲ್ಲವೊ ತಿಳಿಯದು ।
ಕೇಶವ ತಾ ಬಾರನೆನುತಲಿ । ಶೇಷ ।
ಬಭ್ರುವಾಹನಸಹಿತಲೆ ಬಂದು ॥೪೯೪॥

**ಭಾಮಿನಿ (ಅರ್ಧ)**

ನಾಗರಾಜನ ಕಾಣುತಬಲೆಯ ।
ರಾಗ ಕ್ಲೇಶವ ಬಿಟ್ಟು ನಡೆದರು ।
ಬಾಗಿ ಪೊಡವಂಟಾತ್ಮಜನ ಬಿಗಿದಪ್ಪಿ ಶೋಕದಲಿ ॥

**ರಾಗ ಆನಂದಭೈರವಿ ಏಕತಾಳ**

ಬಂದನೆ । ಶೇಷ । ಬಂದನೆ ॥
ಬಂದನೆ ಶೇಷಾಂಘ್ರಿಗೆರಗಿ । ನಂದನೆಯರು ದುಃಖದಿ ॥ ಬಂದನೆ ॥ ಪ ॥

ತಂದೆ ಲಾಲಿಸಯ್ಯ ಪಾರ್ಥನ । ಕಂದ ಕೈ ಮಾಡಿದ ಶಿರವು ।
ತೋರದು । ಕಯ್ಗೆ । ಸೇರದು ॥೪೯೫॥

ಮುತ್ತಿ ಕಾದಿದ್ದೆವು ಪೆಣನ । ಸುತ್ತಲೂ ದೀಪಗಳಿಂದ ।
ಒಯ್ದರು । ಬಾಯ । ಹೊಯ್ದರು ॥೪೯೬॥

ಇಷ್ಟಾದ ಮೇಲೆಮ್ಮ ರಮಣ । ನೊಟ್ಟಿಗೆ ಸುಡುವಂತೆ ಕಾಯ ।
ಬಿಡುವೆವು । ಅಗ್ನಿಗೆ । ಕೊಡುವೆವು ॥೪೯೭॥

**ಭಾಮಿನಿ (ಅರ್ಧ)**

ಭಂಗವನು ಕಾಣುತ್ತಲಾ ಚಿ ।
ತ್ರಾಂಗದೆಯ ಪಿಡಿದೆತ್ತಿ ಲೂಪಿಯ ।
ಕಂಗಳುದಕವನೊರಸಿ ತಾನಿಂತೆಂದ ಫಣಿರಾಜಾ ॥

**ರಾಗ ಮಧ್ಯಮಾವತಿ ತ್ರಿವುಡೆತಾಳ**

ಮಗಳೆ ಮರುಗುವುದೇಕೆ ಸುಮ್ಮನೆ ।
ಪಗೆಯವರು ಕೊಂಡೊಯ್ದರಾಯಿತೆ ।
ನಗಧರನು ತರಿಸಿತ್ತು ನಿನ್ನಯ ।
ಮೊಗಕೆ ಮಂಗಳ ಮಾಳ್ಪನು ॥೪೭೮॥

ಮನುಜನೇ ಮಾರುತಿ ಸಹೋದರ ।
ವನಜನೇತ್ರನ ಪ್ರತಿಶುಭಾಕರ ॥
ದನುಜಹರನೀಕ್ಷಿಸದೆ ತನ್ನಯ ।
ಅನುಜೆಯಾಳ್ದನ ಬಿಡುವನೆ ॥೪೭೯॥

ಬಾಲೆ ನಿನ್ನಾತ್ಮಜನು ಬಿಡುವನೆ ।
ಕಾಲನಂದದಿ ತರಿದು ಫಣಿಗಳ ॥
ಸೋಲಿಸೆಮ್ಮಯ ಮಣಿಯ ಕೊಂಡನು ।
ಲೋಲನಾಭನ ಕರುಣದಿ ॥೪೮೦॥

**ಭಾಮಿನಿ**

ಇಂತು ನುಡಿದುದ ಕೇಳಿ ಫಲುಗುಣಿ ।
ಯಂತರಂಗವ ತಿಳಿದು ಕರ್ಣಜ ।
ಕೌಂತೆಯರ ಜೀವಿಸುವೆನೀ ಕ್ಷಣಕೆಂದು ಗರ್ಜಿಸಿದ ॥
ಕುಂತಿ ಗಜಪುರದೊಳಗೆ ಕಂಡಳು ।
ಕೌಂತೆಯರು ಮಡಿದಂತೆ ಸ್ವಪ್ನವ ।
ನಂತಕಾತ್ಮಜ ಕೃಷ್ಣ ಭೀಮಾದಿಗಳಿಗುಸಿರಿದಳು ॥೪೮೧॥

**ರಾಗ ಕಲ್ಯಾಣಿ ಅಷ್ಟತಾಳ**

ಕಂಡೆ ಕನಸಿನೊಳು । ಶ್ರೀಕೃಷ್ಣನೊಲಿದು । ಖಂಡಿತವನು ಪೇಳು ॥
ದಂಡ ಧರನ ದೇಶಕಾಗಿ ಕತ್ತೆಯನೇರಿ ।
ಖಂಡಲಾತ್ಮಜ ಪೀತವಸನವನುಟ್ಟುದ ॥ ಕಂಡೆ ॥ ಪ ॥

ದಾಸಣಕುಸುಮಮಾಲೆ । ಕಂಠದೊಳಿಟ್ಟು ।
ಪೂಸಿ ಗೋಮಯ ಮೆಯ್ಯೊಳು ॥

ಸೂಸಿ ತೈಲವ ಪಣೆಯೊಳಗೆ ಮೃತ್ತಿಕೆ ಬೊಟ್ಟು ।
ವೇಷವ ಮರೆಸಿದ ಫಲುಗುಣನು ॥ ಕಂಡೆ ॥೪೭೧॥

ಒಡಲುರಿವುತಿದೆನ್ನಯ ಮೆಯ್ಯ । ಮಮಕಾರದಿ ।
ಸುಡುವುತಿದ್ಯಾತಕಯ್ಯ ॥
ಮಡದಿ ಸುಭದ್ರೆ ಕಂಗಳ ನೀರಲಪಜಯ ।
ಕಡಲಶಯನ ಕೇಳುತಲಂಜದಿರೆಂದ ॥ ಕಂಡೆ ॥೪೭೩॥

**ಭಾಮಿನಿ (ಅರ್ಧ)**

ಇಂತು ಸ್ವಪ್ನದ ಬಗೆಯನೆಲ್ಲವ ।
ಕುಂತಿ ಪೇಳುತಲಿರಲು ಧರ್ಮಜ ।
ಚಿಂತೆಯಿಂದಲಿಯಳುತ ನುಡಿದನು ಮತ್ತೆ ಮುರಹರಗೆ ॥

೬

**ರಾಗ ಕಾನಡ ಆದಿತಾಳ**

ನೋಡಿ ಬರುವ ಕೃಷ್ಣ ಪೋಗಿಯರ್ಜುನನ ।
ರೂಢಿಯೊಳಗೆ ಯಾವ ದೇಶದೊಳಿಹನೆಂದು ॥ ಪ ॥

ಯೋಗಿ ಪೇಳಿದ ಮಾತಿಗಾಗಿ ಯಜ್ಞವ ತಾಳ್ದೆ ।
ನಗೆಗೀಡಾಗದ ರೀತಿ ಮಾಡು ಕರುಣದಿಂದ ॥೪೭೪॥

ಪ್ರಾಣ ಪಾಂಡವರೆಂದು ಕಾಣಿಸಿ ಸುಜನನು ।
ಕ್ಷೋಣಿಯೊಳಿರುವಂತೆ ಮಾಡು ಕರುಣದಿಂದ ॥೪೭೫॥

ಅಂಗರಕ್ಷೆಗೆ ವೃಷಕೇತುವನಿರುದ್ಧರು ।
ಅಂಗಜನುರೆಯೇನಾದರೊ ಎಂದು ॥೪೭೬॥

ಜನನಿ ಪೇಳ್ದ ಸ್ವಪ್ನದಿ ಒಡಲುರಿವುತಿದೆನ್ನ ।
ಅನುಜನ ಕಾಣದೆ ಇರಲಾರೆ ಕರುಣದಿಂದ ॥೪೧೭॥

ಕುಂತಿ ದೇವಕ್ಯಶೋದೆ ಕಾಂತೆ ಸುಭದ್ರೆಯರ ।
ಸಂತವಿಸಯ್ಯ ದ್ರುಪದರಾಜಕುವರಿಯ ॥೪೧೮॥

**ರಾಗ ಭೈರವಿ ಝಂಪೆತಾಳ**

ಎಲೆ ಯುಧಿಷ್ಠಿರ ಕೇಳು । ನಿನ್ನ ಸತ್ಯಸ್ಥಿತಿಗೆ ।
ಅಳಿವುಂಟೆ ಕಾಯದಲಿ । ರಣದಿ ಫಲುಗುಣಗೆ ॥೪೧೯॥

ದೇವಕುಲದವರೆಂದು | ದೇವಕಿಯ ಮಗಳಿತ್ತೆ |
ಭಾವತನ ತೋರಿದೆನು | ಭಂಡಿಯಲಿ ನರನ ॥೪೩೦॥

ಯಜ್ಞ ಬಿಡದಿರು ಇನ್ನು | ನುಡಿಯ ಪೂರಯಿಸುವೆನು |
ಶೀಘ್ರ ಬರುವೆನು ಕಂಡು | ವಿಜಯನೊಡಗೊಂಡು ॥೪೩೧॥

**ಭಾಮಿನಿ (ಅರ್ಧ)**
ಇಂತು ಸ್ವಪ್ನದ ಬಗೆಯ ಕೇಳುತ |
ಚಿಂತೆರಹಿತನು ಅಭಯವಿತ್ತನು |
ಕುಂತಿ ದೇವಕ್ಯಶೋದೆ ಭೀಮನ ಕೊಂಡು ಪಯಣದಲಿ ॥

**ರಾಗ ಘಂಟಾರವ ಝಂಪೆತಾಳ**
ಕಣ್ಣನೀರಬ್ಧಿಯಲಿ ಕೌಂತೇಯನರಸಿಯರು |
ಬಣ್ಣಗೆಟ್ಟೊರಲಿದರು ಒಡನೆ ಸಲಹೆನುತ ॥೪೩೨॥

ಹೆಣ್ಣುಜನ್ಮವು ಸಾಕುಯೆನಗೆನುತ ಸೌಭದ್ರೆ |
ಅಣ್ಣನಡಿಗೆರಗಿದಳು ಬಹಳ ಬಸವಳಿದು ॥೪೩೩॥

ತನಯನಳಿದಾ ದಿನವೆ ತೊರೆಯದಾದೆನು ಪ್ರಾಣ |
ಇನಿಯನೊಡನೊಪ್ಪಿಸುವೆನೆನುತ ಸೌಭದ್ರೆ ॥೪೩೪॥

ಕಂಜಾಕ್ಷ ನಿನ್ನೊಡನೆ ಜನಿಸಿದರೆಯೆನಗೆ ವಿಧಿ |
ಭುಂಜಿಸಿತೆಯೆಂದಳು ಧನಂಜಯನ ರಾಣಿ ॥೪೩೫॥

ನಿನ್ನ ದೆಸೆಯಿಂದಾದ ರಮಣರೈವರುಯೆನಗೆ |
ಇನ್ನೊಬ್ಬರನು ಕಾಣೆನೆನುತ ಪಾಂಚಾಲೆ ॥೪೩೬॥

ಎತ್ತಿ ನಯನವನೊರೆಸಿ ಕೃಷ್ಣನವರವರಿಂಗೆ |
ಸಂತವಿಸಿ ಬರಲೇಕೆಯೆಂದವರ ನಿಲಿಸಿ ॥೪೩೭॥

ಯಾಗರಕ್ಷೆಗೆ ನಿಲಿಸಿ ನಕುಲಸಹದೇವರನು |
ಬೇಗದಿಂದಲೆ ನೆನೆದ ನಾಗವೈರಿಯನು ॥೪೩೮॥

**ರಾಗ ಘಂಟಾರವ ಆದಿತಾಳ**
ನಾಳೆ ಬರುವೆನೆಂದು ಅಳುವ ಸುಭದ್ರೆಯ |
ಪೇಳಿ ಮುದ್ದಿಸಿ ಕುಂತಿ ತಕ್ಕವಿಸಿದಳು ॥೪೩೯॥

ವೀರ ಮೂಲೋಕಕ್ಕೆ ನಿನ್ನ ಪುರುಷನು ।
ಈರೇಳು ಲೋಕದೊಡೆಯ ಕೃಷ್ಣ ರಕ್ಷಿಪನು ॥೪೪೦॥

ಅರಗಿನ ಮನೆಯಲ್ಲಿ ಉರಿಸೆ ಕೌರವ ನಮ್ಮ ।
ಪರಿಹರಿಸಿದ ಕೃಷ್ಣನಲ್ಲದಿನ್ನ್ಯಾರು ॥೪೪೧॥

ತರಣಿನಂದನ ನೆಚ್ಚ ಉರಗಸ್ತ್ರ ಭರದೊಳು ।
ಧರಣಿಗೊತ್ತಿ ಕಾಯ್ದ ಶಿರವನರ್ಜುನನ ॥೪೪೨॥

ಅನ್ನವಸ್ತ್ರವಿಲ್ಲದೆ ಅಡವಿಯೊಳೈವರ ।
ಅನ್ಯರ ತಿರುಕೂಳಿನಿಂದ ಸಾಕಿದನು ॥೪೪೩॥

**ವಾರ್ಧಕ**

ಅಣುಗ ಕೇಳೈ ಕುಂತಿ ಸೊಸೆಯರನು ಸಂತವಿಸೆ ।
ವನಜನಾಭನು ಭೀಮ ದೇವಕಿ ಯಶೋದೆಯರು ।
ಫಣಿಕುಲಾರಿಯನೇರಿಯರಸಿಕೊಂಡರ್ಜುನನ ಮಣಿನಗರದೊಳ್ ಕಂಡರು ॥
ರಣದೊಳಗೆ ಮಲಗಿರುವ ಮಾರ್ಬಲದ ಮಧ್ಯದೊಳ್ ।
ಗಣಿಕೆಯರು ಧೂಪದೀಪಗಳಿಂದಲರ್ಜುನನ ।
ಗುಣವ ಪಾಡುತ ಕಿರೀಟಿಯ ಸತಿಯರಿರೆ ಕೃಷ್ಣನನಿಲಜಗೆ ತೋರಿಸಿದನು ॥೪೪೪॥

**ರಾಗ ಸೌರಾಷ್ಟ್ರ ಆದಿತಾಳ**

ಮಾರುತಿ ನೋಡಿದ ಮಣಿನಗರ । ಮುಂದೆ ।
ಧುರದೊಳಳಿದ ಸೈನ್ಯ ಸಾಗರ ॥೪೪೫॥

ನಮ್ಮ ಬಲವೆ ನೋಡು ನೋಡಯ್ಯ । ಕೆಡೆದ ।
ತಮ್ಮನಹುದೆ ತಿಳಿದು ಮಾತಾಡಯ್ಯ ॥೪೪೬॥

ತಾಮರಸಮೊಗವೇನಾಯಿತು । ಶಿರ ।
ಹೇಮಕಿರೀಟವೆತ್ತ ಪೋಯಿತು ॥೪೪೭॥

**ಭಾಮಿನಿ (ಅರ್ಧ)**

ಸರ್ಪಶಯನನ ನುಡಿಯ ಕೇಳುತ ।
ಕಲ್ಪತರು ನೆಟ್ಟಂತೆಯನಿಲಜ ।
ಬಿಲ್ಪಿಡಿಯೆ ಕೈ ಸಡಲೆ ಬೆರಗಾಗುತ್ತಲಿಂತೆಂದ ॥

**ರಾಗ ಕಾಂಭೋಜಿ ಅಷ್ಟತಾಳ**

ಶ್ರೀಲೋಲಲೋಚನ ಶ್ರೀವಿರೂಪಾಕ್ಷನೆ ।
ಏಕಾಂತನುಡಿಯೇತಕಿನ್ನು ॥೪೪೮॥

ಶ್ರೀಪತಿ ಸುರಪಜಾತನ ಮಡುಹಿದನ್ಯಾರು ।
ಕೋಪದ ಭಟನೆಲ್ಲಿತೋರು ॥೪೪೯॥

ತುರಗ ತಡೆದೆಲ್ಲರ ಮುರಿದವನನು ನೋಳ್ಪೆ ।
ಮುರಿದವನನು ಕಾಲವಶವ ನಾ ಮಾಳ್ಪೆ ॥೪೫೦॥

**ಭಾಮಿನಿ (ಅರ್ಧ)**

ನಳಿನನಾಭನು ಭೀಮವಚನಕೆ ।
ಇಳಿದು ಸಿತವಾಹನನ ಕಾಣುತ ।
ಅಳುವ ಸತಿಯರ ಸಂತವಿಸಿ ಮರುಗಿದನು ನರರಂತೆ ॥

**ರಾಗ ಕಾಂಭೋಜಿ ಏಕತಾಳ**

ಯಾರು ತಡೆದರಯ್ಯ ತುರಗ । ವೆಲೆ ಪಾರ್ಥ ॥ ಕಾದಿ ।
ಯಾರ ಕಯ್ಯ ಮಡಿದೆ ನೀನು । ಎಲೆ ಪಾರ್ಥ ॥೪೫೧॥

ಜೀವಸಖನು ನೀನು ಎನಗೆ । ಎಲೆ ಪಾರ್ಥ ॥ ನಿನ್ನ ।
ಭಾವನಾಗಿರ್ಪೆನೆಂದಿಗೆ । ಎಲೆ ಪಾರ್ಥ ॥೪೫೨॥

ಒಂದು ನಿಮಿಷ ಬಿಟ್ಟಿರಲಾರೆ । ನೆಲೆ ಪಾರ್ಥ ॥ ಈಗ ।
ಕ್ಷಮಿಸು ಎನ್ನ ಅಪರಾಧವ । ನೆಲೆ ಪಾರ್ಥ ॥೪೫೩॥

ಖ್ಯಾತಿವಡೆದೆ ಮೂಲೋಕಕ್ಕೆ । ಎಲೆ ಪಾರ್ಥ ॥ ಈಗ ।
ಭೂತಳಕ್ಕೊರಗಿದೆಯೇಕೊ । ಎಲೆ ಪಾರ್ಥ ॥೪೫೪॥

ಭೀಮ ಕುಂತಿಯರ ನೋಡು । ಎಲೆ ಪಾರ್ಥ ॥ ಮತ್ತೀ ।
ದೇವಕೀ ಯಶೋದೆಯರ್ ನೋಡು । ಎಲೆ ಪಾರ್ಥ ॥೪೫೫॥

**ಭಾಮಿನಿ**

ಚೇತನಾತ್ಮಕ ಮನುಜಲೀಲೆಯ ।
ವಾತಜನು ಕೇಳುತ್ತಲೆಲೆ ಜಗ ।
ನ್ನಾಥ ನಿನಗಿದು ಗಹನವೇ ರವಿಗಂಧಕಾರಹುದೆ ॥
ಘಾತಿಸಿದನಿವರುಗಳ ವೀರನೊ ।

ಳಾಂತು ನೋಡುವೆನೆನುತ ಕರ್ಣಜ ।
ಪಾರ್ಥರಾ ದೇಹವನು ಕಂಡ್ಹಲವಂಗದಲಿ ಮರುಗಿ ॥೪೫೬॥

**ರಾಗ ಪಂಚಾಗತಿ ರೂಪಕತಾಳ**
ತಮ್ಮ ಮಡಿದು ಎನಗೆ ಯಜ್ಞದಾಸೆ ತೀರಿತೆ ।
ಧರ್ಮಜಂಗೆ ರಾಜ್ಯ ಪೋಗಿಯಡವಿಯಾಯಿತೆ ॥೪೫೭॥

ಯಾಕೆ ಮಡಿದೆ ತಮ್ಮ ಎನಗೆ ಪೇಳು ಬಗೆಯನು ।
ಲೋಕ ಮೂರೊಳಿರಲು ಸುಟ್ಟು ಗೆಲುವೆ ಪಗೆಯನು ॥೪೫೮॥

ಈಸು ಬಲಗಳಿದ್ದು ತಮ್ಮ ಹೇಳಿ ಕಳುಹದೆ ।
ಆ ಸುಭದ್ರೆಕುಂತಿಯರಿಗೆ ಧೈರ್ಯ ಪೇಳದೆ ॥೪೫೯॥

ತಾತನಂತೆ ನಮ್ಮ ಪಿಡಿದು ತನುವ ತೆತ್ತೆಲಾ ।
ಪ್ರೀತಿ ಪಲ್ಲಟಿಸಿತೆ ವೃಷಕೇತುಗೆನ್ನೊಳು ॥೪೬೦॥

ಎಂದು ಭೀಮಸೇನ ಮೂರ್ಛೆಯಿಂದಲೊರಗಿದ ।
ಮಂದಗಮನೆಯರು ದುಗುಡದಿಂದ ಕರಗುತ ॥೪೬೧॥

**ಭಾಮಿನಿ**
ಖಂಡಲನ ಮದದಂತಿ ಪೋಲುವ ।
ಚಂಡವಿಕ್ರಮ ಪವನಜನ ಕರ ।
ದಂಡೆಯನು ಪಿಡಿದೆತ್ತಿ ಸಂತವಿಸಿದನು ಮುರವೈರಿ ॥
ಕಂಡು ಸಾತ್ಯಕಿ ಪೇಳೆ ಪಾರ್ಥನ ।
ಹೆಂಡಿರಯ್ದಿದರಳುತ ಕುಂತಿಯ ।
ಕಂಡು ಪದಕೆರಗುತ್ತ ಪೇಳ್ದರು ತಮ್ಮ ದುಃಖವನು ॥೪೬೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಅತ್ತೆ ಲಾಲಿಸಿಯರಿಯದೆನ್ನಯ । ಪುತ್ರ ಕಟ್ಟಿದ ಯಜ್ಞವಾಜಿಯ ।
ನಿತ್ತು ಕಳುಹಿದೆ ಮರಳಿ ಸಕಲ ಸು । ವಸ್ತು ಸಹಿತ ॥೪೬೩॥

ಕಂದನಲ್ಲೆಂದೊದೆದು ನಮ್ಮನು । ಎಂದ ಮಾತನು ಎಣಿಸಲರಿಯೆವು ।
ನಿಂದು ಫಲುಗುಣ ಮಡಿದ ರಣದಲಿ । ಮಂದಿ ಸಹಿತ ॥೪೬೪॥

ಪರಿಹರಿಸಲೆನ್ನಣುಗ ಪಾತಳ । ದುರಗರಾಜನು ಸಹ ಸಂಜೀವನ ।
ತರಿಸಿಯಿಟ್ಟನು ಶಿರವ ಕಾಣದೆ । ಕೆಟ್ಟೆವಲ್ಲಾ ॥೪೬೫॥

**ಭಾಮಿನಿ (ಅರ್ಧ)**

ಕುಂತಿ ಸೊಸೆಯರ ವಿನಯದಿಂದಲಿ ।
ಸಂತವಿಸಿ ಕಳುಹಿದಳು ಕುರುಕುಲ ।
ದಂತಕನು ಕಲಿ ಭೀಮ ಕ್ಲೇಶದಿ ಕೃಷ್ಣಗಿಂತೆಂದ ॥

**ರಾಗ ಘಂಟಾರವ ಅಷ್ಟತಾಳ**

ಮಾಧವ ಮೈದುನನ । ರಕ್ಷಿಸಿ ಹಯ ।
ಮೇಧವ ನಡೆಸು ಜಾಣ ॥
ಪಾದ ಸೇವಕರಿಗೆ ಮರಣವಾದರೆ ಮುಂದೆ ।
ಸಾಧುಜನರು ನಂಬುವರೆ ॥೪೭೬॥

ಅಡವಿ ತೀರಿಸಿದೆಮಗೆ । ಮಮಕಾರದಿ ।
ಪೊಡವಿಯ ಪಾಲಿಸಿದೆ ॥
ಮಡಿದ ಪಾರ್ಥನ ಕಂಡು ಮಡದಿ ಸುಭದ್ರೆಯು ।
ತಡೆವಳೆ ದುಃಖವನು ॥೪೭೭॥

ಪಾರ್ಥಜ ನುಡಿ ಕೇಳಿ । ಯಾ ಕ್ಷಣ ಬಂದು ।
ವಾತಜನಡಿಗೆರಗಿ ।
ತಾತನ ಮಡುಹಿದ ಪಾತಕಿಯೆನ್ನನು ।
ಘಾತಿಸು ಗದೆಯಿಂದಲಿ ॥೪೭೮॥

**ಭಾಮಿನಿ (ಅರ್ಧ)**

ಅನುಜದುಃಖವ ಮರೆತು ಬಭ್ರುವಾ ।
ಹನನ ತಕ್ಕವಿಸಲ್ಕೆ ಮಾರುತಿ ।
ವನಜನೇತ್ರನ ಚರಣಕರ್ಜುನಿಯೆರಗಿ ಸ್ತುತಿಗೆಯ್ದು ॥

**ರಾಗ ನೀಲಾಂಬರಿ ಆದಿತಾಳ**

ಲಾಲಿಸೋ । ಕೃಷ್ಣ । ಪಾಲಿಸೋ ॥
ಲಾಲಿಸೆನ್ನ ಬಿನ್ನಪವ । ಲೋಕನಾಯಕ ಸುಚೆಲ್ವ ॥ ಲಾಲಿಸೋ ॥ ಪ ॥

ಪಾರ್ಥಿವಪಂಥಕಾಗಿ । ಪಾರ್ಥನ ವಾಜಿಯ ಕಟ್ಟಿದೆ ।
ಅರಿಯದೆ । ತಾಯಿ । ಗೊರೆಯದೆ ॥೪೭೯॥

ತಾತನೆಂದರಿತು ರಾಜ್ಯ । ಸಹಿತವೊಪ್ಪಿಸಿದರೆನ್ನ ।
ಜರೆದನು । ಪ್ರಾಣ । ತೊರೆದನು ॥೪೮೦॥

ಈ ತಪ್ಪಿಗೆನಗೇನಾಜ್ಞೆ | ನೀ ಮಾಳ್ಪುದಂತಕನ ಕಯ್ಯ |
ಕೊಡದಿರೋ | ಎನ್ನ | ಬಿಡದಿರೋ ||೪೭೧||

**ಭಾಮಿನಿ (ಅರ್ಧ)**

ಭಾವಭಕ್ತಿಯ ಕಂಡು ಪಾರ್ಥಿಯ |
ಪಾವಮಾನಿಯು ಸಂತವಿಸಿದನು |
ಮೋಹದಲಿ ಬಿಗಿದಪ್ಪಿದನು ಮರುಗಿದನು ಮುರವೈರಿ ||

**ರಾಗ ಸೌರಾಷ್ಟ್ರ ಅಷ್ಟತಾಳ**

ಕಣ್ಣನೀರಿಲಿ ಕುಂತಿಪಾದಕ್ಕೆ ಎರಗಿದ | ಬಭ್ರುವಾಹನ || ನಿನ್ನ |
ಚೆಣ್ಣನ ಮಡುಹಿದ ಚಂಡಾಲ ಮೊಮ್ಮ ನಾ | ಬಭ್ರುವಾಹನ ||೪೭೧||

ಮಗನೆ ನೀನೇನ ಮಾಡುವೆಯೆನ್ನ ಕರ್ಮಕ್ಕೆ | ಬಭ್ರುವಾಹನ || ಎಂದು
ಬಿಗಿದಪ್ಪಿ ಪರಸಿದಳ್ ಪಗೆಯಲ್ಲ ನಮಗೆ ನೀ | ಬಭ್ರುವಾಹನ ||೪೭೨||

ಹೆತ್ತವ್ವೆಯರ ರಕ್ಷಿಸೆನುತ ದುಗುಡದಿಂದ | ಬಭ್ರುವಾಹನ || ತನ್ನ |
ಮುತ್ತವ್ವೆಯರಿಗೆ ಕೈಮುಗಿದು ಬೀಳ್ಗೊಂಡನು | ಬಭ್ರುವಾಹನ ||೪೭೩||

**ಭಾಮಿನಿ (ಅರ್ಧ)**

ಚಿತ್ರಾಂಗದೆ ಊಪಿಯರ ಕಾಣಿಸಿ |
ಕುಂತಿದೇವಿಯರ್ಗೆರಗಿ ಫಲುಗುಣಿ |
ಮತ್ತೆ ದೇವಕ್ಯಶೋದೆಯರ ಪೊಡಮಟ್ಟು ಬೀಳ್ಗೊಂಡ ||

**ರಾಗ ನೀಲಾಂಬರಿ ಅಷ್ಟತಾಳ**

ಕುಂತಿ ಕಂದನ ನೋಡಿ ಮರುಗಿ | ಬಲು | ಚಿಂತಿಸಿ ಮೋಹದಿ ಕರಗಿ ||
ಕಂತುಪಿತನ ನೋಡಿದಳು | ಅಂತ | ರಂಗದಿ ಕ್ಲೇಶ ಮಾಡಿದಳು ||೪೭೪||

ಕಂಡೆಯ ಕೃಷ್ಣ ಮೈದುನನ | ಶಿರ | ಖಂಡಿಸಿ ಧರೆಗೆಳುಹಿದನ ||
ಭಂಡಿಯನ್ಯಾರಲ್ಲಿ ಹೊಡೆವೆ | ಕಾದಿ | ಕೊಂಡ ರಾಜ್ಯವನ್ಯಾರಿಗೀವೆ ||೪೭೫||

ಪತಿಯ ಹಂಬಲವ ನಾ ತೊರೆದೆ | ಎನ್ನ | ಸುತರ ಸಲಹಿ ಕೀರ್ತಿ ಮೆರೆದೆ ||
ಜೊತೆಯಾಗಿರುವನಾಗಿ ಪೊರೆದೆ | ಈಗ | ಸಿತವಾಹನನೇಕೆ ಮರೆದೆ ||೪೭೬||

ಹೋಮ ತೀರಿತು ಯುಧಿಷ್ಠಿರಗೆ | ರಾಜ್ಯ | ಸೀಮೆ ಹೋಯಿತು ಪಾಂಡವರಿಗೆ ||
ಕಾಮಸ್ವರೂಪ ಕರ್ಣಜಗೆ | ಕೃಷ್ಣ | ಸ್ವಾಮಿ ರಕ್ಷಿಸು ವಿಜಯನಿಗೆ ||೪೭೭||

**ಭಾಮಿನಿ (ಅರ್ಧ)**

ಕುಂತಿ ದುಃಖಿಸಿ ಪೇಳ್ದ ಸಮಯದಿ |

ಕ್ರೂರ ಫಣಿಯೊಡಗೂಡಿ ಶೇಷನು ।
ಸಾವಿರ್ದೆಡೆಯಿಂದೆರಗಿ ಕೃಷ್ಣನ ಅಡಿಯೊಳ್ ಸ್ತುತಿ ಗೆಯ್ದ ॥

**ರಾಗ ನಾದನಾಮಕ್ರಿಯೆ ಅಷ್ಟತಾಳ**
ಜಯ ಜಯ ಜಗದೀಶ । ವಿಷ್ಣು । ಪಾಹಿ ದೇವೇಶ ॥ ಪ ॥

ನಾಕಪಾಲಾತ್ಮಜಗೇಕಭುಜನಾಗಿರ್ಪೆ ।
ಯಾಕೆ ರಕ್ಷಿಸದೆ ಹೊತ್ತುಗಳೆವೆ ॥೪೭೮॥

ರೂಢಿ ಪಾಲಾತ್ಮಜರೊಳೆಷ್ಟು ತಪ್ಪಿರ್ದರು ।
ನಾಡ ತಳವಾರರು ಕೇಳುವರೆ ॥೪೭೯॥

ನಿನ್ನ ನಂಬಿರ್ದವರು ಸಂಪನ್ನ ಬಲಯುತರು ।
ಅನ್ಯಗ್ರಹಂಗಳಿಗಂಜುವುದೆ ॥೪೮೦॥

ತಾತನೆಬ್ಬಿಸುವರೆ ತಂದು ಫಣಿಯ ಪಾರ್ಥ ।
ಜಾತ ತಾ ತರಿಸಿದ ಮಣಿಯಿದಕೊ ॥೪೮೧॥

ತರಿಸು ಶಿರವೆರಡರ ತರುಣಿಯರತಿ ಗಾಢ ।
ಸ್ಮರನ ಜನಕವೊಡಂಬಡಿಸೊ ಈಗ ॥೪೮೨॥

**ಭಾಮಿನಿ**
ಫಣಿಪ ನುಡಿದುದ ಕೇಳಿ ಕೃಷ್ಣನು ।
ಗಣಿಕೆಯರ ಮಧ್ಯದಲಿ ಸಂಜೀ ।
ವಿನಿಯ ತೋರುತ ಸಂತವಿಟ್ಟರು ಸಕಲ ಜನನಿವಹ ॥
ಅಣುಗ ಕೇಳ್ಳೈ ಬ್ರಹ್ಮಚರ್ಯದ ।
ಗುಣವು ತನಗುಂಟಾದಡೀ ಶರ ।
ಬಣಗು ಅರಿಗಳ ಗೆಲಿದು ಬರಲೆಂದೆನುತ ನೇಮಿಸಿದ ॥೪೮೩॥

**ರಾಗ ಸಾಂಗತ್ಯ ರೂಪಕತಾಳ**
ಶಕ್ರಸುತನ ಮೊಮ್ಮ ನೀ ಕೇಳು ಪಾಂಡವ ।
ವಿಕ್ರಮಾಂಕಿತಕಿದಿರುಂಟೆ ॥
ಚಕ್ರಧರನ ಭಾಷೆಗಂಜಿ ಮೂಜಗದೊಳು ।
ದಿಕ್ಪಾಲಕರು ಬೆದರಿದರು ॥೪೮೪॥

ದುಷ್ಟ ದುರ್ಬುದ್ಧಿ ದುಃಸ್ವಭಾವಿಗಳ ತಲೆ ।
ಕುಟ್ಟಿ ಪಾರ್ಥನ ಮಹಶಿರವ ॥

ಕೃಷ್ಣನಾಯುಧದಿಂದ ತರಿಸಲು ಶೇಷನ ।
ಮುಟ್ಟಿ ಕೊಂಡಾಡಲು ಜನರು ॥೪೮೫॥

ಮುರಹರನುರಗೇಂದ್ರನೊಡನೆ ಮಣಿಯ ಕೊಂಡು ।
ಶಿರವೆರಡನು ಸಂಗಡಿಸಿ ॥
ಅಭವನ್ನ ಸ್ಮರಿಸುತ್ತ ಮುಟ್ಟಿಸಿ ಜೀವಿಸೆ ।
ತ್ರಿಭುವನಕತಿ ಚೋದ್ಯವೆನಿಸಿ ॥೪೮೬॥

ಭರದಿಂದ ಮೈಮುರಿದೆದ್ದು ಮಾಧವ ಕೃಷ್ಣ ।
ಹರಿಯೆಂದು ಸ್ಮರಿಸುತ್ತಲಾಗ ॥
ಹರುಷದಿ ಕರ್ಣಜ ಕೌಂತೇಯರೆರಗಲಾ ।
ಅರವಿಂದನಾಭ ತಕ್ಕವಿಸಿ ॥೪೮೭॥

೧೦

**ಭಾಮಿನಿ**
ಧಾರಿಣೀಪತಿ ಕೇಳು ಕರ್ಣಜ ।
ವೀರ ಪಾರ್ಥರು ಸ್ಮರಿಸೆ ಕೃಷ್ಣನ ।
ಭೂರಿ ವಾದ್ಯದ ರವದಿ ಮಂಗಲವೆಸೆದುದಾ ಕ್ಷಣಕೆ ॥
ವಾರಿಧಿಯ ಘೋಷದಲಿ ಮೊಳಗಿತು ।
ಮಾರನಯ್ಯನ ಪಾಂಚಜನ್ಯವು ।
ತೋರೆ ಪೂಮಳೆಗರೆದರಂಬರದಿಂದ ಸುರವರರು ॥೪೮೮॥

**ರಾಗ ಭೈರವಿ ತ್ರಿವುಡೆತಾಳ**
ಭೀಮ ಬಿಗಿದಪ್ಪಿದನು । ಪಾರ್ಥ ಕರ್ಣಿಯ ನಿ ।
ಸ್ಸೀಮತನಕೆವೊಪ್ಪಿದನು ॥ ಪ ॥

ಹಿಂದೆ ದ್ರೋಣಭೀಷ್ಮರ । ಕೊಂದ ಪಾತಕವ ಗೋ ।
ವಿಂದನು ಪರಿಹರಿಸಿ । ಬಭ್ರುವಾಹನ ।
ನಿಂದ ಮಣಿಯು ತರಿಸಿ ।
ನಿನ್ನ ಶಿರವ ಕದ್ದ ಫಣಿಯ ।
ಕೊಂದು ಕರುಣಿಸಿದನು ಪ್ರಾಣ ॥೪೮೯॥

ಇನ್ನು ಅಂಜದಿರೆಮ್ಮ । ಯಜ್ಞಕೆ ತೊಡರಿಲ್ಲ ।
ಮುನ್ನ ಪಾಪ ತೀರಿದುದಶ್ವಮೇಧದಿ ।
ಖಿನ್ನನಾಗದಿರಿದಕೆ । ದೇವಕಿ ಕುಂತಿಯ ।

ರನ್ನು ಮನ್ನಿಸು ಬೇಗದಿ ।
ತನುಜನೀತನು ನಿನಗೋಸುಗ ।
ಪೋಗಿ ಸವರಿದನು ಫಣಿಕುಲ ॥೪೯೦॥

**ಭಾಮಿನಿ (ಅರ್ಧ)**
ವಾತಜನು ನುಡಿಯಲ್ಕೆ ಫಲುಗುಣ ।
ಮಾತನಾಡದೆ ಸುಮ್ಮನಿರುತಿರೆ ।
ಮಾತೆ ಕುಂತಿಗೆ ಕಂಡು ನಮಿಸಿದ ಭಾವ ಭಕ್ತಿಯಲಿ ॥

**ರಾಗ ಶಂಕರಾಭರಣ ಏಕತಾಳ**
ಮಂದಗಮನೆ ಕುಂತಿ ಕರ್ಣ । ನಂದನನರ್ಜುನರ ಮೋಹ ।
ದಿಂದ ಬಿಗಿದಪ್ಪಿ ಮುದ । ದಿಂದ ಮುದ್ದಿಸಿ ॥
ಕಂದ ನಿದ್ರೆಯೊಳಗೆ ನಾನು । ಒಂದು ಸ್ವಪ್ನವನ್ನು ಕಂಡೆ ।
ಬೆಂದೊಡಲನರಸುತಾಗ । ಬಂದೆನಿಲ್ಲಿಗೆ ॥೪೯೧॥

ಮಕ್ಕಳ ಮಣಿ ಬಾರೆಂದು । ತಕ್ಕವಿಸಿ ಮೊಮ್ಮಗನ ।
ಸೊಕ್ಕಿ ಕಳುಹಿದೆ ನಿನ್ನ । ಸಂಗರದೊಳು ॥
ಚಿಕ್ಕ ಪ್ರಾಯದಿ ನೀ ಕಾದಿ । ದುಃಖ ತರಿಸಿದೆ ಎನಗೆ ।
ಅಕ್ಕರಿಂದೆಬ್ಬಿಸಿದನು । ರಕ್ಕಸಾಂತಕ ॥೪೯೨॥

**ಭಾಮಿನಿ**
ಇಂತು ಸುತನಿಗೆ ಬುದ್ಧಿ ಹೇಳುತ ।
ಕುಂತಿಯಿರುತಿರಲಾ ಯಶೋದಾ ।
ಕಾಂತೆ ದೇವಕಿಯರನು ಕಾಣುತ ವಿಜಯ ಪೊಡವಂಟ ॥
ಕಂತುಜನಕನ ಪಾಂಚಜನ್ಯಕೆ ।
ದಂತಿ ಹಯ ಮಾರ್ಬಲವು ಸಹಿತಲೆ ।
ಚಿಂತೆಯನು ಪರಿ ಹರಿಸಿಯೆದ್ದುದು ಕೃಷ್ಣಪದಕೆರಗಿ ॥೪೯೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಉರಗರಾಜನಿಗೆರಗಿಯರ್ಜುನ । ನೆರೆದ ಜನರಿಗೆ ಕರವ ಮುಗಿದನು ।
ಚರಣಕಾನತನಾಗಿ ಕೃಷ್ಣಗೆ । ಸ್ಮರಿಸಿ ಪೇಳ್ದ ॥೪೯೪॥

ದೇವ ಗೆಲಿದೆನು ದೇಶ ದೇಶದ । ರಾಯರನು ನಿಮ್ಮಡಿಯ ನೆನೆವುತ ।
ಮಾಯಕದಿ ಮಣಿಪುರದೊಳವಶಕು । ನಾಯಿತೆನಗೆ ॥೪೯೫॥

ಕಡುಹಿನಿಂ ಭಟ ಯಜ್ಞತುರಗವ । ತಡೆದು ಎನ್ನೊಳು ಚರಣಕೆರಗಿದ ।
ಕಡೆಗೆ ಸುತನಲ್ಲೆಂದು ಜರೆಯಲು । ಪಿಡಿದುಸಮರ ॥೪೯೬॥

ಧುರವ ದುಃಖವ ಪೇಳಲರ್ಜುನ । ಮುರಹರನು ಕೇಳುತ್ತ ಕರುಣದಿ ।
ವರದಹಸ್ತದಿ ಮೆಯ್ಯ ಗಾಯವ । ತಡವರಿಸಲು ॥೪೯೭॥

ಸುರನದಿಯ ಶಾಪದಲಿ ಆಯಿತು । ಪರಿಭವವು ನಿನಗೆಂದು ತಿಳುಹಿಸಿ ।
ತರುಣನಲಿ ತಪ್ಪಿಲ್ಲೆನುತ ತೋ । ರ್ದರಸಿಯರನು ॥೪೯೮॥

**ರಾಗ ಮಧ್ಯಮಾವತಿ ಏಕತಾಳ**

ನಗರವನಿತ್ತಲಂಕರಿಸೆ ಪಾರ್ಥಜನು ।
ನಗಧರಾರ್ಜುನರಿಗೆಯಡಿಗೆರಗಿದನು ॥೪೯೯॥

ತೆರಳಬೇಕೆನ್ನರಮನೆಗೆಂದು ಸ್ತುತಿಸೆ ।
ದುರುಳಮರ್ದನ ಫಲುಗುಣ ಶೇಷರ್ ಗಮಿಸೆ ॥೫೦೦॥
ದೇವಕಿಕುಂತಿಯಶೋದೆಯರಂದಣದಿ ।
ಭಾವೆ ಚಿತ್ರಾಂಗದೆ ಲೂಪಿಯರ್ ಮುದದಿ ॥೫೦೧॥

**ದ್ವಿಪದಿ**

ವಸುಧೀಶ ಮೊಳಗಿದವು ಮಂಗಲದವೊಸಗೆ ।
ಮಸಗಿದವು ಭೇರಿ ವಾದ್ಯಗಳೆಂಟು ದೆಸೆಗೆ ॥೫೦೨॥

ಕಲಶಗನ್ನಡಿ ಪಿಡಿದನೇಕದಂದದಲಿ ।
ಲಲನೆಯರು ಸೇಸೆ ಪೊಂಗಲಶ ಚಂದದಲಿ ॥೫೦೩॥

ಬೋವತನದೋರಿದನು ಕೃಷ್ಣ ರಥದೊಳಗೆ ।
ದೇವನಿಕರವು ಕಂಡು ದುಂದುಭಿಯ ಮೊಳಗೆ ॥೫೦೪॥

ಮಣಿಪುರದ ಮಂತ್ರಿ ಪರಿವಾರ ಪ್ರಜೆ ಕಂಡು ।
ನಳಿನಾಕ್ಷಪಾರ್ಥರಿಗೆಯೆರಗಿ ಇದಿರ್ಗೊಂಡು ॥೫೦೫॥

**ರಾಗ ಕಾಪಿ ಅಷ್ಟತಾಳ**

ಬಂದರು ನರನಾರಾಯಣರು । ನಲ ।
ವಿಂದಲಿ ಬಭ್ರುವಾಹನ ಮಹಾರಥರು ॥೫೦೬॥

ತೋರಣ ಕುರುಜು ಮೇರ್ವೆಯಲಿ । ಮಂಗ ।
ಳಾರತಿಯನು ಕೊಂಡು ಕೇರಿಕೇರಿಯಲಿ ॥೫೦೭॥

ಪುರದ ಶೃಂಗಾರವ ನೋಡಿ । ಮೆಚ್ಚಿ ।
ಮುರಹರ ಬಭ್ರುವಾಹನನ ಕೊಂಡಾಡಿ ॥೫೦೮॥

ತೇರನಿಳಿದು ಅರಮನೆಗೆ । ಯದು ।
ವೀರಾರ್ಜುನರು ತೆರಳಿದರ್ ಸಿಂಹಾಸನಕೆ ॥೫೦೯॥

**ಭಾಮಿನಿ**
ಏರಿ ಸಿಂಹಾಸನವರ್ಜುನ ।
ಮಾರನಯ್ಯನು ಸಹಿತ ಕುಳ್ಳಿರೆ ।
ವೀರ ಪಾರ್ಥಜ ಚರಣಕಾನತನಾಗುತಿಂತೆಂದ ॥
ಭಾರ ನಿಮಗಿದು ಸಕಲ ರಾಜ್ಯ ವಿ ।
ಚಾರ ತನಗಿಲ್ಲೆನಲು ಸುತನೊಳು ।
ಮಾರುವುತ್ತರ ಕೊಡದಿರನಿಲಜನೆಂದನನುಜನಿಗೆ ॥೫೧೦॥

**ರಾಗ ಕೇದಾರಗೌಳ ಅಷ್ಟತಾಳ**
ತಮ್ಮ ಈ ಪಂಥವು ತನಯನೊಳೇತಕೆ । ಧರ್ಮವಲ್ಲದು ನಮಗೆ ॥
ಒಮ್ಮೆ ಪೇಳಿದ ಸುರನದಿಯಿತ್ತ ಶಾಪವೆಂ । ದೆಮ್ಮೊಳು ದನುಜಾರಿ ॥೫೧೧॥

ಮನ್ನಿಸು ಮಗನನು ಸತಿಯರ ಕೂಡಿಕೊ । ನಿರ್ಣಯ ನುಡಿಗಳಿವು ॥
ಇನ್ನು ಇದಕೆ ಮರುಳಾಗದಿರೆನುತಲಿ । ಪನ್ನಗಪತಿ ನುಡಿದ ॥೫೧೨॥

ವಾಸುದೇವನ ವಿನಯೋಕ್ತಿಯ ಮರೆಯದೆ । ಶೇಷನಂದನೆಯರನು ॥
ಈ ಕ್ಷಣ ಕರೆಸೆಂದು ಕುಂತಿ ದೇವಕಿ । ಯಶೋದೆಯರು ಪೇಳ್ದರು ॥೫೧೩॥

**ಭಾಮಿನಿ (ಅರ್ಧ)**
ಏಸು ಪೇಳ್ದರು ಕೇಳದಿರ್ಪನು ।
ರೋಷದಲಿ ಕಲಿ ಪಾರ್ಥ ಸುತನೊಳು ।
ಸೂಸಿ ದುಃಖದಿ ಬಭ್ರುವಾಹನ ಭೀಮನಡಿಗೆರಗಿ ॥

**ರಾಗ ತುಜಾವಂತು ಝಂಪೆತಾಳ**
ಜಯ ಜಯ ಮಹತಾತ । ಪವನಸಂಜಾತ ॥ ಪ ॥

ಇನ್ನು ಕೊರತೆಯ ನಾನು । ಧರಿಸಿಯಿರಲಾರೆನಗ್ನಿ ।
ಗೆನ್ನ ಹರಚಿಸಿದರೆ । ಯಂದು ಬಿಡದೆ ॥೫೧೪॥

ಚಂಡ ಶೇಷನ ಸುತೆಗೆ । ಜನಿಸಿ ಹಿರಿಯರ ಕಾಣೆ ।
ಕಂಡೆ ನಿಮ್ಮಯ ಚರಣ । ಕೊಡಿಸೆನಗೆ ಮರಣ ॥೫೧೫॥

ಮಾತೆ ಮಂತ್ರೀಶರನು । ಪ್ರೀತಿಯಿಂದಲಿ ನಡೆಸು ।
ಪಾತಕವ ಕಳೆವೆ ನಾ । ಪೋಗಿ ಹಿಮಾಚಲಕೆ ॥೫೧೬॥

**ವಚನ**

ಇಂತೆಂದು ಬಭ್ರುವಾಹನ ನುಡಿಯಲಾಗಿ ಭೀಮಸೇನನೇನೆಂದನು ಎಂದರೆ -

**ರಾಗ ಕೇದಾರಗೌಳ ಅಷ್ಟತಾಳ**

ತಪ್ಪನಾಡಿದೆ ಕಂದ ತರಣಿಪ್ರಕಾಶಕ್ಕೆ । ಬಪ್ಪುದೆ ಮುಗಿಲ ಬಣ್ಣ ।
ಸರ್ಪಶಯನನಿರೆ ಶರಣರ್ಗೆ ಪಾಪವು । ಬಪ್ಪುದೇನೈ ಮರುಳೆ ॥೫೧೭॥

ಒಂದು ಪಾತಕಕೆ ನೀ ಬೆದರುವೆ ನಾವು ನೂ । ರೊಂದು ಕೌರವರೊಳ್ ಕಾದಿ ॥
ಕೊಂದೆವು ದ್ರೋಣ ಭೀಷ್ಮರ ಗಜಪುರಕಾಗಿ । ಮಂದರಧರನ ನಂಬಿ ॥೫೧೮॥

ಕಂದ ನಿನ್ನೊಡನೆ ಸೋಲುವನೆ ಕೌಂತೇಯನು । ಸಿಂಧು ಮುನಿದುದಲ್ಲದೆ ॥
ಇಂದು ಹರಿಯ ಸಭೆಯೊಳಗರ್ಜುನಗೆಯಶ್ವ । ಮುಂದಿಟ್ಟು ಪದಕೆರಗು ॥೫೧೯॥

**ಭಾಮಿನಿ**

ಕಂದನೊಳು ಅರ್ಜುನಗೆ ಪ್ರೀತಿಯ ।
ಪೊಂದಿಸಿತ್ತನು ಭೀಮ ವಾದ್ಯದ ।
ಸಂದಣಿಯೊಳಶ್ವವನು ಅರ್ಜುನಗೆಂದುವೊಪ್ಪಿಸುತ ॥
ಇಂದಿರೇಶನ ಪದಕೆರಗೆ ಭುಜ ।
ಗೇಂದ್ರಭೂವರ ಹರುಷಬಟ್ಟನು ।
ಬಂದು ಪೊಗಳುತ ಬಭ್ರುವಾಹನ ಕುಂತಿ ಹರಸಿದಳು ॥೫೨೦॥

ಅಂತರಂಗವ ತಿಳುಹಿ ವಿಜಯನ ।
ಚಿಂತೆಯನು ಬಿಡಿಸುತ್ತ ದೇವಕಿ ।
ಕುಂತಿಯರು ಕರೆಸಿದರು ಲೂಪಿ ಚಿತ್ರಾಂಗದೆಯರನ್ನು ॥೫೨೧॥

**ರಾಗ ಕಲ್ಯಾಣಿ ಅಷ್ಟತಾಳ**

ಪತಿಯ ಕಾಣುತ ಮುದದಿ । ಲೂಪಿ ಚಿತ್ರಾಂ । ಗದೆಯರು ಪದಕೆರಗಿ ॥
ಸತಿಯ ಜನ್ಮದಿ ಬಂದು ಗತಿಯ ಕಾಣದೆ ನಾವು ।
ಸತತ ನಿಮ್ಮಯ ಪಾದಗತಿಯ ನಂಬಿದೆವು ॥೫೨೨॥

ಕಂದನ ಕುದುರೆಯಿತ್ತು । ಕರೆತಾರೆಂದು । ನಂಬಿಸಿ ಕಳುಹಿದೆವು ॥
ಮುಂದ್ವರಿಯಿತು ಕಾರ್ಯ ಮೊದಲೆ ನಾವರಿಯದೆ ।
ಸಿಂಧುಶಯನ ನಮ್ಮ ಸಿರಿಮುಡಿಗೊಲಿದ ॥೫೨೩॥

ವಿಸ್ತರಿಸುವುದ್ಯಾಕೆಂದು । ವಿಜಯ ತನ್ನ । ಪತ್ನಿಯರನು ಮನ್ನಿಸಿ ॥
ಹಸ್ತವಿಡಿದು ಸಿಂಹಾಸನದಿ ಸತಿಯರ್ ಸಹ ।
ಸ್ವಸ್ಥದಿ ಕುಳ್ಳಿರೆ ಸಕಲರು ಸಭೆಯೊಳು ॥೫೨೪॥

**ಭಾಮಿನಿ (ಅರ್ಧ)**

ಇಂತು ಫಲುಗುಣ ಸುತನ ಮನ್ನಿಸಿ ।
ಕಾಂತೆಯರನೊಡಗೊಂಡು ಇರುತಿರೆ ।
ಸಂತಸದಿ ಸಿಂಗರಿಸಿ ಸೇಸೆಯ ಬೇಗದಲಿ ತರಿಸಿ ॥

**ರಾಗ ಧವಳಾರ ಆದಿತಾಳ**

ಪದ್ಮಿನಿಯರು ಪರಮವೈಭವದಲಿ ।
ವಾದ್ಯವೀಣಾರವಸಂಗೀತದಿ ।
ಮದ್ದಳೆಶ್ರುತಿತಾಳಗತಿಯಿಂದ ॥
ಗತಿಯಿಂದಲಿ ಪಾರ್ಥನ ಹರಸುತ್ತ ।
ಮುತ್ತಿನಾರತಿಯ ಬೆಳಗಿರೆ ॥ ಶೋಭಾನೆ ॥೫೧೫॥

ಧಾತ್ರಿಯೊಳತಿವೀರರ ಗೆಲಿದಗೆ ।
ಕ್ಷತ್ರಿಯರ ಕುಲಸಂಜೀವಗೆ ।
ಚಿತ್ತಜಪಿತಭಾವ ಫಲುಗುಣಗೆ ॥
ಫಲುಗುಣಗೆ ಲೂಪಿ ಚಿತ್ರಾಂಗದೆಗೆ ।
ರತ್ನದಾರತಿಯ ಬೆಳಗಿರೆ ॥ ಶೋಭಾನೆ ॥೫೧೬॥

ಜಾಣೆಯರತಿ ಹರುಷದಿ ನಡೆನುಡಿ ।
ಕಾಣಿಸಿದರು ಮದನಮಂಟಪದೊಳು ।
ಏಣಾಕ್ಷಿಯರಾಗ ಹರುಷದಿ ॥
ಹರುಷದಿ ಕಮಲಾಕ್ಷಿಯರಿಗೆ ।
ಕುಂಕುಮದಾರತಿಯ ಬೆಳಗಿರೆ ॥ ಶೋಭಾನೆ ॥೫೧೭॥

**ಭಾಮಿನಿ (ಅರ್ಧ)**

ಮತ್ತೆ ಮಂಗಲವೆಸಗಿ ವಿಜಯಗೆ ।
ಯೆತ್ತಿ ಶೇಷಾರತಿಯ ಸತಿಯರು ।
ಮತ್ತೆ ಭೂಸುರಸಂಕುಲವ ನೆರಹುತ್ತ ಮಣಿಪುರದಿ ॥

**ರಾಗ ಕಾಂಭೋಜಿ ಅಷ್ಟತಾಳ**

ಧರೆಯಮರರು ಬಂದರಾಗ । ಕರೆಕರೆದು ಕೊಡುವ ಬೇಗ ।
ನರನು ದಕ್ಷಿಣೆಯೆಂದು ॥ ಧರೆಯಮರರು ಬಂದರಾಗ ॥ ಪ ॥

ಛತ್ರ ಹೆಗಲೊಳಿಟ್ಟು ಶಾಲೆಯರ್ಧವನುಟ್ಟು ।
ಹಸ್ತದಿ ಜಪಮಾಲೆ ಧರಿಸಿ ॥
ಮಸ್ತಕದಲಿ ನಾಮವಿಟ್ಟು ಮೆಯ್ಯೊಳತಿ ।
ಸ್ವಸ್ಥವಿಲ್ಲದೆ ದಂಡ ಹಸ್ತದಿ ಪಿಡಿದು ॥ ಧರೆಯಮರರು ॥೫೧೮॥

ಮೆಯ್ಯೊಳು ಗಂಧ ಕಸ್ತುರಿ ಜವ್ವಾಜಿಯ ಪೂಸಿ ।
ಕಯ್ಯೊಳಗಿರ್ದ ಪುಸ್ತಕಗಳನು ॥
ಅಯ್ಯ ಅಣ್ಣನ ವಂಟಿಜೋಡು ಕಿವಿಯೊಳಿಟ್ಟು ।
ಮೆಯ್ಯು ಬಲಿಯದ ಚಿಕ್ಕ ಪ್ರಾಯದ ದ್ವಿಜರು ॥ ಧರೆಯಮರರು ॥೫೧೯॥

ವೇದಶಾಸ್ತ್ರವನೊಬ್ಬರೊಬ್ಬರಿಗೆ ಕಲಿಸುತ್ತ ।
ಹಾದಿಯೊಳಗೆ ಬರಲಿವರೊಳಗೆಲ್ಲ ॥
ಭೇದಭೇದದಿ ಆಶೀರ್ವಾದ ಎಚ್ಚರಿಸುತ್ತ ।
ಮಾಧವಪ್ರಿಯರುಪಾಧ್ಯರು ಸುರರು ॥ ಧರೆಯಮರರು ॥೫೨೦॥

**ರಾಗ ಕೇದಾರಗೌಳ ಆದಿತಾಳ**

ಆ ಸಮಯದಿ ವಾಸವಸುತ ಹರಿ ಬಭ್ರುವಾಹನರಿಗೆ ।
ಕಾಂಚನವನು ನಿವಾಳಿಸಿದರು ಮತ್ತಾ ।
ವಾಸುದೇವನ ಲೀಲೆಗೆ ಶೇಷ ಸಾವಿರ ಬಾಯಿಂದ ।
ತೋಷದಲಿ ಪೊಗಳಿ ತನ್ನಾವಾಸಕಯ್ದಿದನು ॥೫೨೧॥

ಮಜ್ಜನಗೆಯ್ದು ನಾರಿಯರ್ ಪ್ರಜ್ವಲಿಪಾಭರಣದಿಂದ ।
ಕಜ್ಜಳ ಕುಂಕುಮದಿಂದ ಸಜ್ಜಾಗಿರಲು ॥
ಅರ್ಜುನ ಕೃಷ್ಣ ಕರ್ಣಜರ್ ಮೂಜಗ ಭೂಪಾಲರಿಂಗೆ
ಭೋಜನವಧಿಕ ನಾನಾ ಕಜ್ಜಾಯದಿಂದ ॥೫೨೨॥

ಇಂತಯ್ದು ದಿನದ ಮೇಲೆ ಕುಂತಿಯೊಳು ಕೃಷ್ಣ ನುಡಿದ ।
ಅಂತಕಾತ್ಮಜನು ತಮ್ಮ ಚಿಂತಿಪನೆಂದು ॥
ಕಾಂತೆ ಲೂಪಿ ಚಿತ್ರಾಂಗದೆ ಕುಂತಿ ದೇವಕಿ ಯಶೋದೆ ।
ದಂತಿಪುರಕಾಗಿ ಭೀಮ ಮುಂತಾಗಟ್ಟಿದ ॥೫೨೩॥

**ಭಾಮಿನಿ (ಅರ್ಧ)**

ತರುಣಿಯರ ಗಜಪುರಕೆ ಕಳುಹಿಸಿ ।
ಮುರಹರನು ತಾನಿರಲು ಪಾರ್ಥನ ।
ಧುರಕೆ ಬೆಂಬಲಮಾಗೆ ಬಭ್ರುವಾಹನನೊಳಿಂತೆಂದ ॥

**ರಾಗ ಮಾಧುಮಾಧವಿ ಏಕತಾಳ**

ಬಭ್ರುವಾಹನ ನಿನಗೆ ಮೂಲೋಕದೊಳಗೆ ।
ಒಬ್ಬರು ಸರಿಯುಂಟೆ ಸಂಗರದೊಳಗೆ ॥೫೨೪॥

ಧರೆಯ ಕಪ್ಪವ ಕೊಂಡು ನರಗೂಡಿ ಮುನ್ನ ।
ವರುಷವೊಂದರ ಮೇಲೆ ಪೂರ್ಣಾಹುದೆಜ್ಞ ॥೫೨೫॥

ಪುರಕೆ ಮಂತ್ರಿಯನಿಟ್ಟು ಪಾಲಿಸೀ ರಾಜ್ಯ ।
ಧುರಕೆ ಬೆಂಬಲವಾಗಿ ಬರುವೆಯ ಸಹಜ ॥೫೩೫॥

ನಿನ್ನ ಪೂರ್ವಜರೆಂದು ನಿಜವನ್ನು ನೋಡು ।
ಉನ್ನಂತ ಮಖದ ಊಳಿಗವನ್ನೆ ಮಾಡು ॥೫೩೬॥

**ಭಾಮಿನಿ**

ಕೃಷ್ಣನಾಡಿದ ಮಧುರವಚನಕೆ ।
ತುಷ್ಟನಾಗುತ ಬಭ್ರುವಾಹನ ।
ಸೃಷ್ಟಿಯೀರಡಿ ಮಾಡಿ ತೋರಿದ ಪದಕೆ ಪೊಡಮಟ್ಟು ॥
ಸೃಷ್ಟಿಯೊಡೆಯನೆ ದೇವ ನಿನ್ನನು ।
ಬಿಟ್ಟವರಿಗಿನ್ನುಂಟೆ ಇಹ ಪರ ।
ಇಷ್ಟ ಮೂರುತಿಯೆನ್ನ ಕಾಯೆಂದೆರಗಿ ನುತಿಗೆಯ್ದ ॥೫೩೭॥

**ರಾಗ ರೇಗುಪ್ತಿ ಏಕತಾಳ**

ಕೃಷ್ಣ ಜಯ ಜಯ ಲೋಕನಾಯಕ । ಭಕ್ತ ಸಹಾಯಕ ॥
ಕೃಷ್ಣ ಜಯ ಜಯ ಲೋಕನಾಯಕ ॥ ಪ ॥

ಆದಿಮೂರುತಿ ವಟಪತ್ರಶಯನನೆ ।
ವೇದ ಸಿದ್ಧವಿಶ್ರುತರೂಪನೆ ॥
ಸಾಧಕನೆ ಸಜ್ಜನರಘನಾಶನ ।
ಮಾಧವ ಗುಣನಿಧಿ ಮೂಲೋಕೇಶನೆ ॥ ಕೃಷ್ಣ ಜಯ ಜಯ ॥೫೩೮॥

ವನಜನಾಭನೆ ನಿನ್ನನುಜೆಯನಿಂದ್ರ ।
ತನುಜನಿಗಿತ್ತು ಮೈದುನನಾಗಿ ॥
ಮುನಿಜನಗಳಿಗಗಗೋಚರ ವಸ್ತುವೆ ।
ಮನುಜಲೀಲೆಯನು ತೊಡಗಿಹೆಯೇತಕೆ ॥ ಕೃಷ್ಣ ಜಯ ಜಯ ॥೫೩೯॥

ಎನ್ನ ಸಹಾಯ ಯಮಜಾತನಿಗೆಂದರೆ ।
ಸಮ್ಮತಪಡುವರೆ ಸುರವರರು ॥
ನಿನ್ನಡಿಕಮಲಪದವಿಗೆ ಸಲುವರೆ ।
ಉನ್ನತ ಭವಭಯವಿನ್ನಿಹುದೆ ॥ ಕೃಷ್ಣ ಜಯ ಜಯ ॥೫೪೦॥

**ಭಾಮಿನಿ (ಅರ್ಧ)**

ಚಿತ್ರಾಂಗದೆನಂದನನ ಮುಕುಟವ ।
ನೆತ್ತಿ ತಕ್ಕಯಿಸುತ್ತ ಕೃಷ್ಣನು ।
ಮತ್ತೆ ವಿಜಯನ ಮೊಗವ ನೋಡುತಲೆಂದನೀ ಹದನ ॥

**ರಾಗ ಮಾರವಿ ಏಕತಾಳ**

ಏಕೆ ನೀ ನೋಳ್ಪೆ ಇಂದ್ರಜಾತ । ಲೋಕಪ್ರಖ್ಯಾತ ॥ ಏಕೆ ॥ ॥ ಪ ॥

ಮಖತುರಗ ವಶವಾಯ್ತೆ ಸುಖದಿಂದ ಪಡೆ ಸಹಿತ ।
ದಕ್ಷಿಣಮುಖವಾಗಿ ಪೊರಡು ॥
ಅಖಿಳ ಪ್ರದ್ಯುಮ್ನನಿರುದ್ಧ ಶೇಷನ ಮೊಮ್ಮ ವಿ ।
ವೇಕದೊಳು ಬರುವರು ॥ ಏಕೆ ॥೫೪೧॥

ಮಾತ ಕೇಳುತ ವೃಷಕೇತು ಹಂಸಧ್ವಜ ವಿ ।
ಖ್ಯಾತ ಸಾತ್ಯಕಿ ನೀಲಕೇತು ॥
ಪ್ರೀತಿಯಿಂದಲಿ ಯೌವನಾಶ್ವರು ಸಹಿತಘ ।
ನಾಥೇಶನೆಡೆಗೆ ಬರೆ ಘೋಷದಲಿ ॥ ಏಕೆ ॥೫೪೨॥

ಚೇತನಾತ್ಮಕನು ಅರ್ಜುನ ಸಾರಥಿತ್ವವ ।
ನಾಂತು ಮಂಡಿಸಿದನು ರಥದಿ ॥
ಮೂಜಗ ಬೆದರಲು ದೃಡ ಶಂಖಧ್ವನಿ ।
ದುರ್ಜನರೆದೆಯ ನಡುಗಿಸಿತು ॥ ಏಕೆ ॥೫೪೩॥

**ವಾರ್ಧಕ**

ಅರಸ ಕೇಳ್ ಕೃಷ್ಣನಪ್ಪಣೆಯಿಂದ ಪ್ರದ್ಯುಮ್ನ ।
ಪೊರಡಿಸುತ ಹಯಮೇಧ ತುರಗ ಮಾರ್ಬಲ ಸಹಿತ ।
ಬರುವ ಸಮಯದಿ ಶೇಷನಳವಳಿಯೆ ದಿಗ್ಗಜಗಳ್ ಕಳವಳಿಸಿ ಕಂಪಿಸಲ್ಕೆ ॥
ತುರಗಮಂ ಚಪ್ಪರಿಸಿ ಕೃಷ್ಣ ರಥ ಹಾರಿಸುತ ।
ನರಗೆ ಕರ್ಪುರವೀಳ್ಯ ಮಡಿದಿತ್ತ ಸಂಭ್ರಮದಿ
ಸುರರು ಪುಷ್ಪದ ವೃಷ್ಟಿಯಂ ದುಂದುಭಿಯ ರಭಸದಿಂ ಹರಿಯ ಮೇಲ್ಗರೆದರು ॥೫೪೪॥

**ಭಾಮಿನಿ**

ಕೇಳು ಜನಮೇಜಯನೆ ಮುರರಿಪು ।
ಲೀಲೆಯಿಂದಲಿ ವರುಷದುಂಬಿದ ।
ಮೇಲೆ ಯಜ್ಞವ ಮುಗಿಸಿ ಸುಖದಿಂ ರಾಜ್ಯ ಪಾಲಿಸುತ ॥
ಶ್ರೀಲತಾಂಗಿಯ ರಮಣ ಕೃಷ್ಣನ ।
ಲೀಲೆಯಿಂದಿರುತಿರ್ದರೆನುತ ಸು ।
ಶೀಲ ಜನಮೇಯಗೆ ವೈಶಂಪಾಯಮುನಿ ಪೇಳ್ದ ॥೫೪೫॥

**ವಾರ್ಧಕ**

ಇಂತೆಂಬ ಕಥೆಯನುಂ ಪೇಳ್ದೆಕ್ಷಗಾನದಿಂ ।
ತಾಂ ತಿಳಿದುಸಿರ್ದೆ ಶ್ರೀ ಕೃಷ್ಣನ ಅನುಜ್ಞೆಯಿಂ ।

ಇಂತಿದಂ ಲಾಲಿಸುತ ಬಲ್ಲ ಸುಜನರು ತಿದ್ದಿ ಮೆರೆಸುವುದು ಈ ಕವಿತೆಯ ||
ಮಂಗಲವು ಶ್ರೀಧರಗೆ ವಾಸುದೇವನಿಗೆ ಜಯ |
ಮಂಗಲವು ಪಾಂಡವರನೆತ್ತಿ ಸಲಹುವಗೆ ಜಯ |
ಮಂಗಲವು ವಾರಿಧಿಯ ತಡಿಯವುಡುಪಿಯಲಿ ನೆಲಸಿರುವ ಶ್ರೀಕೃಷ್ಣನಿಂಗೆ ||೫೪೬||

**ರಾಗ ಧವಳಾರ ಆದಿತಾಳ**
ಮಂಗಲಂ ಮಂಗಲಂ | ಮಾಧವಗೆ |
ಮಂಗಲಂ ಮಂಗಲಂ || ಪ ||

ಮತ್ಸ್ಯಗೆ ಕೂರ್ಮಗೆ ವರಹಗೆ ಮಂಗಲಂ |
ಉತ್ಸವಮೂರುತಿ ನರಸಿಂಹನಿಗೆ ಜಯ |
ಮಂಗಲಂ ಮಂಗಲಂ ||೫೪೭||

ವಾಮನ ಭಾರ್ಗವ ರಾಮಗೆ ಮಂಗಲಂ |
ಕಾಮನ ಪೆತ್ತವ ಕೃಷ್ಣಯ್ಯನಿಗೆ ಜಯ |
ಮಂಗಲಂ ಮಂಗಲಂ ||೫೪೮||

ಬತ್ತಲೆ ಬೌದ್ಧಗೆ ಕಲ್ಕಿಗೆ ಮಂಗಲಂ |
ಉತ್ತಮ ತಿರುಪತಿ ವೆಂಕಟೇಶಗೆ ಜಯ |
ಮಂಗಲಂ ಮಂಗಲಂ ||೫೪೯||

***ಯಕ್ಷಗಾನ ಬಭ್ರುವಾಹನ ಕಾಳಗ ಮುಗಿದುದು***

# ಯಕ್ಷಗಾನ ಸುಧನ್ವ ಕಾಳಗ

## ಪಾತ್ರ ವಿವರ

| | | | | | |
|---|---|---|---|---|---|
| ಧರ್ಮರಾಯ | ರುಕ್ಮಿಣಿ | ಭೀಮ | ಸತ್ಯಭಾಮೆ | ಅರ್ಜುನ | ನೀಲಧ್ವಜ |
| ನಕುಲ | ಚಂಡಿ | ಸಹದೇವ | ಹಂಸಧ್ವಜ | ಕುಂತಿ | ಸುಮತಿ |
| ಪ್ರಮತಿ (ಮಂತ್ರಿಗಳು) | ದ್ರೌಪದಿ | ಸುಧನ್ವ | ಸುಭದ್ರೆ | ಸುಗರ್ಭೆ | ವೇದವ್ಯಾಸ |
| ಕುವಲಯೆ | ಶ್ರೀಕೃಷ್ಣ | ಪ್ರಭಾವತಿ | ವೃಷಕೇತು | ಶಂಖ ಮತ್ತು ಲಿಖಿತ | |
| ಮೇಘನಾದ | ಸುರಥ | ಪ್ರದ್ಯುಮ್ನ | ಗರುಡ | ಅನುಸಾಲ್ವ | ವೃಷಭ (ಭೃಂಗಿ) |
| ಯವ್ವನಾಶ್ವ | ಶಿವ | ದೂತಿ, ಯಾದವರು, ಬೇಹಿನಚರರು, ನಾರಿಯರು | | | |

**ಶಾರ್ದೂಲ ವಿಕ್ರೀಡಿತಂ**

ಭಾಮಾಭೈಷ್ಮಿನಿಷೇವಿತಂ ಯದುವರಂ ಭೀಮಾದಿಮೋದಪ್ರದಂ
ಸೀಮಾತೀತಗುಣಂ ಕಿರೀಟಿಜಯದಂ ಕಾಮಸ್ಯ ತಾತಂ ಪರಮ್ ।
ಸೋಮಸ್ಯಾನ್ವಯದೀಪಕಂ ಮುರಹರಂ ರಾಮಾನುಜಂ ಕಾಮದಂ
ಶ್ಯಾಮಂ ಪಾಂಡವಯಜ್ಞ ಹೇತುಮತುಲಂ ಕೃಷ್ಣಂ ಸುಸೇವ್ಯಂ ಭಜೇ ॥ ॥೧॥

**ಭಾಮಿನಿ**

ಶ್ರೀ ಮಹಾಗಣಪತಿ ಗುಣವ್ರಜ ।
ಧಾಮ ಭಕುತ ಪ್ರೇಮ ತ್ರಿದಶ ।
ಸ್ತೋಮ ವಿನುತಸನಾಮ ಭವವಿಶ್ರಾಮ ನಿಸ್ಸೀಮ ॥
ಕಾಮಿತಾರ್ಥ ಫಲಪ್ರದಾಯಕ ।
ಸೋಮಸೂರ್ಯಯಮಾತರುಚಿ ತವ ।
ಕೋಮಲಾಂಘ್ರಿಗೆ ನಮಿಸಿ ಪೇಳುವೆ ಸ್ವಾಮಿಯೆನಗೊಲಿದು ॥೨॥

**ರಾಗ ನಾಟಿ ಝಂಪೆತಾಳ**

ಜಯ ಜಯತು ಶ್ರೀಕಾಂತ । ಜಯತು ದುರಿತಧ್ವಾಂತ ।
ಜಯ ಸುಜನ ಜನಘೋಷ । ಜಯ ವೇಂಕಟೇಶ ॥ ಪ ॥

ರಾಜನಿಭವದನ ಗ್ರಹ । ರಾಜಶತ ಕೋಟಿನಿಭ ।
ರಾಜ ಶರಣ್ಯ ಕರಿ । ರಾಜರಕ್ಷಣ್ಯ ॥
ರಾಜಪೀಠನಿಲಯ ಸುರ । ರಾಜನುತಚರಣ ಅಹಿ ।
ರಾಜಶಯನಖಿಲಾಂಡ । ರಾಜಾಧಿರಾಜ ॥೩॥

ಗುರುಕುಜನವ್ಯಾಳದ್ವಿಜ । ಗುರುವ ಸಜ್ಜನಪಾಲ ।
ಗರುವ ದೇವರ ದೇವ । ಗರುವಿಕೆಯ ಮೆರೆವ ॥
ಗುರುವರಾರ್ಚಿತ ತ್ರಿಜಗ । ಗುರು ಸಾರ್ವಭೌಮ ಸ ।
ದ್ಗುರು ಮೂಲಿಕೆನಿವಾಸ । ಗುರು ವೆಂಕಟೇಶ ॥೪॥

**ವಾರ್ಧಕ**

ಶರಣವತ್ಸಲೆ ರಮಾ ವಾಗ್ದೇವಿ ದ್ರುಹಿಣೆ ಶಂ ।
ಕರಿ ಶಂಭು ಸುರಪ ಸುರಮುನಿ ಗರುಡ ಗಂಧರ್ವ।
ಪರಮ ವೇದವ್ಯಾಸ ಶುಕ ಶೌನಕಾದಿಗಳ ಚರಣಂಗಳಂ ಸ್ಮರಿಸುತ ॥
ವರ ಭಾರತಾಶ್ವಮೇಧಾಗಮದೊಳು ಸುಧನ್ವ ।

ಸುರಥರಂ ಶ್ವೇತವಾಹನ ಗೆಲ್ದ ಕಥೆಯ ವಿ ।
ಸ್ತರಿಪೆ ಮೂಲಿಕೆಯ ನರಸಿಂಹ ಗುರುವೇಂಕಟೇಶ್ವರನ ಸತ್ಕರುಣದಿಂದ ॥೫॥

ಹಸ್ತಿನಾವತಿಯ ಜನಮೇಜಯಂ ಪೂರ್ವಜರ ।
ವೃತ್ತಾಂತಮಂ ಮಹಾಭಾರತಶ್ರವಣ ಗೈ ।
ವುತ್ತಶ್ವಮೇಧಿಕದಿ ಜೈಮಿನಿ ಮುನಿಪನ ಬೆಸಗೊಂಡನತಿ ಭಕ್ತಿಯಿಂದ ॥
ಮತ್ತೆ ಪಾಂಡವರಶ್ವಮೇಧ ಹಯಮಂ ಬಿಟ್ಟು ।
ಉತ್ತಮ ಸುಧನ್ವ ಸುರಥರನುಂ ರಣಾಗ್ರದೊಳ್ ।
ಪಾರ್ಥಜಯಿಸಿದ ಕಥೆಯ ಬಿತ್ತರಿಪುದೆನುತರಸ ಕೇಳ್ದಡವನಿಂತೆಂದನು ॥೬॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಅರಸ ಕೇಳ್ ಶ್ರೀ ಕೃಷ್ಣಭಕ್ತರ । ಚರಿತೆಯನು ಕೌರವರ ಬಳಗವ ।
ಧುರದಿ ಜಯಿಸಿದ ಬಳಿಕ ಕುಂತೀ । ತರುಣರಾಗ ॥೭॥

ಮೆರೆವ ಹಸ್ತಿನಪುರದಿ ಹರಿವಿ । ಷ್ಟರವ ಧರ್ಮಜನೇರಿ ವಿಭವದಿ ।
ಧರೆಯನಾಳುತ್ತಿರ್ದ ನಿಜಸೋ । ದರರು ಸಹಿತ ॥೮॥

ಒಂದು ದಿನ ರಾಜಾಲಯಕೆ ಜಗ । ದ್ವಂದ್ಯ ವೇದವ್ಯಾಸ ಮುನಿ ನಡೆ ।
ತಂದನೆಂಬುದ ಕೇಳಿ ಭೂಮಿಪ । ನಂದದಿಂದ ॥೯॥

**ರಾಗ ಸಾಂಗತ್ಯ ರೂಪಕತಾಳ**
ಮುನಿಯ ಬರವ ಕಾಣುತಿದಿರೇಳುತರಸ ತ । ನ್ನನುಜರು ಸಹಿತ ವಂದಿಸಲು ।
ಮಣಿದರನೆತ್ತಿ ಹರಸಿ ಮಂತ್ರಾಕ್ಷತೆಯಿತ್ತು । ಅನಿಬರ ಸಂತೈಸಿ ಬಳಿಕ ॥೧೦॥

ಉಚಿತದಿ ಸತ್ಕರಿಸುತ ಮುನಿಪನ ರತ್ನ । ಖಚಿತ ಪೀಠದಿ ಕುಳ್ಳಿರಿಸುತ ॥
ವಚಿಸದೆ ಮೌನದೊಳಿಹ ನೃಪತಿಯ ಕಂಡು । ಪ್ರಚುರ ಮೌನೀಶನಿಂತೆಂದ ॥೧೧॥

ಭೂಪಲಾಲಿಸು ನಿನ್ನೈಶ್ವರ್ಯ ಸಂಪದಕೀಗ । ಲೀ ಪೊಡವಿಯೊಳ್ ಎಣೆಗಾಣೆ ॥
ತಾಪಿಸಿ ಮೊಗಸಿರಿ ಕಂದಿದಂತಿದೆ ಪೇಳ್ ಹೃ । ತ್ತಾಪವನೆನ್ನ ಕೂಡರಸ ॥೧೨॥

**ರಾಗ ಶಂಕರಾಭರಣ ಏಕತಾಳ**
ಎನಲಿಂತೆಂದ ಭೂಪ ಗೋತ್ರ । ಹನನಗೆಯ್ದು ಪಾಪವೆನ್ನ ।
ಮನದೊಳುರಿವುತಿದೆ ಸಂತಾಪ । ಮುನಿಕುಲವರ್ಯ ॥
ರಣದಿ ಕಾದಿ ವೈರಿಗಳನು । ಹನನಗೆಯ್ದುಡಿದುವೆ ಕ್ಷತ್ರಿ ।
ಜನರ ಧರ್ಮ ದುರಿತವೆಂಬೆ । ನಿನಗೆಂತು ಭೂಪ ॥೧೩॥

ಮುತ್ತಾತ ಮಾವ ಮೈದುನ । ಒತ್ತಿನಣ್ಣ ಗುರುಗಳನ್ನು ।
ವ್ಯರ್ಥ ಕೊಂದ ಪಾಪ ಪೋಪು । ದೆತ್ತ ಮುನಿರಾಯ ॥
ಸೂತ್ರಧಾರಿ ಕೃಷ್ಣನ ವಿ । ಚಿತ್ರಲೀಲೆಯಿದುವೆಬರಿದೆ ।
ಚಿತ್ತ ಚಂಚಲವೇಕೋ ಭೂಪೋತ್ತಮ ಕೇಳು ॥೧೪॥

ಬಂಧುಗಳ ಕೊಂದು ಪಾಂಡು । ನಂದನರು ರಾಜ್ಯವಾಳ್ವ ।
ರೆಂದು ಜನರು ನುಡಿಯದಿಹರೆಂ । ದೆಂದು ಮುನಿರಾಯ ॥
ಅಂದದಲಶ್ವಮೇಧವ । ಚಂದದಿಂದ ರಚಿಸೈ ಲೋಕ ।
ನಿಂದೆಯಳಿವು ದುರಿತ ನಿನಗೆ । ಪೊಂದದು ಭೂಪ ॥೧೫॥

**ಭಾಮಿನಿ**

ಬಂಧುಹತ್ಯಾದೋಷ ನಿನಗದು ।
ಪೊಂದದಂದದಿಯಶ್ವಮೇಧವ ।
ನಿಂದು ರಚಿಸೆನುತದರ ಸಾಂಗೋಪಾಂಗವಿಧಿಗಳನು ॥
ಚಂದದಿಂ ವಿವರಿಸಲು ಕೇಳುತ ।
ಲಂದು ಭೂಪತಿ ಮಖಕೆ ಮನವನು ।
ತಂದು ಬಾಗುತ ಬಿನ್ನವಿಸಿದನು ಬಾದರಾಯಣಗೆ ॥೧೬॥

**ರಾಗ ಕಾಂಭೋಜಿ ಝಂಪೆತಾಳ**

ಜೀಯ ಲಾಲಿಪುದಮಿತ ದ್ರವ್ಯ ಸಂಗ್ರಹವಿಲ್ಲ । ವಯ್ಯ ದಿವ್ಯಾಶ್ವ ಮುನ್ನಿಲ್ಲ ।
ಈ ಯಜ್ಞವೆಂತು ನಡೆಸಲಿ ತಿಳಿಯೆ ಶ್ರೀಕೃಷ್ಣ । ರಾಯನಪ್ಪಣೆ ಕೇಳಲಿಲ್ಲ ॥೧೭॥

ಮನವ ಚಂಚಲಿಸಬೇಡವನೀಶ ಕೇಳು ಬಹು । ಧನವು ದಿವ್ಯಾಶ್ವವಿಹ ಬಳಿಯ ॥
ನಿನಗೆ ತೋರಿಸುವೆ ತರಿಸೀ ಕ್ಷಣದಿ ಹಯಮೇಧ । ವನು ರಚಿಸಲುದ್ಯೋಗಿಸಯ್ಯ ॥೧೮॥

ಭದ್ರಾವತಿಯ ಪುರದ ಯೌವನಾಶ್ವನೊಳು ಸೌ । ಭದ್ರ ದಿವ್ಯಾಶ್ವವಿಹುದಲ್ಲಿ ॥
ಭದ್ರಕಾಯನು ಭೀಮ ಮೊದಲಾದವರು ನಡೆದು । ಪದ್ರವಿಲ್ಲದೆ ತರುವುದಿಲ್ಲಿ ॥೧೯॥

**ರಾಗ ಮಾರವಿ ಏಕತಾಳ**

ಎನಲೆಂದನು ಭೂಪತಿಗೆ ವೃಕೋದರ । ಇನಿತೀ ಕೆಲಸಕ್ಕೆ ॥
ಅನುಮಾನಿಸದಿರು ಮನದೊಳಗೀ ಕ್ಷಣ । ವನುಕರಿಸೈ ಮಖಕೆ ॥೨೦॥

ಬಿಡು ಚಿಂತೆಯ ಹಿಡಿ ತರುವೆ ಮಖಾಶ್ವವ । ಕೊಡಿಸೆನಗಪ್ಪಣೆಯ ॥
ಮೃಡಮುಖ್ಯಾಮರಗಡಣವು ತಡೆದರೆ । ಬಿಡಿಸಿ ತಹೆನು ಜೀಯ ॥೨೧॥

ತುರಗವ ತಂದೊಪ್ಪಿಸದಿರೆ ಕೇಳಾ । ನೊರೆವ ಪ್ರತಿಜ್ಞೆಯನು ॥
ಸುರಲೋಕಕೆ ಬಾಹಿರನೆನುತಲಿ ಗದೆ । ತಿರುಹ್ಯಬ್ಬರಿಸಿದನು ॥೨೨॥

ದೋಷನಿವಾರಣ ಮಖದೀಕ್ಷೆಯ ಹಿಡಿ । ಲೇಸೆಮಗೆನುತ ಮಿಗೆ ॥
ಆಶುಗನಾತ್ಮಜ ನುಡಿಯಲು ವೇದ । ವ್ಯಾಸನೊರೆದ ನೃಪಗೆ ॥೧೩॥

**ರಾಗ ಕೇದಾರಗೌಳ ಅಷ್ಟತಾಳ**

ರಾಜಶೇಖರ ಮಹಾರಾಜ ಧರ್ಮಜ ಕೇಳು । ವಾಜಿ ದೊರಕಿತಿನ್ನೇನು ॥
ತೇಜನೆ ದ್ರವ್ಯ ಸಂಗ್ರಹವಿರ್ಪ ಠಾವನ್ನು । ಮಾಜದಾನೊರೆವೆನಿನ್ನು ॥೧೪॥

ಅರಸ ಕೇಳ್ ಮುನ್ನ ಮರುತ್ತ ದ್ವಿಜರಿಗಿತ್ತ । ಪರಿಮಿತದ್ರವ್ಯವನು ॥
ಹೊರಲಾರದಲ್ಲಿ ಬಿಟ್ಟಯ್ದಿದರತಿ ಧನ । ವಿರುವುದು ತರಿಸದನು ॥೧೫॥

ಆ ಮರುತ್ತನು ಬ್ರಾಹ್ಮಣರಿಗಿತ್ತ ಧನವನ್ನು । ಈ ಮಹಾಯಜ್ಞಕದು ॥
ಹೋಮಿಸಲುಚಿತವೆ ಹನನ ದೋಷಗಳು ನಿ । ರ್ಧೂಮವದೆಂತಹುದು ॥೧೬॥

ಅರಸ ಕೇಳ್ ಧನವ ವಿಪ್ರರದೆಂಬೆ ನೀನಾಳ್ವ । ಧರಣಿ ದ್ವಿಜರದಲ್ಲವೆ ॥
ದೊರೆಗಳ ತರಿದು ಪರಶುರಾಮ ಧಾತ್ರಿಯ । ಧರಣೀಸುರರಿಗೀಯನೆ ॥೧೭॥

ಗುರುವರ್ಯ ಕೇಳು ವಿಪ್ರರಿಗಾದ ಮೇಲೆ ಈ । ಧರಣಿಯಾಸೆಯು ತನಗೆ ॥
ಇರುವುದೆ ಮನದಿ ಶ್ರೀಹರಿಯ ಧ್ಯಾನದೊಳಿರ್ಪೆ । ಕರುಣಿಸಪ್ಪಣೆಯೆನಗೆ ॥೧೮॥

ಜನಪ ಕೇಳ್ ದೋಷ ಕಾರಣವಿಲ್ಲ ಬ್ರಾಹ್ಮಣ । ಧನವದು ನಿನ್ನದಯ್ಯ ॥
ಅನುಮಾನವಿಲ್ಲದೆ ತರಿಸೆನುತಾಕ್ಷಣ । ಮುನಿಪತಿ ಬೀಳ್ಗೊಂಡನು ॥೧೯॥

**ವಾರ್ಧಕ**

ಬಾದರಾಯಣ ತೆರಳಲಿತ್ತಲಾ ಸಮಯಕಂ ।
ಶ್ರೀಧರಂ ತೆರಳಿ ಬರಲೀ ವಾರ್ತೆಯರುಹುತ ವೃ ।
ಕೋದರ ವೃಷಧ್ವಜರ್ ಮೇಘನಾದರ ಕೂಡಿ ಬೀಳ್ಗೊಟ್ಟು ಕಳುಹಲಾಗ ॥
ಪೋದರಾ ಭದ್ರಾವತಿಗೆ ಹಯವ ಕೋಳ್ವಿಡಿದು ।
ಕಾದಿ ಕಲಿ ಯೌವನಾಶ್ವನ ಕೂಡಿಕೊಂಡು ಹರು ।
ಷೋದಯದಿ ಹಸ್ತಿನಾವತಿಗಯ್ದಿ ಭೀಮನೊಪ್ಪಿಸಿದನಾ ಹಯವ ನೃಪಗೆ ॥೨೦॥

ನಳಿನಾಕ್ಷನೊರೆದ ಯಮಜಗೆ ಪೋದುದಿದು ಚೈತ್ರ ।
ವುಳಿದ ಪನ್ನೊಂದು ತಿಂಗಳೊಳೆಲ್ಲ ಸಂಗ್ರಹಂ
ಗಳನೊದಗಿಸಲು ತಾನು ಬರ್ಪೆನೆಂದೆನುತಾಗ ಹರಿಯು ದ್ವಾರಕೆಗೆ ತೆರಳೆ ॥
ಬಳಿಕಿತ್ತಲಿವರು ಪೋಗುತ ಹಿಮಾತಟದಿ ಗುರು ।
ತಿಳುಪಿದಾ ಸ್ಥಳವ ಶೋಧಿಸಿಯೊಂಟೆಭಂಡಿಯಲಿ ।
ಪೊಳೆವ ದ್ರವ್ಯವ ಸಾಗಿಸುತ ಮಖಕೆ ಸರ್ವಾನುಕೂಲಮಂ ಗೆಯ್ದರಾಗ ॥೨೧॥

### ರಾಗ ಭೈರವಿ ಝಂಪೆತಾಳ

ಇನಿತು ಧರ್ಮಜ ಯಜ್ಞ । ಕನುಕೂಲವೆಸಗಿ ಮುನಿ ।
ಜನ ಭೂಮಿಪರ ಬರಿಸು । ತನಿಲಜನೊಳೆಂದ ॥೩೧॥

ತಮ್ಮ ಪೋಗಯ್ಯ ಪರ । ಬೊಮ್ಮ ಶ್ರೀ ಕೃಷ್ಣನಿಹ ।
ನಿರ್ಮಲದ ದ್ವಾರಕೆಗೆ । ಕೂರ್ಮೆಯಿಂದೀಗ ॥೩೩॥

ತೆರಳಿ ಶ್ರೀವರನ ಪದ । ದರುಶನವ ಗೆಯ್ದುರುಹಿ ।
ಕರೆತಹುದು ಸಕಲ ಯದು । ವರನುತ್ಸಹದಿ ॥೩೪॥

ದೇವಿ ರುಗ್ಮಿಣಿ ಮುಖ್ಯ । ದೇವಿಯರನೊಡಗೊಂಡು ।
ದೇವ ತೆರಳೆಂದೆನುತ । ದೇವನಿಂಗರುಹು ॥೩೫॥

### ಭಾಮಿನಿ

ಅನುಜಗಪ್ಪಣೆ ಕೊಡಲು ಮಾರುತ ।
ತನಯನತಿ ಸಂತೋಷದಿಂ ಮಣಿ ।
ಗಣವಿಭೂಷಣ ದಿವ್ಯವಸ್ತ್ರಾಲಂಕೃತಿಯ ಗೆಯ್ದು ॥
ಕನಕರಥವೇರುತ್ತ ಸೇವಕ ।
ಜನಸಹಿತ ಪೊರಮಟ್ಟು ಪಾಠಕ ।
ರನುಗೊಳಿಸುತಯ್ತರುತ ಪೊಕ್ಕನು ದ್ವಾರಕಾಪುರವ ॥೩೬॥

### ದ್ವಿಪದಿ

ಚಾರುತರ ವಿಭವದಿಂದುದಧಿಯೊಳಗಿರುವ ।
ಆರು ಬಣ್ಣಿಸಬಹುದು ದ್ವಾರಕಾಪುರವ ॥೩೭॥

ವಿಶ್ವಕರ್ಮನು ಕಲಿತ ಕಯ್ಮಾಯೆಗಳನು ।
ವಿಸ್ತಾರದಿಂ ಜಗಕೆ ರಚಿಸಿ ತೋರಿದನು ॥೩೮॥

ಕೇರಿಕೇರಿಯಲಿ ವಿಸ್ತರವ ನೋಡುತ್ತ ।
ಮಾರುತಿಯು ನಡೆತಂದ ಮನದಿ ಹರುಷಿಸುತ ॥೩೯॥

ನಾರಾಯಣನ ರಾಜ ಮಂದಿರದ ಮುಂದೆ ।
ತೇರನಿಳಿದೊಳಪೊಕ್ಕನತಿ ಭಕ್ತಿಯಿಂದೆ ॥೪೦॥

ಶ್ರೀರಮಣ ಶ್ರೀಕೃಷ್ಣ ಹರಿಯೆನ್ನುತಾಗ ।
ಮಾರುತಿಯು ಪೊಗಳುತಯ್ತಂದನತಿ ಬೇಗ ॥೪೧॥

**ವಾರ್ಧಕ**

ಇಂತೆಂದು ಕೃಷ್ಣನರಮನೆ ರತ್ನಮಯದ ಮೇ ।
ಲ್ವಂತಿಗಳ ನೋಡುತ್ತ ಬಾಗಿಲುಗಳಂ ಕಳೆದು ।
ಕುಂತಿತನಯನು ಹರುಷಗೊಳುತ ಬರಲಾ ಸಮಯಕಚ್ಯುತಂ ಒಳಭವನದಿ ॥
ಸಂತಸದೊಳಾರೋಗಣೆಯ ಗೆಯ್ಯಲಾಗ ಬರ ।
ಲುಂತಡೆಸಿದಂ ಭೀಮನಂ ಬಾಗಿಲೊಳ್ ಬಾರ ।
ದಂತೆ ದೂತಿಗೆ ಸೂಚಿಸುತ್ತ ತಾನರಿಯದೊಲ್ ಸುಮ್ಮಾನದ ವಿನೋದಕೆ ॥೪೧॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಇತ್ತ ಭೀಮನು ಹರಿಯ ನೆನೆನೆನೆ । ದರ್ತಿಯೊಳಗಯ್ತುರಲು ದ್ವಾರದಿ ।
ಮತ್ತೆ ದೂತಿಯು ನುಡಿದಳಾಶುಗ । ಪುತ್ರನೊಡನೆ ॥೪೩॥

ದೇವನಾರೋಗಣೆಯ ಸಮಯವು । ನೀವು ನಿಲಿಯೆಂದೆನುತ ದೂತಿಯು ।
ಪಾವಮಾನಿಗೆ ನುಡಿಯೆ ತಾನಾ । ಸೋವನರಿದು ॥೪೪॥

ಇನಿತು ದುರ್ಭಿಕ್ಷಗಳೆಯಾರೋ । ಗಣೆಯ ಸಮಯವಿದಾಗಲೆಮ್ಮನು ।
ಮುನಿದು ತಡೆಸಲಿದೇತಕೆಂದನು । ಅನಿಲಸೂನು ॥೪೫॥

ಭಕ್ತವತ್ಸಲನೆಂಬ ಬಿರುದನು । ಎತ್ತ ಪೋಗಾಡಿದೆಯೋ ನಿತ್ಯ ।
ತೃಪ್ತನಾರೋಗಣೆಯ ಸವಿಗತಿ । ಮತ್ತನಹನೆ ॥೪೬॥

ಬೆಳೆಯವೇ ಬೆಳೆಫಲಗಳೀಯೂ । ರೊಳಗೆ ಕ್ಷಾಮಗಳಿಂದ ಸುರಿಯದೆ ।
ಮಳೆಯುಯೆನೆ ಕೇಳ್ದಾಗ ನುಡಿದನು । ನಳಿನನೇತ್ರ ॥೪೭॥

ಈಗ ಬಂದನೆ ಭೀಮ ಕರೆ ಕರೆ । ಬಾಗಿಲಲಿ ತಡೆದವರದಾರೆನು ।
ತಾಗಲರಿಯದ ತೆರದೊಳುಚಿತದಿ । ಬೇಗ ಕರೆದ ॥೪೮॥

ತೇಜನಿಧಿ ಬಾರೆನುತ ಮನ್ನಿಸಿ । ಭೋಜನವ ಗೆಯ್ಸಿದನು ಭೀಮನ ।
ಪೂಜ್ಯನೆನಿಸುತ ನುಡಿಸಿದನು ಯದು । ರಾಜನೊಲಿದು ॥೪೯॥

**ರಾಗ ಕಾಂಭೋಜಿ ಝುಂಪೆತಾಳ**

ಇಂದುಕುಲತಿಲಕ ಧರ್ಮಜ ಪಾರ್ಥ ಯಮಳರರ ।
ವಿಂದಮುಖಿ ದ್ರುಪದಸುತೆ ಸಹಿತ ॥
ಚಂದದಿಂದಿಹರೆ ಸರಸಕೆ ತಡೆಸಿದರೆ ಮನದಿ ।
ನೊಂದೆಯಾ ಎನೆ ಕೇಳುತೆಂದ ॥೫೦॥

ಮನದಿ ನೋಯುವುದೇಕೆ ಬಿನುಗು ಜನರಿಂಗರಸು ।
ತನವು ಬಂದಡರೆ ಬಡವರಲಿ ॥
ಕಣು ಕಾಂಬುದೇ ಕಾಮಜನಕ ಪುಸಿಯದೆ ಪೇಳು ।
ಜನರ ನಡತೆಗಳು ಲೋಕದಲಿ ॥೫೧॥

ಗೋವಳನ ಮಗನೆನಿಸಿ ಗೋವಳರ ಒಡನಾಡಿ ।
ಗೋವುಗಳ ಕಾಯ್ದು ಮನದೊಳಗೆ ॥
ಹಾವು ಹದ್ದನೆ ಏರಿ ಮೆರೆವವಗೆ ಮಹಾರಾಜ ।
ಠೀವಿ ಬಂದೆಡೆಗೊಂಡುದೀಗ ॥೫೨॥

ಬುತ್ತಿಕೂಳನೆ ಉಂಡು ಬೆಳೆದವಗೆ ಮೃಷ್ಟಾನ್ನ ।
ಪ್ರಾಪ್ತವಾಗಲು ನೆಂಟರುಗಳ ॥
ಎತ್ತ ಕಾಂಬನು ಎಲೆ ಮುರಾರಿ ಲೋಕದ ನಡತೆ ।
ಚಿತ್ತದಲಿ ಬೇಸರಿಸಬೇಡ ॥೫೩॥

ಕುಲಹೀನಗೈಶ್ವರ್ಯಲಕ್ಷ್ಮಿ ದೊರಕಲು ತನ್ನ ।
ಬಳಗ ಬಂಧುಗಳ ಮನ್ನಿಪನೆ ॥
ಸಲುಗೆ ನಮಗೆತ್ತಣದು ಶ್ರೀಕಾಂತ ನಿನ್ನ ಪದ ।
ದೊಲವಿರ್ದರದುವೆ ಸಾಕೆಂದ ॥೫೪॥

**ಕಂದ**
ಭಕ್ತನ ಬಿನ್ನಾಣಗಳಂ ।
ಬಿತ್ತರಿಸಲ್ ಮುರರಿಪು ಸಮ ಮನದಂದಾಗಳ್ ॥
ಮತ್ತಪ್ಪುತ ಮೈದುನನಂ ।
ಕೃತ್ಯದಿ ಭೀಮನೊಳ್ ಸರಸದಿ ನುಡಿವುತ್ತಿರ್ದಂ ॥೫೫॥

**ರಾಗ ಭೈರವಿ ಝಂಪೆತಾಳ**
ಮಾತಿಗಳುಕುವೆ ಯಾಕೆ । ವಾತಸುತ ನೃಪ ನಿನ್ನ ।
ಏತಕಟ್ಟಿದ ಪೇಳು । ಪ್ರೀತಿಯಿಂದೆನಗೆ ॥೫೬॥

ದೇವ ತವ ಕರುಣಸಂ । ಜೀವನವನುಂಡ ಬಳಿ ।
ಕಾವು ಅಳುಕುವುದೇಕೆ । ಶ್ರೀವರನೆ ಕೇಳು ॥೫೭॥

ತುರಗಾಧ್ವರಕೆ ಸಕಲ । ಪರಿಕರವನೆಸಗಿ ಶ್ರೀ ।
ಹರಿ ನಿಮ್ಮ ಕರೆತರಲು । ಅರಸ ಕಳುಹಿದನು ॥೫೮॥

ದೇವಿ ರುಗ್ಮಿಣಿ ಮುಖ್ಯ । ದೇವಿಯರು ಸಕಲ ಯದು ।
ಭೂವರರು ಸಹ ಮಖಕೆ । ದೇವ ತೆರಳುವುದು ॥೫೯॥

ವಾದಿಸಿದ ನುಡಿಯನಪ । ರಾಧವನು ಕ್ಷಮಿಸೀಗ ।
ಹೇ ದಯಾಂಬುಧಿಯೆಂದು । ಪಾದಕೆರಗಿದನು ॥೬೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮರುಳಲಾಯೆಲೆ ಭೀಮ ಭಕ್ತರು । ಸರಸದಿಂದೆನ್ನುವನು ಅನುದಿನ ।
ಜರೆದು ವಾದಿಸಿ ನುಡಿದೊಡದು ಹಿತ । ಕರವು ಎನಗೆ ॥೬೧।

ಭಕ್ತರೊಡನೆ ವಿವಾದಿಸುವ ಸರ । ಸೋಕ್ತಿ ಸವಿಗಳಿಗಿನ್ನು ಸರಿಯಹ ।
ತೃಪ್ತಿಗಾಣೆಯೆನುತಲಪ್ಪಿ ಮ । ರುತ್ತಸುತನ ॥೬೨॥

ಮನ್ನಿಸುತಲನಿಲಜನ ಯಾದವ । ಸೈನ್ಯ ರುಗ್ಮಿಣಿ ಮುಖ್ಯ ದೇವಿಯ ।
ರನ್ನು ಒಡಗೊಳುತಾ ಭಕುತಸಂ । ಪನ್ನ ಪೊರಟ ॥೬೩॥

೧

**ಭಾಮಿನಿ**

ಸಕಲಜನ ವಿಭವದಲಿ ಬರುತಿರೆ ।
ಬಕವಿರೋಧಿಯ ಮುಂದೆ ಕಳುಹಿದ ।
ಯುಕುತದಿಂದಾಗಮನವಾರ್ತೆಯ ನೃಪತಿಗರುಹೆನುತ ॥
ಪ್ರಕಟ ಪುರಬಾಹ್ಯದಲಿ ನಿಜಸೈ ।
ನಿಕವ ಬೀಡಿಗೆ ಬಿಡಿಸಿ ಹರುಷದಿ ।
ರುಕುಮಿಣಿಯ ಕರೆದಾಗಲಿಂತೆಂದನು ಮುರಧ್ವಂಸಿ ॥೬೪॥

**ರಾಗ ಕೇದಾರಗೌಳ ಅಷ್ಟತಾಳ**

ಅರಸಿ ನೋಡೀ ಸರಸಿಯ । ಅರವಿಂದ ।
ಕೆರಗುತಿಹ ಭ್ರಮರತತಿಯ ॥
ತರುಣಿಯರ ಕಂಡು ವಿಟರು । ಈ ತೆರದಿ ।
ಮರುಳಾಗಿ ಭ್ರಮಿಸುತಿಹರು ॥೬೫॥

ಕಮಲಮಕರಂದ ಸವಿಗೆ । ಸಹಜದಿಂ ।
ಭ್ರಮರಾಳಿಯೆರಗಲು ಮಿಗೆ ॥
ರಮಣಿ ಪದ್ಮಿನಿಗೆ ದೋಷ । ವೆಂತಹುದು ।
ಅಮಿತ ಗುಣನಿಧಿ ಪರೇಶ ॥೬೬॥

ಮಿಂಡೆಯರ ಅಧರಸುಧೆಯ । ವಿಟಜನಗ ।
ಳುಂಡು ಮೆರೆಯುತ ವಿರಹವ ॥
ಪುಂಡರೀಕದೊಳು ಪೊಗುತ । ಸವಿವಾಳಿ ।
ಉಂಡಮೃತವನು ನಲಿವುತ ॥೬೭॥

ಶಿಶು ತಾಯ ಮೊಲೆಯನುಂಡು । । ಜೀವಿಪಂ ।
ತೆಸೆವ ಅಳಿಕುಲದ ಹಿಂಡು ॥
ಬಿಸಜರಸ ಪೀರ್ದುಳಿವುವು । ದೇವ ದೋ ।
ಷಿಸಲುಚಿತವಲ್ಲ ಕೇಳು ॥೬೮॥

ರಮಣಿ ನೋಡೀ ವಿನೋದ । ಹಂಸೆಗಳು ।
ರಮಿಸಿ ನಲಿವುತ್ತಲಿಹುದ ॥
ರಮಣಿಯರ ಕಪಟವಿಂತು । ರವಿಗಿವಳು ।
ರಮಣಿಯೆನಿಸುವಳದೆಂತು ॥೬೯॥

ನಳಿನವನು ಕಂಡು ಮುದದಿ । ಹಂಸೆಗಳು ।
ನಲಿವುತಿರುವುವು ಸಹಜದಿ ॥
ಪಳಿಯ ಬೇಡೆನ್ನ ಮನೆಯ । ನೆನುತಪ್ಪಿ ।
ಕೊಳುತೆರಗಿದಳು ಪಾದವ ॥೭೦॥

**ಭಾಮಿನಿ**
ಇತ್ತ ಭೀಮನು ಬಂದು ಧರ್ಮಜ ।
ನುತ್ತಮಾಂಗದಿ ನಮಿಸಿ ಮುರರಿಪು ।
ಮತ್ತಕಾಶಿನಿಯರ ಸಹಿತ ನೆರಹುತ್ತ ಬಂದುದನು ॥
ಬಿತ್ತರಿಸೆ ಹರುಷದೊಳು ಯಮಸುತ ।
ಚಿತ್ತ ಹಿಗ್ಗುತ ಮುರಹರನ ಕಾಂ ।
ಬರ್ತಿಯಲಿ ಸಹಜಾತರೊಡನೆ ಸಮಸ್ತ ಬಲಸಹಿತ ॥೭೧॥

**ರಾಗ ಕೇದಾರಗೌಳ ಅಷ್ಟತಾಳ**
ಪೊಳಲ ಸಿಂಗರಗೆಯ್ಸಿ ಕಲಶಗನ್ನಡಿಯಿಂದ । ಲಲನೆಯರೊಡಗೊಳ್ಳುತ ॥
ಇಳೆಯಧಿಪರ ಸರ್ವ ದಳ ಸಹ ಭೂಪತಿ । ಘಳಿಲನೆ ಪೊರಮಡುತ ॥೭೨॥

ಚೆಲುವ ಮಖದ ಹಯ ಸಹಿತ ಬಹಳ ವಾದ್ಯ । ಗಳ ನಿನಾದದ ಘೋಷದಿ ॥
ತಳುವದಯ್ತಂದು ಕಂಡರು ಕಾಮಪಿತನ ನಿ । ಶ್ಚಲ ಭಕ್ತಿಯೊಳು ಮುದದಿ ॥೭೩॥

ನಳಿನದಳಾಕ್ಷನ ಚರಣಕ್ಕೆ ಭೂಪತಿ । ತಲೆವಾಗುತಿರೆ ಕಾಣುತ ॥
ತೊಲಗುತೊಯ್ಯನೆ ಬರಸೆಳೆದಪ್ಪುತಲೆ ನೃಪ । ತಿಲಕನ ಮನ್ನಿಸುತ ॥೭೪॥

ಬಳಿಕರ್ಜುನನ ಯಮಳರ ವಂದನೆಯ ಕೊಂಡು । ಇಳೆಯಧಿಪರ ಮನ್ನಿಸಿ ॥
ನಿಲುವ ನೀಲಚ್ಛವಿ ಏಕಕರ್ಣದ ಹಯ । ಚೆಲುವಿಕೆಯನು ಕಂಡರು ॥೭೫॥

ದೇವಿ ರುಗ್ಮಿಣಿ ಸತ್ಯಭಾಮಾದಿಗಳನು ಸ । ದ್ಭಾವದಿ ದ್ರುಪದಜೆಯು ॥
ಭಾವಿಸುತುಪಚರಿಸಿದಳತಿ ವಿನಯದಿ । ದೇವಿ ಸುವಚನದೊಳು ॥೭೬॥

ಆ ವೇಳೆಯಲಿ ಸತ್ಯಭಾಮಾ ದೇವಿಯು ಸ್ವಾ । ಭಾವಿಕ ನಗೆಯಿಂದಲಿ ॥
ಕೋವಿದ ಪಾಂಚಾಲೆಯನು ನುಡಿಸಿದಳು ಸ । ದ್ಭಾವ ನಟನೆಗಳಲಿ ॥೭೭॥

**ರಾಗ ನೀಲಾಂಬರಿ ಆದಿತಾಳ**

ಏನವ್ವ ದ್ರುಪದಸುತೆ । ನಿನಗೆಯೆಣೆ । ಗಾಣೆ ಬಹು ಪತಿವ್ರತೆ ॥
ಜಾಣೆಯೆಂದೆನಿಪ ಮಾನಿನಿಯರ ಕುಲದೊಳು । ನೀನೆ ಜಗದಿ ಪ್ರಖ್ಯಾತೆ ॥೭೮॥

ಪಾತಿವ್ರತ್ಯದ ಧರ್ಮವು । ಕಾಯ್ದ ಶ್ರೀ । ನಾಥನೆನ್ನಯ ಸತ್ಯವು ॥
ಆತನೆ ಬಲ್ಲ ತ್ರೈಜಗದೊಳಗೀಗ ಪ್ರ । ಖ್ಯಾತಗೆಯ್ಸಿದ ನಿಜವು ॥೭೯॥

ಮಡದಿಯರನಿಬರಾವು । ಕೃಷ್ಣನೊಡಂ । ಬಡಿಸಲು ಅಳವಲ್ಲವು ॥
ಪೊಡವಿಪರೈವರ ಮನವೊಡಂಬಡಿಸುವೆ । ಕಡು ಪತಿವ್ರತೆ ದೃಢವು ॥೮೦॥

ಪೂರುವಧೃತ ಶಾಪದಿ । ಪುರುಷರೈವರ್ । ಸಾರಸಭವಕೃತದಿ ॥
ನಾರದಮುನಿಪಗೆ ಪತಿಯನ್ನು ಮಾರಿದೆ । ಧೀರೆ ನೀನೌ ಜಗದಿ ॥೮೧॥

ಏಕಪತಿಗೆ ಸುದತಿ । ಅನೇಕರು । ಲೋಕದೊಳಿಹ ಪದ್ಧತಿ ॥
ಏಕಸತಿಗೆ ಬಹುಪತಿಗಳಾಗಿಹುದೆಂಬ । ವಾಕು ಕಾಣೆನು ಶಾಸ್ತ್ರದಿ ॥೮೨॥

ಮುನಿಯಿತ್ತ ಮಂತ್ರದಿಂದಾ । ದೇವತೆಗಳು । ಅನುಸರಿಸಿದರು ಅಂದ ॥
ಇನಿತು ಕೃತಕದ ಕಲ್ಪನೆ ನುಡಿಗಳು ನಿನ್ನ । ಮನಸಿಗೆ ದಿಟವು ಚಂದ ॥೮೩॥

**ವಾರ್ಧಕ**

ಜನಪನರಸಿಯ ಮಾತಿಗಾ ಭಾಮೆ ಬದಲು ನುಡಿ ।
ವನಿತರೊಳ್ ತಂದು ನಿಲಿಸಿದರಾ ಮಖಾಶ್ವಮಂ ।
ವನಿತೆಯರು ನೆರೆದು ನೋಡುತಲಿರ್ದರೇಕಕರ್ಣದ ದಿವ್ಯತರ ವಾಜಿಯ ॥
ಮುನುಜೇಶ ಕೇಳತ್ತ ಸಾಲ್ವದೇಶಾಧಿಪತಿ ।
ಯನುಸಾಲ್ವಖಳನ ಬೇಹಿನ ಚರರು ಹರಿ ಧರ್ಮ ।
ಜನ ಬಳಿಗೆ ಬಹ ಪರಿಯನರಿತೊಡೆಯನೆಡೆಗಯ್ದಿ ಮಣಿದೆಂದರೀ ವಾರ್ತೆಯ ॥೮೪॥

**ರಾಗ ಮುಖಾರಿ ಆದಿತಾಳ**

ಕೇಳಯ್ಯ ಸಾಲ್ವದೇಶದೊಡೆಯ । ನಾವೆಂಬ ನುಡಿಯ ।
ಕೇಳಯ್ಯ ಸಾಲ್ವ ದೇಶದೊಡೆಯ ॥ ಪ ॥

ದೇಶದೇಶವ ತಿರುಗಿ ಬರುತ । ಕಂಡೆವು ಮತ್ತಾ ।
ವಾಸುದೇವನು ಸೈನ್ಯ ಸಹಿತ ॥
ಆಶುಗಸುತನೊಡನೀ ಸಮಯದೊಳಾ ।
ಕೇಶವ ರವಿ ಶತ ಭಾಸುರ ರಥದಿ ಸು ।
ವಾಸಿನಿಯರೊಳು ವಿಲಾಸದಿ ಗಜಪುರ ।
ಧೀಶನ ನೋಳ್ಪಭಿಲಾಷೆಯೊಳಯ್ದಿದ ॥ ಕೇಳಯ್ಯ ॥೮೫॥

ತುರಗಮೇಧಕೆ ಪೋಪರಂತೆ । ಅತಿರಥರೆಲ್ಲ ।
ಪುರದ ಕಾವಲಿಗಿರುವರಂತೆ ॥
ಭರದಲಿ ನೀನಾ ಹರಿಯನು ಮಾರ್ಗದಿ ।
ಧುರದೊಳು ಗೆಲಿದಾ ತರುಣಿಯರನು ಕಯ್ ।
ಸೆರೆಯನು ಪಿಡಿದರೆ ಮರಳಿ ಬಿಡಿಸುವ ಭ ।
ಟರುಗಳದಾರೆಂದೆರಗಿದರವರು ॥ ಕೇಳಯ್ಯ ॥೮೬॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಚರರೆಂದ ವಚನವ ಕೇಳುತ್ತ । ಘನ । ಹರುಷದಿ ಸಭೆಯನ್ನು ನೋಡುತ್ತ ॥
ಭರದಿ ತದ್ದೂತರಿಗುಚಿತವ । ನಿತ್ತು । ಒರೆದ ಮಂತ್ರಿಯೊಳೊಂದು ವಾಕ್ಯವ ॥೮೭॥

ಬಾರಯ್ಯ ಧೀರ ಮಂತ್ರೀಶನೆ । ಗೋಪೀ । ಚೋರನು ನಮ್ಮಗ್ರಭವನನ್ನೇ ।
ಸೇರಿಸಿದನು ಯಮಪುರವನ್ನು । ಈಗ । ಮಾರಿಗೆ ಕೊಡುವೆನು ಬಲಿಯನ್ನು ॥೮೮॥

ಕರಿಪುರಕಯ್ದುವಂತೀಗ । ನಾವು । ತೆರಳಿ ಮಾರ್ಗದೊಳವರನು ಬೇಗ ॥
ತರುಬಿ ಯುದ್ಧದಿ ನಮ್ಮ ಹಗೆಯನು । ಕೊಂದು । ಬರುವ ಕೂಡಿಸು ಸೈನ್ಯಗಳ ನೀನು ॥೮೯॥

**ರಾಗ ಭೈರವಿ ಝಂಪೆತಾಳ**

ಕೇಳುತಾಕ್ಷಣ ಸಚಿವ । ಮೇಳವಿಸೆ ನಿಜಬಲವ ।
ಪಾಳಯವು ಸಹಿತಾಗ । ಖೂಳ ನಡೆತಂದ ॥೯೦॥

ದೂರದಲಿ ಕಂಡು ಹರಿ । ವೀರ ಪಾಂಡವರೊಡನೆ ।
ಸೇರಿರಲು ಮನದೊಳಗೆ । ಬೇರೆ ಯೋಚಿಸಿದ ॥೯೧॥

ಮಖತುರಗವನು ಮಾಯೆ । ಶಕುತಿಯಲಿ ತರಲಾಗ ।
ಬಕವೈರಿ ಬಹನು ಯು । ದ್ಧಕೆ ನಿಮಿಷದೊಳಗೆ ॥೯೨॥

**ವಾರ್ಧಕ**

ಬಿನುಗು ಕೃಷ್ಣನ ಬಲುಹ ನಿಲಿಸುವೆನು ತಾನೆಂದು ।
ಘನ ಮಾಯೆಯಿಂದ ನಭಕಡರುತೀಕ್ಷಿಸೆ ಹಯವು ।
ವನಿತೆಯರ ಮಧ್ಯದೊಳಗಿರಲು ಲೇಸಾಯ್ತೆಂದು ಮನದಿ ಸಂತಸ ತಾಳುತ ॥
ಅನುಸಾಲ್ವನಾಗಲತಿ ವೇಗದಿಂದಾ ಕುದುರೆ ।
ಯನು ಕೊಂಡು ಚಿಗಿದನಾಗಸಕೆ ಮಗುಳಲ್ಲಿ ಮಾ ।
ನಿನಿಯರೆಲ್ಲರು ಬೆದರಿ ಶ್ರೀ ಹರಿಯ ಸ್ತುತಿಸಿ ಖಳನುರವಣಿಸುತಿರ್ದ ಧುರಕೆ ॥೯೩॥

**ರಾಗ ಶಂಕರಾಭರಣ ಮಟ್ಟೆತಾಳ**

ಖಳನು ಹಯವನೊಯ್ದು ಕಟ್ಟಿ । ಕೊಳುತ ಕಾಳಗಕ್ಕೆ ತನ್ನ ।
ಬಲವ ಪದ್ಮದಾಕೃತಿಯಲಿ । ನಿಲಿಸಿ ತವಕದಿ ॥
ಅಳುಕದೆನ್ನಗ್ರಜರ ಕೊಂದ । ನಳಿನನೇತ್ರನೊಡನೆ ಕಾದಿ ।
ಕೊಲುತ ಪಾಂಡುಸುತರ ಗರ್ವ । ವಿಳಿಪೆನೆನ್ನುತ ॥೯೪॥

ಭಾರಿ ಭುಜವ ಹೊಯ್ಯುತಸುರ । ಧಾರನೆಂಬ ಸಚಿವನೊಡನೆ ।
ಭೂರಿಸೈನ್ಯ ನೆರೆವುದೆನ್ನು । ತಾರುಭಟಿಸುತ ॥
ಧೀರನಿದಿರು ನಿಲಲು ಚಕ್ರ । ಧಾರಿ ಕಾಣುತಾಗ ಖಳನ ।
ಕಾರಣವನು ತಿಳಿದು ಸುಭಟ । ವಾರಕೆಂದನು ॥೯೫॥

**ರಾಗ ಕಾಂಭೋಜಿ ಝಂಪೆತಾಳ**

ನೋಡಿದಿರೆಯನುಸಾಲ್ವನೆಂಬ ರಕ್ಕಸನಿವನು । ಮಾಡಿದೀ ಯತ್ನ ಮಖಹಯವ ॥
ಗಾಢದಿಂ ಪಿಡಿದು ನಭಕಡರಿ ನಮ್ಮೊಳು ಯುದ್ಧ । ಮಾಡಲೊದಗಿದ ಪರಾಕ್ರಮವ ॥೯೬॥

ಯಾರಿವನ ಗೆಲ್ದು ಕುದುರೆಯ ಬಿಡಿಸಿ ತಹೆನೆಂಬ । ಧೀರರಾರೆಮ್ಮ ಸೈನ್ಯದಲಿ ॥
ಶೌರ್ಯವಂತರು ವೀಳ್ಯ ಪಿಡಿಯಿರೆನೆ ಭಟರುಸಿರ । ಲಾರದಂಜುತ ಸುಮ್ಮನಿರಲು ॥೯೭॥

ಅನಿತರೊಳು ಪ್ರದ್ಯುಮ್ನ ಧನುವನೊದರಿಸುತೆಂದ । ದನುಜನನು ರಣದಿ ತತ್ ಕ್ಷಣದಿ ॥
ಕ್ಷಣದಿ ಪರಿಭವಿಸಿ ಕುದುರೆಯ ಬಿಡಿಸಿ ತಾರದಿರೆ । ಮನವಂಚಿಸದೆ ಪೇಳ್ವೆ ಶಪಥ ॥೯೮॥

ಚಾರು ಕುದುರೆಯನು ತಂದೊಪ್ಪಿಸದೆಯಿರಲು ವೃಷ । ಳೀರಮಣಗಾದ ದುರ್ಗತಿಗೆ ॥
ಸೇರುವೆನು ಎಂದೆನುತ ಪಿತನನುಜ್ಞೆಯಲಿ ರಥ । ವೇರಿ ಬೀಳ್ಗೊಂಡನಾಗಳಿಗೆ ॥೯೯॥

**ರಾಗ ಕಾಂಭೋಜಿ ಮಟ್ಟೆತಾಳ**

ಇನಿತು ಭಾಷೆಯಾಡಿ ಕಂದರ್ಪ ರೋಷದಿ ।
ಕ್ಷಣದಿ ರಥವ ನಡೆಸಿ ಬರಲು ದನುಜ ದೂರದಿ ॥
ಮನದೊಳೆಂದ ರಕ್ಕಸಾರಿತನಯನೀತನು ।
ಎನುತ ಬಲ ಪಿಂದಿಕ್ಕಿ ಮುಂದೆ ಕನಲಿ ನಿಂದನು ॥೧೦೦॥

ತಳುವದೆಂದ ಸ್ಮರನುಯೆಲವೊ ಖಳನೆ ನೆರೆದಿಹ ।
ಬಲದ ಮಧ್ಯದಿಂದಲಶ್ವ ಕಳವಿಲೊಯ್ದೆಯ ॥
ಉಳಿವೆಯೆಂತು ರಣದೊಳೀಗ ನಿನ್ನ ದೇಹವ ।
ಕಳಚಿ ಬಿಡುವೆನೆಂದು ಬಿಟ್ಟ ಕಡು ಶರೌಘವ ॥೧೦೧॥

ಮದನ ನಿನ್ನ ಶರಕೆ ಸತಿಯರ್ ಬೆದರ್ವರಲ್ಲದೆ ।
ಕದನಕಲಿಗಳಂಜುತಿಹರೆಯದಕೆ ತಡೆಯದೆ ।
ಒದಗಿದಸ್ತ್ರ ಕಡಿದು ದೈತ್ಯ ಗದಗದಿಸುತಲಿ ।
ಚದುರ ಸರಳ ಬಿಟ್ಟನಾಗ ಬದುಕುಯೆನುತಲಿ ॥೧೦೨॥

ದುರುಳನೆಚ್ಚ ಶರವು ಮಾರನುರಕೆ ನಾಂಟಲು ।
ಶಿರವು ತಿರುಗಿ ಒರಗಿದನು ಮೈಮರೆದು ರಥದಲಿ ॥
ಭರದಿ ಸೂತ ರಥವ ಪಿಂತೆ ತಿರುಗಿಸುತ ಬರೆ ।
ಪರಿಯ ಕಾಣುತಾಗ ಮಗನ ಜರೆದ ಶ್ರೀಹರಿ ॥೧೦೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಭಳಿರೆ ಭಾಷೆಯನಾಡಿ ದೈತ್ಯನ । ಕಲಹಕಂಗಯ್ಸುತಲಿ ದೇಹವ ।
ನುಳುಹಿ ಕೊಂಡೆಯ ಜುಣುಗಿ ಸಾಕಿ । ನ್ನಿಳೆಯೊಳೀಗ ॥೧೦೪॥

ದ್ವಾರಕೆಯೊಳಿಂತಬಲೆಯರ್ಗೆ ನೀ । ಮೋರೆಯನು ತೋರುವೆಯೊ ಕಾನನ ।
ಸೇರಿದರೆಯಾ ಋಷಿಗಳಾಶ್ರಮ । ಸೇರಗೊಡರು ॥೧೦೫॥

ನಿಂದಿಗನುಯೆಂದೆನುತ ಕೂಡರು । ಮುಂದೆಗತಿ ನಿನಗಾರು ಬಾಣಸಂ ।
ಬಂಧಿಗನುಯೆನುತೆಯ್ದೆ ಕೊಲಲಿಹ । ನಿಂದುಧರನು ॥೧೦೬॥

ಎಡೆಗೊಡರು ಇನ್ನೇನ ಮಾಡುವೆ । ಸುಡು ಪರಾಕ್ರಮವೆನುತ ಹರಿ ತ ।
ನ್ನೆಡದ ಕಾಲಿಂದೊದ್ದ ಜರೆವುತ । ನುಡಿದ ಮಗನ ॥೧೦೭॥

ಮತ್ತೆ ಸಾತ್ಯಕಿ ಸಾಂಬ ಗದ ಬಲ । ನತ್ಯಧಿಕ ಭೀಮಾರ್ಜುನರ ಪುರು ।
ಷೋತ್ತಮನು ತಾ ಕೂಡಿ ಕದನಕೆ । ನುತ್ತ ನಡೆದ ॥೧೦೮॥

**ವಾರ್ಧಕ**
ದರ್ಪದಿಂ ಕುದುರೆಯಂ ಕೊಂಡು ಬಹೆನೆಂದು ಕಂ ।
ದರ್ಪನೊಂದೆಸೆಯೊಳುರವಣಿಸಿದಂ ಕೂಡೆ ನಡೆ ।
ದರ್ಪರ ಬಲಕೆ ಸಾಂಬ ಕೃತವರ್ಮನನಿರುದ್ಧ ಪ್ರಮುಖ ಸಾತ್ಯಕಿ ವೀರರು ॥
ಸರ್ಪವೈರಿಧ್ವಜರ ರಥಮೈದೆ ಕಂಡು ಸೇ ।

ನರ್ಪಲವ ನಡುಗಿದುದು ಚಿತ್ರದಿಂ ದೈತ್ಯರ ಪೆ ।
ಸರ್ಪರೆಯದಂತೆ ಮಾಡುವ ಕೃಷ್ಣನಿವನೆಂದು ಅರಿತಾಗಲನುಸಾಲ್ವನು ॥೧೦೯॥

**ರಾಗ ಭೈರವಿ ಏಕತಾಳ**

ವ್ಯಗ್ರದಿ ಬಹ ಕೃಷ್ಣನನು । ಖಳ । ನುಗ್ರ ರೋಷದಿ ನುಡಿಸಿದನು ॥
ಅಗ್ರಜರ ಕೊಂದೆ ಮುನ್ನ । ನಾ । ನಿಗ್ರಹಿಸದೆ ಬಿಡೆ ನಿನ್ನ ॥೧೧೦॥

ಮದದೊಳಾಡದಿರು ಕೇಳಸುರ । ನಿ । ನ್ನುದರವ ಬಗಿವೆ ನೋಡ್ ಕರುಳ ॥
ಕುದುರೆಯ ಬಿಡುಧರ್ಮಜನ । ಮಖ । ಕೊದಗಿದರುಳುಹುವೆ ನಿನ್ನ ॥೧೧೧॥

ವ್ಯರ್ಥ ಗೋವಳ ನೀ ಹೆಂಗಸಿನ । ಎತ್ತು । ಕತ್ತೆ ಕುದುರೆ ಆ ಫಣಿಪನ ॥
ಮೃತ್ಯುಗಾಣಿಸಿದಹಂ ಕೃತದಿ । ಎನ । ಗುತ್ತರವೀವೆಯ ಧುರದಿ ॥೧೧೨॥

ಬಿಡು ವೈರವನೆನ್ನೊಡನೆ । ನೀ । ಕೆಡಬೇಡೆಲೊ ರಕ್ಕಸನೆ ॥
ದೃಢಮನ ಜಯಿಸಲಿಕಿರಲು । ಧನು । ವಿಡಿದಿದಿರಾಗಿ ನಿಲ್ಲೆನಲು ॥೧೧೩॥

ದುರುಳನು ರೋಷದೊಳಾಗ । ಬಿಡ । ದುರವಣಿಸುತಲಿ ಶರೌಘ ।
ಸುರಿಸಲು ಹರಿ ಕಂಡದನು । ಕ । ತ್ತರಿಸಿ ಬಿಟ್ಟನು ಶಸ್ತ್ರವನು ॥೧೧೪॥

ಭರದೊಳಸುರ ಮದದಿಂದ । ಹರಿ । ಯುರಕೆಸೆಯಲು ಸರಳೊಂದ ॥
ಕರುಣಾಕರ ಕೌಳಿಕದಿ । ಮೈ । ಮರೆದೊರಗಿದನಾ ರಥದಿ ॥೧೧೫॥

**ಕಂದ**

ದನುಜನ ಶರಹತಿಯಿಂದಲೆ ।
ದನುಜಾರಿಯು ಮೈಮರೆದೊರಗಿರಲಾಸಮಯಂ ॥
ವನಿತಾಮಣಿ ಭಾಮೆಯು ತಾ ।
ರಣರಂಗದೊಳೈತಂದೆಂದಳ್ ಕೃಷ್ಣನೊಳಂ ॥೧೧೬॥

**ರಾಗ ನೀಲಾಂಬರಿ ಏಕತಾಳ**

ರಮಣ ಏನಿದು ಕಾಂತ ಯಾತಕೊ ಇಂಥ ।
ಭ್ರಮಣೆ ಹೊಂದಿಹುದ್ಯಾಕೆ ಕೇಶವ ಪರಾಕೆ ॥೧೧೭॥

ಮಗನ ಜರೆದು ನೀನು ಕದನಕೆ ಪೋಗಿ ।
ಬದುಕಿ ಬಂದುದು ಸಾಕು । ಖಳನೊಳು ಸಾಗಿ ॥೧೧೮॥
ಕುದುರೆಯ ಬಿಡಿಸಿ ನೀವ್ ತಂದುದೆ ಸಾಕು ।
ಸುದತಿಯರೆಲ್ಲರು ನಗುವರ್ ಪರಾಕು ॥೧೧೯॥

**ಭಾಮಿನಿ**

ಹರಿಯು ಮೂರ್ಛಿತನಾಗೆ ಕಾಣುತ ।
ವರ ಮಹಾ ಯಾದವರು ರೋಷದೊ ।
ಳುರಿಯ ಮಸಗುತ ಭೀಮಪಾರ್ಥರು ಗರ್ವದಿಂ ಧುರಕೆ ॥
ಶರ ಶರಾಸನಗೊಂಡು ರಥಕ್ಕೈ ।
ತರುತ ಮುಂಮಾಡಲ್ಕೆ ಹೇಳಲು ।
ಹರಿಗನಿತರೊಳು ಕರ್ಣಸುತ ಬಿನ್ನೈಸಿದನು ಮುದದಿ ॥೧೨೦॥

**ರಾಗ ಕೇದಾರಗೌಳ ಅಷ್ಟತಾಳ**

ಸರಸಿಜಾಕ್ಷನ ಪಾದಕೆರಗಿ ಕರ್ಣಜನೆಂದ । ಧುರಕೆನಗಪ್ಪಣೆಯ ॥
ಕರುಣಿಸಬೇಕು ಆ ದೈತ್ಯನ ಗರ್ವವ । ಮುರಿವೆ ಕೇಳ್ ದಿಟವು ಜೀಯ ॥೧೨೧॥

ಬಿಡು ಎನ್ನನೀಗ ಯುದ್ಧಕೆಯನುಸಾಲ್ವನ । ಹೆಡಗೈಯ ಬಿಗಿದು ತಂದು ॥
ತಡೆಯದೆ ದೇವ ನಿಮ್ಮಡಿಗೊಪ್ಪಿಸದಿರೆನ್ನ । ಕಡುದ್ರೋಹಿಯೆನ್ನಿರೀಗ ॥೧೨೨॥

ವಪ್ರಹತ್ಯವನು ಮಾಡಿದ ದೋಷ ನುಡಿಗೆ ನಾ । ತಪ್ಪಿದರೆನೆ ಕೇಳುತ ॥
ಸರ್ಪಶಯನನೆದ್ದು ಬಾರೆನ್ನ ಮಗುವೆಯೆಂ । ದಪ್ಪಿಕೊಂಡನು ನಗುತ ॥೧೨೩॥

ಧಡಿಗನ ಧುರದೊಳು ಜಯಿಸು ಪೋಗೆನುತ ಮೈ । ದಡವಿ ವೃಷಧ್ವಜನ ॥
ಕಡು ಕೃಪೆಯಲಿ ವೀಳ್ಯವಿತ್ತು ಶ್ರೀಹರಿಯು ಬೀ । ಳ್ಕೊಡಲು ಹರಸಿ ವೀರನ ॥೧೨೪॥

ಘನರಥವೇರಿ ಬಂದಾಕ್ಷಣ ವೃಷಕೇತು । ಅನುಸಾಲ್ವಗಿದಿರಾಗುತ ॥
ಬಣಗು ರಕ್ಕಸನೆ ಸೈರಿಸಿಕೊಳ್ಳೆನುತ್ತ ಕೂ । ರ್ಗಣೆಗಳ ಸುರಿದ ಮತ್ತೆ ॥೧೨೫॥

**೩**

**ರಾಗ ಭೈರವಿ ಝಂಪೆತಾಳ**

ದನುಜನು ರೋಷಾತುರದಿ । ಬಲು । ಕಣೆಗಳ ಸುರಿದನು ಭರದಿ ।
ಇನ ತನುಜನ ಸುತ ಮುಳಿದು । ಕಡಿ । ದನು ಖಳನಾಗಲೆ ತಿಳಿದು ॥೧೨೬॥

ಮೊನೆಗಾಣಿಸಿ ಶರಗಳನು । ಕಂ । ಡಿನಸುತಸುತನುಸಿರಿದನು ॥
ರಣದಲಿ ಕೇಳ್ ಖಳ ನಿನ್ನ । ಈ । ಕ್ಷಣ ಸೆರೆಪಿಡಿಯುವೆ ಮುನ್ನ ॥೧೨೭॥

ಘನತರ ಮೇಘಾಸ್ತ್ರವನು । ಎ । ಚ್ಚನು ದಾನವನ ವಕ್ಷವನು ॥
ಮೊನೆಗೊಂಡವು ಬೆನ್ನಿನಲಿ । ಧೊ । ಪ್ಪನೆ ಮಲಗಿದನು ರಥದಲಿ ॥೧೨೮॥

ದನುಜನ ಕರಯುಗವನ್ನು । ಕ । ಟ್ಟೆಳೆತಂದನು ಕರ್ಣಜನು ॥
ಮನಮುಟ್ಟಿ ವೃಷಧ್ವಜನ । ಪೊಗ । ಳ್ದನು ದಾನವಕುಲಮಥನ ॥೧೨೯॥

ಅಷ್ಟರೊಳಗೆ ಮೀನಾಂಕ । ನಿಜ । ಗುಟ್ಟನುಳುಹೆ ನಿಶ್ಯಂಕ ॥
ಕುಟ್ಟಿದನುಳಿದ ಖಳರನು । ತಾ । ಕಟ್ಟಿ ತಂದ ತುರಗವನು ॥೧೩೦॥

ಕೊಟ್ಟಾ ಭಾಷೆಯ ಸಲಿಸೆ । ಶ್ರೀ । ಕೃಷ್ಣನ ಮನವನ್ನೊಲಿಸೆ ।
ತಟ್ಟಿತು ಹರಿಯ ಸ್ಮರಣೆಯು । ಖಳ । ನಟ್ಟಹಾಸಗಳಡಗಿದವು ॥೧೩೧॥

ಕಂದೆರೆದನು ದಾನವನು । ಹರಿ । ಗೊಂದನೆಯನು ಮಾಡಿದನು ॥
ಬಂದುದು ನಿರ್ಮಲ ಮತಿಯ । ಗೋ । ವಿಂದಗೊಪ್ಪಿಸಿದನು ಸ್ಥಿತಿಯ ॥೧೩೨॥

ಇಂದಿರೆಯರಸನ್ನಿಂದ । ಅ । ಯ್ತಂದಪ ಕೃತಿ ಕ್ಷಮಿಸೆಂದ ॥
ಎಂದಡಗೆಡಹಿದ ತನುವ । ಮು । ಕುಂದನೊಳಿಟ್ಟನು ಮನವ ॥೧೩೩॥

**ಭಾಮಿನಿ**
ದನುಜಪತಿ ಕೇಳಿನ್ನು ನೀನಿಂ ।
ದಿನ ಮೊದಲು ದ್ವಿಜದೇವಕುಲಹಗೆ ।
ಯನು ಬಿಡುವುದೆಮ್ಮೀ ಯುಧಿಷ್ಠಿರನೆಸಗುತಿಹ ಮಖಕೆ ॥
ಮನಸಹಾಯವ ಮಾಡಿಕೊಂಡೆ ।
ನ್ನನವರತ ಧ್ಯಾನಿಸುತ ನಿಶ್ಚಲ ।
ನೆನಿಸೆನುತ ಸಂತಯಿಸಿ ಗಜಪುರಕಾಗಿ ನಡೆತಂದ ॥೧೩೪॥

**ರಾಗ ಸುರುಟಿ ಏಕತಾಳ**
ಬಂದನು ಭಾಗ್ಯನಿಧಿ । ಗಜಪುರ । ಕಂದತಿ ವೈಭವದಿ ॥
ವೃಂದಾರಕರು । ದುಂದುಭಿ ಮೊಳಗಿಸಿ ।
ಚಂದದಿ ಪೂಮಳೆ । ಯಂದು ಸುರಿವುತಿರೆ ॥ ಬಂದನು ಭಾಗ್ಯನಿಧಿ ॥೧೩೫॥

ಕೇರಿಕೇರಿಯ ಸ್ತ್ರೀಯರು । ನೋಡುತ । ಆರತಿ ಎತ್ತಿದರು ॥
ಮಾರಜನಕನನ್ನು । ಧಾರಿಣಿಪತಿ ತನ್ನ ।
ಚಾರು ಮಂದಿರಕುಪ । ಚಾರದಿಂದೊಯ್ದನು ॥ ಬಂದನು ಭಾಗ್ಯನಿಧಿ ॥೧೩೬॥

ಶ್ರೀರಮಣನ ಮುದದಿ । ಸಕಲ ಸ । ತ್ಕಾರದ ಸಂಭ್ರಮದಿ ॥
ರಾರಾಜಿಪ ಮಂ । ಟಪದಿ ಕುಳ್ಳಿರಿಸಿ ಪ ।
ದಾರವಿಂದಗಳ । ಪೂಜಿಸಿ ನಮಿಸಿದ ॥ ಬಂದನು ಭಾಗ್ಯನಿಧಿ ॥೧೩೭॥

**ವಾರ್ಧಕ**

ಧರಣಿಪತಿ ಕೇಳಾಗ ಕೃಷ್ಣ ವೇದವ್ಯಾಸ ।
ವರಪುರೋಹಿತ ಧೌಮ್ಯ ವಾಸಿಷ್ಠ ಮುಖ್ಯ ಮುನಿ ।
ವರರನುಜ್ಞೆಯ ಕೊಂಡು ವಿಧ್ಯುಕ್ತದಿಂದಲಧ್ವರಶಾಲೆಯಂ ರಚಿಸುತ ॥
ಮೆರೆವ ಶಾಸ್ತ್ರೋಕ್ತದಿಂ ಮಖದೀಕ್ಷೆಯಂ ಕೊಂಡು ।
ಅರಸನತಿ ಸಂಭ್ರಮದಿ ಚೈತ್ರಸಿತಪೌರ್ಣಮಿಯೊ ।
ಉರುವ ವಾಜಿಯನು ಸಿಂಗರಿಸುತ್ತ ಬಿಡಲಿಕುದ್ಯೋಗಿಸಿದನತಿ ಮೋದದಿ ॥೧೩೮॥

**ರಾಗ ಶಂಕರಾಭರಣ ತ್ರಿವುಡೆತಾಳ**

ಮಖದ ಹಯವನು ತಂದು ಗಂಧೋ । ದಕದಿ ಮೀಯಿಸಿ ವಜ್ರದ ॥
ಮುಕುರಮೊಗರಂಬವನು ಇಟ್ಟರು । ಯುಕುತವಾಗಿ ॥೧೩೯॥

ನವರತುನ ಮಣಿಖಚಿತ ಪಾವಡ । ವವಚಿ ಬಿಗಿದರು ಬೆನ್ನಿಗೆ ॥
ವಿವಿಧ ಮಾಣಿಕ್ಯದ ಸರಗಳನು । ಸವನಿಸಿದರು ॥೧೪೦॥

ಮೇಲು ದಿವ್ಯಾಂಬರವ ಹೊಂದಿಸಿ । ಜಾಲಿಬಿಡುತಲಿ ಮುತ್ತಿನ ॥
ಜಾಲಿಗಳು ಹೊಂಗೆಜ್ಜೆ ಮಣಿಸರ । ಮಾಲೆ ಪೊಳೆಯೆ ॥೧೪೧॥

ಕೊರಳ ಸರಪಣಿ ಪದಕ ತಾಳೀ । ಸರಗಳಿಟ್ಟರು ರಾಜಿಪ ॥
ಹಿರಿಯ ಮುತ್ತಿನ ಹಾರಗಳು ಸಿಂ । ಗರದೊಳೆಸೆಯೆ ॥೧೪೨॥

ಕಾಲಸರಪಣಿ ಕಡಗಗಳನನು । ಕೂಲವಾಗಿಯೆ ಇಡುತಲಿ ॥
ಮೇಲುಪೆಂಡೆಯೊಳೆಸೆಯೆ ಸಿಂಗರ । ಮೇಳವಿಸಿತು ॥೧೪೩॥

**ವಚನ ॥** ಈ ರೀತಿಯಿಂದ ಮಖಾಶ್ವಮಂ ಶೃಂಗಾರಗೆಯ್ದು ಧರ್ಮರಾಯನು ಶ್ರೀಕೃಷ್ಣನ ಚರಣಂಗಳಿಗೆ ನಮಸ್ಕರಿಸಿ ಬಿನ್ನವಿಸುತಿರ್ದನದೆಂತೆನೆ -

**ರಾಗ ಕೇದಾರಗೌಳ ಅಷ್ಟತಾಳ**

ಸುರವರಾರ್ಚಿತ ಕೇಳು ತುರಗರಕ್ಷಾರ್ಥಕ್ಕೆ । ಧುರಧೀರರನು ಬೆಸಸಿ ।
ತೆರಳಿಸು ದೇವ ತಡೆಯಲೇಕೆನುತ ಭೂಪ । ಹರಿಗೆ ಪೇಳ್ದನು ಬಿನ್ನಯಿಸಿ ॥೧೪೪॥

ನರನಲ್ಲದಾರು ಸಂಗರಧೀರರೊಳಗಿನ್ನು । ಪೊರಡಲಾತನೆ ಬೇಗದಿ ॥
ಮೆರೆವ ಸೇನಾಧಿಪತ್ಯವ ಪ್ರದ್ಯುಮ್ನನು ಅಂಗೀ । ಕರಿಸಲೆಂದನು ದಯದಿ ॥೧೪೫॥

ವೃಷಕೇತು ಯೌವನಾಶ್ವನನುಸಾಲ್ವ ಸಾಹಸ । ದ ಸುವೇಗನನಿಬರು ಬೇಗ ॥
ಸಸಿನದಿ ಸಾತ್ಯಕಿ ಕೃತವರ್ಮನನಿರುದ್ಧ । ರೊಸೆದೆಲ್ಲ ಪೊರಡಲೀಗ ॥೧೪೬॥

ಎಸೆವ ಸಕಲ ಸೈನ್ಯದೊಡನೆ ನಮ್ಮಯ ಯದು । ಪ್ರಸರ ಸಹಿತ ಕೂಡುತ ॥
ಕುಶಲದಿ ಪೊರಡಲಿ ಪರಮೋತ್ಸವದೊಳಗೆಂ । ದಸುರಾರಿ ನೇಮಿಸಿದ ॥೧೪೭॥

ಹರಿನಿರೂಪವ ಕೇಳ್ದು ಹರುಷದಿ ಪಾರ್ಥನಿ । ಗರಸ ನೇಮವ ಕೊಡಲು ॥
ಪೊರಟನು ಪರಮ ಸಂಭ್ರಮದೊಳಗೆಲ್ಲರ । ಕರೆಸಿಕೊಳುತಲಾಗಲು ॥೧೪೮॥

ಮೆರೆವ ನವಗ್ರಹಾರ್ಚನೆಯ ಗೈವುತ ಸುರ । ವರರನೆಲ್ಲರ ಪ್ರಾರ್ಥಿಸಿ ॥
ಹರಿಯೊಳಪ್ಪಣೆಗೊಂಡು ಅಣ್ಣಗೊಂದನೆಗೈದು । ಪೊರಮಟ್ಟನುರೆ ಸಹಸಿ ॥೧೪೯॥

**ಭಾಮಿನಿ**

ಇಂತು ವಿಭವದಿ ಪೊರಡುತಿರಲ ।
ತ್ಯಂತ ಶೌರ್ಯಾನ್ವಿತ ಧನಂಜಯ ।
ಕಂತು ಮುಖ್ಯಾದವರ ವೀರರ ಕಾಂತೆಯರು ಮುದದಿ ॥
ಸಂತಸದಿ ದ್ರುಪದಜೆ ಸುಭದ್ರೆ ಸೀ ।
ಮಂತಿನಿಗಳಾರತಿಗಳಕ್ಷತೆ ।
ಯಂ ತಳಿದು ಹರಸಿದರು ತಾವ್ ತಂತಮ್ಮ ವಲ್ಲಭರ ॥೧೫೦॥

**ರಾಗ ಸೌರಾಷ್ಟ್ರ ಏಕತಾಳ**

ಜಯ ಜಯ ಜಯ ದಿಗ್ವಿ । ಜಯವಾಗಲಿಯೆಂದು ।
ಜಯ ಜಯವೆಂದು ವಿಜಯಗೆ ಹರಸಿದರು ॥ ಜಯ ಜಯ ॥ ಪ ॥

ಸರ್ವಕಾರ್ಯಸಂಗ್ರಹ । ನಿರ್ವಿಘ್ನವಾಗಲಿ ಮುದದಿ ।
ಉರ್ವಿಯೊಳಗೆ ಭುಜಬಲ ಶೌರ್ಯದಿ ॥
ಗರ್ವದ ರಿಪುಗಳ ಮುರಿವ ಸಹಸವಾಗಲಿಯೆಂದು ।
ಮೇರ್ವೆಯಾರತಿಗಳನೆತ್ತಿದರು ॥೧೫೧॥

ಸಂತತ ಸಕಲ ಭೂಕಾಂತರೆಲ್ಲ ಪಾದಾ ।
ಕ್ರಾಂತರಾಗುವ ನಿಮ್ಮ ಮರೆಯೊಗಲಿ ॥
ಪಂಥ ಪಾಡು ಪೌರುಷ ಮೆರೆಯಲಿದೆಯೆಂದು ।
ಕಾಂತೆಯರಾರತಿಯೆತ್ತಿದರು ॥ ॥೧೫೨॥

ಪೊರಟ ತುರಗ ವೃಂದ ಬಲಸಹಿತ ।
ವರುಷದೊಳಗೆ ತಿರುಗುತ ಬರಲಿ ॥
ಹರುಷ ಹೆಚ್ಚಲಿ ಅನುದಿನ ನಿಮಗೆನುತಲಿ ।
ಅರಸಿಯರಾರತಿಯೆತ್ತಿದರು ॥೧೫೩॥

**ವಾರ್ಧಕ**

ಮೆರೆವ ದಧಿ ದೂರ್ವಾಂಕುರಾಕ್ಷತೆಗಳಿಂದಲಾ ।
ಅರಸಿಯರ್ ತಂತಮ್ಮ ಪತಿಗಳಂ ಪರಸುತ್ತ ।
ನೆರೆದು ಬೀಳ್ಗೊಡುತಿರಲ್ ಧರ್ಮಜನ ಬಿರುದುಗಳ ಬರೆದು ಕನಕದ ಪಟ್ಟೆಯ ॥
ಹರುಷದಿಂ ಹಯದ ಫಣೆಯಲಿ ಕಟ್ಟಿ ಗಂಧ ಕ ।
ಸ್ತುರಿಯಕ್ಷತೆಗಳಿಂದ ಪರಿಪರಿಯ ಪೂಗಳಿಂ ।
ತುರಗಮಂ ಪೂಜೆಗೈವುತ್ತ ಬಿಟ್ಟರು ಶುಭಮುಹೂರ್ತದೊಳ್ ಸೇನೆ ಸಹಿತ ॥೧೫೪॥

ಎಡೆಬಿಡದೆ ನಡೆಗೊಂಬ ಆನೆಗಳ ಸೇನೆಗಳ ।
ನಡನಡುವೆ ಪಿಡಿದೆಳೆವ ಠಕ್ಕೆಗಳ ಪಕ್ಕೆಗಳ
ಲೊಡನೊಡನೆ ಅಡಿಯಿಡುವ ವಾಜಿಗಳ ತೇಜಿಗಳ ಕಡುಹುಗಳ ತೊಡವುಗಳಿಗೆ ॥
ಅಡಿಗಡಿಗೆ ಬಿಡದೊದರ್ವ ಭೇರಿಗಳ ಭಾರಿಗಳ ।
ಗಡಗಡನೆ ಚೀತ್ಕರಿಪ ತೇರುಗಳ ವಾರುಗಳ ।
ಎಡೆಯೆಡೆಗೆ ಪಿಡಿದೆಸೆವ ಛತ್ರಗಳ ಚಿತ್ರಗಳ ಕಡುಪಿಂದ ಪಡೆ ನಡೆದುದು ॥೧೫೫॥

ಗಿಡಿಬಿಡಿನೆ ಪೆಸರುಡುಕು ವಾದ್ಯಗಳ ಚೋದ್ಯಗಳ ।
ಗುಡುಗುಡಿಪ ದುಂದುಭಿಯ ಘೋಷಗಳತೋಷಗಳ ।
ಕಡುಸ್ವರದಿ ಪೊಗಳುತಿಹ ವಂದಿಗಳ ಮಂದಿಗಳ ಸಂದಣಿಯ ಗೊಂದಣಗಳ ॥
ಬಿಡಬಿಡದೆ ನೋಳ್ಪ ಜನರಂದಗಳ ಚಂದಗಳ ।
ನುಡಿ ನುಡಿಗೆ ಪಾಂಡವರ ಕೀರ್ತಿಗಳ ವಾರ್ತೆಗಳ ।
ಪಡಿಯಿಡುವದರಿದೆಂಬ ಭಾಗ್ಯಗಳ ಭೋಗ್ಯಗಳ ಸಡಗರದಿ ನಡೆದರಾಗ ॥೧೫೬॥

**ರಾಗ ಭೈರವಿ ಆದಿತಾಳ**

ಲಾಲಿಸಾಗ । ಭೂಪತಿ । ಲಾಲಿಸಾಗ ॥ ಪ ॥

ಶ್ರೀಲಲಾಮನ ಕರುಣದಿಂ ಭೂ । ಪಾಲ ಹಯಮೇಧವನು ರಚಿಸಲು ॥ ಅ.ಪ ॥

ತುರಗ ನಡೆದುದು ತೆಂಕಮುಖವಾ । ಗಿರಲು ಕಾಪಿನ ಜನರು ಸಹಿತಲಿ ।
ತೆರಳಿತಾಗಲು ಪಿಂತೆ ಸೈನಿಕ । ಶರಧಿಘೋಷದಿ ಪೊರಡಿಸಿರ್ದುದು ।
ತರಣಿಸುತಸುತ ಕಾಮ ಸಕಲ ಭೂ । ವರರ ಮೇಳದಿ ಪಾರ್ಥ ತನ್ನಯ ।
ಮೆರೆವ ರಥವೇರಿದನು ಪೊಗಳುವ । ಪರಿಪರಿಯ ಪಾಠಕರ ಮೇಳದಿ ।
ಪೊರಟನಾಗ । ವಿಜಯನು । ಪೊರಟನಾಗ ॥೧೫೭॥

ಸೂಳವಿಸಿತುಗ್ಗಡಿಪ ಬಲು ನಿ । ಸ್ಸಾಳ ಕಹಳಾರವದಿ ಪಾಠಕ ।
ರೇಳಿಗೆಯ ಸುಸ್ವರದಿ ಹರುಷವ । ತಾಳಿ ನರನೈತರುತಿರಲು ವೈ ।
ಶಾಲ ಮಾಹೀಷ್ಮತಿಯ ಪುರಪತಿ । ನೀಲಕೇತುವೆನಿಪ್ಪ ಪೆಸರ ಭೂ ।

ಪಾಲನಲ್ಲಿಗೆ ಪೊರಡುತಿಹ ಹಯ । ಮೇಲುಬಲ ಸಹಿತೊಲಿದು ವಹಿಲದಿ ।
ಬಿಡದೆ ಹಯವ । ಕಟ್ಟಿದ । ಬಿಡದೆ ಹಯವ ॥೧೫೮॥

ಮರುತಸಖ ಮನೆಯಳಿಯನೆನಿಸುತ । ಅರಸನಲ್ಲಿಹ ಮೂಲ ಬಲದಿಂ ।
ತುರಗವನು ಕಟ್ಟಲ್ಕೆ ವೈಶ್ವಾ । ನರನು ಪಾರ್ಥವ ಬಲವ ಸುಡುತಿರ ।
ಲಿರಲು ಪ್ರಾರ್ಥಿಸಲಾಗ ತೊಲಗುತ । ಕರೆದು ಮಾವಗೆ ಪೇಳ್ದ ನಮ್ಮೀ ।
ನರನು ಕಾಣಿಸಿಕೊಳುಯೆನು ಭೂ । ವರನು ಕುದುರೆಯ ಕೊಟ್ಟು ಕೂಡಿಯೆ ।
ಪೊರಟನಾಗ । ನೀಲ । ಧ್ವಜನು ಬೇಗ ॥೧೫೯॥

**ವಾರ್ಧಕ**

ಇತ್ತಲರ್ಜುನನು ನೀಲಧ್ವಜನನೊಡಗೊಂಡು ।
ಉತ್ತಮಾಧ್ವರವಾಜಿ ಸಹಿತ ಬರೆ ವಿಂಧ್ಯಾದ್ರಿ ।
ಒತ್ತಿಲಿಹ ಆ ಚಂಡಿ ಶಿಲೆಯಾಗಿರಲ್ಕಂಡು ಪೊರೆವೆನೆಂದೆನುತಡರಲು ॥
ಕೆತ್ತುದಾ ಹಯದ ಕಾಲ್ಗಳು ಕೀಳಲರಿದಾಯ್ತು ।
ಮತ್ತೆ ಸೌಭರಿಯ ನುಡಿ ಕೇಳಿದಾಕ್ಷಣದಿ ಪುರು ।
ಷೋತ್ತಮನ ನೆನೆಯಲಾ ಹಯಮಿಳಿಯೆ ಶಿಲೆಯನುಂ ಉದ್ಧರಿಸಿ ಬೀಳ್ಕೊಂಡನು ॥೧೬೦॥

ತುರಗ ನಡೆದುದು ತೆಂಕಮುಖವಾಗಿ ಚಂಪಕಾ ।
ಪುರಕಖಿಳಸೇನೆ ಸಹಿತರ್ಜುನಂ ವಹಿಲದಿಂ ।
ಬರುತಲಾ ಪಟ್ಟಣದ ಬಾಹ್ಯಪ್ರದೇಶದೊಳ್ ಪಾಳೆಯವ ಬಿಡಿಸಿರಲ್ಕೆ ॥
ಕರಮಸೆದುದಾ ದುರ್ಗಮೇನೆಂಬೆನಾ ನಗರ ।
ಸಿರಿಯುಡುಗೆಯುಟ್ಟ ಶ್ವೇತಾಂಬರವೊ ಭೂದೇವಿ ।
ಕೊರಳಮೌಕ್ತಿಕಹಾರವೋಯೆನಲ್ ಕೋಟೆ ಕಣ್ಗೆಸೆದುದತಿ ಸಂಭ್ರಮದೊಳು ॥೧೬೧॥

[ಕೇಳು ಜನಮೇಜಯನೆ ಮುರಹರನ ಬೀಳ್ಗೊಂಡು ।
ಏಳಕ್ಷೌಹಿಣಿ ಬಲವನೊಡಗೊಂಡು ಫಲುಗುಣಂ ।
ಘೀಳಿಡುತ ಕಪಿಯಬ್ಬರಣೆಯಿಂದ ರಥವೇರಿ ಧನುವಿಡಿದು ಝೇಗೈಯುತ ॥
ಆಳುತನವುಬ್ಬೇರಿ ಸಾಲ್ವ ಸಾತ್ಯಕಿ ಸಾಂಬ ।
ಮೇಳವಿಸೆ ವೃಷಕೇತು ಯೌವನಾಶ್ವ ಕೃತವರ್ಮ ।
ಕಾಳಗಕೆ ರಥವೇರಿ ಪೊರಟರ್ರೈ ಪ್ರದ್ಯುಮ್ನನನಿರುದ್ಧರಾ ಸಮರಕೆ] ॥೧೬೨॥

**ರಾಗ ಕಾಂಭೋಜಿ ಝಂಪೆತಾಳ**

[ಕಾಲಪಾಳಯದಂತೆ ಕಮಠನೆದೆ ಬಿರಿವಂತೆ ।
ಮೂಲಬಲ ಮಖದ ಹಯಸಹಿತ ॥
ಮೂರುಲೋಕದ ಗಂಡ ನರ ತೆಂಕುಮುಖವಾಗಿ ।
ಸಾರೆ ನೀಲಧ್ವಜನ ಪುರಕೆ ॥೧೬೩॥

ಕಟ್ಟಿ ಕುದುರೆಯ ಕಾದಿ ಜಯವ ಕಾಣದೆ ಕಪ್ಪ ।
ಗೊಟ್ಟು ನೀಲಧ್ವಜನು ಇರಲು ॥
ದಿಟ್ಟೆಯಾತನ ಕಾಂತೆಯಿಂದ ಸುರನದಿಶಾಪ ।
ತಟ್ಟಿತರ್ಜುನಗೆ ಬೆಂಬಿಡದೆ ॥೧೬೪॥

ರಕ್ಕಸಾರಿಯ ನೆನೆದು ವಿಜಯ ನೀಲಧ್ವಜನ ।
ಪಕ್ಷದೊಡಗೂಡಿ ಬಲಸಹಿತ ॥
ದೀಕ್ಷೆ ತುರಗವು ಬೆಂಬಳಿಯ ಮಾರ್ಬಲವ ಕೂಡಿ ।
ದಕ್ಷಿಣದ ಮುಖವಾಗಿ ನಡೆದ ॥೧೬೫॥

ಪುಂಡರಿಕವದನೆ ಪುರುಷನ ಶಾಪ ಸರಿವುದಕೆ ।
ಪಾಂಡವರ ಮಖದ ಹಯವಿಡಿದು ॥
ಕಂಡು ಸಿತವಾಹನನು ಮುನಿಯಾಜ್ಞೆಯಿಂದಲಾ ।
ಚಂಡಿಯನು ಬಿಡಿಸಿ ಬೀಳ್ಗೊಡಲು ॥೧೬೬॥

ಕಾಮಿನಿಯನುದ್ಧರಿಸಿ ಬಲ ಸಹಿತ ನಡೆತಂದು ।
ಆ ಮರಾಳಧ್ವಜನ ಪುರಕೆ ॥
ಭೀಮನನುಜನು ಪಾಳ್ಯ ಹೊರಬಾಹೆಯಲಿ ನಿಲಿಸಿ ।
ಶ್ಯಾಮಕೇತನನ ಬೆಸಗೊಂಡ] ॥೧೬೭॥

ನೋಡಿ ಫಲುಗುಣನೀಲಕೇತನೊಡನೆಂದನೀ ।
ರೂಢಿಗಧಿಪತಿಯಾದರೆಂದು ॥ ಪ ॥

ಹಯವ ತಡೆದೆಮ್ಮೊಡನೆ ಬವರಗೈಯುವನೆ ಪೇಳ್ ।
ಅವನೀಶನೆಂದೆನಲವನು ॥
ದಿವಿಜೇಂದ್ರ ಜಾತನೊಳು ನಯದಿ ಪೇಳಿದನಂದು ।
ಭುವಿಯಾಣ್ಮನಾ ಚರಿತೆಗಳನು ॥೧೬೮॥

**ಭಾಮಿನಿ**

ಅರಸ ಕೇಳಾ ಚಂಪಕಾಪುರ ।
ದರಸ ಹಂಸಧ್ವಜನೃಪಾಲನು ।
ಧುರವಿಜಯ ಭುಜಶೌರ್ಯ ಸಾಹಸ ಮಲ್ಲ ನಿಶ್ಯಂಕ ॥
ಪರಮ ಧಾರ್ಮಿಕ ಸತ್ಯವ್ರತ ಸ ।
ಚ್ಚರಿತ ಸದ್ವೈಷ್ಣವನು ಧರ್ಮದಿ ।
ಧರೆಯನಾಳುತಲಿರ್ದ ನಿಗಮಾಗಮವಿಚಾರದಲಿ ॥೧೬೯॥

**ರಾಗ ಸಾಂಗತ್ಯ ರೂಪಕತಾಳ**

ನರನೆ ಕೇಳೀ ರಾಜ್ಯದರಸು ಹಂಸಧ್ವಜ । ಪರಮಧಾರ್ಮಿಕ ಸತ್ಯಶೀಲ ॥
ಧುರಪರಾಕ್ರಮಿ ಹರಿಶರಣನೀತಗೆ ಬಲು । ದೊರೆಗಳು ಕಪ್ಪವೀಯುವರು ॥೧೭೦॥

ಧರಣಿಪಾಲನ ಸತಿ ಪರಮ ಪತಿವ್ರತೆ । ವರ ಸುಗರ್ಭೆಯೊಳು ಜನಿಸಿರುವ ॥
ಸುರಥ ಸುಧನ್ವ ಸುದರ್ಶನ ಸುಮರೆಂಬ । ತರಳರು ನಾಲ್ವರಾ ನೃಪಗೆ ॥೧೭೧॥

ವರ ವೇದಶಾಸ್ತ್ರಪುರಾಣಸಂಪನ್ನರು । ಧನುರ್ವಿದ್ಯೆ ಬತ್ತೀಸಾಯುಧದಿ ॥
ಧುರಧೀರರೆನಿಸಿ ರಂಜಿಸಿದರೇನೆಂಬೆ ನಾ । ಧರಣಿಪಾಲನ ಪುಣ್ಯೋದಯವ ॥೧೭೨॥

ಧನಬಲ ಚಂದ್ರಸೇನನು ಚಂದ್ರಕೇತನು । ಘನ ಚಂದ್ರದೇವ ವಿಡೂರಥ ॥
ಗುಣ ಧರ್ಮವಾಹನು ನ್ಯಾಯವರ್ತಿಗಳೆಂಬ । ಅನುಜರು ಏಳ್ವರಾ ನೃಪಗೆ ॥೧೭೩॥

ಸುಮತಿಯು ಪ್ರಮತಿಗಳೆಂಬ ಮಂತ್ರಿಗಳಾಗ । ಲಮಿತ ಸುಗುಣನೀತಿಯುತರು ॥
ಯಮಿಪುರೋಹಿತ ಶಂಖಲಿಖಿತರೆಂದೆನಿಪರ । ಸಮನಿಸೀ ಕ್ಷಿತಿಯನಾಳುವನು ॥೧೭೪॥

ನಿತ್ಯಕಾಹಿಂಗೆಪ್ಪತ್ತೊಂದು ಸಾವಿರ ರಥ । ಮತ್ತಷ್ಟೆ ಗಜಲಕ್ಷಹಯವು ॥
ಪ್ರತ್ಯೇಕದ್ವಯಲಕ್ಷದಳವೊಬ್ಬೊಬ್ಬರೊಳಿಂತೆ । ಪ್ಪತ್ತು ಮಂದಿಯು ಸೇನಾಧಿಪರು ॥೧೭೫॥

ದಿವಿಜೇಂದ್ರತನಯನಧ್ವರವಾಜಿ ಪುರಬಾಹೆ । ಗವಚಿಕೊಂಡಿರ್ದವಾರ್ತೆಯುನು ॥
ಜವದೊಳಂಜುತ ಹೊರಗಾವಲರಯ್ತಂದು । ಅವನೀಶಗೊರೆದರಾ ಕ್ಷಣದಿ ॥೧೭೬॥

**ಭಾಮಿನಿ**

ಇಂತು ಪೇಳ್ವುದ ಕೇಳ್ದು ಪಾರ್ಥನು ।
ಕಂತುಜನಕನ ಕರುಣವಿರಲಿದ ॥
ಕಿಂತು ಬೆದರುವುದೇಕೆನುತ ಪೊಗಿಸಿದನು ಕುದುರೆಯನು ॥
ಕುಂತಿಸುತನಧ್ವರದ ವಾಜಿಯ ।
ನಿಂತು ನೋಡುತ ಚರರು ತಾವ್ ಭೂ ।
ಕಾಂತನಲ್ಲಿಗೆ ಬಂದು ಬಿನ್ನವಿಸಿದರು ವಿಧವಿಧದಿ ॥೧೭೭॥

**ರಾಗ ಮುಖಾರಿ ಏಕತಾಳ**

ಮಹರಾಜ ಕೇಳ್ವುದೀ ಕಲಾಪ । ಬಹು ಚೋದಿಗ ಭೂಪ ॥
ಮಹರಾಜ ಕೇಳ್ವುದೀ ಕಲಾಪ ॥ ಪ ॥

ಆನೆಪುರದ ದೊರೆ ಪ್ರಖ್ಯಾತ । ತಾನೆ ಧರ್ಮಪ್ಪನೆಂಬಾತ ॥
ಏನನೆಂಬೆವಾ । ಭೂಪನ ಕಡೆ ಮಹ ।
ಸೇನೆ ಬಂದು ನಮ್ಮ । ತಾಣವ ಮುತ್ತಿತು ॥೧೭೮॥

ತಮ್ಮ ಅರ್ಜುನಪ್ಪನಂತೆ । ಹಮ್ಮಿನವರಿರ್ಪರು ಮುಂತೆ ॥
ಶರ್ಮೆ ನೋಳ್ಪೆವಾ । ವೊಮ್ಮೆಗೆನುತ ಬರೆ ।
ಗುಮ್ಮಿಡುತಲಿ ನಮ್ಮ । ಹಮ್ಮನಿಲಿಸಿದರು ॥೧೭೯॥

ಸಿಂಧುಘೋಷದಿಂದ ಮಂದಿ । ಬಂದಿತೊಂದು ಕುದುರೆ ಮುಂದೆ ॥
ಹಿಂದೆ ಬಡಿದು ಕಟಿ । ಸಂದ ಕಳಚುವರು ।
ಅಂದ ಕೇಳು ನಮ್ಮ । ತಂದೆ ಬೆದರದಿರು ॥೧೮೦॥

ಕದನಕಲಿಗಳ್ ಬೇರೆ ನಮ್ಮ । ಬದಲಿಗಿಟ್ಟ ಸೇನೆಯುಂಟು ॥
ಒದಗಿತೊಂದು ಮದು । ವೆಗೆ ನಾವ್ ಪೋಗುವ ।
ಮುದದೊಳಟ್ಟುವ । ರಿದಿರಿಗೆ ಆ ಬಲ ॥೧೮೧॥

ಗುಟ್ಟಿಲರಿಕೆ ಗೆಯ್ವೆ ಸೊಲ್ಲ । ದಿಟ್ಟರವರು ಕೇಳ್ ಸುಳ್ಳಲ್ಲ ॥
ಪೆಟ್ಟನಿಕ್ಕುವ ಮೊದ । ಲಲ್ಲಿಹ ನಮ್ಮ ದಳ ।
ಬಿಟ್ಟು ನೋಡುನಾವ್ । ಒಟ್ಟಿಗೆ ಪೋಗವ ॥೧೮೨॥

**ಭಾಮಿನಿ**
ಚರರ ನುಡಿಯನು ಕೇಳುತಲೆ ಭೂ ।
ವರನು ನಸುನಗುತಭಯವೀಯುತ ।
ಹರಿಯ ದರುಶನ ತನಗೆ ಇದರಿಂ ದೊರಕಿತೆಂದೆನುತ ॥
ಅರಿತು ಮನದಲಿ ಆ ಕ್ಷಣವೆ ಮುಖ ।
ತುರಗವನು ಹಿಡಿತರಿಸಿ ಫಣಿಯೊಳ ।
ಗಿರುವ ಲೇಖನ ಸಚಿವರಿಂದೋದಿಸುತ ಲಾಲಿಸಿದ ॥೧೮೩॥

೪

**ರಾಗ ಕಾಂಭೋಜಿ ಝುಂಪೆತಾಳ**
ಕಂಜಭವ ಭವ ಮುಖ್ಯ ಸುರವಂದ್ಯ ಭಕ್ತಜನ ।
ಸಂಜೀವ ಶ್ರುತಿಶಿರೋರತುನ ॥
ಮಂಜುಳಾಂಗ ಶ್ರೀಕಾಂತ ಕೃಷ್ಣ ಕರುಣಿಸು ವಜ್ರ ।
ಪಂಜರಾಂಚಿತ ಪಾಪರಹಿತ ॥೧೮೪॥

ರಾಜವಂಶಾಂಬುನಿಧಿ ರಾಜಾಧಿರಾಜ ಮಹ ।
ರಾಜನಾಗಿಹ ಯುಧಿಷ್ಠಿರನ ॥
ರಾಜಿಸುವ ಹಯಮೇಧದಶ್ವಮಿದು ಮಿಡುಕುಳ್ಳ ।
ರಾಜರಿದ ಕಟ್ಟಿ ಕಾದುವುದು ॥೧೮೫॥

ಬಲ್ಲುಳ್ಳವರು ಕಾದುವುದು ಕಾದಲಸದಳವಾ ।
ಗಿರ್ವವರು ಪಾರ್ಥನನು ಕಂಡು ॥
ಕಪ್ಪಗಳ ಕೊಟ್ಟು ಕೊಂಡೊದಗಿ ಬಹುದೆಂದೆನುತ ।
ಲಿಪ್ಪದನು ವಾಚಿಸಿದರಂದು ॥೧೮೬॥

ಇಂತು ಹಯದಾ ಫಣೆಯ ಪಟ್ಟೆಲಿಖಿತವನು ಭೂ ।
ಕಾಂತ ಹಂಸಧ್ವಜನು ಕೇಳಿ ॥
ಸಂತಸವ ತಾಳ್ದು ಸಭ್ಯಸ್ಥರಾಗಿಹ ತನ್ನ ।
ಮಂತ್ರಿಗಳಿಗೆಂದ ಮುದ ತಾಳಿ ॥೧೮೭॥

**ರಾಗ ಪಂತುವರಾಳಿ ಅಷ್ಟತಾಳ**
ಮಂತ್ರಿಗಳಿರ ಕೇಳಿರೀಗ । ಶ್ರೀ । ಕಾಂತನ ಕಾಣುವ ಯೋಗ ॥
ಬಂತು ಮುತ್ಪುಣ್ಯವನೇನೆಂಬೆ ವಹಿಲದಿ ।
ಕುಂತಿಸುತನಧ್ವರದ ಹಯ ತ । ನ್ನಂತೆ ತಾನೇ ಬಂದುದಲ್ಲಿಗೆ ॥೧೮೮॥

ಪಾಂಡುತನಯರ ಹರಿಬವ । ಕರ । ದಂಡದಳಾಕ್ಷ ಪೊತ್ತಿರುವ ॥
ಕಂಡುದಿಲ್ಲನ್ನೆಗಂ ಕೃಷ್ಣನ ಬರಿಸುವ ।
ಗಂಡುತನದ ಉಪಾಯ ಮುಂದಿಹು । ದಂಡಲೆಯದಚ್ಯುತನ ಕರೆಸುವೆ ॥೧೮೯॥

ಕುದುರೆಯ ಕಟ್ಟಿ ಕಾಹುರದಿ । ಪಾರ್ಥ । ಗಿದಿರಾಗಿ ಸೆಣಸುತಾಹವದಿ ॥
ಬೆದರದೆ ನರನ ಬಿಂಕದ ಶೌರ್ಯ ನಿಲಿಸಲು ।
ಒದಗಿ ಬಹನಾ ಯದುಕುಲೋತ್ತಮ । ನಿದಿರಿನಲಿ ತೋರುವೆನು ಸಾಹಸ ॥೧೯೦॥

ಅಳುಕದೆ ನರನ ಬೆಚ್ಚಿಸುವೆ । ಆ । ನಳಿನಲೋಚನನ ಮೆಚ್ಚಿಸುವೆ ॥
ಇಳೆಯೊಳು ಖ್ಯಾತಿಯ ತಳೆವೆನನಿತರ ಮೇಲ್ ।
ಅಳಿದರೇಂ ತನು ನೆಲೆಯಲ್ಲಚ್ಯುತ । ನೊಲುಮೆಗಳ ಪಡೆವುದೆ ಮಹಾಫಲ ॥೧೯೧॥

ಮನುಮಥನಯ್ಯನ ನೋಡಿ । ತನು । ಮನವ ಸಮರ್ಪಣೆ ಮಾಡಿ ॥
ಜನುಮ ಸಾರ್ಥಕಗೆಯ್ದು ಜನನ ಮೃತ್ಯುವ ಗೆಲ್ದು ।
ಅನುಪಮನ ಚಿದ್ಘನ ಕೈವಲ್ಯವ । ನನುಸರಿಸುತೀ ಕ್ಷಣದಿ ಪಡೆವೆನು ॥೧೯೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಯುದ್ಧ ಸನ್ನಹ ಗೆಯ್ಯುದೆನುತಲೆ । ಬುದ್ಧಿ ಪೇಳಿದ ಮಂತ್ರಿಗಳಿಗೆ ಪ್ರ ।
ಸಿದ್ಧ ಹರಿದರುಶನಕೆನುತ ಮನ । ನಿರ್ಧರಿಸಿದ ॥೧೯೩॥

ಎಲೆ ಧರಾಧಿಪ ಲಾಲಿಸಾ ನೃಪ । ಕಲಹವೇ ನಿಶ್ಚಯಿಸಿ ಕರೆಸಿದ ।
ದಳಪತಿಗಳನು ನರನ ಸನ್ನಿಧಿ । ಯಳವಿಗೆನುತ ॥೧೯೪॥

ಹೊಡೆಸಿದನು ಡಂಗುರವ ದ್ರವ್ಯವ । ಕೊಡಿಸಿದನು ಸೈನಿಕರ ತೃಪ್ತಿಯ ।
ಪಡಿಸಿದನು ಬೇಗವರ ಯುದ್ಧಕೆ । ನಡೆಯಿರೆಂದು ॥೧೯೫॥

ಮತ್ತೆ ಕೇಳ್ ನೃಪಕಾಯ್ದು ಉಕ್ಕುವ । ತಪ್ತತೈಲದ ಕೊಪ್ಪರಿಗೆಯೊಳ ।
ಗೆತ್ತಿ ಬೀಸಾಡುವುದು ರಣಕೆ ಹಿ । ನ್ನಿತ್ತ ಜನರ ॥೧೯೬॥

ನೆರೆದಿರುವ ಸಭೆಯೊಳಗೆ ತನ್ನಯ । ತರಳನನು ಕಾಣದಿರೆಯಾಕ್ಷಣ ।
ಕರೆತರಲು ಕಳುಹಿದನು ಚರರನು । ಭರದೊಳಾಗ ॥
ಕರೆಸುತಾಗ ಸುಧನ್ವನನು ಸಂ । ಗರಕೆ ತೆರಳೆನುತರುಹಿ ತಾನತಿ ।
ಭರದಿ ಪೊರಟನು ಸಕಲ ಸೈನಿಕ । ವೆರಸಿ ಮುದದಿ ॥೧೯೭॥

**ರಾಗ ಮಾರವಿ ಏಕತಾಳ**
ಆಗ ಸುಧನ್ವನು ಬೇಗದಿ ರಣಕನು । ವಾಗುತ ಮುದದಿಂದ ॥
ಬಾಗುತ ಜನನಿಗೊಂದಿಸುತಲೆ ವಿನಮಿತ । ನಾಗುತಲಿಂತೆಂದ ॥೧೯೮॥

ಜವನಾತ್ಮಜನಧ್ವರ ಹಯಮಿಲ್ಲಿಗೆ । ಹವಣಿಸಿ ಬರೆ ಪಿತನು ॥
ತವಕದಿ ಕಟ್ಟಿಸಿ ರಣಕಯ್ದಿದನಾ । ಹವಕೊದಗುವೆ ನಾನು ॥೧೯೯॥

ತುರಗರಕ್ಷಾರ್ಥಕೆ ನರನಯ್ತಂದಿಹ । ಸುರರು ಮೆಚ್ಚುವ ತೆರದಿ ॥
ಧುರದೊಳವನ ಮದ ಮುರಿವೆನು ಎನ್ನನು । ಪರಸಿ ಕಳುಹು ಮುದದಿ ॥೨೦೦॥

ನೋಡು ಪರಾಕ್ರಮ ಕೂಡಿರುವಧಟರ । ಝಾಡಿಸುವಾಗಮವ ॥
ನೀಡಪ್ಪಣೆಯನು ಗಾಢದಿ ನೀ ಕೃಪೆ । ಮಾಡುತಲೆನ್ನವ್ವ ॥೨೦೧॥

**ಭಾಮಿನಿ**
ಅಳುಕದಾಹವದೊಳಗೆ ನರನ ।
ಗ್ಗಳಿಕೆಯನು ನಿಲಿಸುವೆನು ಸುಭಟರ ।
ಕಲಕುವೆನು ಸಾಕೆನಿಸುವೆನು ಸಂಸಾರವಿಭ್ರಮವ ॥
ಬಳಿಕವರ ಹರಿಬಕ್ಕೆ ಹುರುಡಿಸಿ ।
ನಳಿನಲೋಚನ ಬಂದರೆಯು ಪದ ।
ದೊಲವ ಪಡೆವೆನೆನಲ್ಕೆ ತಿಳಿದಿಂತೆಂದಳಾ ಜನನಿ ॥೨೦೨॥

**ರಾಗ ಕೇದಾರಗೌಳ ಅಷ್ಟತಾಳ**
ಲೇಸು ಮಗನೆ ಪಾಂಡುಸುತರ ರಕ್ಷಿಸುತಿಹ । ವಾಸುದೇವನು ದಯದಿ ॥
ಮೈಸಿರಿಯನು ತೋರಲೀಕ್ಷಿಸಬಹುದೆಂಬ । ಆಸೆಯೆನ್ನಯ ಮನದಿ ॥೨೦೩॥

ತಾಯೆಕೇಳ್ ಶ್ರೀಕೃಷ್ಣರಾಯನ ಬರಿಸಲು । ಪಾಯವುಂಟದ ಬಲ್ಲೆನು ॥
ಬೀಯಗ ಪಾರ್ಥನ ನೋಯಿಸಲಾಕ್ಷಣ । ಆ ಯದುವರ ಬಹನು ॥೨೦೪॥

ನರನ ನೋಯಿಸಲ್ಮುರಹರ ಬರುವನು ದಿಟ । ಬರುತ ಸಾರಥಿಯಾಹನು ॥
ಧುರದಿ ಹಿಮ್ಮೆಟ್ಟೆ ನೀ ಹರಿಗೆ ವಿಮುಖನಾಗೆ । ಜರೆವರ್ ಬಂಧುಗಳೆನ್ನನು ॥೨೦೫॥

ಅಚ್ಯುತನಿದಿರೊಳು ಆಶ್ಚರ್ಯವನು ತೋರು । ತೆಚ್ಚುತ ಕಣೆಗಳನು ॥
ಚುಚ್ಚಿಸಿ ಪಾರ್ಥನ ಮುಚ್ಚುವೆ ರಣದಲ್ಲಿ । ಬೆಚ್ಚುವನಲ್ಲ ತಾನು ॥೨೦೬॥

ಬಾಲಕ ಕೇಳು ಶ್ರೀಲೋಲನಿರಲು ರಣ । ಸೋಲು ಪಾಂಡವರಿಗುಂಟೆ ॥
ಕಾಳಗದಲಿ ಹಿಂದೆ ಕಾಲಿಕ್ಕಿದರೆ ಮುಕ್ತಿ । ಯೋಲಗದಲ್ಲಿ ಉಂಟೆ ॥೨೦೭॥

ಅಳುಕದೆ ಕೇಳ್ ಕೊಳುಗುಳದೊಳು ಪಾರ್ಥನ । ಗ್ಗಳಿಕೆಯ ನಿಲಿಸುವೆನು ॥
ಅಳಿವು ಉಳಿವು ಪುಣ್ಯವಶವದು ಮೆಚ್ಚಿಪೆ । ನಳಿನದಳಾಕ್ಷನನ್ನು ॥೨೦೮॥

ದಿಟ್ಟ ಕೃಷ್ಣಾರ್ಜುನರಿದಿರಾಗಿ ಮುಕ್ತಿಯ । ಬಟ್ಟೆಯ ಧಾತ್ರಿಯೊಳು ॥
ಹೊಟ್ಟೆಯ ಮರುಕವಿನ್ನೇನೆಂಬೆ ಮಗನೆ ಹಿ । ಮ್ಮೆಟ್ಟದಿರ್ ಪೋಗೆಂದಳು ॥೨೦೯॥

ಹಿಂದೆ ಹಿಮ್ಮೆಟ್ಟಲು ಕಂದನೆ ನಿನ್ನ ಗೋ । ವಿಂದನ ಕಿಂಕರನೆ ॥
ಇಂದೆನಗಪ್ಪಣೆಯೆಂದೆನುತಲಿ ತಾಯಿ । ಗೊಂದಿಸಿ ಪೊರಟ ತಾನೆ ॥೨೧೦॥

**ರಾಗ ಸಾಂಗತ್ಯ ರೂಪಕತಾಳ**
ಅವನೀಶ ಕೇಳು ಸುಧನ್ವನ ಸೋದರಿ । ಕುವಲೆಯೆಂಬವಳಾ ಸಮಯದಿ ॥
ನವಗಂಧಾಕ್ಷತೆ ವೀಳ್ಯವನು ಕೊಂಡು ಬರುತಗ್ರ । ಭವನೊಳಿಂತೆಂದಳಾ ತರಳೆ ॥೨೧೧॥

ಅಣ್ಣ ಕೇಳಚ್ಯುತಾರ್ಜುನರಿಗೆ ರಣದಿ ನೀ । ಬೆನ್ನ ತೋರುತ ಹಿಮ್ಮೆಟ್ಟಿದರೆ ॥
ಎನ್ನಯ ಮಾವಮೈದುನನಾದಿನಿಯರ್ಮುಂದೆ । ಇನ್ನೆಂತು ತಲೆಯೆತ್ತಿ ನಡೆವೆ ॥೨೧೨॥

ಅಳುಕದೆ ಪಾರ್ಥನ ಬಿಂಕವ ಬಿಡಿಸು ಮ । ತ್ತೊಲಿಸು ಕೃಷ್ಣನ ಚರಣಗಳ ॥
ಗೆಲಿದು ಬಾರೆಂದು ಜನನಿ ಸೋದರಿಯರ್ ಸೇಸೆ । ತಳಿದು ಪರಸಿ ಕಳುಹಿದರು ॥೨೧೩॥

**ಪರಿವರ್ಧಿನೀ**
ಜನನಿ ಸೋದರಿಯ ಬೀಳ್ಗೊಂಡು ಸುಧ ।
ನ್ವನು ತನ್ನಯ ಮಂದಿರಕೈತರುತಿರ ।
ಲನಿತರೊಳಾತನ ರಾಣಿ ಪ್ರಭಾವತಿ ಕನಕದ ಪಾತ್ರೆಯೊಳು ॥
ಅನುಲೇಪನ ಕಸ್ತುರಿ ವೀಳ್ಯಂಗಳ ।
ಮಿನುಗುವ ಸಂಪಿಗೆ ಪೂಗಳಿರಿಸಿ ಕೊಂ ।
ಡಿನಿಯನಿಗಿದಿರಾಗುತ ಬಂದಳು ಕಾಮನ ಮದದಾನೆಯೊಲು ॥೨೧೪॥

**ರಾಗ ಬೇಗಡೆ ತ್ರಿವುಡೆತಾಳ**

ಸತಿಶಿರೋಮಣಿ ಪ್ರಭಾವತಿ ಸೊಬಗಿನಲಿ । ರತಿಯ ಸೋಲಿಪ ರೂಪಿನತಿ ಸೊಬಗಿನಲಿ ।
ರತುನಾಭರಣಗಳ ದ್ಯುತಿ ಬೆಳಗುತಲಿ । ಪ್ರತಿಮದ ಗಜದಂತೆ ಗತಿಯನಿಡುತಲಿ ॥
ಚತುರತೆಯ ನಿರಿಯುಡುಗೆಗಳ ಶೋ । ಭಿತದ ಚೆಲ್ವಿನ ಅರ್ಧಚಂದ್ರಾ ।
ಕೃತಿಯ ಫಣೆ ಕಸ್ತುರಿತಿಲಕ ಭ್ರೂ । ಲತೆಯ ಮಾನಿನಿ ಅತಿ ಹರುಷದಲಿ ।
ಪತಿಗೆ ಇದಿರಾಗುತಲಿ ಬಂದಳು ॥೧೦೫॥

ಬೆಚ್ಚಿದ ಮೃಗದಂತೆ  ಬಲು ಚಪಳೆಗಳ । ವಚ್ಚೋರೆ ಕಣ್ಣಿನ ಓರೆ ನೋಟಗಳ ।
ನಿಚ್ಚಳ ಕದಪು ಸುರದನ ಪಂಕ್ತಿಗಳ । ಪೊಚ್ಚ ಪವಳದಂತೆ ಪೊಳೆವಧರಗಳ ॥
ಅಚ್ಚ ಪಂಜರದೋಲೆ ಮುತ್ತಿನ । ಕುಚ್ಚಿನಾ ಸರ ಮೌಕ್ತಿಕದ ಹೊಸ ।
ಪಚ್ಚಗಪ್ಪಗಳೆಸೆವ ಚಂದ್ರಮ । ನಚ್ಚವಿಯ ಮುಗುಳ್ನಗೆಯ ಮಾನಿನಿ ।
ಇಚ್ಛಿಸುತ ಪತಿಯೆಡೆಗೆ ಬಂದಳು ॥ [ಪತಿಗೆ ಇದಿರಾಗುತಲಿ ಬಂದಳು] ॥೧೦೬॥

ಮಲ್ಲಿಗೆ ಗಂಧಿ ಮೋಹನೆ ಕೀರವಾಣಿ । ಸಲ್ಲಲಿತಾಂಗಿ ಸರೀಸೃಪವೇಣಿ ।
ಪಲ್ಲವಪಾಣಿ ಪದಕಗಳ ಕಟ್ಟಾಣಿ । ಎಲ್ಲಾಲಂಕೃತೆ ಕಂಬುಕಂಠಿ ಕಲ್ಯಾಣಿ ॥
ಮೆಲ್ಲನಡಿಯಿಡುತುಲ್ಲಸದಿ ಬರ । ಲಲ್ಲಿ ನೂಪುರ ಗೆಜ್ಜೆ ಘಲ್ ಘಲ್ ।
ಘಲ್ಲೆನಲು ನಿಜ ವಲ್ಲಭನ ಮನ । ತಲ್ಲಣಿಸಲು ತತ್ಫುಲ್ಲಲೋಚನೆ  ।
ಒಳ್ಳೆ ರೂಪಿನೊಳಾಗ ಬಂದಳು ॥ [ಪತಿಗೆ ಇದಿರಾಗುತಲಿ ಬಂದಳು] ॥೧೦೭॥

ತೋರ ಕುಚಗಳ ಭಾರಕೆ ಬಳುಕುತಲಿ । ವೈ । ಯಾರದಿಂದವಳತಿ ನಡೆವ ಭಾರದಲಿ ।
ವಾರಣಾಧಿಪನಂತೆ ವಲವ ಗತಿಯಲಿ । ಜಾರಿಹ ಮುಡಿಗೆ ಪೂಸರವ ಸೂಸುತಲಿ ॥
ಸಾರಿ ಬರಲೀಕ್ಷಿಸುತ ಗಂಧಕ । ಸ್ತೂರಿ ಕರ್ದಮ ಪೂವುಗಳ ಕ ।
ರ್ಪೂರ ವೀಳ್ಯವ ಕೊಂಡು ಹರುಷದಿ । ನಾರಿಯಳ ಕಾಣುತ್ತ ಮುದ್ದಿಸಿ ।
ಧೀರನಹ ಸುಧನ್ವನೆಂದನು [ಕುರುಳ ತಿದ್ದುತಲೆಂದನು] ॥೧೦೮॥

**ರಾಗ ನೀಲಾಂಬರಿ ಏಕತಾಳ**

ಆವಲ್ಲಿಗೆ ಪಯಣವಯ್ಯ । ಪ್ರಾಣಕಾಂತ ॥ ರಾಜ ।
ಠೀವಿಯಿಂದ ಪೊರಟೆಯೆಲ್ಲಿ । ಪ್ರಾಣಕಾಂತ ॥೧೦೯॥

ಸ್ಯಂದನವದರಿಕೊಂಡು । ಪ್ರಾಣಕಾಂತ ॥ ಬಲು
ಚಂದದಿಂದ ಪೋಪುದೆಲ್ಲಿ । ಪ್ರಾಣಕಾಂತ ॥೧೧೦॥

ಎಂದಿನಂದವಲ್ಲವಿಂದು । ಪ್ರಾಣಕಾಂತ ॥ ಮನದಿ
ಸಂದೇಹಗೊಳ್ಳದೆ ನೀನು । ಪ್ರಾಣಕಾಂತ ॥೧೧೧॥

ನೂತನವಾಯ್ತುದನು ಕಂಡು । ಪ್ರಾಣಕಾಂತ ॥ ಸುಮ ।
ಹಾತಿಶಯ ಗುಣವಂತ । ಪ್ರಾಣಕಾಂತ ॥೧೧೨॥

ಭಾವಭಕ್ತಿಯಿಂದಲಾನು । ಪ್ರಾಣಕಾಂತ ॥ ಕೇಳ್ವೆ ।
ನೀನೊಲಿದು ಪೇಳ್ವುದೆನಗೆ । ಪ್ರಾಣಕಾಂತ ॥೧೧೩॥

**ರಾಗ ಕೇದಾರಗೌಳ ಝುಂಪೆತಾಳ**

ನಳಿನಾಕ್ಷಿ ಕೇಳೆ ಈಗ । ನರನೊಡನೆ । ಕಲಹಕಯ್ದುವೆನು ಬೇಗ ॥
ಕಳವಳಿಸಬೇಡ ಮನದಿ । ಕುಂತಿಸುತ । ಗಳುಕುವವನಲ್ಲ ರಣದಿ ॥೧೧೪॥

ಕಾಂತ ಕೇಳೆನ್ನಸೊಲ್ಲ । ಪಾರ್ಥನನು । ಕಂತುಪಿತ ಬಿಡುವನಲ್ಲ ॥
ಎಂತು ಗೆಲುವಹುದೊ ನಿನಗೆ । ಶ್ರೀಕೃಷ್ಣ । ಸಂತಸದಿ ಸಾಧ್ಯನವಗೆ ॥೧೧೫॥

ನರನ ಹರಿಬಕೆ ಕೃಷ್ಣನು । ಬರಲವನ । ಧುರದಿ ನಾ ಮೆಚ್ಚಿಸುವೆನು ॥
ಗರುವವನು ಮುರಿವೆ ದಿಟವು । ಸೋಲುಗೆಲ । ವಿರಲದುವೆ ವಿಧಿಯ ಪಟವು ॥೧೧೬॥

ಹರಿಯ ಕರುಣದ ಕವಚವು । ಪಾಂಡವರ । ಹರಣಕೊಪ್ಪಿಹುದು ನಿಜವು ॥
ಅರಸ ಕೇಳ್ ನರನ ಯುದ್ಧ । ಮುಕ್ತಿಪದ । ಕುರು ಮಾರ್ಗವು ಪ್ರಸಿದ್ಧ ॥೧೧೭॥

ಸೆಣಸಿ ಕೃಷ್ಣಾರ್ಜುನರನು । ಸಾಹಸದಿ । ದಣಿಸಿ ಹಿಮ್ಮೆಟ್ಟಿಸುವೆನು ॥
ವನಿತೆ ತನು ಸ್ಥಿರವಲ್ಲಿದು । ರವಿಶಶಿಯು । ಳ್ಳನಕ ಸತ್ಕೀರ್ತಿ ಬಹುದು ॥೧೧೮॥

ಇದನೆಲ್ಲನರಿತೆ ನಿಜವು । ಸುತಹೀನ । ಗುದಿಸುವುದೆ ಕೈವಲ್ಯವು ॥
ಇದುವೆ ಋತುಸಮಯವೆನಗೆ । ಲಾಲಿಪುದು । ಹದಗಾಲ ಬೆಳೆಮಾಳ್ಕೆಗೆ ॥೧೧೯॥

ಭದ್ರೆ ಹಿತವಲ್ಲ ಹಿಂದೆ । ಇಹುದು ಕೇ । ಳಾರ್ದ್ರಾ ಪ್ರವೇಶ ಮುಂದೆ ॥
ಭದ್ರಿಸಲ್ಕುಚಿತವಾಗ । ಎನ್ನನುವು । ಪದ್ರಿಸಲು ಬೇಡವೀಗ ॥೧೨೦॥

ಸಾಕು ಸಾಕಿನ್ನು ಇಂತು । ತುದಿಮಳೆ ವಿ । ಶಾಖೆಯೊದಗುತ್ತ ಬಂತು ॥
ನೀ ಕೇಳು ನಿನ್ನ ಸ್ಥಳದಿ । ಬೀಜವನು । ಬೇಕಾಗಿ ಬಿತ್ತು ಮುದದಿ ॥೧೨೧॥

ನಿನ್ನೊಡನೆ ದಿನ ಕಳೆಯಲು । ಪಿತನಾಜ್ಞೆ । ಯಿನ್ನು ತನಗಿಹುದು ಕೇಳು ॥
ಮುನ್ನ ಪೊರಟಿಹನು ಜನಕ । ನಾ ಪೋಗ । ದನ್ನೆಗೊದಗದು ಸೈನಿಕ ॥೧೨೧॥

ಬಿಡೆ ಬಿಡೆನು ಬಿಡೆನು ಈಗ । ಎನ್ನ ಕೂ । ಡೊಡಗೂಡು ಕೂಡು ಬೇಗ ॥
ನಡೆಯೆಂದು ಬಿಗಿದಪ್ಪುತ । ಕಾಂತನನು । ಒಡಬಡಿಸಿದಳು ಒಪ್ಪುತ ॥೧೨೨॥

**ಭಾಮಿನಿ**

ಪರಿಪರಿಯೊಳೊಡಬಡಿಸಲಾ ಸತಿ ।
ಸ್ಮರನ ತಾಪದೊಳಾಳ್ದು ತನ್ನಯ ।
ಗುರುಕುಚಗಳೆದೆಗೊತ್ತಿ ಬಾಹುಗಳಿಂದಲುರೆ ಬಿಗಿದು ॥

ಸರಸದಲಿ ಚುಂಬನವ ಕೊಡುತಲಿ ।
ಚರಣದಂದುಗೆ ಗೆಜ್ಜೆ ಘಲ್ಲೆನೆ ।
ಭರದೊಳಂತಃಪುರವ ಪೊಗಿಸಿದಳಬಲೆ ಕಾಂತನನು ॥೧೩೪॥

**ವಾರ್ಧಕ**

ಸತಿಗೆ ಷೋಡಶದ ಋತುಸಮಯಮೇಕಾದಶೀ ।
ವ್ರತಮಲಂಘ್ಯ ಶ್ರಾದ್ಧಮಿನಿತೊಂದು ದಿನಮೆ ಸಂ ।
ಗತಮಾದೊಡೆಂತು ಕರ್ತವ್ಯಮೆನೆ ಪೈತೃಕದ ಶೇಷಾನ್ನಮಾಘ್ರಾಣಿಸೆ ॥
ಕೃತಭೋಜ್ಯಮಾದಪುದು ನಡುವಿರುಳ್ಗಳೆದಾ ವ ।
ನಿತೆಯನೊಡಗೂಡಬಹುದದರಿಂದ ಧರ್ಮಪ ।
ದ್ಧತಿಯನೀಕ್ಷಿಸಲಿವಳನಿಂದು ಮೀರುವುದು ಮತಮಲ್ಲೆಂದವಂ ತಿಳಿದನು ॥೧೩೫॥

**ರಾಗ ಸೌರಾಷ್ಟ್ರ ಏಕತಾಳ**

ಜನಕನಾಜ್ಞೆಯ ಮೀರಿ । ವನಿತೆಗೆ ಋತುದಾನ ।
ವನು ಕೊಟ್ಟುದರಿಂದ ಪಾತಕವು ॥
ತನಗಿಲ್ಲವೆನುತಲಿ । ಮನದಿ ನಿಶ್ಚಯಗೊಳ್ಳು ।
ತನುವದಿತ್ತೆಡೆಗವಳೊಡನೆ ॥೧೩೬॥

ಬಗೆ ಬಗೆ ಬಂಧದಿ । ಸೊಗಸನು ತೋರಿ ಚ ।
ಳ್ಳುಗರಿಂ ಮೊಲೆಗಳ ಮರ್ದಿಸುತ ॥
ಮೊಗವನು ಮುದ್ದಿಸಿ । ನಗುತ ಚೆಂದುಟಿ ಸವಿ ।
ದಗಲದಾತನು ರಮಿಸಿದನು ॥೧೩೭॥

**ವಾರ್ಧಕ**

ತವಕದಿಂ ತರಳೆಯಂ ತಕ್ಕಯಿಸಿಕೊಂಡು ಸತಿ ।
ಯವಯವ ಸುವೃಕ್ಷಕಾಶ್ರಯಿಸಿ ಸುತ್ತಿಹ ದಿವ್ಯ ।
ನವಮಲ್ಲಿಕಾಲತೆಯುಯೆಂಬಂತೆ ಸುತ್ತಿ ಬಿಗಿದಪ್ಪುತೆಳೆದೊಯ್ಯೆ ಗೃಹಕೆ ॥
ಯುವತಿಯರ ಋತುಸಮಯ ಮೀರಲನುಚಿತಮೆಂದು ।
ವಿವಿಧಪೌರಾಣೋಕ್ತಿಯಂ ಗ್ರಹಿಸಿ ನಿಶ್ಚಯಿಸಿ ।
ನವಕಲಾಪ್ರೌಢಿಯಿಂದಾ ಸುಧನ್ವಂ ತನ್ನ ಕಾಂತೆಯಂ ರಮಿಸುತಿರ್ದಂ ॥೧೩೮॥

ಕಾವನಾಗಮದಿ ಕುಂದಿಲ್ಲದಲೆ ಸರಸದಿ ಪ್ರ ।
ಭಾವತಿಯನೊಡಗೂಡುತವಳಿಚ್ಛೆಯಂ ಸಲಿಸಿ ।
ಕೋವಿದ ಸುಧನ್ವನಾಲಯವ ಪೊರಮಟ್ಟು ಕರಚರಣಾಬ್ಜಗಳನು ತೊಳೆದು ॥
ಶ್ರೀವಧೂವರನ ಧ್ಯಾನಿಸಿ ಪೊರಡುತಿಹ ಸಮಯ ।
ಕಾ ವಸುಮತೀಶ ಹಂಸಧ್ವಜಂ ಕಂಡು ಸೇ ।
ನಾವ್ಯೂಹಮಧ್ಯದೊಳ್ ಸುತನ ಕಾಣದೆ ಕನಲ್ದಾಗಳಿಂತೆನುತಿರ್ದನು ॥೧೩೯॥

**ರಾಗ ಕೇದಾರಗೌಳ ಅಷ್ಟತಾಳ**

ಹಿಂದುಳಿದನೆ ಹಿಡಿತರಿಸು ಸುತನ ಬೇಗ । ನೆಂದು ಕೋಪಿಸಿ ಭೂಪತಿ ॥
ಅಂದತಿ ಕೆಡುಕನ ರಟ್ಟೆಯ ಕಟ್ಟಿ ತಾ । ರೆಂದೆನಲಾ ಸುಮತಿ ॥೨೪೦॥

ಬಂದರು ಚರರು ಸುಧನ್ವನ ಪುಡುಕುತ್ತ । ಬಂಧಿಸಿ ಕರಗಳನು ॥
ತಂದರೆಳೆವುತಲಿ ಜನರೆಲ್ಲ ಬೆರಗಾಗಿ । ನಿಂದು ನೋಡಿದರಿದನು ॥೨೪೧॥

ಯುದ್ಧದುತ್ಸಹ ಬಿಟ್ಟು ಯುವತಿಯ ಭೋಗಿಸು । ತಿದ್ದರೆಂತುಳಿವೆಯೆಂದು ॥
ತಿದ್ದಿತು ತನುವಾಸೆಯೆನ್ನುತ ಚಾರರು । ಗದ್ದಲಿಸುತ ತಂದರು ॥೨೪೨॥

ಕದ್ದ ಕಳ್ಳನ ಕಟ್ಟಿ ತರುವಂತೆ ತಂದರು । ಉದ್ಧತ ವೀರನನು ॥
ಪೊದ್ದಿಸಲರಸನ ಪಾದಕಮಲದೊಳು । ಬಿದ್ದ ಸುಧನ್ವತಾನು ॥೨೪೩॥

ಎಲವೊ ಬಾಹಿರ ರಣೋತ್ಸಹವನ್ನು ಬಿಟ್ಟು ಹಿಂ । ದುಳಿದೆ ನೀನೇಕೆನಲು ॥
ಅಳುಕುತ್ತ ಲಜ್ಜೆಯಿಂದಯ್ಯಗೆ ನುಡಿದನು । ತಲೆಯ ಬಾಗಿಸುತಾಗಳು ॥೨೪೪॥

ಲಲನೆ ಸಂತತಿಗಿಚ್ಛೆಸುತ ಋತುಸಮಯವೆಂ । ದೊಲಿಸಿ ತಡೆದಳೆನ್ನನು ॥
ಸಲಿಸಿದೆನವಳ ಇಚ್ಛೆಯನಿಂದು ಅಪರಾಧ । ಗಳನು ಕ್ಷಮಿಸು ಎಂದನು ॥೨೪೫॥

ಕೃತಕದ ನುಡಿಯಿದು ಕರೆಯಿರೆಮ್ಮಯ ಪುರೋ । ಹಿತ ಶಂಖಲಿಖಿತರನು ॥
ಅತಿವೇಗದೊಳಗವರಯ್ತಂದು ನುಡಿದರು । ಕ್ಷಿತಿಪ ಕೇಳ್ ಧರ್ಮವನ್ನು ॥೨೪೬॥

ನುಡಿಯೆರಡಾದರೆ ಪೊಡವಿ ಮೆಚ್ಚಳು ಸುರ । ಗಡಣ ನಿಂದಿಸುವುದಿನ್ನು ॥
ನಡೆಯದು ನಿನ್ನ ಸಂಪತ್ತು ಕಾಲನ ಶಿಕ್ಷೆ । ಗೊಡೆಯನಾಗದಿರು ನೀನು ॥೨೪೭॥

ಸುತನೆಂಬ ಮೋಹದಿ ಕ್ಷಮಿಸಲು ನಿನ್ನಯ । ಪೃಥಿವಿಯೊಳಾವಿರೆವು ॥
ವಿತತ ಕಟ್ಟಾಜ್ಞೆಯ ಮೀರದಿರಿದುವೆ ಕೇಳ್ । ಹಿತ ಕೀರ್ತಿಯೆನಬಲ್ಲೆವು ॥೨೪೮॥

**ರಾಗ ಮಧುಮಾಧವಿ ತ್ರಿವುಡೆತಾಳ**

ತಾತ ಲಾಲಿಪುದೆನ್ನ ಬಿನ್ನಪ । ಪ್ರೀತಿಯಿಂದಾ ತರುಣಿಯು ॥
ಕಾತರಿಸಿ ನಡೆತಂದು ಸಂತತಿ । ಗಾತಿಶಯದ ॥೨೪೯॥

ಋತುಸಮಯವಿಂದೆನಗೆ ತನ್ನಯ । ಜೊತೆಯೊಳಿರ್ದೂ ಮೋಹದಿ ॥
ರತಿಸುಖವ ತೋರದಿರೆ ಮುಂದಿ । ನ್ನತುಳದಿನವು ॥೨೫೦॥

ಎನುತ ತಡೆದುದರಿಂದ ನಿಂತೆನು । ಮನೆಯೊಳೀಗಾ ಕಾಂತೆಯ ॥
ಮನದಭೀಷ್ಟವ ಸಲಿಸಿ ಬರುವುದ । ಕಿನಿತು ಕೇಳು ॥೨೫೧॥

**ಭಾಮಿನಿ**

ಕಂದನಾಡಿದ ನುಡಿಯ ಕೇಳುತ ।
ಲಂದು ಕ್ಷಿತಿಜ ಕನಲ್ದು ರೋಷದಿ ।
ಮಂದಮತಿಯಿವನತ್ತ ನೂಕಿರೊ ಕೃಷ್ಣದರ್ಶನವ ॥
ಹಿಂದುಳುಹಿ ತಾ ನಿರತ ಧರ್ಮವ ।
ಪೊಂದುವನೆ ಗಡ ಕರೆ ಪುರೋಹಿತ ।
ರಿಂದವರ ಬೆಸಗೊಂಬೆ ಪ್ರಾಯಶ್ಚಿತ್ತವೆನುತೆಂದ ॥೨೫೨॥

**ಕಂದ**

ಎನಲಾ ಚರರೈತಂದುಂ ।
ಮನೆಯೊಳಗಿರ್ದ ಶಂಖಲಿಖಿತರೊಳಿದ ಪೇಳಲ್ ॥
ಘನ ಹರುಷದೊಳವರಾಕ್ಷಣ ।
ಜನಪನ ಬಳಿಗೈದುಸಿರಿದರತ್ಯುತ್ಸಹದೊಳ್ ॥೨೫೩॥

**ರಾಗ ದೇಶಿ ಅಷ್ಟತಾಳ**

ಕೇಳಯ್ಯ । ಭೂಪ । ಕೇಳಯ್ಯ ॥ ಪ ॥

ಕೇಳಯ್ಯ ಭೂಪ ನಾವೆಂಬ ಮಾತ । ಆಲೋಚನೆಗಳಿನ್ನೇಕೆ ವಿಖ್ಯಾತ ॥ ಅ.ಪ ॥

ಪುತ್ರನೆಂದೆಂಬಾಸೆಯಲ್ಲಿ ತೊಟ್ಟಿರುವ । ಕ್ಷತ್ರಿಕುಲದ ಭಾಷೆಯನಿಂದು ಮೆರೆವ ॥
ಧಾತ್ರಿಯೊಳಗೆ ತಪ್ಪಿ ನಡೆದ ಪಾತಕಕೆ । ಪಾತ್ರನಾಗದಿರು ನೀ ಪೇಳ್ವೆವಾವಿದಕೆ ॥೨೫೪॥

ಪಿಂತೆ ರುಕ್ಮಾಂಗದ ಹರಿಶ್ಚಂದ್ರಾದಿಗಳು । ಎಂಥೆಂಥ ಬವರದಿ ಸತ್ಯವಾದಿಗಳು ॥
ಭ್ರಾಂತು ಬುದ್ಧಿಯ ತಾಳಿ ನೀತಿ ತಪ್ಪಿದರೆ । ಕಾಂತೆಯಾತ್ಮಜರೆಂದು ಮೊಗವ ನೋಡಿದರೆ ॥೨೫೫॥

ಸಾವಿರವಾದರು ಮೊದಲಿನ ನುಡಿಗೆ । ನೀನದ ತಪ್ಪುವುದಾದರೆ ಕಡೆಗೆ ॥
ನಾವಿರುವವರಲ್ಲ ನಿನ್ನ ರಾಜ್ಯದಲಿ । ಯಾವಲ್ಲಿಗಾದರು ಪೋಪೆವಿಂದಿನಲಿ ॥೨೫೬॥

**ರಾಗ ಶಂಕರಾಭರಣ ರೂಪಕತಾಳ**

ವರ ಪುರೋಹಿತರಿಂತೆನ । ಲರಸನು ಸುಮತಿಗೆ ಪೇಳಿದ ।
ಉರಿಯನು ಪ್ರಬಲಿಸುತೆಣ್ಣೆ ಕೊ । ಪ್ಪರಿಗೆಯೊಳೀತನನು ॥೨೫೭॥

ಭರದಿಂ ಹಾಕಿಸು ಪೋಗೆನೆ । ಮರುಗುತ ಮನದಿ ಸುಧನ್ವನ ।
ಕರವಿಡಿದೆಳೆದೆಳೆತಂದರು । ಚರರೊಡನಾ ಸ್ಥಳಕೆ ॥೨೫೮॥

ಕೊರಡುಗಳನು ತೂರುತ ಬಲು । ಉರಿಯನು ಪ್ರಬಲಿಸುತಾ ಕ್ಷಣ ।
ತರಹರಿಸದೆ ತಳಪಳನೆಂ । ದಿರದುಕ್ಕುತಲಿರಲು ॥೨೫೯॥

ಭೀಕರ ತೈಲಕಟಾಹದಿ । ಹಾಕುವುದೆಂತೀ ಕುವರನ ।
ಸಾಕಿದ ಭೂವರಗೇನವಿ । ವೇಕವು ಬಂತೀಗ ॥೧೯೦॥

ಶಂಖಲಿಖಿತರೆಂದೆಂಬಾ । ಮಂಕುಗಳೇಕೀಯೂರಿಗೆ ।
ಬಿಂಕದಿ ಬಂದೆಮ್ಮರಸಗೆ । ಸೋಂಕಿದರಕಟಕಟ ॥೧೯೧॥

ಕೇಳದೆ ತೀರದು ಆಳ್ದನ । ಊಳಿಗ ಸುಡಿಸುವರೀತನ ।
ಕಾಲಗೆ ಕೈ ಬರುವುದೆ ಪರ । ಸೇವೆಗಳತಿ ಕಷ್ಟ ॥೧೯೨॥

ಕುಲ ರತ್ನವನುರಿಯೆಣ್ಣೆಯೊ । ಳಿಳುಹುವೆನೆಂತಕಟೆನ್ನುತ ।
ಅಳಲುವ ಮಂತ್ರಿಗೆ ಪೇಳಿದ । ನಳುಕದಿರೆಲೊ ಸುಮತಿ ॥೧೯೩॥

ಕೊಳುಗುಳದಲಿ ವೈರಿಗಳಂ । ದಳಿವೀತನು ಪಿತನಾಜ್ಞೆಗೆ ।
ಪಳಿಯದೆ ತೆತ್ತರ ಮುಕ್ತಿಯು । ಸುಲಭದಿ ತನಗಹುದು ॥೧೯೪॥

ಬೆದರದೆ ಬಿಸುಡಿಸು ತಪ್ತತೈ । ಲದೊಳೆನ್ನನು ನೀನೆಂದಾ ।
ಮಧುರಿಪು ಮುರಹರ ನರಹರಿ । ಪದವೇ ಗತಿಯೆಂದ ॥೧೯೫॥

ಎತ್ತಿ ಬಿಸಾಡಲು ಕಾಣುತ । ಸುತ್ತಣ ಪುರಜನ ಪರಿಜನ ।
ಮೊತ್ತವು ಹಾ ಹಾಯೆಂದೊದ । ರುತ್ತಲೆ ಬಾಯ್ಬಿಡುತ ॥೧೯೬॥

ಚಿತ್ತದಿ ಮರುಗುತ ಮಕ್ಕಳಾ । ಪೆತ್ತಬಲೆಯರಿದನೀಕ್ಷಿಸಿ ।
ಕೃತ್ಯವಿದಲ್ಲವೆನುತಲೆ । ಗುತ್ತುತ ವನಿತೆಯರು ॥೧೯೭॥

ಮಿಥ್ಯದಿಕಾರಣ ಮುಂದಿ । ನ್ನೆತ್ನಗಳಿಲ್ಲವೆನುತ್ತಲೆ ।
ಮತ್ತಳುತಲೆ ತಾವ್ ತಮ್ಮೊಳು । ಬಿತ್ತರಿಸಿದರಾಗ ॥೧೯೮॥

ಊ

**ರಾಗ ನೀಲಾಂಬರಿ ಆದಿತಾಳ**

ನೋಡವ್ವ ಇಂಥಾ ಬಾಲನ । ತಪ್ತತೈಲದಿ । ದೂಡಿದರಲ್ಲೇಯೀತನ ॥
ಮೂಢನೆ ಹಂಸಕೇತ । ಪರರ ವಾಕ್ಯದಿ । ಮಾಡಿದ ಬರಿದೆ ಘಾತ ॥೧೯೯॥

ದುಷ್ಟ ಪಾಪಿಗಳವರು । ಶಂಖಲಿಖಿತರಿ । ನ್ನೆಷ್ಟು ದಿವಸ ಬಾಳ್ವರು ॥
ನಷ್ಟಗೆಯ್ಸಿದರು ಜೀವ । ಧೂರ್ತರಿವರಿರ್ಪ । ಪಟ್ಟಣ ಲೇಸೇನವ್ವ ॥೨೦೦॥

ಹಲಗಾಲ ತಪವಗೆಯ್ಯೆ । ಸುಧನ್ವನಂಥ । ಚೆಲುವ ಪುಟ್ಟುವನೆ ತಾಯೆ ॥
ಇಳೆಗೆ ಬಾಹಿರನೆಯೀತ । ಹಂಸಕೇತನ । ಕುಲವುದ್ಧರಿಸುವ ದಾತ ॥೧೭೦॥

ಅರಿಗಳೆದೆಗೆ ಶೂಲನು । ಸುಧನ್ವನೀತ । ಧುರಕೆ ಕರ್ಕಶಧೀರನು ॥
ನರಗಿದಿರ್ಯಾರು ಜಾಣೆ । ವ್ಯರ್ಥವೀ ಭೂಪ । ಪುರ ಹೋಗಾಡಿಸಿದ ಕಾಣೆ ॥೧೭೧॥

ಎಂತು ಬಾಳುವಳೊ ಮಾತೆ । ಉದಾರಾಗ್ನಿ ಇ । ನ್ನೆಂತು ತಾಳುವಳೊ ಖ್ಯಾತೆ ॥
ಕಾಂತೆ ಚಿಕ್ಕವಳು ಕಾಣೆ । ತನ್ನಿಂದ ಪ್ರಿಯಗೆ । ಇಂತಾಯ್ತೆಂದುಳಿವಳೇನೆ ॥೧೭೩॥

ಸುದತಿಸಂಕುಲಕೆ ಸಾಕು । ಮಕ್ಕಳಪೇಕ್ಷೆ । ಇದ ಕಂಡು ಮರೆಯಬೇಕು ॥
ಒದರಲೇನುಂಟು ನಾವೀಗ । ಶ್ರೀಕೃಷ್ಣನಿವನ । ಒದಗಿ ರಕ್ಷಿಸಲಿ ಬೇಗ ॥೧೭೪॥

**ರಾಗ ರೇಗುಪ್ತಿ ಏಕತಾಳ**

ಈ ಪರಿಯಲಿ ಪುರಜನ ಮರುಗಲು ಇತ್ತ । ಶ್ರೀಪತಿಭಜಕ ಸುಧನ್ವ ತಾನು ॥
ತಾಪಿಸಿದೆಣ್ಣೆ ಕೊಪ್ಪರಿಗೆಯೊಳ್ಮುಳುಗಿ ಪ್ರ । ಲಾಪಿಸಿ ನುತಿಸಿದ ಹರಿಯನ್ನು ॥೧೭೫॥

ಮಾಧವಹರಿಮಧುಸೂದನ ವಿಷ್ಣು ದಾ । ಮೋದರ ಕೃಷ್ಣ ಶುಭೋದಯ ॥
ಶ್ರೀಧರ ವಿಘ್ನ ವಿಚ್ಛೇದನ ಹರಿ ಪ್ರ । ಹ್ಲಾದವರದ ಈಕ್ಷಿಸೆನ್ನಯ ॥೧೭೬॥

ವಾಸುದೇವಾಚ್ಯುತ ಕೇಶವ ಶ್ರೀಹೃಷೀ । ಕೇಶ ಸದ್ಭಕ್ತಸುಪೋಷಣ ॥
ಸಾಸಿರನಾಮ ಸರ್ವೇಶ ಲಕ್ಷ್ಮೀಶಾಂಬ । ರೀಷವರದ ನಮೋ ಎಂದನು ॥೧೭೭॥

ತ್ರಾಹಿ ಮುಕುಂದ ಗೋವಿಂದ ಸಚ್ಚಿದಾನಂದ । ತ್ರಾಹಿ ತ್ರಾಹಿ ನಂದನಂದನ ॥
ತ್ರಾಹಿ ದುರ್ಜನಶಿಕ್ಷ ತ್ರಾಹಿ ಸಜ್ಜನರಕ್ಷ । ತ್ರಾಹಿ ಶ್ರೀಹರಿ ನಮೋ ಎಂದನು ॥೧೭೮॥

**ಚೂರ್ಣಿಕೆ**

ಹೇ ದೇವ । ಚರಾಚರಪ್ರಾಣಿಜೀವ ।
ಸುರಾಸುರಸಿದ್ಧ ಸಾಧ್ಯಯಕ್ಷಗಂಧರ್ವಾದಿ ಸೇವ ।
ರಿಪುಗಜಕಂಠೀರವ ಆಪದ್ಬಾಂಧವ ।
ನಿರುಪಮಕೀರ್ತಿಗಂಭೀರ । ನಿಗಮಾಗಮಸಾರ ।
ಭೂಭಾರಾಪಹಾರ । ದುರಿತಹರ ।
ಕೋಟಿಮಾರ್ತಾಂಡ ತೇಜೋಮಯ । ಸಹೃದಯ ।
ಪುಣ್ಯಾನಂದಚಿನ್ಮಯ । ಪುರಂದರಾರ್ಚಿತ ।
ಪುರಾಣಪುರುಷೋತ್ತಮ । ಸಕಲಗುಣಾಭಿರಾಮ ।
ನೀಲಮೇಘಶ್ಯಾಮ । ದೈತ್ಯಕುಲವಿರಾಮ ।
ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ । ಮದನಜನಕ ॥
ಪರಮಪಾವನ । ಪರಂಜ್ಯೋತಿಸ್ವರೂಪಕ । ಜಗದ್ವ್ಯಾಪಕ ॥

ಯದುವಂಶದೀಪಕ ಷೋಡಶಸಹಸ್ರನಾರೀಜನಪ್ರಾಣವಲ್ಲಭ ।
ಮೌನೀಜನದುರ್ಲಭ । ದೀನಜನ ಸುಲಭ ।
ಶಂಖಚಕ್ರಗದಾಶಾಙ್ಗದಿಶೋಭಿತ । ಪೀತಾಂಬರಾಲಂಕೃತ ।
ಸರ್ವಾಭರಣಭೂಷಿತ । ಕಮಲಾಸನಶಂಕರಾದಿವಿನುತಪಾದಾಂಬುಜ ।
ವರ ಚತುರ್ಭುಜ । ವೈನತೇಯಧ್ವಜ । ಆಶ್ರಿತಜನಸುರಕುಜ ।
ಧ್ರುವಪ್ರಹ್ಲಾದಾಂಬರೀಷ ಅಜಾಮಿಳಾದಿ ಸನಕಸನಂದನಪರಿಪಾಲ ।
ಮಾಯಾಮನುಜಲೀಲ । ವಸುದೇವಬಾಲ । ಸಾಮಗಾನವಿಲೋಲ ॥
ಹನುಮಂತ ಜಾಂಬವ ವಿಭೀಷಣ ವಿದುರ ಅಕ್ರೂರ ದ್ರೌಪದಿ ಅಹಲ್ಯಾದಿ ಭಕ್ತಜನರಕ್ಷ ।
ಪುಂಡರೀಕಾಕ್ಷ ನಿನ್ನನೇ ಮರೆಹೊಕ್ಕೆ ನೀ ಕೃಪಾಕಟಾಕ್ಷದಿಂದೆನ್ನನುಂ ಪಾಲಿಸೋ ಹರಿ

**ವಾರ್ಧಕ**

ಧಾರಿಣೀಶ್ವರ ಲಾಲಿಸಚ್ಯುತನ ನೆನೆವರ್ಗೆ ।
ಘೋರ ತಾಪತ್ರಯವು ಮುಟ್ಟಲರಿದೆಂದು ಶ್ರುತಿ ।
ಸಾರುತಿರಲಾಗ ಕಾಲಾಗ್ನಿಯಂತಹ ತಪ್ತತೈಲ ಕೊಪ್ಪರಿಗೆಯೊಳಗೆ ॥
ವೀರವೈಷ್ಣವನು ಶ್ರೀಹರಿಯ ನೆನೆಯಲ್ಕೆ ಪ ।
ನ್ನೀರಂತೆ ತಂಪುಗೊಂಡುದು ತನುವು ಮುಖಕಾಂತಿ ।
ಯೇರಿತೇನೆಂಬೆ ರಾಕೇಂದುವಿನ ತೆರದಿ ಥಳಥಳಿಸಿ ಬೆಳಗಿದನಾಗಲು ॥೧೭೯॥

ಮುಡಿಗೆ ಮುಡಿದರಳಮೊಗ್ಗೆಗಳರಳಿದವು ಕಂಠ ।
ದೆಡೆಯ ತುಳಸಿಯ ದಂಡೆ ಕೋಮಲಿಸಿತೇನೆಂಬೆ ।
ಗುಡಿಗಟ್ಟಿದವು ರೋಮರಾಜಿಗಳು ಹಿಮಕಾಲವಡಸಿ ತಂಪೊಗೆವ ತೆರದಿ ॥
ನುಡಿದ ನರಹರಿಯ ನಾಮಸ್ಮರಣೆ ಹೃದಯದೊಳ್ ।
ಮಡಗಿ ಮಾಧವನ ಮೂರ್ತಿಧ್ಯಾನದಾನಂದ ।
ಕಡಲೊಳಾಳುತ್ತಿರಲ್ಕಾ ಸುಧನ್ವನ ಕಂಡು ಬೆರಗಾದರಖಿಳ ಜನರು ॥೧೮೦॥

**ರಾಗ ಕಲ್ಯಾಣಿ ಝಂಪೆತಾಳ**

ಹರಿಭಕ್ತರಿಂಗಿನ್ನು ಸರಿಗಾಣೆ ನಾನು ।
ಧರಣೀಶ ನಿನ್ನೊಳ್ ನಿಧಾನಿಸೈ ನೀನು ॥ ಪ ॥

ಕುಂಭಿನೀಸುರ ಲಿಖಿತ ಕಂಡು ಖತಿಗೊಳುತಗ್ನಿ ।
ಸ್ತಂಭವನು ಬಲ್ಲನಿವನೆನುತ ಕಡು ಮುಳಿದು ॥
ಮುಂಬರಿದು ಎಳೆನೀರ್ಗಳುದಕವನು ಸುರಿಯಲುರಿ ।
ಯಂಬರಕೆ ಹಾಯ್ದುದೇನೆಂಬೆ ಗುಳುಗುಳಿಸಿ ॥೧೮೧॥

ಛಿಳಿ ಛಿಟಿಲು ಛಿಟಿಲೆಂದು ಸಿಡಿದ ಹನಿಗಳು ಗಂಡ ।
ಸ್ಥಳವು ಸುಟ್ಟುದು ಲಿಖಿತನಳುಕಿ ತಾ ತೊಲಗೆ ॥

ಬಳಿಕಾ ಸುಧನ್ವ ನಿಶ್ಚಲನಾಗಿ ಹರಿನಾಮ ।
ಗಳನು ಜಪಿಸುತಲಿ ನಿರ್ಮಲದೊಳಿರುತಿರ್ದ ॥೧೮೧॥

ಸುಖದಿಂ ಸುಧನ್ವನಿರಲೀಕ್ಷಿಸುತಲಾಗಲಾ ।
ಲಿಖಿತನರಿತನು ಮನದಿ ಶ್ರೀ ಕೃಷ್ಣನ ॥
ಭಕುತನಿವನಹುದೀತನಿಂಗೆ ದ್ರೋಹವ ಗೆಯ್ದೆ ।
ಯುಕುತ ದೇಹಕೆ ಪ್ರಾಯಶ್ಚಿತ್ತವಿಧಿಗೆಂದ ॥೧೮೩॥

ಹಾರಿದನು ತಪ್ತತೈಲದೊಳಾಗ ಬಳಿಕಲ್ಲಿ ।
ತೋರೆ ತಂಪಚ್ಯುತನ ಶರಣಸಂಗದೊಳು ॥
ಧಾರಿಣೀಸುರ ಹಿಮದಿ ನಡುಗಿ ಭಯಗೊಂಡು ಹರಿ ।
ನಾರಾಯಣನ ಸ್ಮರಿಸುತಿರಲು ಸೌಖ್ಯದೊಳು ॥೧೮೪॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಖ್ಯಾತನಹ ಹರಿಭಕ್ತಸಂಗವು । ಏತರತಿಶಯವಾಯ್ತೊ ಲಿಖಿತಗೆ ।
ಶೀತಲವದಾಯ್ತುರಿವ ಎಣ್ಣೆಯು । ಭೂತಳೇಶ ॥೧೮೫॥

ಕೇಳಿ ವಿಸ್ಮಿತನಾಗಿ ಮಂತ್ರಿ ಜ । ನಾಳಿಯೊಡನಯ್ತಂದನಾಗ ಮ ।
ರಾಳಧ್ವಜನೀಕ್ಷಿಸಿದನೀರ್ವರ । ಮೇಳವಿಹುದು ॥೧೮೬॥

ಸುತಪುರೋಹಿತರಿಬ್ಬರನು ತೆಗೆ । ಸುತ ಕುಮಾರನನಪ್ಪುತೆಂದನು ।
ಸುತನೆ ನಿನ್ನುಳುಹಿದನೆ ದೇವಕಿ । ಸುತನು ಇಂದು ॥೧೮೭॥

ಅಚ್ಯುತನ ನಿರ್ಮಲ ಮನದಿ ನೀ । ಮೆಚ್ಚಿಸಿದನೆಂಬೀ ಪರೀಕ್ಷೆಯ ।
ಎಚ್ಚರಿಕೆಯರಿಯದೆ ಮರುಳ್ತನ । ಹೆಚ್ಚಿತೆನಗೆ ॥೧೮೮॥

ಆದರೊಳ್ಳಿತು ಮಗನೆ ಕೀರ್ತಿಯ । ಸಾಧಿಸಿದೆ ಲೋಕದೊಳು ನಿನಗೆಣೆ ।
ಯಾದ ಸಾಧುಗಳಿಲ್ಲವೆಂದನು । ಮೇದಿನೀಶ ॥೧೮೯॥

**ಆರ್ಯ ಸವಾಯ್**
ಉರಿವೆಣ್ಣೆಯನುಂ ಪೊಗುತೈತಂದಿಹ ।
ತರುಣ ಪುರೋಹಿತರನು ಸಹಿತ ॥
ಅರಸನು ಮನ್ನಿಸಲಾತನೊಡನೆಮತಿ ।
ಹರುಷದಿ ಪೇಳ್ದನು ತಾ ಲಿಖಿತ ॥೧೯೦॥

**ರಾಗ ಆನಂದಭೈರವಿ ಏಕತಾಳ**

ಹಂಸಕೇತನನೆ ನಿನ್ನ । ಸಂಭವನಿಂದ । ವಂಶವುದ್ಧರಿಸಿತಿನ್ನಾ ॥
ಸಂಶಯವೇನು ಬೇಡ । ಈತನು ಮುರ । ಧ್ವಂಸಿಕಿಂಕರನು ನೋಡಾ ॥೧೯೦॥

ಆಡುವುದೇನಿದೆಲ್ಲ । ನಿನ್ನಯ ನಾಡು । ಬೀಡು ಪರಿವಾರವೆಲ್ಲ ॥
ಪಾಡಾಗಿ ಧರಣಿಯಲಿ । ಧನ್ಯರು ಖಯ । ಖೋಡಿಯಿಲ್ಲಿಂದಿನಲಿ ॥೧೯೧॥

ಎನಲ್ಕಾತನನು ನಿಲಿಸಿ । ಪೇಳ್ದನು ಶಂಖ । ಘನ ಹರುಷವ ಧರಿಸಿ ॥
ಜನಪ ಕೇಳ್ ತವಸುತನು । ತಾ ಜಗತ್ಪಾ । ವನ ಕೀರ್ತಿ ವಿಖ್ಯಾತನು ॥೧೯೩॥

ತಳುವದೇತಕೆ ಈತನ । ನೇಮವನಿತ್ತು । ಕಳುಹಿಸಿ ಕೊಡು ಪಾರ್ಥನ ॥
ದಳವನೆ ನಿರ್ಣಯಿಸಿ । ವಾಜಿಯ ತಹ । ಕೊಳಗುಳದಲಿ ಜಯಿಸಿ ॥೧೯೪॥

ಎಂದ ಮಾತಿಗೆ ಭೂಪನು । ಹಿಗ್ಗುತ ಸಾ । ನಂದದಿ ವೀಳ್ಯವನು ॥
ಕಂದನಿಗೀಯಲಾಗ । ಸನ್ನಹವಾಗಿ । ಬಂದನು ರಣಕೆ ಬೇಗ ॥೧೯೫॥

**ವಾರ್ಧಕ**

ಅರಸ ಕೇಳ್ ಬಳಿಕ ಹಂಸಧ್ವಜಂ ತನ್ನಣುಗ ।
ಗೆರೆಸಿ ಪನ್ನೀರ ನವರತ್ನ ಭೂಷಣ ದಿವ್ಯ ।
ಸುರುಚಿರಾಂಬರದಿಲಂಕರಿಸಿ ನರನಾಹವಕೆ ಪೊರಟನತಿ ಸಂಭ್ರಮದೊಳು ॥
ವರ ಸುಧನ್ವನು ಪಿತನಿಗೆರಗಿ ಪರಕೆಯ ಗೊಂಡು ।
ಗುರು ಶಂಖಲಿಖಿತರಿಗೆ ಮಣಿದು ವಂದನೆ ಗೆಯ್ದು ।
ಹರುಷದಿಂ ಶಸ್ತ್ರಾಸ್ತ್ರ ಕೈಗೊಂಡು ತ್ವರಿತದಿಂ ರಥವೇರಿ ಪೊರಮಟ್ಟನು ॥೧೯೬॥

ಸುತ್ತ ಪದ್ಮವ್ಯೂಹಮಂ ರಚಿಸಿ ನಡುವೆ ನರ ।
ನುತ್ತಮ ತುರಂಗಮಂ ಕಟ್ಟಿ ಕಾಳಗಕೆ ಭಟ ।
ರೊತ್ತಾಗಿ ನಿಂದರರಿವೀರರಂ ಬರಪೇಳೇನುತ್ತರಸನಾಜ್ಞೆಯಿಂದ ॥
ಇತ್ತ ಪಾರ್ಥಂಗೆ ಚರರಯ್ತಂದು ನುಡಿದರೀ ।
ವೃತ್ತಾಂತಮಂ ಬಳಿಕ ಪ್ರದ್ಯುಮ್ನನಂ ಕರೆದು ।
ಮತ್ತೆ ಬಂದುದು ವಿಘ್ನಮಿದಕಿನ್ನುಪಾಯವೇನೆಂದೊಡವನಿಂತೆಂದನು ॥೧೯೭॥

**ರಾಗ ಶಂಕರಾಭರಣ ಅಷ್ಟತಾಳ**

ಇಂದುಕುಲಜ ಲಾಲಿಸಯ್ಯ । ಇನಿತ್ಯಾಕೆ ಚಿಂತೆ ॥
ಬಂದುದ ನಾ ನೋಡಿಕೊಂಬೆ । ಬಣಗು ನೃಪರೊಳ್ಕುಂತೆ ॥೧೯೮॥

ನಿನ್ನ ಕಳುಹಿಸುವಾಗಲೆ । ನೀರಜಾಕ್ಷ ತಾನೊಲಿದು ॥
ಎನ್ನನಟ್ಟಿದನಲ್ಲಾ ಈ । ಯೆಃಶ್ವದಾರೈಕೆಗೆ ॥೧೯೯॥

ಪನ್ನಗಾರಿಯನನಿತ್ತ | ಪ್ಪಣೆಯ ಹಿಂಗದೆ ತಾನು ||
ಮನ್ನಿಪನಲ್ಲದೆ ಮನದೊ | ಳನ್ಯವೆಣಿಸಬಹುದೆ ||೨೦೦||

ಅಮಿತ ವಿಕ್ರಮದಿ ಬಂದ | ಅಖಿಳ ವೈರಿಬಲವನ್ನು ||
ಸಮರಭೂಮಿಗೌತಣವ | ಸಲಿಸಿ ಖಯಕೋಡಿಯಿಲ್ಲದೆ ||೨೦೧||

ನಿಮಿಷದೊಳ್ವಾಜಿಯ ತಂದು ನಿ | ನ್ನಡಿಯೊಳೊಪ್ಪಿಸುವೆನು ||
ಗಮಕದಿ ನಿಂತು ನೋಡೆನ್ನ | ಅಗಣಿತ ಪರಾಕ್ರಮವೀಗ ||೨೦೨||

**ರಾಗ ಕೇತಾರಗೌಳ ಅಷ್ಟತಾಳ**

ತಾತ ಚಿತ್ತೈಸು ಗೋಷ್ಪದಜಲಕ್ಹರಿಗೋಲ | ದ್ಯಾತಕಿಂದಿನಲಿ ತನ್ನ ||
ಜಾತನಾನಿರಲು ಸೇನೆಯ ನೋಯಿಸುವುದಿದು | ನೀತವೆ ಪೇಳು ಜೀಯ ||೨೦೩||

ಇವರೆಲ್ಲರನು ತೆಗೆಸೆನಗಪ್ಪಣೆಯ ನೀಡಾ | ಹವದೊಳು ಪರಬಲವ ||
ಸವರಿಸಿ ತುರಗವ ತಹೆನಲ್ಲದಿರೆ ಕರ್ಣ | ಕುವರನೆ ತಾನೆಂದನು ||೨೦೪||

ಎನುತರ್ಜುನನೊಳಪ್ಪಣೆಯಗೊಂಡು ವೃಷಕೇತು | ಘನವರೂಥವನಡರಿ ||
ಮುನಿದು ಪೇರಡವಿಗೈದುವ ದಾವಾಗ್ನಿಯವೊಲು | ಕನಲ್ದರಿಬಲವ ಪೊಕ್ಕ ||೨೦೫||

**ರಾಗ ಪಂತುವರಾಳಿ ಮಟ್ಟೆತಾಳ**

ಸೂರ್ಯಸುತನ ಸುತನು ರಥವ | ನೇರಿ ತವಕದಿಂದ ಬರುವ |
ಕ್ರೂರತನವನಾ ಸುಧನ್ವ | ದೂರದಿಂದ ಕಂಡು ಪೃಥೆಕು |
ಮಾರನೀತನಲ್ಲವೆನ್ನುತ || ವೃಷಧ್ವಜನ |
ವೀರನೀತನಾರುಯೆನ್ನುತ | ಮುದದಿ ತನ್ನ |
ತೇರನಿದಿರು ನಡೆಸಿ ನಿಲಿಸುತ | ತಿರುಹ ಬಿಲ್ಲಿ |
ಗೇರಿಸುತಲೆ ಕಣೆಯ ತಿರುಹುತ | ನಗುತ ನುಡಿದ |
ನೆಲವೊ ನೀನದಾರ ಕುವರನು | ನಿನ್ನ ಪೆಸರು | ಇಳೆಗೆದಾವ ಖುಷಿಯ ಪ್ರವರನು ||೨೦೬||

ಚಂಪಕಾಪುರಾಧಿಪತಿ ನಿ | ಶ್ಯಂಕ ಹಂಸಧ್ವಜಕುಮಾರ |
ನಾಂ ಪೆಸರು ಸುಧನ್ವನೆಂದು | ಸೊಂಪಿನಿಂದ ಕರೆವರೆನ್ನ |
ಗುಂಪಿನುಚಿತ ಪ್ರವರ ಕೇಳಿದು || ಮಧುಚ್ಛಂದನ ಪ |
ರಂಪೆಯ ವಂಶ ನಮ್ಮದು | ಅರಿಗಳೆದೆಯ |
ಬಿಂಪುಗಳನು ರಣದಿ ತರಿವುದು | ಎಂದು ಧರೆಯೊ |
ಳಂ ಪೆಸರ್ವಡೆದು ಮೆರೆವುದು | ಛಲದ ಬಿರುದು |
ಎಲವೊ ನೀನದಾರ ಕುವರನು | ನಿನ್ನ ಪೆಸರು | ಇಳಿಗೆದಾವ ಖುಷಿಯ ಪ್ರವರನು ||೨೦೭||

ಅಳುಕದಹಿತರೊಡನೆ ಕಾದಿ । ಗೆಲಿದು ಮೆಚ್ಚಿಸಬೇಕಲ್ಲದೆ ।
ಕುಲದ ಬೆಡಗನುಸಿರೆ ಕೇಳಿ । ಕಲಿಗಳಳುಕುವರೆ ಕೇಳಾದ ।
ಡೆಲವೊ ಕಾಶ್ಯಪಾ ಮುನೀಶನ ॥ ವಂಶರಾವು
ಜಲಜಮಿತ್ರಪುತ್ರ ಕರ್ಣನ । ಕಂದ ಲೋಕ ।
ದೊಳಗೆಯೆನ್ನ ವೃಷಭಕೇತನ । ನೆಂದು ಕರೆವ ।
ರೊಲಿದು ದೇವಕಿಯ ನಂದನ । ಫಲುಗುಣನ ।
ಕುದುರೆಯನ್ನು ಕಟ್ಟಿ ಕೆಡದಿರು । ಬಂದು ನರನ । ಪದದೊಳೆರಗಿ ಬದುಕಿಕೊಂಡಿರು । ॥೨೦೮॥

ಬಿಡೆವು ನಾವಿನ್ನಶ್ವವನ್ನು । ಕೆಡುವ ನಿಮ್ಮ ಧರ್ಮಸುತನು ।
ಜಡಜನೇತ್ರ ಜಗದಿ ಭಕ್ತ । ರೊಡೆಯನಲ್ಲದರ್ಜುನಗೆ ವಿಂ ।
ಗಡಿಸಿ ಕೊಟ್ಟರುಂಟೆ ಪೇಳಿನ್ನು ॥ ನಿನ್ನನೀಗ
ಬಡಿದು ರಣದಿ ಬೀಳಹೊಯ್ವೆನು । ನಿಮ್ಮವರನು ।
ಬಿಡದೆ ಯಮನ ಬಳಿಯೊಳಿಡುವೆನು । ನರನ ಬಿಂಕ ।
ಬಿಡಿಸಿ ಹರಿಯ ಬರಿಸಿಕೊಂಬೆನು । ನೋಡೆನುತ್ತ ।
ಕಡಿದ ವೃಷಧ್ವಜನ ಧನುವನು ನೋಡೆನುತ್ತ । ಕಡಿದ ವೃಷಧ್ವಜನ ಧನುವನು ॥೨೦೯॥

**ರಾಗ ಮಾರವಿ ಏಕತಾಳ**

ಭೂತಳೇಶ ಜನನಾಥ ಕೇಳು ವೃಷ ।
ಕೇತು ಸುಧನ್ವರ ನೂತನ ರಣವ ॥ ಭೂತ ॥ ಪ ॥

ಕರದ ಚಾಪ ಕತ್ತರಿಸಲು ಕೋಪದಿ । ಮೊರೆವುತ ಪೊಸ ಧನು ಶರಗಳ ಕೊಂಡತಿ ।
ತ್ವರಿತದಿ ಶರಗಳ ಸುರಿದು ಸುಧನ್ವನ । ಕರಿ ರಥ ತುರಗಗಳ ತರಿದನು ರಣದಿ ॥ ॥೨೧೦॥

ಹೊಡೆದಶ್ವಗಳಡಗೆಡಹಿದ ಸೂತನ । ಕೆಡಹಿದ ಸಿಂಧವ ಪುಡಿಗೆಯ್ದನು ರಥ ।
ದೊಡನೆ ಚಾಪಮಿಕ್ಕಡಿ ಮಾಡುತವನ । ಒಡಲೊಳಗಂಬನು ನಡೆಸಿದ ಬಿಡದೆ ॥ ॥೨೧೧॥

ಮಸೆಗಾಣಿಸಿ ರೋಷಿಸುತ ಸುಧನ್ವನು । ಪೊಸ ರಥವೇರಿ ಗರ್ಜಿಸಿ ಬಿಲ್ಗೊಂಡೆ ।
ಬ್ಬಿಸಿದ ಸರಳ್ಗಳ ಮುಸುಕುತಾ ಕ್ಷಣದೊಳು । ವೃಷಕೇತುವಿನ ಸಾಹಸವ ನಿಲಿಸಿದ ॥ ॥೨೧೨॥

ಧೀರ ನೀ ಕರ್ಣಕುಮಾರನಹುದೊ ಬಲು । ವೀರನಾದರೆ ಇದ ಸೈರಿಸೆನುತ ಮಹ ।
ಕೂರಲಗೊಂದನು ತೂರಿದನೆದೆಯನು । ದೋರುಗಳೆದು ಶರ ಪಾರುಗಾಣಿಸಿತು ॥ ॥೨೧೩॥

**ವಾರ್ಧಕ**

ರಣಪರಾಕ್ರಮಿ ಸುಧನ್ವನ ಶರಹತಿಗೆ ಕರ್ಣ ।
ತನಯ ಮೆಯ್ ಮರೆಯಲಾತನ ಸೂತನರಿವುತಾ ।
ಕ್ಷಣದಿ ತಿರುಹಲು ರಥವ ಹಿನ್ನೆಲೆಗೆ ಬಳಿಕಲದ ಕಂಡು ಕಡು ರೋಷದಿಂದ ॥
ಕನಕರಥವೇರಿ ಕಾರ್ಮುಕವನೊದರಿಸಿ ಪ್ರದ್ಯು ।

ಮ್ನನು ನಡೆಯಲಾಹವಕೆ ಕಂಡಾ ಸುಧನ್ವ ಕೇ |
ತನದ ಕುರುಪಿಂದವಂ ಕೃಷ್ಣಸುತನೆಂದರಿದು ಇದಿರಾದನತಿ ತವಕದಿ ||೨೧೪||

**ರಾಗ ಶಂಕರಾಭರಣ ಮಟ್ಟೆತಾಳ**

ಕಲಿ ಸುಧನ್ವ ಕಡುಗಿ ರಥವ | ನಿಲಿಸಿ ಶರವ ತೂಗುತೆಂದ |
ನೆಲೆ ಪ್ರದ್ಯುಮ್ನ ನಿನ್ನ ಬಾಣ | ಗಳಿಗೆ ಸ್ತ್ರೀಯರು ||
ಬಳಲ್ವರಲ್ಲದೆ ಭಾರಿಭುಜದ | ಗ್ಗಳಿಕೆಯುಳ್ಳ ವೀರರ್ ನಿನಗೆ |
ಅಳುಕರ್ ನೋಡೆನುತ್ತ ಸುರಿದ | ಬಲು ಶರಂಗಳ ||೨೧೫||

ಶರಗಳಿಂದ ಶರಗಳನ್ನು | ತರಿವುತೆಂದನೆಲವೊಗಲ್ದ
ಪುರುಷಪ್ರಕೃತಿಗಳನು ತನ್ನ | ಉರುತರಾಸ್ತ್ರದಿ ||
ಬೆರಸುತೊಂದುಗೊಳಿಪೆ ಕೇಳ್ಸಂ | ಗರದೊಳಿದಿರಾಂತವರ ಸುರರ |
ಪುರಿಗಟ್ಟುವೆ ನೋಡೆನುತ ಸುರಿದ | ಸರಳಸಾರವ ||೨೧೬||

ಪರಮ ಭಾಗವತರು ನಾವು | ಸುರರ ಹಂಗಿಲ್ಲೆಮಗೆ ನೀನು |
ಸುರತನುವನು ಶಿವನ ಫಣೆಗ | ಣ್ಣುರಿಗೆ ಒಪ್ಪಿಸಿ ||
ಮರಳಿ ಮನುಜನಾದೆ ನಿನ್ನ | ಸುರರ ಕೂಡಿಸುವೆನುಯೆಂದು ||
ಸರಳ ಕಡಿದು ಸುರಿದನಮಿತ | ಶರದ ಮಳೆಗಳ ||೨೧೭||

ಫಡಫಡೆನುತಸ್ತ್ರಗಳ ಕಡಿದು | ನುಡಿದನೆಲೊ ಪರೋಪಕಾರ |
ಕೊಡಲನಿತ್ತೆ ಶಿವನ ಗಿರಿಜೆ | ಯೊಡಗೂಡಿಸಿದೆನು ||
ಮೃಡತಪಾರಿಯೆಂಬ ಪೆಸರ | ಪಡೆದೆ ನಿನ್ನ ತರಿದು ಪೆಸರ |
ಪಡೆವೆನೆಂದು ಸುರಿದನಾಗ | ನಿಡು ಸರಳ್ಗಳ ||೨೧೮||

ಕಡಲಶಾಯಿಯಣುಗನೆಂಬ | ಬಿಡೆಯಕಾನು ಇನಿತು ಕಯ್ಯ |
ತಡೆದೆ ವೀರನಾದೆಯೆನುತ | ಲೊಡನೆ ಕೋಪದಿ ||
ಜಡಿದು ದಿವ್ಯ ಶರವ ಕರ್ಣ | ಜಿಡಿಕೆಗೆಳೆದು ಬಿಡಲು ನೊಂದು |
ಅಡಚಿ ಮೂರ್ಛಿಸುತ್ತ ಮದನ | ನೊಡಲ ಮರೆದನು ||೨೧೯||

**ಭಾಮಿನಿ**

ಧರಣಿಪತಿ ಕೇಳ್ದೈ ಸುಧನ್ವನ |
ಶರಹತಿಗೆ ಸೈರಿಸದೆ ಮೂರ್ಛೆಗೆ |
ಸ್ಮರನು ತೆರಳಲು ಕಾಣುತಾ ಕೃತವರ್ಮನಿದಿರಾದ ||
ಧುರದೊಳಾತನ ಪರಿಭವಿಸಿ ಸಂ |
ಗರದಿ ಸಾತ್ಯಕಿಯನ್ನು ಸೋಲಿಸ |
ಲರಿತು ಕೋಪಾಟೋಪದಿಂದಿದಿರಾದನನುಸಾಲ್ವ ||೨೨೦||

**ರಾಗ ಶಂಕರಾಭರಣ ಮಟ್ಟೆತಾಳ**
ಧಿರುರೆಲಾ ಸುಧನ್ವ ಇದಕೊ ಧುರಕೆ ಬಂದೆನು ।
ಅರಿವೆಯಾನುಸಾಲ್ವನೆಂದು ಧರೆಯೊಳೆನ್ನನು ॥
ಹರಣದಾಸೆಯಿರೆ ಮಖಾಶ್ವ ಮರಳಿಯೊಪ್ಪಿಸಿ ।
ತೆರಳಿ ಧರ್ಮರಾಯಗೆರಗಿ ಇರು ನೀ ಜೀವಿಸಿ ॥೨೧೦॥

ಎನಗಿಲ್ಲಲವೊ ಧರ್ಮಸುತನ ಗಣನೆಗೊಳ್ಳೆನು ।
ನಿನಗೆ ಮೂಲ ಧರ್ಮರಾಯನ ಕಾಣಿಸುವೆನು ॥
ಕ್ಷಣದಿ ನೋಡೆನುತ ಸುಧನ್ವ ಕಣೆಯನೆಚ್ಚನು ।
ದನುಜನದ ಕತ್ತರಿಸಲಾಗ ಕನಲುತೆಂದನು ॥೨೧೧॥

ಬಡ ನೃಪಾಲ ಪಡೆದ ಸಣ್ಣ ಹುಡುಗನೆನುತಲಿ ।
ಬಿಡೆಯಕಾನು ಬಿಟ್ಟರೀಗ ಸಿಡಿದೆ ಮನದಲಿ ॥
ತಡೆದುಕೊಳ್ಳೆನುತಲಸ್ತ್ರ ಬಿಡೆ ಮೈಮರೆವುತ ।
ಪೊಡವಿಗಾ ಸುಧನ್ವ ಬೀಳುತೊಡನೆಚ್ಚರಿವುತ ॥೨೧೨॥

ದುರುಳಗೆಂದ ಪೆಣನೆ ನಿನ್ನ ಶರಕೆ ಬೆದರ್ವೆನೆ ।
ಧುರದಿ ಯಮನಪುರವ ಪೊಗಿಸದಿರದೆ ಬಿಡುವೆನೆ ॥
ತೆರನ ನೋಡೆನುತ್ತ ವೈಷ್ಣವಾಸ್ತ್ರವೆಸೆಯಲು ।
ಭರದೊಳಾನುಸಾಲ್ವ ಬಿದ್ದ ತಿರುಗಿ ರಥದೊಳು ॥ ॥೨೧೪॥

**ವಾರ್ಧಕ**
ವೀರ ವೈಷ್ಣವ ಸುಧನ್ವಾಸ್ತ್ರದಿಂದನುಸಾಲ್ವ ।
ಶಾರೀರಮಂ ಮರೆದು ಮೂರ್ಛೆಗೊಳ್ಳಲು ಬಳಿಕ ।
ಹಾರಿಸಿದ ರಥವನರ್ಜುನನ ಹುಡುಕುತ ಪರಬಲವ ಪೊಕ್ಕು ಸವರುತಿರಲು ॥
ಕಾರಣವ ಕಲಿಯೌವನಾಶ್ವಾದಿಗಳು ಕಂಡು ।
ತೇರನಡರುತ್ತಲಾಹವಕಯ್ದಲನುವಾಗ ।
ಲಾರಿಗಂಜುವನಲ್ಲವೆನುತವರ ನಿಲಿಸುತರ್ಜುನ ತಾನೆ ಪೊರಟ ರಣಕೆ ॥೨೧೫॥

**ರಾಗ ಆಹೇರಿ ಝಂಪೆತಾಳ**
ರಥವೇರಿ ನಡೆದಜರ್ನುನನು । ಅತಿ । ರಥ ಸುಧನ್ವನಿದಿರಾಗುತರಿವಿಜಯನು ॥
ರಥವೇರಿ ನಡೆದನುರ್ಜುನನು ॥ ಪ ॥

ತೇರ ಚಮತ್ಕೃತಿ ತುರಗಗಳ ಖುರ ಪುಟಾಧ್ವಾನ ।
ಭೋರಿಡುವ ದೇವದತ್ತದ ಘೋಷ ಬಿಲ್ಲ ಠೇಂ ।
ಕಾರ ಸಿಂಧದ ತುದಿಯ ಹನುಮನಬ್ಬರಣೆ ಕರ ।
ವೇರಿಸುತ ಪೊಗಳ್ವ ಪಾಠಕರ ಜಯ ನಿನದಗಳ ।
ವಾರ ಮುಂಬರಿವ ಗಜಘಟೆಯ ಘಂಟಾರವಗ ।
ಳೋರಣಿಪ ಶಸ್ತ್ರಪಾಣಿಗಳ ಕಣಿಕಟಿಲ ।
ವೀರಭಟರತಿ ಕೀರು ಕಿಲರವಗಳೊಂದಾಗಿ ।
ಈರೇಳು ಲೋಕ ಬೆದರಿಸಲು ಬೀಭತ್ಸುವಿನ ।
ಘೋರ ಸಂಗ್ರಾಮವೆಂದರಿದಬುಜಭವಮುಖ್ಯ ।
ರೇರಿ ವೈಮಾನಿಕದಿ ನಿಂದು ನೋಡಿದರು ॥ ರಥವೇರಿ ॥೨೧೭॥

ಸುರಪಾಲಕನ ಮಿತ್ರ ಸೋಮವಂಶಪವಿತ್ರ ।
ತರುಣಿಕುಂತಿಕುಮಾರ ತ್ರಿಜಗಕೇಕೋವೀರ ।
ಧುರವಿಜಯ ದೋರ್ದಂಡ ಧರಣಿಪಾಲರ ಗಂಡ ।
ಮರೆಹೊಕ್ಕವರ ಕಾಯ್ವ ಮಾರಾಂತವರ ಕೊಲ್ವ ।
ಶರಧಿಸಮಗಂಭೀರ ಸುಜನಜನಮಂದಾರ ।
ಕುರು ಕುಲಾಂಬುಧಿಚಂದ್ರ ಕುಜನೇಭಕೆ ಮೃಗೇಂದ್ರ ।
ವರ ವೃಕೋದರನನುಜ ಒಲಿದವರ ಸುರಭೂಜ ।
ಮುರಮರ್ದನನ ಮಿತ್ರ ಮಾನನಿಧಿ ಸುಚರಿತ್ರ ।
ಸರಿಯಿಲ್ಲನಿನಗೆಂದು ಸಕಲವಂದಿಗಳಂದು ।
ಕರವೆತ್ತಿ ಪೊಗಳಿದರು ಕೂಡೆ ಪಾಠಕರು ॥ ರಥವೇರಿ ॥೨೧೮॥

ಧುರದಿ ದ್ರುಪದನ ಕಟ್ಟಿ ತಂದ ಧೀರನ ತೋಟಿ ।
ಹೊಡೆದು ಲಾಂಛನವ ನೃಪಪಡೆಯ ಗೆಲ್ದನ ತೋಟಿ ।
ಬಿಡದೆ ಖಾಂಡವವನವ ಅನಲಗಿತ್ತನ ತೋಟಿ ।
ಅಡಸಿ ನವಖಂಡಾಧಿಪರ ಜಯಿಸಿದನ ತೋಟಿ ।
ಮೃಡನ ಮೆಚ್ಚಿಸಿ ಪಾಶುಪತವ ಪಡೆದನ ತೋಟಿ ।
ನಡೆಸುತೈರಾವತವ ಚರಿಸುತದವನ ತೋಟಿ ।
ತೊಡಕು ಬೇಡೊಂದೊದರಿದವು ಕಹಳೆ ಕೋಟಿ ॥ ರಥವೇರಿ ॥೨೧೯॥

**ರಾಗ ಕೇದಾರಗೌಳ ಅಷ್ಟತಾಳ**

ಸಡಗರದಮಿತ ಸಂಭ್ರಮದಿ ವರೂಥವ । ನಡೆಸುತುತ್ಸಾಹದಿಂದ ॥
ತಡೆದು ಸುಧನ್ವನಿದಿರು ನಿಲಿಸೆ ಕಂಡು । ನುಡಿಸಿದನರ್ಜುನನ ॥೨೧೯॥

ಸೃಷ್ಟಿಗರ್ಜುನನೆಂಬವನೆ ನೀನು ನಿನ್ನಶ್ವ । ಕಟ್ಟಿಕೊಂಡಿಹೆವು ನಾವು ॥
ಬಿಟ್ಟು ಪೋಪೆಯೊ ಬಿಡಿಸುವೆನೆಂಬ ಬಿಂಕವೊ । ತಟ್ಟನೆ ಪೇಳೆಂದನು ॥೨೨೦॥

ಹುಡುಗ ನೀನು ನಿನ್ನ ಬೆಡಗಿನ ನುಡಿಯ ಕ | ಟ್ಟಿಡು ನಮ್ಮ ಹಯವ ಬಿಡು ||
ಪಡೆಯನ್ನು ಕೊಂಡು ನಮ್ಮೊಡನೆ ತೆರಳು ನಿನ್ನ | ಒಡಗೊಂಬೆ ಧನವ ಕೊಡು ||೩೩೦||

ಮೂಢನೆಂಬೆನೆ ನಿನ್ನ ರೂಢಿಯ ಭಟನೆಂದು | ಆಡುತಿಹರು ಕೆಲರು ||
ಮಾಡದೆ ಯುದ್ಧವ ಹಯವನು ದ್ರವ್ಯವ | ಬೇಡುವ ದ್ವಿಜನೆ ನೀನು ||೩೩೧||

ಭೂತಳದಲಿ ಸಾರಿ ಕೊಲ್ಲುವುದಿದು ರಾಜ | ನೀತಿಯ ಧರ್ಮವಿದು ||
ನೀ ತರಳನು ನಿನ್ನೊಳೊಲ್ಲೆ ರಣವ ನಿನ್ನ | ತಾತನ ಕರೆಸಿಕೊಡು ||೩೩೩||

ರನ್ನದುಪ್ಪರಿಗೆಯನೇರಲರಿಯದೆ ಮೇರು | ವನ್ನು ಬಯಸುವಂದದಿ ||
ಎನ್ನೊಳು ಸೆಣಸಿ ಜಯಿಸದೆ ಪಿತನನು ಕರೆ | ಸೆನ್ನುವರೇ ಧುರದಿ ||೩೩೪||

ಎಳೆಯವ ನಿನ್ನನು ಕೊಲಲನುಚಿತವೆಂದು | ತಿಳುಹಿದೆ ಧರ್ಮವನು ||
ಕೊಳುಗುಳದಲಿ ಸಾವ ಛಲವುಳ್ಳಡದು ಪುಣ್ಯ | ಫಲವೆಂದು ತೆಗೆದೆಚ್ಚನು ||೩೩೫||

**ರಾಗ ಶಂಕರಾಭರಣ ಮಟ್ಟೆತಾಳ**
ಸೋಜಿಗವೇನೆಂಬೆನು ಸುಧನ್ವಾರ್ಜುನರಾಹವವ |
ಮೂಜಗದೊಳೆಣೆಗಾಣೆನು ಹೇ ಜನಮೇಜಯನೆ || ಪ ||

ಕ್ರೂರತ್ವದಿ ನರನೆಸೆದಿಹ ಕೂರಂಬುಗಳನು ಕಡಿಯುತ |
ತೂರುತ ಶರಗಳ ಕುಂತಿಕುಮಾರನೊಳಿಂತೆಂದ ||
ಮಾರಮಣನ ಕರೆಸಿಕೊ ಹುಲು ಸಾರಥಿಯಿಂದಲಿ ಬರಿದೇ |
ಹೋರಲುಬೇಡೆನುತಸ್ತ್ರವ ಹೇರಿದನಾ ಕ್ಷಣದಿ ||೩೩೬||

ಹುಲು ಭೂಪನ ಹುಡುಗನೆ ನಿನ್ನಳುಕಿಸುವರೆ ಹರಿಯೇತಕೆ |
ಬಲುಹುಳ್ಳಡೆ ತಡೆಗಡೆ ಕೇಳೆಲೊ ಎನುತಸ್ತ್ರಗಳ ||
ತುಳುಕಿದ ವರ್ಷಾಕಾಲದ ಮಳೆಯಂದದಿ ಮೇಲ್ವರಿಯಲು |
ಬಳಿಕದ ಕತ್ತರಿಸಿದ ಥಳಥಳಿಸುವ ಶರಗಳಲಿ ||೩೩೭||

ದಿಟ್ಟ ಸುಧನ್ವನು ಶರಗಳ ತೊಟ್ಟರ್ಜುನಗೆಂದನು ನಿ |
ನ್ನೊಟ್ಟಿಗೆ ಬೇಗದಿ ದನುಜಘರಟ್ಟನು ಒದಗದಿರೆ |
ಕೆಟ್ಟವ ನೀನಹೆ ಕೇಳ್ ಮನಮುಟ್ಟೀಗಲೆ ಹರಿಯನು ನೆನೆ |
ಕುಟ್ಟುವೆ ನೋಡೆನುತಸ್ತ್ರಗಳೊಟ್ಟಿದನಂಗದಲಿ ||೩೩೮||

ಪೊಸ ಮಸೆಯತಿ ವಿಶಿಖಂಗಳು ಮೊಸೆಗಾಣಿಸಲೊಸರುತ ಬಿಸಿ |
ಬಿಸಿನೆತ್ತರು ಪಸರಿಸೆ ರೋಷಿಸುತರ್ಜುನ ಕಡುಗಿ ||

ಪಸುಳೆಯನಸಮಸೆಯೆನು ತಾಗಿಸಿ ರಸೆಗೊರಗಿಸುವೆನು ತಾ ।
ತಸಮದ ರವಿರಸುಮೆಯ ಶರವೆಸೆದನು ಸಾಹಸದಿ ॥೩೩೯॥

ಕೊಚ್ಚಿದ ಶರವ ಸುಧನ್ವನು ಎಚ್ಚನು ಪುನರಪಿ ಪಾರ್ಥನು ।
ಕೊಚ್ಚಿದರವನೆಚ್ಚನು ಬಳಿಕೆಚ್ಚರೆ ಕೊಚ್ಚಿದನು ।
ಎಚ್ಚರಿಕೆಯಲೆಚ್ಚನು ತಟ್ಟಚ್ಚುತ ಶರವಚ್ಯುತಸಖ ।
ನೆಚ್ಚರಿಯಂ ಮುಚ್ಚುತ ಬಲು ಚುಚ್ಚಿದವಸ್ತ್ರಗಳು ॥೩೪೦॥

**ರಾಗ ಭೈರವಿ ಅಷ್ಟತಾಳ**

ಭೂಪಾಲತನುಜ ಸುಧನ್ವನೆ । ಕೇ । ಳಾಪೇಕ್ಷಿಸುವೆ ಯುದ್ಧ ಸುಮ್ಮನೆ ॥
ತಾಪಿನಾಕಿಯು ಬಂದಡೊಮ್ಮೆಗೆ । ನಿಲ । ಲಾಪನೆಯೆನ್ನಯ ಮುಳಿಸಿಗೆ ॥೩೪೧॥

ನೀನಪ್ರಬುದ್ಧನು ಜಗದೊಳು । ದೈತ್ಯ । ಮಾನವರೊಳಗೆನ್ನ ಹಗೆಯೊಳು ॥
ಹಾನಿಯಾಗದೆ ಬದುಕಿದರಾರು । ಸು । ಮ್ಮಾನದ ವಿಕ್ರಮಗಳ ತೋರು ॥೩೪೨॥

ದ್ರೋಣ ಭೀಷ್ಮಾದಿಗಳೇನಾದ । ರೆಂದು । ಕಾಣದೆ ಪೋದೆಯ ನೀನದ ॥
ತ್ರಾಣವ ತೋರ್ಪೆ ನಾ ನಿನಗೆಂದು । ಪೊಸ । ಸಾಣೆಯ ಕೋಲ್ಗರೆದನು ನಿಂದು ॥೩೪೩॥

ಸೂತನ ಬಲ್ಮೆಯಿಂ ಕೌರವ । ರುರು । ಚಾರುರಂಗವ ಗೆಲ್ದ ಗೌರವ ॥
ಭೂತ ನೀನಾದೆಯದಲ್ಲದೆ । ನಿನ್ನ । ಮಾತಾಡಿಸುವರಾರಿನ್ನಿಲ್ಲದೆ ॥೩೪೪॥

ವಾರಿಜಾಕ್ಷನ ಕರೆಸೆನ್ನೊಳು । ನಿನ್ನ । ಆರುಭಟೆಯ ತೋರು ಧುರದೊಳು ॥
ಸಾರನ್ನೆಗ ಬರಿಯ ಬಳಲದೆ । ಎಂದು । ವೀರ ಸುಧನ್ವನು ತಡೆಯದೆ ॥೩೪೫॥

ಸರ್ರನೆ ಸೆಳೆದೊಂದು ಬಾಣವ । ಬಿಡೆ । ಬಿರ್ರನೆ ಪೋಗಿ ವರೂಥವ ॥
ಧಿರ್ರನೆ ಬುಗುರಿಯ ತೆರದೊಳು । ಗಾಲಿ । ಚಿರ್ರನೆ ತಿರುಗಿತಾ ಕ್ಷಣದೊಳು ॥೩೪೬॥

**ವಾರ್ಧಕ**

ಪೂತುರೆ ಸುಧನ್ವ ಸತ್ತ್ವಾತಿಶಯದಿಂದ ವಿ ।
ಖ್ಯಾತನಹೆ ಮದ್ರಥವನೀ ತೆರದೊಳೆಸುವರಂ ।
ಪಾತಾಳ ಸುರನಿಳಯ ಭೂತಳದ ಪಟುಭಟರ ವ್ರಾತದೊಳ್ ಕಾಣೆನಿನ್ನು ॥
ನೀ ತರಳನಕಟ ಬರಿದೇತಕಳಿದಪೆ ನಿನ್ನ ।
ತಾತನಂ ಬರಹೇಳು ಘಾತಿಸುವರಲ್ಲ ನ ।
ಮ್ಮೀ ತುರಂಗಮವ ಬಿಡು ಧಾತುಗೆಡಬೇಡೆನುತಲಾತನಂ ನರನೆಚ್ಚನು ॥೩೪೭॥

**ಭಾಮಿನಿ**

ಎಲೆ ಧನಂಜಯ ಕೇಳು ನಿನ್ನಲಿ ।

ಹಲಬರಿರ್ದಡದೇನು ಕೃಷ್ಣನ ।
ಲಲಿತ ಸಾರಥ್ಯಂಗಳಿಲ್ಲದೆ ಸಮರಮಧ್ಯದೊಳು ॥
ಹುಲು ಪರಾಕ್ರಮಿ ಸೂತನಿಂದಲಿ ।
ಗೆಲವಹುದೆ ನೀ ಮರುಳೆಲಾ ಬರಿ ।
ದಲಸದಿರು ನಡೆ ಹಸ್ತಿನಾವತಿಗೆಂದು ತೆಗೆದೆಚ್ಚ ॥೩೪೮॥

**ವಾರ್ಧಕ**

ಈ ತೆರದೊಳಖಿಳ ದಿವ್ಯಾಸ್ತ್ರಂಗಳೆಸುಗೆಯಿಂ ।
ಚಾತುರ್ಯದಿಂದೊರ್ವರೊರ್ವರಂ ಗೆಲ್ವ ಸ ।
ತ್ತ್ವಾತಿಶಯದಿಂದ ಕಾದಿದರಾ ಸುಧನ್ವಾರ್ಜುನರು ಬಳಿಕ ರೋಷದಿಂದ ॥
ಭೀತಿಗೊಳೆ ಮೂಜಗಂ ತೆಗೆದು ಬ್ರಹ್ಮಾಸ್ತ್ರಮಂ ।
ಶ್ವೇತವಾಹನನಾರ್ದೆಸಲ್ಕೆ ಹಂಸಧ್ವಜನ ।
ಜಾತಂ ಪ್ರತೀಕಾರಕಾ ಪಿತಾಮಹ ಶರದೊಳೆಚ್ಚೊಡನೆ ಬೊಬ್ಬಿರಿದನು ॥೩೪೯॥

**ಭಾಮಿನಿ**

ಕಣದಿ ಬ್ರಹ್ಮಾಸ್ತ್ರಂಗಳೆರಡುರೆ ।
ಹೆಣಗಿ ತಾವಡಗಲ್ಕೆ ರೋಷದಿ ।
ಕುಣಿವ ತುಟಿಗಳನೌಡುಗಚ್ಚುತ ಪಾರ್ಥನಕ್ಷಯದ ॥
ಕಣೆಯ ಮಳೆಯನು ಕರೆಯೆ ತುಂಬಿತು ।
ಗಣನೆಯಿಲ್ಲದೆ ಧರೆಯ ಮೇಲದು ।
ಕ್ಷಣದಿ ಸವರಿ ಸುಧನ್ವ ನುಡಿದನು ಸಲೆ ಪಚಾರಿಸುತ ॥೩೫೦॥

**ರಾಗ ಯಮುನಾಕಲ್ಯಾಣಿ ಮಟ್ಟೆತಾಳ**

ಭಲಾ ವೀರನೇ । ನೋಳ್ಪುದೇನು ಧೀರನೆ ॥
ಕಿರೀಟಿ । ಭಲಾ ಧೀರನೆ ॥ ಪ ॥

ಭಲ ಭಲರೆ ಶೂರನೆ । ಕಲಹದಲ್ಲಿ ಮೆಚ್ಚಿದೆ ॥
ಭಲಾ ವೀರನೆ ॥ ಅ.ಪ ॥

ಶಿವನ ಕೂಡೆ ಸೆಣಸಿದಂಥ । ಹವಣವೆಲ್ಲಿದೆ ॥
ದಾ । ನವ ನಿವಾತಕವಚರ್ಗೆಲಿದ । ಶೌರ್ಯಮೆಲ್ಲಿದೆ ॥ ಭಲಾ ॥೩೫೦॥

ಕೌರವಾದಿ ಸುಭಟರನ್ನು । ಸವರಿ ರಣದೊಳು ॥
ನೀ । ಸ್ಯೆರಿಸಿರ್ದ ಪೌರುಷಂಗಳ್ಯಾತಕೆನ್ನೊಳು ॥ ಭಲಾ ॥೩೫೧॥

ಬರಿದೆ ಬಳಲಬೇಡ ಸಾಕು । ಕರೆಸು ಕೃಷ್ಣನ ॥
ಮುಂ । ದಿರದೆ ನಿನ್ನಯ ಪರಾ । ಕ್ರಮವ ತೋರ್ ಭಲಾ ॥ ಭಲಾ ॥೩೫೨॥

**ಕಂದ**

ಎನುತೆಚ್ಚಂಬುಗಳ್ಛರಕಂ ।
ಘನ ರಥಮುಂ ಕುಲಾಲಚಕ್ರದವೋಲ್ ತಿರುಗಲ್ ॥
ಹನುಮಂ ಭ್ರಮಣೆಯ ತಾಳ್ದಿರ ।
ಲನುಪಮ ಹಯುಮಂ ಬಳಲಲು ಸಾರಥಿ ಮಡಿದಂ ॥೩೫೪॥

**ರಾಗ ನಾದನಾಮಕ್ರಿಯೆ ರೂಪಕತಾಳ**

ವ್ಯಥಿಸಿ ಸೂತನಳಿಯೆ ಸಾ । ರಥಿಕೆಯನ್ನು ತಾನೆ ಗೆಯ್ದು ।
ಪ್ರತುಳ ಬಲ ಕಿರೀಟಿ ಮಹಾ । ರಥದಿ ಗಜರುತ ॥
ಪ್ರತುಳ ಬಲ ಕಿರೀಟಿ ಮಹಾ । ರಥದಿ ಗಜರುತೆಂದನಿವನ ।
ಮಥಿಸದಿರಲು ವ್ಯರ್ಥವೆನ್ನ । ಪೃಥೆಯು ಪಡೆದುದು । ಪೃಥೆಯು ಪಡೆದುದು ॥೩೫೫॥

ನೆಲಕೆ ಭಾರವಾಗಿ ಇಂದು । ಕುಲಪರಂಪರೆಯ ನೃಪರ ।
ವಿಲಸತ್ಕೀರ್ತಿಯೆನ್ನ ಕಡೆಯಿಂ । ಮಲಿನವಾಯಿತೆ ॥
ವಿಲಸತ್ಕೀರ್ತಿಯೆನ್ನ ಕಡೆಯಿಂ । ಮಲಿನವಾಯ್ತೆ ಶಿವ ಶಿವಿನ್ನು ।
ಸುಲಲಿತಾಶ್ವಮೇಧ ಕೆಡುವ । ಕೆಲಸವಾಯಿತೆ । ಕೆಲಸವಾಯಿತೆ ॥೩೫೬॥

ದೇವ ಕೃಷ್ಣ ನೀನು ನಮ್ಮ । ಭಾವನೆಂದು ನಂಬಿ ಜಗದಿ ।
ಕೋವಿದಶ್ವವನ್ನು ಪಿಡಿದು । ಜೀವಿಸಿದೆವಲ್ಲೈ ॥
ಕೋವಿದಶ್ವವನ್ನು ಪಿಡಿದು । ಜೀವಿಸಿದೆವಲಯ್ಯ ಮುಂದಿ ।
ನ್ನೀ ವಿರೋಧಿಯೊಡನೆ ಕಾದ । ಲಾವ ಪರಿಯೊಳು । ಆವ ಪರಿಯೊಳು ॥೩೫೭॥

**ಭಾಮಿನಿ**

ಅರಸ ಕೇಳರ್ಜುನನು ಧ್ಯಾನಿಸ ।
ಲರಿತನಚ್ಯುತನಿಭಪುರದೊಳ್ ।
ಚ್ಚರಿಸಿದನು ಹಂಸಧ್ವಜನ ಧರಧುರವ ಧರ್ಮಜಗೆ ॥
ಒರೆದು ಧೈರ್ಯವ ವಹಿಲದಲಿ ತಾ ।
ಗರುಡವಾಹನನಾಗಿ ಭಕ್ತೋ ।
ದ್ಧರಣನಯ್ತಂದೊದಗಿದನು ಪಾರ್ಥಂಗೆಯತಿ ಜವದಿ ॥೩೫೮॥

**ರಾಗ ಪಂತುವರಾಳಿ ಆದಿತಾಳ**

ಬಂದ ತತ್‌ಕ್ಷಣದೊಳಲ್ಲಿಗೆ । ಗೋವಿಂದನೊಲಿದು ।
ಬಂದ ತತ್‌ಕ್ಷಣದೊಳಲ್ಲಿಗೆ ॥ ಪಲ್ಲವಿ ॥

ಕಶ್ಯಪ ಮುಖ್ಯ ಮುನೀಶ್ವರರುಗಳಾ । ಲಸ್ಯಮಿಲ್ಲದೆ ತಾವ್ ಮಾಡುವ ಧ್ಯಾನಕ ।
ದೃಶ್ಯವೆನಿಪ ಪರಬ್ರಹ್ಮನು ಪಾರ್ಥಗೆ । ವಶ್ಯನೆಂಬುದ ನಿರ್ಧರಿಸುವ ತೆರದಿ ॥
ಬಂದ ತತ್‌ಕ್ಷಣದೊಳಲ್ಲಿಗೆ ॥೩೫೯॥

ಗರುಡನ ಗರಿಗಳ ಬೀಸುವ ಗಾಳಿಗೆ | ಜರಿದುದಜಾಂಡಘಟವದು ದುರ್ಜನ |
ರುರಸ್ಥಳವನುಂ ಗದಗದಿಸಲು ಭಕ್ತರ | ನೆರೆ ಸಲಹುವ ಬಿರುದ್ಘೊಗಳಿಸಿಕೊಳುತ ||
ಬಂದ ತತ್ ಕ್ಷಣದೊಳಲ್ಲಿಗೆ ||೩೮೦||

ಸಂಗರದೊಳು ನೆರೆದಿರುತಿಹ ಸರ್ವರ | ಕಂಗಳಿಗಚ್ಚರಿಯಾಗುವ ತೆರದಿಂ ||
ತುಂಗ ಪರಾಕ್ರಮಿ ಪಾರ್ಥನ ರಥದೊಳು | ಹಿಂಗದೆ ಮಂಡಿಸಲೆನುತ ವಿನೋದದಿ ||
ಬಂದ ತತ್ಕ್ಷಣದೊಳಲ್ಲಿಗೆ  ||೩೮೧||

**ಭಾಮಿನಿ**
ಮೊಳಗಿದವು ನಿಸ್ಸಾಳಕೋಟಿಯು |
ದಳದೊಳಗೆ ತಮತಮಗೆರಗುತಿರೆ |
ಕಳಕಳಿಸುತುತ್ಸಹದ ರಭಸವನಬ್ಧಿ ಘೋಷದಲಿ ||
ಬಳಿಕ ಚರಣಕೆ ಮಣಿದ ಪಾರ್ಥನ |
ಸೆಳೆದು ಬಿಗಿದಪ್ಪುತಲೆ ತಾ ರಥ |
ದೊಳಗೆ ಕುಳಿತಶ್ವಗಳ ವಾಘೆಯ ಕೊಂಡನಾ ಹರಿಯು ||೩೮೨||

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಇನಿತು ನೋಡುತಲಾಗ ಭೂಪನ | ತನುಜ ತನ್ನಂತರದೊಳ್ ನಿತ್ಯದಿ ||
ನೆನೆವ ಮೂರ್ತಿಯು ನರನ ರಥದೊಳು | ಮಿನುಗುತಿಹುದ        ||೩೮೩||

ಕಂಡು ಪುಳಕೋತ್ಸವದ ಹರುಷದಿ | ದಿಂಡುಗೆಡೆದುರೆ ನಮಿಸಿ ತನ್ನಯ |
ಗಂಡುತನಕಿದು ಸಾಕು ತಾ ಕೈ | ಕೊಂಡ ಕೆಲಸ          ||೩೮೪||

ಆಯಿತಿನ್ನೇನೆನುತ ಕರದೊಳು | ಸಾಯಕವ ತಿರುಹತ್ತ ಮುಂದಿಹ |
ತೋಯಜಾಕ್ಷನ ನುತಿಸುತಿರ್ದನು | ಬಾಯೊಳಂದು    ||೩೮೫||

**ವಾರ್ಧಕ**
ಜಯ ಚತುರ್ಮುಖಜನಕ ಜಯ ಚಾರು ಚಾರಿತ್ರ |
ಜಯ ಚಿದಾನಂದ ಜಯ ಚೀರಾಂಬರಾಜ್ಞೇಯ |
ಜಯ ಜಯ ಚ್ಯುತಿದೂರ ಜಯ ಚೂಡಬರ್ಹ ಶೋಭಿತ ಚೇತನಸ್ವರೂಪ ||
ಜಯ ಚೈದ್ಯಮಥನ ಜಯ ಚೋದಿತಾಖಿಳ ಲೋಕ |
ಜಯ ಚೌರ್ಯಕೃತವಿಲಯ ಜಯ ಚಂಡಶತಕಿರಣ |
ಜಯ ಚಕ್ರಧರನೆಂದು ಕಲಿ ಸುಧನ್ವಂ ಪೊಗಳ್ದನತಿ ತೋಷದಿಂ ಮನದೊಳು         ||೩೮೬||

**ಕಂದ**
ಘೋರತ್ರಯತಾಪದ ಸಂ |
ಸಾರವು ಸ್ಥಿರವಲ್ಲ ಸಂಗ್ರಾಮದಿ ತಡೆಯದೆ ದುರಿ ||

ತಾರಿಯ ಮೆಚ್ಚಿಸಿ ಮುಕ್ತಿಯ ।
ಸೂರೆಯ ಕೊಂಬೆನೆನುತ್ತಚ್ಯುತಗಿಂತೆಂದಂ ॥೩೯೭॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಎಂದನಾಗ ಸುಧನ್ವ ಶ್ರೀಗೋ । ವಿಂದ ಲಾಲಿಸು ಸತತ ಕುಂತೀ ।
ನಂದನರ ಪಾಲಿಸುವೆಯಪಜಯ । ಪೊಂದಗೊಡದೆ ॥೩೯೮॥

ಜಯವ ಪಾರ್ಥಗೆ ಪಾಲಿಸುವೆ ನಿ । ರ್ಣಯವ ಬಲ್ಲೆನು ದೇವ ಕೇಳ್ ಪ್ರತಿ ।
ಜ್ಞೆಯನು ಮಾಡಲಿಯೆನಲು ಕೇಳ್ದಾ । ವಿಜಯ ನುಡಿದ ॥೩೯೯॥

ಎಲವೊ ನಿನ್ನನು ಮೂರು ಬಾಣದಿ । ಕೊಲಲರಿಯದಾನುಳಿದೆನಾದರೆ ।
ಇಳೆಯೊಳತಿ ಕಿಲ್ಬಿಷರ ಗತಿಗಾ । ನಿಳಿವೆನೆಂದ ॥೩೭೦॥

ಎನಲು ಹರಿ ಕೋಪಿಸಿದ ನೀನೆ । ನ್ನನು ನುಡಿಸದಾಡಿದೆಯ ಭಾಷೆಯ ।
ಮಣಿವನಲ್ಲಿವನಾರ್ಗೆನಲು ನೃಪ । ತನಯ ನುಡಿದ ॥೩೭೧॥

ಇತ್ತ ಕೇಳೆಲೊ ಪಾರ್ಥ ನೀನೆಸು । ವಸ್ತ್ರ ಮೂರರ ನಡುವೆ ನಾನದ ।
ಕತ್ತರಿಸದಿರೆ ಕೃಷ್ಣರಾಯನ । ಭಕ್ತನಲ್ಲ ॥೩೭೨॥



**ರಾಗ ಕಾಂಭೋಜಿ ಝಂಪೆತಾಳ**
ಎನುತ ತೆಗೆದೆಚ್ಚನು ಸುಧನ್ವನರ್ಜುನನ ರಥ ।
ರಣದಿ ಹಿನ್ನೆಲೆಗೆ ಜಾರಿದುದು ॥
ದನುಜಾರಿ ಕಂಡು ರಥವನು ಸೈರಿಸುತಲರ್ಜು ।
ನನ ಮೊಗವ ನೋಡುತಿಂತೆಂದ ॥ ॥೩೭೩॥

ಮತವರಿಯದುಭ್ರಮಿಸಿ ನುಡಿದ ಭಾಷೆಯು ಜಯ ।
ದ್ರಥನ ಕಥೆ ಬಂದೊದಗಿತಲ್ಲ
ಅತಿ ಸತ್ಯಸಂಧ ಸೂನೃತ ಸಾಹಸಿಗನೀತ ।
ಮಥಿಸುವಡೆ ದಾರಿಗಳವಲ್ಲ ॥೩೭೪॥

ಪಿತನಾಜ್ಞೆಯನು ಮೀರದೆನ್ನನೇಕೋದೃಢದಿ ।
ಸತತ ಧ್ಯಾನಿಸುವ ಸದ್ವೃತಿಯ ॥
ಪೃಥಿವಿಲೇಕಪತ್ನೀವ್ರತನು ಕೊಲಲರಿದಿವನ ।
ತ್ರಿತಯಮೂರ್ತಿಗಳು ಮುನಿದರೆಯು ॥೩೭೫॥

ವೀರವೈಷ್ಣವನಿವನು ನಿನ್ನಿಂದಲೆನಗೀತ ।
ಸಾರಸದ್ಭಕ್ತನಾಗಿಹನು ॥
ಮೇರೆದಪ್ಪಿದೆ ನೀನು ಕೆಡಿಸಿದೆಯಕಟವಿನ್ನು ।
ಸೈರಿಸಲದೆಂತು ಕೇಳ್ ನಾನು ॥೩೭೬॥

ಅನ್ನಚಿಂತೆಯನುಳಿದು ಎನ್ನ ಭಜಿಸುವ ಭಕ್ತ ।
ರನ್ನು ಬಿಟ್ಟಿರುವುದಾನೆಂತು ॥
ನಿನ್ನನುಳುಹುವ ಬಿರುದು ಮುನ್ನವೇ ತಾಳ್ದಿರುವೆ ।
ಇನ್ನೇನ ಮಾಡಲಾನಿಂತು ॥೩೭೭॥

**ವಚನ ॥** ಇಂತೆಂದು ಶ್ರೀಕೃಷ್ಣನು ಅನುತಪಿಸುತಾಲೋಚನೆಗೆಯ್ಯುತಿರಲಾ ಸಮಯದೊಳ್ ಸುಧನ್ವನು ಏನೆಂದನು ಎಂದರೆ -

**ರಾಗ ಸೌರಾಷ್ಟ್ರ ರೂಪಕತಾಳ**
ತಿಳಿದೆನು ನಿನ್ನಯ ಚಿತ್ತದು । ಮ್ಮಳಿಕೆಯ ನಿಜದೊಲವ ।
ನ್ನಳಿವುದು ಕಾಯವು ಜಗದೊಳ । ದುಳಿವುವು ಕೀರ್ತಿಗಳು ॥೩೭೮॥

ಶ್ರೀಲೋಲನೆ ಕೇಳ್ ಪಾಂಡವ । ಪಾಲಕನೆಂಬೀ ಬಿರುದನು ।
ಮೂಲೋಕದಿ ಪಡೆದಿಹೆ ಇ । ನ್ನಾಲೋಚಿಸಲೇಕೆ ॥೩೭೯॥

ಮೇಳದಿ ತವ ಬಾಹುಜರಾವ್ । ಕಾಳಗದಲಿ ಹಿಮ್ಮೆಟ್ಟದೆ ।
ಕಾಲದಿ ತನುವನು ಒಪ್ಪಿಸಿ । ಸಾಲೋಕ್ಯವ ಪಡೆವೆ ॥೩೮೦॥

ಅಳುಕುವೆನೇ ನೋಡೆನುತಲಿ । ಸೆಳೆದೆಚ್ಚನು ಶರವೊಂದನು ।
ಹೊಳೆಯುತ ನಡೆದು ವರೂಥವ । ಕೊಳುತೆರಗಿತೇನೆಂಬೆ ॥೩೮೧॥

ಥಳಥಳಿಸುವ ಮಣಿರಥವದು । ತೊಲಗುತ ತಿರುಗುವ ಬುಗುರಿಯ ।
ಕುಲಗುರುವಂದದಿ ಗಾಲಿಗಳ್ । ನೆಲೆಗೊಳ್ಳದೆ ನಿಜಕೆ ॥೩೮೨॥

ತುರಗಂಗಳು ಬೆಂಡಾದುವು । ಉರುಳುತ ಗಾಲಿಗಳದ್ದವು ।
ತರಹರಿಸದೆ ಸಿಂಧದಿ ಪಲ್ । ಕಿರಿದನು ಹನುಮಂತ ॥೩೮೩॥

ಹರಿ ಫಲುಗುಣರಿಗೆ ಭ್ರಮಣೆಯು । ಶಿರಕಡರಿತು ಕೃಷ್ಣನು ತರ ।
ಹರಿಸುತಲೆ ಸುಧನ್ವನ ಭಾ । ಪುರೆ ಭಳಿ ಭಳಿರೆಂದ ॥೩೮೪॥

**ರಾಗ ಶಂಕರಾಭರಣ ಮಟ್ಟೆತಾಳ**
ಅರಸ ಕೇಳರ್ಜುನನು ರೋಷ । ಭರಿತನಾಗಿ ಶರವ ಪೂಡು ।
ತಿರಲು ಕೃಷ್ಣ ಮುನ್ನ ಗೋವರ್ಧನಾದ್ರಿಯ ॥

ಧರಿಸಿ ಗೋಕುಲವನು ಕಾಯ್ದ । ಭರಿತ ಪುಣ್ಯವೀಯೆ ಪಾರ್ಥ ।
ಭರದಿ ಸೆಳೆದು ಬಿಟ್ಟನಾ ಸುಧನ್ವನಿದಿರಿಗೆ ॥೩೮೫॥

ಇತ್ತೆ ದೇವ ನಿನ್ನ ಪುಣ್ಯ । ಸತ್ತ್ವವೀಗಲೆಸೆವ ಶರವ ।
ಕತ್ತರಿಸದಿರಲ್ಕೆ ನಿನ್ನ ಭಕ್ತನಲ್ಲೆಂದು ॥
ಕತ್ತರಿಸಿದ ಕಣೆಯ ಕಾ । ಋತ್ತಲಿವನ ಬಲದಿ ಕಹಳೆ ।
ಮೊತ್ತ ಸೂಳವಿಸಿದವಾಗ ಲರ್ತಿಯಿಂದಲಿ ॥೩೮೬॥

ಬಳಿಕಲೊಂದು ಶರವ ಪೂಡ । ಲೊಲಿದು ಕೃಷ್ಣಾವತಾರ ।
ದೊಳಗೆ ಗಳಿಸಿದತುಳ ಪುಣ್ಯ ಬಲುಹನೀಯಲು ॥
ಸೆಳೆದು ಬಿಟ್ಟನಾಗ ಪಾರ್ಥ । ಕಲಿಸುಧನ್ವ ಕಾಣುತದನು ।
ನಳಿನನೇತ್ರನೊಡನೆ ಪೇಳ್ದ ಚಳಕದಿಂದಲಿ
[ಕತ್ತರಿಸಿದ । ಹಿಳುಕ ಹಿಳುಕಿನಿಂದಲಾಗ ಕಳಕಳಿಸುತಲೆ] ॥೩೮೭॥

**ವಾರ್ಧಕ**
ಆಗಲತಿ ಕೋಪದಿಂದಾಲಿಗಳು ಕೆಂಪಡರ ।
ಲೀಗಲರ್ಜುನನ ಬಾಣಕೆ ನಿನ್ನ ಪುಣ್ಯಮಂ ।
ನೀಗಿದೆಯೆಲಾ ದೇವ ನೋಡು ಬಹ ದಿವ್ಯಾಸ್ತ್ರಮಂ ಕತ್ತರಿಸದಿರ್ದಡೆ ॥
ಭೋಗದೊಳರುಂಧತಿಯ ಕೂಡಿಹ ವಸಿಷ್ಠನಂ ।
ಪೋಗಿ ಕೊಂದವನ ದುರ್ಗತಿಗೆ ತಾನಿಳಿವೆನೆನು ।
ತಾಗಸದೊಳರ್ಕನಂತಯ್ತುಪ್ಪ ಸರಳಂ ಸುಧನ್ವನಿಕ್ಕಡಿಗೆಯ್ದನು ॥೩೮೮॥

**ರಾಗ ಶಂಕರಾಭರಣ ಮಟ್ಟೆತಾಳ**
ಸಂದುದೆರಡು ಶರವು ಉಳಿದು । ದೊಂದು ಶರದಿ ರಿಪುವ ಕೊಲುವೆ ।
ನೆಂದು ಪಾರ್ಥ ಕಣೆಯ ಪೊಡಲಂದು ಕೃಷ್ಣನು ॥
ಹಿಂದೆ ರಾಮಾವತಾರ । ದಿಂದ ಧರೆಯ ಪೊರೆದ ಪುಣ್ಯ ।
ವೃಂದದತುಳ ಸತ್ತ್ವ ಶರಕೆ ಹೊಂದಿಸಿ ತಾನು ॥೩೮೯॥

ಬಳಿಕ ಶರಕೆ ತ್ರೈಮೂರ್ತಿಗಳ । ನಿಲಿಸುತಾವಾಹಿಸುತ ಸತ್ತ್ವ ।
ಗೊಳಿಸುತಿರಲರ್ಜುನನ್ನು ಬಾಹುಗಳ ಚಪ್ಪರಿಸಲು ॥
ಕಲಿಸುಧನ್ವ ಕಾಣುತಾಗ । ಕಳವಳಿಸುತ ನಗುತ ನುಡಿದ ।
ನೆಲೆ ಮುರಾರಿ ನಿನ್ನ ಕರುಣೆಯಳತೆಯೊಳ್ಳಿತು ॥೩೯೦॥

**ರಾಗ ಭೈರವಿ ಏಕತಾಳ**
ಖಂಡವಿಲ್ಲದ ಪುಣ್ಯವನು । ಸೂರೆ । ಗೊಂಡವ ನಾನೋ ನರನೋ ॥
ಕೊಂಡಾಡದಿರ್ದೈ ಬರಿದೆ । ಉ । ದ್ದಂಡ ಶರವ ಬಿಡಿಸಿರದೆ ॥೩೯೧॥

ಅಂಬಿದ ಕಡಿಯದಿರೆನ್ನ । ಸುತ । ನೆಂಬಳೆ ಮಾತೆಯು ತನ್ನ ॥
ಕುಂಭಿನಿಯೊಳು ಸತಿ ಗಂಡ । ನೆಂದು । ನಂಬುವಳೇನು ಪ್ರಚಂಡ ॥೩೯೧॥

ತನುಜನೆ ತಾತಗೆ ನಾನು । ಕೇಳ್ । ಘನದೊಂದು ಪ್ರತಿಜ್ಞೆಯನು ॥
ವಿನಯದಿ ಕಾಶಿಯೊಳ್ ಬಂದು । ವಿ । ಪ್ರನುಸುರಗಂಗೆಯೊಳ್ ಮಿಂದು ॥೩೯೩॥

ಕ್ಷೇತ್ರೋಪವಾಸದೊಳಿರ್ದು । ಶಿವ । ರಾತ್ರಿಯ ದಿನದೊಳು ನಿಂದು ॥
ಶಾಸ್ತ್ರವಿಧಾನವನರಿತು । ತ್ರೈ । ನೇತ್ರ ವಿಶ್ವೇಶನ ಕುರಿತು ॥೩೯೪॥

ಬಿಡದರ್ಚಿಸುವನನೆದ್ದು । ತಡೆ । ದೆಡಗಾಲಿನೊಳುರೆವೊದ್ದು ॥
ಕೆಡಹಿದವನ ಗತಿ ಪೊಂದು । ವೆನು । ಕಡಿಯದಿರ್ದಡೆ ಸರಳಿಂದು ॥೩೯೫॥

ಎನುತಲಿ ಭುಜಗಳ ಹೊಯ್ದು । ನಿಜ । ಧನು ಠಂಕಾರವ ಗೆಯ್ದು ।
ಮನದಲಿ ರೋಷವನಾಂತ । ಕನ । ಲ್ದನು ಸುಧನ್ವನು ತಾ ನಿಂತ ॥೩೯೬॥

**ಭಾಮಿನಿ**

ಅನಕ ತ್ರೈಮೂರ್ತಿಗಳ ಶಕ್ತಿಯ ।
ವಿನುತ ರಾಮಾಯಣದ ಶಕ್ತಿಯ ।
ಘನ ಧನುರ್ವೇದದ ಸುಮಂತ್ರದ ಶಕ್ತಿಯಿಂದಾರ್ದು ॥
ಅನುಪಮ ಮಹಾಸ್ತ್ರವನು ರೋಷದಿ ।
ಕನಲ್ದು ಕಿವಿವರೆಗೆಳೆದನಾ ಕ್ಷಣ ।
ವೆನಿತು ಸತ್ತ್ವಾಧಿಕನೊ ಜಗದೊಳಗಾ ಧನಂಜಯನು ॥೩೯೭॥

**ರಾಗ ಶಂಕರಾಭರಣ ಮಟ್ಟೆತಾಳ**

ಜಡಿದು ಪಾರ್ಥನೆಸೆವ ಶರವು । ಕಿಡಿಯುಗುಳ್ದು ಬರಲು ಉಭಯ ।
ಪಡೆಯುನಡುಗಿತೇನನೆಂಬೆ ಕಡು ಪ್ರತಾಪವ ॥
ದೃಢದೊಳಾ ಸುಧನ್ವನೆಸೆದ । ಬಿಡದೆ ಪ್ರತ್ಯಸ್ತ್ರವನು ಬಂದು ।
ಕಡಿದುದಾಗ ಬರುವ ಶರವ ನಡುವೆ ಕೀಲಿಸಿ ॥೩೯೮॥

ಅಂದು ಅತುಳಸತ್ತ್ವದಸ್ತ್ರ । ಹಿಂದಣರ್ಧವಿರದೆ ಧರಣಿ ।
ಗಂದು ಉದುರಿದುದ ನಾನೇನೆಂದು ಪೇಳುವೆ ॥
ಮುಂದಣರ್ಧವಾ ಸುಧನ್ವ । ಕಂಧರವ ಕತ್ತರಿಸೆ ಹರಿ ಗೋ ।
ವಿಂದಯೆನುತ ಶಿರವು ಅಭ್ರಕಂದು ಚಿಗಿದುದು ॥೩೯೯॥

**ಭಾಮಿನಿ**

ಜಲಜಲೋಚನ ವಿಷ್ಣು ಲಕ್ಷ್ಮೀ ।
ನಿಲಯ ನಾರಾಯಣಯೆನುತ ನಭ ।

ದೊಳಗೆ ಹರಿನಾಮಾವಳಿಯನುಚ್ಚರಿಸುತಾ ತಲೆಯು ||
ಪೊಳೆವ ರಾಕೇಂದುವಿನ ಕಾಂತಿಯ |
ಲಿಳಿದುದಿಳೆಗಚ್ಯುತನ ಶ್ರೀ ಪದ |
ನಳಿನದೆಡೆಯಲಿ ಬಿದ್ದುದೆಲೆ ಜನಮೇಜಯ ಕ್ಷಿತಿಪ ||೪೦೦||

**ರಾಗ ತುಜಾವಂತು ಝಂಪೆತಾಳ**

ಏನೆಂಬೆನಾ ಸುಧನ್ವನ ಪುಣ್ಯಫಲವ |
ಶ್ರೀನಾಥನೆತ್ತಿಕೊಂಡನು ಕರದಿ ಶಿರವ || ಪ ||

ನೋಡಿದನು ಶಿರವ ಮುಂಡಾಡಿದನು ಫಣೆಗೆ ಫಣೆ |
ಜೋಡಿಸಿದನೇನ್ ಸುಕೃತ ಮಾಡಿದನೊ ಜಗದಿ ||
ಕೂಡಲಾತ್ಮಜ್ಯೋತಿ ರೂಢಿಯಲಿ ಬೆಳಗುತ ಸ |
ಗಾಢದಿಂದಯ್ದಿದನು ಪ್ರೌಢ ಸದ್ಗತಿಗೆ ||೪೦೧||

ಭುಜಗಶಯನನು ಕರದಿ ಪಿಡಿದು ಶಿರವನು ಹಂಸ |
ಧ್ವಜನ ಮುಂದಿಡಲಲ್ಲಿ ಬಿದ್ದುದಾ ಇಳೆಗೆ ||
ನಿಜಸುತನ ಶಿರವ ಕಾಣುತ ಮೂರ್ಛಿಸುತಲೆದ್ದು |
ಗಜರುತಲಿ ಗಾಢ ದುಃಖದೊಳಾಳ್ದನವನು ||೪೦೨||

**ರಾಗ ನೀಲಾಂಬರಿ ಏಕತಾಳ**

ಕಂದಾ ಕಂದಾ ಕಾಮರೂಪ | ಸಿಂಧುಸಮಪ್ರತಾಪ ||
ಇಂದಿದೇನೀ ಪರಿಯೊಳ್ ಧೈರ್ಯ | ಗುಂದಿತೇಕೋ ನಿನಗೆ ||೪೦೩||

ನಿನ್ನ ಬಿಟ್ಟಿನ್ನುಂಟೇನೊ ಮೋ | ಹನ್ನರಾದಾತ್ಮಜರು ||
ಪನ್ನಗಾರಿವಾಹನಗೇನ್ | ಚೆನ್ನಾಗಿ ತೋರಿದುದು ||೪೦೪||

ರಣಕೆ ಸನ್ನಾಹದೊಳಯ್ದಿ | ಕ್ಷಣದೊಳಶ್ವ ಪಿಡಿದು ||
ಅನಕದಿಂದರ್ಜುನನ ಕೂಡೆ | ಸೆಣಸಬೇಕಲ್ಲಯ್ಯ ||೪೦೫||

ಮಗನೇ ನೀನಿಂತಳಿದ ಮೇಲೆ | ಪಗೆಯ ಗೆಲುವುದೆಂತು ||
ಮೊಗವನೆತ್ತಿ ಮಾತನಾಡು | ಮಿಗೆ ಮೌನವೇಕಿನ್ನು ||೪೦೬||

ಸಮರದಲ್ಲಿ ನೀನಿಂದು ವಿ | ಕ್ರಮವ ತೋರ್ದರಿಂದ ||
ಕಮಲನಾಭ ಮುನಿದನೇನೂ | ಸುಮತಿ ಪೇಳೆನ್ನೊಡನೆ ||೪೦೭||

**ವಾರ್ಧಕ**

ಮೋಹಮುಳ್ಳಡೆ ತಪ್ತತೈಲಪೂರಿತ ಘನ ಕ |

ಟಾಹದೊಳ್ ಕೆಡಪಿಸುವನೇ ತಂದೆ ತನಯನಂ ।
ಬಾಹಿರಂಗದ ಶೋಕಮೆಂದು ಜರೆಯದೆ ಲೋಕಮೀಗ ಹಲುಬಲ್ ತನ್ನನು ॥
ದ್ರೋಹಮಂ ಮಾಡಿದೆಂ ಎಂದೆನ್ನ ಮೇಲೆ ಮುಳಿ ।
ದಾಹವದೊಳಳಿದೈ ಸುಧನ್ವ ಕಾಯ್ದೆಣ್ಣೆಯೊಳ್ ।
ದೇಹಮಂ ಕಾಯ್ದ ಕೃಷ್ಣಂ ಕಾದಲಹಿತನೇಕಾದನೈ ನಿನಗೆಂದನು ॥೪೦೮॥

**ರಾಗ ಆನಂದಭೈರವಿ ರೂಪಕತಾಳ**
ಯಾತಕೆ ಮಡಿದೈ ಎಲೆ ರಣ । ಖ್ಯಾತ ಸುಧನ್ವನೆ ನಿನಗಿ ।
ನ್ಯಾತಕೆ ಕೊಂದನು ನರನೆಂ । ಬಾತನು ಪೇಳಣುಗ ॥ ಪ ॥

ಅಣ್ಣನು ಕದನವ ಜಯಿಸಿ ಮು । ಕ್ಕಣ್ಣನಂದದಿ ಬಹನೆನುತಲಿ ।
ಬಣ್ಣದ ಸೊಡರ್ ಗೊಂಡನುಜೆಯಂ । ಮಿಣ್ಣನೆ ಬಹಳಲ್ಲ ॥
ಹುಣ್ಣಿಮೆ ಶಶಿಯಾಕಾರದೊ । ಳೆಣ್ಣುವ ವದನದ ನಿನ್ನಯ ।
ಪುಣ್ಯ ಶ್ರೀಯೈತರುವಳು । ಕಣ್ಣಿಲಿ ನೀ ನೋಡು ॥೪೦೯॥

ನಂದನನೈತಹನೆಂಬಾ । ನಂದದೊಳಾ ತವ ಮಾತೆಯು ।
ಪೊಂದೊಡವೆಗಳ್ಕೈ ಕೊಂಡತಿ । ಚಂದದೊಳೈತಹಳು ॥
ಬಂದಿಹ ಜನನಿಯ ಸಂತಸ । ದಿಂದಲಿ ಮನ್ನಿಸು ಏಳೈ ।
ಕಂದನೆ ಹಾ ಹಾ ಭೂಮಿಪ । ವೃಂದ ಶಿಖಾಮಣಿಯೆ ॥೪೧೦॥

ಪೆತ್ತವನಲ್ಲವೆ ನಿನಗಾ । ನೆತ್ತಣ ಮುನಿಸಿದುಯೆನ್ನೊಡ ।
ನುತ್ತರವಂ ಕೊಡು ಸಾಕಿನಿ । ತುತ್ತಮ ನಿನಗೆನ್ನ ॥
ಪತ್ತಿರೆ ಕುಳಿತಾ ಸಮರದ । ಬಿತ್ತರವನು ಪೇಳ್ ಹಂಬಲಿ ।
ಸುತ್ತಿಹ ಸೈನಿಕಕಭಯವ । ನಿತ್ತುಪಚರಿಸಿನ್ನು ॥೪೧೧॥

**ಭಾಮಿನಿ**
ಇಂತು ಸುತಶೋಕಾಬ್ಧಿಯಲಿ ಭೂ ।
ಕಾಂತ ಮುಳುಗಿರಲಿತ್ತಲೀತನ ।
ಕಾಂತೆ ಚಂದ್ರಾನನೆಯು ಕೇಳಿದಳಾಗ ವಾರ್ತೆಯನು ॥
ಬಂತು ದೆಸೆ ಹಾಯೆಂದು ಮೂರ್ಛೆಯ ।
ನಾಂತು ಬೀಳುತ್ತೇಳುತಾ ಸತಿ ।
ಚಿಂತೆಯೊಳಗೈತಂದಳಾ ಸಭೆಗೊಡಲ ಹೊಯ್ಕೊಳುತ ॥೪೧೨॥

**ರಾಗ ನೀಲಾಂಬರಿ ಝಂಪೆತಾಳ**
ಹಾ ಹಾ ಎನ್ನಯ ಚೆಲ್ವ ಮಗುವೆ । ಸಮರದೊಳು ।
ದೇಹವನು ತೊರೆದೆ ಸುಕು । ಮಾರ ಗುಣನಿಧಿಯೆ ॥ ಪ ॥

ಎಣ್ಣೆ ಕೊಪ್ಪರಿಗೆಯೊಳು ಬುಧನು | ಹಾಯ್ಕಿಸಲು |
ಪುಣ್ಯನಿಧಿ ಕಾಯ್ದನೆಂಬುದನು | ಕೇಳುತಲಿ |
ತಣ್ಣಗಾಗಿರ್ದ ವಿಧಿ | ಎಣ್ಣಿದನೆಯಿದನು ||೪೧೩||

ತಾತನಾಜ್ಞೆಯ ತಾಳ್ದು ರಣಕೆ | ಪೋಗುತಲಿ |
ಚಾತುರಂಗವನೆಲ್ಲ ತೃಣಕೆ | ತಾರದತಿ |
ಖ್ಯಾತಿಯಲಿ ಮೆರೆದದನು | ಘಾತಿಸಿದೆ ಕ್ಷಣಕೆ ||೪೧೪||

ಹಾಳು ಮಾಡಿದ ನಿನ್ನ ಪಿತನು | ಧರಣಿಯೊಳು |
ತಾಳಲಾರಳು ನಿನ್ನ ತರುಣಿ | ಯಿದನೆಲ್ಲ |
ಕೇಳಿದರೆ ತಾನೆಂತು | ಬಾಳುವಳು ಸತಿಯು ||೪೧೫||

ಧುರದೊಳಗೆ ವೈರಿಗಳ ಗೆದ್ದು | ಬಹನೆಂದು |
ಭರವಸದೊಳಿರ್ದೆನಲ್ಲೊ ಮುದ್ದು | ಕಂದಯ್ಯ |
ಬರಿದೆ ಬಳಲಿಸಲೇಡ | ಹರುಷದೋರೆದ್ದು ||೪೧೬||

ಹೆತ್ತೊಡಲು ಉರಿಯುತಿದೆ ಎನ್ನ | ನೀನಗಲಿಯಿ |
ನ್ನೆತ್ತ ಗಮಿಸಿದೆಯೊ ಮೋಹನ್ನ | ಮರೆದಿರಲು |
ಚಿತ್ತದಲಿ ನಿಲದಯ್ಯೊ ಪುತ್ಥಳಿಯ ಚಿನ್ನ ||೪೧೭||

**ಕಂದ**

ನಾನಾ ಪರಿಯಿಂ ದುಃಖಿಸು |
ತಾ ನಾರಿಯು ಹುಡಿಯೊಳು ಹೊರಳುತ್ತಿರಲಾಗಂ ||
ಭೂನಾಥನ ಸಭೆ ಕಂಪಿಸೆ |
ಮೀನಾಂಕರಗಿಣಿಯೊಲ್ ಪ್ರಭಾವತಿ ಬಂದಳ್ ಭರದಿಂದಂ ||೪೧೮||

**ಮಾಲಿನೀವೃತ್ತ**

ಧುರದೊಳೆರೆಯನಂದೂ ಧಾತುವಂಗೆಟ್ಟನೆಂದೂ |
ಭರದಿ ತಿಳಿದು ಕಾಂತೇ ಭಿರ್ರನೈತಂದು ಚಿಂತೇ |
ವೆರಸಿ ನೃಪನ ಮುಂದೇ ವಿಶ್ವಮಾಳಾಪದಿಂದೇ |
ಹೊರಳಿದಳು ಹುಡಿಗಳಲ್ಲೀ ಪೇಳ್ದಳಾ ದುಃಖದಲ್ಲೀ ||೪೧೯||

**ರಾಗ ಆನಂದನೀಲಾಂಬರಿ ಏಕತಾಳ**

ಏನು ಬುದ್ಧಿ ನೆನೆದೆಯಿಂದು | ಕಾಂತ ಕಾಂತ | ಸುಮ್ಮನೆ ಪೋಗಿ |
ಆ ನರನ ಧುರದಿ ಮಡಿದೆ | ಕಾಂತ ಕಾಂತ ||
ಭಾನುಕೋಟಿತೇಜನಾದ | ಕಾಂತ ಕಾಂತ | ಎನ್ನನು ಬಿಟ್ಟು |
ನೀನಿಲ್ಲಿಂದ ಅಗಲಿ ಪೋದೆ | ಕಾಂತ ಕಾಂತ ||೪೨೦||

ಕಾಣದೆ ನೀ ಪಿತನ ನುಡಿಗೆ । ಕಾಂತ ಕಾಂತ । ಯುದ್ಧಕೆ ಪೋಗಿ ।
ಪ್ರಾಣವನ್ನು ಹೋಗಾಡಿಸಿದೆ । ಕಾಂತ ಕಾಂತ ॥
ಜಾಣರೊಳತ್ಯಧಿಕವಾಗಿ । ಕಾಂತ ಕಾಂತ । ಮೋಹದಿ ಪಂಚ ।
ಬಾಣನ ಮೀರ್ದವನಲ್ಲೊ । ಕಾಂತ ಕಾಂತ ॥೪೧೦॥

ಆವದೈವವಾದರ್ ನಿನ್ನ । ಕಾಂತ ಕಾಂತ । ಬೆನ್ನಿಗೆ ಬಾರ ।
ದೀ ವಿಧದೊಳಳಿದೆಯಲ್ಲೊ । ಕಾಂತ ಕಾಂತ ॥
ನಾವೆಲ್ಲರಿದ್ದಿಲ್ಲವಾಯ್ತು । ಕಾಂತ ಕಾಂತ । ಎಷ್ಟು ನೀ ಬಳಲಿ ।
ಜೀವವನ್ನು ತೊರೆದೆ ಕಾಣೆ । ಕಾಂತ ಕಾಂತ ॥೪೧೧॥

**ಭಾಮಿನಿ**
ತರುಣಿ ಕಾಂತನ ಗುಣವ ಪೊಗಳುತ ।
ಪರಿಪರಿಯ ದುಃಖದಲಿ ದೇಹದ ।
ಸ್ಮರಣೆಯಿಲ್ಲದೆ ಕೂಗುತೊರಲುತಲೆದೆಯಮೇಲುದದ ॥
ಸೆರಗನೆಳೆವಂಬಲವ ಬಿಟ್ಟಾ ।
ತುರದ ಕ್ಲೇಶದೊಳೈದಿ ಭೂಪನ ।
ಕರದೊಳಿರ್ದ ಕರೋಟದೆಡೆಯೊಳು ಬಿದ್ದು ಹಲುಬಿದಳು ॥೪೧೩॥

**ರಾಗ ಸೌರಾಷ್ಟ್ರ ಏಕತಾಳ**
ನಲ್ಲನಿನಿತು ಮಾಳ್ಪರೆ । ಎನಗಿಂಥ ಮೋಸ ।
ದಲ್ಲಿ ಮುನಿದು ಪೋಪರೆ ॥
ಫುಲ್ಲಾಸ್ತ್ರನುಪಟಳಕೆ । ಮೋಹದಿ ರಮಿಸಿ ।
ಮೆಲ್ಲನೈದುವ ವೇಳ್ಯಕೆ ॥೪೧೪॥

ಆ ಗರ್ವದರಿಯ ಜನಿಸಿ । ಬರುವೆನೆಂದನು ।
ವಾಗಿಯೆನ್ನನು ನಂಬಿಸಿ ॥
ಪೋಗಿರಣಾಗ್ರದೊಳು । ಜೀವವ ವ್ಯರ್ಥ ।
ನೀಗಿದೆಯಿಂದಿನೊಳು ॥೪೧೫॥

ಕಂತುಜನಕನೆ ನೀನು । ಮುನಿದೆಯೊ ಎನ್ನ ।
ಕಾಂತನ ಮೇಲೆ ಇನ್ನು ॥
ಎಂತು ತಾಳಲಿ ನಾನಿನ್ನು । ಲೋಕದಿ ಮೀರಿ ।
ದಂಥ ವೈಧವ್ಯವನ್ನು ॥೪೧೬॥

ಅಯ್ಯೋ ಈ ವಿಧಿಯಾಯ್ತಲ್ಲ । ಪೂರ್ವದ ಕರ್ಮ ।
ಕಯ್ಯಾರೆ ತೋರಿತಲ್ಲ ॥

ಬಯ್ಯುವ ದಾರಿಗಿಂದು । ಪ್ರಾಪ್ತಾನುಸಾರ ।
ವಯ್ಯನೆ ಸಿಕ್ಕಿತಿಂದು ॥೪೧೭॥

**ಕಂದ**

ಇಂತು ಸುಧನ್ವನ ನೆನೆವುತ ।
ಕಾಂತೆಯು ಶೋಕಿಸುತಿರೆ ಕಂಡಾ ಸುರಥಂ ॥
ಚಿಂತಿಸಿ ಮನದೊಳ್ ಬಳಿಕಾ ।
ಕಂತುವಿದಾರಣನೊಲ್ ಗರ್ಜಿಸುತಿಂತೆಂದಂ ॥೪೧೮॥

**ರಾಗ ಸಾಂಗತ್ಯ ರೂಪಕತಾಳ**

ತಾತ ಲಾಲಿಸಿ ಕೇಳ್ವುದೆನ್ನ ಬಿನ್ನಪವಗ್ರ ।
ಜಾತನು ಸಂಗರದೊಳಗೆ ॥
ಯಾತುಧಾನಾರಿಯ ಮುಂದೆ ಭಾಷೆಯ ಸಲಿಸಿ ।
ಖ್ಯಾತಿಯ ತಳೆದೈಕ್ಯವಾದ ॥೪೧೯॥

ಇದಕೆ ನೀವೆಲ್ಲ ಕೋಯೆಂದು ದುಃಖಿಸಲ್ಯಾಕೆ ।
ಕದನದೊಳೆನ್ನಾಟೋಪವನು ॥
ಒದಗಿ ನೋಡುವುದೆಂದು ಬಿಲ್ಗೊಂಡು ನಿಂತಿರ್ದ ।
ಚದುರನೊಳ್ ಕ್ಷಿತಿಪನಿಂತೆಂದ ॥೪೨೦॥

ಉಂಟು ಕೃಷ್ಣನ ಮುಂದೆ ಭಾಷೆಯ ಪೂರಯ್ಸಿ ।
ಬಂಟನಾಗುತ ದೇಹ ತೊರೆದು ॥
ವೆಂಟಣಿಸುವ ಮುಕ್ತಿರಾಜ್ಯವನಿದಕೆ ನಾ ।
ವೆಂಟೆರಡೆಣಿಸುವನಲ್ಲ ॥೪೨೧॥

ಕೊರಳ ಕತ್ತರಿಸಲಾ ತಲೆಯು ತನ್ನೆಡೆಗಾಗಿ ।
ಬರಲೆತ್ತಿ ಪಿಡಿದು ತಕ್ಕಯ್ಸಿ ॥
ಮುರಹರನದನೆನ್ನಲ್ಲಿಗೆ ಹಾಕಿದುದಕೆ ನಾ ।
ಮರುಗುವೆನೆಂದನಾ ನೃಪತಿ ॥೪೨೨॥

**ವಾರ್ಧಕ**

ತಾತ ಚಿತ್ತಯ್ಸಿದರೊಳೇನಹುದು ತಿರುವಿ ಬಿಸು ।
ಡೀ ತಲೆಯನಸುರಾಂತಕನ ಚರಣದೆಡೆಗೆ ಸಹ ।
ಜಾತನಂ ಕೊಂದಾತನಂ ಕೊಲ್ವೆನೆಂದು ಸುರಥನು ರಥಕ್ಕಡರಿ ಬಳಿಕ ॥
ಖಾತಿಯಿಂದಾ ಶಿರವನಾ ಮರಾಳಧ್ವಜಂ ।
ಪೀತಾಂಬರನ ಪೊರೆಗೆ ಹಾಕಲಾ ಮುರಹರಂ ।
ಪ್ರೀತಿಯಿಂ ತೆಗೆದು ನಭಕಿಡಲದಂ ರುಂಡಮಾಲೆಯೊಳಾಂತನಲ್ಲಿ ಶಿವನು ॥೪೨೩॥

**ರಾಗ ಕಾಂಭೋಜಿ ಝುಂಪೆತಾಳ**

ಎನುತ ತೆಗೆದೆಚ್ಚನು ಸುಧನ್ವನರ್ಜುನನ ರಥ ।
ರಣದಿ ಹಿನ್ನೆಲೆಗೆ ಜಾರಿದುದು ॥
ದನುಜಾರಿ ಕಂಡು ರಥವನು ಸೈರಿಸುತಲರ್ಜು ।
ನನ ಮೊಗವ ನೋಡುತಿಂತೆಂದ ॥ ॥೩೭೩॥

ಮತವರಿಯದುಭ್ರಮಿಸಿ ನುಡಿದ ಭಾಷೆಯು ಜಯ ।
ದ್ರಥನ ಕಥೆ ಬಂದೊದಗಿತಲ್ಲ
ಅತಿ ಸತ್ಯಸಂಧ ಸೂನೃತ ಸಾಹಸಿಗನೀತ ।
ಮಥಿಸುವಡೆ ದಾರಿಗಳವಲ್ಲ ॥೩೭೪॥

ಪಿತನಾಜ್ಞೆಯನು ಮೀರದೆನ್ನನೇಕೋದೃಢದಿ ।
ಸತತ ಧ್ಯಾನಿಸುವ ಸದ್ವೃತಿಯ ॥
ಪೃಥಿವಿಲೇಕಪತ್ನೀವ್ರತನು ಕೊಲಲರಿದಿವನ ।
ತ್ರಿತಯಮೂರ್ತಿಗಳು ಮುನಿದರೆಯು ॥೩೭೫॥

ವೀರವೈಷ್ಣವನಿವನು ನಿನ್ನಿಂದಲೆನಗೀತ ।
ಸಾರಸದ್ಭಕ್ತನಾಗಿಹನು ॥
ಮೇರೆದಪ್ಪಿದೆ ನೀನು ಕೆಡಿಸಿದೆಯಕಟವಿನ್ನು ।
ಸೈರಿಸಲದೆಂತು ಕೇಳ್ ನಾನು ॥೩೭೬॥

ಅನ್ನಚಿಂತೆಯನುಳಿದು ಎನ್ನ ಭಜಿಸುವ ಭಕ್ತ ।
ರನ್ನು ಬಿಟ್ಟಿರುವುದಾನೆಂತು ॥
ನಿನ್ನನುಳುಹುವ ಬಿರುದು ಮುನ್ನವೇ ತಾಳ್ದಿರುವೆ ।
ಇನ್ನೇನ ಮಾಡಲಾನಿಂತು ॥೩೭೭॥

**ವಚನ ॥** ಇಂತೆಂದು ಶ್ರೀಕೃಷ್ಣನು ಅನುತಪಿಸುತಾಲೋಚನೆಗೆಯ್ಯುತಿರಲಾ ಸಮಯದೊಳ್ ಸುಧನ್ವನು ಏನೆಂದನು ಎಂದರೆ -

**ರಾಗ ಸೌರಾಷ್ಟ್ರ ರೂಪಕತಾಳ**

ತಿಳಿದೆನು ನಿನ್ನಯ ಚಿತ್ತದು । ಮ್ಮಳಿಕೆಯ ನಿಜದೊಲವ ।
ನ್ನಳಿವುದು ಕಾಯವು ಜಗದೊಳ । ದುಳಿವುವು ಕೀರ್ತಿಗಳು ॥೩೭೮॥

ಶ್ರೀಲೋಲನೆ ಕೇಳ್ ಪಾಂಡವ । ಪಾಲಕನೆಂಬೀ ಬಿರುದನು ।
ಮೂಲೋರ್ಕದಿ ಪಡೆದಿಹೆ ಇ । ನ್ನಾಲೋಚಿಸಲೇಕೆ ॥೩೭೯॥

ಮೇಳದಿ ತವ ಬಾಹುಜರಾವ್ । ಕಾಳಗದಲಿ ಹಿಮ್ಮೆಟ್ಟದೆ ।
ಕಾಲದಿ ತನುವನು ಒಪ್ಪಿಸಿ । ಸಾಲೋಕ್ಯವ ಪಡೆವೆ ॥೩೮೦॥

ಅಳುಕುವೆನೇ ನೋಡೆನುತಲಿ । ಸೆಳೆದೆಚ್ಚನು ಶರವೊಂದನು ।
ಹೊಳೆಯುತ ನಡೆದು ವರೂಥವ । ಕೊಳುತೆರಗಿತೇನೆಂಬೆ ॥೩೮೧॥

ಥಳಥಳಿಸುವ ಮಣಿರಥವದು । ತೊಲಗುತ ತಿರುಗುವ ಬುಗುರಿಯ ।
ಕುಲಗುರುವಂದದಿ ಗಾಲಿಗಳ್ । ನೆಲೆಗೊಳ್ಳದೆ ನಿಜಕೆ ॥೩೮೨॥

ತುರಗಂಗಳು ಬೆಂಡಾದುವು । ಉರುಳುತ ಗಾಲಿಗಳದ್ದವು ।
ತರಹರಿಸದೆ ಸಿಂಧದಿ ಪಲ್ । ಕಿರಿದನು ಹನುಮಂತ ॥೩೮೩॥

ಹರಿ ಫಲುಗುಣರಿಗೆ ಭ್ರಮಣೆಯು । ಶಿರಕಡರಿತು ಕೃಷ್ಣನು ತರ ।
ಹರಿಸುತಲೆ ಸುಧನ್ವನ ಭಾ । ಪುರೆ ಭಳಿ ಭಳಿರೆಂದ ॥೩೮೪॥

**ರಾಗ ಶಂಕರಾಭರಣ ಮಟ್ಟೆತಾಳ**

ಅರಸ ಕೇಳರ್ಜುನನು ರೋಷ । ಭರಿತನಾಗಿ ಶರವ ಪೂಡು ।
ತಿರಲು ಕೃಷ್ಣ ಮುನ್ನ ಗೋವರ್ಧನಾದ್ರಿಯ ॥
ಧರಿಸಿ ಗೋಕುಲವನು ಕಾಯ್ದ । ಭರಿತ ಪುಣ್ಯವೀಯೆ ಪಾರ್ಥ ।
ಭರದಿ ಸೆಳೆದು ಬಿಟ್ಟನಾ ಸುಧನ್ವನಿದಿರಿಗೆ ॥೩೮೫॥

ಇತ್ತೆ ದೇವ ನಿನ್ನ ಪುಣ್ಯ । ಸತ್ತ್ವವೀಗಲೆಸೆವ ಶರವ ।
ಕತ್ತರಿಸದಿರಲ್ಕೆ ನಿನ್ನ ಭಕ್ತನಲ್ಲೆಂದು ॥
ಕತ್ತರಿಸಿದ ಕಣೆಯ ಕಾ । ಣುತ್ತಲಿವನ ಬಲದಿ ಕಹಳೆ ।
ಮೊತ್ತ ಸೂಳವಿಸಿದವಾಗ ಲರ್ತಿಯಿಂದಲಿ ॥೩೮೬॥

ಬಳಿಕಲೊಂದು ಶರವ ಪೂಡ । ಲೊಲಿದು ಕೃಷ್ಣಾವತಾರ ।
ದೊಳಗೆ ಗಳಿಸಿದತುಳ ಪುಣ್ಯ ಬಲುಹನೀಯಲು ॥
ಸೆಳೆದು ಬಿಟ್ಟನಾಗ ಪಾರ್ಥ । ಕಲಿಸುಧನ್ವ ಕಾಣುತದನು ।
ನಳಿನನೇತ್ರನೊಡನೆ ಪೇಳ್ದ ಚಳಕದಿಂದಲಿ
[ಕತ್ತರಿಸಿದ । ಹಿಳುಕ ಹಿಳುಕಿನಿಂದಲಾಗ ಕಳಕಳಿಸುತಲೆ] ॥೩೮೭॥

**ವಾರ್ಧಕ**

ಆಗಲತಿ ಕೋಪದಿಂದಾಲಿಗಳು ಕೆಂಪಡರ ।
ಲೀಗಲರ್ಜುನನ ಬಾಣಕೆ ನಿನ್ನ ಪುಣ್ಯಮಂ ।
ನೀಗಿದೆಯೆಲಾ ದೇವ ನೋಡು ಬಹ ದಿವ್ಯಾಸ್ತ್ರಮಂ ಕತ್ತರಿಸದಿರ್ದಡೆ ॥
ಭೋಗದೊಳರುಂಧತಿಯ ಕೂಡಿಹ ವಸಿಷ್ಠನಂ ।
ಪೋಗಿ ಕೊಂದವನ ದುರ್ಗತಿಗೆ ತಾನಿಳಿವೆನೆನು ।
ತಾಗಸದೊಳರ್ಕನಂತಯ್ತಪ್ಪ ಸರಳಂ ಸುಧನ್ವನಿಕ್ಕಡಿಗೆಯ್ದನು ॥೩೮೮॥

**ರಾಗ ಶಂಕರಾಭರಣ ಮಟ್ಟೆತಾಳ**

ಸಂದುದೆರಡು ಶರವು ಉಳಿದು । ದೊಂದು ಶರದಿ ರಿಪುವ ಕೊಲುವೆ ।
ನೆಂದು ಪಾರ್ಥ ಕಣೆಯ ಪೊಡಲಂದು ಕೃಷ್ಣನು ॥
ಹಿಂದೆ ರಾಮಾವತಾರ । ದಿಂದ ಧರೆಯ ಪೊರೆದ ಪುಣ್ಯ ।
ವೃಂದದತುಳ ಸತ್ತ್ವ ಶರಕೆ ಹೊಂದಿಸಿ ತಾನು ॥೩೮೯॥

ಬಳಿಕ ಶರಕೆ ತ್ರೈಮೂರ್ತಿಗಳ । ನಿಲಿಸುತಾವಾಹಿಸುತ ಸತ್ತ್ವ ।
ಗೊಳಿಸುತಿರಲರ್ಜುನನ್ನು ಬಾಹುಗಳ ಚಪ್ಪರಿಸಲು ॥
ಕಲಿಸುಧನ್ವ ಕಾಣುತಾಗ । ಕಳವಳಿಸುತ ನಗುತ ನುಡಿದ ।
ನೆಲೆ ಮುರಾರಿ ನಿನ್ನ ಕರುಣೆಯಳತೆಯೊಳ್ಳಿತು ॥೩೯೦॥

**ರಾಗ ಭೈರವಿ ಏಕತಾಳ**

ಖಂಡವಿಲ್ಲದ ಪುಣ್ಯವನು । ಸೂರೆ । ಗೊಂಡವ ನಾನೋ ನರನೋ ॥
ಕೊಂಡಾಡದಿರೈ ಬರಿದೆ । ಉ । ದ್ದಂಡ ಶರವ ಬಿಡಿಸಿರದೆ ॥೩೯೧॥

ಅಂಬಿದ ಕಡಿಯದಿರೆನ್ನ । ಸುತ । ನೆಂಬಳೆ ಮಾತೆಯು ತನ್ನ ॥
ಕುಂಭಿನಿಯೊಳು ಸತಿ ಗಂಡ । ನೆಂದು । ನಂಬುವಳೇನು ಪ್ರಚಂಡ ॥೩೯೨॥

ತನುಜನೆ ತಾತಗೆ ನಾನು । ಕೇಳ್ । ಘನದೊಂದು ಪ್ರತಿಜ್ಞೆಯನು ॥
ವಿನಯದಿ ಕಾಶಿಯೊಳ್ ಬಂದು । ವಿ । ಪ್ರನುಸುರಗಂಗೆಯೊಳ್ ಮಿಂದು ॥೩೯೩॥

ಕ್ಷೇತ್ರೋಪವಾಸದೊಳಿರ್ದು । ಶಿವ । ರಾತ್ರಿಯ ದಿನದೊಳು ನಿಂದು ॥
ಶಾಸ್ತ್ರವಿಧಾನವನರಿತು । ತ್ರೈ । ನೇತ್ರ ವಿಶ್ವೇಶನ ಕುರಿತು ॥೩೯೪॥

ಬಿಡದರ್ಚಿಸುವನನೆದ್ದು । ತಡೆ । ದೆಡಗಾಲಿನೊಳುರೆವೊದ್ದು ॥
ಕೆಡಹಿದವನ ಗತಿ ಪೊಂದು । ವೆನು । ಕಡಿಯದಿರ್ದಡೆ ಸರಳಿಂದು ॥೩೯೫॥

ಎನುತಲಿ ಭುಜಗಳ ಹೊಯ್ದು । ನಿಜ । ಧನು ಠಂಕಾರವ ಗೆಯ್ದು ।
ಮನದಲಿ ರೋಷವನಾಂತ । ಕನ । ಲ್ದನು ಸುಧನ್ವನು ತಾ ನಿಂತ ॥೩೯೬॥

**ಭಾಮಿನಿ**

ಅನಕ ತ್ರೈಮೂರ್ತಿಗಳ ಶಕ್ತಿಯ ।
ವಿನುತ ರಾಮಾಯಣದ ಶಕ್ತಿಯ ।
ಘನ ಧನುರ್ವೇದದ ಸುಮಂತ್ರದ ಶಕ್ತಿಯಿಂದಾರ್ದು ॥
ಅನುಪಮ ಮಹಾಸ್ತ್ರವನು ರೋಷದಿ ।
ಕನಲ್ದು ಕಿವಿವರೆಗೆಳೆದನಾ ಕ್ಷಣ ।
ವೆನಿತು ಸತ್ತ್ವಾಧಿಕನೊ ಜಗದೊಳಗಾ ಧನಂಜಯನು ॥೩೯೭॥

**ರಾಗ ಶಂಕರಾಭರಣ ಮಟ್ಟೆತಾಳ**

ಜಡಿದು ಪಾರ್ಥನೆಸೆವ ಶರವು । ಕಿಡಿಯುಗುಳ್ದು ಬರಲು ಉಭಯ ।
ಪಡೆಯುನಡುಗಿತೇನನೆಂಬೆ ಕಡು ಪ್ರತಾಪವ ॥
ದೃಢದೊಳಾ ಸುಧನ್ವನೆಸೆದ । ಬಿಡದೆ ಪ್ರತ್ಯಸ್ತ್ರವನು ಬಂದು ।
ಕಡಿದುದಾಗ ಬರುವ ಶರವ ನಡುವೆ ಕೀಲಿಸಿ ॥೩೯೮॥

ಅಂದು ಅತುಳಸತ್ತ್ವದಸ್ತ್ರ । ಹಿಂದಣರ್ಧವಿರದೆ ಧರಣಿ ।
ಗಂದು ಉದುರಿದುದ ನಾನೇನೆಂದು ಪೇಳುವೆ ॥
ಮುಂದಣರ್ಧವಾ ಸುಧನ್ವ । ಕಂಧರವ ಕತ್ತರಿಸೆ ಹರಿ ಗೋ ।
ವಿಂದಯೆನುತ ಶಿರವು ಅಭ್ರಕಂದು ಚಿಗಿದುದು ॥೩೯೯॥

**ಭಾಮಿನಿ**

ಜಲಜಲೋಚನ ವಿಷ್ಣು ಲಕ್ಷ್ಮೀ ।
ನಿಲಯ ನಾರಾಯಣಯೆನುತ ನಭ ।
ದೊಳಗೆ ಹರಿನಾಮಾವಳಿಯನುಚ್ಚರಿಸುತಾ ತಲೆಯು ॥
ಪೊಳೆವ ರಾಕೇಂದುವಿನ ಕಾಂತಿಯ ।
ಲಿಳಿದುದಿಳೆಗಚ್ಯುತನ ಶ್ರೀ ಪದ ।
ನಳಿನದೆಡೆಯಲಿ ಬಿದ್ದುದೆಲೆ ಜನಮೇಜಯ ಕ್ಷಿತಿಪ ॥೪೦೦॥

**ರಾಗ ತುಜಾವಂತು ಝಂಪೆತಾಳ**

ಏನೆಂಬೆನಾ ಸುಧನ್ವನ ಪುಣ್ಯಫಲವ ।
ಶ್ರೀನಾಥನೆತ್ತಿಕೊಂಡನು ಕರದಿ ಶಿರವ ॥ ಪ ॥

ನೋಡಿದನು ಶಿರವ ಮುಂಡಾಡಿದನು ಫಣೆಗೆ ಫಣೆ ।
ಜೋಡಿಸಿದನೇನ್ ಸುಕೃತ ಮಾಡಿದನೊ ಜಗದಿ ॥
ಕೂಡಲಾತ್ಮಜ್ಯೋತಿ ರೂಢಿಯಲಿ ಬೆಳಗುತ ಸ ।
ಗಾಢದಿಂದಯ್ದಿದನು ಪ್ರೌಢ ಸದ್ಗತಿಗೆ ॥೪೦೧॥

ಭುಜಗಶಯನನನು ಕರದಿ ಪಿಡಿದು ಶಿರವನು ಹಂಸ ।
ಧ್ವಜನ ಮುಂದಿಡಲಲ್ಲಿ ಬಿದ್ದುದಾ ಇಳೆಗೆ ॥
ನಿಜಸುತನ ಶಿರವ ಕಾಣುತ ಮೂರ್ಛಿಸುತಲೆದ್ದು ।
ಗಜರುತಲಿ ಗಾಢ ದುಃಖದೊಳಾಳ್ದನವನು ॥೪೦೨॥

**ರಾಗ ನೀಲಾಂಬರಿ ಏಕತಾಳ**

ಕಂದಾ ಕಂದಾ ಕಾಮರೂಪ । ಸಿಂಧುಸಮಪ್ರತಾಪ ॥
ಇಂದಿದೇನೀ ಪರಿಯೊಳ್ ಧೈರ್ಯ । ಗುಂದಿತೇಕೋ ನಿನಗೆ ॥೪೦೩॥

ನಿನ್ನ ಬಿಟ್ಟಿನ್ನುಂಟೇನೊ ಮೋ । ಹನ್ನರಾದಾತ್ಮಜರು ॥
ಪನ್ನಗಾರಿವಾಹನಗೇನ್ । ಚೆನ್ನಾಗಿ ತೋರಿದುದು ॥೪೦೪॥

ರಣಕೆ ಸನ್ನಾಹದೊಳಯ್ದಿ । ಕ್ಷಣದೊಳಶ್ವ ಪಿಡಿದು ॥
ಅನಕದಿಂದರ್ಜುನನ ಕೂಡೆ । ಸೆಣಸಬೇಕಲ್ಲಯ್ಯ ॥೪೦೫॥

ಮಗನೇ ನೀನಿಂತಳಿದ ಮೇಲೆ । ಪಗೆಯ ಗೆಲುವುದೆಂತು ॥
ಮೊಗವನೆತ್ತಿ ಮಾತನಾಡು । ಮಿಗೆ ಮೌನವೇಕಿನ್ನು ॥೪೦೬॥

ಸಮರದಲ್ಲಿ ನೀನಿಂದು ವಿ । ಕ್ರಮವ ತೋರ್ದರಿಂದ ॥
ಕಮಲನಾಭ ಮುನಿದನೇನೂ । ಸುಮತಿ ಪೇಳೆನ್ನೊಡನೆ ॥೪೦೭॥

**ವಾರ್ಧಕ**

ಮೋಹಮುಳ್ಳಡೆ ತಪ್ತತೈಲಪೂರಿತ ಘನ ಕ ।
ಟಾಹದೊಳ್ ಕೆಡಪಿಸುವನೇ ತಂದೆ ತನಯನಂ ।
ಬಾಹಿರಂಗದ ಶೋಕಮೆಂದು ಜರೆಯದೆ ಲೋಕಮೀಗ ಹಲುಬಲ್ ತನ್ನನು ॥
ದ್ರೋಹಮಂ ಮಾಡಿದೆಂ ಎಂದೆನ್ನ ಮೇಲೆ ಮುಳಿ ।
ದಾಹವದೊಳಳಿದೈ ಸುಧನ್ವ ಕಾಯ್ದೆಣ್ಣೆಯೊಳ್ ।
ದೇಹಮಂ ಕಾಯ್ದ ಕೃಷ್ಣಂ ಕಾದಲಹಿತನೇಕಾದನೈ ನಿನಗೆಂದನು ॥೪೦೮॥

**ರಾಗ ಆನಂದಭೈರವಿ ರೂಪಕತಾಳ**

ಯಾತಕೆ ಮಡಿದೈ ಎಲೆ ರಣ । ಖ್ಯಾತ ಸುಧನ್ವನೆ ನಿನಗಿ ।
ನ್ನ್ಯಾತಕೆ ಕೊಂದನು ನರನೆಂ । ಬಾತನು ಪೇಳಣುಗ ॥ ಪ ॥

ಅಣ್ಣನು ಕದನವ ಜಯಿಸಿ ಮು । ಕ್ಕಣ್ಣನಂದದಿ ಬಹನೆನುತಲಿ ।
ಬಣ್ಣದ ಸೊಡರ್ ಗೊಂಡನುಜೆಯಂ । ಮಿಣ್ಣನೆ ಬಹಳಲ್ಲ ॥
ಹುಣ್ಣಿಮೆ ಶಶಿಯಾಕಾರದೊ । ಳೆಣ್ಣುವ ವದನದ ನಿನ್ನಯ ।
ಪುಣ್ಯ ಶ್ರೀಯೈತರುವಳು । ಕಣ್ಣಿಲಿ ನೀ ನೋಡು ॥೪೦೯॥

ನಂದನನೈತಹನೆಂಬಾ । ನಂದದೊಳಾ ತವ ಮಾತೆಯು ।
ಪೊಂದೊಡವೆಗಳ್ಕೈ ಕೊಂಡತಿ । ಚಂದದೊಳೈತಹಳು ॥
ಬಂದಿಹ ಜನನಿಯ ಸಂತಸ । ದಿಂದಲಿ ಮನ್ನಿಸು ಏಳ್ಳೈ ।
ಕಂದನೆ ಹಾ ಹಾ ಭೂಮಿಪ । ವೃಂದ ಶಿಖಾಮಣಿಯೆ ॥೪೧೦॥

ಪೆತ್ತವನಲ್ಲವೆ ನಿನಗಾ । ನೆತ್ತಣ ಮುನಿಸಿದುಯೆನ್ನೊಡ ।
ನುತ್ತರವಂ ಕೊಡು ಸಾಕಿನಿ । ತುತ್ತಮ ನಿನಗೆನ್ನ ॥

ಪತ್ತಿರೆ ಕುಳಿತಾ ಸಮರದ । ಬಿತ್ತರವನು ಪೇಳ್ ಹಂಬಲಿ ।
ಸುತ್ತಿಹ ಸೈನಿಕಕಭಯವ । ನಿತ್ತುಪಚರಿಸಿನ್ನು ॥೪೧೧॥

**ಭಾಮಿನಿ**

ಇಂತು ಸುತಶೋಕಾಬ್ಧಿಯಲಿ ಭೂ ।
ಕಾಂತ ಮುಳುಗಿರಲಿತ್ತಲೀತನ ।
ಕಾಂತೆ ಚಂದ್ರಾನನೆಯು ಕೇಳಿದಳಾಗ ವಾರ್ತೆಯನು ॥
ಬಂತು ದೆಸೆ ಹಾಯೆಂದು ಮೂರ್ಛೆಯ ।
ನಾಂತು ಬೀಳುತ್ತೇಳುತಾ ಸತಿ ।
ಚಿಂತೆಯೊಳಗೈತಂದಳಾ ಸಭೆಗೊಡಲ ಹೊಯ್ಕೊಳುತ ॥೪೧೨॥

**ರಾಗ ನೀಲಾಂಬರಿ ಝಂಪೆತಾಳ**

ಹಾ ಹಾ ಎನ್ನಯ ಚೆಲ್ವ ಮಗುವೆ । ಸಮರದೊಳು ।
ದೇಹವನು ತೊರೆದೆ ಸುಕು । ಮಾರ ಗುಣನಿಧಿಯೆ ॥ ಪ ॥

ಎಣ್ಣೆ ಕೊಪ್ಪರಿಗೆಯೊಳು ಬುಧನು । ಹಾಯ್ಕಿಸಲು ।
ಪುಣ್ಯನಿಧಿ ಕಾಯ್ದನೆಂಬುದನು । ಕೇಳುತಲಿ ।
ತಣ್ಣಗಾಗಿರ್ದೆ ವಿಧಿ । ಎಣ್ಣಿದನೆಯಿದನು ॥೪೧೩॥

ತಾತನಾಜ್ಞೆಯ ತಾಳ್ದು ರಣಕೆ । ಪೋಗುತಲಿ ।
ಚಾತುರಂಗವನೆಲ್ಲ ತೃಣಕೆ । ತಾರದತಿ ।
ಖ್ಯಾತಿಯಲಿ ಮೆರೆದದನು । ಘಾತಿಸಿದೆ ಕ್ಷಣಕೆ ॥೪೧೪॥

ಹಾಳು ಮಾಡಿದ ನಿನ್ನ ಪಿತನು । ಧರಣಿಯೊಳು ।
ತಾಳಲಾರಳು ನಿನ್ನ ತರುಣಿ । ಯಿದನೆಲ್ಲ ।
ಕೇಳಿದರೆ ತಾನೆಂತು । ಬಾಳುವಳು ಸತಿಯು ॥೪೧೫॥

ಧುರದೊಳಗೆ ವೈರಿಗಳ ಗೆದ್ದು । ಬಹನೆಂದು ।
ಭರವಸದೊಳಿರ್ದೆನಲ್ಲೊ ಮುದ್ದು । ಕಂದಯ್ಯ ।
ಬರಿದೆ ಬಳಲಿಸಲೇಡ । ಹರುಷದೋರೆದ್ದು ॥೪೧೬॥

ಹೆತ್ತೊಡಲು ಉರಿಯುತಿದೆ ಎನ್ನ । ನೀನಗಲಿಯಿ ।
ನ್ನೆತ್ತ ಗಮಿಸಿದೆಯೊ ಮೋಹನ್ನ । ಮರೆದಿರಲು ।
ಚಿತ್ತದಲಿ ನಿಲದಯ್ಯೊ ಪುತ್ಥಳಿಯ ಚಿನ್ನ ॥೪೧೭॥

**ಕಂದ**

ನಾನಾ ಪರಿಯಿಂ ದುಃಖಿಸು ।

ತಾ ನಾರಿಯು ಹುಡಿಯೊಳು ಹೊರಳುತ್ತಿರಲಾಗಂ ॥
ಭೂನಾಥನ ಸಭೆ ಕಂಪಿಸೆ ।
ಮೀನಾಂಕರಗಿಣಿಯೊಲ್ ಪ್ರಭಾವತಿ ಬಂದಳ್ ಭರದಿಂದಂ ॥೪೧೮॥

**ಮಾಲಿನೀವೃತ್ತ**

ಧುರದೊಳೆರೆಯನಂದೂ ಧಾತುವಂಗೆಟ್ಟನೆಂದೂ ।
ಭರದಿ ತಿಳಿದು ಕಾಂತೇ ಭಿರ್‍ರನೈತಂದು ಚಿಂತೇ ।
ವೆರಸಿ ನೃಪನ ಮುಂದೇ ವಿಶ್ವಮಾಳಾಪದಿಂದೇ ।
ಹೊರಳಿದಳು ಹುಡಿಗಳಲ್ಲೀ ಪೇಳ್ದಳಾ ದುಃಖದಲ್ಲೀ ॥೪೧೯॥

**ರಾಗ ಆನಂದನೀಲಾಂಬರಿ ಏಕತಾಳ**

ಏನು ಬುದ್ಧಿ ನೆನೆದೆಯಿಂದು । ಕಾಂತ ಕಾಂತ । ಸುಮ್ಮನೆ ಪೋಗಿ ।
ಆ ನರನ ಧುರದಿ ಮಡಿದೆ । ಕಾಂತ ಕಾಂತ ॥
ಭಾನುಕೋಟಿತೇಜನಾದ । ಕಾಂತ ಕಾಂತ । ಎನ್ನನು ಬಿಟ್ಟು ।
ನೀನಿಲ್ಲಿಂದ ಅಗಲಿ ಪೋದೆ । ಕಾಂತ ಕಾಂತ ॥೪೨೦॥

ಕಾಣದೆ ನೀ ಪಿತನ ನುಡಿಗೆ । ಕಾಂತ ಕಾಂತ । ಯುದ್ಧಕೆ ಪೋಗಿ ।
ಪ್ರಾಣವನ್ನು ಹೋಗಾಡಿಸಿದೆ । ಕಾಂತ ಕಾಂತ ॥
ಜಾಣರೊಳತ್ಯಧಿಕವಾಗಿ । ಕಾಂತ ಕಾಂತ । ಮೋಹದಿ ಪಂಚ ।
ಬಾಣನ ಮೀರ್ದವನಲ್ಲೊ । ಕಾಂತ ಕಾಂತ ॥೪೨೧॥

ಆವದೈವವಾದರ್ ನಿನ್ನ । ಕಾಂತ ಕಾಂತ । ಬೆನ್ನಿಗೆ ಬಾರ ।
ದೀ ವಿಧದೊಳಳಿದೆಯಲ್ಲೊ । ಕಾಂತ ಕಾಂತ ॥
ನಾವೆಲ್ಲರಿದ್ದಿಲ್ಲವಾಯ್ತು । ಕಾಂತ ಕಾಂತ । ಎಷ್ಟು ನೀ ಬಳಲಿ ।
ಜೀವವನ್ನು ತೊರೆದೆ ಕಾಣೆ । ಕಾಂತ ಕಾಂತ ॥೪೨೨॥

**ಭಾಮಿನಿ**

ತರುಣಿ ಕಾಂತನ ಗುಣವ ಪೊಗಳುತ ।
ಪರಿಪರಿಯ ದುಃಖದಲಿ ದೇಹದ ।
ಸ್ಮರಣೆಯಿಲ್ಲದೆ ಕೂಗುತೊರಲುತಲೆದೆಯಮೇಲುದದ ॥
ಸೆರಗನೆಳೆವಂಬಲವ ಬಿಟ್ಟಾ ।
ತುರದ ಕ್ಲೇಶದೊಳ್ಳೈದಿ ಭೂಪನ ।
ಕರದೊಳಿರ್ದ ಕರೋಟದೆಡೆಯೊಳು ಬಿದ್ದು ಹಲುಬಿದಳು ॥೪೨೩॥

**ರಾಗ ಸೌರಾಷ್ಟ್ರ ಏಕತಾಳ**

ನಲ್ಲನಿನಿತು ಮಾಳ್ಪರೆ । ಎನಗಿಂಥ ಮೋಸ ।
ದಲ್ಲಿ ಮುನಿದು ಪೋಪರೆ ॥

ಫುಲ್ಲಾಸ್ತ್ರನುಪಟಳಕೆ । ಮೋಹದಿ ರಮಿಸಿ ।
ಮೆಲ್ಲನೈದುವ ವೇಳ್ಯಕೆ ॥೪೧೪॥

ಆ ಗರ್ವದರಿಯ ಜನಿಸಿ । ಬರುವೆನೆಂದನು ।
ವಾಗಿಯೆನ್ನನು ನಂಬಿಸಿ ॥
ಪೋಗಿರಣಾಗ್ರದೊಳು । ಜೀವವ ವ್ಯರ್ಥ ।
ನೀಗಿದೆಯಿಂದಿನೊಳು ॥೪೧೫॥

ಕಂತುಜನಕನೆ ನೀನು । ಮುನಿದೆಯೊ ಎನ್ನ ।
ಕಾಂತನ ಮೇಲೆ ಇನ್ನು ॥
ಎಂತು ತಾಳಲಿ ನಾನಿನ್ನು । ಲೋಕದಿ ಮೀರಿ ।
ದಂಥ ವೈಧವ್ಯವನ್ನು ॥೪೧೬॥

ಅಯ್ಯೋ ಈ ವಿಧಿಯಾಯ್ತಲ್ಲ । ಪೂರ್ವದ ಕರ್ಮ ।
ಕಯ್ಯಾರೆ ತೋರಿತಲ್ಲ ॥
ಬಯ್ಯುವ ದಾರಿಗಿಂದು । ಪ್ರಾಪ್ತಾನುಸಾರ ।
ವಯ್ಯನೆ ಸಿಕ್ಕಿತಿಂದು ॥೪೧೭॥

**ಕಂದ**
ಇಂತು ಸುಧನ್ವನ ನೆನೆವುತ ।
ಕಾಂತೆಯು ಶೋಕಿಸುತಿರೆ ಕಂಡಾ ಸುರಥಂ ॥
ಚಿಂತಿಸಿ ಮನದೊಳ್ ಬಳಿಕಾ ।
ಕಂತುವಿದಾರಣನೊಲ್ ಗರ್ಜಿಸುತಿಂತೆಂದಂ ॥೪೧೮॥

**ರಾಗ ಸಾಂಗತ್ಯ ರೂಪಕತಾಳ**
ತಾತ ಲಾಲಿಸಿ ಕೇಳ್ವುದೆನ್ನ ಬಿನ್ನಪವಗ್ರ ।
ಜಾತನು ಸಂಗರದೊಳಗೆ ॥
ಯಾತುಧಾನಾರಿಯ ಮುಂದೆ ಭಾಷೆಯ ಸಲಿಸಿ ।
ಖ್ಯಾತಿಯ ತಳೆದೈಕ್ಯವಾದ ॥೪೧೯॥

ಇದಕೆ ನೀವೆಲ್ಲ ಕೋಯೆಂದು ದುಃಖಿಸಲ್ಯಾಕೆ ।
ಕದನದೊಳೆನ್ನಾಟೋಪವನು ॥
ಒದಗಿ ನೋಡುವುದೆಂದು ಬಿಲ್ಗೊಂಡು ನಿಂತಿರ್ದ ।
ಚದುರನೊಳ್ ಕ್ಷಿತಿಪನಿಂತೆಂದ ॥೪೨೦॥

ಉಂಟು ಕೃಷ್ಣನ ಮುಂದೆ ಭಾಷೆಯ ಪೂರಯ್ಸಿ ।
ಬಂಟನಾಗುತ ದೇಹ ತೊರೆದು ॥

ವೆಂಟೆಣಿಸುವ ಮುಕ್ತಿರಾಜ್ಯವನಿದಕೆ ನಾ ।
ವೆಂಟೆರಡೆಣಿಸುವನಲ್ಲ ॥೪೩೦॥

ಕೊರಳ ಕತ್ತರಿಸಲಾ ತಲೆಯು ತನ್ನೆಡೆಗಾಗಿ ।
ಬರಲೆತ್ತಿ ಪಿಡಿದು ತಕ್ಕಯ್ಸಿ ॥
ಮುರಹರನದನೆನ್ನಲ್ಲಿಗೆ ಹಾಕಿದುದಕೆ ನಾ ।
ಮರುಗುವೆನೆಂದನಾ ನೃಪತಿ ॥೪೩೧॥

**ವಾರ್ಧಕ**
ತಾತ ಚಿತ್ತಯ್ಸಿದರೊಳೇನಹುದು ತಿರುವಿ ಬಿಸು ।
ಡೀ ತಲೆಯನಸುರಾಂತಕನ ಚರಣದೆಡೆಗೆ ಸಹ ।
ಜಾತನಂ ಕೊಂದಾತನಂ ಕೊಲ್ವೆನೆಂದು ಸುರಥನು ರಥಕ್ಕಡರಿ ಬಳಿಕ ॥
ಖಾತಿಯಿಂದಾ ಶಿರವನಾ ಮರಾಳಧ್ವಜಂ ।
ಪೀತಾಂಬರನ ಪೊರೆಗೆ ಹಾಕಲಾ ಮುರಹರಂ ।
ಪ್ರೀತಿಯಿಂ ತೆಗೆದು ನಭಕಿಡಲದಂ ರುಂಡಮಾಲೆಯೊಳಾಂತನಲ್ಲಿ ಶಿವನು ॥೪೩೩॥

೮

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಧರಣಿಸತಿ ಲಾಲಿಸು ಸುಧನ್ವನ । ಶಿರವಡಗಲಾನಂತರದಿ ಸಂ ।
ಗರಕೆ ಸನ್ನಹವಾಗಿ ನಡೆದನು । ಸುರಥನಂದು ॥೪೩೪॥

ಇತ್ತ ಪಾಂಡವಸೇನೆಯೊಳು ಕನ । ಲುತ್ತಲೈತರುತಿಪ್ಪಸುರಥನ ।
ಚಿತ್ತದಾಟೋಪವನು ನೆರೆ ಕಾ । ಣುತ್ತ ಹರಿಯು ॥೪೩೫॥

ಕ್ಷೋಣಿಯೊಳಗೀ ಭಟನ ಗೆಲುವರ । ಕಾಣೆ ಸಮರಂಗದೊಳು ಕಲಿಸು ।
ತ್ರಾಣಿಯಹನೀ ವೀರರೊಡನಾ । ಹೂಣಿಸುತಲಿ ॥೪೩೬॥

ಸರಸಕೈದಿದೆವಾದರಿಂದಿಗೆ । ಪರಿಭವಂಗಳು ತಪ್ಪದೆಮಗೆಯು ।
ಧುರದ ಮಧ್ಯದೊಳೆನುತ ನರಗೆ । ಚ್ಚರಿಸಿ ಬಳಿಕ ॥೪೩೭॥

ಸಾರಿ ನಿಜರಥವನ್ನು ಹಿಂದಣ । ಮೂರು ಯೋಜನದಲ್ಲಿ ನಿಲಿಸಿಯೆ ।
ವೀರಪಟುಭಟರನ್ನು ಮುಂದಕೆ । ತೋರಿಸಿದನು ॥೪೩೮॥

**ರಾಗ ಪಂತುವರಾಳಿ ಮಟ್ಟೆತಾಳ**
ಬಂದು ನಿಂದ ರಣಕೆ ಭರದೊಳು । ಪ್ರದ್ಯುಮ್ನನಂದು ॥ ಪ ॥

ಒತ್ತಿ ಮಹಾಹವಕೆ ಮುಂ । ದೊತ್ತಿ ಬರುವ ವೀರ ಸುರಥ ।
ನತ್ತಲಿತ್ತ ಸರಿಯೆ ನೋಡಿದ ॥
ತೇರು ತೇಜಿ ಸೂತರನ್ನು । ಕತ್ತರಿಸುವ ತೆರದಿ ಬಾಣದ ॥
ಮಳೆಯ ಕರೆದು । ಮತ್ತೆ ಕನಲಿ ಸುಭಟರಂಗದ ।
ಕವಚವನ್ನು । ತೆತ್ತಿ ಜರ್ಜ್ಝರಿತ ಮಾಡಿದ ॥೪೩೯॥

ನೋಡಿ ನೃಪನ ಸೂನು ಮನದಿ । ರೋಷಗೊಂಡು ಬಿಲ್ಲಿಗಂಬ ।
ಪೂಡಿ ಮಾರನೆಸೆದ ಶರವನು ॥
ಎಲ್ಲ ನಿಮಿಷದಲ್ಲಿ ಪುಡಿಯ । ಮಾಡಿ ಮುಗುಳೆ ಬೇರೆ ಶರವನು ।
ಎಸೆಯನವನು । ಖೋಡಿ ತಾಳ್ದು ಕೆಲಕೆ ಕೆರಳ್ದನು ।
ಅರುಹಲೇನು । ಗಾಢದಿಂದ ಬಲವ ತರಿದನು ॥೪೪೦॥

**ವಾರ್ಧಕ**
ತಕವದಿಂ ಪ್ರದ್ಯುಮ್ನನಂ ಗೆಲ್ದು ಸಾತ್ಯಕಿಯ ।
ನವಘಡಿಸಿ ಕೃತವರ್ಮ ಸಾಂಬಾನುಸಾಲ್ವರಂ ।
ಜವಗೆಡಿಸಿ ಕಲಿಯೌವನಾಶ್ವನಂ ನಡೆದು ನೀಲಧ್ವಜನನುರೆ ಘಾತಿಸಿ ॥
ರವಿಸುತನ ಸೂನುವಂ ಪರಿಭವಿಸಿ ನಿಖಿಳ ಯಾ ।
ದವಸುಭಟರಂ ಜಯಿಸಿ ಚತುರಂಗಪುಂಗಮಂ ।
ಸವರಿ ಸಮರಥ ಮಹಾರಥರನೊಂದೇ ರಥದೊಳಾ ಸುರಥನೊಡದುಳಿದನು ॥೪೪೧॥

**ರಾಗ ಬಿಲಹರಿ ಏಕತಾಳ**
ಏನು ಚಂದವೋ । ವೀರರು ಸು । ಯ್ದಾನಂದವೊ ॥ ಪ ॥

ಸೊಕ್ಕಾನೆಯು ಕಾಸಾರವನು । ಪೊಕ್ಕು ಕಲಕುವ ತೆರದಲ್ಲಿ ।
ಇಕ್ಕೆಲದಿಂ ಹಾಯ್ದು ಸೇನೆ । ಚೊಕ್ಕಟಿಕ್ಕುತ ಭರದಲ್ಲಿ ।
ಕಕ್ಕಸದ ವೀರರ ಬೊಬ್ಬೆ । ಯಿಕ್ಕೆ ಸಾರ್ದ ಧುರದಲ್ಲಿ ।
ರಕ್ಕಸಾರಿ ಪಾರ್ಥರನ್ನು । ತಿಕ್ಕುತ ಸುರಥನು ಭರದಿ ॥೪೪೨॥

ಬಂದ ಸುರಥನ ವಿಕ್ರಮದಾ । ನಂದವನ್ನು ಕಾಣುತ್ತ ।
ಕಂದುಗೊರಳನೊಲು ಕುಂತೀ । ನಂದನನು ಕೋಪಿಸುತ್ತ ।
ಇಂದಿರೇಶನೊಡನೆಯಿವನ । ನಿಂದು ಜಯಿಸುವೆನೆನ್ನುತ್ತ ।
ಮುಂದುವರಿದು ರಥವ ನಡೆಸು । ಎಂದು ಬಿಲ್ ಝೇಂಕರಿಸುತಾಗ ॥೪೪೩॥

**ರಾಗ ಶಂಕರಾಭರಣ ಮಟ್ಟೆತಾಳ**
ಎಲವೊ ಸೋದರರನು ನಮ್ಮೊಳ್ । ಮಲೆತು ಮಡಿದು ಪೋದನಿನ್ನು ।
ಕಲಹದೊಳಗೆ ನಿನ್ನ ನಾವು । ಗೆಲುವುದನುಚಿತ ॥

ಕಲಹದಲ್ಲಿ ನಿನ್ನ ನಾವು । ಗೆಲುವದುಚಿತವಲ್ಲವೆಂದು ।
ತೊಲಗಿ ನಿಂತರೀಗ ಬಂದು । ತಲೆಯ ಕೊಡುವೆಯಾ ॥೪೪೪॥

ಬಿಡು ಬಿಡೆಲವೊ ಪಾರ್ಥ ನಿನ್ನ । ಕಡುಹ ಬಲ್ಲೆನಗ್ರಜಂಗೆ ।
ಬಿಡೌಜ ಮುಖ್ಯ ದಿವಿಜರಿದಿರೆ । ಘಡ ರಣಾಗ್ರದಿ ॥
ಬಿಡೌಜಮುಖ್ಯ ದಿವಿಜರಿದಿರೆ । ಘಡರಣಾಗ್ರದಲ್ಲಿ ಹರಿಯು ।
ತಡೆಯದಿತ್ತ ಪುಣ್ಯದಿಂದ । ಮಡಿದನಿಂದಿಗೆ ॥೪೪೫॥

ಅಳಿದನಗ್ರಜಾತನೊಡನೆ । ಕಳುಹಿಸುವೆನು ನಿನ್ನ ನೋ ।
ಡಳುಕಬೇಡ ನಿಲ್ಲು ನಿಲ್ಲು । ಕೊಳುಗುಳಕ್ಕೆಲೋ ॥
ಅಳುಕಬೇಡ ನಿಲ್ಲು ನಿಲ್ಲು । ಕೊಳುಗುಳಕ್ಕೆಂದು ಸುರಥ ।
ಪೊಳೆವ ಸ್ವರ್ಣಪುಂಖದಸ್ತ್ರ । ಗಳನು ಕರೆದನು ॥೪೪೬॥

ಸುರಿದ ಬಾಣವನ್ನು ಕಡಿದು । ನರನು ರೋಷವೇರ್ದು ಕನಲು ।
ತುರಿಯ ವಿಶಿಖಗಳನು ಬಿಟ್ಟ । ನುರು ಪ್ರತಾಪದಿ ॥
ಉರಿಯ ವಿಶಿಖಗಳನು ಬಿಟ್ಟ । ರಿರದೆ ತೇರು ಧ್ವಜಪತಾಕೆ ।
ತುರಗ ಸಹಿತ ಮಡಿಯೆ ಸುರಥ । ವಿರಥನಾದನು ॥೪೪೭॥

ಪೊಸ ಮಹಾವರೂಥವೇರು । ತಸಮ ವೀರ ಸುರಥ ಕನಲ್ದು ।
ಎಸೆದ ಬಾಣದಿಂದ ಪಾರ್ಥ । ನಸುವ ಕಂಪಿಸಿ ॥
ಎಸೆದ ಬಾಣದಿಂದ ಪಾರ್ಥ । ನಸುವ ಕಂಪಿಸಲ್ಕೆ ಕಂಡು ।
ಕುಸುಮನಾಭನಾಗ ಸಂತ । ವಿಸುತ  ನುಡಿದನು ॥೪೪೮॥

ಇವನ ತೋಳ್ಗಳನ್ನು ಬಿಡದೆ । ಸವರಲೀಗ ದಿವ್ಯ ಮಹಾ ।
ಸ್ತ್ರವನು ಪೂಡೆನುತ್ತ ತಾನು । ಜವದಿ ಶಂಖವಾ ॥
ಸ್ತ್ರವನು ಪೂಡೆನುತ್ತ ತಾನು । ಜವದಿ ಶಂಖನಾದ ಗೆಯ್ಯೆ ।
ಕವಲು ಶರಗಳೆಚ್ಚು ತೋಳ್ಗ । ಳವನಿಗಿಳುಹಿದ ॥೪೪೯॥

ತೋಳ್ಗಳುಡಿಯೆ ಕಂಡು ಕ । ಟ್ಟಾಳ್ಗಳೊಡೆಯ ಸುರಥ ಶೌರ್ಯ ।
ದೇಳ್ಗೆಯಿಂದ ತೊಡೆಯೊಳಾರ್ದು । ಗೋಳ್ಗುಡಿಸುತಲೆ ॥
ಏಳ್ಗೆಯಿಂದ ತೊಡೆಯೊಳಾರ್ದು । ಗೋಳ್ಗುಡಿಸುತಲಿರಲು ಪಾರ್ಥ ।
ಸೀಳ್ಗೋಲಿಂದಲೆಚ್ಚುತವನ । ಬಾಳ್ಗಡಿಸಿದನು  ॥೪೫೦॥

**ವಾರ್ಧಕ**
ಆಗ ಮುರಹರನಾಜ್ಞೆಯಿಂದೆಚ್ಚು ಫಲುಗುಣಂ ।
ಬೇಗ ಸುರಥನ ಶಿರವನರಿಯಲಾ ತಲೆ ಬಂದು ।
ತಾಗುತಲಿ ಭರದೊಳಾ ಫಲುಗುಣನ ವಕ್ಷಮಂ ಕೆಡಹಿತಾಸ್ಯಂದನದಲಿ ॥

ನೀಗಿದಂ ಮರವೆಯೆಂದರಿದಾ ಧನಂಜಯಂ |
ಬೇಗ ಕೃಷ್ಣನ ಚರಣಕೈತಂದು ಬಿದ್ದು ಹರಿ |
ರಾಘವ ಜನಾರ್ದನ ಮುಕುಂದ ಎನುತಿರ್ದುದಾ ಶಿರಮುರೆ ವಿಕಾಸದಿಂದ ||೪೫೧||

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಅರಸ ಕೇಳ್ ಫಲುಗುಣನ ಬಾಣದೊ | ಆರಿದು ನೃಪಜನ ತಲೆಯು ಬಂದಾ |
ಹರಿಯ ಪದದೊಳು ಬೀಳೆ ಕಾಣುತ | ಕರದೊಳೆತ್ತಿ ||೪೫೨||

ತೋಷದಿಂದೀಕ್ಷಿಸುತ ಬಳಿಕಾ | ಕಾಶದೊಳಗಿಹ ಗರುಡನಂ ಕರೆ |
ದೀ ಶಿರಕೆ ಬೇಗ ಪ್ರಯಾಗ ಪ್ರ | ವೇಶಿಸುತಲಿ ||೪೫೩||

ಬಾರೆನಲು ಕೇಳ್ದಾ ಸುಪರ್ಣನು | ವೀರ ಸುರಥನ ತಲೆಯ ಕೈಗೊಂ |
ಡೇರಲಂಬರಕಾಗಲಿತ್ತಲು | ದಾರ ಶಿವನು ||೪೫೪||

ಕಂಡು ಈ ತಲೆಯನ್ನು ತನ್ನಯ | ರುಂಡಮಾಲೆಗೆ ಬೇಕು ತವಕದಿ |
ಕೊಂಡು ಬಾರೆನೆ ಕೇಳ್ದು ಪೊರಟ ಪ್ರ | ಚಂಡ ಭೃಂಗಿ ||೪೫೫||

ಬಂದು ಗರುಡನ ಕೂಡೆ ಶಿರವನು | ನಿಂದು ಕೇಳಲಿಕವನ ಪಕ್ಕಗ |
ಳಿಂದ ಬೀಸುವ ಗಾಳಿಯಲಿ ಬಲು | ನೊಂದನಿವನು ||೪೫೬||

**ವಾರ್ಧಕ**
ಗರುಡನ ಗರಿಯ ಗಾಳಿಯೊಳ್ ಸಿಕ್ಕಿ ಬೆಂಡಾಗಿ |
ತಿರುಗಿ ಬಂದಭವಂಗೆ ಭೃಂಗಿಯುಂ ಬಿನ್ನಯಿಸು |
ತಿರೆ ಕೇಳ್ದು ಗಿರಿಜೆ ನಸುನಗುತ ಹರಿವಾಹನದ ಬಲ್ಮೆಯಂ ನೆರೆ ಪೊಗಳ್ದು |
ಪಿರಿದಾತನಂ ಜರೆಯೆ ತಲೆವಾಗಿ ಲಜ್ಜಿಸಲ್ |
ಪುರಹರಂ ಕೃಪೆಯೊಳವನಂ ಮತ್ತೆ ಸಂತಯಿಸಿ |
ಕರೆದು ವೃಷರಾಜಂಗೆ ಬೆಸಸೆ ಬೆಂಬತ್ತಿದಂ ಪಕ್ಷೀಂದ್ರನಂ ಮುದದೊಳು ||೪೫೭||

**ರಾಗ ಭೈರವಿ ಅಷ್ಟತಾಳ**
ಗರಡ ನೀ ಪೋಗದಿರೊ | ನಿಲ್ಲೆಲೊ ನಾನು | ಬರುವೆ ಮುಂದರಿಯದಿರೊ ||
ಸುರಥನ ತಲೆಯ ನಮ್ಮಾಳ್ದನ ಚರಣಕ್ಕೆ | ತರುವುದೆಂದಟ್ಟಿದನು ||೪೫೮||

ಆಗಲೇನೆಲವೊ ನಂದಿ | ನಮ್ಮರಸ ಪ್ರ | ಯಾಗದೊಳಿದನು ಪೊಂದಿ ||
ಸೀಗ ಬಾರೆಂದು ನೇಮಿಸಿದರಿಂದಲೆ ಕೊಂಡು | ನಾ ಗಮಿಸುವೆನೀ ಕ್ಷಣ ||೪೫೯||

ವಿಹಗೇಂದ್ರ ಕೇಳೆನಗೆ | ಈಯದೆ ಪೋದ | ರಹುದುಪತಿ ನಿನಗೆ ||
ಸಹಸ ತೋರದಿರ್ ಬಿಡು ನಿಲ್ಲು ನಿಷ್ಕಾರಣ | ಬಹುದೆನ್ನ ವಿಕ್ರಮವ ||೪೬೦||

ವೃಷಭೇಶ ಕೇಳು ನೀನು । ಈಯಲಿಕೆನ್ನ । ವಶವಲ್ಲ ಎಂದು ನಾನು ॥
ಎಸೆವ ಪ್ರಯಾಗದೊಳ್ ಹಾಕುವೆನಲ್ಲಿಂದ । ಲೆಸೆದೆತ್ತಿಕೊಂಡು ಪೋಗು ॥೪೬೧॥

ಎನುತ ಮಾರುತ ವೇಗದಿ । ಪೋಗುವ ಗರು । ಡನ ಕಂಡನತಿ ವೇಗದಿ ॥
ಕನಲುತ್ತ ಬೆನ್ನಟ್ಟಿದನು ವೃಷಭನು ಹುತಾ । ಶನನಂತೆ ಗರ್ಜಿಸುತ ॥೪೬೨॥

**ಭಾಮಿನಿ**

ತ್ರಿಭುವನವನಲ್ಲಾಡಿಸುವ ಮಹ ।
ರಭಸದಿಂದ್ಯೆದುವ ಸುಪರ್ಣ ವೃ ।
ಷಭರ ಮುಖ ದುಃಶ್ವಾಸ ಮಾರುತನಿಂದಲಳವಳಿದು ॥
ನಭದೊಳಾಯಸಪಟ್ಟು ಮಿಸುದು ।
ರ್ಲಭವೆನಿಸುತಿರ್ಪ ಪ್ರಯಾಗದೊ ।
ಳಭವವಾಹನಗೀಯದಾ ತಲೆ ಬಿಸುಟನಾ ಗರುಡ ॥೪೬೩॥

**ಕಂದ**

ಆ ಗರುಡಾ ಶಿರಮಂ ಬಿಸು ।
ಟಾ ಗಗನದೊಳಾರ್ಭಟಿಸುತ ಕೃಷ್ಣನ ಬಳಿಗಂ ॥
ಪೋಗಲ್ಕಿತ್ತಲು ವೃಷಭಂ ।
ಬೇಗದೊಳದನೆತ್ತಿಕೊಂಡೊಡೆಯಂಗಿತ್ತಂ ॥೪೬೪॥

**ರಾಗ ಕೇದಾರಗೌಳ ಅಷ್ಟತಾಳ**

ವೃಷಭ ತಂದಿರ್ದ ಕರೋಟವ ಶಿವ ತಾನು । ಕುಶಲದಿ ಕೊರಳೊಳಗೆ ॥
ಪಸರಿಪ ಮಾಲೆಯೊಳಾಂತಾ ಸುಧನ್ವನ । ಎಸೆದಿರ್ಪ ಶಿರದೊಡನೆ ॥೪೬೫॥

ಇತ್ತಲರ್ಜುನ ಕೃಷ್ಣರಿಂದಲಿ ಸುರಥ ತಾ । ಸತ್ತನು ರಣದೊಳೆಂಬ ॥
ವೃತ್ತಾಂತವನು ಕೇಳ್ದು ಹಂಸಕೇತನು ತನ್ನ । ಚಿತ್ತದಿ ಮರುಗತಲೆ ॥೪೬೬॥

ಸಲೆ ಮರಣವನು ನಿಶ್ಚಯಿಸಿ ಸಂತಾಪದಿ । ಕಲಹಕೆಂದಿದಿರಾಗುತ್ತ ॥
ಜಲಜನಾಭನ ಮೆಚ್ಚಿಸುತ ಗತಿಗಡರುವೆ । ಸುಲಭದೊಳೆಂದೆನುತ ॥೪೬೭॥

ರಥವೇರಿ ಬಾಗೊತ್ತಿ ಧನುವನ್ನು ಝೇಗೈದು । ನ್ಮತನಾಗಿ ಕಾಳಗಕೆ ॥
ಪೃಥಿವಿಪನ್ಯೆತರುತಿಹ ಸಂಭ್ರಮವ ದೈತ್ಯ । ಮಥನನೀಕ್ಷಿಸುತಲಾಗ ॥೪೬೮॥

**ವಾರ್ಧಕ**

ಮುಳಿದು ಹಂಸಧ್ವಜಂ ಕಾಳಗಕೆ ನಿಲಲಾಗ ।
ನಳಿನಭವನಳುಕಿದಂ ಲೋಕ ಸೃಷ್ಟಿಗೆ ಮತ್ತೆ ।
ಬಳಲಬೇಕೆಂದು ರವಿಮಂಡಲಂ ನಡುಗಿತೊಡನಯ್ತುಪ್ಪ ಕಲಿ ರಭಸಕೆ ॥

ಪ್ರಳಯಮಿಂದಹುದೆಂದು ಕಂಪಿಸಿತು ಧರೆ ಸ್ವರ್ಗ |
ದೊಳಗೊಳಗೆ ತೆರಪಿಲ್ಲಮೆಂದು ಗಜಬಜಿಸಿ ಸುರ |
ಕುಲವಯ್ದೆ ಕಂಗೆಟ್ಟುದಸುರಾರಿ ಚಿಂತಿಸಿದನರಸ ಕೇಳ್ ಕೌತುಕವನು ||೪೭೯||

**ರಾಗ ಶಂಕರಾಭರಣ ತ್ರಿವುಡೆತಾಳ**

ರಣದಿ ಹಂಸಧ್ವಜನು ಮುಳಿದರೆ | ಸೆಣಸಲಾಪವರಿಲ್ಲ ಕೇಳ್ ಫಲು |
ಗುಣನೆ ಸೈರಿಸು ಸೈರಿಸೆನುತಾ | ಕ್ಷಣದಿ ಹರಿಯು ||೬೭೦||

ಕುದುರೆಗಳ ವಾಘೆಯನು ಬಿಸುಡುತ | ಮುದದಿ ಪೀತಾಂಬರವ ಮೇಲ್ ನೆರಿ |
ವಿಡಿದೊರೂಥವನಿಳಿದು ನಡೆದತಿ | ವದಗಿನಿಂದ ||೬೭೧||

ಬರುವ ಮುಕ್ತೀಶನನು ಕಾಣುತ | ಅರಸ ನಿಜರಥವಿಳಿದು ತವಕದಿ |
ಹರಿ ಮುರಾರಿ ಮುಕುಂದಯೆನುತಲಿ | ಸ್ಮರಿಸುತಾಗ ||೪೭೨||

ನಂದನರ ಮರಣವನು ಮರೆದಾ | ನಂದವನು ತಾಳ್ದಾಗ ಹರಿಯೊಡ |
ನೆಂದನೆಲೆ ಪಂಕೇಜಭವನಿಗೆ | ತಂದೆಯಾಗಿ ||೪೭೩||

ನೀನು ನಡೆಸಿದ ಕೃತ್ಯ ಸಂಗತಿ | ಗಾನು ಮನದಲೆ ತಳೆದೆ ತೋಷವ |
ಶ್ರೀನಿವಾಸನೆ  ಭಕ್ತರನು ಬಲು | ಮಾನದಿಂದ ||೪೭೪||

ಪಾಲಿಸುವ ಬಿರುದುಗಳನರಿತೆನು | ಶ್ರೀಲಲಾಮನೆ ನಿನ್ನ ಚರಣಕೆ |
ಕಾಳಗದಿ ತನ್ನಸುವನೀವೆನು | ಕೇಳೆನಲ್ಕೆ ||೪೭೫||

**ಭಾಮಿನಿ**

ಭೂಮಿಪಾಲನ ನುಡಿಯ ಕೇಳ್ದು ರ |
ಮಾಮನೋಹರ ನಗುತಲಾ ಸಂ |
ಗ್ರಾಮದೊಳು ಪಾರ್ಥನಿಗೆ ಮಾಳ್ಪ ಸಹಾಯವನು ತಿಳಿದು ||
ನೀ ಮರುಳುತನಗೊಂಡು ಮಕ್ಕಳ |
ತಾಮಸದಿ ಕೊಲ್ಲಿಸಿದೆ ಸಾಕಿ |
ನ್ನಾಮಹಾತ್ಮನ ಕಂಡು ಮಿತ್ರತ್ವವನು ಪಡೆಯೆಂದ ||೪೭೬||

**ರಾಗ ಆರ್ಯಾ ಸವಾಯ್**

ಈ ತೆರದಿಂ ಸ್ಮರತಾತನು ಪೇಳ್ದಾ |
ಮಾತಿಗೆ ಹಂಸಧ್ವಜನಾಗಳ್ ||
ತಾ ತಳುವದೆ ಮಹಾತಿಶಯದ ಸಂ |
ಪ್ರೀತಿಯೊಳಿಂತೆಂದನು ಭರದೊಳ್ ||೪೭೭||

**ರಾಗ ಸೌರಾಷ್ಟ್ರ ಅಷ್ಟತಾಳ**

ಲಾಲಿಸು ಬಿನ್ನಹವನ್ನು ಕಾರುಣ್ಯದಿ । ಮಾರತಾತ । ದಯ ।
ಲಾಲಿಸಿ ಬಂದರಿಂ ಕೃತಕೃತ್ಯನಾದೆನು । ಮಾರತಾತ ॥೪೭೮॥

ಕ್ಷತ್ರಿಯೆಂಬಿರುದಿನೊಳ್ ಹಯವ ಕಟ್ಟಿದ ಮೇಲೆ । ಮಾರತಾತ । ಈಗ ।
ಧಾತ್ರಿಯೊಳ್ ಗೆದ್ದಡೇನಳಿದಡೇನದರಿಂದ । ಮಾರತಾತ ॥೪೭೯॥

ಕೇಡಾವುದಾತಂಗೆ ಸಾಕದಂತಿರಲದು । ಮಾರತಾತ । ನಿನ್ನ ।
ನೋಡಲಿನ್ನಿರ್ಪುದೆ ಪುತ್ರ ಶೋಕದ ಕ್ಲೇಶ । ಮಾರತಾತ ॥೪೮೦॥

ಜಾಹ್ನವಿಯೊಳಗಾಳ್ದನಿಂಗೆ ದಾಹಗಳುಂಟೆ । ಮಾರತಾತ । ಪೇ ।
ಳೆನ್ನೊಳು ಕೃಪೆಯಿಂದ ಕರುಣಾವಾರಿಧಿ ನೀನು । ಮಾರತಾತ ॥೪೮೧॥

**ವಾರ್ಧಕ**

ಆದಡೆಲೆ ನೃಪ ಸೌಖ್ಯದಿಂದೆಮ್ಮನೀಗ ನೀ ।
ನಾದರಿಸಿ ಪಾರ್ಥನಂ ಕಂಡು ಧರ್ಮಜನ ಹಯ ।
ಮೇಧಕೆ ಸಹಾಯಮಾಗಿಹುದೆಂದು ಕೃಷ್ಣನವನಂ ತೆಗೆದು ತಕ್ಕಯಿಸಲು ॥
ಕಾದಿ ಮಡಿದಾತ್ಮಜರ ಶೋಕಮಂ ಮರೆದು ಮಧು ।
ಸೂದನಂಗೆರಗಿದಡೆ ಸಂತೈಸಿ ಮಗುಳಪ್ಪಿ ।
ಯಾ ದಯಾಂಬುಧಿ ವಿಜಯನಂ ಕರೆದು ಮೈತ್ರಿಯಿಂದಾತನಂ ಕೂಡಿಸಿದನು ॥೪೮೨॥

**ರಾಗ ಪಂತುವರಾಳಿ ರೂಪಕತಾಳ**

ಧರಣಿಪ ಕೇಳ್ ಬಳಿಕುಳಿದ ಸೇನೆಯು ಸಹೋ ।
ದರ ಬಂಧು ಸುತ ಮಂತ್ರಿನಿವಹ ॥
ಗುರು ಪುರೋಹಿತ ಚಮೂಪರನೆಲ್ಲ ಕರೆಸಿಯೆ ।
ಹರಿ ಪಾರ್ಥರಿಗೆ ಕಾಣಿಸಿದನು ॥೪೮೩॥

ನಗರದಿಂ ತರಿಸಿ ಭಂಡಾರದರ್ಥಂಗಳ ।
ಬಗೆ ಬಗೆ ವಸ್ತು ಧಾನ್ಯಗಳ ॥
ಸೊಗಸಿನ ಯುವತಿಯರಿಭಹಯರಥ ಸಹಿ ।
ತಗಣಿತವನು ಕೊಟ್ಟನಂದು ॥೪೮೪॥

ನುಡಿವುದಿನ್ನೇನು ನಾ ಸಪ್ತಮಾಕೃತಿಗಳ ।
ತಡೆಯದೆಲ್ಲವನವರ್ಗಿತ್ತು ॥
ಕಡೆಗಯ್ದು ದಿನವಿದ್ದು ಮುಂದಕೆ ತೆರಳಲು ।
ಪಡೆಸಹಿತನುವಾದರೊಲಿದು ॥೪೮೫॥

ಹಂಸಕೇತನ ಕೂಡಿ ಕೊಟ್ಟು ಪಾರ್ಥಗೆ ಸೇನೆ ।
ಯಂ ಸಹಿತಲೆ ಮುಂದಕಾಗ ॥
ಲುಂ ಸನ್ನಾಹದಿ ಕಳುಹಿಸಿ ವಸ್ತುಗಳ ಕೊಂಡು ।
ಕಂಸಾರಿ ಹಸ್ತಿನಾವತಿಗೆ ॥೪೮೬॥

ಬಂದು ಸಂಭ್ರಮದೊಳಾ ಚಿಂತೆಯೊಳಿಹ ಧರ್ಮ ।
ನಂದನನಿಗೆ ಸಂತೈಸುತಲಿ ॥
ಚಂದದೊಳ್ ಧುರದ ವಾರ್ತೆಗಳೆಲ್ಲ ಬಿಡದೆ ತಾ ।
ನೊಂದುಳಿಯದೆ ವಿಸ್ತರಿಸಿದ ॥೪೮೭॥

**ವಾರ್ಧಕ**

ವಿಸ್ತರಿಪೆನಿನ್ನು ಮೇಲ್ ಕಥೆಯನಾಲಿಸು ನೃಪರ ।
ಮಸ್ತಕದ ಮಣಿಯೆ ಜನಮೇಜಯ ಧರಾನಾಥ ।
ಹಸ್ತಿನಾವತಿಗೆ ಬಂದಸುರಾರಿ ಹಂಸಧ್ವಜನ ದೇಶದಿಂದ ತಂದ ॥
ವಸ್ತುಗಳನವನಿಪತಿಗೊಪ್ಪಿಸಿದನಲ್ಲಿಯ ಸ ।
ಮಸ್ತ ವೃತ್ತಾಂತಮಂ ವಿವರಿಸಿರಲಿತ್ತ ಸುಭ ।
ಟಸ್ತೋಮ ಸಹಿತರ್ಜುನಂ ತಿರುಗಿದಂ ಬಡಗ ಮುಖಮಾಗಿ ತುರಗದೊಡನೆ ॥೪೮೮॥

**ಮಂಗಳ**

**ರಾಗ ಕಾಂಭೋಜಿ ಝಂಪೆತಾಳ**

ಜಯ ಮಂಗಳಂ । ನಿತ್ಯ । ಶುಭ ಮಂಗಳಂ ॥ ಪ ॥

ನೀಲಮೇಘಾಂಗನಿಗೆ ನಿಜಶರಣಸಾಂಗನಿಗೆ ।
ಕಾಲಭಯಶಿಕ್ಷನಿಗೆ ಕಮಲಾಕ್ಷಗೆ ॥
ಬಾಲಾರ್ಕಚಂದ್ರನಿಭ ಬಲುಕೋಟಿ ತೇಜನಿಗೆ ।
ಮೂಲೋಕದೊಡೆಯನಿಗೆ ಮುರವೈರಿಗೆ ॥
ಜಯ ಮಂಗಳಂ । ನಿತ್ಯ । ಶುಭ ಮಂಗಳಂ ॥೪೮೯॥

ಕಾಮಪಿತನಾದವಗೆ ಕಡುಚೆಲುವ ಮಾಧವಗೆ ।
ಸಾಮಗಾನವಿಲೋಲ ಸರ್ವೇಶಗೆ ॥
ವಾಮದೇವನ ಮಿತ್ರ ವಸುದೇವಪುತ್ರನಿಗೆ ।
ಶ್ರೀಮಹಾಗೋವಿಂದ ಗೋಪಾಲಗೆ ॥
ಜಯ ಮಂಗಳಂ । ನಿತ್ಯ । ಶುಭ ಮಂಗಳಂ ॥೪೯೦॥

ವರಹಾವತಾರನಿಗೆ ದುರಿತಸಂಹಾರನಿಗೆ ।
ಪರಮಪಾವನಗೆ ಪಾತಕನಾಶಗೆ ॥
ಧರೆಯೊಳತ್ಯಧಿಕವೆನಿಸುವ ಕಣ್ವಪುರದೊಳಗೆ ।

ಸ್ಥಿರವಾಗಿ ನೆಲಸಿರುವ ಶ್ರೀಕೃಷ್ಣಗೆ ॥
ಜಯ ಮಂಗಳಂ । ನಿತ್ಯ । ಶುಭ ಮಂಗಲಂ ॥೪೬೧॥

*ಯಕ್ಷಗಾನ ಸುಧನ್ವಸುರಥರ ಕಾಳಗ ಮುಗಿದುದು*

**॥ ಶ್ರೀಕೃಷ್ಣಾರ್ಪಣಮಸ್ತು ॥**

# ಯಕ್ಷಗಾನ ಅನುಸಾಲ್ವ ಗರ್ವಭಂಗ ಮತ್ತು ನೀಲಧ್ವಜ ಕಾಳಗ

## ಪಾತ್ರ ವರ್ಗ

| | | | | | |
|---|---|---|---|---|---|
| ಧರ್ಮರಾಜ | ದ್ರೌಪದಿ | ಜ್ವಾಲೆ | ಭೀಮ | ಸುವೇಗ | ಮದನಮಂಜರಿ |
| ಅರ್ಜುನ | ಬಾದರಾಯಣ | ಸಖಿಯರು | ವೃಷಕೇತು | ದೇವಕಿ | ಸೈರಂಧ್ರಿ |
| ಮೇಘನಾದ | ಅನುಸಾಲ್ವ | ಗಂಗೆ | ಯೌವನಾಶ್ವ | ಪ್ರದ್ಯುಮ್ನ | ಅಗ್ನಿ |
| ಶ್ರೀಕೃಷ್ಣ | ನೀಲಧ್ವಜ | ಉನ್ಮುಖ | ಸತ್ಯಭಾಮೆ | ಪ್ರವೀರ, ಚಾರಕರು ಇತ್ಯಾದಿ | |

೧

**ಭಾಮಿನಿ**

ಶ್ರೀಯರಸನನು ಭಜಿಸಿ ಗೌರೀ ।
ಪ್ರೀಯನಂಘ್ರಿಯ ಧ್ಯಾನಿಸುತ ಗಣ ।
ನಾಯಕಂಗಭಿನಮಿಸಿ ವಾಗೀಶ್ವರಿಯ ಬಲಗೊಂಡು ॥
ತೋಯಜೋದ್ಭವ ಮುಖ್ಯಸುರಸಮು ।
ದಾಯಕಾನತನಾಗಿ ಯದುಕುಲ ।
ರಾಯ ಕೃಷ್ಣನ ದಯದಿ ಪೇಳುವೆನೀ ಕಥಾಮೃತವ ॥೧॥

**ದ್ವಿಪದಿ**

ಶ್ರೀಲಲನೆಯನು ಸ್ತುತಿಸಿ ಸುಜನರಿಗೆ ನಮಿಸಿ ॥
ಬಾಲದುರ್ಗಾಂಬಿಕೆಯ ಮನದಿ ನೆಲೆಗೊಳಿಸೀ ॥೨॥

ಶೀಲನಿಧಿಮದ್ಗುರು ಕೃಪಾಪ್ರಸರವೆರಸೀ ॥
ಮೂಲೋಕಭರಿತ ಚಿದ್ರೂಪನನು ಸ್ಮರಿಸೀ ॥೩॥

ವರಮಹಾಭಾರತ ಪುರಾಣಕಥನದಲಿ ॥
ಅರಸ ಧರ್ಮಜನಶ್ವಮೇಧ ತೊಡಗುತಲಿ ॥೪॥

ಧರಣಿಪತಿ ಯೌವನಾಶ್ವನ ಹಯವ ತರಿಸೀ ॥
ದುರುಳನನುಸಾಲ್ವನನು ಹರಿಪದಕೆಮಣಿಸೀ ॥೫॥

ನೀಲಧ್ವಜನ ಜೈಸಿ ಪಾರ್ಥ ಕಪ್ಪವನೂ ॥
ಭೂಲೋಲಧರ್ಮಜಂಗಿತ್ತ ಚರಿತೆಯನೂ ॥೬॥

ಪೇಳುವೆನು ತಿಳಿದಂತೆ ಯಕ್ಷಗಾನದಲೀ ॥
ಶೀಲರಿದತಿದ್ದಿ ಮೆರೆಸುವುದು ಮೋದದಲೀ ॥೭॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಭಾಗವತ ಜನಮೌಳಿವರಗುಣ ।
ಸಾಗರಗೆ ಜನಮೇಜಯಗೆ ಮಹ ।
ಯೋಗಿ ಜೈಮಿನಿ ಪೇಳುತಿರೆ ಸೊಗ । ಸಾಗಿ ಕಥನ ॥೮॥

ಯತಿ ಕುಲೋತ್ತಮಗೆಂದ ಪೃಥ್ವೀ ।
ಪತಿ ಯಮಜ ತಾನಶ್ವಮೇಧವ ।
ನತಿ ಮುದದಿ ಕೈಗೊಂಡು ಲಕ್ಷ್ಮೀ । ಪತಿಯ ದಯದಿ ॥೯॥

ಖೂಳನನು ಸಾಲ್ವಕನ ಧುರದಲಿ ।
ಸೋಲಿಸುತ ರವಿಮೊಮ್ಮಮತ್ತಾ ।
ಶ್ರೀ ಲಲಾಮನ ಪದದಿ ಕೆಡಹಿದ । ಮೇಲೆ ಭರದಿ ॥೧೦॥

ನೀಲಕೇತಾದ್ಯವನಿಪಾಲರ ।
ಕಾಳಗದಿ ನರ ಜೈಸಿದಂದವ ।
ಪೇಳಬೇಹುದೆನಲ್ಕೆ ವರ ಮುನಿ । ಪಾಲನುಡಿದ ॥೧೧॥

**ರಾಗ ಕಾಂಭೋಜಿ ಝುಂಪೆತಾಳ**
ಇಂದು ವಂಶಜಧರ್ಮ । ನಂದನನು ಹರಿಯ ದಯ ।
ದಿಂದ ರಾಜ್ಯವನಾಳುತಿರಲು ॥
ಬಂಧುಬಾಂಧವರು ತ । ಮ್ಮಂದಿರೊಡಗೂಡಿ ಸುಖ ।
ದಿಂದ ಹಸ್ತಿನಪುರದೆ ಮುದದಿ ॥೧೨॥

ಅತಿ ಮನೋಹರಮಾಗಿ । ಕ್ಷಿತಿಯ ಪಾಲಿಸುತಿರಲು ।
ಶತಮಖಾದ್ಯರು ಮೆಚ್ಚುವಂತೆ ॥

ಮತಿಯುತನು ಜಾನಕಿಯ । ಪತಿಯವೊಲು ಸಂತಸದಿ ।
ಕ್ಷಿತಿಪ ನಳನಹುಷರಿಂ ಮಿಗಿಲು ॥೧೩॥

ಗುರು ಭೀಷ್ಮ ಕರ್ಣ ಕೌರವ ಮುಖ್ಯ ಬಾಂಧವರ ।
ಧುರದೊಳೆಚ್ಚಾಡಿ ಸಂಹರಿಸಿ ॥
ದೊರಕಿದಘಮಂ ನೆನೆದು । ಧರಣಿಪತಿಯೊಂದುದಿನ ।
ಮರುಗಿದನು ತನ್ನ ಮನದೊಳಗೆ ॥೧೪॥

**ಭಾಮಿನಿ**
ಅಕಟಕಟ ಬಾಂಧವರ ಕೊಂದೀ ।
ಸಕಲ ವೈಭವವೇಕೆ ಕುಲಕಂ ।
ಟಕನು ತಾನಾದೆನಲ ಪಿರಿದಪಕೀರ್ತಿಯಾಯಿತಲಾ ॥
ಸುಖವದೆಲ್ಲಿಹುದೆನಗೆ ಮಹ ಪಾ ।
ತಕವ ಪೊತ್ತಿಹ ಮೇಲೆ ಸಂತತ ।
ಮುಕುತಿಯಾಗದೆನುತ್ತ ಚಿಂತಿಸುತಿರ್ದನವನೀಶ ॥೧೫॥

**ರಾಗ ಮಧ್ಯಮಾವತಿ ತ್ರಿವುಡೆತಾಳ**
ಅರಸನೀಪರಿ ಚಿಂತಿಸುತ್ತಿರ । ಲರಿತುವೇದವ್ಯಾಸ ಹಸ್ತಿನ ।
ಪುರಕೆ ಬರಲಿದಿರ್ಗೊಂಡು ಮನ್ನಿಸೆ । ಹರುಷದಿಂ ಕುಳ್ಳಿರ್ದನೂ ॥ ವರಮುನೀಂದ್ರ ॥೧೬॥
ಧರೆಯಧಿಪನನುತಾಪದಲಿ ನಿಜ । ಶಿರವತಗ್ಗಿಸಿ ಮೌನದಲಿ ತಾ ।
ನಿರಲುಕಂಡವನಿಪನ ಭಾವವ । ಪರಮಋಷಿ ಬೆಸಗೊಂಡನೂ ॥ ನರಪತಿಯನೂ ॥೧೭॥

**ರಾಗ ತೋಡಿ ತ್ರಿವುಡೆತಾಳ**
ಎಲೆಮಹೀಪತಿ ಚಿಂತೆಯೇಕೈ ।
ಜಲಜನಾಭನಕರುಣದಿಂದಲಿ ।
ಕಲಹಕಾನುವರಿಲ್ಲ ನಿನ್ನಲ್ಲಿ ॥
ಇಳೆಯ ಪಾಲಿಪ ಹರುಷದೇಳ್ಗೆಗೆ ।
ಕಳೆಯು ಗುಂದಿದೆ ತವ ಮುಖಾಂಬುಜ ।
ತಿಳುಹುನಿಜ ಮರೆ ಮಾಚದೆನ್ನಲ್ಲಿ ॥೧೮॥

ವರ ಯಮಿಪನೀಕೇಳು ಲಕ್ಷ್ಮೀ ।
ವರನ ಕರುಣದಿ ಭಾಗ್ಯವಿದೆ ಮ ।
ತ್ತರಿಗಳುಪಹತಿಯಿಲ್ಲ ಚಿತ್ತವನೂ ॥
ಸೆರೆವಿಡಿದುದನವರತ ಶೋಕದೊ ।
ಳುರಿದುದೆನ್ನೊಡಲಿನ್ನು ಸೈರಿಸ ।
ಲರಿಯೆನೆನೆ ಮುನಿನಾಥನಿಂತೆಂದ ॥೧೯॥

ವಾರಿನಿಧಿರವಿಕಿರಣದುರಿಯಿಂ ।
ದಾರಿಪೋದರೆ ಬಳಿಕಲದಕೇ ।
ನೀರನಿತ್ತಪರಾರು ತ್ರೈಜಗದಿ ॥
ಧಾರಿಣಿಪನೀ ಚಿಂತಿಸಿದಡಿ ।
ನ್ನಾರು ಪರಿಹರಿಸುವರು ಪೇಳೆನೆ ।
ಭೂರಮಣ ತಾಪಸನೊಳಿಂತೆಂದ ॥೧೦॥

**ಭಾಮಿನಿ**

ತಂದೆಮುನಿಚಿತ್ತೈಸು ಶಿಶುತನ ।
ದಿಂದ ನಮ್ಮನುಕಾಯ್ದ ಗಂಗಾ ।
ನಂದನಂಗನುಚಿತವನೆನೆದೆವು ಕರ್ಣನನುರಣದಿ ॥
ಕೊಂದೆವಗ್ರಜನೆಂದರಿಯದೆ ಮ ।
ದಾಂಧರಂದದೊಳಖಿಳರನು ಸ ।
ದ್ಭಾಂಧವರನುಳಿದಿಹುದರಿಂ ವನವಾಸ ಲೇಸೆಂದ ॥೧೧॥

**ರಾಗ ಸಾಂಗತ್ಯ ರೂಪಕತಾಳ**

ಅರಸನಿಂತೆನೆ ಮೌನಿ । ವರನೆಂದನೆಲೆಯುಧಿ ।
ಷ್ಠಿರ ಶಾಸ್ತ್ರಾಗಮ ಪುರಾಣಗಳ ॥
ಅರಿಯದ ಪ್ರೌಢನೇ । ಧರೆ ನಿನ್ನ ವಶವಾಯ್ತು ।
ಹರುಷದಿ ಪಾಲಿಸಿನ್ನಿಳೆಯ ॥೧೨॥

ದುರಿತವ ಪೊತ್ತಿಹೆ । ಧರೆವಶವಾಯ್ತೆಂಬ ।
ಹರುಷವದೆನಗಿಲ್ಲವಿನ್ನು ॥
ಮರುತಗಿತ್ತೊಡೆತನವನ್ನು ಕಾಂತಾರಕ್ಕೆ ।
ತೆರಳಿ ಶ್ರೀ ಹರಿಯಧ್ಯಾನಿಪೆನೂ ॥೧೩॥

ಧಾತ್ರೀಶ ಲಾಲಿಸು । ಕ್ಷಾತ್ರಧರ್ಮವನೋಡೆ ।
ಗೋತ್ರನಾಶನದಿಂದದುರಿತ ॥
ಪಾರ್ಥಿವರಿಗೆ ಬಪ್ಪ । ವಾರ್ತೆಯೆಳ್ಳನಿತನಾ ।
ನೀ ತ್ರಿಜಗದಲಿ ಕೇಳ್ದರಿಯೇ ॥೧೪॥

ಧರೆಯನೀ ಪಾಲಿಸ । ದಿರಲುನಿರ್ದೋಷಿಯೆ ।
ಹರಹರಾ ಭೂಪನೀ ಬನಕೇ ॥
ತೆರಳಲಪ್ಪುದೆ ಲೇಸು । ತೆರಳಯ್ಯ ಪಟ್ಟವ ।
ಮರುತಜಗೀವೆವಾವಿನ್ನು ॥೧೫॥

**ಭಾಮಿನಿ**

ಧರಣಿಪತಿ ಮರುಳಹೆಯ ಶಶಿಕುಲ ।
ದರಸುಗಳು ಸತ್ಕ್ರತುವ ವಿರಚಿಸ ।
ದಿರಲು ಸಲರದರಿಂ ಮಹಾಯೀದಿ ಕರ್ಮಗಳ ॥
ಭರದಿ ನೀನೆಸಗಿದರೆ ಕುಲಸಂ ।
ಹರಣಕಿಲ್ಬಿಷಪೋಗಿ ಶುಚಿಯಹೆ ।
ತ್ವರಿತದಿಂ ನೀ ತುರಗಮೇಧವ ಗೈವುದೆನಲೆಂದ ॥೧೬॥

**ರಾಗ ಶಂಕರಾಭರಣ ಏಕತಾಳ**

ಪರಮ ತಾಪಸೇಂದ್ರಕೇಳು । ಮೆರೆವವಾಜಿಮೇಧಪಿಂತೆ ।
ವಿರಚಿಸಿದರ್ಯಾರೆಂಬುದ । ನರುಹೆನಲೆಂದ ॥೧೭॥

ಧರಣಿಪಕೇಳ್ಪಿಂತೆ ರಾಮ । ಧುರದಿ ದಶಶಿರನ ಕೊಂದ ।
ದುರಿತಹರಣಕಾಗಿ ಗೈದ । ತುರಗಮೇಧವ ॥೧೮॥

**ವಾರ್ಧಕ**

ಹೇ ದಯಾನಿಧಿಯೆ ಕಲುಷೋದಧಿಯಪೀರ್ವಹಯ ।
ಮೇಧವಡಬನ ಸೃಜಿಪ ವಿಧಿಯ ಪೇಳೆನೆ ಭೋಜ ।
ನಾದಿ ದ್ರವ್ಯಗಳದ್ವಿಜರಿಂಗಿತ್ತು ಮಖಹಯದ ಪಣೆಗೆ ಲಿಖಿತವ ಬಂಧಿಸಿ ॥
ಮೇದಿನಿಯ ಚರಿಸಿ ನೃಪರಂಗೆಲ್ದು ಕಪ್ಪಸಹಿ ।
ತೈದಿ ಬಹುದೊಂದು ವರುಷದೊಳನಿತು ದಿವಸ ನೀ ।
ಸಾಧಿಪುದು ಸತಿಯೊತ್ತಿನಿಂದೀರ್ದು ಕಾಮೇಚ್ಛೆಮರೆಯುತಸಿಪತ್ರವ್ರತವ ॥೧೯॥

ಭೂರಮಣ ಲಾಲಿಸೈ ಗೌರಾಂಗಮಸಿತ ಪ್ರ ।
ಭಾರಾಜಿತೈಕ ಶ್ರವಣೋರು ಪೀತಸುಪುಚ್ಛ ।
ಭೂರಿಗಮನ ವಿದಿನಿತುವಾರುಹದ ಲಕ್ಷಣವಿದೆಂದು ಮುನಿನುಡಿಯೆ ಕೇಳ್ದು ॥
ಈ ರೀತಿಯಿಂದ ಮುಖವೆಸಗುವಡೆ ಧನವಿಲ್ಲ ।
ಧಾರಿಣಿಯೊಳರಸುವಡೆ ಕುರುನೃಪತಿಯಿಂದ ಮಿತಿ ।
ಮೀರಿ ದಣಿದಿಹುದಿಳೆಯದೇಗೈವೆ ಶ್ರೀವರಂ ಸಹಿತಿಲ್ಲವೆಂದನೃಪನೂ ॥೨೦॥

**ರಾಗ ಕಾಂಭೋಜಿ ಝಂಪೆತಾಳ**

ಋಷಿವರನೆ ಕೇಳು ನೀ । ನುಸುರಿದಂದದ ಹಯವು ।
ವಸುಧೆಯೊಳಗೆಲ್ಲಿಹುದೊಕಾಣೇ ॥
ಬಸವಳಿದರೆನ್ನನುಜ । ರಸಮಸಂಗರದೊಳೆನ ।
ಲುಸುರಿದನು ಬಾದರಾಯಣನು ॥೨೧॥

ಧರಣೀಶ ಕೇಳ್ವಿಂತೆ । ಮರುತ ನೃಪ ಹಯಮೇಧ ।
ವಿರಚಿಸಿ ದ್ವಿಜರ್ಗೀಯೆಧನವ ॥
ಪೊರಲಾರದವರಂದು । ತೊರೆದ ಧನವಿಹುದು ಹಿಮ ।
ಗಿರಿಯೊಳದ ತರಿಸುನೀನರಸ ॥೩೧॥

ಅಹಹ ಯತಿಪಾಲ ಮರ್ಕಟಗೆ ಮದ್ಯವನಿತ್ತ ।
ಡಹುದೆ ಕುಲಹತ್ಯ ಭವವನವ ॥
ದಹಿಸಲೆಸಗುವ ಮಖವ ದ್ವಿಜರೊಡವೆಯಿಂ ಗೈದ ।
ರಹುದೆ ಸದ್ಗತಿ ಕೀರ್ತಿಯೆನಗೇ ॥೩೩॥

ಪರಶುಧರ ಪೂರ್ವದೊಳು । ತರಿದು ನೃಪರನುಧರೆಯ ।
ವರವಿಪ್ರರಿಂಗಿತ್ತುದಲ್ಲೈ ॥
ಭರಿತ ಬಲರಹರು ಧರೆ । ಗರಸರದರಿಂ ಧನವ ।
ತರಿಸಯ್ಯ ಗಿರಿಯ ತಟದಿಂದ ॥೩೪॥

**ವಾರ್ಧಕ**
ಧರೆಯಧಿಪಲಾಲಿಸೈ ಭದ್ರಾವತೀ ನಗರ ।
ದರಸನಾಯೌವನಾಶ್ವನೊಳಿಹುದು ತುರಗವದ ।
ತರಿಸುವುದು ಕಳುಹುನಿನ್ನನುಜನಹಭೀಮನಂ ಘನಪರಾಕ್ರಮಿಯಲ್ಲವೇ ॥
ವರಕರ್ಣಸೂನು ವೃಷಕೇತುತಾಂ ಕಿರಿಬಲನೆ ।
ಭರಿತಬಲನಾ ಘಟೋತ್ಕಚತನಯನಿಲ್ಲವೇ ।
ಹರಿನೆನಸಿದರೆ ಬಾರನೇಕೈಕೊಳಧ್ವರವನೆನೆ ಭೀಮನಿಂತೆಂದನೂ ॥೩೫॥

**ರಾಗ ಭೈರವಿ ಏಕತಾಳ**
ಜನಪತಿ ತೊಡಗಧ್ವರವ । ಬಿಡು ।
ಮನಸಿನೊಳಿಹ ಸಂಶಯುವ ॥
ಘನವಲ್ಲಿದು ವರಹಯವ । ತಹ ।
ರೆನಗೀವುದು ವೀಳಯವ ॥೩೬॥

ಕ್ಷಣದಲಿ  ಭದ್ರಾವತಿಯ । ಭೂ ।
ಪನಗೆಲಿದಾತನ ಪಡೆಯ ॥
ರಣದಲಿ ತರಿದಾಡುವೆನು । ತರು ।
ವೆನು ತುರಗವ ನೋಡಿನ್ನು ॥೩೭॥

ತಂದೀಯದಡಶ್ವವನು । ಖತಿ ।
ಯಿಂದಲಿಧರೆಯಮರರನು ॥

ಕೊಂದ ದುರಿತ ಬರಲೆನಗೇ । ಸುರ ।
ವೃಂದವೆ ಸಾಕ್ಷಿಯೀನುಡಿಗೇ ॥೩೮॥

**ವಾರ್ಧಕ**

ಅಗ್ರಭವ ಲಾಲಿಸಿನ್ನೇತರದು ಸಂದೇಹ ।
ಶೀಘ್ರದಿಂ ಕಾರ್ಯಕುಜ್ಜುಗಿಸು ಸಾಹಾಯವ ಸ ।
ಮಗ್ರಧನ ಮಖಹಯವ ಸಹತೋರಿದಂ ಬಾದರಾಯಣಂ ನಮಗೆನ್ನಲು ।
ತಾ ಗ್ರಹಿಸುತಿನಿತ ವೃಷಕೇತು ತಾನಿದಿರೆದ್ದು ।
ವಿಗ್ರಹಂ ತನಗೊದಗಿತಿನ್ನೆನುತಲುಬ್ಬಿವಾ ।
ಜಿ ಗ್ರಹಣಕನುವಾಗಿ ನಿಂದು ಧರ್ಮಜಗೆರಗಿ ಪೌರುಷದೊಳಿಂತೆಂದನೂ ॥೩೯॥

**ರಾಗ ಮಾರವಿ ಏಕತಾಳ**

ಬಿಡುಬಿಡುಯೋಚನೆ । ಕೊಡುತನಗಪ್ಪಣೆ ।
ಪೊಡವಿಪತಿಗಳೊಡೆಯ ॥
ನಡೆವೆ ಮರುತಸುತ । ನೊಡನೆ ಮೆರೆವ ಹಯ ।
ಪಿಡಿದ್ಯೆತಹೆನಯ್ಯ ॥೪೦॥

ಗಂಧವಹಾತ್ಮಜ । ನೆಂದ ನುಡಿಗೆಡರು ।
ಬಂದರೆ ರವಿಸುತಗೇ ॥
ಕಂದನ ಕೇಳರಿ । ವೃಂದವರಿದು ಬಹೆ ।
ನಿಂದಾಂ ನಿನ್ನೆಡೆಗೇ ॥೪೧॥

**ರಾಗ ಶಂಕರಾಭರಣ ಏಕತಾಳ**

ನಂದನ ಕೇಳ್ನೀನಿನ್ನೆಮಗೆ । ಮುಂದೆ ಸೋಮಕುಲದೇಳಿಗೆಗೆ ॥
ಕಂದ ನಿನ್ನ ಕಳುಹಲಾರೆ । ನಿಂದು ಸಮರಕೆ ॥
ಹಿಂದೆ ಕೇಳ್ನಿನ್ನಯ್ಯ ಜ್ಯೇಷ್ಟ । ನಂದರಿಯದೆ ತರಿದೆವವನ ।
ನೆಂದರೇ ವೃಷಧ್ವಜತಾ । ನಂದು ನುಡಿದನೂ ॥೪೨॥

**ವಾರ್ಧಕ**

ತಂದೆಕೇಳನುಜರಾಗಿರ್ಪ ನಿಮ್ಮೈವರಂ ।
ಪೊಂದಿರದೆ ಮಜ್ಜನಕ ಕಡುದ್ರೋಹಗೈದನದ ।
ರಿಂದಾತನೆಸಗಿದಪರಾಧಮಂ ಪರಿಹರಿಸದಿರಲು ಧಾರಿಣಿಯೊಳವನ ॥
ಕಂದನಾನಿರ್ದೇನುಫಲವೆನ್ನ ಕಳುಹು ಧುರ ।
ಕಿಂದು ಪವನಜಗೆ ಬೆಂಬಲವಾಗಿ ರಿಪುಗಳಂ ।
ಕೊಂದುನಿಜ ಶೌರ್ಯಮಂ ತೋರ್ಪೆಕೊಡು ವೀಳಯವನೆಂದುಮಣಿದಂ ಪದದೊಳು ॥೪೩॥

**ಕಂದ**

ಪರಿಕಿಸುತವರೀರ್ವರ ಮನ ।
ದಿರವಂ ವರಮೇಘನಾದನಾಕ್ಷಣ ಬರುತಂ ॥
ಶಿರವಂ ಚಾಚುತ ಧರ್ಮಜ ।
ಗಿರದೊಯ್ಯನೆ ತಾನಿಂತೆಂದಂ ಭರದಿಂದಂ ॥೪೪॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಅರಸ ಕೇಳ್ಸಂಗರದಿ ರಿಪುಗಳ । ತರಿವೆನಾನೆಂಬಾಳುತನವೆನ ।
ಗಿರದು ಮದ್ವಿನ್ನಪವ ಲಾಲಿಸು । ಕರುಣದಿಂದ ॥೪೫॥

ಆವಪರಿಯಿಂದಾದರಿನ್ನೀ । ಪಾವಮಾನಿಗೆ ವಾರುಹವನೀ ।
ಭೂವಳಯದೊಳಗೆಲ್ಲಿರಲು ತಂ । ದೀವೆ ಜವದಿ ॥೪೬॥

ಈ ನುಡಿಗೆ ತಪ್ಪಿದರೆ ತವಪದ । ದಾಣೆಸರಿದಪೆನುಗ್ರನರಕಕೆ ।
ನೀನೆನಗೆ ವೀಳಯವನೀಯೈ । ಮಾನವೇಂದ್ರ ॥೪೭॥

**ಭಾಮಿನಿ**

ಮರುತಸಂಭವ ಮೊಮ್ಮನೆಂದುದ ।
ಕರಸ ಹರುಷಿಸಲೆಂದ ಪವನಜ ।
ಹರಿಯ ದಯವಿರೆ ಗೆಲ್ವೆನೆನಲಿಂತೆಂದ ಮುನಿವರನು ॥
ಧರಣಿಪತಿ ತವ ಭಾಗ್ಯಕೆಣೆಯಹ ।
ರಿರುವರೇಕೈ ಸೇರಿತಿನ್ನಾ ।
ತುರಗವೀ ಮಾರುತಿಯು ಪೇಳಿದ ಮೇಲೆ ಬಿಡುಭಯವ ॥೪೮॥

**ರಾಗ ಕೇತಾರಗೌಳ ಅಷ್ಟತಾಳ**

ಮೇದಿನೀಪತಿ ಕೇಳು । ಮಾಧವನನು ನೀವಿ ।
ನೋದದಿ ಬರಿಸಿಕೊಂಡು ॥
ಆ ದಯಾಬ್ಧಿಯನುಜ್ಞೆ । ಯಾದಂತೆ ಮುಂದಿನ್ನು ।
ಸಾಧಿಸುಕಾರ್ಯವನು ॥೪೯॥

ತುರಗವ ತಂದನಂ । ತರದಿ ಧನವತೋರ್ಪೆ ।
ಬರುವೆ ನಿಶ್ಚಯನಿಮ್ಮನು ॥
ಹರಿಯೆಪಾಲಿಸಲೆಂದು । ತೆರಳಲು ಮುನಿಯತ್ತ ।
ಧರಣಿಪನಿರ್ದನಿತ್ತ ॥೫೦॥

ಶತಮಖನುತ ಲಕ್ಷ್ಮೀ । ಪತಿಯಿಲ್ಲದಧ್ವರ ।
ಹಿತಮಾಹುದೇ ಮನಕೆ ॥

ಅತಿಜವದಿಂ ಕಿರೀಟಿಯ ಕಳುಹುವೆನೆಂಬ ।
ಮತದಿ ಧ್ಯಾನಿಸುತಿರ್ದನು ॥೫೦॥

ಶ್ರೀರಮಾಧವ ಭಕ್ತೋ । ದ್ಧಾರಪಾಲಿಪುದೆನೆ ।
ದ್ವಾರಕೆಯೊಳಗರಿತು ॥
ಭೂರಿಸಂಭ್ರಮದಿಂದ । ಗಾರುಡಧ್ವಜನಾಗಿ ।
ಸಾರಸಾಂಬಕ ಬಂದನೂ ॥೫೧॥

೭

**ರಾಗ ಆರಭಿ ಏಕತಾಳ**

ಬಂದ । ಗೋವಿಂದನು ನಿತ್ಯಾ । ನಂದ ॥ ಪಲ್ಲವಿ ॥

ಬಂದನು ಭರದಿ ಮು । ಕುಂದತಾನಾಗಿ ಖ ।
ಗೇಂದ್ರನನೇರಿ ಭಕ್ತ । ವೃಂದವ ಪೊರೆವರೆ ॥ ಅ. ಪಲ್ಲವಿ ॥

ಶ್ರೀಶಂ । ಮನಮೋಹನ । ವೇಷಂ । ಶತಭಾಸ್ಕರ ಸಂ । ಕಾಶಂ ।
ಮನ್ಮಥ ಪಿತಸುವಿ । ಲಾಸಂ । ನಗೆಮೊಗದ ಸ । ರ್ವೇಶಂ ॥
ವಾಸವಾರ್ಚಿತನು ಕೈ । ವೀಸುತಭಯಹಸ್ತ ।
ಲೇಸ ಪಾಲಿಸಲು ಮ । ಹೀಶನೆಡೆಗೆ ಹರಿ ॥೫೩॥

**ಕಂದ**

ಭೂಮಿಪ ಕೇಳಾ ಮುರಹರ ।
ಸಾಮಜಪುರದೆಡೆಗೈತರೆ ಕಂಡೋರ್ವ ಚರಂ ॥
ತಾ ಮುದದಿಂದಲಿ ನಡೆತಂ ।
ದಾಮಹಿಪತಿಗೆರಗುತ ಪೇಳಿದನೀ ತೆರನಂ ॥೫೪॥

**ರಾಗ ಮುಖಾರಿ ಏಕತಾಳ**

ಇಳೆಯಪಾಲಕ ಲಾಲಿಸಯ್ಯಾ । ನಾನೆಂಬ ನುಡಿಯ ।
ನೊಲಿದು ಸಂತಸದಿಂದ ಜೀಯ ॥
ನೆಲನೊಡೆಯರ ಕುಲ । ತಿಲಕ ನಿನ್ನಯ ಮೇ ।
ಲಿರಿಸಿ ದಯವನಾ । ಜಲಜಾಂಬಕ ಯದು ।
ಕುಲದೆರೆಯನು ಯೀ । ಪೊಳಲ ಪೊರೆಗೆ ನಿಜ ।
ಲಲನೆಯರೆಲ್ಲರ । ನುಳಿದೈತಂದಿಹ ॥೫೫॥

ಸಿರಿಯರಸನನಿದಿರ್ಗೊಳಲು । ಬೇಗ ನೀನೇಳು ।
ಬರಿದೆ ತಡವ್ಯಾಕೆ ಕೃಪಾಳು ॥

ಪರಿ ಪರಿತೊಳಲು । ತ್ತರಸುವ ಬಳ್ಳಿ ಕಾ ।
ಲ್ಗಿರದೆ ತೊಡಕಿದಂ । ತೊರೆವದೇನು ಶ್ರೀ ।
ಹರಿ ತಾ ಬಂದಿಹ । ಕರುಣಾಕರ ಶರ ।
ಣರ ಧೊರೆ ಕೇಳೆಂ । ದೆರಗಿದ ಚರಣಕೆ ॥೫೬॥

**ಭಾಮಿನಿ**
ಚರರ ನುಡಿಯನು ಕೇಳಿ ಧರ್ಮಜ ।
ಭರಿತ ಸಂತಸದಿಂದಲಾತಗೆ ।
ಹಿರಿದುಚಿತವಿತ್ತವನ ಕಳುಹಿಸಿ ಬಳಿಕ ಶ್ರೀವರಗೆ ॥
ಶರಣಜನರಾವಳಿಯ ಸಲಹುವ ।
ಕರುಣವೆಂತುಟೊಯೆನುತ ತನ್ನನು ।
ಜರುಸಹಿತಲೈತಂದ ಹರಿಯನು ಕಾಂಬ ತವಕದಲಿ ॥೫೭॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಬಂದರಸ ಭಕ್ತಿಯಲಿ ಶ್ರೀ ಗೋ । ವಿಂದನಡಿಗಭಿನಮಿಸೆ ಕರುಣಾ ।
ಸಿಂಧು ತೆಗೆದಪ್ಪಿದನು ಸಂತಸ । ದಿಂದ ನೃಪನ ॥೫೮॥

ಚರಣಕಾನತರಾದ ಮರುತಜ । ನರ ನಕುಲಸಹದೇವರನು ಮೃದು ।
ಕರದಿ ಪಿಡಿದೆತ್ತಿದನು ಲಕ್ಷ್ಮೀ । ವರನು ದಯದಿ ॥೫೯॥

ಫಣಿಶಯನ ಗೋವರ್ಧನೋದ್ಧರ । ಣನೆ ಚಿನುಮಯನೆ ಪಾಲಿಸೆಂದಾ ।
ವನಜಮುಖಿ ದ್ರೌಪದಿ ಮಣಿಯೆ ಶಿರ । ವನು ನೆಗಹಿದ ॥೬೦॥

ಬಳಿಕ ನೃಪತಿಗೆ ಕರವಗೊಟ್ಟಾ । ಬಲಿಮಥನ ನಡೆತಂದ ಹರಿಯೊಳು ।
ಸಲುಗೆಯೆಂತುಟೊ ಪಾಂಡುಸುತರಿಗೆ । ತಿಳಿವರಾರೈ ॥೬೧॥

ಸಿರಿಯರಸನಾಸ್ಥಾನಕೈತರ । ಲಿರುಳು ನೃಪನೋಲಗವನಿತ್ತನು ।
ಧರಣಿಪತಿ ಕೇಳೇನನೆಂಬೆನು । ಮೆರೆವ ಸಭೆಯ ॥೬೨॥

**ವಾರ್ಧಕ**
ಹರಿಯಂತೆ ಶ್ರೀಯುತಂ ನಭದಂತೆ ಕವಿಯುತಂ ।
ಸರಸಿರುಹ ಸಖನಂತಮಿತಸುತೇಜಾನ್ವಿತಂ ।
ವರಸರಿತ್ಪತಿಯಂತೆ ಹರಿದರುಶನೋತ್ಸಾಹದೀ ಘೋಷಭರಿತಮಾಗಿ ॥
ಸುರಲೋಕದಂತೆ ಸುಮನಸಯುತಂ ಕೈಲಾಸ ।
ಗಿರಿಯಂತೆ ಶಿವಯುತಂ ತಾನಾಗಿ ಸೊಬಗಿನಿಂ ।
ಮೆರೆವ ನೃಪನಾಸ್ಥಾನಮಂಟಪಂ ಕಂಡು ಹರಿ ನಗುತ ಭೂಮಿಪಗೆಂದನು ॥೬೩॥

**ರಾಗ ಕೇತಾರಗೌಳ ಅಷ್ಟತಾಳ**

ಧರಣೀಶ ಕೇಳ್ನಿನ್ನ । ಸಿರಿಗೆಣೆಯುಂಟೆ ಯಿ ।
ನ್ನರಸು ಧರ್ಮ ಕ್ರಿಯೆಗೇ ॥
ಕುರು ಪುರೂರವರ್ಮೈದೆ ಸೋಲುವರಾವಿನಿ ।
ತರೊಳಿನ್ನು ಧನ್ಯರೆಂದ ॥೬೪॥

ಅಹುದುನಿಜಾಶ್ರಿತನಿವಹದ ಘನತೆಯೊ ।
ಳಹಿತಲ್ಪ ಧನ್ಯರಿನ್ನು ।
ವಿಹಿತವೀನುಡಿ ಭಕ್ತವತ್ಸಲನೆಂಬುದ ।
ಕಿಹುದೆ ಸಂದೇಹ ಮೇಣು ॥೬೫॥

ಧರೆಯೊಳು ಪಾಂಡವಸ್ಥಾಪನಾಚಾರ್ಯರೆಂ ।
ದೊರೆಯದಿರ್ಪರೆ ನಿನ್ನನು ॥
ಮುರಹರ ನಿನ್ನಯ ಮಹಿಮೆಯು ಘನವೆನು ।
ತರುಹಲು ಮಗುಳೆಂದನು ॥೬೬॥

**ರಾಗ ಸಾಂಗತ್ಯ ರೂಪಕತಾಳ**

ಅರಸ ಲಾಲಿಪುದೆನ್ನ । ಬರಿಸಿದೆಯೇಕೆ ಕೇ ।
ಳರಿಗಳ ಸುಳಿವಿನಿಸಿಲ್ಲ ।
ಧರೆಗೆ ಮತ್ಸರಿಪ ದಾಯಾದ್ಯರಿನ್ನಿಲ್ಲವ ।
ಸರದ ದಿಗ್ವಿಜಯ ಮುನ್ನಿಲ್ಲ ॥೬೭॥

ನರವೃಕೋದರ ಮಾದ್ರಿ । ತರಳರೊಳೆರವಿಲ್ಲ ।
ಧರಣಿಪಾಲಕ ನಿನಗಿನ್ನು ॥
ವಿರಚಿಪ ರಾಜಕಾರಿಯವೇನದರುಹೆನೆ ।
ಸಿರಯರಸನೊಳೆಂದ ನೃಪನು ॥೬೮॥

ಹರಿಯೆ ಕೇಳೀ ಚರಾ । ಚರದೊಳಗಿಹ ನಿನ ।
ಗರಿಯದೆ ಮನ್ಮನದಿರವು ॥
ನರನಾಟಕದ ನುಡಿ ಸಾಕದಂತಿರಲದ ।
ನೊರೆವೆ ಕಾರುಣ್ಯಾಬ್ಧಿ ಕೆಲವು ॥೬೯॥

ಬಾದರಾಯಣನಿಲ್ಲಿ ನಡೆತಂದೆನಗೆ ಹಯ ।
ಮೇಧಾಧ್ವರದ ವಿಧಿಗಳನು ॥
ಬೋಧಿಸಲದಕಶ್ವ ತಹೆನೆಂದು ನುಡಿದ ವೃ ।
ಕೋದರನೆನೆ ಹರಿನುಡಿದ ॥೭೦॥

**ವಾರ್ಧಕ**

ಯೆಲೆ ಮಹೀಪಾಲ ಮರುಳಹೆಯ ಮುನಿವರನಿಟ್ಟ ।
ಬಲೆಗಿಂತು ಸಿಲುಕುವರೆ ಯೌವನಾಶ್ವಾದ್ಯರತಿ ।
ಬಲರು ಹಿಂದಣ ದೊರೆಗಳಂತಲ್ಲ ಕೈಯಿಕ್ಕಲರಿದು ಭೂಮಂಡಲದೊಳು ॥
ಹುಲುಮೃಗಾಳಿಯ ತರಿದ ಮದವನಿಭ ಮೃಗರಾಜ ।
ನೊಳು ತೋರ್ದಡಹುದೆ ಪೇಳಿದ ಕುಮತಿ ಭೀಮನೇಂ ।
ತಿಳಿವನೀತನ ಮತದೊಳುದ್ಯೋಗಿಪರೆ ಮಱಕೆಯೆನುತ ಮತ್ತಿಂತೆಂದನು ॥೭೧॥

**ರಾಗ ತೋಡಿ ಏಕತಾಳ**

ಧಾತ್ರಿಪಾಲ ಕೇಳು ಪವನ । ಪುತ್ರಗಿನಿತು ಮತಿಯದಿರಲು ।
ಧೂರ್ತಬಕನಿಗಿಟ್ಟ ಕೂಳ । ತುತ್ತುಗೊಂಬನೆ ॥೭೨॥

ಯೆಂದ ಮಾತ ಕೇಳಿ ವಾಯು । ಕಂದನೆಂದ ಗೋವಳರ ।
ಮಂದಿರದಿ ಕದ್ದು ಕೂಳ । ತಿಂದಾತನ್ಯಾರೈ ॥೭೩॥

ತೋಚದೇ ನೀತಿಯದೆಲಾ ನಿ । ಶಾಚರಿಯನೊಲಿಸುತಾಳ್ವ ।
ನೀಚಕೃತ್ಯವಾರದೆಂದು । ನಾಚದರುಹಯ್ಯ ॥೭೪॥

ನರಕದೈತ್ಯನೆಡೆಯೊಳಿರ್ದ । ತರಳೆಯರುದುರುಳೆಯರೆಂ ।
ದರಿಯೆಯ ನೀ ಕರಡಿಸುತೆಯ । ವರಿಸೆ ನೀತಿಯೈ ॥೭೫॥

**ಭಾಮಿನಿ**

ಸಾಕುಸಾಕಚ್ಯುತನೆ ಬಲ್ಲೆನು ।
ಕಾಕುನುಡಿಗಳ ಬರಿದೆಯೆನ್ನೊಡ ।
ನೇಕೆ ಪೇಳುವೆ ನಿನ್ನೊಳವನಾನರಿಯದಿರ್ಪವನೆ ॥
ಪಾಕಶಾಸನ ಮುಖ್ಯ ಸುರರು ಪಿ ।
ನಾಕಿಸಹಿತದ್ವೈಸಿದರು ತಹೆ ।
ನಾ ಕುದುರೆಯಂ ನುಡಿಗೆ ತಪ್ಪೆನೆನಲ್ಕೆ ಹರಿ ನುಡಿದ ॥೭೬॥

**ರಾಗ ಕಾಂಭೋಜಿ ಝಂಪೆತಾಳ**

ನುಡಿದ ಭಾಷೆಯ ತಪ್ಪಿ । ನಡೆವನಲ್ಲದ ಬಲ್ಲೆ ।
ಮಡಿದ ದುಃಶ್ಯಾಸನನು ಬಗಿದು ॥
ಬಿಡದೆ ಪೈಶಾಚರಂ । ತೊಡಲರಕ್ತವ ಕುಡಿದ ।
ಕಡು ಪರಾಕ್ರಮಿಯೈಸೆ ಬಿರಿದು ॥೭೭॥

ಚಿನ್ಮಯಾತ್ಮಕನೆ ಕೇಳ್ । ಸ್ತನ್ಯಗೊಟ್ಟಾಕೆಯಸು ।
ವನ್ನೀಂಟಿ ಬಿಡದೆ ರಕ್ಕಸಿಯ ॥

ನಿರ್ನಾಮಗೈದ ಸಂ | ಪನ್ನ ಶೌರ್ಯಾಧಿಕರು |
ನಿನ್ನಂತೆ ಜಗದೊಳ್ಯಾರಯ್ಯ ||೭೮||

ಭಂಡತನದಿಂದ ತಿರಿ | ದುಂಡು ಬಾಣಸವ ಕೈ |
ಕೊಂಡು ದೂಷಣೆಗಂಜದಿರುವ ||
ಚಂಡವಿಕ್ರಮಿ ನಿನ್ನ | ಗಂಡುತನ ಸುಡುಸುಡೆನೆ |
ಪುಂಡರೀಕಾಕ್ಷಗಿಂತೆಂದ ||೭೯||

**ರಾಗ ಕೇತಾರಗೌಳ ಅಷ್ಟತಾಳ**

ಹರಹರ ದೂಷಣಕಂಜಿ ಜಾರತ್ವವ | ವಿರಚಿಸಿದೆಯ ಹೆಣ್ಣಾಗಿ ||
ಅರಿದುದಿಲ್ಲವೆ ಬಾಣಸದ ಪರಿದ್ವಿಜನಾಗಿ | ತಿರಿದು ನೀನುಣಲಿಲ್ಲವೆ ||೧||

ಧರಣಿಪಾಲರ ಕೂಡೆ ಗೋವಳರಿಂಗೆಲ್ಲಿ | ಸರಿಯಪ್ಪಕಾಲವುಂಟೆ ||
ಅರುಹಲಂಜುವೆನಶ್ವವನು ತಹೆನೆಮ್ಮನು | ಪೊರೆಯೊ ಯಜ್ಞವ ನಡೆಸಿ ||೮೦||

ಮುರಹರ ನಗುತೆಂದ | ತುರಗವ ತಹ ಸತ್ವ | ವಿರುವದಾದರೆ ತಹುದು ||
ಬರಿದೆ ಗಳಹಬೇಡ | ಕೊರತೆಯಪ್ಪುದೆನಲ್ಕೆ | ವರಧರ್ಮಸುತನೆಂದನು ||೮೧||

**ಭಾಮಿನಿ**

ಪರಮಪಾವನ ಮೂರ್ತಿತವಪದ |
ಸರಸಿಜಕೆ ತಲೆವಾಗುವೆನು ನಾ |
ಶರಣವತ್ಸಲ ನಿನ್ನ ಭಕ್ತರಿಗುಂಟೆ ಅಪಜಯವು ||
ಕರುಣಿ ನೀ ದಯವಾದರೆಮಗಹ |
ಸರಿಯದಾರೈ ಪೇಳೆನುತ ಭೂ |
ವರನೆರಗೆ ಶಿರನೆಗಹಿ ಮತ್ತಿಂತೆಂದನಸುರಾರಿ ||೮೨||

**ರಾಗ ಸುರುಟಿ ಏಕತಾಳ**

ಕೇಳೆಲೆ ಯಮಜಾತ | ಧಾತ್ರೀ | ಪಾಲಕ ವಿಖ್ಯಾತ ||
ಪಾಲಿಪೆ ಶಶಿಕುಲ | ಮೂಲ ಶಿರೋಮಣಿ |
ಜಾಲವಲ್ಲಿದು ಚಿಂ | ತಾ ಲಲನೆಯ ಬಿಡು ||೮೩||

ಅರುಹುವದೇನಿನ್ನು | ನಿಮ್ಮೀ | ವ್ಅರ ಮನದಿರವನ್ನು ||
ಪರಿಕಿಸಲೀಪರಿ | ಯೊರೆದಿಹೆನಲ್ಲದೆ |
ಪರಮಾಪ್ತರು ನಿಮ | ಗೆರಡೆಣಿಸುವೆನೇ ||೮೪||

ಘನವೇನ್ನೈ ನಿನಗೇ | ಯೀ ಮಖ | ತೃಣವಿದು ನೀ ಹರಿಗೇ ||
ಅನಿಲಜನನು ಕಳು | ಹೆನುತುಸುರುತ ಶ್ರೀ |
ಚಿನುಮಯನಿರ್ದನು | ಜನಪತಿ ಸಹಿತ ||೮೫||

**ವಾರ್ಧಕ**

ಜನಮೇಜಯಾಖ್ಯ ನೃಪ ಲಾಲಿಸೈ ಪಾಂಡವರ |
ದೆನಿತು ಪುಣ್ಯೋದಯವೊ ಜಲರುಹಭವಾಮರರು |
ಮುನಿಗಣಂ ಸಹಿತ ನಿರಶನದಿಂದ ತಪವಿರ್ದಡಂ ನಿರುತ ಬಳಿಕವರ್ಗೆ ||
ಚಿನುಮಯಾತ್ಮಕ ಹರಿಯ ಕಾಂಬಡಸದಳ ಪಾಂಡು |
ತನಯರೆಡೆಯೊಳಗನಿಶ ವಾಸವಾಗಿರ್ಪನಾ |
ವನಜನಾಭನ ಮಹಿಮೆಯಂ ಬಲ್ಲರಾರು ಮುಂಗಥೆಯ ಕೇಳೆಂದ ಮುನಿಪ ||೮೬||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮರುದಿವಸದುದಯದಲಿ ಧರಣಿಪ |
ಹರಿ ಮುಕುಂದನೆ ರಕ್ಷಿಸೆನುತಲಿ |
ಭರದಿ ಬಂದೋಲಗವನಿತ್ತ ಶ್ರೀ | ವರನು ಸಹಿತ ||೮೭||

ಅನಿತರೊಳಗನಿಲಜನು ಭೂಪಗೆ |
ಚಿನುಮಯಗೆ ಸಹ ಮಣಿದು ವೀಳ್ಯವ |
ನೆನಗೆ ಕೊಡುವುದು ತಹೆನು ಹಯವನು | ಕ್ಷಣದೊಳೆಂದ ||೮೮||

ಮತ್ತೆ ಕರ್ಣಜ ಮೇಘನಾದ ಭ |
ಟೋತ್ತಮರು ಹರಿ ಧರ್ಮಜರಿಗೆರ |
ಗುತ್ತ ನಿಂದಿರೆ ವೀಳ್ಯವನು ನೃಪ | ನಿತ್ತನಂದು ||೮೯||

ಅರಸುಗಾವಲ ನರನೊಳಿರಿಸುತ |
ತರಿಸಿ ರಥಗಳನೇರಿ ಘೋಷದಿ |
ಪೊರಟು ಬರೆ ಹೈಡಿಂಬಿ ಕರ್ಣಜ | ಮರುತಸುತರು ||೯೦||

**ವಾರ್ಧಕ**

ಬರೆಮುಂದೆ ನಿರತ ಸದ್ಭುಜಗಧರನಾಗಿ ಶಶಿ |
ಧರನಾಗಿ ಹರಿಗತಿ ಪ್ರಿಯನಾಗಿ ದಕ್ಷಜಾ |
ವರನಂತಿರುವೆನೆಂಬ ಪೆಂಪಿನಿಂದೆಸೆವ ಭದ್ರಾವತಿಗೆ ನಡೆತಂದರು ||
ಸರಸದಿಂದುಲಿವುತಿರ್ಪಳಿಗಳಿಂ ಗಿಳಿಗಳಿಂ |
ಮಿರುಪ ನವಶಶಿಕಾಂತ ಶಿಲೆಗಳಿಂ ಕೊಳಗಳಿಂ |
ಪರಿವನಿರ್ಮಲ ಸರೋವರಗಳಿಂ ತೊರೆಗಳಿಂದಾಸೀಮೆ ಚೆಲ್ವಾಂತುದು ||೯೧||

**ಭಾಮಿನಿ**

ಇಂತೆಸೆವ ಭದ್ರಾವತಿಯ ಪುರ ।
ದಂತರದ ಗಿರಿಶಿಖರದೆಡೆಗಾ ।
ಕುಂತಿಸುತ ನಡೆತಂದು ನಗರದ ಸಿರಿಗೆ ಮನಮೆಚ್ಚಿ ॥
ನಿಂತು ಕರ್ಣಜಗಿರದೆ ತೋರಿದ ।
ಸಂತಸದಿ ವಿಸ್ತಾರದಿಂ ಚೆ ।
ಲ್ವಾಂತು ಕಾಣುವ ಪರಿಯನೆಲ್ಲವ ಪೂರ್ವಭಾಗದಲಿ ॥೯೨॥

**ರಾಗ ಕಾಂಭೋಜಿ ಝಂಪೆತಾಳ**

ಕಂದ ವೃಷಕೇತು ಕೇ । ಳಿಂದೆಮ್ಮ ಕಣ್ಗೆಮುದ ।
ವಂದೋರ್ವ ಪರಿಯೊಳಿಹ ನಗರ ॥
ಮುಂದೆಸೆವುದಹಹ ವರ । ನಂದನೋದ್ಯಾನ ಸೊಬ ।
ಗಿಂದ ನೋಟವನು ಚಲಿಸತ್ತ ॥೯೩॥

ಬಕುಳ ಮಂದಾರ ಪಾ । ದರಿ ಕರ್ಣಿಕಾರ ಚಂ ।
ಪಕ ಕೋವಿದಾರ ಪ್ರಿಯಂಗು ॥
ಸಕಲ ತರುನಿಚಯಂಗಳಂಗಜನ ವಿವಿಧ ಸಾ ।
ಯಕದ ಮೂಡಿಗೆಯ ಮುಗುಳುಗಳ ॥೯೪॥

ಅಂಬರವ ಚುಂಬಿಸುವ ನಗರದಾಸೌಧಗಳ ।
ಅಂಬುಜಾಕ್ಷಿಯರ ತಂಡಗಳ ॥
ಸಂಭ್ರಮದೊಳಿಕ್ಕೆಲದಿ ಮೆರೆವ ವೀಧಿಯ ನೋಡು ।
ತುಂಬಿಹುದು ಸಕಲ ಸೌಭಾಗ್ಯ ॥೯೫॥

ಮದಗಜಂಗಳ ಸಾಲತೇಜಿಗಳ ಬಳಗಗಳ ।
ವಿಧ ವಿಧದ ಜನರ ತಿಂಥಿಣಿಯ ॥
ಕದನಗಲಿಗಳ ನಿವಹ । ವದನೆಲ್ಲ ತೋರಿಸುತ ।
ಹದನಗಳ ಯೋಚಿಸುತಲಿರ್ದ ॥೯೬॥

**ವಾರ್ಧಕ**

ಜನಪಕೇಳಾವೇಳೆಯೊಳು ದಿವಸಪತಿಯಾತ್ಮ ।
ಜನಸುತಂಗೈವ ಮಖಕಶ್ವಮಂ ಕೊಂಡೊಯ್ಯ ।
ಲೆನುತೆನ್ನ ಮೊಮ್ಮನೈತಂದೀರ್ಪನಮಲ ಹಯಮಂ ತೋರದಿಹ ನೃಪಾಲ ॥
ಯೆನುತ ಕಡುಗೋಪದಿಂದುರಿಯುಗುಳ್ದಪನೊ ತಾ ।
ನೆನಲಾತಪಂ ಪೆರ್ಚುತಿರಲನಿಲ ಸಂಭವಂ ।
ಮನದಿ ಬಹು ಚಿಂತೆಯಂ ತಳೆದು ಕರ್ಣಜನ ಮೊಗಮಂ ನೋಡುತಿಂತೆಂದನು ॥೯೭॥

**ರಾಗ ಸಾಂಗತ್ಯ ರೂಪಕತಾಳ**

ತರಳಕೇಳಾದಿತ್ಯ । ಸರಿದ ಮಧ್ಯಾಹ್ನಕೀ ।
ಪುರದಿಂದ ಸರಸಿಗೈತರುವ ॥
ತುರಗನಿಕಾಯವ । ಪರಿಕಿಸುಮುನಿಯೆಂದ ।
ಗುರುತಿನ ಹಯವ ನಾಕಾಣೆ ॥೯೮॥

ನಗರದೊಳಿಲ್ಲವೊ । ಮಿಗೆ ಪೊರಮಡಿಸರೋ ।
ಬಗೆಯದೇನೆನಗೆ ಕಾಣಿಸದೆ ॥
ಜಗತಿಪಾಲಕಗೆಂತು । ಮೊಗದೋರ್ವೆನಮರರು ।
ನಗುವರಶ್ವವನೊಯ್ಯದಿರಲು ॥೯೯॥

ಋಷಿ ಪುಸಿನುಡಿವನೆ । ಪುಸಿದೊಡೆಹರಿತಾ ಸೈ ।
ರಿಸುವನೆಸಹಿಸಲಭಾಗ್ಯ ॥
ವಸುಧೆಯಾಣ್ಮನ ಭಾಗ್ಯನಾಗಲೀ ಶಶಿಕುಲ ।
ಜಸವದು ಕಳೆಗುಂದಲುಂಟೆ ॥೧೦೦॥

ಶಶಿವಂಶ ಕಳೆಗುಂದಿದರುನಾನಾಡಿದ ನುಡಿ ।
ಪುಸಿಯಪ್ಪಡಾನಾವಭವದಿ ॥
ಯೆಸಗಿದ ಕಲುಷವೊ ಮರೆತನೊ ಕೃಷ್ಣ ಕಾ ।
ಣಿಸದೇಕೆ ಹಯವಕಟಕಟ ॥೧೦೧॥

**ವಾರ್ಧಕ**

ಪರಮ ಋಷಿವರ ರಮಾಧವ ಭೂಮಿಪತಿಗಳಿದಿ ।
ರಿರದೆ ಗರ್ವದಿ ಶಪಥಮಂ ಗೈದುತಪ್ಪಿದರೆ ।
ಗುರು, ದೈವ, ಸ್ವಾಮಿ, ಧರ್ಮದ್ರೋಹಮಿಂತೀ ಚತುರ್ವಿಧಂ ತಿಳಿಯಲಾನು ॥
ವಿರಚಿಸಿದ ವೀರಪ್ರತಿಜ್ಞೆಯಂ ಪೂರೈಸ ।
ಲರಿಯದಾತ್ಮದ್ರೋಹಮಿಂತೈದು ದ್ರೋಹವೈ ।
ತರದೆಯೆನಗಿನ್ನು ತುರಗವನು ಕೊಂಡೊಯ್ಯದಡೆ ಕಾಂಬೆನೆಂತವರನೆಂದ ॥೧೦೨॥



**ಭಾಮಿನಿ**

ಆ ಸಮಯದಲಿ ಯೌವನಾಶ್ವ ಮ ।
ಹೀಶನಾಳುಗಳಾ ಹಯವನತಿ ।
ತೋಷದಿಂ ನೀರ್ಗುಡಿಸೆ ನಗರವ ಪೊರಡಿಸುತ ಬರಲು ॥
ಆ ಸಮೀರಜನೀಕ್ಷಿಸುತಲಿ ।

ನ್ನೇಸುಧನ್ವನೊತಾನೆನುತಲಿರ ।
ಲಾಸಹಸಿಯಡಿಗೆರಗಿ ನುಡಿದನು ಮೇಘನಾದಭಟ ॥೧೦೩॥

**ರಾಗ ಕೇತಾರಗೌಳ ಝಂಪೆತಾಳ**

ಜೀಯ ಬಿಡು ಮನದಣಿಕೆಯ । ಮದ್ಬಲುಹಿ ।
ನಾಯತವ ಪರಿಕಿಸಯ್ಯ ॥
ನೋಯದೆಳ್ಳಿನಿತು ಮನದೀ । ಸಂತಸದಿ ॥
ನೀಯೆನ್ನ ಕಳುಹು ಜವದೀ ॥೧೦೪॥

ತುರಗವನು ತಂದು ನಿನ್ನ । ಪಾದಪಂ ।
ಕರುಹಕೊಪ್ಪಿಸದಡೆನ್ನ ॥
ಪಿರಿದುಶಪಥವನು ಕೇಳು । ಬರಲೆನಗೆ ।
ವರಪಂಚಪಾತಕಗಳು ॥೧೦೫॥

ಗಗನಪಥಮಂ ಪಿಡಿಯುವೆ । ಮಾಯೆಗಳ ।
ನುಗಿದಶ್ವಮಂ ಸೆಳೆಯುವೆ ॥
ನಗಧರನೆ ಸಾಕ್ಷಿಯೆನುತ । ತಾಕ್ಯೆಯ ।
ಮುಗಿದು ಬೀಳ್ಕೊಂಡನತ್ತ ॥೧೦೬॥

**ವಾರ್ಧಕ**

ಅರಸ ಕೇಳಾ ಮೇಘನಾದನಿಂತಲ್ಲಿಂದ ।
ಭರದಿಚೆಗಿದಂಬರಕೆ ಮಾಯೆಯಂ ಬೀಸಿ ಘನ ।
ತರವರುಷ ಸುರಿಸಿದಂ ಕವಿಸಿದಂ ಹರಿಯಕಾಹಿನವರ್ಗೆ ಕತ್ತಲೆಯನು ॥
ತರಹರಿಸಿ ಬಲಬೆದರಿ ಪರಿದುದೆಣ್ದೆಸೆಗಾಗ ।
ಧರೆಗಿಳಿದು ಹೈಡಿಂಬ ದಿವ್ಯಾಶ್ವಮಂ ಕೊಂಡು ।
ಸರಿದನಾಗಸಕದಂ ಕಂಡು ಕಡುಗಲಿ ಭಟರು ತಡೆದೆಂದರತಿರೌದ್ರದಿ ॥೧೦೭॥

**ರಾಗ ಮಾರವಿ ಏಕತಾಳ**

ಫಡಫಡನಿಲುನಿಲು । ಕೆಡುಕ ಖಳಾಧಮ । ಅಡಿಯಿಡದಿರುಮುಂದೆ
ಬಿಡುಬಿಡುತುರಗವ । ಕಡಿವೆವು ಶಿರವನು । ಮಡಿಯದಿರೆಲೊ ಹಂದೆ ॥೧೦೮॥

ಯೆನಲೆಂದನು ಸಿಂ । ಹನ ಕೊಲಲಾ ವಾ । ರಣನಿಧಿರಾದಂತೆ ॥
ಫಣಿಕುಲ ಗರುಡನ । ಕೆಣಕಿದೊಲಾಯ್ತಿಂ । ದಿನ ನಿಮ್ಮಯ ಮಾತೇ ॥೧೦೯॥

ದುರುಳನೆ ನೀನೀ । ಬರಿ ಮಾಯೆಗಳನು । ವಿರಚಿಸುತೆಮ್ಮಿರವ ॥
ಅರಿಯದೆ ಬಂದಿಹೆ । ಸರಸವೆ ಧುರವೆಂ । ದಿರದೆಚ್ಚರು ಶರವ ॥ ॥೧೧೦॥

ಬರುವಶರಂಗಳ | ತರಿದೆಂದನು ನಿ | ಮ್ಮರಸನ  ಭಟರೊಳಗೆ ||
ಧುರಧೀರರು ಮೇ | ಣಿರುವರೊ ನೀವೆದಿ | ಟ್ಟರೊ ಪೇಳುವದೆನಗೆ ||೧೧೧||

**ರಾಗ ಕಾಂಭೋಜಿ ಝಂಪೆತಾಳ**
ಎಂದು ಹೈಡಿಂಬಿತಾ | ಮುಂದ್ವರಿಯಲೆಂದರೆಲೊ |
ಮಂದಮತಿ ನೀ ಕಪಟದಿಂದ ||
ಬಂದೆಮ್ಮ ಹಯವ ಕಳ | ವಿಂದಲೊಯ್ದಿಹೆ ನಿನ್ನ |
ನಿಂದುಳುಹೆವೆಂದೆಚ್ಚರಾಗ ||೧೧೨||

ಪೊಡೆದ ಶರಗಡಣವನು | ಕಡಿದೊಡನೆ ಕೂರಸಿಯ |
ಪಿಡಿದು ಬಹುಭಟರುಗಳ ಸದೆದು ||
ಎಡಗೈಯ ಹಯವನಳ | ವಡಿಸಿ ಬಂದನಿಲಸುತ |
ನಡಿಗೊಪ್ಪಿಸಿದನು ಕೇಳಿತ್ತ ||೧೧೩||

ತುರಗರಕ್ಷೆಯೊಳಿರ್ದ | ಚರರು ಮಾನಸದೊಳೀ
ಪರಿಯ ಭಂಗದಿ ನೊಂದು ಬಳಿಕ ||
ದೊರೆ ಯೌವನಾಶ್ವಗಿದ | ನರುಹುವೆವೆನುತ್ತ ಬಂ |
ದರು ಪಟ್ಟಣಕ್ಕೆ ದುಃಖಿಸುತ ||೧೧೪||

**ಭಾಮಿನಿ**
ಇತ್ತ ಭದ್ರಾವತಿ ಪುರದಿ ವರ |
ಧಾತ್ರಿ ಪತಿಯಹ ಯೌವನಾಶ್ವನು |
ಅತ್ಯಧಿಕ ವೈಭವದಿ ಸಂತಸದೊಳಗಿರುವ ಸಮಯ ||
ಮತ್ತೆ ನಡನಡುಗುತ್ತ ಬಂದು ಚ |
ರರ್ತವಕದಿಂ ಗೋಳಿಡುತ ಮಣಿ |
ಯುತ್ತ ಬಿನ್ನೈಸಿದರು ನಡೆದಿಹ ಪರಿಯನರಸಂಗೆ ||೧೧೫||

**ರಾಗ ಸಾರಂಗ ಅಷ್ಟತಾಳ**
ಲಾಲಿಸಿ ಕೇಳೊಡೆಯ | ನಾವೆಂಬುದ |
ಏಳು ಸಂಗರಕೆ ಜೀಯ ||
ಪೇಳಲೇನರಿಗಳ | ಧಾಳಿಯಾಗಿದೆ ಬಂದು |
ಗಾಳಿಯಂದದದೊಳಿಂದು | ಖೂಳನೋರ್ವನು ನಿಂದು ||೧೧೬||

ಅವನಿಪನೀ ಮೋಹದಿ | ಪಾಲಿಪ ತುರ |
ಗವನು ನೀರ್ಗುಡಿಸಲ್ಕೈದಿ ||
ಬವರವಾಗಿಹುದುದಾ | ನವಗೆ ಸೋತೆವು ನಾವು |
ಕವಿಸಿಮಾಯವನು ಹ | ಯವನೊಯ್ದ ನಿಮಿಷದಿ ||೧೧೭||

**ಭಾಮಿನಿ**

ಭೃತ್ಯರೆಂದುದ ಕೇಳಿ ಮನದಲಿ ।
ಪೃಥ್ವಿಪಗೆ ರೋಷಾಗ್ನಿ ಧಗಧಗಿ ।
ಸುತ್ತ ಬರೆಕೊನೆ ಮೀಸೆಯಲುಗಿಸುತೌಡನೊಡಗಟ್ಟಿ ॥
ಮತ್ತೆ ಖಡ್ಗವ ಜಡಿದು ಹೂಂಕರಿ ।
ಸುತ್ತ ಪೊಸತಿದು ಬಂತೆನುತಸಚಿ ।
ವೋತ್ತಮರ ಕರೆಸುತ್ತ ತಾನಿಂತೆಂದನಾಕ್ಷಣದಿ ॥೧೧೮॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನಿದಚ್ಚರಿ ಪೊಸತಿದಹ ನ । ಮ್ಮೀ ನಗರ ಕೈತಂದನಾವನು ।
ಕಾಣದಂದದೊಳೊಯ್ದನಶ್ವವ । ಹೀನ ಬಲನು ॥೧೧೯॥

ಹುಲುಭಟನ ಕಲಹದಲಿ ಸೋತರು । ನೆಲನಧಿಪರೆನುತಾಡಿ ನಗುವರು ।
ಫಲವಿಹುದೆ ನಾವ್ ಕ್ಷತ್ರಿಯರ ಕುಲ । ದೊಳಗೆ ಜನಿಸಿ ॥೧೨೦॥

ತುಂಬಿಮರಿ ಸಂಪಿಗೆಯ ಸೌರಭ । ಕಂ ಬಯಸಿ ಬಂದುದಿದು ನಾನೇ ।
ನೆಂಬೆಪರಿಕಿಸ ಬೇಹುದವನಾ । ಡಂಬರವನು ॥೧೨೧॥

ಹರವಿರಿಂಚಿ ಬಲಾರಿ ಮುಖ್ಯರ । ಮರೆಯ ಹೊಕ್ಕರು ಬಿಡೆನು ಖೂಳನ ।
ತರಿದು ಶ್ಯೆಮಿನಿಗಟ್ಟುವೆನುನಾ । ನರೆನಿಮಿಷದಿ ॥೧೨೨॥

ವೀರ ಕುವರ ಸುವೇಗ ತ್ವರಿತದಿ । ನೀ ರಣಾಗ್ರಕೆ ಪೊರಡೆನುತಲಾ ।
ಧಾರಿಣೀಪತಿ ಹೊಸಿ ದುಂದುಭಿ । ಭೇರಿಗಳನು ॥೧೨೩॥

**ಭಾಮಿನಿ**

ಧುರಕೆ ಪೊರಡಿಸಿ ಸರ್ವಸೇನೆಯ ।
ಕರಿತುರಗ ರಥಸಹಿತಲಾಕ್ಷಣ ।
ಪರಿಕಿಸುವೆ ಹಯಚೋರನಾತನ ತೋರ್ಪುದೆಂದೆನುತ ॥
ಭರದಿ ಧನುಶರವಿಡಿದು ರಥದೊಳು ।
ಬರಲು ಕಂಡಾ ಕರ್ಣಸುತ ಬಿ ।
ಲ್ದಿರುವನೊದರಿಸಿ ಸಮರಕನುವಾಗಲ್ಕೆ ನೃಪನುಡಿದ ॥೧೨೪॥

**ರಾಗ ಭೈರವಿ ಅಷ್ಟತಾಳ**

ಧುರಕೆ ಬಂದಿದಿರಾಗಿರ್ಪೆ । ನೀನಾರೆಲೋ । ತರಳರಂದದಲಿ ತೋರ್ಪೆ ॥
ತರವಲ್ಲ ನಿನಗೆ ಸಂ । ಗರ ಬೇಡ ಸಾರಿದೆ । ತುರಗ ಬಿಟ್ಟತ್ತ ಸಾರು ॥೧೨೫॥

ಸೆಣಸಲಾರಾದಡೇನು । ಬಿಡುವನಲ್ಲ । ಕರಿ ಹಿರಿದಾದಡೇನು ॥
ಮರಿ ಸಿಂಹವಂಜಿ ಹಿಂ । ಜರಿಯುವುದೇ ನಿನ್ನ । ಪರಿಕಿಸಿ ಬೆದರುವೆನೆ ॥೧೧೬॥

ಅನುವರಕೆನ್ನೊಡನೆ । ನಿಲ್ಲುವ ಭಟ । ರನು ಜಗದೊಳಗೆ ಕಾಣೆ ॥
ವಿನಯದಿ ಶಿಶುವೆಂದ । ಡಿನಿತುಗರ್ವವೆಯೆಂದು । ಜನಪ ಶರವೆಚ್ಚನು ॥೧೧೭॥

ತರಿದು ಶರೌಘವನು । ಭೂಪನ ರಥ । ತುರಗ ಸಾರಥಿಗಳನು ॥
ಭರದಿ ಕೆಡಹೆ ಪೊಸರಥ ವೇರುತಸ್ತ್ರವ । ಸುರಿಸೆ ಕರ್ಣಜ ಖಂಡಿಸೆ ॥೧೧೮॥

**ವಾರ್ಧಕ**

ಜನಪಾಲ ಬಳಿಕ ಕಲಿಕರ್ಣಜನ ಮೇಲೆ ಮಹ ।
ಮುನಿಸಿನಿಂದನಲಾಸ್ತ್ರವೆಸೆಯೆ ವರುಣಾಸ್ತ್ರದಿಂ ॥
ತಣಿಸಲುರಗ ಕಳಂಬವೆಚ್ಚಡದ ತರಿದ ಗರುಡ ಕಳಂಬದಿಂ ತ್ವರಿತದಿಂ ॥
ಕ್ಷಣದಿ ತಿಮಿರವ ಮುಸುಕೆ ದಿನಪನಿಂ ಪರಿಹರಿಸೆ ।
ಘನಶರವನೆಸೆಯಲದನನಿಲನಿಂ ಚದುರಿಸುತ ।
ಧನುವ ಝೇಂಕರಿಸುತಿಹ ರವಿಮೊಮ್ಮನಂ ಕಂಡು ಕ್ಷಿತಿಪಗರ್ಜಿಸುತೆಂದನು ॥೧೧೯॥

**ರಾಗ ಕಾಂಭೋಜಿ ಝಂಪೆತಾಳ**

ಪೂತುರೇ ತರುಣಮಂತ್ರಾಸ್ತ್ರ ಪ್ರತೀಕಾರ ।
ಚಾತುರ್ಯಮುಂಟೆಲಾ ನಿನಗೆ ॥
ಆತುರವಿದೇಕೆ ತವ । ತಾತ ಮುತ್ತಾತರ್ಯಾ ।
ರೈತಿಳುಹು ಮೆಚ್ಚಿದೆನು ಕೊನೆಗೆ ॥೧೨೦॥

ಶರಮುಖದಿ ಕಾಣಲಿಲ್ಲವೆ ಕರ್ಣ ಕಮಲ ಹಿತ ।
ಕರರವರ ನಾನುಸುರಬಹುದೆ ॥
ಧುರದಿ ಪಿತ ಮುತ್ತಯ್ಯರನು ಕೇಳ್ವೆ ಪ್ರಾಜ್ಞನೀ ।
ನರಿತುಕೊಪರೋಕ್ಷದಿಂ ಮುಂದೆ ॥೧೨೧॥

ಭಾಪುರೇ ಬಾಲಕ ಪ್ರ । ತಾಪಿ ನೀನಪ್ಪೆಲೇ ।
ಸೀ ಪ್ರಕಾರದ ಶರಾವಳಿಯು ॥
ನೀ ಪ್ರಯೋಗಿಸಲು ದಿಟ । ವೈ ಪರೀಕ್ಷಿಸೆನುತ್ತ ।
ಭೂಪ ತೆಗದೆಚ್ಚ ಕೂರ್ಗಣೆಯ ॥೧೨೨॥

ಸಾಕಾಗದೀಶರಂ । ನಾಕಡಿದೆನದ ನೋಡು ।
ನೂಕಸ್ತ್ರನಿಕರವನು ಭರದಿ ॥
ಯೀ ಕಠಿಣ ಕಣೆಯ ಕೊಳ್ಳೆಂದೆಚ್ಚಡಾಕ್ಷಣದಿ ।
ಭೂಕಾಂತ ಮೂರ್ಛೆಯಂ ತಳೆದ ॥೧೨೩॥

**ಭಾಮಿನಿ**

ಧರಣಿಪತಿ ಮೂರ್ಛೆಯೊಳಿರಲು ಕಂ |
ದರಿ ನಿವಹ ಮುಸುಕಲು ವೃಷಧ್ವಜ ||
ತರಿತರಿದು ತಾನೊಟ್ಟಿ ನಿಂದಿರೆ ಬಸವಳಿದ ನೃಪನ ||
ಪರಿಕಿಸುತ ರಥವಿಳಿದು ಧನುತರ |
ವಿರಿಸು ತವನೆಡೆಗೈದಿ ತಾನು ಪ |
ಚರಿಸಿ ನುಡಿಯಲು ನುಡಿಯದಿರಲಿಂತೆಂದ ತನ್ನೊಳಗೆ ||೧೩೪||

**ರಾಗ ಕೇತಾರಗೌಳ ಅಷ್ಟತಾಳ**

ಅರಸನೇಳನಿದ್ಯಾಕೆ | ಧುರಪರಿಶ್ರಮದಿಂದ | ಧರೆಯೊಳಗೊರಗಿರುವ ||
ವಿರಚಿದೆನು ಮೂರ್ಛೆ | ಪರಿಹಾರವಪ್ಪಂತೆ | ಪರಿಪರಿಯುಪಚಾರವ ||೧೩೫||

ಸತ್ಯವದೆನಗಿರ್ದೊಡಾಂ ಧೀರನಾದ ಡಾ | ದಿತ್ಯಂಗೆ ಪೌತ್ರನಾಗಿ ||
ಮತ್ತೆನ್ನತಾತಂಗಪತ್ಯತಾನಾದೊಡೀ | ಧಾತ್ರೀಶನೇಳಲೆಂದ ||೧೩೬||

ಚಿತ್ತದಿ ಪಗೆಮಾಳ್ಪ | ಕೃತ್ಯವ ಬಿಟ್ಟು ಬ | ಳಲ್ಕೆಗೌಚಿತ್ಯಮಾದ ||
ಉತ್ತಮ ರೀತಿಯಿಂ | ದಪ್ಪಂತೆ ಸಂತೈಸಿ | ಪೃಥ್ವಿಪಾಲಕನಂದು ||೧೩೭||

**ವಾರ್ಧಕ**

ಪೊಡವಿಪತಿ ಬಳಿಕ ಕಣ್ದೆರೆದು ಮೈಮುರಿದೆದ್ದು |
ಎಡಬಲವ ನೋಡುತಂ ಚೇತರಿಸುತಿರ್ಪೆಡೆಯೊ |
ಳೊಡನೆ ಕರ್ಣಾತ್ಮಜಂ ಮುನ್ನತಾನಿರ್ದ ಪ್ರದೇಶಕ್ಕೈತಂದು ನಿಂದು ||
ಎಡಗೈಯ ಕಾರ್ಮುಕವನೊದರಿಸುತ ಬಾಣಮಂ |
ಪಿಡಿದು ತಿರುವುತ್ತಲಾರ್ದೆಸೆವ ತೆರದಿಂದ ಗುಡು |
ಗುಡಿಸುತಿರೆ ನೃಪನಿತ್ತ ತನ್ನವರ ಕಾಣದಿಂತೆಂದ ಮನನಾಚುತಂದು ||೧೩೮||

**ರಾಗ ಸಾಂಗತ್ಯ ರೂಪಕತಾಳ**

ಸಾಕಿನ್ನುಧುರದ ಹಂಬಲವೆನಗೇಕೆ ಮ |
ತ್ತೀ ಕುಮಾರನೊಳು ಪೌರುಷವು ||
ಸೋಕಲರಿಯದೆನ್ನ | ಲೋಕದಿ ಜೈಸಿದ |
ರಂ ಕಾಣೆನಿಂದಿನವರೆಗೆ ||೧೩೯||

ಜನಿಸಿ ಕ್ಷತ್ರಿಯರೊಳು | ರಣಕೆ ಹಿಮ್ಮೆಟ್ಟಲು |
ಘನವಾದ ಕೊರತೆಯಾದಪುದು |
ಧನುವೆತ್ತಲೆಂತುಯಿ | ನ್ನನುವರ ಗೊಡಲೆಂದು |
ಯೆನಗೀತನೊಳು ಸಾಧ್ಯವಹುದೆ ||೧೪೦||

ಕಂದನೀತನು ಗುಣ | ವೃಂದನಾಗಿಹ ತೇಜ |
ದಿಂದೊಪ್ಪುತಿಹ ರವಿಯಂತೆ ||
ಮುಂದೀತನೊಳು ವೈರ | ವೆಂದಿಗು ಸಲದೆನು |
ತಂದು ವೃಷಧ್ವಜಗೆಂದ ||೧೪೧||

**ರಾಗ ರೇಗುಪ್ತಿ ತ್ರಿವುಡೆತಾಳ**

ಭಳಿರೆ ಮೆಚ್ಚಿದೆನು ವೀರ | ಕರಚಮತ್ಕಾರ | ಗಳಿಗಾಹ ಸರಳಸಾರ ||
ಬಲುಭುಜ ಸತ್ವಕಿ | ನ್ನಿಳೆಯೊಳೆಣೆಯಗಾಣೆ |
ಕಲಹದೊಳೆನ್ನನು | ಗೆಲಿದ ಕಾರಣದಿಂದ ||೧೪೨||

ಪೆಸರದೇನುಸುರೆನ್ನೊಳು | ತಾತನದಾವ | ವಸುಧೇಶ ರಿರ್ಷನೊಳು ||
ಪುಸಿಯಲ್ಲ ತವಶೀಲ | ಕೆಸೆವ ವಿಕ್ರಮಗ |
ಪಸರಿಸಿ ಲೋಕದಿ | ಜಸವ ಪಡೆವಬಾಲ ||೧೪೩||

ಧರೆಯೊಳಗತಿ ಖ್ಯಾತಿಯ | ಪೊಂದಿಹಚೆಲ್ವ || ತುರಗವೇತಕೆ ಪೇಳಯ್ಯ ||
ಭರಿತ ಸಾಹಸಿನಿನ್ನೊ | ಳರಿಯದೆ ಹಳಚಿದೆ |
ಮರಿದುಗೈದಿಹ ತಪ್ಪ | ನಿರದೆ ಕ್ಷಮಿಸು ಕ್ಷಿಪ್ರ ||೧೪೪||

**ರಾಗ ಜಂಜೂಟಿ ಅಷ್ಟತಾಳ**

ಧರಣೀಶ ಕೇಳೆನ್ನ ನುಡಿಯ | ಸರ | ಸಿರುಹ ಬಾಂಧವ ದಿನಮಣಿಯ ||
ತರಳನು ಕರ್ಣನಾತನನು ಕೇಳ್ದರಿವೆಯ ||
ಧುರಪರಾಕ್ರಮಿಯವನ ನಿಜ ಸುತ | ವರ ವೃಷಧ್ವಜನಹೆನು ಲೋಕದಿ ||೧೪೫||

ಭರತವಂಶದ ಧರ್ಮಸುತನು | ಮಖ | ವಿರಚಿಪನದಕೆ ಶ್ರೀವರನು ||
ಮರುತನಂದನನ ಈ ಹರಿಗೆಂದು ಕಳುಹಲು ||
ಹರುಷದಿಂದವನೊಡನೆ ಬಂದಿಹೆ | ಸರಸವಲ್ಲಿದು ಹದನವಿನಿತೈ ||೧೪೬||

**ರಾಗ ಕಾಂಭೋಜಿ ಏಕತಾಳ**

ದಿನಪತಿ ಮೊಮ್ಮಮು | ನ್ನೆನಗರುಹಿಸದಾದೆ |
ಮನವಿಟ್ಟನೇ ಧರ್ಮ | ಜನು ಘನ ಮಖಕೆ ||
ಜನರು ಧರ್ಮದ ರೂಪ | ನೆನುವರವನನಿನ್ನು |
ಜನಪಗೆ ಹಯವಿದೊಂ | ದನು ನೀನೊಯ್ಯುವುದೆ ||೧೪೭||

ಇಂದಿರೆಯರಸನ ಪದಕೆ ಸರ್ವಸ್ವವ |
ತಂದೊಪ್ಪಿಸುವೆ ನಾನೆ | ಬಂಧುಗಳೊಡನೆ ||

ಸಂದೇಹ ಬಿಡುವಾಯ್ತು । ನಂದನನೆಲ್ಲಿಹ ।
ನೆಂದರೆ ವೃಷಕೇತ । ನಂದು ಪೇಳಿದನು ॥೧೪೮॥

**ವಾರ್ಧಕ**

ಧರಣಿಪತಿ ಕೇಳಚ್ಯುತನ ಪದಕೆ ಮನವಿಟ್ಟು ।
ಸರ್ವಸ್ವಮೊಪ್ಪಿಸುವನಾವನವಗಾ ಪಾಂಡು ।
ತರಳರೊಳಗೆರಡಿಲ್ಲವವರ ಸಖ್ಯವದಾಗೆ ಹರಿಯೊಲಿದನದರಿಂದ ನೀಂ ॥
ಮರುತ ಸುತನಂ ಕಾಂಬುದೊಳಿತೆನಲು ಸಮ್ಮತಿಸೆ ।
ತರಣಿ ಮೊಮ್ಮಂ ಸಹಿತರಥವಡರಿ ಭೀಮನಿಹ ।
ಪೊರೆಗಾಗಿ ಬರುತಿರೆ ವೃಷಧ್ವಜನ ಪೊಗಳಿ ಸುಮನಸರು ಸುಮಮಳೆಗರೆದರು ॥೧೪೯॥

**ಕಂದ**

ಇತ್ತಲು ಧುರಕೆನುತಲಿ ಖತಿ ।
ವೆತ್ತೈತರುವ ಸುವೇಗನ ಕಾಣುತಲಾಗಂ ॥
ಚಿತ್ತದಿ ನಲಿವುತ ಮಾರುತಿ ।
ಸತ್ವದಿ ತಡೆಯಲ್ಕವ ಗರ್ಜಿಸುತಿಂತೆಂದಂ ॥೧೫೦॥

**ರಾಗ ಮಾರವಿ ಏಕತಾಳ**

ಆರೆಲೊ ಹುಲುಭಟ । ಚೋರತನದಿ ಮಮ । ವಾರುಹವದನೊಯ್ದ ॥
ಭೂರಿಪರಾಕ್ರಮಿ । ತೋರಾತನ ಶಿರ । ಹಾರಿಸುವೆನು ಕ್ಷಣದಿ ॥೧೫೧॥

ತೋರುವೆನ್ನೈ ಯಮ । ನೂರನು ನಡೆನಡೆ । ಸಾರ್ರೈತವ ಪುರಕೆ ॥
ಸಾರವಹುದೆ ಸುಕು । ಮಾರನೆ ಧುರವಿದು । ಪೌರಷವಿನಿತೇಕೆ ॥೧೫೨॥

ಧಿರುರೆ ತರಳತನ । ವಿರದು ಶರಕೆ ತವ । ಕೊರಳರಿದೀಕ್ಷಣದಿ ॥
ಮರುಳುಗಣಂಗಳ । ನೆರವಿಗೆ ಹಬ್ಬವ । ವಿರಚಿಸುವೆನು ಭರದಿ ॥೧೫೩॥

ಇದಕೊ ಗದಾದಂ । ಡದ ಹತಿಯಂ ಗೊಂ । ಬುದಕಿದು ಸುಮುಹೂರ್ತ ॥
ಮದಮುಖತನ ನಡೆ । ಯದು ಬುದ್ಧಿಯ ಕೇ । ಳದೆ ನಿಲುವೆಯಾ ಧೂರ್ತ ॥೧೫೪॥

ಕನಲಿ ಸುವೇಗನು । ಕಣೆಗಳನೆಚ್ಚಡೆ । ಗಣಿಸದೆ ಮರುತಜನು ॥
ಘನಗದೆಯಿಂದ ಪೊ । ದನು ನೃಪಸುತನನು । ಸೆಣಸಿದರವರಿನ್ನು ॥೧೫೫॥

**ವಾರ್ಧಕ**

ನರನಾಥ ಲಾಲಿಸೀ ತೆರದಿ ಪವನಜ ಸುವೇ ।
ಗರು ಕಾದಿ ಜರೆದಾಡುತಿರೆ ಕಂಡು ವೃಷಕೇತ ।
ವರಯೌವನಾಶ್ವಂಗೆ ಹರುಷದಿಂ ತೋರಿದಂ ಧರಣೀಶ ನೋಡು ನಿನ್ನ ॥

ತರಳನೊಡನುಗ್ರದಿಂದಲಿ ಕಾಳಗದೊಳಿರ್ಪ ।
ವರಸುಧಾಕರವಂಶ ಶರಧಿಶಶಿಯೆನಿಪ ಭೂ ।
ವರ ಯಮಜನನುಜಸುಗುಣೋದ್ದಾಮ ರಣಭೀಮ ಭೀಮನೀತನೆಯೆಂದನು ॥೧೫೬॥

**ರಾಗ ಮಧ್ಯಮಾವತಿ ಏಕತಾಳ**

ತರಣಿಪೌತ್ರನಮಾತಿಗಿಳಿದು ರಥವನು ।
ಧರಣಿಪಸುತನೆಡೆಗೈದಿ ಪೇಳಿದನು ॥
ಹರಿತಾನಟ್ಟಿದನಿವರನು ಮಖಹಯಕೆ ।
ಧುರಬೇಡ ಬಿಡು ಸಾಕು ರೋಷವಿನ್ನೇಕೆ ॥೧೫೭॥

ಇಂದಿರೆಯರಸಗೆಮ್ಮಯ ಸರ್ವಸ್ವವನು ।
ಚಂದದೊಳೊಪ್ಪಿಸೆ ಕಂದ ಕೇಳಿನ್ನು ॥
ಸಂದೇಹವಿಲ್ಲೆನುತನಿಲಜಗಂದು ।
ವಂದಿಸೆ ವೃಷಕೇತನೆಂದನು ಬಂದು ॥೧೫೮॥

**ರಾಗ ಸುರುಟಿ ಏಕತಾಳ**

ಲಾಲಿಪುದೆಲೆ ತಾತ । ಸದ್ಗುಣ । ಲೋಲ ಪವನಜಾತ ॥
ಪಾಲಿಸೆನುತ ತವ । ಕಾಲಿಗೆ ತನ್ನಯ ।
ಮೌಳಿಯ ಚಾಚಿಹ । ಭೂಲೋಲನಪರಿ ॥೧೫೯॥

ನೀ ಮೊದಲೆನಗೊಲಿದು । ತೋರಿದ । ಸೀಮೆಯಧಿಪನಿಂದು ॥
ಕಾಮಪಿತನ ಕಾಂ । ಬಾಮನವಿಟ್ಟಿಹ ।
ಪ್ರೇಮದಸುತನಿವ । ನೈ ಮನ್ನಿಸುನೀ ॥೧೬೦॥

ತರಳನ ನುಡಿಕೇಳಿ । ಮತ್ತಾ । ಮರುತಜ ಮುದತಾಳಿ ॥
ಧರೆಯಧಿಪನನುಪ । ಚರಿಸುತ ನೆಗಹಲು ।
ಸರಸದೊಳಾನೃಪ । ವರನಿಂತೆಂದನು ॥೧೬೧॥

ಳ

**ರಾಗ ಬೇಗಡೆ ಏಕತಾಳ**

ಮರುತಸಂಭವ ಕೇಳು ಪೇಳುವೆನು । ಧುರಧೀರರನು ಕಂ ।
ಡರಿವೆನಿಳೆಯೊಳಗಾನು ಹಲಬರನು ॥
ಧರೆಯೊಳಗೆ ಮೈಮರೆದಿಹರ ತಾ । ವಿರಿವರಲ್ಲದೆನೊಂದರೆನುತಲಿ ।
ಪೊರೆವವರ ನಾ ಕಾಣೆ ತ್ರಿಜಗದಿ । ಕರುಣಿಯಹ ವೃಷಕೇತನಲ್ಲದೆ ॥೧೬೨॥

ವರಚುತರ್ದಶಭುವನವನು ಪೊರೆವ । ಗರ್ವಾತ್ಮ ಲಕ್ಷ್ಮೀ ।
ವರನು ನಿಮ್ಮಯ ಸೇವೆಯನು ಗೈವ ॥
ಚರನು ಗಡ ಯಿನಿ । ತಿರಲು ನಾನೇ ॥ ಸರ ಪರಾಕ್ರಮಿಯೆನುತ ಸಮರವ
ವಿರಚಿಸುತ ವಾಜಿಯನು ಪಿಡಿದಿರಿ ॥ ಬರಿದೆ ದಾರಿಯ ತಪ್ಪಿದಿರಿ ಸರಿ ॥೧೬೩॥

ಶ್ರೀವರನ ಭಕುತರಿಗೆ ಕೊಡದಿಹೆನೆ । ನಾನದರೊಳೆನ್ನಯ ।
ಜೀವವುಳಿಸಿದನೀ ವೃಷಧ್ವಜನೆ ॥
ಕಾವುದಲ್ಲದೆ ಕಾಯದೊಡೆ ಹಾ । ಹಾ ವೃಥಕೃತಮಾಗಿ ಜನ್ಮವ ।
ದೀ ವಿಧದಿ ಪೋಗುತ್ತಲಿರ್ದುದು । ಪಾವನನ ಕಾಣದೆ ಸುಯೋಗವು ॥೧೬೪॥

**ಭಾಮಿನಿ**
ಎಲೆ ವೃಕೋದರ ಕೇಳು ನಿಮ್ಮೊಳ ।
ಗೊಲಿದು ನರಲೀಲೆಯನು ನಟಿಪ ಶ್ರೀ ।
ಲಲನೆಯರಸನ ಕಂಡಪೆನಲಾನಿನ್ನು ನೀವೆನಗೆ ॥
ತಿಳಿದೆಸಗಿದುಪಕಾರವಿದು ಯೆನ ।
ಗೊಳಿತು ಬಹೆ ನಿಮ್ಮೊಡನೆ ಸರ್ವವ ।
ಬಳಿಕ ಗಂಗಾಪಿತನ ಪದಕರ್ಪಿಸುವೆ ನಾನೆಂದ ॥೧೬೫॥

**ರಾಗ ಸಾವೇರಿ ಅಷ್ಟತಾಳ**
ಎನೆ ವೃಕೋದರನೆಂದನವಗೆ । ಕೇಳು ।
ಜನಪಯೀವರೆಗೆಮ್ಮಗ್ರಜಗೆ ॥
ಅನುಜರು ನಾಲ್ವರಾ । ವೆನುತಿರ್ದೆವಿನ್ನು ನಿ ।
ನ್ನನು ಸಹಿತೈವರೆಂ । ದೆನುತ ಭಾವಿಸುವೆವು ॥೧೬೬॥

ಹರಿಯದರ್ಶನವಿದರಿಂದ । ಸಾಧ್ಯ ।
ವಿರದೆ ಧರ್ಮಜ ಗೈವಮಖದ ।
ವರ ಕರ್ತೃವಸುರಾರಿ । ವಿರಚಿಸುವನು ನಿಂದು ।
ಸಿರಿಮುಕುಂದನ ಕಾಂಬಾ । ತುರವಿರೆ ಬಹುದಯ್ಯಾ ॥೧೬೭॥

**ವಾರ್ಧಕ**
ಮರುತಸುತ ಕೇಳು ಮಮಪುರಕೆ ಚಿತ್ತೈಸು ನಾ ।
ವಿರಚಿಸುವ ಸೇವೆಯಂ ಕೈಗೊಂಡಬಳಿಕ ಪರಿ ।
ಪರಿವಸ್ತುಬಲಸಹಿತ ಬಹೆನು ನಿನ್ನೊಡನೆನಲ್ಕೊಪ್ಪಿದಂ ಕಲಿಭೀಮನು ॥
ಅರಸನವದಿರರಥದಿ ಕರೆದೊಯ್ದುತೈದಿನಂ ।
ಪುರವರದಿ ನಿಲಿಸುತುಪಚರಿಸಿ ರಾಜ್ಯದ ಭಾರ ।
ಪೊರಿಸಿ ಮಂತ್ರಿಯೊಳಿತ್ತು ತೆಗೆಸಿ ಭಂಡಾರದಿಂದ
ಖಿಳಧನಕನಕಗಳನು ॥೧೬೮॥

**ಭಾಮಿನಿ**

ಸತಿಪ್ರಭಾವತಿಯೊಡನೆ ಬಾಂಧವ |
ತತಿ ಸಹೋದರಸುತ ಸಹಿತಲಗ |
ಣಿತ ವಧೂಜಾಲವನು ಕರೆಸುತ ಜನನಿಯಂ ಕೂಡಿ ||
ಕ್ಷಿತಿಪ ಪೊರಮಡುತಿರಲು ಪವನನ |
ಸುತನವರ ಪಿಂದಿಕ್ಕಿಬಂದತಿ |
ಹಿತದೊಳಣ್ಣಗೆ ಮಣಿಯಲವ ಬಿಗಿದಪ್ಪುತಿಂತೆಂದ ||೧೭೯||

**ರಾಗ ಸಾರಂಗ ಅಷ್ಟತಾಳ**

ಬಂದೆಯ ಭೀಮ ನೀನು | ಪೋಗಿಹ ಕಾರ್ಯ |
ದಂದವನರುಹಿಸಿನ್ನು ||
ತಂದೆಯ ಹಯವದ | ನಿಂದು ಸಾಹಸದಿಂದ |
ಬಂದರೆ ಹೈಡಿಂಬಿ | ಕಂದ ಕರ್ಣಜ ಸಹ ||೧೮೦||

**ರಾಗ ಕಾಂಭೋಜಿ ಝಂಪೆತಾಳ**

ಲಾಲಿಸೆನ್ನಯ ಬಿನ್ನಪವನಣ್ಣದೇವ ||
ಭೂಲೋಲರನ್ನ ನಡೆದಿಹ ಕಥನದಿರವ || ಪಲ್ಲವಿ ||

ಒಡೆಯ ನಿನ್ನಾಜ್ಞೆಯಿಂ | ನಡೆದು ಭದ್ರಾವತಿಯೊ |
ಳೊಡನೆ ಹೈಡಿಂಬಿ ತಡೆ | ಗಡಿದು ರಿಪುಭಟರ ||
ಪಿಡಿದೆನ್ನ ವಶಕಿತ್ತ | ಕಡುಚೆಲ್ವ ಹಯವನದ |
ನುಡಿಯಲೇನರಿಗಳನು | ಬಡಿದೆನಾಹವದಿ ||೧೮೧||

ಅರಿತು ಮತ್ತಾಪುರದ | ಧರಣಿಪತಿ ಕರ್ಣಜನ |
ಧುರದಿ ಕೈಸೋತನಂ | ತರದಿ ಸಂಧಿಯನು ||
ವಿರಚಿಸಿದನೆಮ್ಮೊಡನೆ | ತುರಗ ಕಪ್ಪವು ಸಹಿತ |
ಬರುವನಾತನು ನಮ್ಮ | ತರಳನೊಡನೆಂದ ||೧೮೨||

**ರಾಗ ಭೈರವಿ ತ್ರಿವುಡೆತಾಳ**

ಮಾರುತಿಯು ತಾನಲ್ಲಿ ನಡೆದಿಹ |
ವಾರತೆಯ ಪೇಳುತಿರೆ ಬಂದಾ |
ಚಾರನೋರ್ವನು ನುಡಿದ ಪುರದೆಡೆ |
ಭೂರಮಣನವನೈದಿ ಬಂದಿಹ ||
ಭೂರಿವಸ್ತುಗಳೊಡನೆ ನಿಜಪರಿ |
ವಾರವಿಹುದೆನಲವನಿಗುಚಿತವ |
ನಾರಿ ಸುತ ತೆಗೆದಿತ್ತು ಬಳಿಕ ಮ |

ಹೀರಮಣನಿದಿರ್ಗೊಳುವ ಮನದೊಳು ॥
ದಾರಗುಣನು । ಪೊರಟ ಶೃಂ । ಗಾರಯುತನು ॥೧೭೩॥

ಪುರವ ಶೃಂಗರಿಸಲ್ಕರುಹಿ ಸೋ ।
ದರರು ಮಂತ್ರಿಚಮೂಪ ಸಾಮಂ ।
ತರು ಪುರೋಹಿತ ಭಟರ ಗಡಣದಿ ।
ಸರಸಿಜಾಕ್ಷನ ಸಹಿತ ಘೋಷದಿ ॥
ಮೆರೆವ ಕನ್ನಡಿ ಕಲಶವಿಡಿದಿಹ ।
ತರುಣಿಯರಕೂಡುತ್ತ ರಾಜಿಪ ।
ಕರಿಯಮೇಲಡರುತ್ತ ಸರಸದೊ ।
ಳರಸಿ ದ್ರುಪದಜೆಯೊಡನೆ ಬಂದನು ॥
ಧರ್ಮರಾಯ । ವರ್ಣಿಸ । ಲರಿದು ಪರಿಯ ॥೧೭೪॥

ಅರಸನಂ ವರ ಯೌವನಾಶ್ವನು ।
ಪರಿಕಿಸುತಲಡಿಗೆರಗಿ ತಂದಿಹ ॥
ತುರಗ ಕಪ್ಪವ ಸಹಿತ ಕಾಣಿಕೆ ।
ಯಿರಿಸ ಲಾತನನಪ್ಪಿ ಧರ್ಮಜ ॥
ಪಿರಿದು ಮನ್ನಿಸುತೆನ್ನ ತಮ್ಮಂ ।
ದ್ಯರಿಗೆ ನೀಸರಿಯಪ್ಪೆಯದರಿಂ ।
ಸಿರಿಯರಸನಹ ಯಾದವೇಂದ್ರನ ।
ಚರಣಕಭಿನಮಿಸೆನುತ ತೋರಿಸೆ ॥
ಹರಿಯನಂದು । ಸದ್ಗುಣ । ಭರಿತನೊಲಿದು ॥೧೭೫॥

**ವಾರ್ಧಕ**
ಭೂವಧೂರಮಣನಹ ಯೌವನಾಶ್ವಕನು ಮ ।
ತ್ತಾವನ ಸುಲೀಲಾ ವಿನೋದ ಮಾತ್ರದೊಳು ಭುವ ।
ನಾವಳಿಗಳಾಗಿ ಬಾಳ್ದಳಿವಾ ಸುವಿಶ್ವಂಭರನ ನೀರದಶ್ಯಾಮನ ॥
ಶ್ರೀವರನನವ ಮನೋಹರ ಮೂರ್ತಿಯಂ ಕಂಡು ।
ಭಾವಪುಳಕಿತನಾಗಿ ಹರುಷರಸವೊಸರೆ ಸ ।
ದ್ಭಾವದಿಂದಚ್ಯುತನ ಪದಕೆ ನೊಸಲಂಚಾಚಿ ಜಯವೆನುತ ನುತಿಗೈದನು ॥೧೭೬॥

**ರಾಗ ಧನ್ಯಾಸಿ ಅಷ್ಟತಾಳ**
ಜಯ ಜಯ ಜಯಕರುಣಾಕರ । ಜಗ । ನ್ಮಯ ಭವಭಯಹರ ಶ್ರೀಕರ ॥
ಜಯ ಸಚ್ಚಿದಾನಂದ । ಜಯತು ಮುಕುಂದ ॥೧೭೭॥

ಆದಿಪುರುಷ ಶ್ರೀನಾರಾಯಣ । ಮಧು । ಸೂದನಕ್ಷೀರ ಸಾಗರ ಶಯನ ॥
ವೇದೋದ್ಧರಣನೆ ರ । ಮಾಧವ ಮಹದೇವ ॥೧೭೮॥

**ವಾರ್ಧಕ**

ಪಾದಕಮಲದಿ ಶಿರವ ಚಾಚಿದರಸನ ನೆಗಹು ।

ತಾ ದಯಾಂಬುಧಿ ಮನ್ನಿಸಲ್ಕಖಿಳರಂ ಕೂಡಿ ।

ಮೇದಿನಿಪ ಧರ್ಮಜಂ ಪುರಕೆ ಬಂದೆಲ್ಲರೊಡನಿರಲು ಪಕ್ಷದ್ವಯದೊಳು ॥

ಪೋದುದೀ ಚೈತ್ರಮಾಸಂ ಮುಂದೆ ಕರೆಸಿದೊಡೆ ॥

ಯಾದವರ ಕಟಕ ಸಹ ಬಹೆನು ಮಖ ಹಯವ ಕೈ ।

ಗಾದುಕೊಂಬುದೆನುತ್ತಲರುಹಿ ಹರಿ ಗಮಿಸಿದಂ ದ್ವಾರಕೆಗೆ ವಹಿಲದಿಂದ ॥೧೭೯॥

**ರಾಗ ಸವಾಯ್ ಏಕತಾಳ**

ವಸುಮತೀಶ ತಾ । ಬಿಸಜಾಕ್ಷನ ಕಳು ।

ಹಿಸಿದ ಚಿಂತೆ ಮನದೊಳು ಹೆಚ್ಚಿ ॥

ಬಸವಳಿದಿರಲಾ । ಋಷಿವ್ಯಾಸನು ಬರ ।

ಲೆಸೆವ ಗಜಪುರಕೆ ಮುದನಚ್ಚಿ ॥೧೮೦॥

ಮುನಿಕುಲದೀಪನ । ಜನಪತಿ ಮನ್ನಿಸ ।

ಲನಿತರೊಳಗೆ ಶೋಕದ ಪರಿಯ ॥

ಘನವಹ ನುಡಿಯಿಂ । ದಿನಿತೇನಾಯ್ತೆಂ ।

ದೆಣಿಸುತಲೆಂದನು ಬಹು ಧೈರ್ಯ ॥೧೮೧॥

**ರಾಗ ಬೇಗಡೆ ಏಕತಾಳ**

ಏನಿದೇನಿದು ಚೋದ್ಯವೈ ರಾಯ । ನೀನೀತೆರ ದು ।

ಮ್ಮಾನ ತಾಳಿಹುದ್ಯಾಕೆ ಪೇಳಯ್ಯ ॥

ವಾಣಿವರಸೃಷ್ಟಿಯೊಳು ನಿನ್ನ ಸ । ಮಾನದವನೀಪಾಲರನು ನಾ ।

ಕಾಣೆನೈದಿಟ ನಿನಗೆ ಬಂದೆಡ । ರೇನದಿನ್ನನು ಮಾನಿಸದೆ ನುಡಿ ॥೧೮೨॥

ಧೀರ ವಾಯುಕುಮಾರಕನ ನುಡಿಗೆ । ಕುಂದಾದುದೇ ಮೈ ।

ದೋರಲಿಲ್ಲವೆ ಮಾರಮಣ ನಿನಗೆ ।

ಮೂರು ಲೋಕದ । ವೀರನರ ತ್ರಿಪು । ರಾರಿ ಸಮಬಲ । ಮಾರುತಜರಿರೆ ।

ವಾರುಹವನದ । ತಾರರೇ ಮನ । ವಾರೆ ನೆನೆದಡೆ । ಬಾರನೇ ಹರಿ ॥೨॥

ಸಾಕು ಬಿಡು ಮನೋವ್ಯಾಕುಲವನಿನ್ನು । ಸದ್ಧೈರ್ಯನಾಗಿರು ।

ಸೋಕದೆದೆರಿಸಿತ್ತೈ ಕೆಲಸಕಿನ್ನು ॥

ಲೋಕನಾಥನ ಕರುಣದಿಂ ಮೂ । ಲೋಕದೊಳು ನೀ ಗೈವಕಾರ್ಯಕೆ ।

ಬೇಕು ಬೇಡೆಂಬವರದಿಲ್ಲ ಗು । ಣಾಕರನೆ ತವ ಸತ್ಯ ಕಾಯ್ವುದು ॥೧೮೩॥

**ರಾಗ ಬೇಗಡೆ ಅಷ್ಟತಾಳ**

ಭಾವಿಸು ಋಷಿವರ ತವಪಾದ ದಯದಿ ।

ಪಾವನವಾಯ್ತೆನ್ನ ಜನ್ಮವೀ ಭವದಿ ||
ಪಾವಮಾನಿಯು ಪೋಗಿ ಹಯವತಂದಿಹನು |
ಮಾವರ ಕರುಣದಿ ತಾ ಮೈದೋರಿಹನು ||೧೮೪||

ಆ ಮಹಿಮನ ದಯೆಯಿಂದ ಕುಂದಿಲ್ಲ |
ಆ ಮಹಾಧನತೋರೆ ನೀವ್ ಬರಲಿಲ್ಲ ||
ಕಾಮಜನಕ ತಾನೈದಿರುವನಿಲ್ಲಿಲ್ಲ |
ನಾ ಮನ ಬೇಸರಿಸಿದೆನಿದಕೆಲ್ಲ ||೧೮೫||

**ವಾರ್ಧಕ**

ಕರುಣಿಸೈ ಧನವ ಮತ್ತಾ ಮರುತ ನೃಪನ ಕಥೆ |
ಯರುಹೆನಲು ಸಾಂಗದಿಂದುಸುರಿ ಮಖಶಾಲೆಯಂ |
ವಿರಚಿಸುತ ಹಯವ ರಕ್ಷಿಸುವುದೆನೆ ಮುನಿಯಮತದಿಂ ಭೂಪ ನೆರಹಿಸುತಲಿ ||
ಭರದಿ ಸೋದರರು ಋಷಿಸಹಿತ ಚತುರಂಗಬಲ |
ವೆರಸಿ ಹಿಮಗಿರಿಗೈದುತರ್ಚಿಸುತ ಧನದನಂ |
ಮೆರೆವ ಧನ ಕನಕಗಳ ಹೊರಿಸಿ ನಗರಕೆ ಬರಲು ಮುನಿಪನಾಶ್ರಮಕೆ ಸರಿದಂ ||೧೮೬||

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಧರಣಿಪತಿ ತಾಬಳಿಕ ಭೀಮನ |
ಕರೆದುಸುರಿದನು ದ್ವಾರಕೆಗೆ ನೀ |
ತರೆಳಿ ಲಕ್ಷ್ಮೀವರನ ಬೇಗದಿ | ಕರೆದುತಹುದು ||೧೮೭||

ಎನೆ ಹಸಾದವೆನುತ್ತ ಮಾರುತ |
ತನಯನಣ್ಣನಿಗೆರಗಿ ಪೊರಟೈ |
ತರಲಿದಿರುಗೋಚರಿಸಲಕ್ಷಿಗೆ | ವನಧಿಯಂದು ||೧೮೮||

**ವಾರ್ಧಕ**

ಭರಿತಮಾಗಿರ್ಪ ಬೆಳ್ನೊರೆಗಳಿಂ ತೆರೆಗಳಿಂ |
ತಿರುತಿರುಗುತೇಳ್ವ ಬೊಬ್ಬುಳಿಗಳಿಂ ಸುಳಿಗಳಿಂ |
ಭರದೊಳೆಳಕೊಂಬ ನಾನಾಪ್ರವಾಹಂಗಳಿಂ ಚರಿಪ ಜಲಚರಗಳಿಂದ ||
ಮಿರುಪಶಂಖದ ವಿಮಲಸರಿಗಳಿಂ ಪರಿಪರಿಯ |
ಮೆರೆವರತ್ನಂಗಳಿಂ ವಿವಿಧವಹಧ್ವನಿಗಳಿಂ |
ದಿರದೆ ತುಂತುರಿನ ನೀರ್ವನಿಗಳಿಂ ಗಂಭೀರತನಗಳಿಂ ಕಡಲೆಸೆದುದು ||೧೮೯||

**ರಾಗ ಕೇತಾರಗೌಳ ಅಷ್ಟತಾಳ**

ಇನಿತೆಸೆವಬ್ಧಿಯಕಾಣುತ್ತ ಮಾರುತಿ | ಘನತರತೋಷದಲಿ ||
ವನಜನಾಭನ ರಾಜಭವನವನೊಳಪೊಕ್ಕು | ವಿನಯದಿ ಬಹ ವೇಳ್ಯದಿ ||೧೯೦||

ನಿತ್ಯ ಸಂತೃಪ್ತ ಸರ್ವೋತ್ತಮನಾಗಿಹ । ಚಿತ್ತಜಪಿತನು ತಾನು ॥
ಮರ್ತ್ಯಲೀಲೆಯನಾಂತು ಮಿತ್ರರೊಡನೆ ಮುದ । ವೆತ್ತು ಭುಂಜಿಸುತಿರ್ದನು ॥೧೯೦॥

ಜನನಿ ದೇವಕಿ ಯಶೋದೆಯರಿಕ್ಕಲದನನ । ಲನ ಹವಿಫಲವಕೊಂಡು ॥
ಘನ ಸುಧೆಯನು ಸಹಿತಮರರಿಗುಣಿಸಿದಾ । ತನು ಭೋಜನವಗೈದನು ॥೧೯೧॥

**ಭಾಮಿನಿ**

ಕದ್ದುಪಾಲ್ಬೆಣ್ಣೆಗಳನೆಲ್ಲವ ।
ಮೆದ್ದು ತುರುಗಾಯ್ದುದನು ತ್ಯಜಿಸುತ ।
ಹೊದ್ದುತಾ ಪಾಂಡವರೊಳೆರಕದೊಳೆರಡೆಣಿಸದಿರುತ ॥
ಇದ್ದುದಾದುದು ಭಾಗ್ಯಪಡೆದರು ।
ಮುದ್ದುಗೈದಪರೂಟದೆಡೆಯಲಿ ।
ಚೋದ್ಯಮೆಂದಳು ಸತ್ಯಭಾಮಾದೇವಿ ದೇವಕಿಗೆ ॥೧೯೨॥

**ರಾಗ ತೋಡಿ ಆದಿತಾಳ**

ಬರಿದೆ ಪೇಳಲೇಕೆ ನೀನೇ । ನರಿವೆಯೆಮ್ಮ ಬಂಧನವನು ।
ಹರಿಸಿದಾತನೀತ ಜಗ । ದ್ಗುರುವಾಗಿರುವನು ॥
ಸುರರ ಪಾಲಿಸುವನು ಕೃಷ್ಣ । ನರನೆನುತ್ತ ಭೀಗಳೆವುದು ।
ಸರಿಯೆ ನಿನಗೆ ಪೋಗೆನುತ್ತ । ಲರುಹೆ ದೇವಕಿ ॥೧೯೪॥

ನಿಮ್ಮ ಬಂಧನವನು ಬಿಡಿಸಿ । ನೆಮ್ಮದಿಯನಿತ್ತವಗೆ ಬಂಧ ।
ನಂ ಮಗುಳದೇಕಾಯ್ತು ಸುರರ । ನೆಮ್ಮಿ ಸಲಹುವ ॥
ನಿಮ್ಮ ಗುರುವಿಗಾಯ್ತು ನರನ । ಚಮ್ಮಟಿಗೆಯ ಕೆಲಸವೇಕೆ ।
ನಮ್ಮ ನಗಿಸದಿಹುದೆನುತ್ತ । ಭಾಮೆ ನುಡಿದಳು ॥೧೯೫॥

**ಭಾಮಿನಿ**

ಇಂತು ಭಾಮಾದೇವಕಿಯರಿರೆ ।
ಕಂತು ಪಿತನುತ್ತರವಗೊಡುವೆಡೆ ।
ಕುಂತಿಕುವರನು ಬಂದಿಹುದ ತಾನರಿದು ಮನದಲ್ಲಿ ।
ನಿಂತು ದ್ವಾರದಿ ಹಾಸ್ಯಕನಿಲಜ ।
ನಂ ತಡೆವುದೊಳ ಬಿಡದೆ ನೀನೆನು ।
ತಂತರಾತ್ಮನು ಪೇಳಿದನು ಸೈರಂಧ್ರಿಯೊಳು ನಗುತ ॥೧೯೬॥

**ರಾಗ ಕೇತಾರಗೌಳ ಅಷ್ಟತಾಳ**

ಬಂದಳು ಭರದಿ ಸೈ । ರಂಧ್ರಿ ಬಾಗಿಲೊಳು ತಾ ।
ನಿಂದನಿಲಜಗೆಂದಳು ॥

ಮುಂದೆ ಬಾರದಿರು ಗೋ । ವಿಂದನಾರೋಗಣೆ ।
ಯಿಂದಿಹನೆನುತಲವಳು ॥೧೯೭॥

ೠ

**ರಾಗ ಕೇತಾರಗೌಳ ಝುಂಪೆತಾಳ**

ಆ ನುಡಿಯ ಕೇಳಿ ಭರದೀ । ಬಳಿಕ ಪವ । ಮಾನಸುತರತಿರೋಷದಿ ॥
ತಾನೆ ನರಹರಿಯಾದನೂ । ಗರ್ಜಿಸುತ । ಲಾನಿತಂಬಿನಿಗೆಂದನೂ ॥೧೯೮॥

**ರಾಗ ಮಾರವಿ ಏಕತಾಳ**

ಆರಿಗೆ ಭೋಜನ ಸಮಯವು ನಗರದೊ ।
ಳಾರಿಲ್ಲವೆ ಜನರೂ ॥
ಮಾರಿಗೆ ತುತ್ತಾದರೊ ಮೌನವೊ ಯೆನ ।
ಗಾರು ತಡೆಸಿದವರು ॥೧೯೯॥

ಸುರಿಯದೆ ವರ್ಷವು ಬೆಳೆಯದೆ ಧಾನ್ಯಗ ।
ಳುರೆದುರ್ಭಿಕ್ಷಕರ ॥
ಕರವಿಡಿದಿಹ ತರುಣಿಯರಿನಿಬರತಾ ।
ನರಿತುಬಿಡುವುದವರ ॥೨೦೦॥

ಗೊಲ್ಲರ ಮನೆಯನು ಪೊಗುತಲಿ ಪಾಲ್ಮೊಸ ।
ರೆಲ್ಲವ ಕದ್ದುಣುವ ॥
ಖುಲ್ಲಗೋವಳನಿಗೆ ದೊರೆತನವಾದಡೆ ।
ಬಲ್ಲನೆ ನೀತಿಯವ ॥೨೦೧॥

ಮಾವನ ಶಿರವನರಿದು ಮೊಲೆಗೊಟ್ಟಳ ।
ಜೀವವ ತೆಗೆದಧಮಾ ॥
ಭಾವನ ಮಿಗೆ ಸಂಭಾವಿಸುವನೆ ಜಗ ।
ತೀವಲಯದೊಳಮಮಾ ॥೨೦೨॥

ಜಲರುಹಭವಸುರಮುಖ್ಯರ ಸನ್ನುತಿ ।
ಗೊಳುವ ಪ್ರಭುತ್ವವನೂ ॥
ಕಳಗೊಂಡೀನರನಾದವನೆಮ್ಮಯ ।
ನೆಲೆಯರಿವನೆ ತಾನೂ ॥೨೦೩॥

**ಭಾಮಿನಿ**

ಮಾನಭಂಗಿತನಾದೆ ನಿನ್ನೀ ।

ಮಾನಹೀನನ ಕಾಂಬುದೆನಗೆ ಸು ।
ಮಾನವಲ್ಲೆಂದೆನುತ ಮಾರುತಿ ಕನಲಿ ಮೊಗದಿರುಹೆ ।
ದಾನವಾಂತಕನರಿತು ಮನದಲಿ ।
ತಾ ನಗುತ ಕರೆದೊಳಗೆ ಬರುತಲಿ ।
ದೇನು ತಡೆದವಳಾವಳೇತಕೆ ಕೋಪವೆನೆ ನುಡಿದ ॥೨೦೪॥

**ರಾಗ ಶಂಕರಾಭರಣ ಮಟ್ಟೆತಾಳ**
ಸಿಂಧುಶಯನನೀ ಮುನಿದಡೆ । ಇಂದಿಗೀ ಬ್ರಹ್ಮಾಂಡ ನಿನಗ ।
ದೊಂದು ತುತ್ತನ್ನಿಹುದೆ ಬಾಯ್ಗೆ । ಬಂದೆನೋರ್ವನೇ ॥
ಮಂದರಾದ್ರಿಧರನೆ ಕರುಣ । ದಿಂದಲೆನ್ನನುಳುಹು ಪೋಪೆ ।
ನಿಂದು ತಡೆಸಿದರಕ್ಷಣಕೆ । ಚಂದವೈಸಲೇ ॥೨೦೫॥

**ರಾಗ ಶಂಕರಾಭರಣ ಏಕತಾಳ**
ಎನೆ ಮುರಾರಿ ನಗುತ ನುಡಿದ । ಘನವಿಕ್ರಮಿಯೆ ಸೈರಿಸಹಹ ।
ಗುಣವಿಹೀನರಕಟ ನಿನ್ನ । ನಿನಿತು ತಡೆದರೇ ॥೨೦೬॥

**ರಾಗ ಶಂಕರಾಭರಣ ಮಟ್ಟೆತಾಳ**
ಸರಸಿಜಾಕ್ಷ ನಿನ್ನ ಕೊಡೆ । ನರನ ಸಲುಗೆಯೆನಗೆಯಿಹುದೆ ।
ಪುರದ ದ್ವಾರದಲ್ಲಿ ಯೆನ್ನ । ಬರಿದೆ ತಡೆಸಿದೇ ॥
ಹರಿಯೆ ನೀನಿಲಿಸಲ್ಕದೇನು । ಕೊರತೆಯಪ್ಪುದೆನಗೆ ಭೂಪ ।
ನೊರೆದುದಲ್ಲವೆಂಬುದೇಕೆ । ಗರುವತನವದೂ ॥೨೦೭॥

**ವಾರ್ಧಕ**
ಮರುತಸುತನಿಂತೆನಲು ಮುರಹರಂ ನಗುತವನ ।
ಸೆರಗಪಿಡಿದಿತ್ತ ಬಾರೆನುತ ಕುಳ್ಳಿರಿಸಿ ಮುದ ।
ವೆರೆದು ಬಿಗಿಯಪ್ಪುತಿಂತೆಂದನೆಲೆಸಖ ನಿನ್ನ ಸರಸಕಾಗಿಯೆ ದ್ವಾರದಿ ॥
ಬರಿದೆ ನಿಲಿಸಿದೆ ಹೊರತು ನಿಮ್ಮೈವರೊಡನೆ ನಾ ।
ನೆರಡಣಿಸುವೆನೆ ಸಾಕು ಮರುಗಬೇಡೆನುತವನ ।
ಕರವಪಿಡಿದೊಳಗೊಯ್ದು ಮಧುರ ಭೋಜನಗೈಸಿ ಮುದದಿ ಮತ್ತಿಂತೆಂದನೂ ॥೨೦೮॥

**ರಾಗ ಬೇಗಡೆ ಅಷ್ಟತಾಳ**
ಮರುತನಂದನ ಪೇಳು ಸುಖವೆ ನಿಮ್ಮವರ್ಗೆ ।
ಧರಣಿಪ ಫಲುಗುಣ ಮಾದ್ರೇಯರಿಂಗೇ ॥
ವರ ಧೃತರಾಷ್ಟ್ರ ದ್ರೌಪದಿ ಕುಂತಿಯರಿಗೆ ।
ಪುರ ಪರಿಜನ ಬಂಧುನಿಕರಕೆಲ್ಲರಿಗೆ ॥೨೦೯॥

ಏನು ಕಾರಣದೊಳಟ್ಟಿದ ನಿನ್ನ ನೃಪನೂ ।
ತಾನು ಮಖವನಾರಂಭಿಪನೆ ಪೇಳಿನ್ನು ।
ಸಾನುರಾಗದಿ ಬಂದ ಪರಿಯೆಲ್ಲವನ್ನೂ ।
ನೀನರುಹೆನಲೆಂದ ವಾಯುನಂದನನೂ ॥೧೧೦॥

**ರಾಗ ನಿಲಾಂಬರಿ ತ್ರಿವುಡೆತಾಳ**

ಲೋಕನಾಯಕ ಲಾಲಿಸು । ಗೋಪಾಲಕೃಷ್ಣ ।
ನೀ ಕರುಣವನಿರಿಸೂ ॥
ಶೋಕಹರ ವರ । ನಾಕಪತಿ ನುತ ।
ಶ್ರೀ ಕಮಲದಳನಯನ ಚಿನ್ಮಯ ॥ ಪಲ್ಲವಿ ॥

ಕರಿವರದನೆ ನಿನ್ನನೂ । ನಂಬಿದವರ್ಗೆ ।
ಬರುವುದೇನೆಡರದಿನ್ನು ॥
ಹರಿಯೆ ನೀನಗ್ರಜನಿಗರುಹಿದ । ತೆರದಿ ಮಖವನು ತೊಡಗಲೋಸುಗ ।
ಭರದೊಳಟ್ಟಿದನೆನ್ನ ನಿನ್ನನು । ಕರೆದುತರುವುದೆನುತ್ತ ಹರುಷದಿ ॥೧೧೧॥

ನಿರತನಿನ್ನಯ ಪಾದವ । ನಂಬಿಹೆವೆಂಬು ।
ದರಿತು ನಮ್ಮೊಳು ದಯವ ॥
ಯಿರಿಸಿ ತನ್ನಪರಾಧವೆಲ್ಲವ । ಮರೆದು ಸರ್ವರವೆರಸಿ ಬಂದ ।
ಧ್ವರವ ನಡೆಸಿದುಪೊರೆಯೊಯೆನುತಲಿ । ಹರಿತನಯ ಹರಿಚರಣಕೆರಗಿದ ॥೧೧೨॥

**ವಾರ್ಧಕ**

ಮುರಹರಂ ಮುದದೊಳನಿಲಜನ ಶಿರವಂ ನೆಗಹಿ ।
ಬರುವೆ ಗಜಪುರಕೆನುತ್ತಖಿಳ ಯಾದವನಿಕರ ।
ತರುಣಿ ರುಗ್ಮಿಣಿ ಭಾಮೆದೇವಕಿಯರೊಡನೆ ಕರಿತುರಗ ಧನಕನಕಗಳನೂ ॥
ನೆರಹಿ ರಥವೇರಿ  ಬಂದಾಜಾಹ್ನವಿಯ ತಟದೊ ।
ಳಿರಿಸಿ ಪಾಳಯವನಿಭಪುರಕೆ ಬರೆ ಶ್ರೀವರನ ।
ಧರಣಿಪತಿಯುಪಚರಿಸಿ ವಿಷ್ಟರದಿ ಕುಳ್ಳಿರಿಸುತಿಂತೆಂದನತಿವಿನಯದಿ ॥೧೧೩॥

**ರಾಗ ಕಾಂಭೋಜಿ ಝಂಪೆತಾಳ**

ದೇವಲಾಲಿಪುದು ವಸು । ದೇವದೇವಕಿಯು ಬಲ ।
ದೇವಸ್ಮರ ಮುಖ್ಯ ಸತಿನಿವಹ ॥
ನೀವು ಬಿಟ್ಟೈತಂದ । ಭಾವವೇನೈ ಭೀಮ ।
ನಾವೆಡೆಯೊಳೆನಲು ಹರಿನುಡಿದ ॥೧೧೪॥

**ರಾಗ ಮಧ್ಯಮಾವತಿ ಏಕತಾಳ**

ಕೇಳಯ್ಯಶಶಿಕುಲ ರಾಜಶೇಖರನೇ ।

ಏಳಯ್ಯ ಸುರನದಿ ತಟಕಿನ್ನು ನೀನೇ ||
ಪಾಳ್ಯವೆರಸಿ ಬಂದೆ ಪರಿಕಿಸು ಮುದದಿ |
ಜಾಲವಲ್ಲಿದು ಭೀಮನರುಹಲು ಭರದಿ ||೧೧೫||

**ವಾರ್ಧಕ**

ಎನಲರ್ಜುನನ ಮೊಗವ ನೋಡಿ ಧರ್ಮಜನೆಂದ |
ನಿನಿಬರೀಯಾದವನಿಕಾಯ ಸಹ ನಮ್ಮೆಡೆಗೆ |
ಚಿನುಮಯಾತ್ಮಕ ಪರಂಜ್ಯೋತಿ ಸ್ವರೂಪ ಶ್ರೀಹರಿ ಬಂದುದಚ್ಚರಿಯಲಾ ||
ವಿನಯದಿಂದವರ ಸತ್ಕರಿಸಿತಹುದೆಂದು ಪುರ |
ವನು ಶೃಂಗರಿಸಲರುಹುತನುಜರೊಡನೈದಿದಂ |
ಘನಮಹಿಮ ಸಹಿತ ಬಂದವರ ಮನ್ನಿಸುತಿರಲು ಭಾಮೆ ದ್ರುಪದಜೆಗೆಂದಳು ||೧೧೬||

**ರಾಗ ಬಿಲಹರಿ ಏಕತಾಳ**

ಇಳೆಯೊಳು ಚದುರೆ ನೀ | ಲಲನೆಯೆನ್ನರಸನ |
ನೊಲಿಸಿಕೊಂಡನು ದಿನ | ದೊಳು ಮೀರ್ವೆನಮ್ಮ ||
ಬಲು ಪತಿವ್ರತೆ ಪತಿ | ಗಳನೈವರನ್ನು ಮ |
ರುಳು ಗೈವಳೊಳು ಮಾತಾ | ಡಲು ಬೆದರುವೆವು ||೧೧೭||

ಕರುಣ ವಾರಿಧಿಯ ನಾ | ನರಿತೊಲಿಸದಡೆನ್ನ |
ದುರುಳದುಃಶ್ಶಾಸನ | ಸೆರಗನೊಯ್ದಾಗ ||
ವರ ಮಾನಕಾಯ್ದವ | ರಿರುವರೆ ಕೇಳು ನಿ |
ನ್ನರಸನು ದಯದಿಂದ | ಪೊರೆದಿಹನೆನ್ನ ||೧೧೮||

ಸರಿ ಸರಿ ಮೆಚ್ಚಿದೆ | ನಿರತಗೃಹದಿ ನಿಲ ||
ದಿರುವ ಬಗೆಯ ಗೈದೆ | ಹರುಷವಿದಹಹ |
ಅರಿಯದೆ ಮಾತಾಡಿ | ದಿರವಕ್ಷಮಿಸುವುದೆಂದು |
ಭರದಿ ನುಡಿಯೆ ಭಾಮೆ | ಗೊರೆದಳ್ಪಾಂಚಾಲೆ ||೧೧೯||

ಪಾರಿಜಾತವ ನೊಂಪಿ | ಸಾರಿ ನೀರಮಣನ |
ನಾರದಗಿತ್ತಬಳಿಕಾರಿನ್ನೊಡೆಯರು ||
ಶ್ರೀ ರುಕ್ಮಿಣೀ ಧವ | ನೋರ್ವನನಾಥರ್ಗೆ ||
ದಾರಿ ದೋರಿಪನಾತ ನಾಥನು ಪುಸಿಯೇ ||೧೨೦||

**ಭಾಮಿನಿ**

ಇನಿತು ದ್ರೌಪದಿ ಸತ್ಯಭಾಮಾ |
ವನಿತೆಯರು ನುಡಿಯುತಿರೆ ಮತ್ತಾ |
ಜನರು ಹರಿಯಾಜ್ಞೆಯೊಳು ಹಯವನು ಪೂಜಿಸಲ್ಕತ್ತ |

ದನುಜನನುಸಾಲ್ವಾಖ್ಯನಣ್ಣನ ।
ಮನುಮಥನಪಿತ ತರಿದವೈರವ ।
ನೆನೆದು ಸಿಡಿಲಂದದಲಿ ಭೋರ್ಗರೆದೆಂದ ಸಚಿವನೊಳು ॥೧೧೦॥

**ರಾಗ ಭೈರವಿ ಏಕತಾಳ**
ಮಂತ್ರಿ ಸುಧಾರನೆ ಕೇಳು । ಹರಿ । ಪಿಂತಣ್ಣನ ಸಮರದೊಳು ॥
ಪಂಥದಿ ತರಿದನು ಶಿರವ । ಮದ । ದಿಂದಲುರುಹಿದ ಪುರವ ॥೧೧೧॥

ಆ ವೈರವ ತಾಳುವೆನೇ । ಹುಲು । ಗೋವಳನವ ಬಾಳುವನೇ ॥
ಜೀವಿಸಲೆಡೆಗೊಡದವನಾ । ರಣ । ದೇವತೆಗುಣಬಡಿಸುವೆನಾ ॥೧೧೩॥

ಮದನಾರಿಯ ಕರುಣದಲೀ । ಸಿಲು । ಕಿದ ಮದ್ರಿಪುವಿಂದಿನಲೀ ॥
ಕದನದೊಳಣ್ಣನ ಪಗೆಯಾ । ಮುಗಿ । ಪುದಕಿದುಲೇಸಿನ ಸಮಯಾ ॥೧೧೪॥

ಬಡಿದಹಿತರನಾ ಹಯವ । ಸೆರೆ । ಪಿಡಿಯಲು ಹರಿಯೈತರುವ ।
ಬಿಡಿಸಲು ಬಂದಾತನನೂ । ತರಿ । ದಿಡುತ ನುಡಿಯ ಸಲಿಸುವೆನೂ ॥೧೧೫॥

**ವಾರ್ಧಕ**
ಎನುತ ಗರ್ಜಿಸಿ ಖಳಂ ಪಡೆವೆರಸುತೈತಂದು ।
ಘನತರದ ಮಾಯದಿಂ ಕವಿಸಿ ಕಾರ್ಗತ್ತಲೆಯ ।
ಜನಪ ಧರ್ಮಜನಧ್ವರದ ಹಯವ ಕೊಂಡೊಯ್ದು ಕಟ್ಟಿ ಮೇಣ್ ನಿಜ ಬಲವನೂ ॥
ಕ್ಷಣದೊಳಗೆ ಪದ್ಮಿನಾಕಾರದಿಂ ನಿಲಿಸಿ ಮ ।
ತ್ತನುವರಕ್ಕುದ್ಯುಕ್ತನಾಗಿ ತನ್ನಯ ಶರಾ ।
ಸನದೊಳಂಬಂ ಸೇರಿಸುತ ಸಾಲ್ವನಾಪ್ತಭಟ ನಿವಹಕಿಂತೆಂದನಂದೂ ॥೧೧೬॥

**ರಾಗ ಶಂಕರಾಭರಣ ಮಟ್ಟೆತಾಳ**
ಶೂರ ಸುಭಟರೆಲ್ಲ ಕೇಳಿ । ಚೋರ ಗೊಲ್ಲತರಳನೊಡನೆ ।
ಭೂರಿ ವಿಕ್ರಮದೊಳು ಕಾದ । ಲಾರದವನನೂ ॥
ಮಾರಿ ಬಳಗಕೀವೆ ನೀ ಮ । ಹಾರಣಾಗ್ರ ಗೈವನವನೆ ।
ವೀರಮಿತ್ರ ನೆನಗೆ ಮುಂದೆ । ಸಾರಿ ಪೆಳ್ದೆನೂ ॥೧೧೭॥

ಮಿತ್ರಭಾವವೆಣಿಸುತವಗೆ । ಮತ್ತೆ ಗೋಗಜಾಶ್ವಧನ ಸು ।
ರತ್ನವನಿತೆಯರನು ಕೊಡುವೆ । ಸತ್ಯವೀನುಡಿ ॥
ಯತ್ನದಿಂದ ಧುರದಿ ಗೋಪ । ಮೊತ್ತದೊಡೆಯನನ್ನು ಕೊಲಿರೆ ।
ನುತ್ತ ನೇಮವಿತ್ತು ಗರ್ಜಿ । ಸುತ್ತಲಿರ್ದನೂ ॥೧೧೮॥

**ಭಾಮಿನಿ**

ಜನಪ ಕೇಳೀ ತೆರದೊಳತ್ತಲು ।
ದನುಜನಿರುತಿರಲಿತ್ತ ಖಳ ಸಂ ।
ಜನಿತಮಾಯಕೆ ಹಯವ ಪೂಜಿಸುತಿರ್ದ ನಾರಿಯರು ॥
ಮುನಿಜನರು ತಲ್ಲಣಿಸೆ ಬೆರಗಿನ ।
ಮನದೊಳೆಣ್ದೆಸೆಗಿರದೆ ಚದರ ।
ಲ್ಕನುವರಿತು ದನುಜಾರಿ ತಲೆ ದೂಗುತ್ತಲಿಂತೆಂದ ॥೧೧೯॥

**ರಾಗ ಮಧ್ಯಮಾವತಿ ಏಕತಾಳ**

ಕೇಳಿರೆನ್ನಯ ಮಾತನೊಲಿದು ನೀವೆಲ್ಲ ॥
ಆಲೋಚಿಸುವುದೇತಕೆ ಸಮಯವಿದಲ್ಲ ॥ ಪಲ್ಲವಿ ॥

ಇವನನುಸಾಲ್ವನೆಂಬವನೀತನಣ್ಣನ ।
ಬವರದಿ ಪಿಂತೆ ಕೊಂದಿಹೆನದರಿಂದ ॥
ಹವಣಿಸುತೆನ್ನ ವೈ । ರವಕಟ್ಟಿ ಬಂದರೆ ।
ಜವದೊಳೆಮ್ಮಯ ತುರ । ಗವನೊಯ್ದ ಖಳನು ॥೧೨೦॥

ದುರುಳನ ಗೆಲಿದಿನ್ನು । ತರುವರಾರೀ ನಮ್ಮ ।
ತುರಗವನಾ ಸುಭ । ಟರಿಗೊಲಿದಿಂದೂ ॥
ಮೆರೆವ ವೀಳ್ಯವನೀವೆ । ಧುರವಗೆಲ್ಲುವೆವೆಂಬ ।
ಭರವಸೆಯಿರ್ದಡೆ । ಪೊರಡುವುದೆಂದ ॥೧೨೦॥

**ಭಾಮಿನಿ**

ಮುರಮಥನನಿಂತೆನಲು ಕೇಳ್ದತಿ ।
ಧುರಸಮರ್ಥರು ಬೆದರಿ ಮೌನದೊ ।
ಳಿರಲು ಕಂಡೀ ಪರಿಯನೆಲ್ಲವ ನಗುತ ಪ್ರದ್ಯುಮ್ನ ॥
ಭರದಿನಡೆತಂದಚ್ಯುತನಪದ ।
ಸರಸಿಜಕೆ ತಲೆವಾಗಿ ತನ್ನಯ ।
ಕರವ ಮುಗಿದಿಂತೆಂದನಾಕ್ಷಣ ಶೌರ್ಯದೇಳ್ಗೆಯನು ॥೧೨೧॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ತಾತ ಕೊಡು ವೀಳಯವ ವೈರಿ । ವ್ರಾತವನು ಗೆಲಿದಶ್ವವನು ತಹೆ ।
ನೀತತೂಕ್ಷಣ ನೋಡು ಮಮಸ । ತ್ವಾತಿಶಯವ ॥೧೨೨॥

ವಾರುಹವ ನಾ ತಾರದಡೆ ವೃಷ । ಳೀ ರಮಣನುಗ್ರಗತಿಗಿಳಿವೆನು ।
ಮೀರುವೆನೆ ನುಡಿಯಿದಕೆ ಕಳುಹೈ । ಭೂರಿ ಮುದದಿ ॥೧೨೪॥

ಎನುತಲಾ ಪ್ರದ್ಯುಮ್ನ ಪೌರುಷ । ವನು ನುಡಿಯೆ ಕರುಣಿಸಲು ವೀಳ್ಯವ ।
ದನುಜಹರನಡಿಗೆರಗಿ ಪೊರಟನು । ಘನತೆಯಿಂದ ॥೨೩೫॥

ಶಂಬರಾರಿಯು ಕದನಕ್ಕೈದುವ । ದಂ ಬಳಿಕ ವೃಷಕೇತು ಕಾಣುತ ।
ಸಂಭ್ರಮದಿ ಗರುಡಧ್ವಜಗೆ ಮಣಿ । ದಂಬರದೊಳು ॥೨೩೬॥

**ರಾಗ ಭೈರವಿ ಏಕತಾಳ**
ಜಲಜಾಕ್ಷನೆ ಕೇಳಿಂದು । ರಿಪು । ಬಲವನು ಸಮರದಿ ಕೊಂದು ॥
ನಲಿಯುವ ಶಾಕಿನಿ ಗಣಕೇ । ದಿಗು । ಬಲಿ ಕೊಡುವೆನು ಈ ಕ್ಷಣಕೇ ॥೨೩೭॥

ಧುರದಲಿಮದ್ಭುಜ ಬಲದಿ । ತ್ರಿದ । ಶರು ಮೆಚ್ಚುವ ವೋಲ್ಕಾದೀ ॥
ತುರಗವನೊಯ್ದನಗೆಲಿದು । ತವ । ಚರಣಕೊಪ್ಪಿಸುವೆ ಪಿಡಿದೂ ॥೨೩೮॥

ಕ್ಷಿಪ್ರದಿ ಖಳನ ನಿನ್ನಡಿಗೇ । ತಂ । ದೊಪ್ಪಿಸದಡೆ ಮುಂದೆನಗೇ ॥
ವಿಪ್ರನ ಕೊಲಲೆಳಸಿದನಾ । ಗತಿ । ಯಪ್ಪುದು ಕಳುಹಿಪುದೆನ್ನ ॥೨೩೯॥

**ಭಾಮಿನಿ**
ದಿನಪಮೊಮ್ಮನ ರೀವಿ ಪ್ರದ್ಯು ।
ಮ್ನನ ಸಹಸ ನುಡಿಗಳನು ಕೇಳುತ ।
ಚಿನುಮಯನು ಬಿಗಿದಪ್ಪಿ ಹರುಷದೊಳಿತ್ತ ವೀಳಯವ ॥
ಮಣಿರಥಕೆ ಮೀನಧ್ವಜವ ನಾ ।
ಕ್ಷಣದೊಳಳವಡಿಸುತ್ತ ಧನುಶರ ।
ವನುಗೊಳುತ ರಥವೇರಿ ಸ್ಮರನಡೆತಂದನಾಹವಕೇ ॥೨೪೦॥

**ಕಂದ**
ಬರುತಿಹ ಸ್ಮರನಂ ಸಾಲ್ವಂ ।
ಪರಿಕಿಸುತಿವ ಮೀನ ಧ್ವಜನೆಂದರಿತಾಗಂ ।
ಉರಿಮಸಗುತಲತಿ ಭರದಿಂ ।
ಸರಿದವನಂ ತಡೆಯಲು ಮತ್ತಾಸ್ಮರನೆಂದಂ ॥೨೪೧॥

**ರಾಗ ತುಜಾವಂತು ಮಟ್ಟೆತಾಳ**
ಭಳಿರೆ ವೈರಿಸುಭಟ ಕೇಳೆಲಾ । ತೋರುವೆಯಾ ಬಾಹು ।
ಬಲವ ರಣದೊಳೆಲವೊ ದುರ್ಬಲಾ ॥ ಪಲ್ಲವಿ ॥

ಆರೆಲಾ ನೀ ಪೇಳು ನಮ್ಮ । ವಾರುಹವ ಕದ್ದೊಯ್ದು ನಿನ್ನ ।
ಭೂರಿಗರ್ವವಿಳಿಸಿದಪೆನು । ಸಾರಿ ಪೇಳ್ದೆ ಕೇಳು ಖಳ ಕು ।
ಠಾರನೆನಿಪಹರಿಯ ತರಳನೂ । ನಾಬಿಡೆನಲ್ಲದಡೆ ।

ಕ್ರೂರ ಶರದಿತರಿವೆ ನಿನ್ನನ್ನೂ । ನೀವಿಂತುಗೈದ
ಚೋರತನಕೆ ಮದ್ದನರೆವೆನೂ ॥೨೪೨॥

ಎನಲು ನುಡಿದ ಸಾಲ್ವನನುಜ । ದನುಜನನುಸಾಲ್ವಾಖ್ಯನಹೆನು ।
ನಿನಗೆ ಪಂಚಶರ ಪ್ರಯೋಗ । ವನಿತೆಯರೊಳು ಲೇಸುವಿರಹ ।
ವೆನಗದಿಲ್ಲವಿಂದ್ರಿಯಂಗಳ । ನಿಗ್ರಹಿಸಲಿಲ್ಲ ।
ಸೆಣಸುತಿಹೆನು ತೊಡುವೆ ಶರಗಳ । ವಾರುಹವ ಬಿಡೆನು ।
ಮನೆಗೆ ತೆರಳಲ್ಲದಡೆ ನಿಲ್ಲೆಲಾ ॥೨೪೩॥

ಎಲವೊ ದೈತ್ಯ ಕೇಳು ನಿನ್ನ । ಛಲವ ತೋರುತಿಹೆಯ ನಿಲ್ಲು ।
ಸುಲಭವೇನೂ ಪೇಳೆನುತ್ತ । ಜಲಜನಾಭನಾತ್ಮಜಾತ ।
ಬಲುಶರಾಳಿಯಿಂದ ಮುಸುಕಲೂ । ಕತ್ತರಿಸಿಕ್ಷಣದಿ ।
ಮುಳಿದುದೈತ್ಯಕಣೆಗಳೆಸೆಯಲೂ । ಬರೆ ಮಧ್ಯಪಥದೊ ।
ಳಿಳೆಗೆ ಭರದಿ ಸ್ಮರನು ಕೆಡಹಲೂ ॥೨೪೪॥

**ಭಾಮಿನಿ**
ದುರುಳನಾಗಮಹೋಗ್ರ ಶರವನು ।
ಸ್ಮರಗಿಡಲು ಸೈರಿಸದೆ ಮೂರ್ಛೆಯೊ ।
ಳೊರಗೆ ರಥವನು ತಿರುಹಿ ಮತ್ತಾ ಸಾರಥಿಯು ಜವದೀ ॥
ಬರಲು ಮದನನ ಹರಿಯು ಪರಿಕಿಸಿ ।
ಭರಿತ ಪೌರುಷದಿಂದ ಮಮಸುತ ।
ಧುರದಿ ರಿಪುಮಥನದೊಳು ಬಳಲಿದನೆನುತಲಿಂತೆಂದ ॥೨೪೫॥

**ರಾಗ ರೇಗುಪ್ತಿ ಅಷ್ಟತಾಳ**
ಅಹಹಯಿನ್ನೇನೆಂಬೆನೂ । ಕಂಡೆನು ನಿನ್ನ ।
ಸಹಸವ ಧುರದೊಳಾನು ।
ಕುಹಕಿ ದೈತ್ಯನಗೆದ್ದು ತುರಗವ ತಂದಿಂತು ।
ಬಹು ಬಳಲಿದೆಯ ನೀನು । ಪೇಳಿರವನು ॥೨೪೬॥

ಧುರ ಪರಾಕ್ರಮಿತಾನೆಂದು । ಗರ್ವದಿ ಭಾಷೆ ।
ಯರುಹುತಲೆನ್ನೊಳಿಂದು ॥
ಬರಿದಾಯ್ತು ತರುಣಿಯರೊಳು ಸರಸವೆ ಪೇಳು ।
ಪುರುಷತ್ವವೆ ನಿನಗೇ । ಸೋತಿಹ ಬಗೆಗೇ ॥೨೪೭॥

ಪುರಕೆ ಪೋಗುವದೆಂತಿನ್ನು । ಸ್ತ್ರೀಯರು ನಗ ।
ದಿರುವರೆ ವಿಪುನವನ್ನು ॥

ತೆರಳಕೊಡರು ಮುನಿ । ವರರು ಸೇರ್ದಡೆ ಬಾಣಾ ।
ಸುರನಲ್ಲೀಶತಾನು ॥ ನೆಲಸಿರ್ಪನೂ ॥೧೪೮॥

**ವಾರ್ಧಕ**

ಗತಿ ನಿನಗೆ ಬೇರೇನ ಕಾಣೆನೈಪ್ರಾಪ್ತ ವಿ ।
ನ್ನತಿಶಯದನಂಗತ್ವವೇ ನಿಜಂ ನಿನಗಿನ್ನು ।
ಮತಿಹೀನಸುಡು ನಿನ್ನ ಬಾಳುವೆಯನೆಂದು ಹರಿಯೊದೆದನೆಡಗಾಲ್ತುದಿಯೊಳು ॥
ಕ್ಷಿತಿನಾಥ ಕೇಳಿಂತು ಮುರಮಥನನಾಗ ಕಡು ।
ಖತಿಯೊಳಾತ್ಮಜನಕಾಲ್ದಳದೊಳೊದೆಯಲ್ಕೆ ಮಾ ।
ರುತಿಕಂಡು ಶತಪತ್ರ ನೇತ್ರನಡಿದಾವರೆಗೆ ಮಣಿದೆಂದ ದೈನ್ಯತೆಯೊಳು ॥೧೪೯॥

**ರಾಗ ಮಧುಮಾಧವಿ ಏಕತಾಳ**

ಲಾಲಿಸು ಭಕ್ತ ಸಂಜೀವ ಬಿನ್ನಪವ ।
ಬಾಲನ ಮೇಲಿಷ್ಟು ಕೋಪವೆ ದೇವ ॥
ಖೂಳನಾತನು ಮೋಸದಿಂದ ಗೆದ್ದಿಹನು ।
ಮೇಲುದಳವ ಕಳುಹಿಸುವುದು ನೀನೂ ॥೧೫೦॥

ಬಲಹೀನನೇಸ್ಮರ ಸೋಲ್ವನೆ ಖಳಗೆ ।
ಕಲಿಕರ್ಣ ತನುಜ ತಾನೈದಲೀ ಬಗೆಗೇ ॥
ಕೊಳುಗುಳವನು ಗೆದ್ದು ತುರಗವತರುವ ।
ಛಲದಂಕನಹ ನೋಡು ನಿಜವಿದುದೇವ ॥೧೫೧॥

**ರಾಗ ಕಾಂಭೋಜಿ ಏಕತಾಳ**

ಮಾರುತಾತ್ಮಜ ರಣಧೀರ ಕೇಳಯ್ಯ ।
ಕ್ರೂರಕರ್ಮಿಗೆ ಪರಿಹಾರ ಪೇಳಯ್ಯ ॥ ಪಲ್ಲವಿ ॥

ಭೂರಿ ಗರ್ವದಿ ಭಾಷೆ । ದೋರಿಕಾದಾಡಿ ಸೋ
ತೀರೀತಿ ಬರಲು ಶ । ರೀರಖಂಡನೆಯೂ ।
ಸೇರಿತು ಸಾಕುವಿ । ಚಾರ ಸಹಸವಿರೆ ।
ವಾರುಹವನು ತಾರೊ । ವೀರ ನೀನೆಂದು ॥೧೫೨॥



**ಕಂದ**

ಮುರಹರನಾಡಿದ ನುಡಿಯಂ ।
ಮರುತಜಕುವರಂ ಲಾಲಿಸುತಲಿ ಚಿತ್ತದೊಳುಂ ।

ದೊರಕಿದುದಾಹವವೆನಗೀ ।
ಹರಿಕರುಣದೊಳೆನುತುಬ್ಬೇರುತಲಿಂತೆಂದಂ ॥೧೫೩॥

**ರಾಗ ಮಾರವಿ ಏಕತಾಳ**

ಬಿಡುಮನದೆಣಿಕೆಯ । ಜಡರುಹ ಲೋಚನ । ಕೆಡುಕನವನ ಶಿರವ ॥
ಕಡಿದೀಕ್ಷಣ ಯಮ । ಬಿಡದಿಗೆ ಕಳುಹಿಸಿ । ಬಿಡಿಸಿ ತಹೆನು ಹಯವ ॥೧೫೪॥

ದುರುಳನವನು ನ । ಮ್ಮಿರವರಿಯದೆ ಸಂ । ಗರ ತೊಡಗಿದನಹನು ॥
ಶರಜಜಭವ ನಿ । ರ್ಜರಪಾಲಾದ್ಯರ । ಮರೆಹೊಕ್ಕರುಬಿಡೆನು ॥೧೫೫॥

ಎನುತನಿಲಾತ್ಮಜ । ಕನಲುತ ಕಾಳಗ । ಕನುವಾಗುತಲಂದೂ ॥
ದಿನಪಾತ್ಮಜಸುತ । ವಿನಯದಿ ಮಾರುತ । ತನಯನೊಳಿಂತೆಂದ ॥೧೫೬॥

**ರಾಗ ಕೇತಾರಗೌಳ ಅಷ್ಟತಾಳ**

ಜನಪಕೇಳ್ವೊಸತು ಮೇದಿನಿಗಿದು ಬಾಲರು ॥
ಮನವಿಟ್ಟ ಫಲಕಾಶಯ ॥
ಎಣಿಪರೆ ಪಿತರು ಮ । ತ್ತೆನಗೆ ಮೀಸಲ ಮಾಡಿ ।
ದನುವರಕ್ಕೈದುವದೂ ॥೧೫೭॥

ಯೆನಲೆಂದ ತರಳಕೇ । ಳಣುಗಗೆ ಫಲವನು ।
ಜನಕತಾ ಸವಿಸದೆಡೇ ॥
ತನಯ ತಾನೇ ಭುಂಜಿ । ಪನೆ ಧುರದಂದವ ।
ನಿನಗೆ ತೋರಲು ಬಂದೆನು ॥೧೫೮॥

ಕಿರುನಗೆ ಸೂಸಿ ಸಂ । ಗರಕೆ ಕಾರ್ಮುಕವನು ।
ಧರಿಸಿ ವೃಷಧ್ವಜನೂ ॥
ಮರುತಜಗೆರಗಿ ಮುಂ । ದ್ವರಿಸಿ ತಾಗಿದ ನಿಶಿ ।
ಚರನ ಬಲವನಾತನು ॥೧೫೯॥

**ವಾರ್ಧಕ**

ತರಣಿಮೊಮ್ಮನು ಬಳಿಕರಿಪು ನಿವಹಮಂ ಪೊಕ್ಕು ।
ಹರಿಸಿ ಮಾರ್ಗಣ ಗಣವಖಿಳ ಬಲವ ಸವರುತಿರ ।
ಉರಿಯುಗುಳುತನುಸಾಲ್ವ ದೂರದಿಂ ಪರಿಕಿಸುತಲೀತ ಝುಷಕೇತನಲ್ಲ ॥
ಮೆರೆವ ವೃಷಭಾಂಕಿತ ಧ್ವಜದೊಳಿಹನಾರಿವನ ।
ನರಿಯದಿಹೆ ಗೋಪಾಲನಲ್ಲೆನುತ ಶರಗಳಂ ।
ಸುರಿಸಿದಂ ಕರ್ಣಸಂಭವನ ಮೇಲತಿ ವಹಿಲದಿಂದ ಮತ್ತಿಂತೆಂದನೂ ॥೧೬೦॥

**ರಾಗ ಭೈರವಿ ಅಷ್ಟತಾಳ**

ಭಳಿರೆ ಬಾಲಕನೆ ಕೇಳು । ನೀನಾರೆಂದು ।
ತಿಳಿಯೆನೆನ್ನೊಡನೆ ಪೇಳು ॥
ಬಲುಬಾಹುಬಲರವೋ । ಲೆಳಸಿದೆ ಕದನವಿ ।
ದೊಳಿತಲ್ಲವೈ ನಿನಗೆ ॥೧೬೦॥

ಧರೆಯವ್ಯಾಪಿಪ ತಮವ । ಹರಿಪ ದಿನ ।
ಕರಸುತನಾತ್ಮಭವ ॥
ಅರಿಭಟರಸುವೆಂಬ । ಗರಳವನೀಂಟುವ ।
ವರವೃಷಧ್ವಜನಹೆನೂ ॥೧೬೧॥

ತರಳ ಕೇಳಾದಡಿನ್ನು । ಸಾಲ್ವನ ಸಹೋ ।
ದರನನುಸಾಲ್ವ ತಾನು ॥
ಭರದಿ ನೀ ಕೆಲಸಾರು । ಧುರದೊಳಣ್ಣನ ಕೊಂದ ।
ದುರುಳ ಗೋವಳನ ತೋರು ॥೧೬೩॥

ಹರಿವೈರಿಯನುಜ ಕೇಳು । ಗಣ್ಯವೆ ನರ ।
ಹರಿಗೆ ನೀ ಮರುಳೆ ಪೇಳು ॥
ಹರಿಗಿಭವೀಡೆ ಶ್ರೀ । ಹರಿ ಹಗೆ ಬೇಡೆಮ್ಮ ।
ಹರಿಯ ನೀಡುವುದು ಲೇಸು ॥೧೬೪॥

ಪೂತುರೆ ತರಳ ನೀನು । ಬಾಯೊಳು ಬಲ್ಲಿ ।
ದಾತನಾಗಿಹೆ ಸಾಕಿನ್ನು ॥
ನೂತನವಹ ಶರ । ವ್ರಾತದ ಮುಖದಿ ನಿ ।
ಮ್ಮಾತುರವನು ಬಿಡುವೆ ॥೧೬೫॥

**ಭಾಮಿನಿ**

ದುರುಳನಿಂತೆನುತಧಿಕ ರೋಷದಿ ।
ಭರದಿ ದಿವ್ಯಾಸ್ತ್ರದಲಿ ಕರ್ಣಜ ।
ನುರವನಿರಿಯಲು ತಾಪದಿಂ ಮೈಮರೆಯುತಾಕ್ಷಣದೀ ॥
ವರ ಗದಾದಂಡವನು ತಿರುಹುತ ।
ಉರಿಮಸಗಿ ನಯನಂಗಳಲಿ ಸಂ ।
ಗರ ಭಯಂಕರ ಭೀಮ ನಿದಿರಾಗುತ್ತಲಿಂತೆಂದ ॥೧೬೬॥

**ರಾಗ ಭೈರವಿ ಏಕತಾಳ**

ಖಳಕುಲದಧಮನೆ ಕೇಳು । ತವ ।
ತಲೆಯ ತರಿದು ಸಮರದೊಳು ॥

ಸುಲಭದಿ ತೋರುವೆ ನಿನಗೇ । ಯಮ ।
ನಿಳಯವ ನೋಡೀ ಗಳಿಗೇ ॥೨೬೭॥

ನರಗುರಿ ಕೇಳ್ಪಂಚಶರ । ದಿನ ।
ಕರನಂದನಾತ್ಮಜರ ॥
ತೆರನೀಕ್ಷಿಸುತೆನ್ನೊಡನೇ । ನೀ ।
ಧುರಗೊಡುವುದು ದುರ್ಬಲನೇ ॥೨೬೮॥

ಹುಲುದಾನವ ಕೇಳಿನ್ನು । ಕಡು ।
ಗಲಿ ಕರ್ಣಜ ಮಾರರನೂ ॥
ಗೆಲಿದಿಹ ಗರ್ವದ ಗಿರಿಯ । ಪುಡಿ ।
ಗಳೆವೆನು ತೋರಾ ಪರಿಯ ॥೨೬೯॥

ಎಲೆಮರುತಾತ್ಮಜ ನೀನು । ಬಾ ।
ಯೊಳು ಶೌರ್ಯವ ನುಡಿದೇನು ॥
ಫಲವಿಹುದೇ ತವ ಬಲುಹ । ದೋ ।
ರಳವಿಯೊಳೀಕ್ಷಿಪೆ ಕಡುಹ ॥೨೭೦॥

ಬೆಡಗಿನ ಮಾತಂತಿರಲಿ । ನೀ ।
ಬಿಡುತುರಗವ ಲೇಸಿನಲಿ ।
ನುಡಿವೆನು ಸಾಮದೊಳೊಡನೆ । ಫಲ ।
ವಿಡಿದಳಿಯದಿರೆನ್ನೊಡನೆ ॥೨೭೧॥

ಸೊಕ್ಕಿನ ನುಡಿಯಾಡದಿರು । ರಣ ।
ದಕ್ಕರವಿರ್ದಡೆ ಹೋರು ॥
ಠಕ್ಕಿಗೆ ತುರಗವ ಬಿಡೆನೊ । ಎನು
ತುಕ್ಕುವರೋಷದಿ ಖಳನು ॥೨೭೨॥

**ಭಾಮಿನಿ**

ಮರುತಜನ ಸರ್ವಾಂಗವನು ಶರ ।
ವರುಷದಲಿ ತೋಯಿಸೆ ವೃಕೋದರ ।
ನೊರಗೆ ಕುಂಜರ ಪಡೆಯೊಳೆಸೆವ ಮೃಗೇಂದ್ರನಂದದಲಿ ॥
ದುರುಳನಿರೆ ಕಂಡಸುರಹರ ಬಿ ।
ಲ್ದಿರುವನೊದರಿಸಿ ಸಮರಕೈತರೆ ।
ಭರದೊಳನುಸಾಲ್ವೇಶ ತಡೆದಿಂತೆಂದ ಗರ್ಜಿಸುತ ॥೨೭೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನಿಲ್ಲೆಲವೊ ಗೋವಳನೆ ಪೋಗುವೆ | ಯೆಲ್ಲಿ ಸಿಕ್ಕಿದೆ ನಿನ್ನೊಡಲ ಬಗೆ |
ದಿಲ್ಲಿ ಶಾಕಿನಿ ಬಳಗಕುಣಿಸುವೆ | ಬಲ್ಲೆಯೇನ್ನೈ ||೧೭೪||

ಬಲ್ಲೆನೈ ನಿನ್ನಣ್ಣ ಪೂರ್ವದಿ | ಬಲ್ಲಿದನು ತಾನೆಂದು ಕೊಳುಗುಳ |
ದಲ್ಲಿ ಮಡಿದಿಹನೆನ್ನೊಳದ ತಿಳಿ | ದಿಲ್ಲಿ ಸೆಣಸೂ ||೧೭೫||

ಅಗ್ರಜನ ತರಿದಧಮ ನಿನ್ನನು | ನಿಗ್ರಹಿಸದಿರೆನೆಲವೊ ಕೇಳಿ |
ನ್ನುಗ್ರನೊಲುಮೆಯೊಳಿಂದು ಸಮರದಿ || ಶೀಘ್ರದಿಂದ ||೧೭೬||

ದುರುಳ ಕೇಳ್ನಿನ್ನಂತ ಹಲಬರು | ಗರುವದಿಂ ಬಂದೆನ್ನೊಳಳಿದಿಹ |
ಪರಿಯನರಿಯೆಯ ಬರಿಯ ಪೌರುಷ | ಮರೆಸಲಹುದೇ ||೧೭೭||

ದಿತಿಜನನಿಬರ ತರಿದಿರುವ ಹಂ | ಕೃತಿಯದೆನ್ನೊಳು ಸಲ್ಲದೈ ನಿಲು |
ಹತಿಯ ಸಹಿಸುವುದೆನುತ ಬಿಡೆ ಶರ | ತತಿಯನಂದು ||೧೭೮||

**ಭಾಮಿನಿ**

ದನುಜನಿಂತತ್ಯಧಿಕ ರೋಷದಿ |
ಧನುವಿನಿಂದುಗುಳಿಸಿದ ಕೂರ್ಗಣೆ |
ಗಣವು ಮತ್ತಾವರ ಮುಕುಂದನ ಹಯವಸಹ ಮುಸುಕೇ ||
ಘನಶರಾಸ್ತ್ರದ ಹತಿಗೆ ಹಾಯ್ದುವು |
ರಣವನುಳಿದೊಂದೆಸೆಗೆ ಸೂತನ |
ಗಣಿಸದಚ್ಯುತನಿರವ ಕಾಣದೆ ಮರುಗಿ ಖಳನುಡಿದ ||೧೭೯||

**ರಾಗ ಕಾಂಭೋಜಿ ಝಂಪೆತಾಳ**

ಏನಿದಚ್ಚರಿ ಕಲಹ | ಕಾನುವಡೆ ಬಂದರಿಪು |
ತಾನೆತ್ತ ಸರಿದನಕಟಕಟಾ |
ಈ ನಿಧಾನವನೊಂದ | ನಾನರಿಯೆ ಬರಿದಾದು |
ದೇನೆಂಬೆ ಸಾಧಿಸಿದಡಿನಿತು ||೧೮೦||

ತನ್ನವನಿಯ ವಿಚಾರ | ದಿಂ ನಡೆವುದೋ ಅದರಿ |
ನಿಂ ನಡೆದಪರೊ ನೀತಿ ತೊರೆದು ||
ಕನ್ನೆಯರು ಪರಪುರುಷ | ರನ್ನು ಕೂಡುವರೋ ಯೆನ |
ಗಿನ್ನಾವ ಕಲುಷವೆಂದರಿಯೇ ||೧೮೧||

ಹರನ ಸೇರಿದರು ನಾ | ತರಿವೆ ಹಗೆಯನೆನುತ್ತ |
ಗರುವತನವಾಡಿದುದಕೆನಗೇ ||

ಹರಿ ಭೂಪಮುನಿದನೋ । ಹರಿಯೆನಗೆ ಕಾಣದಿಹ ।
ತೆರನಾವುದೆನುತ್ತ ಚಿಂತಿಸಿದ ॥೧೮೧॥

**ಭಾಮಿನಿ**

ಕ್ಷಿತಿಪ ಕೇಳಾಸಮಯದಲಿ ಮುರ ।
ಮಥನ ಹಯಗಳನುಪಚರಿಸಿ ಕಡು ।
ಖತಿಯನಾಂತತಿ ಭರದೊಳೈತಂದಸುರಗಿದಿರಾಗಿ ॥
ಪ್ರತಿರಹಿತ ಮುಸುಕಿದ ಮಹಾಶರ ।
ತತಿಯೊಳದ ತರಿದಿಕ್ಕಿದಾನವ ।
ನತಿಶಯದ ರೋಷದಲಿ ಕಂಸಾರಿಯನು ಜರೆದೆಂದ ॥೧೮೩॥

**ರಾಗ ಭೈರವಿ ಅಷ್ಟತಾಳ**

ಭಳಿರೆ ಗೋವಳ ನಿನಗೇ । ಮೆಚ್ಚಿದೆನೆನ್ನೊ । ಳಳವಿಗೈತಂದು ಹೀಗೆ ॥
ಬಲು ಹೇಡಿಗಳ ಪರಿ । ಯಲಿವೋಡಿ ಫಲವೇನು । ಕಲಹದಿ ಬಲುಹ ತೋರು ॥೧೮೪॥

ಅಸುರಾರಿಯಾದಡಾನು । ಅಂಜುವೆನೆ ನಿ । ನ್ನಸಮಸಾಹಸಕೆ ಯಿನ್ನು ॥
ಪೊಸ ಮಸೆವಿಶಿಖವ । ನೆಸೆವೆನು ಸೈರಿಸೆಂ । ದುಸುರತೆಚ್ಚನು ಶರವ ॥೧೮೫॥

ಹಿಂದಣ ಶೌರ್ಯವನೂ । ನೀನಾಡಿದ । ರಿಂದೆಮ್ಮೊಳಾಹುದೇನು ॥
ಕುಂದದೆ ಸಮರದೊ । ಳಿಂದು ತೋರಾ ಸತ್ವ । ದಂದವ ಕಂಡಪೆನೊ ॥೧೮೬॥

ಸಾಕು ಸಾಕೆಲೊ ಖಳನೇ । ಗರ್ವದನುಡಿ । ಯಾಕೆ ಪೇಳುವೆ ಸುಮ್ಮನೇ ॥
ಭೂಕಾಂತನಶ್ವವ । ನೀ ಕೊಡು ಕೊಡದಿರೆ । ತೋಕುವೆ ತನಿರಕ್ತವ ॥೧೮೭॥

ಧುರದಿ ನಿನ್ನಯ ತಲೆಯಾ । ಚೆಂಡಾಡದೆ । ತುರಗ ಬಿಡೆನು ನಿಶ್ಚಯಾ ॥
ಸರಿಭಟನಾದರೆ । ಸುರಿಸು ಬಾಣಾವಳಿ । ಬರಿದೆನಿಸುವೆನೀಕ್ಷಣ ॥೧೮೮॥

**ವಾರ್ಧಕ**

ಅಸುರನಿಂತೆನುತ ಪೊಸಮಸೆಯ ಶರದಿಂದ ಲಾ ।
ಬಿಸರುಹೇಕ್ಷಣನ ರಂಜಿಸುವ ವಕ್ಷವನು ಕೀ ।
ಲಿಸಲು ಹರಿಮೈಮರೆಯೆ ಸೂತನದನೀಕ್ಷಿಸುತ ತಿರುಗಿಸುತ ನಿಜರಥವನೂ ॥
ವ್ಯಸನದಿಂ ನಗರಕೈದಿಸಲು ಕಾಣುತ್ತಲಾ ।
ಶಶಿಮುಖಿಯರಧಿಕ ಶೋಕಿಸುತ ಬಳಸಿದರು ಮಿಗೆ ।
ಕುಸುಮಶರನಯ್ಯನಂ ಬಳಿಕದೋಳಿಂತೆಂದಳಾ ಸತ್ಯಭಾಮೆ ನಗುತ ॥೧೮೯॥

**ರಾಗ ಮಧ್ಯಮಾವತಿ ಏಕತಾಳ**

ಪ್ರಾಣನಾಯಕ ನೀನು । ದಾನವಗಿದಿರಾಗಿ ।

ಪ್ರಾಣದಾನವ ಪಡೆದೇನು ಮರಳಿದೇ ॥
ಯೀ ನಿಧಾನವ ತಿಳಿದ ಹಿತರೇಗಯ್ಯರು ।
ಕ್ಷೋಣಿಯೊಳತಿ ಬಲನಹುದು ಮೆಚ್ಚಿದೆನು ॥೨೯೦॥

ರಣಪರಾಕ್ರಮಿಯೆಂಬ । ಘನಶೌರ್ಯದೊಳು ಪ್ರದ್ಯು
ಮ್ನನ ಭಂಗಿಸಿದೆ ಮಾನ । ವನುಗಳೆದಿಲ್ಲಿ ॥
ಚಿನುಮಯಾತ್ಮಕನೆಂದಾ । ವನು ಬಣ್ಣಿಸುವನು ಮೇ ।
ದಿನಿಯೊಳೆಣೆಯಗಾಣೆ । ನೆನಗರುಹದನೂ ॥೨೯೧॥

**ವಾರ್ಧಕ**

ವನಿತೆ ಭಾಮಾದೇವಿಯಿಂತು ನಸುನಗುತ ತ ॥
ನ್ನಿನಿಯನಂ ಜರೆದು ನುಡಿಯುತ್ತಿರಲು ಕಣ್ದೆರೆದು ।
ಮನದಿ ಲಜ್ಜಿಸಿ ವಲ್ಲಭೆಯ ನುಡಿಗೆ ಮನ್ಮಥನಪಿತ ಬಳಿಕ ತಕ್ಷಣದೊಳು ॥
ಕನಲಿ ಕಣ್ಣಾಲಿಗಳ್ಕೆಂಪಡರಲಿರದೆದ್ದು ।
ಸನಿಹದೆಡಬಲಗಳಂ ಪರಿಕಿಸುತ ಮತ್ತೆ ರಣ ।
ಕನುವಾಗಿ ತನ್ನ ನಿಜಕಾಂತೆಯೊಳಗಿಂತೆಂದ ಸತ್ವಾತಿಶಯವನಂದೂ ॥೨೯೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಡದಿ ಕೇಳ್ನೀನಧಿಕ ಗರ್ವದಿ । ನುಡಿವೆ ಬೆಡಗಿನ ಮಾತುಗಳನೆ ।
ನ್ನೊಡನೆ ಸಲ್ಲದು ಸಾಕುಸುಮ್ಮನೆ । ನಡೆಯ ಕೆಲಕೇ ॥೨೯೩॥

ವರಚತುರ್ದಶ ಜಗವನಣುವೆಂ । ದರಿಯೆನುರುಹುವೆ ಕ್ಷಣದೊಳೀ ಹುಲು ।
ದುರುಳ ನನಗೇಂ ಸರಿಯೆ ಕಲಹದಿ । ತರಿವೆನವನ ॥೨೯೪॥

ಮರುಳು ಸಾರಥಿ ತಿರುಹುರಥವನು । ಭರದಿದಾನವನೆಡೆಗೆನುತ ಮುರ ।
ಹರನರುಹಿ ಸಂಗರಕೆ ಪೊರಟನು । ತ್ವರಿತದಿಂದ ॥೨೯೫॥

**ಭಾಮಿನಿ**

ಪೃಥ್ವಿಪತಿ ನೀ ಲಾಲಿಸನಿತರೊ ।
ಳಿತ್ತ ಮೂರ್ಛೆಯೊಳಿರ್ದ ಕರ್ಣನ ।
ಪುತ್ರನೆಚ್ಚರಿತೆದ್ದು ತನ್ನಯ ಸೋಲವನು ನೆನೆದೂ ॥
ಚಿತ್ತದಲಿ ಕೋಪಾಗ್ನಿ ಭುಗುಭುಗಿ ।
ಸುತ್ತ ಬರೆ ಕಿಡಿಯಿಡುತಲಿದಿರಿಹ ।
ದೈತ್ಯಗೆಂದನು ಬಡಿದ ಪೆರ್ಬುಲಿಯಂತೆ ಗರ್ಜಿಸುತ ॥೨೯೬॥

**ರಾಗ ಭೈರವಿ ಏಕತಾಳ**

ನಿಲ್ಲೆಲೊ ದನುಜಾಧಮನೇ | ಬಲು | ಬಲ್ಲಿದ ಧುರಕೆನ್ನೊಡನೇ ||
ಕೊಲ್ಲದೆಬಿಡೆ ನಿನ್ನುವನೂ | ಕ್ಷಣ | ದಲ್ಲಿ ಹಯವನೊಯ್ದಪೆನೂ ||೧೯೭||

ಹೋ ಹೋ ಮೆಚ್ಚಿದೆ ನಿನಗೇ | ನೀ | ನೀ ಹುಡಿಗೊರಗಿದುದ್ಯಾಕೆ ||
ಸಾಹಸಿಯೆನುತಲಿ ಬಂದೂ | ಮ | ತ್ತಾಹರಿ ಮರಳಿದನಿಂದೂ ||೧೯೮||

ಹರಿಯನು ಗೆಲಿದಿಹ  ವೀರ | ನಿ | ನ್ನುರವ ಬಗಿವೆ ಹರಿ ಚೋರ ||
ಧರೆಗೆ ಕೆಡಹದಿರೆ ನಿನ್ನ | ದಿನ | ಕರನಾತ್ಮಜ ಸುತನೇ ನಾ ||೧೯೯||

**ರಾಗ ಶಂಕರಾಭರಣ ಮಟ್ಟೆತಾಳ**

ಯೆಲವೊ ತರಳ ಕೇಳು ಹರಿಯ | ಬಲುಹ ಬಲ್ಲೆನೂ |
ಲಲನೆಯೋರ್ವಳನ್ನು ತರಿದು | ತುಳಿದು ಫಣಿಯನೂ ||
ಗೆಲುತ ಯೆತ್ತು ಕತ್ತೆಗಳ ಗೋ | ವಳನದೆನ್ನೊಳೂ |
ನಿಲಲು ನಡೆವುದೇನೊ ಪೇಳಿ | ನ್ನಳವಿನಿನ್ನೊಳೂ ||೨೦೦||

ಖಳಕುಲಾಗ್ರಗಣ್ಯ ಕೇಳು | ಮುಳಿದು ದುಷ್ಟರ |
ಕೊಳುಗುಳದಲಿ ತರಿದು ಮತ್ತೆ | ಸಲಹಿ ಶಿಷ್ಟರ ||
ಒಲಿದು ಸತತ ಕಾಯ್ದ ನಿನಗಿ | ನ್ನಳುಕಿ ಪೋಪನೇ |
ತಿಳಿಯೆಯಾ ಗೋಪಾಲನನಚ್ಯುತನು ನಿಜವನೇ ||೨೦೧||

ಎನುತ ಕನಲಿ ಸುರಿಸೆ ಕರ್ಣ | ತನಯನಂಬನೂ |
ಗಣಿಸದದನು ಮಧ್ಯಪಥದಿ | ತಣಿಸಿದನುಜನೂ ||
ಕಿನಿಸಿನಿಂದ ತೆಗೆದು ಕೂರ್ಗಣೆಗಳೆಚ್ಚನೂ |
ಕ್ಷಣದಿ ಹರಿಸುತದನು ಬಳಿಕ | ದಿನಪ ಮೊಮ್ಮನೂ ||೨೦೨||

**ವಾರ್ಧಕ**

ತರಣಿನಂದನ ಕರ್ಣ ಕುವರ ವೃಷಕೇತ ಶರ |
ವರುಷಮಂಗರೆಯೆ ರಿಪುವ್ರಾತಮಂ ಯೂಥಮಂ |
ತರಿದು ಮತ್ತನುಸಾಲ್ವ ದುರಳನಂ ಧರೆಗೆ ಕೆಡಹಲ್ಕೆ ಕಂಡಾಕ್ಷಣದೊಳುಂ|
ಸೆರೆವಿಡಿದು ಬಂಧಿಸುತ ಮಣಿರಥದೊಳೇರಿಸುತ |
ಹರಿತಂದು ಹರಿಪದಕೆ ಕೆಡಹಲತಿತೋಷದಿಂ |
ಹರಿ ತಾನೆ ತಕ್ಕೈಸಿ ಕೊಂಡಾಡಿ ಮುಂಡಾಡಿ ಮನ್ನಿಸಿದ ಕರ್ಣಜನನು ||೨೦೩||

**ಕಂದ**

ಧರಣಿಪ ಕೇಳಾ ಸಮಯದಿ |
ದುರುಳಗೆ ಧುರಶ್ರಮವಡಗಲ್ಕಣ್ದೆರೆದಾಗಂ ||

ಪರಿಕಿಸಿ ಚಿನ್ಮಯ ಮನಮೋ ।
ಹನ ಮೂರ್ತಿಯನವನಡಿಗೆರಗುತಲಿಂತೆಂದಂ ॥೩೦೪॥

**ರಾಗ ಕಲ್ಯಾಣಿ ಅಷ್ಟತಾಳ**

ಪಾಲಿಸು ದಯದಿ ದೇವ । ಭಕ್ತರ ಕಾವ ।
ಶೀಲ ನಿನ್ನದು ಕೇಶವ ॥
ಪಾಲಿಸೊಲಿದು ವಿ । ಶಾಲ ತ್ರಿಜಗ ।
ತ್ಪಾಲ ಶ್ರೀ ಗೋ । ಪಾಲ ಯೆನ್ನನು ॥ ಪಲ್ಲವಿ ॥

ಕರುಣ ಸಾಗರನೆ ಮುನ್ನ । ನೀನಾರನೆಂ ।
ದರಿಯದೆ ಧುರದಿ ನಿನ್ನ ॥
ಜರೆದೆ ಗರ್ವದೊಳಿರದೆ ನಿನಗದು । ಕೊರತೆಯಲ್ಲವಪಾರ ಮಹಿಮಗೆ ।
ತರ ತರದ ಮಮ ದುರ್ನುಡಿಯ ನೀ । ಪರಮ ನುಡಿಯೆಂದೆಣಿಸಿ ರಕ್ಷಿಸು ॥೩೦೫॥

ಕರದಿ ಖಂಡೆಯವನಿತ್ತು । ಮೇಣ್ ಫಲವಿತ್ತ ।
ತೆರದಿ ನಿನ್ನಡಿಗೀಹೊತ್ತು ॥
ಶಿರವ ಚಾಚಿಹೆ ಕೊಲುವ ಕಾಯುವ । ಮೆರೆವ ಭಾರವು ನಿನ್ನದೇ ಸಲೆ ।
ಮರೆದು ತನ್ನಪರಾಧ ಸರ್ವವ । ಪೊರೆಯೆನುತ ಪೊರಳುತಿರೆ ಪಾದದಿ ॥೩೦೬॥

**ಕಂದ**

ದಾನವನಿಂತುಸುರುತಲಿರೆ ।
ಬಾನುಕುಮಾರಜ ಲಾಲಿಸಿ ಚಿತ್ತದೊಳಾಗಂ ॥
ತಾನತಿ ರೋಷದೊಳಾ ಸಾ ।
ಲ್ವಾನುಜನನುಸಾಲ್ವನ ಜರೆದವನಿಂತೆಂದಂ ॥೩೦೭॥



**ರಾಗ ಕುರಂಜಿ ಅಷ್ಟತಾಳ**

ಮೂಢನಹುದಹುದೋ । ರಾಕ್ಷಸ ಬಲು । ಮೂಢನಹುದಹುದೋ ॥
ರೂಢಿಯೊಳಗೆ ಕಡು । ಹೇಡಿ ಖಳಾಧಮ ॥ ಪಲ್ಲವಿ ॥

ಹಲವು ನೀತಿಯನರುಹಿದರೆ । ಮದ ।
ದೊಳು ಕುಣಿದಾಡಿದೆ ಭಳಿರೆ ॥
ಉಳಿಯದೆಳ್ಳಿನಿತೆಡೆ ಹಲನಾಲ ವರ್ಷ ಸಂ ।
ಕುಲ ಸುರಿಯಲು ಶಿಲೆಗೇ । ನೀರ್ಗೊಂಬುದೇ ।

ನಿಳೆಯೊಳಾಪರಿ ನಿನಗೇ । ಪೇಳಿದುದಾಯ್ತು ।
ಛಲವೇಕೆ ಬಲಹೀನಗೇ ॥ ರಾಕ್ಷಸ ಬಲು । ಮೂಢನಹುದಹುದೋ ॥೨೦೮॥

ಸದಮಲಧರ್ಮದಿರವನೂ ॥ ತಿಳಿ ।
ಯದ ಲೋಭಿಯೋಲಚ್ಯುತನನೂ ॥
ಮದದಿಂದ ದೂಷಿಸಿ । ದಧಿಕ ಪೌರುಷವೇನಾ ।
ಯ್ತುದರ ತೋರಿಳೆಯೊಳಿನ್ನು । ಮೀಸೆಯ ಹೊತ್ತು ।
ಬದುಕಿರ್ದ ಫಲಗಳೇನು । ದುರ್ಮತಿವಹಿ ।
ಲದಿಸುಡುವಡಲ ನೀನು ॥ ರಾಕ್ಷಸ ಬಲು । ಮೂಢನಹುದಹುದೋ ॥೨೦೯॥

**ರಾಗ ಮಾರವಿ ಅಷ್ಟತಾಳ**
ಲಾಲಿಸು ರವಿಸುತ । ಬಾಲಸಂತಸದಿ ॥
ಪೇಳುವನ್ಯೆರೋಷ । ತಾಳದಿರ್ದಯದಿ ॥ ಪಲ್ಲವಿ ॥

ಬಿಡದೆ ಕಾದಾಡಿದು । ನ್ನುಡಿಯನಾಡಿದರು ಶ್ರೀ ।
ಕಡಲಶಯನನನು । ಧೃಡ ಮನದಿಂ ನುತಿ ।
ಗೊಡುತ ಭಕ್ತಿಯೊಳಿರ್ದರು । ಸಂತತ ಜಗ ।
ದೊಡೆಯನಾತನ ಪೆಸರು । ಉಚ್ಚರಿಸಿದ ।
ರೊಡನೆ ಜೀವಾತ್ಮಕರೂ । ಹಲಜನ್ಮದವರು ॥
ತಡೆಯದೆಸಗಿದ । ಕಡುದುರಿತವನ ।
ಸುಡದಿಹುದೆ ಬಿರು । ನುಡಿಯಿದೇತಕೆ ॥೨೧೦॥

ಕಾಳಗವಹುದು ಶೌ । ರ್ಯಾಳುಗಳೊಳು ಭಟ ।
ಜಾಲವನೆರಹಿ ಬಾ । ಣಾಳಿಯಿಂಬಿರಿಸಾಗಿ ।
ಸೋಲು ಗೆಲವದೆಂಬುದೂ । ದೈವಾಧೀನ ।
ಲೀಲಾ ವಿಚಿತ್ರವದೂ । ವಿಧಿಯಲಿಪಿ ।
ಭಾಳದೊಳಿರ್ಪುದದೂ । ಶೃತಿಸನ್ಮತವಿದು ॥
ಪೇಳಲೇನೀ । ರೇಳು ಜಗಶ್ರೀ ।
ಲೋಲಮಾಯೆಗೆ । ಕೋಲುವೋಗದೇ ॥೨೧೧॥

ಧುರದಿ ವೀರಾವೇಶ । ವೆರಸಿ ಕಾದಿದೆನಿಂದು ॥
ಜರೆದೆ ಶ್ರೀ ಹರಿಯನಾ । ದರು ಕೃಪಾನಿಧಿಯನ್ನು ।
ಪೊರೆಯದಿಹನೆಯೆನ್ನನೂ । ಸರ್ವೇಶಗೆ ॥
ಕೊರತೆಗಳಿದರಿಂದೇನು । ಸಾಕಿನ್ನದ ।
ನರುಹಿಕಾರ್ಯಗಳೇನು । ಯೆಂದೆನುತ ಖಳನು ॥
ಸಿರಿಯರಸನಡಿ । ಗೆರಗಿ ಪುನರಪಿ ।
ಭರಿತ ಭಕ್ತಿಯೊ । ಳಿರದೆನುತಿಸಿದ ॥೨೧೨॥

**ಭಾಮಿನಿ**

ಮಾರಪಿತಭವ ದೂರ ಕುಜನ ಕು ।
ಠಾರ ಭಕ್ತೋದ್ಧಾರ ಭುವನಾ ।
ಧಾರ ಕೌಸ್ತುಭಹಾರ ಪಾರಾವಾರ ಗಂಭೀರ ॥
ವಾರಿಜಾಕ್ಷ ಬಲಾರಿನುತ ಕಂ ।
ಸಾರಿ ನಾಟಕಧಾರಿ ತತ್ವವಿ ।
ಚಾರಿ ವಿಶ್ವಶರೀರಿನೀ ದಯೆದೋರಿ ಸಲಹೆಂದ ॥೩೧೩॥

**ಕಂದ**

ಈ ಪರಿ ನುತಿಸುವ ಖಳನಂ ।
ಶ್ರೀಪತಿ ಪಿಡಿದೆತ್ತುತಲತಿಕಾರುಣ್ಯದೊಳುಂ ॥
ತಾಪವಿದೇಕೆನುತಂ ಬಳಿ ।
ಕಾ ಪೂರ್ವಾಮರಗೆಂದಂ ಕಿರುನಗೆಯಿಂದಂ ॥೩೧೪॥

**ರಾಗ ಮಧುಮಾಧವಿ ಏಕತಾಳ**

ಕೇಳಯ್ಯದಾನವಾನ್ವಯ ಶಿರೋರನ್ನ ।
ತಾಳದಿರಯ್ಯ ಶೋಕವ ಬಿಡುಪೂರ್ಣ ।
ಭಾಳನೇತ್ರನ ಪಾದಯುಗದಾಣೆ ನಿನ್ನ ।
ಮೇಲೇನುಮನ ಮುನಿಸಿಲ್ಲ ಸಂಪನ್ನ ॥೩೧೫॥

ಹಿರಿದು ಮೆಚ್ಚಿದೆನಯ್ಯ ನಿನ್ನ ಸಾಹಸಕೆ ।
ಸರಿಭಟರಿಹರೆ ನಿನ್ನೊಳು ಕೊಳುಗುಳಕೇ ॥
ತರಳತನದಿ ಕರ್ಣಸುತಜರೆಂದುದನೂ ।
ತರದಿರು ಮನದಿ ಮುಂದಕೆ ಭಕ್ತಿ ನೀನು ॥೩೧೬॥

ಆದರೆ ಕೇಳಿಂದು ಮೊದಲಾಗಿನೀನು ॥
ಬಾಧಿಸದಮರರ ಯಮಜನೊಳಿನ್ನು ॥
ಭೇದವಿಲ್ಲದೆ ನಿನ್ನಿಂದಹ ಸಹಾಯವನು ।
ಸಾರದಿಂದೆಸಗೆಂದನಾ ಚಿನುಮಯನು ॥೩೧೭॥

**ಕಂದ**

ಧರಣಿಪಗನುಸಾಲ್ವರ್ಗಂ ।
ಹರಿತಾಸಖ್ಯವಗೊಳಿಸುತ್ತಿರಲಾಮದನಂ ॥
ದುರುಳರ ಹರಿಸುತ ಭರದಿಂ ।
ತುರಗವ ತಂದಯ್ಯಂಗೊಪ್ಪಿಸೆ ಮುದವಾಂತಂ ॥೩೧೮॥

**ವಾರ್ಧಕ**

ಧರಣೀಂದ್ರ ಲಾಲಿಸ್ಯೆ ಧರ್ಮಜಂ ಬಳಿಕ ಮುರ ।
ಹರ ಮುಖ್ಯರೊಡನೆ ಪುರಕೈತಂದು ಸಂತಸದೊ ।
ಳಿರಲು ಹರಿಯಾಜ್ಞೆಯಿಂ ಜಾಹ್ನವಿಯ ತಟದಿಸುಸ್ಥಳದೊಳಧ್ವರಶಾಲೆಯ ॥
ವಿರಚಿಸಲು ಬಳಿಕಾವಸಂತಋತು ತಲೆದೋರಿ ।
ತರುಗುಲ್ಮಲತೆಗಳವು ಚಿಗುರಿ ಸುಮ ಫಲವಣ್ಗ ।
ಳಿರಲು ಪದುಮಗಳಜೇಂಗುಡಿದು ಮಧುಕರಮೆಸೆಯೆ ಖಗಕುಲಂ ನಲಿದಾಡಲು ॥೨೧೯॥

**ರಾಗ ಕಾಂಭೋಜಿ ಝಂಪೆತಾಳ**

ಇಂದುಕುಲ ತಿಲಕ ಕೇ । ಳಿಂದೀವರಾಕ್ಷಯೋ ।
ಗೀಂದ್ರರಭಿಮತದಿ ಧರ್ಮಜನೂ ॥
ಬಂಧುಮಿತ್ರರ ಕೂಡು । ತಂದುಮಖ ಶಾಲೆಯೆಡೆ ।
ಬಂದು ದೀಕ್ಷೆಯನು ಕೈಗೊಂಡ ॥೨೧೦॥

ಸುಕ್ಷೇಮಪ್ರದಕಾಗಿ । ತ್ರ್ಯಕ್ಷಸುತನಿಂಗೆರಗಿ ।
ಲಕ್ಷಣದವಾಜಿಯನು ನಿಲಿಸಿ ॥
ದಕ್ಷತೆಯೊಳರ್ಚಿಸುತ । ಲಕ್ಷತೆಯನಿಟ್ಟು ಮ ।
ತ್ತಾಕ್ಷಣದಿ ಶೃಂಗಾರಗೈಸಿ ॥೨೧೧॥

ಬಿರುದಾವಳಿಯ ಲಿಖಿತ । ಭರದಿ ಬಂಧಿಸಿ ಪಣೆಗೆ ।
ನರನದರ ರಕ್ಷೆಗೆಂದೆನುತ ॥
ವರುಷದೊಳುಬಹುದೆನು । ತ್ತರುಹುತಸಿಪತ್ರವ್ರತ ।
ವಿರದೆ ತೊಡಗಿದನು ಧರಣಿಪನೂ ॥೨೧೨॥

ನರನು ಹಯರಕ್ಷೆಗೊಂ । ಡಿರದಿಭ ಮಖಾರ್ಚನೆಯ ।
ವರನವಗ್ರಹ ಪೂಜೆಗೈದು ॥
ಸಿರಿವರನಿಗೆರಗಿ ಧರ್ಮಜ ಭೀಮ ಕುಂತಿ ಖುಷಿ ।
ವರರೊಳಾಶೀರ್ವಾದ ಪಡೆದು ॥೨೧೩॥

**ವಾರ್ಧಕ**

ಚೈತ್ರ ಸಿತಪೌರ್ಣಮಾಸಿಯ ದಿನದಿ ಶುಭಸುಮೂ ।
ಹೂರ್ತದೊಳಗರಸಿಯರ ಸೇಸೆಯಂ ಕೈಗೊಂಡು
ಮತ್ತೆ ಪಾಠಕರ ಜಯಘೋಷ ದುಂದುಭಿ ಭೇರಿ ವಾದ್ಯಗಳ ರಭಸದಿಂದ ॥
ಸತ್ವಯುತನರನು ಹರಿಯಾಜ್ಞೆಯಿಂ ಸೇನಾಧಿ ।
ಪತ್ಯವಂ ಪ್ರದ್ಯುಮ್ನಗಿತ್ತು ವೃಷಕೇತು ಸಹ ।
ಸಾತ್ಯಕಿಯು ಕೃತವರ್ಮನನುಸಾಲ್ವರೊಡಗೂಡಿ ಬಲವೆರಸಿ ಪೊರಮಟ್ಟನೂ ॥೨೧೪॥

**ರಾಗ ಪಂತುವರಾಳಿ ಮಟ್ಟೆತಾಳ**

ಧರಣಿಪಾಲ ಕೇಳು ಮುದದೊಳು । ಪಾರ್ಥನಂದು ।
ಪೊರಟು ಸೇನೆಯ ಭರದೊಳು ॥
ಮೆರೆವತೆಂಕು ದೇಶದವನಿ । ಯರಸರಿಂದ ಕಪ್ಪಗೊಳುತ ।
ಬರಲು ಮಾಹಿಷ್ಮತಿಯ ಪುರದಿ । ತುರಗ ಪೊಕ್ಕುದುಪವನವನು ॥೨೧೫॥

ಪರಿಕಿಸುತ್ತ ಶ್ವೇತವಾಹನ । ಬೀಡಿಗೆಯನಲ್ಲೆ ।
ವಿರಚಿಸುತ್ತ ನಿಂದನಾಕ್ಷಣ ॥
ನರನ ಪಡೆಯದೂರ್ಮಿ ಪೆರ್ಚೆ । ಮೊರೆವ ಮಹಾರ್ಣವ ತೆರದಿ ॥
ಭರಿತ ಘೋಷದಿಂದಿರಲು । ಹರಿಯ ದಯದೊಳೇನನೆಂಬೆ ॥೨೧೬॥

**ರಾಗ ಕಾಂಭೋಜಿ ಝಂಪೆತಾಳ**

ಶಶಿಕುಲಲಾಮ  ಸಂ । ತಸದಿ ಕೇಳಾಪುರದೊ ।
ಳೆಸೆವಮಲಸಿರಿಯ ವರ್ಣಿಸಲೂ ॥
ದ್ವಿಸಹಸ್ರ ರಸನನಿಂ । ಗಸದಳವದಾದೊಡಿ ।
ನ್ನುಸುರುವೆನು ಸಂಕ್ಷೇಪವಾಗಿ ॥೨೧೭॥

ಪುರದಹರ್ಮ್ಯಾಗ್ರಗಳೊ । ಳಿರುವ ಚಪಲಾಕ್ಷಿಯರು ।
ಸರಸವಾಡುತಲಿ ನಸುನಗಲೂ ॥
ವರದಂತ ಕಾಂತಿ ಮತ್ತಿರದೆ ಪರ್ಬಿದುದೆಂಬ
ತೆರದಿ ರಂಜಿಪುದು ಪ್ರಾಕಾರ ॥೨೧೮॥

ನಗರವಧು ಧರೆಯವಿಟ । ರುಗಳ ಚಿತ್ತವಸೂರೆ ।
ದೆಗೆಯಲೆಂದೆನುತ ಶೃಂಗರಿಸಿ ॥
ಮಿಗೆಶರದಿ ಮುಡಿದ ಸಂ । ಪಿಗೆಯ ಮುಕುಳಂಗಳೆನೆ ।
ಸೊಗಯಿಪವುರನ್ನ ಕಲಶಗಳು ॥೨೧೯॥

ಧರೆಯಜನರೆನ್ನ ಸುಂ । ದರಕೆ ಸರಿಯಿಲ್ಲೆನುತ ।
ಪುರವನಿತೆ ಸುರಪುರದ ವಿಟರ ॥
ಕರೆದಪಳೊಯೆಂಬಂತೆ ಮೆರೆದಿಹುದು ಡೆಂಕಣಿಯ ।
ಕರಗಳಚ್ಚರಿಯ ಕರಮಾಗಿ ॥೨೨೦॥

ಕುಂದಾದುದಿಂಗಡಲಿ । ಗೊಂದು ಜಡಧಿಯೆನುತ್ತ ।
ಲಿಂದಿರೆಯು ಪಾಲ್ಗಡಲ ಬಿಟ್ಟು ॥
ಚಂದದಿಂದಾಪುರದಿ । ಬಂದು ನೆಲಸಿಹಳೊಯೆಂ
ಬಂದಂದಿಂ ಸಿರಿಯು ಪೆರ್ಚಿಹುದು ॥೨೨೧॥

**ಭಾಮಿನಿ**

ವಸುಧೆ ಪತಿ ಕೇಳಬ್ಜ ಭವನಿ ।
ರ್ಮಿಸಿದ ಸೃಷ್ಟಿಗೆ ಶಿರವಿದೆನಲೀ ।
ಕ್ಷಿಸುವ ರಕ್ಷಿಗೆ ನಿರುತವತ್ಯಾಶ್ಚರ್ಯತರಮಾಗಿ ॥
ಮಿಸುನಿಭಿತ್ತಿಗಳಿಂದ ಮಿಗೆ ಶೋ ।
ಭಿಸುವ ನಗರದ ಸಿರಿಯ ಕಾಣುತ ।
ಬಿಸಜಸಖನ ಕುಮಾರ ಸುತಗಿಂತೆಂದ ಫಲುಗುಣನು ॥೩೩೧॥

**ರಾಗ ಕೇದಾರಗೌಳ ಅಷ್ಟತಾಳ**

ಕಂದ ಕೇಳತಿ ಸೊಗ । ಸಿಂದ ಮೆರೆವ ಪುರ । ದಂದದಿವಿಗೆ ಮಿಗಿಲು ॥
ಇಂದಿದ ಪೊರೆವ ವ । ಸುಂಧರಾಧಿಪ ಶೌರ್ಯ । ದಿಂದ ಕೂಡಿಹನೆ ಪೇಳು ॥೩೩೩॥

ಕಟ್ಟದಿಹನೆ ನಮ್ಮ । ಶ್ರೇಷ್ಠ ಹಯವನತಿ । ದಿಟ್ಟತೆಯಿಂದ ತಾನು ॥
ಕೊಟ್ಟ ಕಾಳಗವೆಮ್ಮೊ । ಳೆಷ್ಟು ಕಾದುವನೊ ತ । ನ್ನೊಟ್ಟಿನ ಸೇನೆಗೂಡಿ ॥೩೩೪॥

ಎಂತಾದಡೇನೆಮ್ಮ । ಸಂತತ ಸಲಹುವ । ಕಂತುಜನಕನೆನುತ ॥
ಮುಂತೆಸೆಯುವ ಸೇನಾ । ತಿಂಥಿಣಿ ಸಹಿತಿರ್ದ । ಸಂತಸದಿಂ ಪಾರ್ಥನು ॥೩೩೫॥

**ವಾರ್ಧಕ**

ಚಿತ್ತವಿಪುದೆಲೆ ಮಹೀಪಾಲ ಮಾಹಿಷ್ಮತಿಯ ।
ಪತ್ತನವ ಮುದದೊಳಾಳುತ್ತ ನೀಲಧ್ವಜಂ ।
ಪತ್ನಿಯಾಗಿಹ ಜ್ವಾಲೆಸುತ ಪ್ರವೀರಂ ಸಹಿತ ಸಕಲ ಸೌಭಾಗ್ಯದಿಂದ ॥
ಪುತ್ರಿ ಸ್ವಾಹಾದೇವಿಯಂ ಬಳಿಕಲಾವೀತಿ ।
ಹೋತ್ರಗೊಲಿದಿತ್ತಾತನಂ ಮನೆಯಳಿಯನೆನಿಸಿ ।
ಮತ್ತೆ ತಾನಾತನ ಸಹಾಯದಿಂದಾರನುಂ ಬಗೆಗೊಳದೆ ಮೆರೆದಿರ್ದನೂ ॥೩೩೬॥

**ರಾಗ ಮಧುಮಾಧವಿ ತ್ರಿವುಡೆತಾಳ**

ಪೃಥ್ವಿಪಾಲಕ ನೀ ಪರಿಯೊಳಿರೆ । ಪುತ್ರನಾದ ಪ್ರವೀರನೂ ।
ಪತ್ನಿ ಸ್ಮರ ಮಂಜರಿಯೊಡನೆ ಸಖೀ ।
ಮೊತ್ತದಿಂದುದ್ಯಾನಕೇ ॥ ಬಂದನಾಗ ॥೩೩೭॥

ಬರುತ ದಿವ್ಯಾಂಬರಗಳನುತೆಗೆ । ದಿರಿಸಿಕೊಳನೊಳಗಿಳಿಯುತ ॥
ವಿರಚಿಸುತಜಲ ಕೇಳಿಯನು ನೃಪ ।
ತರಳನಿರ್ದನು ಗುಣಯುತ ॥ ಸರಸದಿಂದ ॥೩೩೮॥

ರಾಜಿಸುವಗೆಳತಿಯರು ಸಹ ಯುವ । ರಾಜನರಸಿಯು ಮುದದಲಿ ॥
ರಾಜಿಸುವ ಪೂದೋಟದಲಿ ಸುಮ ।
ರಾಜಿಯನು ಕೊಯ್ಯುತ್ತಲಿ ॥ ನೋಡಿಹಯವ ॥೩೩೯॥

**ಭಾಮಿನಿ**

ರಂಜಿಸುವ ತುರಗವನು ಮನ್ಮಥ ।
ಮಂಜರಿಯು ಕಾಣುತ್ತ ಮನದೊಳ ।
ಗಂಜದತಿ ಧೈರ್ಯದಲಿ ಸಖಿಯರ ಕೂಡುತಾಕ್ಷಣದಿ ॥
ತಾಂ ಜವದಿ ಪಿಡಿದದರ ಪಣೆಯೊಳ್ ।
ಮಂಜುಳಾಕ್ಷರವೆಸೆವ ಲಿಖಿತವ ।
ಕಂಜಲೋಚನೆ ತೆಗೆದು ತಾನೋದಿದಳು ಸಂಭ್ರಮದಿ ॥೩೪೦॥

**ರಾಗ ಕಾಂಭೋಜಿ ಝಂಪೆತಾಳ**

ಶ್ರೀಮತ್ಸುಧಾಂಶುಕುಲ । ಭೂಮೀಶರೆಂಬರ ಶಿ ।
ಖಾಮಣಿ ಯುಧಿಷ್ಠಿರ ನೃಪಾಲ ॥
ಪ್ರೇಮದಿಂದಶ್ವಮೇ । ಧ ಮಹಾಧ್ವರವಗೈವ ।
ಶ್ರೀ ಮನೋಹರನ ನಿಜಭಕ್ತ ॥೩೪೧॥

ಧರೆಯ ಭೂಪರ ಗೆಲಿದು । ಕರವಗೊಳಲಾಗಿ ಶ್ರೀ ।
ಹರಿಯನುಜ್ಞೆಯೊಳಗಶ್ವವನೂ ॥
ತ್ವರಿತದಿಂ ಬಿಟ್ಟಿಹುದು ಕಟ್ಟಿಕಾದುವುದು ಸಂ ।
ಗರವೀರರಾದಡಿದ ಭರದಿ ॥೩೪೨॥

ಹರಿಯರಕ್ಷೆಗೆಪಾರ್ಥ । ನಿರುವನವನೊಳು ಕಾದ ।
ಲರಿಯದವನಿಪರು ಶರಣಾಗಿ ॥
ತೆರುತ ಕಪ್ಪವನುತಾ । ವಿರುವದೊಟ್ಟಿನೊಳೆಂದು ।
ಬರೆದಿಹುದ ತಿಳಿದು ಚಪಲಾಕ್ಷಿ ॥೩೪೩॥

**ಕಂದ**

ನಸುನಗುತತಿಜವದಿಂ ಬಂ ।
ದುಸುರಲ್ಕೀಹದನವನರಿತಾಗ ಪ್ರವೀರಂ ॥
ಅಮಮ ಬಲಾನ್ವಿತ ತಾರ್ಘ್ಯೀಂ ।
ಕಿಸುತೆದ್ದಿಂತೆಂದಂ ಸತಿಯೋಳ್ಪೌರುಷಮಂ ॥೩೪೪॥

**ರಾಗ ಭೈರವಿ ಅಷ್ಟತಾಳ**

ಭಳಿರೆ ಧರ್ಮಾತ್ಮಜಾತ । ತನ್ನಲಿಹರಿ ।
ಯೊಲುಮೆ ಹೆಚ್ಚಿದುದೆನುತ ॥

ಬಲುಗರ್ವದಿಂ ತನ್ನ | ಗ್ಗಳಿಕೆಯ ಬರೆದಿಹ |
ತಿಳಿಯದೆ ಮೂಢಾತ್ಮನು ||೩೪೫||

ಮುನಿಸಿದರೆ ತ್ರಿಭುವನವ | ಲೆಕ್ಕಿಸದೊಂದು |
ಕ್ಷಣದಿಭಸ್ಮವನುಗೈವ ||
ಘನಪರಾಕ್ರಮಿ ವಹ್ನಿ | ಜನಕಗೆ ಜಾಮಾತ |
ನೆನಿಸಿರೆ ಬರೆವುದುಂಟೆ ||೩೪೬||

ಜನಿಸಿಕ್ಷತ್ರಿಯಕುಲದಿ | ಮೇಣೀವಾಜಿ ||
ಯನು ಕಟ್ಟದಿರೆಜಗದಿ ||
ತನುವಿರ್ದುಫಲವೇನು | ರಣಕಂಜಿ ಕಪ್ಪವ |
ನನಿತನು ಕೊಡುವುದುಂಟೆ ||೩೪೭||

ಹರಿಹರರೊಳು ಧುರದಿ | ಕಾದಿದ ಪಾರ್ಥ |
ನುರುವಿಕ್ರಮವ ಯುದ್ಧದಿ ||
ಪರಿಕಿಸಿದಪೆನೆಂದು | ಪುರಕಟ್ಟಿದನು ಸತಿ |
ಯರ ಸಹಿತಶ್ವವನೂ ||೩೪೮||

**ಭಾಮಿನಿ**

ಧುರಪರಾಕ್ರಮಿಯಹ ಪ್ರವೀರನು |
ತುರಗವನು ತಾನಟ್ಟುತಲಿ ಧನು |
ಶರಗಳನು ಕೈಗೊಂಡು ರಣಕುದ್ಯುಕ್ತನಾಗಿರಲು ||
ಅರಸ ಕೇಳೀಚೆಯೊಳು ಹರಿವಿ |
ಷ್ಟರದಿ ಕುಳಿತಿಹ ನೀಲಕೇತನ |
ಚರಣಕಾನತರಾಗಿ ಬಿನ್ನೈಸಿದರು ನಾರಿಯರೂ ||೩೪೯||

**ರಾಗ ಮಾರವಿ ಅಷ್ಟತಾಳ**

ಧರಣೀಶ ಕೇಳೆಮ್ಮ ನುಡಿಯಾ | ತವ | ತರಳನಿಂದಾತನರಸಿಯಾ ||
ಬೆರೆದುದ್ಯಾನದೊಳಲ್ಲಿ | ಶರಕೇಳಿಯನುಗೈದು |
ಸರಸದಿ ಸುಮವಗೊ | ದಿರಲು ಬಂತೊಂದಶ್ವ ||೩೫೦||

ಮದನಮಂಜರಿ ಪರಿಕಿಸುತ | ನಲ್ಲ | ಗದನೀಯೆ ಲಿಖಿತ ವಾಚಿಸುತ |
ಕದನ ಸಿದ್ಧತೆಯಿಂದ | ಕುದುರೆಯಟ್ಟಿದನಿಲ್ಲಿ |
ಹದನವಿದಿನಿತು ನೀ | ನೊದಗಿ ಪೋಗೈ ಜೀಯಾ ||೩೫೧||

**ಕಂದ**

ದೂತಿಯರೆಂದುದನಾಲಿಸಿ |

ಭೂತಳದಧಿಪಂ ಭರದಿಂ ತಾ ಗರ್ಜಿಸುತಂ ||
ಖಾತಿಯ ತಾಳುತ ಮಂತ್ರಿಯೊ |
ಳೀತೆರನೆಂದಂ ಗದ್ದುಗೆಯಂ ಹೊಯ್ಯುತ್ತಂ ||೩೫೧||

**ರಾಗ ಭೈರವಿ ಏಕತಾಳ**
ಮಂತ್ರೀಶನೆ ಕೇಳಿತ್ತ | ಭೂ | ಕಾಂತನೆನಿಪ ಯಮಪುತ್ರ ||
ಎಂತೀ ಪತ್ರವ ಬರೆದ | ತ | ನ್ನಂತರವರಿಯದೆ ಬಿರಿದ ||೩೫೩||

ಧರೆಯಧಿಪರ ಕುಲತಿಲಕ | ಶ್ರೀ | ವರನಾಥನ ನಿಜ ಭಕ್ತ ||
ಬಿರುದಾಂತಿಹೆ ತಾನೆಂಬ | ಅತಿ | ಗರುವದ ನುಡಿಕಾಂಬ ||೩೫೪||

ಪೃಥ್ವೀಶರು ಮತ್ತಿರರೇ | ಪುರು | ಷೋತ್ತಮನನು ಧ್ಯಾನಿಸರೇ ||
ಕ್ಷತ್ರಿಯ ಕುಲದೊಳು ಜನಿಸಿ | ಕರ | ತೆತ್ತು ಬಾಳುವುದೆ ಸಹಿಸಿ ||೩೫೫||

ದುರಿತ ಹರನು ತಾನೆನಿಸಿ | ಶ್ರೀ | ವರನಿರಲೀಪರಿ ಬರೆಸಿ ||
ತುರಗವ ಬಿಟ್ಟಿಹರಲ್ಲ | ಸಂ | ಗರವನು ಕೈಕೊಂಬರಲಾ ||೩೫೬||

ಪರಿಕಿಪೆ ನರನಾಳ್ತನವ | ಹರಿ | ಹರರೊಳು ತೋರ್ದು ವಿಕ್ರಮವ ||
ಧುರಕಣದೊಳು ಕೇಳಿನ್ನು | ನೀ | ತ್ವರಿತದಿ ಹೊಸುಭೇರಿಯನು ||೩೫೭||

**ವಾರ್ಧಕ**
ತರಿಸಿ ಮಖಹಯವನದ ಬಂಧಿಸುತ ಲಾಯದೋಳ್ |
ಭರದಿ ಸೇನಾವೃಂದಮಂ ಕೂಡಿ ಧನುಶರವ |
ಧರಿಸಿ ಮಣಿ ರಥವೇರಿ ನಡೆತಂದನತಿ ವಹಿಲದಿಂ ನೀಲಕೇತನಂದೂ ||
ಧರಣಿಪತಿ ಬರುತಿರಲ್ಕತ್ತಹಯ ಕಾಹಿನವ |
ರಿರದೆ ಬಂದರ್ಜುನಗೆ ಕರವ ಮುಗಿದಾಕ್ಷಣದಿ |
ಭರಿತ ಕಂಪನದಿಂದ ಪೇಳಿದರು ವಿಸ್ತಾರಮಾಗಿ ಪರಿಗಳನೆಲ್ಲವ ||೩೫೮||

**ರಾಗ ಮುಖಾರಿ ಏಕತಾಳ**
ಪುರುಹೂತ ತನಯಲಾಲಿಸಯ್ಯ | ನಾವೆಂಬ ಪರಿಯ |
ಧುರಕನುವಾಗು ಬೇಗ ಜೀಯ ||
ತುರಗದೊಡನೆನಾ | ವಿರಲಾಯೆಡೆ ಬಹು |
ತರುಣಿಯರೆರಕದಿ | ಬರೆನೃಪ ಕುವರಾ ||೩೫೯||

ತ್ವರಿತದಿ ಹಯವ ಪರಿಕಿಸಿದನೂ | ಬಂಧಿಸಿ ಲಿಖಿತ |
ವರಿತು ರೋಷವಗೊಂಡು ತಾನೂ |

ಭರದಿಂದದ ನಿಜ | ತರಳೆಯರನು ಸಹ |
ಪುರಕಟ್ಟುತ ಸಂ | ಗರಕನುವಾಗಿಹ ||೩೬೦||

**ಕಂದ**

ಈ ತೆರನೆಂದುದನಾ ಪುರು |
ಹೂತಸುತಂ ತಾನಾಲಿಸುತತಿ ತವಕದೊಳಂ |
ಖ್ಯಾತಮದನ ಸಾತ್ಯಕಿ ವೃಷ |
ಕೇತಸುವೇಗಾನುಸಾಲ್ವರಂಕರೆದೆಂದಂ | ||೩೬೧||

**ರಾಗ ಶಂಕರಾಭರಣ ಮಟ್ಟೆತಾಳ**

ವೀರಕರ್ಣಜಾನುಸಾಲ್ವ | ಮಾರ ಮುಖ್ಯರುಗಳು ಕೇಳಿ |
ಶೂರತನವದೋರ್ವ ಸಮಯ | ಸಾರಿಬಂದಿದೇ ||
ಧಾರಿಣೀಶನೀತನಮ್ಮ | ವಾರುಹವನು ಕಟ್ಟಿರಣಕೆ |
ಮೀರಿ ಬಂದನಂತೆ ಗರ್ವ | ವೇರಿನಮ್ಮೊಳು ||೩೬೨||

ಕೊಳುಗುಳದೊಳವನ ಸತ್ವ | ವಿಳಿಸಿ ಹರಿಯ ತಹುದೆನುತ್ತ |
ತಿಳುಹೆ ನರನ ನುಡಿಯನರಿದು | ಚಳಕದಿಂದಲಿ ||
ಹೊಳೆವ ಕಣೆಯಗೊಂಡು ಬಿಲ್ಲ | ನೆಳೆದು ವೈರಿನಿವಹ ಮಧ್ಯೆ |
ಸುಳಿಯೆ ಕಾಣುತಾ ಪ್ರವೀರ | ಮುಳಿಯಲೆಂದನೂ ||೩೬೩||

**ರಾಗ ಭೈರವಿ ಅಷ್ಟತಾಳ**

ಫಡಫಡರಿಪು ಭಟನೇ | ನಮ್ಮಶ್ವವ | ಬಿಡು ಕೆಡದಿರು ಸುಮ್ಮನೇ ||
ತಡವೇಕೆ ನಿನ್ನನು | ಪಡೆದವನಾರೆಂದು | ನುಡಿವುದೆಂದನು ಸ್ಮರನೂ ||೩೬೪||

ಮೂಢನೀ ಲಾಲಿಸಿತ್ತ | ಮಾಹೀಷ್ಮತಿ | ರೂಢಿಯಧಿಪನ್ಯೆತಾತ |
ಗಾಢ ವಿಕ್ರಮಿಯಹ | ನೋಡು ನೀಲಧ್ವಜ | ನಾಡಲೇಂಬಿಡೆ ಹಯವ ||೩೬೫||

ಯೆಲವೊ ನೃಪಾಲ ಸೂನು | ನೀನೆಮ್ಮಯ | ನೆಲೆಯರಿಯದೆ ಬಂದಿನ್ನು ||
ಕಲಹದಿ ನಿನ್ನಯ | ತಲೆಯಗೊಡುವೆ ಯಾಕೆ | ಛಲ ಬೇಡ ಸಾರಿದೆನೂ ||೩೬೬||

ಕದಳಿಯ ಮುರಿದೆನೆಂದೂ | ಗರ್ವದಿ ಕರಿ | ಯಧಟಹರಿಯೊಳು ತೋರ್ದು ||
ಬದುಕಿ ಪೋಪುದೆ ನಿನ್ನ | ಸದೆದು ಶಾಕಿನಿಗೀವೆ | ರುಧಿರವನೆನುತೆಚ್ಚನು ||೩೬೭||

**ಭಾಮಿನಿ**

ಕ್ಷೋಣಿಪತಿ ಕೇಳಾ ಪ್ರವೀರನ ।
ಬಾಣದಿರಿತದಿ ತನು ಬಳಲಿ ಸುಮ ।
ಬಾಣ ಮೈಮರೆಯಲ್ಕೆ ಸೂತವರೂಥವನುತಿರುಹೇ ॥
ಕಾಣುತುಗ್ರನೊಲಾ ವೃಷಧ್ವಜ ।
ತಾನಧಿಕ ರೋಷದಲಿ ನಡೆತಂ ।
ದಾನರಾಧಿಪನಣುಗನೊಡನಿಂತೆಂದ ಪೌರುಷದಿ ॥೩೬೮॥

**ರಾಗ ಮಾರವಿ ಏಕತಾಳ**

ಕದನಾಗ್ರಣಿ ನೀ । ನಿದಿರಾಗೆಲೊ ನಿಲು । ಮದನನ ಸೋಲಿಸಿದ ॥
ಅಧಿಕ ತರದ ಗ । ರ್ವದಿ ನಿಂದಿರೆ ಬಿಡೆ । ನಿದು ದಿಟ ನೋಡೆಂದ ॥೩೬೯॥

ಕರಕೌಶಲಗಳ । ನರಿಯದವರು ಸಂ । ಗರಕಿದಿರಾಗುವರೆ ॥
ದೊರೆನೀಲಧ್ವಜ । ತರಳ ಪ್ರವೀರನೊ । ಳೊರೆಯದಿರೈ ಬರಿದೆ ॥೩೭೦॥

ದಿನಕರ ನಂದನ । ನಣುಗ ವೃಷಧ್ವಜ । ನೆನಿಸುವೆ ರಿಪುವೆನಿಪ ॥
ಮನಸಿಜಗಾನೆ ವೃಷಧ್ವಜನಹೆನೈ । ಗಣಿಪೆನೆ ತವ ದರ್ಪ ॥೩೭೧॥

ರವಿ ಮೊಮ್ಮನೆ ನೀ । ನವನಿಯೊಳಿರೆ ವಿಹಿ । ತವೆ ಪಿರಿಯವರಿರುವಂ ॥
ಭವನ ಕೊಡನೆ ಪೋ । ಗುವ ಮನವಿರ್ಪುದೆ । ಬವರದಿ ತೊರೆದಸುವ ॥೩೭೨॥

ತುರಗವ ಬಿಡದಿರೆ । ತರಿದು ನಿನ್ನ ಹಿರಿ । ಯರ ಸಹಿ ತೀಕ್ಷ್ಣದಿ ॥
ತೆರಳಿಸುವೆನು ನೋ । ಡರೆ ನಿಮಿಷದೊಳೆನು । ತಿರದೆಚ್ಚನು ಶರವ ॥೩೭೩॥

**ರಾಗ ಘಂಟಾರವ ಅಷ್ಟತಾಳ**

ಭಳಿರೆ ಸಾಹಸಿ ಹುಲು ಕಣೆಗಳನೆಚ್ಚು ।
ಫಲವಿಹುದೆ ಯೆನು । ತಲಿ ಪ್ರವೀರನು । ಮುಳಿದು ತಾ ಮುರಿದಿಟ್ಟನು ॥೩೭೪॥

ಆತುಕೋ ನೀನಿನ್ನಾದಡೆನುತ ವೃಷ ।
ಕೇತು ಮುಸುಕಲು ತರಳ ತತಿಗಳ । ನಾತತೂಕ್ಷಣ ಖಂಡಿಸೇ ॥೩೭೫॥

**ಭಾಮಿನಿ**

ವೀರತನದಿ ಪ್ರವೀರ ಕರ್ಣ ಕು ।
ಮಾರರೀರ್ವರು ಖತಿವಿಡಿದು ಕೈ ।
ಮೀರಿ ನಿಶಿತ ಶರೌಘಗಳ ನವರೋರ್ವರೋರ್ವರ್ಗೆ ॥

ಸೇರಿಸುತಲಿರೆ ಬಳಿಕ ಕರ್ಣಕು ।
ಮಾರಕನ ಪಿಂದಿಕ್ಕಿ ಮುಂದಕೆ ।
ಸಾರುತಡಹಾಯ್ದೆಂದನನುಸಾಲ್ವಕ ಪ್ರವೀರನೊಳು ॥೩೭೪॥

**ರಾಗ ಪಂತುವರಾಳಿ ಮಟ್ಟೆತಾಳ**
ಭಳಿರೆ ವೈರಿ ಸುಭಟನಿಲ್ಲೆಲಾ । ಸಂಗರಕೆಯೆನ್ನೊ ।
ಳಳುಕಬೇಡ ಸದರವಲ್ಲೆಲಾ ॥ ಪಲ್ಲವಿ ॥

ಮೊದಲೆ ಮನುಜ ನೀ ನಿನ್ನದರೊಳು । ತರಳನಾಗಿ ।
ಕದನವೆಸಗಲಹುದೆ ಭರದೊಳು ॥
ಮದನ ಮುಖ್ಯರನ್ನು ಕೊಳಗು । ಳದಲಿ ಗೆಲಿದ ಗರ್ವವಿಳಿಸಿ ।
ಕುದುರೆಯನ್ನು ಬಿಡಿಸಿ ನರನ । ಪದಕೊಪ್ಪಿಸುವೆ ಕೇಳು ಕ್ಷಣದಿ ॥೩೭೭॥

ದುರುಳ ಗಳಹ ಬೇಡಸುಮ್ಮನೇ । ಕಾಳಗದಿ ನಿನ್ನ ।
ಕೊರಳನರಿದು ಮೆರೆಯದಿರುವೆನೇ ॥
ತುರಗವನ್ನು ಬಿಡುವನಲ್ಲ । ಬರಿದೆ ಸಾಯಬೇಡ ಜೋಕೆ ॥
ತೆರಳು ಪಂಚ ಬಾಣಗಾದ । ಪರಿಯನರಿತು ಶೀಘ್ರದಿಂದ ॥೩೭೮॥

ಬಾಲ ನೀನೆನುತ್ತ ಸಾರಿದೇ । ಮುಂದಿನ್ನು ಬಿಡೆನು ।
ತೋಳ ಸತ್ವದೋರದಾಹುದೇ ॥
ಕೀಲಿಸುವೆ ಶರೌಘವಿದನು । ತಾಳಿ ಕೊಂಬುದೆನುತಲಸ್ತ್ರ ।
ಜಾಲವನ್ನು ಸುರಿಸಲಾ ಭೂ । ಪಾಲನಣುಗ ಸಹಿಸದಾದ ॥೩೭೯॥

**ಭಾಮಿನಿ**
ಜನಪ ಕೇಳನುಸಾಲ್ವನಸ್ತ್ರದಿ ।
ತನು ಬಳಲಿ ಬಳಿಕಾ ಪ್ರವೀರನು ।
ಮಣಿರಥದಿ ಮೈಮರೆಯಲರಿ ವಾಹಿನಿಯ ತರಿತರಿದೂ ॥
ದನುಜ ಮುಂದೈತರಲು ಕಾಣುತ ।
ಲನಿತರೊಳು ನೃಪ ನೀಲಕೇತನು ।
ಘನತರದ ರೋಷದಲಿ ದೈತ್ಯಾಗ್ರಣಿಯ ತಡೆದೆಂದ ॥೩೮೦॥

**ರಾಗ ಕಾಂಭೋಜಿ ಝಂಪೆತಾಳ**
ಎಲವೊ ದಾನವನೆಮ್ಮ । ಬಲವನೆಲ್ಲವನೀನು ।
ಗೆಲಿದು ಬಾಲಕನ ಮೂರ್ಛಿಸಿದ ॥
ಬಲವನೆನ್ನೊಳು ತೋರು । ಕಲಹದೊಳು ನಾನಿನ್ನ ।
ತಲೆಯ ಚೆಂಡಾಡುವೆನು ಕ್ಷಣದಿ ॥೩೮೧॥

ಮಾನವನೆ ಕೇಳು ನೀ । ದಾನವರಿಗೆಂತಹ ಸ ।
ಮಾನರೇ ನರರು ಬಿಡುನಿನ್ನ ।
ತ್ರಾಣ ಸಲ್ಲದು ಹಯವ । ನೀನೇ ತಂದಿತ್ತೊಡನೆ ।
ಕಾಣಿಕೆಯೆನೆಸಗಿದರೆ ಲೇಸು ॥೩೮೧॥

ದುರುಳ ಕೇಳೆಲವೊ ಸಂ । ಗರಕಂಜಿ ಕಪ್ಪವನು ।
ತುರಗಸಹ ತೆರುವಡಾ ನರಗೆ ॥
ಪರಿಕಿಸಲು ನಿನ್ನಂತೆ । ಬರಿಯ ಹೇಡಿಗಳಲ್ಲ ।
ಧುರಧೀರರಾವು ನೋಡೆಂದ ॥೩೮೩॥

ಮರುಳು ಭೂಪಾಲ ನೀ । ಧುರಧೀರನಾದೊಡೀ ।
ಸರಳ ಸವಿಗೊಂಬುದೆನುತಂದೂ ॥
ಸುರಿಸೆ ಖಳನಸ್ತ್ರವನು । ತರಿದು ನಿಮಿಷಾರ್ಧದೊಳು ।
ಧರೆಗೆ ಕೆಡಹಿದನು ದಾನವನಾ ॥೩೮೪॥

**ವಾರ್ಧಕ**

ಇಳೆಯಧಿಪ ಲಾಲಿಸೈ ಬಳಿಕ ನೀಲಧ್ವಜಂ ।
ಫಲುಗುಣನ ಮುಂದೆ ಮದಕರಿಯಂತೆ ಪೊಕ್ಕು ಕೋ ।
ಲ್ಗಳನೆಚ್ಚುಸವರಿ ಬೆಟ್ಟದೊಲೊಟ್ಟುತಿರೆ ಕಂಡು ಕಿಡಿಯುಗುಳುತಾಕ್ಷಣದೊಳು ॥
ಕಲಿಪಾರ್ಥನಾಹವಸಮರ್ಥ ಗಾಂಡೀವಮಂ ।
ಸೆಳೆದಸ್ತ್ರಮಂ ತುಡುಕಿ ಝೇಂಕರಿಸಿ ಹೂಂಕರಿಸು ।
ತಲಿಭರದಿ ಸಾಗುತಂ ತಾಗುತಂ ನೃಪನೀಲಕೇತನೊಡನಿಂತೆಂದನು ।೩೮೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ನಿಲ್ಲೆಲವೊ ಮಾಹಿಷ್ಮತೀಪುರ । ವಲ್ಲಭನೆ ಕೇಳಿತ್ತ ಕೊಳುಗುಳ ।
ದಲ್ಲಿ ನಮ್ಮಯ ಬಲವರಿದ ಬಲು । ಹಿಲ್ಲಿತೋರು ॥೩೮೬॥

ಸಾಕೆಲವೊ ಗಳಹದಿರು ಸುಮ್ಮನೆ । ಪಾಕಶಾಸನ ಸುತನೆ ನಿನ್ನನು ।
ನಾಕಳುಹಿದಪೆ ಶರಮುಖದೊಳಾ । ನಾಕಕಿನ್ನು ॥೩೮೭॥

ಜಡಮತಿಯೆ ಸಾರಿದೆನು ಬೇಗನೆ । ಬಿಡು ಹಯವ ಕಪ್ಪವನು ಸಹ ಕೊಡು ।
ಕೊಡದಿರಲು ರಣದೇವಿಗೌತಣ । ಬಡಿಪೆ ನಿನ್ನ ॥೩೮೮॥

ಕ್ಷತ್ರಿ ಕುಲಜರು ನಾವೆಲವೊ ಕಲಿ । ಪಾರ್ಥ ನೀನಿದನರಿಯದಾದೆಯ ।
ಸತ್ವದಿಂ ಕಟ್ಟಿದೆವು ತುರಗವ । ವ್ಯರ್ಥವಲ್ಲ ॥೩೮೯॥

ಪೂತುರೇ ನೃಪ ನಿನಗನಿತು ಸ । ತ್ವಾತಿಶಯವಿರೆ ಪರಿಕಿಸುವೆ ನೀ ।
ನಾತುಕೊಳ್ಳೆನು ತೆಗೆದ ನರಶರ । ವ್ರಾತಗಳನು ॥೩೯೦॥

**ಭಾಮಿನಿ**

ವಸುಧೆ ಪಾಲಕ ಕೇಳು ಪಾರ್ಥನು ।
ಪೊಸಮಸೆಯ ವಿಶಿಖಗಳ ತಾ ತೆಗೆ ।
ದೆಸೆದು ಜವದಿಂದರಿಭಟನ ವಕ್ಷವನು ಕೀಲಿಸಲು ॥
ಬಸವಳಿದು ಜಾಮಾರ್ಥ ಮೂರ್ಛೆಯೊ ।
ಳೆಸೆದು ಮೆಲ್ಲನೆ ಚೇತರಿಸುತಾ ।
ಯಸದಿ ಕಣ್ದೆರೆದೊಡನೆ ತನ್ನಲಿ ಮರುಗುತಿಂತೆಂದ ॥೩೯೧॥

**ರಾಗ ಸಾವೇರಿ ಏಕತಾಳ**

ಶಿವನೆಯಿನ್ನೇನೆಂಬೆನು । ಯೀ ವಿಧಿಯಾಯ್ತು ।
ಬವರದಿ ನರನೊಳಾನು ॥
ಜವಗೆಟ್ಟೆನಯ್ಯೊಯಿನ್ನು । ಗೆಲ್ಲುವೆನೆಂತು ।
ದಿವಿಜೇಂದ್ರತನಯನನೂ ॥೩೯೨॥

ಕ್ಷತ್ರಿಪಂಥದಿ ಹಯವ । ಬಂಧಿಸಿ ಧುರಕೆ ।
ವ್ಯರ್ಥ ಬೆದರಿ ಕಪ್ಪವ ॥
ತೆತ್ತರೆ ಪಾರ್ಥಗಿನ್ನು । ಜೀವಿಸಿ ಮೇಣೀ ।
ಪೃಥ್ವಿಯೊಳ್ಕಾರ್ಯವೇನು ॥೩೯೩॥

ಘನ ಪರಾಕ್ರಮಿ ವಹ್ನಿಯು । ಜಾಮಾತನೆನ ।
ಗಿನಿತರಲೀವಿಧಿಯು ।
ಎನಗೊದಗಿತು ನಾಮುಂದೇ । ಬರಿಸುವೆ ಪಾವ
ಕನ ಶೀಘ್ರದಿಂದಯಿಂದೇ ॥೩೯೪॥

**ಕಂದ**

ಜನಪತಿ ಬಳಿಕಾವಹ್ನಿಯ ।
ಮನದೋಳ್ ಧ್ಯಾನಿಸುತತಿ ಭಕ್ತಿಯೊಳಿರಲರಿತುಂ ॥
ಘನವೇಗದಿ ತಾ ನಡೆತಂ ।
ದನಲಂ ಹದನೇನುತ್ತಲಿ ಬೆಸಗೊಳಲೆಂದಂ ॥೩೯೫॥

**ರಾಗ ಕಾಂಭೋಜಿ ಏಕತಾಳ**

ಕೇಳು ಕೃಶಾನು ನಾ । ನಾಳಿದೆನೀರಾಜ್ಯ ।
ಪೇಳಲೇನೈಸತ್ವ । ಶೀಲ ಸಂಪನ್ನ ॥

ಮೇಲೆ ನಿನ್ನ ಸಹಾಯ | ದಾಳುತನದಿ ನೃಪ |
ಜಾಲಗಣಿಸದಿರ್ದೆ ಜಾಲವಿದಲ್ಲ ||೩೯೬||

ಇಂದ್ರನಂದನನಶ್ವ | ಬಂಧಿಸಿ ನಾಕಾದಿ |
ಹೊಂದಿದುದಪಜಯ | ಮುಂದೇನು ದಾರಿ ||
ಬಂಧು ನೀನಾಗಿರ | ಲಿಂದೆನಗೀ ವಿಧಿ |
ಬಂದುದೇನಿದ ಹರಿ | ಸೆಂದರೆ ನುಡಿದ ||೩೯೭||

**ರಾಗ ಕೇತಾರಗೌಳ ಅಷ್ಟತಾಳ**
ಮಾತುಳ ಚಿಂತಿಪು | ದೇತ ಕಿನ್ನಿದಕಿನ್ನು | ಭೀತಿಯ ಬಿಡುಕ್ಷಣದಿ ||
ಶ್ವೇತವಾಹನನ ವಿ | ಖ್ಯಾತಸೈನ್ಯವಪೊಕ್ಕು | ನಾತಡೆದವರುಗಳ ||೩೯೮||

ಘನಪರಾಕ್ರಮಿಯರ್ಜುನನ ಬಲಕಾಂತಾರ | ವನು ನಿಮಿಷದೊಳಗಿಂದು ||
ಮುನಿದು ಭಸ್ಮಗೈವೆ | ನನು ಮಾನಿಸದಿರೆಂದು | ಜನಪತಿಗಭಯವಿತ್ತ ||೩೯೯||

**ವಾರ್ಧಕ**
ಇಂದು ಕುಲತಿಲಕ ನೀಕೇಳು ಮಾಹೀಷ್ಮತಿ ವ |
ಸುಂಧರಾಧಿಪಗರುಹಿ ಧೈರ್ಯವಂ ಬಳಿಕ ಖತಿ |
ಯಿಂದ ಪೊಕ್ಕಾ ನರನ ಬಲವ ಸುಡತೊಡಗಿದಂ ಸಪ್ತರಸನಂ ರಭಸದಿ ||
ಮಂದಿಗಜರಥವಾಜಿಯೊಂದುಳಿಯದಂತೆ ಹೊಗೆ |
ಯಿಂದುಂಬಿ ಭುಗಿಲೆನುತ ಧಳ್ಳುರಿಯ ಸೂಸಿದರೆ |
ಬೆಂದು ಬೇಗುದಿಯಾಗಿ ಸೀದುಸೀಕರಿಯೋಗಿ ಭಸ್ಮಮಾದುದು ಕ್ಷಣದೊಳು ||೪೦೦||

**ಕಂದ**
ಸ್ವಾಹಾಕಾಂತಂ ಪಾರ್ಥನ |
ಮೋಹರವಂ ಸುಟ್ಟುರುಹಲು ಕಂಡೀ ಪರಿಯಂ ||
ಈ ಹದನಚ್ಚರಿ ಮುಂದೇ |
ನಾಹುದೊಯೆನುತಲಿ ಚಿಂತಿಸಿದಂ ಕೌಂತೇಯಂ ||೪೦೧||

**ರಾಗ ನೀಲಾಂಬರಿ ಝಂಪೆತಾಳ**
ಅಕಟಕಟಯಿನ್ನೇನಮಾಳ್ಪೆ | ಧರ್ಮಜನ |
ಮುಖವನಾನಿನ್ನೆಂತುನೋಳ್ಪೆ || ಪಲ್ಲವಿ ||

ಧರೆಯರಾಯರನೆಲ್ಲ ಗೆಲಿದು | ಕಪ್ಪವನು |
ತರಲೆನ್ನ ಕಳುಹಿತಾನಂದು | ದೀಕ್ಷೆಯನು |
ಧರಿಸಿರುವನಗ್ರಜನು ಮುಖಕಾಯ್ತು ಕುಂದು ||೪೦೨||

ಮೂರುಲೋಕದ ಗಂಡ ಪಾರ್ಥ । ಹರಿಹರರ ।
ವೀರತನದಿಂದ ಮೆಚ್ಚಿಸಿದಾತನೆನುತ । ಬಿರುದೆನಗೆ ।
ಧಾರಿಣಿಯೊಳಿರ್ದುದೀವರೆಗೆ ಪೊಗಳುತ್ತ ॥೪೦೩॥

ಈ ನರಾಧಿಪನ ದೆಸೆಯಿಂದ । ಸೇನೆಗತಿ ।
ಹಾನಿಯೊದಗಿತು ಕಾಣೆನೊಂದ । ಬಂದೆಡರ
ನೀನೆ ಪರಿಹರಿಸು ಕರುಣಾಕರ ಮುಕುಂದ ॥೪೦೪॥

**ಭಾಮಿನಿ**
ಏನಿದದ್ಭುತ ತ್ರಿಭುವನವ ತಾ ।
ಹಾನಿಗೈದಪೆನೆನುತ ಪುರಹರ ॥
ತಾನೆ ಕಣ್ದೆರೆದುರುಹ ತೊಡಗಿದನೋ ಮಹಾದೇವ ।
ಈ ನಿಧಾನವನರಿಯೆ ಸೈನ್ಯವಿ ।
ದೇನು ಕಾರಣ ಧರೆಗುರುಳುತಿದೆ ।
ತಾನು ಮುನಿದನಿದೇಕೆ ಶಿಖಿಯೆಂದೆನುತ ಯೋಚಿಸಿದ ॥೪೦೫॥

**ರಾಗ ಸಾಂಗತ್ಯ ರೂಪಕತಾಳ**
ಬಂದ ವಿಘ್ನವಹರಿ । ಸೆಂದಗ್ನಿದೇವನ ।
ನಿಂದು ಪ್ರಾರ್ಥಿಸುವೆ ಭಕ್ತಿಯಲಿ ॥
ಮುಂದೆ ದಾರಿಯಕಾಣೆ । ನೆಂದೆ ದೇವೇಂದ್ರನ ।
ನಂದನ ಮನವ ಮಾಡಿದನೂ ॥೪೦೬॥

ಕರದಚಾಪವ ಧರೆ । ಗಿರಿಸಿ ತಾ ಶುಚಿಯಾಗಿ ।
ಕರವ ಜೋಡಿಸಿ ದೈನ್ಯದಿಂದ ॥
ಶಿರವ ಬಾಗುತ ನೀನೆ । ಪೊರೆಯೆಂದು ನುತಿಗೈದ ।
ನಿರದೆ ಮತ್ತನಲ ಸೂಕ್ತದಲಿ ॥೪೦೭॥

**ರಾಗ ಸಾರಂಗ ಅಷ್ಟತಾಳ**
ಜಯ ಜಯ ಶ್ರೀದಹನ । ಹೇ ಸಪ್ತರಸನ ।
ಜಯ ಜಯ ಶ್ರೀದಹನ ॥
ಜಯ ಜಯ ತ್ರಿಭುವನ । ಲಯ ಪರಿಪಾಲನ ।
ದಯದಿ ಪಾಲಿಪುದೆನ್ನ । ಸದ್ಗುಣರನ್ನ ॥೪೦೮॥

ದೇವನೀನೆ ಮುನಿವೆಯ । ಮುಂದೆನ್ನನು ।
ಕಾವ ಮಹಿಮರ್‍ಯಾರಯ್ಯ ॥
ನಾವೆಸಗುವ ಮಖ । ದಾವರ ಹವಿರ್ಭಾಗ ।
ದೇವನಿನಗೆ ನಿನ್ನಿಂ । ದೇವಾಳಿಗಹುದಯ್ಯ ॥೪೦೯॥

ಎನ್ನ ಮೇಲತಿದಯದಿ । ಗಾಂಡೀವಧನು ।
ವನ್ನಿತ್ತೆ ನೀನೆ ವನದಿ ॥
ನಿನ್ನೊಳುದ್ಭವಿಸಿದ । ಕನ್ಯೆ ಪಾಂಚಾಲೆ ನೋ ।
ಡನ್ಯರೆ ನಿನಗೆ ಪ್ರ । ಸನ್ನನಾಗೈದೇವ ॥೪೧೦॥

**ಕಂದ**

ಕರುಣದಿ ಪಾಲಿಸು ವೈಶ್ವಾ ।
ನರ ನೀನೆನ್ನಂ ಜಯ ಜಯವೆನುತಲಿ ಪಾರ್ಥಂ ॥
ಪರಿಪರಿಯಿಂ ನುತಿಸುತ್ತಿರೆ ।
ಹರುಷದಿ ಮೈದೋರುತ ಪಾವಕನಿಂತೆಂದಂ ॥೪೧೧॥

**ರಾಗ ಕಾಂಭೋಜಿ ಝಂಪೆತಾಳ**

ತರಳ ಮೆಚ್ಚಿದೆ ಸಾಕು । ಶಿರವ ನೆಗಹೆನುತಗ್ನಿ ।
ಕರವ ಪಿಡಿದೆತ್ತಿ ಸಂಭ್ರಮದೀ ॥
ಮರುಗಲೇಕೈ ಬರಿದೆ । ತುರಗಮೇಧವಿದ್ಯಾಕೆ ।
ದುರಿತಹರ ಹರಿ ನಿಮ್ಮೊಳಿರಲು ॥೪೧೨॥

ಅಹುದು ನೀವೆಂಬುದಂ ಮೀರಬಪ್ಪುದೆ ಹರಿಯ ।
ಸಹವಾಸವೇ ಸಾಲ್ಗುಜಗದೀ ॥
ವಹಿಸುವವರಾರು ಸದ್ಧರ್ಮ ಮಾಧವನಾಜ್ಞೆ ।
ಯಿಹುದೆಮಗೆ ಮಖವನೆಸಗುವಡೆ ॥೪೧೩॥

ಆತನಪ್ಪಣೆಯೊಳಿ । ನ್ನೀ ತುರಗ ಮೇಧವನು ।
ತಾ ತೊಡಗಿದನು ಧರ್ಮಜಾತ ।
ನಾ ತೆರಳಿ ಬಂದೆನೀ । ರೀತಿಯಾದುದು ಪೊರೆಯೊ ।
ವೀತಿಹೋತ್ರನೆ ಕರುಣವಿರಿಸಿ ॥೪೧೪॥



**ಭಾಮಿನಿ**

ಗುಣವನಧಿಯಹ ಫಲುಗುಣನೆ ಕೇ ।
ಳಿನಿತುಮನ ಮುನಿಸಿಲ್ಲ ನಿನ್ನೊಳು ।
ನಿನಗೆ ನಾನೆರಡೆಣಿಸೆ ನುಡಿಸಟೆಯಲ್ಲ ಜಯವಹುದು ॥
ಎನುತ ಮತ್ತಾವಹ್ನಿ ಕುಂತೀ ।
ತನಯನನು ಬೀಳ್ಕೊಂಡು ಮಾವನ ।
ಸನಿಹಕೈದುತಲೆಂದ ವಿನಯದೊಳತಿ ಹಿತದೊಳಿಂತು ॥೪೧೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಾವ ಲಾಲಿಸು ಬೇಡ ಬಿಡುಬಿಡು । ನೀ ವಿರೋಧವ ನರನೊಡನೆ ಸ ।
ದ್ಭಾವದಿಂದಿಹುದೊಳಿತು ಮುಂದಕೆ । ಭೂವರೇಣ್ಯ ॥೪೧೬॥

ಸಂಗರವ ಕೊನೆಗೊಳಿಸಿ ಮರೆವ ತು । ರಂಗವನು ಕೊಂಡೊಪ್ಪಿಸಾತನ ।
ಸಂಗಡವೆ ಪೋಪುದು ಸಹಾಯಕೆ । ಹಿಂಗದಿನ್ನು ॥೪೧೭॥

ನಿನ್ನ ಮಾತಿನೊಳ್ಕೈದಿ ಪಾರ್ಥನು । ಸೈನ್ಯವನು ಪರಿಭವವಗೊಳಿಸಲು ।
ಯೆನ್ನಮರೆಯನು ಹೊಕ್ಕಮೇಲೇ । ನಿನ್ನುಕದನ ॥೪೧೮॥

ತನ್ನ ಪಂಚಪ್ರಾಣ ಪಾಂಡವ । ರೆನ್ನುತಲಿ ಹರಿಪಾಲಿಸುವನವ ।
ರನ್ನು ಸಂತತ ಬಾರದಪಜಯ । ವಿನ್ನವರ್ಗೆ ॥೪೧೯॥

**ವಾರ್ಧಕ**

ಧರಣೇಶ ಲಾಲಿಸಿದರೊಳ್ ಸುರಪನಂದನಂ ।
ಹರಿಹರಾದ್ಯರ ಕದನದೊಳು ಮೆಚ್ಚಿಸಿದ ಧೀರ ।
ನಿರುವನವನಂ ಗೆಲ್ವರ್ಯಾರು ನೀನದರಿಂದ ಹಯವನಾತನಿಗೊಪ್ಪಿಸೀ ॥
ಹರಿಯೊಲುಮೆಯಂ ಪಡೆಯೆನುತ್ತ ಸಂತೈಸುತ್ತ ।
ಲರಸನಂ ಪುರಕೆ ಮರಳಿಸಲಿತ್ತಲಾ ಪಾರ್ಥ ।
ಭರದಿ ನಾರಾಯಣಾಸ್ತ್ರವನೆಚ್ಚು ಶಮನಿಸಿದನುರಿಯಡಾವರಿಯನಂದು ॥೪೨೦॥

**ರಾಗ ಸವಾಯ್ ಏಕತಾಳ**

ಧರಣಿಪ ತನ್ನಯ । ಪುರಕೈದುತಲಾ ।
ನರಗೀವಡೆ ಬಹು ವಸ್ತುಗಳ ।
ನೆರಹುತಲಿರಲವ । ನರಸಿ ಜ್ವಾಲೆ ಬಂ ।
ದರಸನೊಳೆಂದಳೀ ಮಾತುಗಳ ॥೪೨೧॥

**ರಾಗ ಸುರುಟಿ ಏಕತಾಳ**

ಏನಿದೇನು ಪ್ರಿಯ । ಸಮರವಿ । ಧಾನ ಸುಗುಣರೆರೆಯ ॥
ನೀನೀ ವಸ್ತುಗ । ಳಾ ನರಗೀವುದೆ ।
ದೀನನಾಗಿ ಕ್ಷಾ । ತ್ರಾನ್ವಯನೆನಿಸಿ ॥೪೨೨॥

ಸರಸಿಜ ಮುಖಿ ಕೇಳೆ । ಕಪ್ಪವ । ತೆರವೆನುನಾ ನಾಳೆ ॥
ಭರದೊಳವನ ಬಲ । ಹರಿಸಲು ಪಾವಕ ।
ಗೆರಗಿಹನದರಿಂ । ಧುರಬಿಡಲರುಹಿದ ॥೪೨೩॥

ಆತನ ನುಡಿಗಾಗಿ । ನೀನಿ । ನ್ನೇತಕೆ ಮರುಳಾಗಿ ॥
ಸೋತೆನೆನುತ ಪುರು । ಹೂತಸುತಗೆ ನಾ ।
ನಾತರ ವಸ್ತುವ । ನೇತಕೊಪ್ಪಿಪುದು ॥೪೧೪॥

**ರಾಗ ಕೇತಾರಗೌಳ ಝಂಪೆತಾಳ**
ಮರುಳಲ್ಲ ಕಾಂತೆ ಕೇಳು । ತ್ರೈಲೋಕ್ಯ ।
ಭರಿತ ಹರಿಯಾಣತಿಯೊಳು ॥
ವಿರಚಿಸುವ ಯಮಜಾತನು । ಮಖವ ಸಹ ।
ಕರಿಸದಿರಲುಚಿತವೇನು ॥೪೧೫॥

ವಾರುಹವ ಕೊಡದೆ ಮತ್ತಾ । ಪೌರುಷವ ।
ದೋರುಕ್ಷಾತ್ರಿಯನೆನುತ್ತ ॥
ಸೂರೆಗೊಂಬುದು ಜಯವನು । ಸಲ್ಲದಡೆ ।
ಸೇರುವುದು ಸುರಪುರಿಯನು ॥೪೧೬॥

**ಭಾಮಿನಿ**
ಇಳೆಯಧಿಪನಹ ನೀಲಕೇತಗೆ ।
ಹಲವು ಪರಿಯಿಂ ಜ್ವಾಲೆ ಬೋಧಿಸೆ ।
ಕಲಹವನು ನಿರ್ಧರಿಸಿ ಸೂರ್ಯೋದಯವನೀಕ್ಷಿಸುತ ॥
ಬಲಯುತನು ತಾನಿರ್ದ ಕೇಳೈ ।
ಲಲನೆಯರ ಬಲುಹೆಂತೊ ಪೇಳುವ ।
ಡಳವೆ ಕಾಂತೆಯ ಮತದಿ ಛಲವಿಡಿದಿರ್ದನಂದಿನೊಳು ॥೪೧೭॥

**ವಾರ್ಧಕ**
ಅರಸ ಕೇಳನಿತರೋಳ್ ಪೂರ್ವಾದ್ರಿ ಭೂವರಂ ।
ವಿರಹದುರಿಯಿಂ ಪೊರಳ್ದಳಲುತಿಹ ಕೋಕಗಳ ।
ಮೊರೆಯನಾಲಿಸುತಲಳಿಕುಲದ ಬಂಧನವ ನೆನೆನೆನೆದು ಮನ್ಮಥ ಶಬರನ ॥
ಮೆರೆವ ಜಯಸಿರಿಯೆಂಬ ತೆರದೊಳಿಹ ತಮನಿಶಾ ।
ಚರಿಯ ತರಿದಪೆನೆಂದ ಕನಲಿ ಕೆಂಪಿಡಿದು ಕ ।
ಣ್ದೆರೆಯೆ ಪೊರಮಡುವ ಕೆಂಗೆಂಡವೆನೆ ತರಣಿಯುದಿಸಿದ ಪೂರ್ವ ಪರ್ವತದೊಳು ॥೪೧೮॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಮಿತ್ರನುದಯದೊಳೆದ್ದು ಪಟುಭಟ । ಮೊತ್ತವನು ಶೇಖರಿಸಿ ವಹಿಲದಿ ।
ಮತ್ತೆ ಮಾಹಿಷ್ಮತಿ ಪುರಾಧಿಪ । ನತ್ತ ಪೊರಟು ॥೪೧೯॥

ತುರಗವನು ಬಿಡೆ ಬವರಕನುವಾ । ಗಿರಲೆನುತ ಪಾರ್ಥಂಗೆ ಸೂಚಿಸ ।
ಲರಿತು ನರನಾಕ್ಷಣದಿ ಸೈನ್ಯವ । ನೆರೆದ ಭರದಿ ॥೪೨೦॥

ಪುರವ ಮುತ್ತುವದೆನುತ ಮುಂದ್ವರಿ | ದಿರಲು ನೀಲಧ್ವಜನು ಕಾಣುತ |
ಧುರವೆಸಗುತಿರಲಾ ಪ್ರವೀರಗೆ | ನರನು ನುಡಿದ ||೪೩೦||

**ರಾಗ ಭೈರವಿ ಅಷ್ಟತಾಳ**
ಆರೆಲೊ ನೃಪಕುವರ | ಸಂಗ್ರಾಮದಿ | ವೀರ ನೀನಹೆಯ ಪೋರ ||
ಸಾರವಲ್ಲದು ಕೆಲ | ಸಾರುತ್ತ ನಮ್ಮಯ | ವಾರುಹವದನೊಪ್ಪಿಸು ||೪೩೧||

ವಾರುಹವನು ಬಂಧಿಸಿ | ಬಿಡುವುದುಂಟೆ | ಸಾರವಲ್ಲಿದು ಸಾಹಸಿ ||
ಧಾರಿಣಿಯಪತಿಯ ಕು | ಮಾರಕ ವೀರ ಪ್ರ | ವೀರ ನಾನಹೆನು ಕೇಳು ||೪೩೩||

ಮರುಳೆಲಾ ತ್ರೈಜಗದಿ | ಪ್ರವೀರನಾ | ನಿರಲೀ ಮಹೀತಳದಿ ||
ವರಧನಂಜಯನೊಳು | ಬರಿದೆ ಪ್ರವೀರನೆಂ | ದರೆ ಪೆಸರಡಗಿಪೆನೊ ||೪೩೪||

ಘನವೆ ನೀ ಕೇಳಾದರೆ | ಮಿಕ್ಕಹಿತಕಾ | ನನಧನಂಜಯ ನಾನಿರೆ ||
ನಿನಗೀ ಪೆಸರುಸಲ್ಲ | ದನುವರದಲಿ ತೆಗೆ | ವೆನು ಕೇಳೆಂದೆಚ್ಚನಾಗ ||೪||

**ರಾಗ ಮಾರವಿ ಏಕತಾಳ**
ಸಣ್ಣವ ನೀನೆನು | ತೆಣ್ಣಿಸಿ ಬಿಟ್ಟರೆ | ಗಣ್ಯವಿಲ್ಲದಿಂತು ||
ನಿನ್ನಯ ಗರ್ವವ | ನೆನ್ನೊಳು ತೋರ್ಪುದೆ | ಯೆನ್ನುತ ಶರವೆಸೆದ ||೪೩೫||

ತಡೆಗಡಿದೊಡನದ | ಬಿಡಲು ಶರೌಘವ | ಕಡಿದಾ ಫಲುಗುಣನೂ ||
ಬಿಡೆ ದಿವ್ಯಾಸ್ತ್ರವ | ದೊಡನೆ ಪ್ರವೀರನ | ತುಡುಕಿ ಕೆಡಹೆ ಶಿರವ ||೪೩೬||

**ಕಂದ**
ತರಳ ಪ್ರವೀರನ ಶಿರ ಧರೆ |
ಗುರುಳಲು ಕಾಣುತಲಾ ನೀಲಧ್ವಜನಾಗಂ ||
ಹರ ಹರಯೆನುತ್ಯೆತರುತಂ |
ಶಿರವಂ ಮುಂದಾಡುತಲೆಂದಂ ಶೋಕಿಸುತಂ ||೪೩೭||

**ರಾಗ ಕಾಂಭೋಜಿ ಆದಿತಾಳ**
ಮಗನೆ ನಿನ್ನ | ಅಗಲಿ ಪುರವ | ಪೊಗುವೆನೆಂತು ಚಿನ್ನ |
ಸುಗುಣರನ್ನ | ಜಗದೊಳನ್ಯ | ವಿಗಡರಿಹರೇನೆನ್ನ ||೪೩೮||

ಧುರದಿ ಶೌರ್ಯ | ದಿರವದೋರಿ | ನರನ ಹತಿಯೊಳಿಂದು ||
ಧರೆಗುರುಳಿದೆ ಬರೆದಪಣೆಯ | ಕ್ಕರದ ವಿಧಿಯದಿಂತು ||೪೩೯||

ಕಂದನೀ ಬಾರೆಂದು ಮುದದಿ | ಮುಂದೆ ಕರೆವೆನಾನ್ಯಾರನು ||
ಇಂದ್ರಸುತನೊ | ಳಿಂದು ಜಯವು | ಹೊಂದದೆ ಹೋಯಿತೇನು? ||೪೪೦||

ವೀತಿ ಹೋತ್ರ । ನೀತಿನುಡಿಯೆ । ಮಾತ ಕೊಳದೆ ಬಗೆಗೆ ॥
ಘಾತಿಸಿದೊಲಾ । ಯ್ತೀತೆರದಿಮ । ನ್ನಾಥೆಯೆಂದ ನುಡಿಗೆ ॥೪೪೧॥

**ಭಾಮಿನಿ**

ಪರಿಪರಿಯೊಳಾ ನೃಪತಿ ಬಾಲನ ।
ಶಿರವನೆಗಹುತ ಮುದ್ದಿಸುತ ಮಿಗೆ ।
ಕರದೊಳಪ್ಪುತ ರೂಪಗುಣ ವಿಕ್ರಮವ ಬಣ್ಣಿಸುತ ॥
ಮರುಗಿ ಮನದೊಳು ಬಳಿಕ ಕೋಪೋ ।
ತ್ಕರುಪ ಶಿಖಿ ಮಸಗಲ್ಕೆರೌದ್ರದಿ ।
ಧರಣಿಪತಿ ನೀಲಧ್ವಜನು ಫಲುಗುಣನಿಗಿದಿರಾದ ॥೪೪೨॥

**ರಾಗ ಭೈರವಿ ಏಕತಾಳ**

ಪೂತುರೆ ಪ್ರತಿಭಟ ನಿನ್ನ । ಶರ । ವ್ರಾತವ ಬಿಡು ಪರಿಕಿಪೆನ್ನಾ ॥
ಘಾತಿಸಿದೆಯ ಮಮಸುತನ । ಬಿಡೆ । ನ್ನೈತೊಡಗಿದೆ ಬಲುಕದನ ॥೪೪೩॥

ಸೊಕ್ಕಿನ ನುಡಿಯಾಡದಿರು । ಜಯ । ಸಿಕ್ಕದು ನೀ ಕೈದೋರು ॥
ತಕ್ಕುದ ಶಿಖಿ ಪೇಳಿದರೆ । ಮನ । ಕಿಕ್ಕದೆ ಬಂದಿಹೆ ಭಳಿರೆ ॥೪೪೪॥

ಮಂತ್ರಿ ಸಹೋದರರುಗಳ । ಸುತ । ರಂ ತಡೆಗಡಿದಹ ಖೂಳ ॥
ಯೆಂತಾದರು ಬಿಡೆ ನಿನ್ನ । ಶಿರ । ವಂ ತರಿವೆನು ನಿಮಿಷದಿ ನಾ ॥೪೪೫॥

ಸಂಗರದೊಳಗಳಿದಿಹಪರ । ತಿಳಿ । ದಂಗವರಿಯದೀ ಸಮರ ॥
ಹಿಂಗದೆ ತೊಡಗಿದೆ ಬರಿದೆ । ಜಯ । ವಂ ಗೊಳುವಾಸೆಯದಿಹುದೆ ॥೪೪೬॥

ಖತಿಯಿಂ ನೀಲಧ್ವಜನೂ । ಶರ । ತತಿಯ ಸುರಿಸೆ ಫಲುಗುಣನೂ ॥
ಪ್ರತಿ ಶರದಿಂ ಕಡಿದದನೂ । ಭೂ । ಪತಿಗಿಡೆ ದಿವ್ಯಾಸ್ತ್ರವನೂ ॥೪೪೭॥

**ಭಾಮಿನಿ**

ಕಲಿಧನಂಜಯ ಕನಲಿತಾಮ ।
ತ್ತೆಳೆದು ದಿವ್ಯಾಸ್ತ್ರವನೆಸೆಯೆ ಬಂ ।
ದಿಳೆಯಧಿಪನನು ಕೆಡಹಿ ಮೂರ್ಛಿಸೆ ಕಾಣುತದನಂದೂ ॥
ಅಳಲಿ ಮನದೊಳು ಸಾರಥಿಯು ಪುರ ।
ವಳಯಕೈದಿಸೆ ರಥವನಾಕ್ಷಣ ।
ಬಳಿಕ ನೃಪ ತಿಳಿದೆಚ್ಚರಿತು ತಾನೆಂದು ಮನಮರುಗಿ ॥೪೪೮॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಹರ ಹರ ಸವನಿಸಿತೀಪರಿ । ಕಷ್ಟ ।

ವರುಹುವದೇನೆನ್ನ ಜಯಿಸಿರಿ ‖
ಬರಿದಾಯ್ತು ನರನ ಸಂಗರದೊಳು | ಶೌರ್‍ಯ |
ಮೆರೆಯದಾಯಿತು ಧುರಗಲಿಯೊಳು ‖೪೪೯‖

ವೀತಿ ಹೋತ್ರನ ನೀತಿ ಬೋಧೆಯ | ಮನ |
ಕೇತಾರದಿಂತಾಯ್ತು ನಿಶ್ಚಯ ‖
ಸೋತೆನು ಸತಿಯಮಾತಿನೊಳಾನು | ಕಡು |
ಪಾತಕಿಯವಳಿಂದ ಕೆಟ್ಟೆನು ‖೪೫೦‖

ಸುತ ಸಹೋದರ ಬಂಧುವರ್ಗವ | ಚಮೂ |
ಪತಿ ಸಚಿವಾದಿ ನಿಕಾಯವ ‖
ಪ್ರತಿಭಟ ನರನಸ್ತ್ರಕಿತ್ತೆನೂ | ಮುಂದೆ |
ಮತಿಗಾಣದಾದೆನು ಫಲವೇನು ‖೪೫೧‖

ದುಷ್ಟೆಘಾತಕಿ ಜ್ವಾಲೆಯಾದಳು | ಯಿಂಥಾ |
ಕಷ್ಟವನೆನಗೊದಗಿಸಿದಳು ‖
ಭ್ರಷ್ಟೆ ಸಲ್ಲಳು ತನಗೆನುತ್ತ | ಬಹು |
ಸಿಟ್ಟೆನಿಂದೆದ್ದೊಳ ಸರಿಯುತ್ತ ‖೪೫೨‖

**ರಾಗ ಕಾಂಭೋಜಿ ಝುಂಪೆತಾಳ**
ಎಲೆ ದುಷ್ಟೆ ಜ್ವಾಲೆ ನೀ | ನಿಲಬೇಡ ನಡೆಗಾಢ |
ಕಿಳುಹಿಕುಟಿರಿವನೆನಗೆ ನಿನ್ನೆ ‖
ಫಲುಗುಣನ ಹಯವ ನವ | ಗೊಲಿದೀಯದಂತೆಸಗು |
ತಲೆ ಕೆಡಿಸಿದೆಯಲ ಕಡುಪಾಪಿ ‖೪೫೩‖

ಹರಿಯ ಮೈದುನನೊಡನೆ | ಧುರವೆಸಗಲರುಹಿ ಸೋ |
ದರ ಸುತರು ಸಚಿವಾಪ್ತರುಗಳ ‖
ಬರಿದೆ ಕೊಲಿಸಿದೆಯೆಂದು | ಧರಣಿಪತಿ ಪುರದಿಂದ |
ಹೊರಡಿಸಿದನಾಕ್ಷಣದೊಳವಳ ‖೪೫೪‖

ಬಂಧಿಸಿದ ಮಖ ಹಯವ | ನಂದು ತರಿಸುತ ಘೋಷ |
ದಿಂದ ಕಪ್ಪವ ಹೊರಿಸಿ ಕೊಳುತ ‖
ಇಂದ್ರನಂದನನೆಡೆಗೆ | ಬಂದು ಕೈಮುಗಿದನಿತ ‖
ನಿಂದೊಪ್ಪಿಸಿದನು ಸಂತಸದಿ ‖೪೫೫‖

ಶ್ವೇತವಾಹನ ನೀಲ | ಕೇತಗುಚಿತವನಿತ್ತು |
ಪ್ರೀತಿಯಿಂ ಮನ್ನಿಸಲ್ಕಾಗ ‖

ಗೀತ ನೃತ್ಯಾದಿ ವಿವಿ | ಧಾತಿಶಯ ಜಯರವದ |
ನೂತನೋತ್ಸಾಹವದು ಮೆರೆಯೆ ||೪೫೬||

**ವಾರ್ಧಕ**
ಧರಣಿಪತಿ ಕೇಳಿತ್ತ ಜ್ವಾಲೆ ತಾ ಪುರದಿಂದ |
ಪೊರಟಾಗ ಬಂದು ತನ್ನನುಜನುನ್ಮುಖಗರುಹೆ |
ಹರಿಯ ಹಗೆ ಸಲದೆಂದು ಧಿಕ್ಕರಿಸಲಲ್ಲಿಂದ ಕೃತ್ರಿಮವನೆಣಿಸಿ ಬಳಿಕ ||
ಸುರನದಿಯ ತಡಿಗೈದಿ ನೀ ದೋಷಿಯಹೆ ನಿನ್ನ |
ತರಳ ಭೀಷ್ಮನ ನರಂ ತರಿದನೆನೆ ಮಮ ಸುತನ |
ಹರಿಸಿದನ ತಲೆಯನಾತನಸುತಂ ತಿಂಗಳೊಳು ತರಿಯಲೆನ್ನುತ ಶಪಿಸಲು ||೪೫೭||

**ಭಾಮಿನಿ**
ಕೃತ್ರಿಮದ ನುಡಿಯಿಂದ ಪಾರ್ಥಗೆ |
ಮತ್ತೆ ಗಂಗಾದೇವಿಯಿಂ ಕೊಡಿ |
ಸುತ್ತ ಶಾಪವ ಬಳಿಕ ತಾನಂಬಾಗಿ ಬಹೆನೆನುತ ||
ಚಿತ್ರಭಾನು ಪ್ರವೇಶಮಂ ಗೈ |
ಯುತ್ತ ಜ್ವಾಲೆಯು ಬಭ್ರುವಾಹನ |
ನುತ್ತಮದ ಮಾಡಿಗೆಯೊಳಿರ್ದಳು ವೈರತನದಿಂದ ||೪೫೮||

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಕೇಳು ಧರಣಿಪ ಬಳಿಕಪಾರ್ಥನು |
ನೀಲಕೇತಾದ್ಯರನು ಕೂಡುತ |
ಪಾಳಯವು ಸಹಿತೈದೆ ಮುಂದಕೆ | ಸಾಲುವಿಡಿದೂ ||೪೫೯||

ಮತ್ತೆ ತೆಂಕಣದವನಿಪರ ಗೆಲಿ |
ಯುತ್ತ ಕಪ್ಪವಗೊಳುತ ತನ್ನಯ |
ಪತ್ತನಕೆ ಬಂದಣ್ಣಗೊಪ್ಪಿಸ | ಲರ್ಥಿಯಿಂದ ||೪೬೦||

ಸಿರಿವರನ ಕೃಪೆಯಿಂದ ಧರ್ಮಜ |
ತುರಗ ಮೇಧವ ರಚಿಸಿದುರಿತವ |
ಹರಿಸಲಂಬರದಿಂದ ಪೂಮಳೆ | ಗರೆಯೆ ಸುರರು ||೪೬೧||

ಕ್ಷೀರವಾರಿಧಿ ಶಯನನವ ಶೃಂ |
ಗಾರ ಪೀಠದೊಳೊಪ್ಪಿರಲ್ಕಾ |
ನಾರಿಯರು ತಂದೆತ್ತಿ ಬೆಳಗಿದ | ರಾರತಿಯನೂ ||೪೬೨||

**ರಾಗ ಧವಳಾರ ಏಕತಾಳ**

ಕ್ಷೀರಸಾಗರವಾಸ ಹರಿಗೇ | ಚಾರು ಪೀತಾಂಬರ ಧರಗೇ
ಮೂರು ಜಗವನುದರದಿ ಧರಿಸಿದಗೇ |
ಘೋರ ಕಲುಷ ಭಯಪರಿಹರಿಸುವಗೇ ||
ವಾರಿಜ ನೇತ್ರಗೆ | ಭೂರಿ ಕೃಪಾಬ್ಧಿಗೆ ||
ನೀರೆಯರಾರತಿಯ || ಬೆಳಗಿದರೂ || ಶೋಭಾನಂ ||೪೬೩||

ದೇವರ ದೇವನಾದವಗೇ | ಪಾವನ ಚರಿತ ಮಾಧವಗೇ ||
ಸಾವಿರ ನಾಮದನಂತ ಮಹಿಮನಿಗೆ |
ದೇವಕಿಸುತನೆನಿಸಿದ ಚಿನ್ಮಯಗೆ ||
ಭಾವಜನಯ್ಯಗೆ | ಭಾವಕಿಯರು ಹೊಸ |
ಹೂವಿನಾರತಿಯ || ಬೆಳಗಿದರೂ | ಶೋಭಾನಂ ||೪೬೪||

**ವಾರ್ಧಕ**

ಕ್ಷಿತಿನಾಥಲಾಲಿಸೀ ಪರಿಯೊಳಾರತಿಯೆತ್ತಿ |
ಸತಿಜನಂ ಮರಳಲ್ಕೆ ಕಂಸಾರಿಸಹ ಯಮಜ |
ನತಿಶಯಾನಂದದಿಂದಿರುತಿರ್ದನಿಭಪುರದೊಳರುಹಲೇನಚ್ಚರಿಯನೂ ||
ಶೃತಿಗಗೋಚರನಾದ ಶ್ರೀಕಾಂತನಂ ಪಾಂಡು |
ಸುತರೊಲಿಸಿಕೊಂಡೀರ್ದರೀ ಶುಭ ಚರಿತ್ರಮಂ |
ಹಿತದಿ ಕೇಳೆಂದ ವೈಶಂಪಾಯ ಜನಮೇಜಯಂಗೊರೆದ ಸತ್ಕಥೆಯನೂ ||೪೬೫||

ಪೊಡವಿ ಜನರರಿವಂತೆ ವರ ಯಕ್ಷಗಾನ ಪರಿ |
ವಿಡಿದು ದಕ್ಷಿಣ ಕನ್ನಡದ ಜಿಲ್ಲೆಯುಪ್ಪಿನಂ |
ಗಡಿಯೆನಿಪ ತಾಲೂಕಿನಮರಮಾಗಣೆಯೊಳಿಹ ಪಡ್ನೂರೆನಿಪ ಗ್ರಾಮದಿ ||
ಬಿಡದೆ ಪರಿಶೋಭಿಪಜ್ಜನ ಗದ್ದೆಯಲ್ಲಿರ್ಪ |
ಪೊಡವಿಸುರಕುಲಜ ಸುಬ್ರಾಯಾಖ್ಯ ಭೂಸುರಂ |
ಪಡೆದ ಬಾಲಕ ಶಂಕ್ರನಾರಾಯಣಾಖ್ಯ ನಾಂ ಹರಿದಯದಿ ಗೈದೆನಿದನೂ ||೪೬೬||

**ಭಾಮಿನಿ**

ಪೇಳಿದೀ ಕೃತಿಯೊಳಗೆ ತಪ್ಪಿರೆ |
ಶೀಲರಿದ ತಿದ್ದುವುದು ದಯದಿಂ |
ಮೇಲೆ ಹಂಸಕ್ಷೀರನ್ಯಾಯದಿ ಬೇಡಿಕೊಳುತಿಹೆನು ||
ಬಾಲದುರ್ಗಾಧವ ಸದಾಶಿವ |
ಶ್ರೀಲಲಾಮ ಮುಕುಂದ ಶ್ರೀವನ |
ಮಾಲಕೃಷ್ಣರ ನಮಿಪೆ ಪಾಲಿಸಲೆನ್ನನನವರತ ||೪೬೭||

**ರಾಗ ಮೋಹನ ಝಂಪೆತಾಳ**

**ಮಂಗಳಪದ**

ಮಂಗಲಂ ಕರಿಮುಖಗೆ । ಮಂಗಲಂ ಹರಿಸಖಗೆ ।
ಮಂಗಲಂ ವಿಧಿಮನೋಹರೆ ವಾಣಿಗೆ ॥
ಮಂಗಲಂ ಲೋಕಮಾತೆಗೆ ಮಹಾರ್ಣವ ಸುತೆಗೆ ।
ಮಂಗಲಂ ಬಾಲದುರ್ಗೆಗೆ ಭರ್ಗಗೆ ॥೪೭೮॥

ಮಂಗಲಂ ಶ್ರೀ ರುಂಡಮಾಲಗಣ ಪಾಲನಿಗೆ ।
ಮಂಗಲಂ ವಿಬುಧ ಮನುಮುನಿವರ್ಗಕೇ ॥
ಮಂಗಲಂ ಗುರು ರಾಘವೇಂದ್ರ ಭಾರತಿಯರಿಗೆ ।

ಮಂಗಲಂ ಸಕಲ ಚೈತನ್ಯಾತ್ಮಗೆ ॥೪೭೯॥
ದೇವದೇವೇಶನಿಗೆ । ದೇವಪತಿ ಪೋಷನಿಗೆ ।
ದೇವಾರಿ ವಂಶ ಸಂಹಾರಕನಿಗೇ ॥
ದೇವಮುನಿ ನಮಿತಭೂ । ದೇವನೆನಿಸಿದ ವಾಸು ।
ದೇವ ದೇವಕಿತನಯ ಶ್ರೀಕೃಷ್ಣಗೇ ॥೪೮೦॥

ಜಯ ಮಂಗಲಂ । ನಿತ್ಯ ಶುಭ ಮಂಗಲಂ ॥

**॥ ಶುಭಮಸ್ತು-ಶ್ರೀರಸ್ತು ॥**

# ಯಕ್ಷಗಾನ ಯೌವನಾಶ್ವ ಅನುಸಾಲ್ವ ಕಾಳಗ

## ಪಾತ್ರಗಳು

ಧರ್ಮರಾಜ ಮನ್ಮಥ ಭೀಮ ಸುವೇಗ ಅರ್ಜುನ ಯೌವನಾಶ್ವ ನಕುಲ ಅನುಸಾಲ್ವ
ಸಹದೇವ ಮಂತ್ರಿ ಸುಧಾರ ವೇದವ್ಯಾಸ ದಾರುಕ ಶ್ರೀ ಕೃಷ್ಣ ದೂತಿ ಮುಂತಾದವರು
ರುಕ್ಮಿಣಿ ವೃಷಕೇತು

**ಕಂದ**
ಗಿರಿಜಾಸುತ ನಿನ್ನಡಿಗಂ ।
ಪೊಡಮಡುವೆನು ಪಾಲಿಸೆನಗೆ ಕರುಣಾಮೃತಮಂ ॥
ದುರಿತವನೀಗಿಸಿ ಕೃತಿಯಿದ ।
ಮೆರೆಸೈ ಗಣನಾಥ ಲೋಕತ್ರಯವಿಖ್ಯಾತ ॥೧॥

**ಭಾಮಿನಿ**
ಜಲರುಹಾಸನಸತಿಯೆ ತವಪದ ।
ನಳಿನಕೊಂದಿಸಿ ಪೇಳ್ವೆನೀಕೃತಿ ।
ಇಳೆಯೊಳನುದಿನ ಬಾಳುವಂದದಿ ನುಡಿಸು ಜಿಹ್ವೆಯಲೀ ॥
ಕಲಿತವನು ನಾನಲ್ಲ ಕಾವ್ಯದ ।
ತಿಳುವಳಿಕೆ ಎನಗಿಲ್ಲ ವರಕವಿ ।
ಗಳಿಗೆರಗಿ ರಚಿಸುವೆನು ಕದಳೀಪಳ್ಳಿ ಗಣನಾಥ ॥೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಅರಸ ಜನಮೇಜಯಗೆ ಜೈಮುನಿ ।
ವರನು ಭಾರತ ಕಥೆಯನರುಹುತ ॥
ಲಿರಲು ಪದಕಭಿನಮಿಸಿ ಕೇಳಿದ । ನೃಪತಿಯಾಗ ॥೩॥

ವರಯುಧಿಷ್ಠಿರನಶ್ವಮೇಧಕೆ ।
ತುರಗವಾವಧರಾಧಿಪತಿಯದು ।
ಧುರದಿ ಸೋಲಿಸಿ ತಂದರಾರೆಂ । ದರುಹಿ ಮತ್ತೆ ॥೪॥

ಕಾಲನಣುಗನ ಮಖದ ತುರಗವ ।
ಖೂಳ ಸಾಲ್ವಾನುಜನದೇತಕೆ ।
ತೋಳಬಲದಿಂದೊಯ್ದು ತಂದವ । ರಾರು ಗೆಲಿದು ॥೫॥

ಪೇಳಬೇಕೆಂದರುಹಲಾ ಮುನಿ ।
ಪಾಲ ನಸುನಗುತೆಂದ ನೃಪತಿಗೆ ।
ಮೂಲದಿಂದಾದ್ಯಂತ ಚರಿತವ । ಸಾಂಗವಾಗಿ ॥೬॥

**ರಾಗ ಕೇದಾರಗೌಳ ಅಷ್ಟತಾಳ**
ಕರಿಪುರದೊಳೊಡ್ಡೋಲಗದಿ ಯುಧಿಷ್ಠಿರ ।
ನಿರುತಿಹಸಮಯದಲೀ ॥

ವರವ್ಯಾಸ ಮುನಿಪ ತಾನೈತರೆ ಕಾಣುತ್ತ ।
ಲೆರಗಿ ಕುಳ್ಳಿರಿಸಿದನು ॥೭॥

ಹರುಷದಿಂದಾತಿಥ್ಯವೆಸಗಿ ಧರ್ಮಜ ಮೌನ ।
ಧರಿಸಿರುವದನರಿತು ॥
ಕೊರತೆಯಾವುದು ನಿನಗೇನಾಯಿತೆಂಬುದ ।
ನರುಹಬೇಕೆನಲೆಂದನು ॥೮॥

ಕೊಂದು ದಾಯಾದ್ಯರ ಗೋತ್ರಹತ್ಯಾದೋಷ ।
ಬಂದಿಹುದದರಿಂದಲೇ ॥
ಕುಂದಿಹೆನಲ್ಲದಿನ್ನೇನಿಲ್ಲವೆನುತ್ಯಮ ।
ನಂದನ ಪದಕೆರಗೆ ॥೯॥

ಮುನಿ ಪೇಳ್ದನಾಗ ಧರ್ಮಜನ ಶಿರವನೆತ್ತಿ ।
ಜನಪರು ರಾಜ್ಯಕಾಗಿ ॥
ಸೆಣಸಿ ಶತ್ರುಗಳ ಸಂಹರಿಸಲು ಗೋತ್ರ ನಾ ।
ಶನದೋಷ ಬರಬಹುದೇ ॥೧೦॥

ಬಾಲ್ಯದಿಂದೆಮ್ಮನು ಪಾಲಿಸಿರುವ ಭೀಷ್ಮ ।
ಮೇಲಾದ ವಿದ್ಯೆಯನು ॥
ಪೇಳಿದ ಗುರುವಧೆಗೈದೆವಾವೆಮ್ಮಯ ।
ಬಾಳು ಸುಡಲಿ ಎಂದನು ॥೧೧॥

ಬೇಡವೆನಗೆ ರಾಜ್ಯದೈಸಿರಿ ಭೀಮಗೆ ।
ನಾಡಿನ ದೊರೆತನವ ॥
ನೀಡಿ ನಿಶ್ಚಲತೆಯಿಂ ತಪವನಾಚರಿಸಲು ।
ಕಾಡಿಗೈದುವೆನೆಂದನು ॥೧೨॥

ಮರುಳು ಯುಧಿಷ್ಠಿರ ವನಕೈದಿದರೆ ದೋಷ ।
ಪರಿಹರವಾಗುವುದೇ ॥
ವಿರಚಿಸು ಹಿಂದೆ ರಾಮಾದಿ ಮರುತರ್ಗೈದ ।
ತುರಗ ಮೇಧವನೆಂದನು ॥೧೩॥

ತುರಗ ಮೇಧದಬಗೆಯೆಂತೊ ಧನವನೆಲ್ಲಿ ।
ತರುವದೊ ಹಯವಾವುದೊ ॥
ಪರಿಯ ಪೇಳುವದೆನಲಾಗ ಮುನೀಂದ್ರನು ।
ಅರುಹಿದ ಯಮಜಾತಗೆ ॥೧೪॥

ಮರುತರಾಯನು ಹಿಂದೆ ತುರಗ ಮೇಧದಿ ದ್ವಿಜ ।
ವರರಿಗಿತ್ತಿಹ ಧನವ ॥
ಇರಿಸಿಹಹಿಮಗಿರಿಯಲಿ ಭಾರವಾಗಲು ।
ತರಿಸಿ ಯಾಗವ ಮಾಳ್ಪುದು ॥೧೫॥

ಧರಣಿಸುರರ ಸೊತ್ತಿನಿಂದಲಿಯಾಗವ ।
ವಿರಚಿಸಲೀದೋಷದ ॥
ಪರಿಹರಕಿನ್ನೊಂದು ದುರಿತವ ಕೈಗೊಂಡ
ತೆರನೆನಗಾಹುದಲ್ಲ ॥೧೬॥

ಪರಶುಧರನು ದಾನವಿತ್ತುದಕ್ಕೆಲ್ಲ ಭೂ ।
ಸುರರದಾಗಿರಲದನು ॥
ಪೊರೆವುದು ನೃಪವರ್ಗವದರಿಂದಲಾವಿತ್ತ ।
ತರಿಸು ನಿನ್ನಧಿಕಾರವು ॥೧೭॥

ತುರಗವು ಶ್ವೇತವಾಗಿರಬೇಕು ಲಾಂಗೂಲ ।
ವರಿಸಿನ ವರ್ಣದಲೀ ॥
ಇರಬೇಕಿನ್ನದಕೊಂದೇ ಕಿವಿ ನೀಲ ನಸುಗಮ ।
ವಿರುವದುಚಿವಪ್ಪುದು ॥೧೮॥

ಪೃಥ್ವಿಸುಮನಸರಿಪ್ಪತ್ತು ಸಾವಿರ ಮಂದಿ ।
ಋತ್ವಿಜರಾಗಬೇಕು ॥
ವಿತ್ತವಸ್ತ್ರಾದಿಗಳಿತ್ತು ಯಥೋಚಿತ
ಸತ್ಕರಿಸುವದೆಂದನು ॥೧೯॥

**ಭಾಮಿನಿ**

ಯಾರಿಹರು ದ್ರವ್ಯವನು ತರುವವ ।
ರಾರು ನೃಪನನು ಗೆಲುವ ಶೂರರು ।
ಯಾರ ಬಲದೊಳು ಕಾರ್ಯವಿದ ನೆಗಳ್ಚುವದು ಎಂದೆನಲು ॥
ಮಾರುತಿಯು ಬಲಯುತನು ಕರ್ಣ ಕು ।
ಮಾರ ವಿಕ್ರಮಿ ಮೇಘನಾದನು ।
ಭೂರಿ ಸಹಸಿಗರಲ್ಲದೇ ಹರಿಯೊಲುಮೆ ನಿನಗಿಹುದು ॥೨೦॥

**ಕಂದ**

ಇಂತೆನಲಾ ಮುನಿನಾಥಂ ।
ಅಂತಕಸುತನಾಗ ಭೀಮನಾನನ ವೀಕ್ಷಿಸಿ ।

ಪಂಥದಿ ಮಾರುತ ಸುತ ಮತಿ ।
ವಂತನು ಪದಕೆರಗಿ ಪೇಳ್ದನಣ್ಣನೊಳಾಗಳ್ ॥೧೧॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಲಾಲಿಸಗ್ರಜ ಮನದಿ ಚಿಂತೆಯ । ತಾಳದಿರು ಮುನಿ ವ್ಯಾಸರೆಲ್ಲವ ।
ಪೇಳಿಹರು ಹಯ ವಿತ್ತದೊರಕುವ । ಠಾವನಮಗೆ ॥೧೨॥

ಧುರದಿ ಸೋಲಿಸಿ ಯೌವನಾಶ್ವನ । ತರುವೆನಶ್ವವನಾಜ್ಞೆಗೊಡುಯೆನ ।
ಲರಿತು ದಿನಪ ಕುಮಾರನಾತ್ಮಜ । ನೊರೆದನಾಗ ॥೧೩॥

ಮಾರುತಾತ್ಮಜನೊಡನೆ ಪೋಗುವೆ । ಗಾರುಗೆಡಿಸುವರನರಿ ಭಟಾಳಿಯ ।
ಚಾರುದಯತಾರದಿರೆ ಕರ್ಣಕು । ಮಾರನಲ್ಲ ॥೧೪॥

ಕೇಳುತಲೆ ಹೈಡಿಂಬಿಯಾತ್ಮಜ । ಕಾಳಗಕೆ ನಾಪೋಪೆನಯ್ಯಗೆ ।
ವೀಳಯವ ಕೊಡು ತಡೆಯದೀಗಲೆ । ಕಾಲಜಾತ ॥೧೫॥

ಎನೆ ಯುಧಿಷ್ಠಿರ ಮೂವರಿಂಗಾ । ಮುನಿಯ ಮತದಿಂದಾಜ್ಞೆಗೊಡಲಾ ।
ಗನುನಯದೊಳಾಶ್ರಮಕೆ ತೆರಳಲು । ವ್ಯಾಸರಂದು ॥೧೬॥

ಅವನಿಪತಿ ಮನದೊಳಗೆ ಲಕ್ಷ್ಮೀ । ಧವನ ಕರುಣವುಬೇಕು ನರನನು ।
ತವಕದಿಂ ಕಳುಹಿಸುವ ಯೋಚನೆ । ಗೈವುತೀರ್ದ ॥೧೭॥

**ಭಾಮಿನಿ**

ಇಂತು ಯೋಚಿಪ ಬಗೆಯ ಲಕ್ಷ್ಮೀ ।
ಕಾಂತ ಮನದೊಳಗರಿತು ಬೇಗದೊ ।
ಳಂತರಂಗದಿ ನೆನೆವ ಭಕುತರ ನೋಡಬೇಕೆನುತ ॥
ತಾಂತಳುವದಿಭಪುರಕೆ ಪೊರಡುವ ।
ನಂತಮಹಿಮನ ಕಂಡು ರುಕ್ಮಿಣಿ ।
ಕಂತುಪಿತನಡಿಗೆರಗಿ ವಿನಯದಿ ಕೇಳ್ದಳಿಂತೆನುತಾ ॥೧೮॥

**ರಾಗ ಜಂಜೂಟಿ ರೂಪಕತಾಳ**

(ಬಾರನ್ಯಾಕೆ ಮಾರಜನಕ ಎಂಬಂತೆ)
ಇಂದಿರೇಶ ಪೋಪುದೆಲ್ಲಿ ಸುಂದರಾಂಗನೆ ।
ಸಿಂಧುಶಯನ ಪೇಳೊ ಎನಗೆ ಮಂದಹಾಸನೇ ॥೧೯॥

ಶರಣರೆನ್ನ ಸ್ಮರಿಸುತಿಹರು ಸರಸಿಜಾಕ್ಷಿಣಿ ।
ತೆರಳಬೇಕು ಪೊರೆಯಲವರ ಮಧುರಭಾಷಿಣಿ ॥೨೦॥

ಯಾರ ನಿನ್ನ ಭಜಿಪರದನು ವಾರಿಜಾಕ್ಷನೇ ।
ನಾರಿಯೊಡನೆ ಪೇಳಬಾರದೇನೋ ರಮಣನೇ ॥೩೧॥

ಮನದೊಳೊಂದು ಕಾರ್ಯವೆಣಿಸಿ ಇನಜ ಪುತ್ರನು ॥
ವನರುಹಾಕ್ಷಿ ನಾಗಪುರದಿ ನೆನೆಸುತೀರ್ಪನು ॥೩೨॥

ಎಂಥ ಕಾರ್ಯವಪ್ಪುದಲ್ಲಿ ಕಂತುಜನಕನೇ ॥
ಸಂತಸದಲಿ ಪೇಳು ಎನಗನಂತಮಹಿಮನೆ ॥೩೩॥

ತೆರಳದಲ್ಲಿ ಒರೆವುದೆಂತು ಸರಸಿಜಾಕ್ಷಿಯೆ ॥
ತ್ವರೆಯೊಳೈದಿ ಬರುವೆನೀಗಳುರಗವೇಣಿಯೆ ॥೩೪॥

**ರಾಗ ಮಧುಮಾಧವಿ ತ್ರಿವುಡೆತಾಳ**

ಪರಮ ಪುರುಷನಿಗರಿಯದಾವುದು । ಧರಿಸಿರುವ ಬ್ರಹ್ಮಾಂಡವೆಲ್ಲವ ।
ತರಣಿ ಎನ್ನೊಳು ಪೇಳೆ ನಿನಗಹ । ಕೊರತೆಯಿನ್ನೇನೆಂದಳು ॥೩೫॥

ಚಂದಿರಾನನೆ ಕೇಳು ಧರ್ಮಜ । ಬಂಧುಹತ್ಯಾದೋಷ ಪರಿಹರ ।
ಕೆಂದು ಯಾಗಾಲೋಚನೆಯ ಕೊಳ । ಲಿಂದು ಸ್ಮರಿಸಿಹನೆನ್ನನು ॥೩೬॥

ಆಗಲೊಳ್ಳಿತು ರಮಣ ಬೇಗದಿ । ಪೋಗಿಬಾರೆಂದೆರಗಲಿನಿಯಳ ।
ನಾಗಶಯನನು ಮನ್ನಿಸುತ ಯಮ । ಜಾತನೆಡೆಗೈತಂದನು ॥೩೭॥

**ಕಂದ**

ದನುಜಾರಿಯ ಕಂಡಾಕ್ಷಣ ।
ಭಾನುಜಸುತನೆದ್ದು ತನ್ನ ಸಹಜಾದಿಗಳಿಂ ।
ವಿನಯದಿ ಮನ್ನಿಸಿ ಕುಳ್ಳಿರೆ ।
ಚಿನುಮಯನುಸುರಿದನು ಧರ್ಮ ಜಾತನೊಳಾಗಳ್ ॥೩೮॥

**ರಾಗ ಮಧ್ಯಮಾವತಿ ಅಷ್ಟತಾಳ**

ಹರಿಯೆಂದನಾಗ ಧರ್ಮಜ ಕೇಳೊ ನಿನಗೆ ॥
ಸರಿಯಿಲ್ಲೈಶ್ವರ್ಯದಿ ಮೂರ್ಲೋಕದೊಳಗೆ ॥
ಕಿರಿಯರೆಲ್ಲರು ನಿನ್ನ ಕಾರ್ಯಭಾಗವನು ।
ವಿರಚಿಸುವರು ಕುಂದು ಕೊರತೆಗಳೇನು ॥೩೯॥

ಘನ ಸಂಕಟವನಿತ್ತ ಅತಿಗಳೆಲ್ಲ ।
ತನುವಳಿದರು ಶತ್ರುಗಳ ಬಾಧೆಯಿಲ್ಲ ॥

ವನಕೈದಿ ಮೃಗಬೇಟೆಯಾಡುವುದಿಲ್ಲ ।
ಮನದಣಿಕೆಯ ಕಾರ್ಯ ಸಾಗುವದಲ್ಲ ॥೪೦॥

ಚಿನುಮಯ ಕೇಳಿಂಥ ಹಾಸ್ಯ ಮಾತುಗಳು ।
ಎನಗ್ಯಾಕೆ ಸಕಲವನರಿತಿಹೆ ನೀನು ॥
ಮುನಿಪ ವ್ಯಾಸರು ನಿನ್ನೆ ದಿವಸದಿ ಬಂದು ।
ಅನುಕರಿಸಶ್ವಮೇಧವನು ನೀನೆಂದು ॥೪೧॥

ವಿರಚಿಸೆಗೋತ್ರಹತ್ಯಾದಿ ಪಾತಕವು ।
ಪರಿಹರವಹುದೆಂದಾಶ್ರಮಕೆ ಪೋಗಿಹರು ॥
ತುರಗವಿರ್ಪುದು ಭದ್ರಾವತಿಯ ರಾಜನೊಳು ।
ದೊರೆವುದು ಹಿಮಗಿರಿಯಲ್ಲಿ ವಿತ್ತಗಳು ॥೪೨॥

ಅನಿಲನಂದನ ತಾನು ತುರಗವತಹೆನು ।
ಎನುತ ಶಪಥವ ಗೈಯಲಿತ್ತೆನಾಜ್ಞೆಯನು ॥
ವನರುಹಾಕ್ಷನೆ ನಿನ್ನ ನಂಬಿ ನಾವಿದನು ।
ಅನುಕರಿಸಿದೆವು ದಯಾಂಬುಧಿ ನೀನು ॥೪೩॥

**ಭಾಮಿನಿ**
ದಾನವಾಂತಕ ಕೇಳಿ ನಸುನಗು ।
ತಾನರಾಧಿಪಗೆಂದ ನಿನಗಿ ।
ನ್ನೇನು ಭ್ರಾಂತಿಯೊ ಮುನಿಯ ವಚನದ ಮೋಹಕೊಳಗಾದೆ ॥
ಹಾನಿಗೈದಂತಲ್ಲ ಮಗಧನ ।
ತ್ರಾಣಿಯಾಗಿಹ ಯೌವನಾಶ್ವನಿ ।
ಗಾನುವನೆ ಈ ಭೀಮ ಕೋಪಿಯು ನಂಬಿಕೆಟ್ಟೆಯಲಾ ॥೪೪॥

**ರಾಗ ಕೇತಾರಗೌಳ ಅಷ್ಟತಾಳ**
ಅನಿಲಸುತನು ನ್ಯಾಯವಂತನಾಗಿರಲಂದು ॥
ದನುಜೆಯ ಕೂಡಿದುದು ॥
ಘನವಾಯ್ತೆ ನಿನಗೆನಲದಕೆ ವೃಕೋದರ
ವನಜಲೋಚನಗೆಂದನು ॥೪೫॥

ಹಿಂದೆ ನರಕ ದೈತ್ಯ ಬಂಧನದೊಳಗಿಹ ।
ಮಂದಗಮನೆಯರನು ॥
ಹೊಂದಿದೆ ದೇವಾಂಗನೆಯರೊ ರಕ್ಕಸಿಯರೊ ।
ಚಂದವೆ ನಿನಗೆಂದನು ॥೪೬॥

ನುಡಿವುದೇನೀಗ ಪೈಶಾಚಿಗಳಂದದಿ ।
ಕುಡಿದು ರಕ್ತವನು ನಿನ್ನ ॥
ಒಡಲ ತುಂಬಿದ ಭಂಡತನ ಸರಿಯಲ್ಲೆಂದು ।
ಜಡಜಾಕ್ಷ ಜರೆಯಲಾಗ ॥೪೭॥

ನಡತೆ ಹೆಚ್ಚಿನದಯ್ಯ ಕರಡಿಯ ಮಗಳನು ।
ಒಡಗೂಡಿ ಪೂತನಿಯ ॥
ಬಿಡದೆ ಜೀವವ ತೆಗೆದುರವ ತುಂಬಿಸಿಕೊಂಡೆ ।
ನುಡಿಯಲೇನಿನ್ನು ಭಾವ ॥೪೮॥

ಬಲ್ಲೆ ನಿನ್ನನು ಭಾವ ರಕ್ಕಸನನ್ನವ ।
ನೆಲ್ಲ ಭಕ್ಷಿಸಿದವನು ॥
ಕ್ಷುಲ್ಲಕತನಗೈವಗೀಕಾರ್ಯ ನಿನ್ನಿಂದ ।
ಸಲ್ಲದೆನ್ನುತ ಪೇಳ್ದನು ॥೪೯॥

ನುಡಿಗೆ ತಪ್ಪದೆ ಮಖದಶ್ವವ ತಂದೀವೆ ।
ತೊಡಗಿದ ಕಾರ್ಯವನು ॥
ಬಿಡುವದು ನಡದುವುದೆಲ್ಲವು ನಿಮ್ಮಯ ।
ಕಡೆಗೆ ಸೇರಿಹುದೆಂದನು ॥೫೦॥

**ಭಾಮಿನಿ**
ಎಂದೆನಲು ನಸುನಗುತಲಾ ಗೋ ।
ವಿಂದ ಪೇಳಿದ ತೆರಳು ವಾಜಿಯ ।
ತಂದುಕೊಡು ಮಿಕ್ಕಿರ್ಪ ಕಾರ್ಯವ ಗೈವೆವಾವೆಂದ ॥
ನಂದನನು ವೃಷಕೇತ ತನ್ನಯ ।
ಕಂದನಾತ್ಮಜ ಮೇಘನಾದರ ।
ಮಂದಿಗಳನೊಡಗೂಡಿ ಹೊರಟನು ವಾಯುಕಂದ ॥೫೧॥

**ರಾಗ ಘಂಟಾರವ ಅಷ್ಟತಾಳ**
ಹರಿ ಯುಧಿಷ್ಠಿರರನುಮತಿಯಿಂದಲೆ ।
ತೆರಳಿದರು ಭದ್ರಾವತಿಗೆ ಮೂ । ವರು ಪಯಣಗತಿಯಿಂದಲಿ ॥೫೧॥

ಬಂದು ನೋಡುತ ರಾಯನುದ್ಯಾನವ ।
ಅಂದ ಚಂದವ ಕಂಡು ಪರಮಾ । ನಂದ ಪೂರಿತರಾದರು ॥೫೨॥

ಬರುವ ವಾಜಿಗಳೆಲ್ಲವ ಪರಿಕಿಸಿ ।
ತಿರುಗಿದರು ಸುತ್ತೆಲ್ಲ ಯಾಗದ । ತುರಗವೆಲ್ಲಿಯು ಕಾಣದೆ ॥೫೩॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಎಲ್ಲವರು ಯೋಚಿಸುವ ಸಮಯದಿ । ಚಲ್ವವಾಜಿಯದೊಂದು ದೂರದಿ ।
ಮೆಲ್ಲಮೆಲ್ಲಗೆ ಬರುತಿಹುದ ತಾ । ವಲ್ಲಿನೋಡಿ ॥೫೪॥

ಪರಿಪರಿಯ ಶೃಂಗಾರಗೈದಿಹ । ತುರಗರಕ್ಷೆಗನೇಕ ಜನಗಳು ।
ಮೆರವಣಿಗೆಯಿಂ ಬರುವದನಿಲಜ । ಕಂಡನಾಗ ॥೫೫॥

ತೋರೆ ವೃಷಕೇತನಿಗೆ ತನ್ನ ಕು । ಮಾರನಾತ್ಮಜನಿಂಗೆ ತುರಗವ ।
ಭೂರಿ ವಿಕ್ರಮಿ ಮೇಘನಾದನು । ಶೌರ್ಯದಿಂದ ॥೫೬॥

ಅನುಮತಿಯ ನೀಡೆನಗೆ ವಾಜಿಯ । ಕ್ಷಣದಿ ತಹೆನೆನುತಾಜ್ಞೆಗೊಂಡಾ ।
ದನುಜೆಯಾತ್ಮಜ ಬಂದು ಮಾಯಕ । ವೆಸಗುತಾಗ ॥೫೭॥

ಸಂಗಡಿಹ ಮಂದಿಗಳನೆಲ್ಲವ । ಭಂಗಪಡಿಸುತ ವೇಗದಿಂದ ತು ।
ರಂಗವನ್ನಾಗಸದ ಮಾರ್ಗದಿ । ತಂದನಾಗ ॥೫೮॥

ಪವನಸುತನೆಡೆ ಸೇರಿರಲು ತುರ । ಗವನು ರಕ್ಷಿಪ ಚಾರರೈತಂ ।
ದವನಿಪಾಲಕನಿಂಗೆ ಪೇಳ್ದರು । ಭೀತಿಯಿಂದ ॥೫೯॥

**ರಾಗ ಕಾಂಭೋಜಿ ಝಂಪೆತಾಳ**

ಧಾರುಣಿಪ ಕೇಳಿಂದು ಚಾರುತರದಶ್ವವನು ।
ಗಾರುಗೆಡಿಸುತಲೆಮ್ಮ ನಿಂದು ॥
ವೀರಾಗ್ರಣಿಗಳೊದರಾರೆಂಬುದರಿಯೆವೆನೆ ।
ಭೂರಿಕೋಪಾಟೋಪದಿಂದ ॥೬೦॥

ಆರಾದಡೇನವರನೀಗ ಮರ್ದಿಸಿ ಹಯವ ।
ಘೋರನಿಲ್ಲಿಗೆ ತರುವಡೆಲ್ಲ ॥
ಶೂರರೆದ್ದೇಳಿರೆನೆ ಕೇಳುತವನಿಪನ ಸುಕು ।
ಮಾರಕ ಸುವೇಗನಿಂತೆಂದ ॥೬೧॥

ತಾತ ನೀಡೆನಗಾಜ್ಞೆ ನಾ ತೆರಳಿ ರಿಪುಬಲವ ।
ನೀತತೂಕ್ಷಣ ಧುರವನೆಸಗಿ ॥
ಭೂತಲಕೆ ಕೆಡಹಿತಹೆನಶ್ವವೆಂದನ್ನಲಾ ।
ಜಾತನಿಂಗೆಂದ ಭೂಪಾಲ ॥೬೨॥

ನಾನು ಬಹೆನೆಲ್ಲವರು ಪೋಗಬೇಕೆಂದೆನುತ ।
ಸೇನೆ ಸಮುದಾಯಂಗಳಿಂದ ॥

ಕ್ಷೋಣಿ ಕಂಪಿಸುವ ತೆರದಿಂದ ಸಮರಕೆ ಬಂದ ।
ರೇನೆಂಬೆನವರ ಸಾಹಸವ ॥೬೩॥

ಇತ್ತ ಪವನಜನರಿತು ಪೇಳ್ದ ವಾಜಿಯನು ಕಾ ।
ಯುತ್ತಲಿಹುದೆಂದು ಪೌತ್ರನಿಗೆ ॥
ಸುತ್ತಿ ಬರುತಿಹ ಸುವೇಗನೊಳು ತೀವ್ರದಿ ಸಮರ ।
ಕೊತ್ತಿ ನಡೆಯಲು ಕಾಣುತೆಂದ ॥೬೪॥

೭

**ರಾಗ ಶಂಕರಾಭರಣ ಮಟ್ಟೆತಾಳ**
ಎಲ್ಲಿಗೊಯ್ವೆ ನಮ್ಮ ಹಯವ ಕಳ್ಳರಂದದಿ ।
ನಿಲ್ಲು ಸಮರಕೀಗ ನೋಳ್ಪೆನೆನುತ ಶೌರ್ಯದಿ ॥
ಬಿಲ್ಲಿಗೇರಿಸುತ್ತ ಶರವ ಬಿಡಲು ತೀವ್ರದಿ ॥
ಹಲ್ಲಗಡಿವುತಾಗ ಪವನಜಾತ ಕೋಪದಿ ॥೬೫॥

ಧುರಕೆ ಸರಿವರಲ್ಲವೆನುತ ಶರವ ಕಡಿದನು ।
ಮರಳಿ ನಾಲ್ಕು ಕಣೆಯ ಭೂಪತರಳಗೆಚ್ಚನು ॥
ಸರಿಸಮಾನತೆಯಲಿ ಕಲಹವೆಸಗಲಿತ್ತಲು ।
ಭರದಿ ಬಂದ ಯೌವನಾಶ್ವ ಸಮರಕಾಗಳು ॥೬೬॥

ಪೊಡವಿಪತಿಗೆ ಸಮರಗೊಡಲಿಕಿನಜ ಜಾತನು ।
ಫಡಫಡೆನುತ ನಿಲಲು ನೋಡುತೆಂದ ಭೂಪನು ॥
ಹುಡುಗನ್ನೈಸೆ ನಿನ್ನೊಳ್ಯಾಕೆ ಖಡುಗ ಸದನಕೆ ।
ನಡೆವುದುಚಿತವೆನಲು ಪೇಳ್ದ ಯೌವನಾಶ್ವಗೆ ॥೬೭॥

ಹರಿಯು ಚಿಕ್ಕದಾದರೇನು ಕರಿಗೆ ಸೋಲ್ವುದೇ ।
ಧುರವನರಿತನೆನ್ನ ಗೆಲಲು ನಿನ್ನೊಳಾಹುದೆ ॥
ತುರಗದಾಸೆ ಇರಲು ಧರಿಸು ಧನುವನೆನ್ನುತ ॥
ಸರಳ ಮಳೆಯ ಕರೆದನಾಗಳರ್ಕಜನಸುತ ॥೬೮॥

**ಭಾಮಿನಿ**
ಈ ತೆರದಿ ಕಾದುತಿರೆ ಭಾನುಜ ।
ಜಾತ ನವನಾರಾಚ ಬಿಡುವೆನು ।
ಆತುಕೊಳ್ಳೆನುತೆಸೆಯೆ ಭೂಪತಿಯುರವ ಭೇದಿಸಲು ॥
ಭೂತಲದಿ ಮೈಮರೆಯೆ ಕರ್ಣಜ ।

ಸೋತವನ ತಾ ಬಂದು ನುಡಿಸಿದ ।
ಮಾತನಾಡದಿರಲ್ಕೆ ಜನಪನ ಮೇಲೆ ದಯವುದಿಸಿ ॥೬೯॥

**ಕಂದ**

ಸಿರಿರಮಣನ ದಯವೆನಗಿರೆ ।
ಧರಣಿಪನೆಚ್ಚರಿಸಲೆನುತ ಕರವಾಡಿಸಲಾ ॥
ತೆರೆದಕ್ಷಿಯ ನೋಳ್ಪುದ ತಾ ।
ಪರಿಕಿಸಿ ನಿಜರಥವನಡರಿ ಧುರಕನುವಾಗಲ್ ॥೭೦॥

**ರಾಗ ಮಾಯಾಮಾಳವಗೌಳ ರೂಪಕತಾಳ**

ಧಾರುಣಿಪತಿಯೆದ್ದು ನೋಡಿದ ಸುತ್ತಲು ।
ಯಾರು ತನ್ನುಪಚರಿಸಿದರು ॥
ಬೇರೊಬ್ಬರಿಲ್ಲ ನಮ್ಮವರಿಲ್ಲಿ ಮುಂದೀರ್ಪ ।
ವೀರ ಬಾಲಕನೆಂದು ತಿಳಿದ ॥೭೧॥

ಧುರವಗೈಯುವ ಮನವಿಲ್ಲವೆನಗೆ ಇಂದು ।
ಅರಿವೆನೀತನ ಮೂಲವೆನುತ ॥
ಸರಿಸಕೆ ನಿಂತುಕೇಳಿದ ನಿನ್ನ ಪುರವಾವು ।
ದರುಹು ನೀನಾರೆಂಬ ಪರಿಯ ॥೭೨॥

ಮೂರು ಲೋಕದಿ ಗೆಲ್ಲುವವರ ಕಾಣೆನು ನಾನು ।
ಶೂರ ನಿನಗೆ ದಯವೇಕೆ ॥
ಕಾರಣವೆಲ್ಲ ಪೇಳೆನಲರ್ಕಜಾತಕು ।
ಮಾರನು ಜನಪಗಿಂತೆಂದ ॥೭೩॥

**ರಾಗ ಕೇದಾರಗೌಳ ಝುಂಪೆತಾಳ**

ದಿನಪಸುತ ಕಲಿಕರ್ಣನು । ಆತನಿಗೆ । ತನಯನಾದ ವೃಷಕೇತನು ॥
ಚಿನುಮಯನ ಕಾರುಣ್ಯದಿ । ಹಯಮೇಧ । ವನುಕರಿಪ ಯಮಜ ಮುದದಿ ॥೭೪॥

ತುರುಗವಿದೆ ನಿನ್ನೊಳೆಂದು । ಕಳುಹಿದನು । ಮರುತಸುತನೊಡನೆ ಇಂದು ॥
ತ್ವರಿತದಿಂದೊಯ್ವೆವಾವು । ನಿನ್ನ ಮನ । ದಿರವಿದೇನೆಂದು ಪೇಳು ॥೭೫॥

ಎಲೆಕುವರ ಇಲ್ಲಿವರೆಗೆ । ಈ ವಿಷಯ । ತಿಳುಹಲಿಲ್ಲೇತಕೆಮಗೆ ॥
ನೆಲೆಯರಿಯದಿಂದು ನಾವು । ನಿಮ್ಮೊಡನೆ । ಕೊಳಗುಳವ ಗೈದಿರ್ಪೆವು ॥೭೬॥

ಭೂತಲದ ಧರ್ಮವೆಲ್ಲ । ಕೂಡಿ ಸಂ । ಜಾತನಾಗಿಹ ಧರ್ಮಜ ॥
ಆತಗಚ್ಚುತನ ದಯೆಯು । ಇರೆ ಹಯವ । ಪ್ರೀತಿಯಿಂ ಕೊಡುವೆವಾವು ॥೭೭॥

**ಭಾಮಿನಿ**

ಎಲ್ಲಿರುವ ನಾ ಭೀಮನೆಂದೆನ ।
ಲಲ್ಲಿ ಸಮರವ ಮಾಳ್ಪನೆನ್ನಲು ।
ನಿಲ್ಲಿಸುವದೀಕ್ಷಣವೆನುತಲೀರುವರು ನಡೆತಂದು ॥
ಸಲ್ಲದಿನ್ನೀ ಧುರವ ಬಿಡಿರೆನು ।
ತೆಲ್ಲವಿಷಯವನರುಹಿ ಭೂಮಿಪ ।
ನುಲ್ಲಸದಿ ಪೇಳಿದನು ಮಾರುತಿಯೊಡನೆ ಮನದಿರವ ॥೭೮॥

**ರಾಗ ಶಂಕರಾಭರಣ ಏಕತಾಳ**

ಮರುತಜಾತ ಕೇಳು ನೀವು । ವಿರಚಿಸುವ ಮಖಕೆ ಹರಿಯ ।
ನೆರವೀರ್ದಡೀವೆನು ಎನ್ನ । ತುರಗವಲ್ಲದೆ ॥೭೯॥

ಭರಿತದ್ರವ್ಯವಸ್ತುವೆಲ್ಲ ಸಿರಿಯಕಾಂತಗಿತ್ತು ಬರುವೆ ।
ತೆರಳುವದೆಂದೆಲ್ಲರಿಭ । ಪುರಿಗೆ ಬಂದರು ॥೮೦॥

ಇಂದಿರೇಶನಡಿಯೊಳಿಟ್ಟು । ವಂದಿಸಿದರೆಲ್ಲವಿವರ ।
ದಿಂದಲರುಹೆ ಕೇಳುತಲಾ । ನಂದಗೊಂಡಿರೆ ॥೮೧॥

**ಭಾಮಿನಿ**

ಮಂದರಾದ್ರೀಧರನು ಯಮಜನೊ ।
ಳೆಂದ ನೀನಾಚರಿಪಯಾಗಕೆ ।
ಬಂದುದಿಲ್ಲ ಮುಹೂರ್ತವಿದೆ ಪನ್ನೊಂದು ತಿಂಗಳವು ॥
ಇಂದು ದ್ವಾರಕೆಗೈದಿ ಬಹೆನೀವ್ ।
ತಂದಿರಿಸಿ ವಿತ್ತಾದಿ ವಸ್ತುಗ ।
ಳೆಂದೆನುತ ನೆರೆ ತಿಳುಹಿ ನಿಲಯಕೆ ತೆರಳ್ದನಸುರಾರಿ ॥೮೨॥

**ವಾರ್ಧಕ**

ಇತ್ತಲ್ಯಮನಂದನಂ ಸಹಜಾದಿ ಸೇನೆಗಳ ।
ಮೊತ್ತದೊಡನೈದಿ ಹಿಮಗಿರಿಯೊಳಿಹ ನಿಧಿಗೆ ಬಹ ।
ಳುತ್ತಮೋತ್ತಮ ವಿಧಾನದಿ ಪೂಜೆಯಂಗೈದನತ್ಯಧಿಕ ಭಕ್ತಿಯಿಂದ ॥
ವಿತ್ತರಾಶಿಗಳ ತಾನೆಲ್ಲ ವಾಹನಗಳಿಂ ।
ಪೊತ್ತು ತಂದಿರಿಸಿ ಕೆಲದಿನಗಳೆಯೆ ಧರ್ಮಜಂ ।
ಋತ್ವಿಜರ್ಗಾಮಂತ್ರಣವನಿತ್ತು ಬಹದ್ವಿಜರ ಮನ್ನಿಸುತಲೀರ್ದ ಪುರದಿ ॥೮೩॥

**ರಾಗ ಕಾಂಭೋಜಿ ಝಂಪೆತಾಳ**

ಇರಲಿತ್ತ ವ್ಯಾಸಮುನಿಪತಿ ಬರಲು ಧರ್ಮಜನು ।
ಹರುಷದಿಂದೆದ್ದು ಪದಕೆರಗಿ ॥

ಕರವಿಡಿದು ತಂದು ಕುಳ್ಳಿರಿಸುತುಪಚಾರದಿಂ ।
ಪುರವು ಪಾವನವಾದುದೆಂದ ॥೮೪॥

ಇಂದುಕುಲಜನೆ ಕೇಳು ಹಿಂದೆ ಪೇಳಿಹ ಮಖಕೆ ।
ಬಂದುದು ಮುಹೂರ್ತ ಸನಿಹದಲಿ ॥
ತಂದಿಹೆಯೊ ಧನವ ಹಿಮಗಿರಿಯಿಂದ ಮೌನಿಗಳು ।
ಬಂದರೋ ಕೃಷ್ಣಗರುಹಿದೆಯೋ ॥೮೫॥

ಎಂದನ್ಯಮಜಾತವಿತ್ತಗಳ ತರಿಸಿಹೆವು ದ್ವಿಜ ।
ವೃಂದಕಾಮಂತ್ರಣವಿತ್ತಿಹೆನು ॥
ಇಂದು ಕಳುಹುವೆ ವೃಕೋದರನ ದ್ವಾರಾವತಿಗೆ ।
ಇಂದಿರಾವರನ ಕರೆವುದಕೆ ॥೮೬॥

**ಭಾಮಿನಿ**
ಬಂದಿಹರು ಮೌನಿಗಳು ತವಕೃಪೆ ।
ಯಿಂದ ದೊರೆತಿಹುದೆಲ್ಲ ವಸ್ತುಗ ।
ಳೆಂದೆನುತ ಪವನಜನ ಕರೆವುತ ಪೇಳ್ದನ್ಯಮಸೂನು ॥
ಇಂದು ದ್ವಾರಕೆಗೈದಿ ಹರಿಯನು ।
ಬಂದ ಮಖಕೆಲ್ಲವರ ಸಂದಣಿ ।
ಯಿಂದ ಕರತಹುದೆನೆ ವೃಕೋದರ ಕೇಳಿ ಸಂತಸದಿ ॥೮೭॥

**ರಾಗ ಕೇತಾರಗೌಳ ಅಷ್ಟತಾಳ**
ವಂದಿಸಿ ಯಮನಜನಿಂದಪ್ಪಣೆಗೊಳ್ಳುತ ।
ಮಂದಿಗಳೊಡನೆ ತಾನು ॥
ಮುಂದೆ ಸಂಭ್ರಮವ ನೋಡುತ ಪಯಣದಮೇಲೆ ।
ಬಂದ ದ್ವಾರಾವತಿಗೆ ॥೮೮॥

ರಾಜಬೀದಿಯೊಳ್ಪರಿವಾರವನುಳಿದು ತಾ ।
ರಾಜಿಸುವರಮನೆಯ ॥
ರಾಜೀವಾಕ್ಷನ ಭೋಜ್ಯಶಾಲೆಗೈದಲು ಮತ್ತೆ ।
ಸೋಜಿಗವೆನೆಂಬೆನು ॥೮೯॥

ದ್ವಾರಕಪುರದಿ ರಮಾಧವ ಸತಿ ಪರಿ ।
ವಾರ ಬಂದುಗಳೊಡನೆ ॥
ಸೇರಿ ಮೃಷ್ಟಾನ್ನ ಭೋಜನ ಗೈವುತಿರಲೋರ್ವ ।
ಚಾರ ಬಂದೆರಗಿದನು ॥೯೦॥

**ಭಾಮಿನಿ**

ವನರುಹಾಕ್ಷನೆ ಕೇಳು ಬಾಗಿಲೊ ।
ಳನಿಲ ಸಂಭವ ಬಂದುನಿಂದಿಹ ।
ನೆನುತ ತೆರಳಲು ಮಾಧವನು ಯೋಚಿಸಿದ ಮನದೊಳಗೆ ॥
ಘನ ವಿನೋದವ ಗೈವೆ ಭಾವಗೆ ।
ಚಿನುಮಯನು ಭುಂಜಿಸುವ ಸಮಯ ವಿ ।
ದನುಚಿತವು ಪೇಳಿನುತ ದೂತಿಯ ಕರೆದು ಪೇಳಿದನು ॥೯೧॥

**ಕಂದ**

ತಿಳುಪಲ್ ದೂತಿಯು ಬಂದಾ ।
ನಿಲಸುತನಿಗೆ ಸಮಯವಿಲ್ಲ ಲಕ್ಷ್ಮೀರಮಣಂ
ನಲವಿಂದಾಪ್ತರು ಸಹಿತಲೆ ।
ಕುಳಿತಿಹ ಭೋಜನಕೆ ಸ್ವಲ್ಪ ತಾಳ್ಮೆ ಭೀಮಾ ॥೯೨॥

**ರಾಗ ಮಾರವಿ ಏಕತಾಳ**

ದೂತಿಯೆ ಕೇಳೀಗೂಟದ ಸಮಯವೆ । ಭೂತಗಳಡರಿಹುದೇ ॥
ಮಾತುಗಳಿಲ್ಲದೆ ಮೌನದೊಳೀರ್ಪುದಿ । ದೇತರ ಕೌತುಕವು ॥೯೩॥

ಮಾರಮಣಗೆ ತಾಯಿಲ್ಲವೆ ತನ್ನಯ । ನಾರಿಯರಡಗಿಹರೇ ॥
ಯಾರಿತ್ತರು ನಿನಗಾಜ್ಞೆಯನಲ್ಲಿಗೆ । ಬಾರದೆನುವಹಾಗೆ ॥೯೪॥

ಸದನಕೆ ಬಂದವರಿಂಗುಪಚರಿಸದೆ । ವಿಧುಮುಖಿಯರ ಕೂಡಿ ॥
ಮದನವಿಲಾಸದೊಳಿಹನಿಗೆ ದೊರೆತನ । ಒದಗಿದುದನುಚಿತವು ॥೯೫॥

ದೇವತ್ವವನುಳಿದೀಗಳೆ ಮಾನವ । ಜೀವನವಿದು ಘನವೇ ।
ಆವನು ಸೈರಿಪನೆನುತ ವಿಭಾಡಿಸ । ಲಾವನಜಾಕ್ಷನಿಗೆ ॥೯೬॥

**ಭಾಮಿನಿ**

ಪವನಜನ ಖತಿಯರಿತು ಲಕ್ಷ್ಮೀ ।
ಧವನು ಮತ್ತೋರುವನ ಕಳುಹಿದ ।
ತವಕದಿಂ ಬರಹೇಳು ಭೀಮನನೆನಲು ಸೂಚಿಸಿದ ॥
ಅವಿತುಕೊಂಡಿಹ ಕೋಪದಿಂ ಬರೆ ।
ಜವದೊಳೇಳುತಲಾಗ ಮಾಧವ ।
ನವನೊಳೆಂದನು ಮುಗುಳು ನಗೆಯಿಂ ಕೋಪವಿಳಿವಂತೆ ॥೯೭॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಬಂದೆಯಾ ಕಲಿಭೀಮ ನಿನಗಾ | ನಂದವೆ ಧರ್ಮಜಗೆ ಕುಶಲವೆ |
ಮಂದಿ ಪರಿವಾರಗಳು ಸುಖಿಗಳೇ | ನಿಂದು ಪೇಳು ||೯೮||

ಸಾಕು ನಿನ್ನಯ ಮಾನವಿದಿರಿನೊ | ಳ್ಯಾಕೆ ಬಾಗಿಲೆಳೆನ್ನನಿಲಿಸಿದೆ |
ನಾಕ ಪತಿಸುತಗಿಹುದು ಮನ್ನಣೆ | ಬೇಕೆ ನಮಗೆ ||೯೯||

ಮಾಧವನು ನಗುತೆಂದ ನಿಮ್ಮೊಳು | ಭೇದವಿಹುದೇನೀಗಳೊಂದುವಿ |
ನೋದ ಮಾಡಿದೆ ಸೈರಿಸೈ ಕಲಿ | ಭೀಮ ನೀನು ||೧೦೦||

ಬಂದು ಸೆರಗನು ಪಿಡಿದು ತಾ ಕರೆ | ತಂದು ಭೋಜನವಿಕ್ಕಿಸುತಲಾ |
ನಂದದಿಂದುಪಚರಿಸಲನಿಲಜ | ಹೊಂದಿಮುದವ ||೧೦೧||

ಇಂದಿರಾಧವ ಕೇಳು ನಿನಗಾ | ನೆಂದ ನುಡಿ ದೋಷಗಳ ಪಾಲಿಪು ||
ದೆಂದೆರಗೆ ಶಿರವೆತ್ತಿ ಕೇಳಿದ | ಬಂದಹದನ ||೧೦೨||

**ವಾರ್ಧಕ**

ವನಜಾಕ್ಷ ಲಾಲಿಸಾದೊಡೆ ಯುಧಿಷ್ಠಿರ ಗೈವ |
ಘನವಾದ ವಾಜಿ ಮೇಧಾಧ್ವರ ಸಮೀಪಿಸಿತು |
ಮುನಿಗಳೈತಂದಿಹರು ನಿಮ್ಮ ಸಕುಟುಂಬದೊಡಕರತರಲ್ ನೇಮಿಸಿದನು ||
ಎನೆಕೇಳ್ದುಮಾರಮಣನಧಿಕ ಸಂತೋಷದಿಂ |
ಜನನಿ ಜನಕರಿಗರುಹಿ ಸಕಲಸನ್ನಾಹದಿಂ |
ವನಿತೆಯರನೊಡಗೊಂಡು ಪುರದ ಬಾಧ್ಯತೆಯ ಬಲರಾಮಪಿತರಿಂಗರುಹಿದ ||೧೦೩||

**ಭಾಮಿನಿ (ಅರ್ಧ)**

ಬರುವನಕ ರಕ್ಷಿಸುವದೆನ್ನುತ |
ಲೆರಗುತಾಜ್ಞೆಯಗೊಂಡು ವೇಗದಿ |
ತೆರಳಿ ಬರೆ ಪಯಣವನು ಮಾಡುತ ಹಸ್ತಿನಾಪುರಿಗೆ ||೧೦೪||

**ರಾಗ ಕಾಪಿ ಅಷ್ಟತಾಳ**

ಕಂಡನು ಧರ್ಮಜನಾಗ | ಬಹ | ಪುಂಡರೀಕಾಕ್ಷನ ಬೇಗ |
ತಂಡತಂಡದಿ ಬರುತಿರವಲರಿಂಗೆ ಉ |
ದ್ದಂಡವಂದನೆ ಗೈವುತಿರಲತಿ ವಿನಯದಿ ||೧೦೫||

ತರುಣಿಯರಿಂಗೆ ದ್ರೌಪದಿಯು | ಉಪ | ಚರಿಸೆ ಸುಭದ್ರೆ ಎಲ್ಲವರು |
ಭರಿತ ಮೃಷ್ಟಾನ್ನ ಭೋಜನದೊಳೆಲ್ಲರ ತೃಪ್ತಿ |
ಕರಿಸಿ ಕುಳ್ಳಿರಲೆಂದ ಮುರಹರನ್ಯಮಜಗೆ ||೧೦೬||

ತರಿಸು ವಾಜಿಯನಿಲ್ಲಿಗೀಗ | ವಸ್ತ್ರಾ | ಭರಣಗಳಿಂದಲಿ ಬೇಗ |
ಭರಿತಶೃಂಗರಗೈಸಿ ಗಂಧ ಪುಷ್ಪಗಳಿಂದಾ |
ಚರಿಸಿ ಪೂಜೆಯ ಯಾಗ ಶಾಲೆಗೈದುವದೆನೆ ||೧೦೭||

ಮುರಹರನೆಂದ ರೀತಿಯೊಳು | ಮೇಧ | ತುರಗ ಶೃಂಗರಗೈವುತಿರಲು ||
ತರುಣಿ ಸತ್ರಾರ್ಜಿತ ಕುವರಿ ದ್ರೌಪದಿಯೊಳು |
ಕಿರುನಗೆಯಿಂದ ಪೇಳಿದಳೊಂದು ವಚನವ ||೧೦೮||

**ರಾಗ ಸಂವಾದ ಏಕತಾಳ**
ಹದಿನಾರುಸಾವಿರದೆಂಟು | ಸುದತಿವರ್ಗವೀರ್ದಡೆಮಗೆ |
ಮದನಪಿತನು ಸಿಲುಕನೀನೆ | ಮುದದೊಳೊಲಿಸಿದೆ ||೧೦೯||

ಹರಿಯಕರುಣವಿರದಿರೆನ್ನ | ಪೊರೆವರಾರುಮಾನಗಳೆದ |
ಪರಿಯನರಿತು ರಕ್ಷಿಸಿದ | ಪರಮ ಪುರುಷನು ||೧೧೦||

ಪತಿಗಳೈವರಿಂಗೆ ನೀನು | ಹಿತದೊಳೀರ್ಪ ನಿನ್ನೊಳಾವ |
ಸತಿಯರು ಮಾತಾಡೆ ಭಯವು | ಚತುರೆ ಲಾಲಿಸು ||೧೧೧||

ಪಾರಿಜಾತ ನೋಂಪಿಗಾಗಿ | ನಾರದನಿಗಿತ್ತೆ ಪತಿಯ |
ಮಾರಜನಕನ್ಯಾಕೆ ನಿಮಗೆ | ವಾರಿಜಾಕ್ಷಿಯೇ ||೧೧೨||

**ಕಂದ**
ತರುಣಿಯರೀಪರಿ ವಾದಿಸು |
ತಿರಲನಿತರೊಳ್ಮಖದ ಹಯವ ಪೂಜಿಸಿ ಭಕ್ತಿಯೊ |
ಳಿರುತಿರೆ ಗಂಗಾತಟದೋಳ್ |
ಅರುಹುವೆ ಮುಂಗಥೆಯ ಲಾಲಿಸೈ ಭೂಪಾ ||೧೧೩||

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಜನಪಕೇಳನುಸಾಲ್ವನೆನ್ನುವ | ದನುಜ ಸೌಭಾಪುರದಿ ರಾಜ್ಯವ |
ಘನ ಪರಾಕ್ರಮದಿಂದಲಾಳು | ತ್ತಿರಲು ಕೇಳು ||೧೧೪||

ಚದುರಮಂತ್ರಿ ಸುಧಾರಮತ್ತಾಗ | ವಿಧವಿಧದ ಮಾಯಾವಿದನುಜರು |
ಕದನ ಕಲಿಗಳು ಸಹಿತಲೊಪ್ಪಿ | ಸಭೆಯೊಳಾಗ ||೧೧೫||

ಬಂದು ಚರನೋರುವನು ಖಳನಿಂ | ಗೊಂದಿಸುತ ತಾನಾಗ  ಗಜಪುರ ||
ದಿಂದ ಬಂದಿಹೆ ನೀರ್ಪುದೈ ನಿನ | ಗೊಂದು ವಾರ್ತೆ ||೧೧೬||

ವರಯುಧಿಷ್ಠಿರನಶ್ವಮೇಧವ | ವಿರಚಿಪನು ಗಂಗಾತಟಾಕದಿ |
ಪರಿಪರಿಯ ಶೃಂಗಾರಗೈಯುವ | ರೊರೆವುದೇನು ||೧೧೭||

ಬಂದಿಹನು ಮುರಹರನು ಎಲ್ಲವ | ರಿಂದ ಮೇಲಧಿಕಾರಿಯಾಗಿಹ |
ವಂದಿಸುತಲಿಹರೆಲ್ಲ ಪರಮಾ | ನಂದದಿಂದ ||೧೧೮||

**ರಾಗ ಕೇದಾರಗೌಳ ಝಂಪೆತಾಳ**

ಎಂದನುಡಿಯನು ಕೇಳುತ | ಮಂತ್ರಿಯೊಡ | ನೆಂದ ರೋಷವ ತಾಳುತ |
ಬಂದಿಹುದು ಸಮಯವೆನಗೆ | ಮುರಹರನ | ಕೊಂದಪೆನು ಸಮರದೊಳಗೆ ||೧೧೯||

ಅಣ್ಣ ಸಾಲ್ವನ ಕೊಂದನು | ಸೌಭಪುರ | ವನ್ನು ತಾದಹಿಸೀರ್ಪನು |
ಬೆನ್ನ ಬಿಡದೇ ಆತನ | ಪೋಗಿ ನಾ | ಮಣ್ಣಗೂಡಿಪೆ ಕೃಷ್ಣನ ||೧೨೦||

ತರುವೆ ಮಖದಶ್ವವನ್ನು | ಬಿಡಿಸಲ್ಕೈ | ತರುವರಾಪಾಂಡವರನು |
ಧುರದಿ ಗೆಲಿದರೆ ಕೃಷ್ಣನು | ಅಲ್ಲಿ ಬಹ | ಕೊರಳರಿಯದೆಂದು ಬಿಡೆನು ||೧೨೧||

**ರಾಗ ಘಂಟಾರವ ಅಷ್ಟತಾಳ**

ಎಂದು ಮಂತ್ರಿ ಸುಧಾರನೊಳೀಮಾತ |
ಬಂದನೋರ್ವನೆ ಜಾನ್ಹವೀತಟ | ಕೆಂದು ವೀರಾವೇಶದಿ ||೧೨೨||

ನಿಂದು ದೂರದಿ ಸುತ್ತಲು ನೋಡಿದ |
ಮಂದಿಗಳನಡುವೀರ್ಪ ತುರಗದ | ಚಂದವನ್ನುರೆ ಕಂಡನು ||೧೨೩||

ಪೋಗಿವಾಜಿಯ ಪಿಡಿದಂತರಿಕ್ಷದಿ |
ಸಾಗಿಸಿದನೊಂದರ್ಧ ನಿಮಿಷದಿ | ವೇಗವಿನ್ನೇನೆಂಬೆನು ||೧೨೪||

**೩**

**ಭಾಮಿನಿ**

ಖಳನು ತುರಗವ ತಂದು ಸೇನೆಯ |
ನಿಲಿಸಿ ಗೃಧ್ರಾಕಾರದಿಂದಲಿ |
ಚಲುವ ವಾಜಿಯನಿಟ್ಟು ಮಧ್ಯದಿ ಕರದಿ ಬಿಲುವಿಡಿದು ||
ಅಳವಿಗಾರೈ ತರುವರೆನ್ನುತ |
ಕಲಿತನದೊಳಿರಲಿತ್ತಲಶ್ವವ |
ಸೆಳೆದುಕೊಂಡ್ಯೆದಿರುವ ರಭಸಕೆ ಬೆದರಲೆಲ್ಲವರು ||೧೨೫||

**ರಾಗ ಸಾಂಗತ್ಯ ರೂಪಕತಾಳ**

ಈ ರೀತಿಯಿಂದಲಶ್ವವನೆಳದೊಯ್ಯಲು ।
ಗಾರುಗೆಟ್ಟಾಗ ಧರ್ಮಜನು ॥
ಮೂರುಲೋಕದೊಳಿಂಥ ಶೂರರ ಕಾಣೆನು ।
ಯಾರು ವೈರಿಗಳಿಹರ್ನಮಗೆ ॥೧೨೬॥

ಭರಿತ ಪ್ರಯತ್ನದಿ ತಂದೆವೀ ತುರಗವ ।
ಅರೆಕ್ಷಣದೊಳಗೊದನಲ್ಲ ।
ದೊರೆವುದೆ ಮಖವ ಮಾಳ್ಪುದ ಕಾಣೆನೆನ್ನುತ ।
ಪರಿಪರಿಯಿಂದಳಲಿದನು ॥೧೨೭॥

ಕೂಡಿದ ಸಭೆಯೊಳಗೆಲ್ಲ ಶೋಕಿಸುತಿರೆ ।
ನೋಡಿ ಮುರಾಂತಕನಾಗ ॥
ಬೇಡ ದುಃಖವ ನಿಮಗೇಳಿ ಪೇಳುವೆನಿದ ।
ಮಾಡಿದರಾರೆಂದು ನಿಮಗೆ ॥೧೨೮॥

**ರಾಗ ಕಾಂಭೋಜಿ ಝಂಪೆತಾಳ**

ಕೇಳಿರೈ ಪಿಂದೆನಾ ಸೌಭಾಪುರವನಾಳ್ವ ।
ಖೂಳ ಸಾಲ್ವನ ಕೊಂದೆನದಕೆ ॥
ಮೇಳವಿಸಿತವನನುಜನನುಸಾಲ್ವನೆಂಬ ಖಳ ।
ಕಾಳಗದಿ ಶೂರ ರಣಧೀರ ॥೧೨೯॥

ಘನ ಪರಾಕ್ರಮದಿಂದಲೈದ ತುರಗವನಿಂದು ।
ಸೆಣಸಿ ಸಮರದಿಗೆದ್ದು ತರುವ ।
ರಣಪರಾಕ್ರಮಿಗಳಾರಿರಲಿಲ್ಲ ಪೇಳಿರೆಂ
ದೆನಲಂಜುತೆಲ್ಲ ಕುಳಿತಿರಲು ॥೧೩೦॥

ಕರದಿ ವೀಳೆಯ ಪಿಡಿದು ಕೇಳುತಿರೆ ಸಭೆಯೊಳಗೆ ।
ತರಳ ಮೀನಾಂಕತಾನೆದ್ದು ॥
ಎರಗುತೆಂದನು ಧುರದಿ ಖಳನಗೆದ್ದಶ್ವವನು ।
ತರುವೆನಪ್ಪಣೆಯೀವುದೆಂದು ॥೧೩೧॥

ತಾರದಿರಲಾನುವೃಷಲೀರಮಣಗಹಗತಿಗೆ ।
ಸೇರುವೆನು ಪುಸಿಯಲ್ಲವೆನಲು ॥
ಮಾರಮಣನಾಗ ಕುವರಂಗೀಯೆ ವೀಳಯವ ।
ಧೀರ ವೃಷಕೇತನದ ಕಂಡಾ ॥೧೩೨॥

ಅಡಿಗೆರಗಿ ಮುರಹರನೊಳೆಂದನರ್ಕಜಪುತ್ರ ।
ದಡಿಗನನು ಕೆಡಹಿವಾಜಿಯನು ॥
ಬಿಡಿಸಿತರದಿರೆ ಶಪಥಗೈವೆ ನಿಮ್ಮಿದಿರಿನಲಿ ।
ಪಡೆವೆ ದ್ವಿಜಹನನ ಪಾತಕವ ॥೧೩೩॥

**ಭಾಮಿನಿ**

ಇನಿತು ಪಂಥವ ಗೈಯಲವರಿಗೆ ।
ಚಿನುಮಯನು ವೀಳಯವ ಕರುಣಿಸೆ ।
ಘನತರೋತ್ಸಾಹಸದೊಳೀರ್ವರು ಸಕಲ ಸನ್ನಹದಿ ॥
ಎಣಿಕೆಯಿಲ್ಲದ ಸೇನೆ ಗಜರಥ ।
ವನುಕರಿಸುತನುಸಾಲ್ವನಲ್ಲಿಗೆ ।
ರಣಕೆ ಮುಂದಿದಿರಾಗಿ ಬಹ ಸಮಶರನ ಕಂಡೆಂದ ॥೧೩೪॥

**ರಾಗ ಕಾಪಿ ಅಷ್ಟತಾಳ**

ಬಂದಾತನಾರ್ಯೆಯ ಧುರಕೆ । ಎನ್ನೊ ।
ಳಿಂದು ಶೌರ್ಯದಿ ಕಾದುವದಕೆ ।
ನಿಂದು ನೋಡುವೆ ನಿವನಂದವ ಚಂದವ ।
ಇಂದಿರೇಶನೊ ದಿವಿಜೇಂದ್ರ ನಂದನನೋ ॥೧೩೫॥

ಕರದಿ ಸುದರ್ಶನವಿಲ್ಲ । ಮತ್ತೆ ।
ಪರಿಕಿಸಿದರೆ ನಾಲ್ಕು ಭುಜದವನಲ್ಲ ।
ನರನಲ್ಲ ರಥದಿ ಕೋಡಗವಿಲ್ಲ ಮಕರದ ।
ಕುರುಹು ತೋರ್ಪುದು ಸುಮ ಶರವಿದೆ ಮನುಮಥ ॥೧೩೬॥

ಬರಲೀಗ ನೋಳ್ಪೆನೆಂದೆನುತ । ಮುಂದೆ ।
ತೆರಳಿ ಸೇನೆಯನಡ್ಡವಿಸುತ ।
ಧುರಕೆ ನಿಂದಿಹ ಖಳನನುಕಂಡು ಪೂಶರ ।
ಭರಿತ ರೋಷದಿ ಖಿಡಿಖಿಡಿಯಾಗುತಿಂತೆಂದ ॥೧೩೭॥

**ರಾಗ ಶಂಕರಾಭರಣ ಮಟ್ಟೆತಾಳ**

ಎಲವೊ ಖಳನೆ ನಮ್ಮ ಹಯವ । ಕಳವಿನಿಂದ ತಂದೆ ಯಾಕೊ ।
ಸಲುಗೆಯಿಂದ ಕೊಟ್ಟು ಜೀವ । ವುಳುಹಿಕೊಳ್ಳೆಲಾ ॥೧೩೮॥

ಕೊಡಲು ತಂದುದಿಲ್ಲಿ ನೀನು । ಹುಡುಗನೈಸೆ ನಿಲಯಕೈದಿ ।
ಜಡಜನೇತ್ರನನ್ನು ಕಳುಹೊ । ಸಮರವೀಯಲಿ ॥೧೩೯॥

ನಿನ್ನ ಗೆಲುವದ್ಯಾಕೆ ತಾತ । ನೆನ್ನ ಬಲುಹ ನೋಡೆನುತ್ತ ।
ಉನ್ನತಾಸ್ತ್ರವೆಸೆದನಾಗ । ಪನ್ನತಿಕೆಯೊಳು ॥೧೪೦॥

ವಿರಹಿಗಳಿಗೆ ನಿನ್ನ ಬಾಣ । ತರವೆಯನಗೆ ಮಾಳ್ಪುದೇನು ।
ಪರಿಕಿಸೆನುತಲೆಸೆಯ ಕ್ರೂರ । ಶರವ ನೊಂದನು ॥೧೪೧॥

ವಿರಹಿಗಳಿಗೆ ಬಿಡುವ ಶರದ । ಪರಿಯಿದಲ್ಲ ಬೇರೆಯೆನುತ ।
ಹರಿಯಜಾತನದರ ತುಂ । ಡರಿದ ಕ್ಷಣದೊಳು ॥೧೪೨॥

ತ್ರಿಣಯನನ್ನು ಕೆಣಕಿ ಹಿಂದೆ । ಫಣಿಯಕಿರಣದಿಂದಲುರಿದೆ ।
ರಣದೊಳೆನ್ನ ಕಣೆಯೊಳೊಂದು । ಕ್ಷಣವು ಬಾಳ್ವೆಯಾ ॥೧೪೩॥

ದನುಜರನ್ನು ಬಲ್ಲೆ ಶಂ । ಬರನ ಹನನಗೈವೆ ನಿನ್ನ ।
ಗಣನೆಯಿಲ್ಲವೆನುತಲಾಗ । ಕಣೆಗಳೆಸೆಯಲು ॥೧೪೪॥

ಭರಿತ ಕೋಪದಿಂದ ದನುಜ । ನರಲಶರನಿಗಮಿತ ಕಣೆಯ ।
ಸುರಿಸೆ ಘಾಯವಡೆದು ಸ್ಮರನು । ಕಳವಳಿಸಿದನು ॥೧೪೫॥

**ಭಾಮಿನಿ**
ಸ್ಮರಣೆ ತಪ್ಪಲು ಧರೆಗೆ ಮನುಮಥ ।
ನೊರಗೆ ದಾರುಕ ಬಂದು ಕೃಷ್ಣಗೆ ।
ತರಳ ಸುಮಶರ ಮೂರ್ಛೆಗೈದಿಹನೈದು ಬೆದರುತ್ತ ॥
ಮುರಹರನು ಭೀಮಾದ್ಯರಿಂದೊಡ ।
ನರಿವರಿಸದೈತಂದು ತಾನೆಡ ।
ಚರಣದಿಂದೊದೆದಾಗ ಪೇಳಿದ ನಿಂದಿಸುತ ಮಗನ ॥೧೪೬॥

**ರಾಗ ನಾದನಾಮಕ್ರಿಯೆ ಅಷ್ಟತಾಳ**
ತರಳ ಪಂಥವಗೈದು ಸೋತೆಯ । ಈಗ । ಧರಣಿಯೊಳಪಕೀರ್ತಿ ತಂದೆಯಾ ।
ತೆರಳೆ ದ್ವಾರಕೆಗಳಲ್ಲಿ ಸತಿಯರು । ಪರಿಪರಿಯಿಂದ ಹಾಸ್ಯವ ಗೈವರು ॥೧೪೭॥

ವನಕೆ ಪೋದರೆಯೆಲ್ಲ ಮುನಿಗಳು । ತಪ । ವನುಕರಿಸುತಲೆ ವಿರಕ್ತರು ।
ದನುಜಬಾಣನು ಬಂಧುವೆನುತಲ್ಲಿ । ಪೋಗೆ । ತ್ರಿಣಯನಿರ್ಪನು ಸದಾಗೃಹದಲ್ಲಿ ॥೧೪೮॥

ಮರುತ ಸಂಭವನೆಂದ ಹರಿಯೊಳು । ನಿನ್ನ । ತರಳ ಸೋತವನಲ್ಲ ಧುರದೊಳು । ಸ್ಮರಣೆತಪ್ಪಿಹುದಲ್ಪಕಾರ್ಯಕೆ । ನೀನು । ಜರೆವುದ್ಯಾತಕೆಬಿಡು ಸಮರಕೆ ॥೧೪೯॥

ಕಳುಹುಕರ್ಣ ಜನ ಯುದ್ಧಕ್ಕೆ ಬೇಗ । ಎನೆ । ನಳಿನಲೋಚನ ಭೀಮನೊಡನಾಗ । ಕೊಳುಗುಳಕ್ಕೈದಲಿ ವೃಷಕೇತ । ಆತ । ಗನುವಾಗಿ ಪೋಗು ನೀ ಸಂಗಾತ ॥೧೫೦॥

**ಕಂದ**

ಇಂತೆನಲೀರ್ವರು ಸಮರಕೆ ।
ಸಂತಸದೊಳಗೈದಿ ಭೀಮಧುರಕನುವಾಗಲ್ ।
ತಾಂತಳುವದೆ ವೃಷಕೇತಂ ।
ಪಂಥದಿ ಪಿತನಡಿಗೆ ವಂದಿಸುತ್ತಲೆ ಪೇಳ್ದಂ ‖೧೫೧‖

**ರಾಗ ಸಾವೇರಿ ರೂಪಕತಾಳ**

ತಾತ ಲಾಲಿಸು । ಎನ್ನ । ರೀತಿ ಪರಿಕಿಸು ।
ಜಾತರಿಂಗೆ ಸಲುವ ಧುರಕೆ ಆಶೆಬೇಡ ಬಿಡುಬಿಡೆನಗೆ ‖೧೫೨‖

ಮರುತ ಸಂಭವ । ಪೇಳ್ದ । ಧುರವ ಗೈವುದ ।
ತರಳರಿಂಗೆ ತೋರಿಕೊಡುವದೆಮಗೆ ಹಿತಕರ ‖೧೫೩‖

ಅರಿತಿರುವೆನು । ಎಲ್ಲ । ಧುರದ ಪರಿಯನು ।
ತೆರಳುವೆ ತಾನೆನಲು ಭೀಮನಾಜ್ಞೆಯಿತ್ತನು ‖೧೫೪‖

**ಭಾಮಿನಿ**

ತಾತನಿಂದಪ್ಪಣೆಯಗೊಳ್ಳುತ ।
ಖಾತಿಯಿಂ ಕರ್ಣಜನು ಸಮರಕೆ ।
ಆತುರದಿ ಬರುತಿಹುದ ಕಂಡನುಸಾಲ್ವಗರ್ವದಲೀ ‖
ಸೋತು ಮನುಮಥನಾಗಳೈದಿಹ ।
ನೀತನ್ಯಾವ ಸುಭಟನೊನೋಳ್ಪೆನು ।
ಮಾತುಳಾಂತಕನಲ್ಲ ಇನ್ನೆಮಗಾದುದೇನ್ಭಯವು ‖೧೫೫‖

**ರಾಗ ಕಾಂಭೋಜಿ ಝಂಪೆತಾಳ**

ಅನುಸಾಲ್ವನೊಡನೆಂದನಾಗ ಕಲಿಕರ್ಣಸುತ ।
ಅನುಕರಿಪಮೇಧ ತುರಗವನು ‖
ತನುಮದದಿ ಕದ್ದು ತಂದಿಹುದ್ಯಾಕೆ ಪೇಳೆನೆಗೆ ।
ಘನ ಕಾರ್ಯವಾಯ್ತೆನಿನಗೆಂದ ‖೧೫೬‖

ತಂದಿರುವೆನೆನ್ನ ವಿಕ್ರಮದಿ ನಿಮ್ಮೆಲ್ಲವರ ।
ಮುಂದೆ ಮಖವಾಜಿಯನ್ನಿಲ್ಲಿ ‖
ಬಂಧಿಸಿಹೆ ನಿನಗೆ ಸಾಹಸವಿರ್ದಡಶ್ವವನು ।
ಇಂದೊಯ್ಯುದೆಂದನಸುರೇಂದ್ರ ‖ ‖೧೫೭‖

ಧುರದೊಳಗೆ ಸೋತು ತುರಗವನಿತ್ತರೇನ್ಫಲವು ।
ದೊರೆವುದೇ ಕೀರ್ತಿ ನಿನಗಿಂದು ‖

ತರಿದು ನಿನ್ನನು ರಣದೊಳೊವೆ ಮಖದಶ್ವವನು ।
ಮುರಹರನ ಪದದಾಣೆಯಾಗಿ ॥೧೫೮॥

ಮುರಹರನ ಬರಮಾಡುವೈರಿಯಣ್ಣನ ಕೊಂದು ।
ದುರುಳ ಕಾಪಟಿಗಗೋವಳನ ॥
ತರಿದು ಮೊದಲಿಗೆ ನಿನ್ನೊಳೀವೆ ಸಂಗ್ರಾಮವನು ।
ಪರಿಕಿಸೆನ್ನೆಯ ಪರಾಕ್ರಮವ ॥೧೫೯॥

ನಮ್ಮ ಸಮರದಿ ಗೆಲಿದು ಬದುಕಿದರೆ ಕಡೆಗಾಯ್ತು ।
ಬೊಮ್ಮಜನಕನ ಗೆಲುವ ಮಾತು ॥
ಸುಮ್ಮನೇತಕೆ ಜಂಭವೀಶರದ ಸವಿಯ ನೀ ।
ನೊಮ್ಮೆ ನೋಡೆನುತೆಚ್ಚನಾಗ ॥೧೬೦॥

ಶರವ ನಡುಪಥದಿ ತುಂಡರಿದೆಂದ ಕರ್ಣಜಗೆ ।
ಅರಿತಿಲ್ಲ ಪೂಗೋಲನಿರವ ॥
ಧುರವೆಸಗಿ ಮೈಮರೆತ ನಿನಗ್ಯಾತಕ್ಕೆ ಸಮರ ।
ತೆರಳುವಾಜಿಯನುಳಿದು ನೀನು ॥೧೬೧।

**ಭಾಮಿನಿ**
ನುಡಿಯಕೇಳುತಲಾವೃಷಧ್ವಜ ।
ಕಡೆಯಕಾಲದರುದ್ರನಂದದಿ ।
ಪಿಡಿದು ಧನುವಿನ ನಾರಿಯನ್ನೆಳೆದಾಗಳೊಂದಲಗ ॥
ಬಿಡಲು ದಾನವನೆದೆಗೆನಾಂಟಲು ।
ಪುಡವಿಯೊಳು ಮೈಮರೆಯೆಕಾಣುತ ।
ಲೊಡನೆ ಹೀಯಾಳಿಸುತ ಕರ್ಣಜನೆಂದ ಖಳನೊಡನೇ ॥೧೬೨॥

**ರಾಗ ತೋಡಿ ಏಕತಾಳ**
ಏನನಾಡಿದೆ ದನುಜೇಂದ್ರ ನೀನಿಂತು ।
ದಾನವ ಕುಲಕಪಮಾನವು ಬಂತು ॥
ಮಾನವರನು ಗೆಲ್ವ ತ್ರಾಣವೇನಾಯ್ತು ।
ಮಾನಿನಿಯರ ಕಾಂಬ ಖಣವಿನ್ನು ಸಂತು ॥೧೬೩॥

ಕ್ರತುವಿನಶ್ವವು ನಿನಗೇಕೆ ಬೇಕಾಯ್ತು ।
ರತಿಪತಿಯನು ಗೆದ್ದಶರಗಳೇನಾಯ್ತು ॥
ಹತಿಸುವೆ ಹರಿಯನೆಂದರುಹಿದ ಮಾತು ।
ಗತವಾಗಿ ಹೋಯಿತೆ ಧುರದೊಳು ಸೋತು ॥೧೬೪॥

ಕೊಂದಿಹನಣ್ಣನ ಹರಿಯೆಂಬುದರಿತು ।
ಬಂದುಕಾದಿಹೆ ಗರ್ವದಿಂದದಮರೆತು ॥
ಇಂದಿರೇಶನಪದತಲಕೊವೆನೀಗ ।
ಕೊಂದುಕಳವೆನೆನುತಿರೆ ಖಳನಾಗ ॥೧೬೫॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ದನುಜನೆಚ್ಚರಿತಾಗ ಕಾಡ್ಗಿ । ಚ್ಚಿನ ತೆರದೊಳುರೆ ಕೋಪಶಿಖಿಯಿಂ ।
ಘನತರಾಸ್ತ್ರವಪಿಡಿದು ಪೇಳಿದ । ಕಿನಿಸಿನಿಂದ ॥೧೬೬॥

ಬಲುಭಟನು ನೀನಾದರೀಗೆ । ನ್ನಲಗಪರಿಕಿಸಬೇಹುದೆನ್ನುತ ।
ಖಳನು ಕರ್ಣಜಗೆಸೆಯೆ ಮೈಮರೆ । ದೊರಗಲಾಗ ॥೧೬೭॥

ಕಂಡುದಾನವ ಭರಿತಸಂತಸ । ಗೊಂಡು ಮುಂದೈತರುತಲಾರಣ ।
ಮಂಡಲದಿ ಕರ್ಣಜನ ಮೂದಲಿ । ಸುತ್ತಲೆಂದ ॥೧೬೮॥

**ರಾಗ ಮುಖಾರಿ ಅಷ್ಟತಾಳ**
ಶೂರಾ ಏನಾಯ್ತು ವಿಚಾರಾ । ಎನ್ನೊಳು ಸೋತು ।
ಈ ರೀತಿಯಾಯ್ತೆ ಸಂಗರ । ಏ ಕರ್ಣಕುಮಾರ ॥
ಧಾರುಣಿಯೊಳು ಮಲಗಿಹನಾರೈಯಿವ ।
ರಾರಿಹರೈಪರಿವಾರವ ಕಾಣೆನು ॥೧೬೯॥

ಎತ್ತಲೈದಿದರು ಭೀಮಕಿರೀಟ । ಎನ್ನಯವೈರಿ ।
ಇತ್ತಬಾರನು ಆ ಮುರವೈರಿ । ನಿನ್ನನು ರಣಕೆ ।
ಒತ್ತಿದರಲ್ಲೊಯನ್ನೆದುರಿನಲೀ ॥
ಮೃತ್ಯುವಿನ್ನದನಕೆ ತುತ್ತಾಗುವತೆರ ।
ನಿತ್ತರುಯೇನಿದನರ್ಥಗಳಾಯಿತು ॥೧೭೦॥

ಸೂತಕುಲಜ ನಿನ್ನ ಪಿತನು । ಯಾರಿಲ್ಲದೆ ಕುರುಕುಲ ।
ನಾಥನ ಸೇರಿ ಜೀವಿಸಿದವನು । ನೀನಾದರ್ಯಮ ।
ಜಾತನೂಳಿಗದಿ ಬಾಳಿರುವವನು ।
ತಾತನವಧೆ ಪುರುಹೂತನ ಸುತನಲಿ ।
ಘಾತಿಪೆನಿನ್ನ ನೀ ಭೂತಲ ಮಧ್ಯದಿ ॥೧೭೧॥

**ಭಾಮಿನಿ**
ಮರುತಸುತನೈತಂದು ನೋಡುತ |
ಹಿರಿದು ರೋಷದಿ ಗದೆಯಗೊಂಡೀ |
ದುರುಳನನು ಬಡಿದುರುಳಿಸುವೆನೆಂದೆನುತಲಾರ್ಭಟಿಸೆ ||
ಪರಿಕಿಸುತ ಖಳನೆಂದನಾರ್ಯೆ |
ಧುರದಪೇಕ್ಷೆಯೆ ನಿನಗೆಯನ್ನೊಳು |
ತೆರಳು ಸದನಕೆ ಬೇಡ ಜೀವವನುಳುಹಿಕೊಳ್ಳೆಂದ ||೧೭೨||

**ರಾಗ ಶಂಕರಾಭರಣ ಮಟ್ಟೆತಾಳ**
ಕಲಹದಲ್ಲಿ ಕರ್ಣಸುತನ | ಗೆಲಿದೆನೆಂಬ ಗರ್ವ ಬೇಡ |
ಬಲವ ನೋಡೆನುತ್ತ ರಥಕೆ | ಗದೆಯೊಳೆರಗಿದ ||೧೭೩||

ಇಳೆಗೆ ಚೂರ್ಣವಾಗಿ ಬೀಳ | ಲಡರಿ ಬೇರೆ ಸ್ಯಂದನವನು |
ಖಳಮಹಾಸ್ತ್ರದಿಂದಲೆಚ್ಚ | ನನಿಲ ಸುತನಿಗೆ ||೧೭೪||

ಖಾತಿಯಿಂದ ಧುರವನೆಸಗೆ | ಕಾತರಿಸುತ ರಣಕಣದಲಿ |
ವಾತಸುತನು ಮಲಗೆ ಶ್ರೀ | ನಾಥಕಾಣುತ ||೧೭೫||

ಭೂತಲದೊಳಗಿವನಗೆಲುವ | ಖ್ಯಾತರಾರಕಾಣೆನೆನುತ |
ಮಾತುಳಾರಿ ಬಂದ ನಿಜ ವ | ರೂಥವಡರುತ ||೧೭೬||

ಕಂಡು ದಾನವೇಂದ್ರ ಹರುಷ | ಗೊಂಡು ಪೇಳ್ದನಣ್ಣನಸುವ |
ಗೊಂಡನೀತನೈ ಭಲಾ ಪ್ರ | ಚಂಡ ವಿಕ್ರಮೀ || ||೧೭೭||

ಮೊರೆಯನಿತ್ತ ಲಲನೆಯನ್ನು | ಕೊಲೆಯಗೈದ ವೀರನೀತ |
ತಲೆಯನರಿದ ಮಾವನನ್ನು | ಬಲುಭಟಾಗ್ರಣಿ ||೧೭೮||

ಎತ್ತಿನಂಥ ಧೇನುಕನನು | ಮತ್ತೆ ಯಾ ಪ್ರಲಂಬನನ್ನು |
ವತ್ತಿಕೊಂದರೇನು ಮಹಾ | ಸತ್ವವಾಯಿತೇ ||೧೭೯||

ಗೊಲ್ಲರೊಡನೆ ಸೇರಿ ತುರುವ | ನೆಲ್ಲ ಕಾಯುವಲಿಕೆ ಶೂರ |
ಬಲ್ಲಿದರೊಳು ಸೆಣಸಲಹುದೆ | ಕ್ಷುಲ್ಲ ಸಾಹಸಿ ||೧೮೦||

ಏನಪೇಳ್ವೆಖೂಳ ನಿನಗೆ | ಕಾಣಿಸುವೆನು ಸಹಜನೆಡೆಯ |
ತ್ರಾಣವಿರಲು ತುರುಕು ಧನುವ | ದಾನವಾಧಮ ||೧೮೧||

ಹುದುಕುತಿರುವ ಲತೆಯು ಚರಣ | ಕೆಡವಿದಂದವಾಯಿತಿಂದು |
ಬಿಡೆನು ನಿಲ್ಲೀಗ ಕರದಿ | ತೊಡು ಮಹಾಸ್ತ್ರವ ||೧೮೨||

ಹರಿಯು ಪೇಳ್ದ ದನುಜರನ್ನು | ಶಿರವಕಡಿವಡೆಮ್ಮ ಶರವು |
ತ್ವರೆಯಪಡುವದೆನಲು ಕೋಪ | ದುರುಬೆಯಿಂದಲೀ ||೧೮೩||

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ತೆಗೆದು ಕಣೆನಾಲ್ಕರಲಿಯೀತನ |
ಪೊಗಿಸುವೆನು ಯಮನೂರಿಗೆನ್ನುತ |
ನಗಧರನ ಹಯಕಿಡಲು ಸಮರಾಂ | ಗಣವನುಳಿದ ||೧೮೪||

ಸಾರಥಿಯಕೈಗೊದಗದೋಡಲು |
ಮಾರಪಿತನನು ಪಿಡಿಯಲಾಖಳ |
ಭೂರಿ ಕೋಪದಿ ಬಂದು ನೋಡಲು | ಶೌರಿಯಾಗ ||೧೮೫||

ಅಡಗಿರಲು ಸುತ್ತೆಲ್ಲ ನೋಡಿದ |
ಜಡಜಲೋಚನ ಪೋದನೆಲ್ಲಿಗೆ |
ತಡಯದುಸುರಿದ ತನ್ನವರೊಳಾ | ದಡಿಗನೊಂದು || ||೧೮೬||

ವೀರರಾಲಿಸಿ ಸಮರವೆಸಗಿದ |
ಮಾರಪಿತನೀಗೆನ್ನ ದೃಷ್ಟಿಗೆ |
ತೋರದಿಹ ಕಾರಣಗಳೇನಿದು | ಚೋದ್ಯವಾಯ್ತು ||೧೮೭||

ಹಾನಿಯಾಗಿಹುದೇನು ರಾಜ್ಯದಿ |
ದಾನಧರ್ಮಗಳಡಗಿ ಹೋಯಿತೆ |
ದೀನರಿಗೆ ಜೀವನದ ಕಷ್ಟವೆ | ಮಾನಿನಿಯರು ||
ರಮಣರನು ಬಿಟ್ಟನ್ಯಪುರುಷರ |
ರಮಿಸಿದರೆ ಕಾಣಿಸನು ಲಕ್ಷ್ಮೀ |
ರಮಣ ನಾವೆಡೆಯೆನುತಿರಲು ಮುರ | ಮಥನು ಬೇಗ ||೧೮೮||

ತುರುಗವನು ಬಿಗಿದಾಗ ಸಾರಥಿ |
ಗರುಹಿ ಮುಂದೈತರಲು ಕದನಕೆ |
ಪರಿಕಿಸುತ ಖಳನೆಂದ ಸಿಕ್ಕಿದೆ | ಭಾಪುಯನಲು ||೧೮೯||

**ರಾಗ ಭೈರವಿ ಅಷ್ಟತಾಳ**
ಕಡುಕೋಪದಿ ಮುರಹರನು | ಶಿರ | ಗಡಿವೆನೆನುತಲಸ್ತ್ರವನು |
ಬಿಡಲದಖಂಡಿಸುತಾಗ | ಖಳ | ನುಡಿದನು ಶೌರಿಗೆ ಬೇಗ ||೧೯೦||

ಧರಿಸ್ಯೆ ಚಕ್ರವನೆನುತ । ಹರಿ । ಯುರಕಿಡಲಸ್ತ್ರವ ಮತ್ತಾ ।
ತರಹರಿಸುತ ಮಾಧವನು । ಧರೆ । ಗೊರಗಲು ನಾರಿಯರರದನು ॥೧೯೧॥

ಪರಿಕಿಸಿನೆರೆದರಸುತ್ತ । ಈ । ಪರಿಭವವಾದುದೆನುತ್ತ ॥
ಮರುಗಲು ಭಾಮೆಯು ನಯದಿ । ಪ್ರಿಯ । ಗೆರಗುತ ಪೇಳ್ದಳು ಮುದದಿ ॥೧೯೨॥

**ರಾಗ ಮಧ್ಯಮಾವತಿ ಅಷ್ಟತಾಳ**

ಏನಿದಂಗಜಪಿತನೇ । ನಿನ್ನಯ ಸತ್ವ । ವೇನಾಯ್ತು ಖಳನೊಡನೇ ।
ಪ್ರಾಣವಂದುಳುಹಿಸಿಕೊಂಡುದೇಲೇಸಾಯ್ತು ।
ಮಾನಿನಿಯರ ಮಾನ । ಹಾನಿಯಾಯಿತಲ್ಲ ॥ ॥೧೯೩॥

ಇನಿತು ಪರಾಕ್ರಮಕೆ । ನಿಮ್ಮಣುಗನಿ । ಗನಿತನಾಡಿದುದೇತಕೆ ।
ತನಯನ ಮಾನವ ಕಳೆದಿರಿ ನಿಮ್ಮಯ ।
ಘನಪರಾಕ್ರಮವೆಲ್ಲ । ಜುಣುಗಿಹೋಯಿತೆ ಕಾಂತ ॥ ॥೧೯೪॥

ವನಿತೆಯಂದುದ ಕೇಳುತ । ಚಿನ್ಮಯನಾಗ । ಘನಕ್ರೋಧವನು ತಾಳುತ ॥
ದನುಜನ ಶಿರವ ಚೆಂಡಾಡುವೆನೆನ್ನುತ ।
ವನಜಾಕ್ಷಖತಿಗೊಳ್ಳುತಲಿ ಮುಂದುವರಿಯಲು ॥ ॥೧೯೫॥

**ಭಾಮಿನಿ**

ಶ್ರೀರಮಾಧವನಿಂತು ಕ್ರೋಧದೊ ।
ಳೇರಿರಥವನು ಪರಿಸೆ ಮುಂದಕೆ ।
ಶೂರನರ್ಕಜ ಸುತನ ಬಂದಡಹಾಯ್ದು ದಾನವನ ॥
ಮಾರಜನಕನ ಗೆದ್ದ ಶಕ್ತಿಯ ।
ತೋರುತೋರೆನ್ನೊಡನೆನುತ ಕಾ ।
ಮಾರಿಯಂದದಿ ಮುಸುಕಿದನು ಶರಜಾಲದಿಂದವನ ॥೧೯೬॥

**ರಾಗ ಸಾರಂಗ ಅಷ್ಟತಾಳ**

ಸೂತಜಸುತ ಕೇಳೋ ನಿನ್ನ । ಬಹು । ಖ್ಯಾತಿ ಪೋಗಿಹುದೆಲೊ ಮುನ್ನ ।
ಖಾತಿಗೈದರೆ ಮತ್ತೆ ನಿನಗೆ । ಜೀವ । ದಾತರಾರೆಂದು ತೋರೆನಗೆ ॥೧೯೭॥

ಪುಡವಿಯೊಳಗೆ ಸೋಲು ಗೆಲುವು । ಅದು । ನಡೆದುಬಂದಿರುವದು ನಿಜವು ।
ಬಿಡುವೆನೋಡೀಶರದಿಂದ । ನಿನ್ನ । ಕೆಡಹುವೆ ಭೂತಲಕೆಂದ ॥೧೯೮॥

ಬಿಡು ಬಡ ಕರಿಯು ಕೇಸರಿಗೆ । ಎಂದು । ತಡವುದೆ ಮರುಳನಹಾಗೆ ।
ನುಡಿದಿರೆಂದದ ಕಡಿದ । ಮತ್ತೆ । ದಡಿಗನುಬ್ಬಟೆಯಿಂದಲಿಹುದ ॥೧೯೯॥

ರವಿಜನಣುಗ ನೋಡುತಾಗ । ರಮಾ । ಧವನಕೀರ್ತಿಸುತಲೆ ಬೇಗ ।
ಜವದಿಂದಲೆಸೆದ ಮಾರ್ಗಣದಿ । ಖಳ । ಭವಣೆಯಿಂದಾಗ ಭೂತಳದಿ ॥೨೦೦॥

**ಭಾಮಿನಿ**

ಭಾನುನಂದನಣುಗನಸ್ತ್ರದಿ ।
ದಾನವನು ಮೈಮರೆಯೆ ಕಾಣುತ ।
ದಾನವಾರಿಗೆ ಕೊಟ್ಟ ಭಾಷೆಯು ಸಫಲವಾಯ್ತೆನುತ ॥
ಕೇಣದಿಂದಾ ಖಳನ ಕರ್ಣಜ ।
ಸೂನುಪಿಡಿತಂದಾಗ ಕೃಷ್ಣಗೆ ।
ಕಾಣಿಸುತ ಪದಕೆರಗೆ ನಸುನಗುತೆಂದ ಮಾರಮಣ ॥೨೦೧॥

**ರಾಗ ಕೇತಾರಗೌಳ ಅಷ್ಟತಾಳ**

ಭಳಿರೆ ವೃಷಧ್ವಜ ಕೇಳು ವಿಕ್ರಮ ನೀನು । ಖಳನೊಳು ಧುರವೆಸಗಿ ॥
ಗೆಲಿದೀಗ ಪಿಡಿ ತಂದೆ ನುಡಿದ ಭಾಷೆಗಳಿಂದ । ಸಲೆ ಪೂರ್ಣವಾಯಿತಯ್ಯ ॥೨೦೨॥

ಇನಿತು ಪೇಳುತಲಿರೆ ಮೂರ್ಛೆಯಿಂದೊರಗಿದ । ದನುಜನೆಚ್ಚರ್ತನಾಗ ॥
ಚಿನುಮಯನನು ಕಾಣಲಡಗಿತೀನವು । ಮನದೊಳುತ್ಸಾಹದಿಂದ ॥ ॥೨೦೩॥

ಹರಿಯೆ ನೀನ್ಯಾರೆಂಬುದರಿಯದೀ ಸಂಸಾರ । ಶರಧಿಯೊಳಗೆ ಸಿಲುಕಿ ॥
ಚರಿಸಿದ ದುಷ್ಕಾರ್ಯ ಮರೆದೆನ್ನ ರಕ್ಷಿಸು । ಕರುಣದೊಳನವರತ ॥೨೦೪॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಕೇಳುತರ್ಕಜನಣುಗಖತಿಯಲಿ । ಖೂಳ ನಿನ್ನಯ ಬಲುಹದೇನೈ ।
ಪೇಳಿದೆಯಲಾ ಪೌರುಷೋಕ್ತಿಯ । ಬಾಳು ಸುಡಲಿ ॥೨೦೫॥

ನಿಂದೆ ಗೈದಿಹೆ ಮೂಢ ಶ್ರೀ ಗೋ । ವಿಂದನನು ದುಷ್ಟಾತ್ಮ ನಿನ್ನನು ।
ಕೊಂದು ಬಿಡಿಸಿದರೇನಹುದು ಎನ । ಲೆಂದ ಖಳನನು ॥೨೦೬॥

ನಿಂದೆಗೈಯಲು ಶ್ರೀರಮೇಶನ । ವಂದಿಸಲು ಬಹುಜನ್ಮ ದುರಿತವ ।
ಕುಂದಿಸುವ ತಾ ಸ್ಮರಣೆ ಮಾಡಲು । ಇಂದು ನಾನು ॥೨೦೭॥

ವೀರತನದೊಳು ಪೇಳ್ದ ಮಾತಿಗೆ । ತಾರನೆಂದಿಗು ಕೋಪವೆನ್ನೊಳು ।
ವಾರಿಜಾಕ್ಷನ ಪಾದವನಜವ । ಸೇರಿ ಬಾಳ್ವೆ ॥೨೦೮॥

ಎನುತ ಹರಿಯಪದಾರವಿಂದಕೆ । ಮಣಿದ ದನುಜನನೆತ್ತಿಪೇಳಿದ ।
ಮನದೊಳಂಜಿಕೆ ಬೇಡ ಮೆಚ್ಚಿದೆ । ನಿನಗೆ ನಾನು ॥೨೦೯॥

ಅನಿಮಿಷರ ವೈರವನು ಬಿಟ್ಟೀ । ರನುಕರಿಪಹಯಮೇಧದಲಿನೀ ।
ಅನುವುಗೊಟ್ಟಿರಬೇಹುದೆನೆ ಖಳ । ಸನುಮತಿಸಲು ॥೨೧೦॥

**ರಾಗ ಮಾರವಿ ಏಕತಾಳ**

ಅತ್ತಲು ಸಮಶರನ್ನೈದು ತರಣದೊಳು । ವತ್ತಿಬರುವ ಬಲವ ॥
ಕತ್ತರಿಸುತಲಾವಾಜಿಯ ತಂದನು । ಚಿತ್ತಜಪಿತನೆಡೆಗೆ ॥೨೧೧॥

ತಾತನೆ ಕೇಳ್ನಾ ಪೇಳಿದ ತೆರದೊಳ । ಗೀತುರಗವ ತಂದೆ ॥
ರೀತಿಯೊಳೆಸಗಲು ಕ್ರತುವೆನೆ ಲಕ್ಷುಮೀ । ನಾಥ ನಗುತಲೆಂದ ॥೨೧೨॥

ಚನ್ನಾಯಿತು ನಿಮ್ಮೀರ್ವರ ಭಾಷೆಯು । ಮುನ್ನಾಡಿದ ತೆರದಿ ॥
ಇನ್ನೀಯಾಗದ ಕಾರ್ಯವು ನಡೆಯಲೆಂ । ದೆನ್ನುತ ಮುರಹರನು ॥೨೧೩॥

ವಿರಚಿಪಯಾಗದ ಗಡುವಿಗೆ ಮತ್ತಾ । ತುರಗವು ದೊರತುದಕೆ ॥
ಪರಮಾನಂದೊಳಿರುತಿರೆ ಧರ್ಮಜ । ಮರುತಸುತಾದಿಗಳು ॥೨೧೪॥

**ಭಾಮಿನಿ**

ದಾನವನು ಸೆಳೆದೊಯ್ದ ತುರಗವ ।
ದಾನವಾರಿಯ ಕರುಣದಿಂದಲೆ ।
ಭಾನುನಂದನನಣುಗ ಪಣಕದಿತಂದ ಸತ್ಕಥೆಗೆ ॥
ಕ್ಷೋಣಿಪಾಲಕಗೊರೆದುದನು ನಾ ।
ನೇನನರಿಯದೆ ಗೈದ ಕೃತಿಯಿದ ।
ಜ್ಞನನಿಧಿಗಳು ತಿದ್ದಿ ಮೆರೆಸಲಿ ದುರಿತವಿರೆ ದಯದಿ ॥೨೧೫॥

**ರಾಗ ಢವಳಾರ ಏಕತಾಳ**

ಮಂಗಲ ವಾರಿಜನಾಭನಿಗೆ ।
ಮಂಗಲ ಸಾರಸ ನೇತ್ರನಿಗೆ ।
ಮಂಗಲ ಕ್ಷೀರವಾರಿಧಿ ಗೃಹವಾಸಗೆ ।
ಮಂಗಲ ದುರಿತವಿದೂರನಿಗೆ ।
ಮಂಗಲಂ ಜಯ ಮಂಗಲಂ ॥ ॥೨೧೬॥

ಮಂಗಲ ಬಾಲಗೋಪಾಲನಿಗೆ ।
ಮಂಗಲ ತುಳಸೀ ಮಾಲನಿಗೆ ।
ಮಂಗಲ ಶೀಲಸಜ್ಜನ ಪರಿಪಾಲಗೆ ।
ಮಂಗಲ ಪೀತ ದುಕೂಲನಿಗೆ । ಮಂಗಲಂ ॥ ॥೨೧೭॥

ಮಂಗಲಂ ಯದುಕುಲ ತಿಲಕನಿಗೆ ।
ಮಂಗಲ ಸದಮಲ ಹೃದಯನಿಗೆ ।
ಮಂಗಲ ಪದುಮಭವಾಂಡವ ಪೊರೆವಗೆ ।
ಮಂಗಲಂ ಮಧುಸೂದನ ಹರಿಗೆ ।
ಮಂಗಲಂ ಜಯ ಮಂಗಲಂ ॥ ॥೨೧೮॥

**ವಾರ್ಧಕ**
ಮೆರೆವ ಸಿದ್ದಾಪುರದ ತಾಲೂಕಿನೊಳಗುಳ್ಳ ।
ಕರಿಕೆ ಸಾಲಿನ ಗ್ರಾಮ ಜಾನಕ್ಕೈ ಖೇಟಕದೊ ।
ಳಿರುವ ತಿಮ್ಮಪ್ಪನೆಂಬಾತ ಪಿತ ವೆಂಕಪ್ಪ ಹೆಗಡೆಯತಿ ಧರ್ಮಯುತನು ॥
ಹರಿಯಂಕಜಾನಂಗವತ್ಸರದ ಶ್ರಾವಣದಿ ।
ಧರೆಯಪತಿ ಯೌವನಾಶ್ವಾನುಸಾಲ್ವರ ಕಥೆಯ ।
ವಿರಚಿಸಿದೆ ಯಕ್ಷಗಾನದಲಿ ವಾಗೀಶ್ವರಿಯು ಮತಿದೋರ್ದ ರೀತಿಯಿಂದ ॥೨೧೯॥

**॥ ಯೌವನಾಶ್ವ ಅನುಸಾಲ್ವ ಕಾಳಗ ಮುಗಿಯಿತು ॥**

# ಯಕ್ಷಗಾನ ವಾಜಿಗ್ರಹಣ ಅಥವಾ ಯೌವನಾಶ್ವ ಕಾಳಗ

## ಪಾತ್ರಗಳು

ಧರ್ಮರಾಜ ಶ್ರೀ ಕೃಷ್ಣ ಭೀಮ ಮೇಘನಾದ (ಅರ್ಜುನ) ವೃಷಕೇತು (ನಕುಲ) ಯೌವನಾಶ್ವ (ಸಹದೇವ) ಯಶ್ವ (ಯಕ್ಷಗಾನೀಯ ಪದ್ಧತಿಯ ಪಾತ್ರ) ವೇದವ್ಯಾಸ ಚಾರಕರು ಇತ್ಯಾದಿ

೧

**ಭಾಮಿನಿ**
ದೇವದೇವಾರ್ಚಿತ ಪದದ್ವಯ ।
ದೇವದೇವೇಶ್ವರ ಜಗನ್ಮಯ ॥
ದೇವಕೀಸಂಜಾತ ನಿತ್ಯಾನಂದ ಗೋವಿಂದ ॥
ಭಾವನಾತ್ಮಕ ಭಕ್ತಜನ ಸಂ ।
ಜೀವ ನೀನೊಲಿದೆನ್ನ ವಿಲಸ
ದ್ಭಾವನೆಯನನುಗೊಳಿಸು ಲಕ್ಷ್ಮೀರಮಣ ಶ್ರೀಕೃಷ್ಣ ॥೧॥

**ಕಂದ**

ವಿನುತಾಶ್ವಮೇಧ ಕಥನವ ।
ನೆನಗರುಹು ದಯಾಲವಾಲ ನೀನೆಂದೆನಲಾ ॥
ಜನಮೇಜಯ ನೃಪನಂ ಜೈ ।
ಮಿನಿಮುನಿ ಕೊಂಡಾಡಿ ಪೇಳ್ದನತಿ ಹರ್ಷದೊಳಂ ॥೧॥

**ವಾರ್ಧಕ**

ಕೇಳೆಲೆ ಮಹೀಪಾಲ ಕೌರವಾದ್ಯರನೆಲ್ಲ ।
ಕಾಳಗದಿ ಹರಿಯ ದಯದಿಂ ಗೆಲ್ದು ಧರೆಯನಿದ ।
ನಾಳುತಿರ್ದಂ ಧರ್ಮನಂದನಂ ಧರ್ಮದಿಂ ತಮ್ಮಂದಿರಿಂದ ಕೂಡಿ ॥
ಪೇಳಲೇನೀ ಹಸ್ತಿನಾವತಿಯೊಳಾದ ನೃಪ
ರೋಳಿಯೊಳು ಮಿಗಿಲಿವಂ ರಾಘವೇಶ್ವರನ ಸಮ ।
ಪಾಳಿಯೆಂಬ ನೆಗಳ್ತೆವಡೆದೊಂದುದಿನ ತನ್ನ ಸಹಭವರೊಳಿಂತೆಂದನು ॥೨॥

**ರಾಗ ಭೈರವಿ ಝಂಪೆತಾಳ**

ಅನುಸಂಭವರು ಕೇಳಿ ವನಧಿಪರಿಯಂತರಾ ।
ವನಿಯ ಸಾಮ್ರಾಜ್ಯವನು ನಮಗೇ ॥
ಅನುಗೊಳಿಸಿದನು ದಯಾವನಧಿಯರಸಾದೆನಂ ।
ದೆನಗೆ ಸೊಗಮಿನಿತಿಲ್ಲ ಮನದಿ ॥೪॥
ಈ ಧರಾತಲಕಾಗಿ ಕಾದಿ ಸತ್ತವರ ನೆನ ।
ಪಾದರಾಗಲೆ ಧೈರ್ಯಗುಂದಿ ॥
ಮಾಧವನ ಸ್ಮರಣೆಯನುವಾದವಲ್ಲದೆ ಬೇರೆ ।
ಹಾದಿಯೇ ಕಾಣದಿನಿದಾಗಿ ॥೫॥

ಆ ದಿವ್ಯರೂಪರೂಪಿಂಗೆ ಗುಣಗುಣಕೆ ಬೇ ।
ಕಾದ ಸತ್ಯತ್ಯಾಗ ಶೌರ್ಯ ॥
ಆದಿತ್ಯಪುತ್ರನೆಮ್ಮಣ್ಣ ಕರ್ಣನೊಳಲ್ಲ ।
ದಾದುದೇ ಮಿಕ್ಕಮನುಜರಲಿ ॥೬॥

ಹೆತ್ತವರ ಹೆಚ್ಚಳವ ಮರೆಸಿ ಪೊರೆದನು ನಮ್ಮ
ಮುತ್ತಯ್ಯ ಮುದುಕಶಂತನುಜ ॥
ಚಿತ್ತಜಾರಾತಿ ಸಮಸತ್ವನಿಚ್ಛಾಮರಣಿ ।
ಸತ್ತನಲ್ಲಯ್ಯೂರ್ಧ್ವರೇತ ॥೭॥

ಅಂಧನಲ್ಲವೆ ಹಿರಿಯ ಜನಕ ಮಕ್ಕಳನೆಲ್ಲ ।
ಕೊಂದನಿವ ಭೀಮಹಾಯೆಂದು ॥

ನೊಂದು ಶಪಿಸನೆ ನಮಗೆ  ಗುರುವಲ್ಲವೇ ದ್ರೋಣ ।
ಸಂದ ವಿಕ್ರಮ ಧನುರ್ಧಾರಿ ॥೮॥

**ಭಾಮಿನಿ**

ನುಡಿದುಫಲವೇನಿನ್ನು ಮೆಚ್ಚೆನು ।
ಪೊಡವಿಯೊಡೆತನ ಸಾಕು ನೀನೇ ।
ನಡೆಸು ಸದ್ಧರ್ಮದಲಿ ರಾಜ್ಯವನೇರು ಗದ್ದುಗೆಯ ॥
ನಡೆದು ವನವಾಸಕ್ಕೆ ಮುಕ್ತಿಯ ।
ಪಡೆವ ಮನಮೆನಗಾಯ್ತಿದಕೆ ಮರು ।
ನುಡಿಯಲಾಗದೆನಲ್ಕೆ ಬಿನ್ನಯಿಸಿದನು ಕಲಿಭೀಮ ॥೯॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಏನಿದೇನಣ್ಣಯ್ಯ ಚಿತ್ತ । ಗ್ಲಾನಿಯಾದುದಿದೇಕೆ ವಸುಧಾ ।
ಮಾನಿನಿಯ ಕೈಬಿಡುವ ಮನದನು । ಮಾನವೇನು ॥೧೦॥

ಖೂಳರಾ ಕೌರವರು ತಮ್ಮಯ । ಪಾಳುಕೆಲಸದ ಫಲದಿ ಸತ್ತಡೆ ।
ಗೋಳಿಡುವುದೇಕಣ್ಣ ನಮ್ಮಯ । ಬಾಳಬೈದು ॥೧೧॥
ಬಂಧುಬಾಂಧವರೆಲ್ಲ ರಣಕ್ಕೈ । ತಂದು ಸೆಣಸಲು ಸೆಣಸಿದೆವು ನ ।
ಮ್ಮಿಂದ ಬಂದಪರಾಧವೇನಿದ । ನೆಂದು ತಿಳುಹು ॥೧೨॥

ಮಾಡಿ ಸಾರಥ್ಯವನು ಹರಿಜನ । ಗೂಡಿಸಿದನೆನೆ ನಮಗಿದೊಂದನೆ
ನೋಡಿ ತಿಳಿದರೆ ಸಾಕು ಬಿಡು ಸುಡು । ಗಾಢ ವ್ಯಥೆಯ ॥೧೩॥

ಏರಿ ಜೇನಿಂಗಾಗಿ ನೊಣಗಳ । ತೂರಿಹಳಿಕ್ಕೈ ಸೇರೆಮರದಿಂ ।
ಜಾರಿ ಬಿದ್ದಂತಾಯ್ತು ನಿನ್ನ ವಿ । ಚಾರವಿಂದು ॥೧೪॥

**ಭಾಮಿನಿ**

ಬಿಡುವೃಥಾ ಚಿಂತಿಸದಿರೆಂಬೀ ।
ನುಡಿಯ ನುಡಿವನಿತರಲಿ ದೂರದಿ ।
ನಡೆತರುವ ಮುನಿಪತಿಯ ಕಂಡೊಡನೆದ್ದಿದಿರ್ಗೊಂಡು ॥
ಅಡಿಗೆರಗಿ ಕರೆತಂದು ಕೂರಿಸಿ ।
ಕಡವರದ ಪೀಠದಲಿ ಪೂಜಿಸಿ ।
ನುಡಿಸುವ್ವೈವರ ನೋಡಿ ಯಮಜನೊಳೆಂದನಾ ವ್ಯಾಸ ॥೧೫॥

**ರಾಗ ಬೇಗಡೆ ಅಷ್ಟತಾಳ**

ಲಾಲಿಸ್ಯೆ ರಾಜಾಧಿರಾಜೇಂದ್ರಾ । ಸದಯಾಂತರಂಗ ಸು ।
ಶೀಲ ಸುಜನಾಭರಣ ಗುಣಸಾಂದ್ರಾ ॥

ನೀಲಮೇಘ ಶ್ಯಾಮಳನ ನಿಜ । ಲೀಲೆಯನು ನೆನೆದೊಗುವ ನಿನ್ನ ವಿ ।
ಶಾಲ ಮನಚಿಂತಾಲತಾಂಗಿಯ । ನೋಲಯಿಸುವೀ ಸೋಲವಾಂತುದೆ ॥೧೬॥

ಕತ್ತಲೊಳು ಕಾಣದಿರೆ ಭಾಸ್ಕರನು । ಪೆರ್ಜೊಡರ ಕೈಕೊಂ ।
ಡೆತ್ತಿ ತೋರಿಪರಾರು ದಾರಿಯನು ॥
ಸುತ್ತಿತಾ ಬೇಸತ್ತೊಡನಿಲಗೆ । ಮತ್ತೆ ಬೀಸುವರಾರು ಧರ್ಮ ಸು ।
ಪುತ್ರನೀನಳವಳಿದೊಡರಿಪುವ । ತತ್ವವಿದರಾರಿತ್ತ ಲೋಕದಿ ॥೧೭॥

ನೊಂದಡಾವಿಹಗೇಂದ್ರವಿಷದುರಿಗೆ । ಮಂತ್ರಿಸುತ ರಕ್ಷಾ ।
ಬಂಧನವನಾರೆಸಗುವರು ನಿನಗೆ ॥
ಬಂದ ಚಿಂತೆಯದಂದುಗವದೇ । ನೆಂದು ಪೇಳಿನ್ನಂದದಿಂದಲಿ ।
ಸಂದೆಗಂ ಬೇಡೆಂದ ಮುನಿಪನಿ । ಗೆಂದನವನಭಿವಂದಿಸುತ್ತಲೀ ॥೧೮॥

**ರಾಗ ಶಂಕರಾಭರಣ ಅಷ್ಟತಾಳ**
ಮುನಿರಾಯ । ದರ್ಶನದಿಂ ಧನ್ಯತೆಯಾಂತೆ । ಮುನಿರಾಯ ॥ ಪಲ್ಲವಿ ॥

ಮುನಿರಾಯ ಸಾತ್ಯಾವತೇಯಾ । ಎನ್ನ । ಮನಕಿಲ್ಲ ಸೌಖ್ಯದೊಂದಾಯಾ ।
ಆದ । ರೆನುವೆನಿನ್ನೊಳು ಬಿಚ್ಚಿಬಾಯಾ ॥ ಗಂಗಾ ।
ತನಯಾದಿ ಹಿರಿಯರಾ । ನನವನೋಡುವಯೋಗ
ಕೊನೆಗೊಂಡಮೇಲೆ ಭೂ । ವನಿತೆಯನಾಯಕನಾದೆ ॥ ಮುನಿರಾಯ ॥೧೯॥

ಆಗದುದಾಯಿತೆನ್ನಿಂದ । ರಾಜ್ಯ । ಭಾಗವ ಬಯಸಿದ್ದರಿಂದ ।
ಅಂತೆ । ಹೋಗದು ದುರಿತದ ಬಂಧ ॥ ಕಾಡ ।
ಹೋಗಿ ಹೊಕ್ಕಲ್ಲಿ ವಿ । ರಾಗಿಯೆನಿಸಿದೇಹ ।
ಭೋಗವನೀಗದೊಂ । ದಾಗದಾತುಮನಲ್ಲಿ ॥ ಮುನಿರಾಯ ॥೨೦॥

ಕಂಡುಕೊಂಡಿಹೆನೆನ್ನಕ್ಷೇಮ । ಈಭೂ । ಮಂಡಲವಾಳಲಿ ಭೀಮ ।
ರಾಜ । ದಂಡವನೊಲ್ಲೆನಿನ್ನಮಮ ॥ ಹೇಸಿ
ಗೊಂಡೆನೆನ್ನಯಲಜ್ಜ । ಭಂಡತನಕೆಮಾಡಿ ।
ದ್ದುಂಡುತೀರದೆಮುಚ್ಚಿ । ಕೊಂಡಿಡೆ ಮುಗಿವುದೆ ॥ ಮುನಿರಾಯ ॥೨೧॥

**ಕಂದ**
ಎನಗಾಶೀರ್ವದಿಸೆನ್ನಯ ।
ಮನದಿಷ್ಟಂಸಿದ್ಧಿಪಂತೆ ಮಾಮೈಮನೆಯೆಂ ॥
ದನುತಾಪದಿ ಪದಕೆರಗಿದ ।
ಜನಪಾಲನನೆತ್ತಿ ನುಡಿದನತಿವಿನಯದೊಳಂ ॥೨೨॥

**ರಾಗ ಶಂಕರಾಭರಣ ಏಕತಾಳ**

ಧಾತ್ರೀಶ್ವರನೆ ಕೇಳು ಯುದ್ಧ | ಕ್ಷೇತ್ರದಿವೈರಿಗಳಗೆದ್ದ |
ಪಾತ್ರತೇಹೆಚ್ಚೆಂಬವಿದಿತ | ಶಾಸ್ತ್ರವನರಿಯ ||
ಕ್ಷಾತ್ರತೇಜವಿಂತುಟಿದಕೆ | ಗೋತ್ರವಧೆಯಾಯ್ತೆಂದರದಕೆ |
ಗಾತ್ರವದಂಡಿಸುವಧರ್ಮ | ಸೂತ್ರವಿಹುದೇನೈ || ಧಾತ್ರಿ ||೧೩||

ಆದರೀಗನಿನ್ನಮನದಿ | ಖೇದವಿರಲುಮಾಡು ಭರದಿ |
ವೇದವಿಹಿತವಾದತುರಗ | ಮೇಧಾಧ್ವರವನು ||
ಮೇದಿನೀಪಾಲಕರಪಾಪ | ವ್ಯಾಧಿಗೀಯೌಷಧಿಯೆಲೇಪ |
ಸಾಧಿಸುನಿನ್ನರ್ಗೆದೊಡ್ಡಿ | ತಾದುದಲ್ಲಯ್ಯ ||೧೪||

ತಪ್ಪಾಡಿದೆನೆ ಮುನಿಯೆ ಕ್ಷಮಿಸು | ಮುಪ್ಪುಗೊಂಡುದೆನ್ನಮನಸು |
ಕಪ್ಪುಗೊರಲನಾಣೆ ಮುಂದೆ | ಬಪ್ಪದುರಿತಕೆ |
ಅಪ್ಪುದಾದರದರ ವಿಧಿಯೆಂ | ತಿಪ್ಪುದು ಪಿಂದಾರುಗೈದ |
ರೊಪ್ಪುಗೊಂಡರೆನಗೆ ನಡೆಸ | ಲಪ್ಪುದೆ ಪೇಳೈ || ಧಾತ್ರಿ ||೧೫||

**ರಾಗ ಕಾಮವರ್ಧಿನಿ ರೂಪಕತಾಳ**

ಅವಧರಿಸಿನ್ನು ಹರಿಶ್ಚಂದ್ರರಾಯ ರಾ | ಘವದೇವ ನಳ ನಹುಷಾದಿ |
ಅವನಿಪಾಲರುಗೆಯ್ದರಿದನು ಪೂರ್ವದಲಿ ಸ | ತ್ವವಿಹೀನರಿಂಗಿದು ಸಲದು ||೧೬||

ಬಿಳಿಯೊಂದು ಕಪ್ಪೊಂದು ಬಣ್ಣದಕಿವಿಗಳ | ಥಳಥಳಿಸುವ ಬೆಳ್ಪುಮೈಯ್ಯ |
ಹೊಳೆವಬಂಗಾರಬಣ್ಣದ ಬಾಲದಿಂದಕಂ | ಗೊಳಿಸುವ ಕುದುರೆಯನಾಯ್ದು ||೧೭||

ತಂದುವಿಧ್ಯುಕ್ತ ಪೂಜೆಯ ಮಾಡಿ ಯಜಮಾನ | ನಂದು ತನ್ನಗ್ಗಳಿಕೆಯನು |
ಒಂದು ಸುವರ್ಣಲೇಖನದಲ್ಲಿ ಬರೆದು ತಾಂ | ಬಂಧಿಸಿ ಕೂಡೆಬಿಟ್ಟಪುದು ||೧೮||

ತಿರುಗಿವತ್ಸರವೊಂದು ಬರುವನಿತರಲಿ ತ | ತ್ತುರಗವ ಕಟ್ಟಿ ಕಾದುವರ |
ಅರಸುಮಕ್ಕಳ ಜೈಸಿ ಕಪ್ಪವ ಹೊರಿಸಿ ಹಿಂ | ತಿರುಗಿಬಪ್ಪುದು ಬಲ್ಲಭಟರು ||೧೯||

**ವಾರ್ಧಕ**

ಮತ್ತೆ ಋತ್ವಿಜರ ಮತವೆತ್ತುವೇದೋಕ್ತದಿಂ |
ಬಿತ್ತರಿಸಿಯಾಗವಂ ಧರಣಿಸುರಗಣವನಿ |
ಪ್ಪತ್ತುಸಾವಿರವನರ್ಚಿಸಿ ಗೋಸಹಸ್ರಂಗಳಂ ಮುತ್ತು ರತ್ನಂಗಳಂ ||
ಪ್ರತ್ಯಪ್ರತ್ಯೇಕದಿಂದವರ್ಗೆ ಕೊಡುವದು ತಾನೆ |
ವಸ್ತ್ರಗಂಧಾದಿ ಭೂಷಿತನಾಗಿ ತನ್ನಸತಿ |
ಯೊತ್ತಿನಿಂ ಮಲಗಿ ಕಾಮೇಚ್ಛೆಯಂ ಮರೆವುದಾ ಜನ್ನ ಮುಗಿವನ್ನೆವರೆಗಂ ||೨೦||

**ಕಂದ**

ಅಸಿಪತ್ರವ್ರತವಿದು ಪಾ ।
ಲಿಸುವುದು ಹಯಮೇಧಯಾಗ ದೀಕ್ಷಾಬದ್ಧಂ ॥
ವಸುಧಾಧಿಪ ಕೇಳ್ದೈಸಂ ।
ತಸಮಾದುದೆ ಮಾಡೆನಲ್ಕೆ ಧರ್ಮಜನೆಂದಂ ॥೩೧॥

**ರಾಗ ಸುರುಟಿ ಏಕತಾಳ**

ಸಾಧು ಜನವರೇಣ್ಯ । ಪರಹಿತ । ಸಾಧನಾಗ್ರಗಣ್ಯ ॥
ಮೋದವಾಯ್ತು ಹಯಮೇಧವ ಕೈಕೊಂ ।
ಡಾಧರಿಸುವ ಪು । ಣ್ಯೋದಯವೆಂತುಟೊ ॥ ಸಾಧು ॥ ॥೩೨॥

ನೊಂದರುಬಹುದಿವಸ । ಸಹಭವ । ರಿಂದಾಗದು ಕೆಲಸ ।
ತಂದಪುದೆಲ್ಲಿಂದೆಂದರಿಯೆನು ನೀ ।
ವೆಂದ ಸುಲಕ್ಷಣದಿಂದಿಹತುರಗವ ॥ ಸಾಧು ॥ ॥೩೩॥

ಧನವಿರದೆನುವಂತು । ಶ್ರೀಹರಿ । ಗೆನದೆ ಮಾಳ್ಪುದೆಂತು ।
ಎನಗಿದರೊಳು ಸಂ । ಜನಿಸದುದೃಢಮನ ।
ವೆನೆ ಪುನರಪಿಯಾ ಮುನಿಯಿಂತೆಂದನು ॥ ಸಾಧು ॥ ॥೩೪॥

**ವಾರ್ಧಕ**

ಮರುಗಲೇಕೈ ಭೂಪ ಮರುತರಾಜಂ ಹಿಂದೆ ।
ತುರಗಾಧ್ವರಂಗೈದು ತೆತ್ತ ಹೊನ್ನಿನ ಹೊರೆಯ ।
ಹೊರಲಾರದಿಡಿಕಿಹರು ಹಿಮಗಿರಿಯೊಳಿಹುದದಂತರಿಸು ಭದ್ರಾವತಿಯೊಳು ॥
ತುರಗಮಿಪ್ಪುದು ನಿನಗೆ ಶೌರ್ಯಮಿರೆ ದೊರೆಕೊಳದೆ
ಪರಮಸಂಪ್ರೀತಿಯಿಂ ನಿಮ್ಮೈವರಂ ಪೊರೆವ
ಕರುಣನಿಧಿ ಬಾರನೇ ಬರಿದೇಕೆ ಯೋಚನೆಗಳೆಂದಡವನಿಂತೆಂದನೂ ॥೩೫॥

**ರಾಗ ಆನಂದಭೈರವಿ ಅಷ್ಟತಾಳ**

ಚೆಂದವಾಯ್ತು ನಿಮ್ಮ ಮಾತು । ಬಂಧು ಹತ್ಯದಿಂದ ಸೋತು ।
ಬೆಂದರೆನಗೆ ಪಾರ್ವರೊಡವೆಯ ॥
ತಂದು ಮಾಡಲು ಮದ್ದುಗುಣಿಕೆ । ತಿಂದ ಮರುಳನ ಮುದ್ದಿನೆಣಿಕೆ ।
ಯಂದವಾಗದೆ ಪೋಗದಿನ್ನೇನು ॥೩೬॥

ಎಷ್ಟಪೇಳ್ದರ್ ನೀರ ಹೋಮ । ಕ್ಕಿಟ್ಟೆಯಲ್ಲಯ್ ಸುಗುಣಧಾಮ ।
ಸೃಷ್ಟಿ ಸರ್ವವಿದಾರದೆಂದರಿವೇ ॥
ಕೊಟ್ಟ ಕಶ್ಯಪ ಮುನಿಗೆ ಭಾರ್ಗವ । ಮೆಟ್ಟಿನಿಲುವರೆ ಬೇರೆ ಮಾರ್ಗವ ।
ಕಟ್ಟಿಕೊಂಡೆಯ ಸಾಕು ಸಂದೇಹ ॥೩೭॥

**ಕಂದ**

ವಸುಧಾಗತಧನಕೆಂದುಂ ।

ವಸುಂಧರಾನಾಥರೊಡೆಯರದರಿಂ ಪೇಳ್ದಾ ।

ವಸುವಂತಂದುಜ್ಜುಗಿಸೆನೆ ।

ನಸುನಗೆಯಿಂ ಭೀಮಸೇನ ನೃಪತಿಯೊಳೆಂದಂ ॥೩೮॥

**ರಾಗ ನಾದನಾಮಕ್ರಿಯೆ ಅಷ್ಟತಾಳ**

ತಡವೇತಕಿನ್ನಗ್ರಜಾತನೆ । ನಂಬಿ । ನಡೆವುದ್ಯೆಸಲೆ ಮುನಿ ಮಾತನೆ ॥

ನೆಡುವ ಜಾಗವ ಯಜ್ಞ ಸ್ತಂಭಕ್ಕೆ । ನೋಡಿ । ಕೊಡಿಸಪ್ಪಣೆಯ ಕಾರ್ಯಾರಂಭಕ್ಕೆ ॥೩೯॥

ಆರಿವರಿಂದ ಸನಾಮರು । ಧರ್ಮ । ಸಾರವ ಬಲ್ಲ ನಿಷ್ಕಾಮರು ॥

ಬೇರೆ ಯೋಚನೆ ಬೇಡ ಮನದಲ್ಲಿ । ರಾಕ್ಷ । ಸಾರಿಯ ಕೃಪೆಯಾಗದಿರದಿಲ್ಲಿ ॥೪೦॥

ಹೊಕ್ಕು ಭದ್ರಾವತಿ ನಗರವ । ಮುರಿ । ದಿಕ್ಕಿ ಮಾರ್ಮಲೆತರ ಗರ್ವವ ॥

ತೆಕ್ಕೊಂಡು ಕುದುರೆಯ ಬಹೆ ನೋಡು । ಮುನಿ । ಮುಕ್ಕಣ್ಣನಿವನಾಣೆ ಮನಮಾಡು ॥೪೧॥

ಭಲರೆ ಭಾಪುರೆ ಭಾಪು ಮಾರುತಿ । ಸೋಮ । ಕುಲಕೆ ನಿನ್ನಿಂದಲೆ ಕೀರುತಿ ॥

ಛಲದಂಕ ನೀನಲ್ಲದಾರುಂಟು । ರಟ್ಟೆ । ಬಲಿತೊಡನ್ಯರ್ಗೇನು ಫಲಮುಂಟು ॥೪೨॥

**ಕಂದ**

ಈ ತೆರದಿಂ ಭೀಮನ ಗುಣ ।

ರೀತಿಯ ಪೊಗಳಲ್ಕೆ ಮುನಿಪನತಿ ಸಂಭ್ರಮದಿಂ ।

ದಾ ತಾಪಸ ಮುಖ್ಯರ ವೃಷ ।

ಕೇತಂ ಪದಕೆರಗಿ ಧರ್ಮಜಾತನೊಳೆಂದಂ ॥೪೩॥

**ರಾಗ ಭೈರವಿ ಅಷ್ಟತಾಳ**

ಕಿರಿಯಪ್ಪ ಲಾಲಿಸಿತ್ತ । ಬಿನ್ನಪವನ್ನು । ಮರುತ ಜಾತನ ಕೂಡುತ್ತಾ ॥

ತೆರಳುವೆ ತುರಗವ । ತರಲೆನಗಪ್ಪಣೆ । ಕರುಣಿಸಿ ಕಳುಹೆಂದನು ॥೪೪॥

**ರಾಗ ಕೇದಾರಗೌಳ ಅಷ್ಟತಾಳ**

ಮಗನೆ ಮೆಚ್ಚಿದೆ ನಿನ್ನ ಪೌರುಷ ಪಂಥ ಪಾ । ಡಿಗೆ ತಕ್ಕ ನುಡಿದುದಕ್ಕೆ ।

ಹಗೆಗಳೊಳಿದಿರಾಗಿ ಪೋಗಿ ಕಾದಾಡುವ । ಬಗೆಗಾಜ್ಞೆಗೊಡೆನಿದಕ್ಕೆ ॥೪೫॥

**ರಾಗ ಭೈರವಿ ಅಷ್ಟತಾಳ**

ಅಂದರಿದೇನು ತಾತ । ಸುಮ್ಮನೆ ನುಡಿ । ಯಿಂದ ಪೇಳಿದರೆ ಮಾತ ॥

ನಿಂದು ಹೊದಾಡಿ ಕ । ಯ್ಯಿಂದ ತೋರಿಸದಿರೆ । ಹಂದೆಯೆನ್ನರೆ ಲೋಕದಿ ॥೪೬॥

**ರಾಗ ಕೇದಾರಗೌಳ ಅಷ್ಟತಾಳ**

ಪಂಥವಿದ್ದರೆ ಕಾರ್ಯದಂತರವರಿತು ತ । ಕ್ಕಂತೆ ವರ್ತಿಸದಿದ್ದರೆ ।
ಎಂತಾಯ್ತು ನೋಡು ನೀನೇ ನಾವು ನಿನ್ನಯ್ಯ । ಕೌಂತೇಯನನುಕೊಂದುದ ॥೪೭॥

**ರಾಗ ಭೈರವಿ ಅಷ್ಟತಾಳ**

ಅದು ನಿಮ್ಮ ದೋಷವೆಂತು । ತಾತಗೆ ತ್ಯಾಗ । ವಿಧಿಯೆ ಸಾವಾಗಿ ಸಂತು ।
ಒದಗದಿದ್ದರೆ ನಿಮ್ಮ । ಭ್ಯುದಯ ಕಾರ್ಯದಿ ಮತ್ತೆ । ನ್ನಧಟ ತೋರಿಸುವದೆಂತು ॥೪೮॥

**ರಾಗ ಕೇದಾರಗೌಳ ಅಷ್ಟತಾಳ**

ಅಣುಗ ಸಣ್ಣವ ಯುದ್ಧಾಂಗಣದಿ ನೀ ಪಟುಭಟ । ರಣಕದಿಗೆಲುವೆನೆಂಬ ॥
ಎಣಿಕೆಯಬಿಡು ಬಂದು ಹೆಣಗುವ ರಿಪುಗಳು । ತೃಣಕೆ ಲೆಕ್ಕಿಸರು ನಿನ್ನ ॥೪೯॥

**ರಾಗ ಭೈರವಿ ಅಷ್ಟತಾಳ**

ಮಾಡಾಶೀರ್ವಾದವನ್ನು । ವಾಯುಜನೊಡ । ಗೂಡಿ ಪೋಗೆಂದು ನೀನು ॥
ನೋಡಾಮೇಲೆನ್ನ ಕೈ । ವಾಡವಾಂತರ ಹೊಡೆ । ದೋಡಿಸಿಬಹೆನು ಬದ್ಧಾ ॥೫೦॥

**ಭಾಮಿನಿ**

ಧುರದೊಳರಿತಿಂಥಿಣಿಯ ಸತ್ವದೊ ।
ಳಿರಿದಿರಿದು ಕಲಿಯವ್ವನಾಶ್ವನ ।
ಪರಿಭವಿಸದಿರೆ ದಿನಕರನ ಸಂಜಾತನಾತ್ಮಜನೇ ॥
ಪರಸಿಕಳುಹೆಂಬನಿತರಲಿ ಸಂ ।
ಗರ ಭಯಂಕರ ವರ ಘಟೋತ್ಕಚ ।
ತರಳತಲೆವಾಗುತ್ತ ಭೂಪೋತ್ತಮನೊಳಿಂತೆಂದ ॥೫೧॥

**ರಾಗ ಭೈರವಿ ಏಕತಾಳ**

ಅಜ್ಜನೆ ಕೊಡಿಸನುಮತಿಯ । ಎ । ನ್ನಜ್ಜನ ಪಯಣದಿ ಜತೆಯ ॥
ಉಜ್ಜುಗಿಸಿಹೆ ಘೋಟಕವ । ತಹ । ಕಜ್ಜದೊಳಿಹ ನಾಟಕವ ॥೫೨॥

ಅರ್ಗಳರೇಕಾದಿರಲಿ । ಸುರ । ವರ್ಗಾಧಿಪರೈತರಲಿ ॥
ಮೂರ್ಗಣ್ಣನ ದಯದಿಂದ । ನ । ಮ್ಮೂರ್ಗೆಳೆತಹೆ ಭರದಿಂದ ॥೫೩॥

ಪಾತಾಳದೊಳವಿತಿಡಲೀ । ಫಣಿ । ನಾಥನೆ ಬೆಂಬಲಗುಡಲೀ ॥
ಆ ತುರಗವ ಪಿಡಿತಂದು । ಕೊಡು । ವಾತನೆ ನಾಂಬಳಿ ಸಂದು ॥೫೪॥

**ಭಾಮಿನಿ**

ನೋಡಿಮುನಿ ಹಿಗ್ಗಿದನು ಮನದಲಿ ।
ಮಾಡುತುರಗಾಧ್ವರವ ಸಂಶಯ ।

ಬೇಡ ತಾನೇ ನಡೆವುದಿನ್ನೀ ಕಾರ್ಯ ಶೀಘ್ರದಲಿ ॥
ಕೂಡಿ ಬಪ್ಪುದು ಹರಿಯ ದಯವೆಂ ।
ದಾಡಿ ನೃಪತಿಯ ಪರಸಿ ನಡೆದನು ।
ಮೂಡಿದಿನ ಪಡುಗಡಲ ತಡಿಯೆಡೆಗೈದನಭ್ರದಲಿ ॥೫೫॥

**ವಾರ್ಧಕ**

ನಡೆದ ಮುನಿಯತ್ತ ಸಂಧ್ಯಾಸಮಯದೊಳಗಿತ್ತ ।
ಪೊಡವೀಶ ನಿತ್ಯ ವಿಧಿಯಂ ತೀರ್ಚಿ ಚಿತ್ತದೊಳ ।
ಗಡಿಗಡಿಗೆ ಯಾಗಮಂ ಮಾಡಲಾಪನೆ ಮಾಡಲಾರೆನೇ ನಿಜದೀಕ್ಷೆಯಂ ॥
ಹಿಡಿವೆನೇ ಬಿಡುವೆನೇ ತಾನೆಂದು ಚಿಂತಿಸುತ ।
ಜಡಜೇಕ್ಷಣನೆ ಜಗದ್ರಕ್ಷಕನೆ ಲೋಕಮಂ ।
ನಡೆಸುವಾತನೆ ಕೃಷ್ಣ ನಿನ್ನಿಷ್ಟದಂತಾಗಲೆಂದು ಧ್ಯಾನಿಸುತಿರ್ದನು ॥೫೬॥

**ರಾಗ ಕೇದಾರಗೌಳ ಝಂಪೆತಾಳ**

ಅನಿತರೊಳಗೋರ್ವ ಚರನು । ನಡೆತಂದು । ಜನಪತಿಯೊಳಿಂತೆಂದನು ॥
ದನುಜರಿಪು ದಯವದೋರಿ । ಇತ್ತಲರ । ಮನೆಗಾಗಿ ಬಹನು ಶೌರಿ ॥೫೭॥

ಬಂದನಚ್ಯುತನೆಂಬುದಾ । ಕೇಳಿ ನಡೆ । ತಂದನತಿವಿಭವದಿಂದ ॥
ನಿಂದಿದಿರ್ಗೊಂಡು ಮಣಿದು । ಹರಿಯ ಕರ । ತಂದು ಸಂತಸದಿ ಕುಣಿದು ॥೫೮॥

ಹರಿವಿಷ್ಟರವನೇರಿಸಿ । ಕಾಲ್ದೊಳೆದು । ಭರಿತಭಾವದೊಳರ್ಚಿಸೀ ॥
ಚರಣತೀರ್ಥವ ಸೇವಿಸೀ । ನುತಿಸಿದರು । ಸರುವರೊಂದಾಗಿ ನಮಿಸೀ ॥೫೯॥

ಜಯಜಯ ಜಗನ್ನಿವಾಸಾ । ಲಕ್ಷ್ಮೀಶ । ಜಯಜಯತು ಪೀತವಾಸಾ ॥
ಭಯಹರಣ ಪುಣ್ಯಚರಿತಾ । ರಕ್ಷಿಸ । ಕ್ಷಯಮಹಿಮ ಸುಗುಣಭರಿತ ॥೬೦॥

ಇಂತೈವರೇಕಮನದೀ । ಪೊಗಳುತಿರೆ । ಕಂತುಪಿತನವರ ದಯದೀ ॥
ಸಂತಸಂಗೊಳಿಸಿ ಪರಸಿ । ಪೇಳ್ದ ಭೂ । ಕಾಂತನೊಳು ಪ್ರೀತಿವೆರಸೀ ॥೬೧॥

೨

**ರಾಗ ಬಿಲಹರಿ ಅಷ್ಟತಾಳ**

ಧರಣಿಪಾಲಕ ಧರ್ಮಸೂನು । ನಿನ್ನ । ವರಭಾಗ್ಯ ಪೇಳಲಿನ್ನೇನು ॥
ಹರುಷವಾಂತೆನು ನೋಡಿ । ನಿರತ ಸನ್ಮತಿಗೂಡಿ ।
ಧರೆಯನಾಳುವ ಮಿಕ್ಕವರು ನಿ । ನ್ನೊರೆಗೆ ಬಾರರು ಧರ್ಮವೀರರು ॥ ಧರಣಿ ॥ ॥೬೨॥

ಜಂಭಾರಿಯಾಸ್ಥಾನದಿಂದ । ಮಿಕ್ಕಿ । ಕಾಂಬ ನಿನ್ನೋಲಗದಂದ ॥
ಕುಂಭಿನಿ ನೃಪನಿಕು । ರುಂಬದೊಳಿಲ್ಲ ಕು ।
ಲಾಂಬುನಿಧಿ ಪೂರ್ಣೇಂದು ನಿನ್ನ ಮು । ಖಾಂಬುಜದ ಸೊಬಗೇಕೆ ಕಂದಿತು ॥ ಧರಣಿ ॥ ॥೬೩॥

ಸೋದರರೊಳಗಾಯ್ತೆ ಭೇದ । ಬೇರೆ । ಮೇದಿನಿಪರೊಳುಂಟೆ ವಾದ ॥
ಸಾಧಿಪಹಗೆಯ ವಿ । ರೋಧಿಗಳಿಹರೆ ವಿ ।
ನೋದಗೋಷ್ಠಿಗೆ ಸಲದ ಮನಸಿನ । ವೇದನೆಯನುಸುರೆಂದಡೆಂದನು ॥ ಧರ ॥೬೪॥

**ರಾಗ ನೀಲಾಂಬರಿ, ತ್ರಿವುಡೆತಾಳ**

ಲಾಲಿಸು ಕಮಲನೇತ್ರ । ನೀರದ ಗಾತ್ರ । ಲಾಲೀಸು ಕಮಲನೇತ್ರ ॥ ಪಲ್ಲವಿ ॥

ಕಾಲಕಂಧರಕಂಜಸುತಸುರ । ಪಾಲ ಮುಖ್ಯಾಮರವಿನುತ ಕರು ।
ಣಾಲವಾಲಸುಶೀಲ ಲಕ್ಷ್ಮೀ । ಲೋಲತ್ರಿಭುವನ ಪಾಲಪಾವನ ॥ ಲಾಲಿಸು ॥೬೫॥

ಅರಿಗಳನ್ನೆಲ್ಲ ತೀರ್ಚಿ । ನಮ್ಮನು ನೆಲದ್ಯೆ । ಸಿರಿಯ ಸಂಪದಕೆ ಸಾರ್ಚಿ ॥
ಪೊರೆವ ನಿತ್ಯಾನಂದ ನಿನ್ನಯ । ಕರುಣದಿಂ ನಿಶ್ಚಿಂತನಾದರು ।
ಭರತಕುಲ ಸಂಹರಣ ಪಾಪಕೆ । ಮರುಗಿ ಮನವಿದು ಮರುಕಗೊಂಡುದು ॥ ಲಾಲಿಸು ॥೬೬॥

**ಭಾಮಿನಿ**

ಎಂದ ನುಡಿಯನು ಕೇಳಿ ನಸುನಗೆ ।
ಯಿಂದ ಶ್ರೀಹರಿ ನುಡಿದನೇನಿದು ॥
ಮಂದಮತಿಗಳು ಕೌರವಾದಿಗಳಳಿಯೆ ಕಾಳಗದಿ ॥
ಬಂದುದೇ ಕುಲಹತ್ಯ ನಿನಗಿದ ।
ನೆಂದರಾರು ವೃಥಾ ಮರುಳ್ತನ ।
ದಿಂದ ಮುನಿ ನುಡಿಯುರುಳು ಕಣ್ಣೊಳು ಸಿಲುಕಿದ್ಯೆ ನೃಪತೀ ॥೬೭॥

**ರಾಗ ಘಂಟಾರವ ಏಕತಾಳ**

ಅರಸುಕುವರರಾಗಿ ಹುಟ್ಟಿ । ಧುರಕೆ ಯುದ್ಧಾಂಗಣವ ಮೆಟ್ಟಿ ।
ನಿಂದರೇ । ಕಾದಿ । ಕೊಂದರೇ ॥೬೮॥

ಪಾಪಕೆ ಪಕ್ಕಾದೆನೆಂದಾ । ರೋಪಿಸುವ ಸಿದ್ಧಾಂತ ಚೆಂದ ।
ವಪ್ಪುದೇ । ನೋಡು । ತಪ್ಪದೇ ॥೬೯॥

ಅಜ್ಞನೇ ನೀ ತುರಗಾಧ್ವರ ಸ । ದ್ಯಜ್ಞವ ಕೈಕೊಂಡು ಮುಗಿಸ ।
ಲಾರ್ಪೆಯಾ । ಶೌರ್ಯ । ತೋರ್ಪೆಯಾ ॥೭೦॥

ದರ್ಪಯುತರ ಗೆಲಿದು ಕರವ | ತರ್ಪೊಡರಿದು ನಿಮ್ಮಂತರವ |
ಮಿಗುವರು | ನೋಡಿ | ನಗುವರು ||೭೦||

ಮಾಡಲರಿದು ಮಖವ ಚಿಂತೆ | ಬೇಡ ಬರಿದೆ ಬಯಲ ಭ್ರಾಂತೆ |
ದಕ್ಕದೂ | ಕುದುರೆ | ಸಿಕ್ಕದೂ ||೭೧||

**ಕಂದ**

ಸಾಹಸಿಗ ಯವ್ವನಾಶ್ವನ |
ನಾಹವದೊಳ್ಜೈಸಿ ಯಜ್ಞ ಹಯವಂತರುವೀ ||
ಬಾಹುಬಲನೀತನಿವನಂ |
ಹೋಹೋ ನಾವರಿತುದಿಲ್ಲವೇಯೆನೆ ಭೀಮಂ ||೭೩||

**ರಾಗ ಶಂಕರಾಭರಣ ಮಟ್ಟೆತಾಳ**

ವನಜನಾಭ ಕೇಳು ಧರ್ಮ | ತನಯನಿಷ್ಟಸಿದ್ಧಿಗಾಗಿ |
ಮುನಿವರೇಣ್ಯ ವ್ಯಾಸರೆಂದು | ದನುನಿದಾನಿಸೀ ||
ಮನದಿ ನಿಶ್ಚಯಿಸಿದೆವಿನ್ನು | ಬಿನುಗರಂತೆ ಬಿಡೆವು ಕಾರ್ಯ |
ಘನತೆಗಂಜಿ ಪೂಣ್ದು ತಪ್ಪು | ವೆನೆ ಪ್ರತಿಜ್ಞೆಗೇ ||೭೪||

ಅಂದು ತಂದೆ ನೆರೆದ ಖಚರ | ವೃಂದವನ್ನು ಸದೆದು ಸೌ |
ಗಂಧಿಕವನು ರಾಜಸೂಯ | ಕೆಂದು ಧಾವಿಸೀ ||
ತಂದೆ ಪುರುಷ ಮೃಗವನೇ | ನೆಂದು ಬಗೆದೆ ತರುವೆನೆಂದೊ |
ಡೊಂದು ಕುದುರೆಗಿನಿತನೆನ್ನ | ಮುಂದೆ ನುಡಿವುದೇ ||೭೫||

ಬಲ್ಲೆ ಪುರುಷ ಮೃಗವ ತಂದ | ಮಲ್ಲತನವದೀಗ ಬೇಡ |
ಗೆಲ್ಲಲರಿದು ಭದ್ರಪುರದ | ವಲ್ಲಭಾದ್ಯರ ||
ಇಲ್ಲಿ ಸುಖದೊಳುಂಡು ಬಾಯ | ಬಲ್ಲವಿಕೆಯೊಳಾಣೆಯಿತ್ತೋ |
ಡಲ್ಲಿ ಕೇಳ್ವರುಂಟೆ ನಿನ್ನ | ಸೊಲ್ಲ ಸಡಗರಾ ||೭೬||

**ರಾಗ ಕಾಂಭೋಜಿ ಝಂಪೆತಾಳ**

ನುಡಿದ ಭಾಷೆಗೆ ತಪ್ಪಿ ನಡೆದವನೆ ನೋಡುತಲೆ |
ಹೊಡೆದಿಕ್ಕಿ ಕೆಡಹಿ ನೂರ್ವರನು ||
ಮುಡಿಸಿದೆನು ದ್ರೌಪದಿಯ ಮುಡಿಗೆ ಕರುಳನು ಕಡೆಗೆ
ತೊಡೆಯುಡಿದೆನಾ ಸುಯೋಧನನ ||೭೭||

ಅಳಿಬಲರನಿಲ್ಲಿ ಜೈಸಿದೊಡೆ ಭದ್ರಾವತಿಯ |
ನೊಳಪೊಗುವ ಸತ್ವಯುತನಹೆಯಾ ||

ಅಳಿಮಲ್ಲಿಗೆಯ ಪೊದರ ತುಳಿದು ಬಂಡುಂಡೊಡದು ।
ಸುಳಿವುದೇ ಚಂಪಕಾವನವ ॥೭೮॥

ಅಳಿಬಲರೆ ಕಿಮ್ಮೀರ ಕೀಚಕ ಹಿಡಿಂಬಾದಿ ।
ಖಳರವರ ಜೀವವನು ಹಿಂಡಿ ॥
ಹಿಳಿದರಣಭೀಮನೀ ಭೀಮಭಾಷೆಯ ಹಿಂದು ।
ಗೆಳೆದುಳಿವನೇ ಮಾನ ನೀಗಿ ॥೭೯॥

ಮಾನನಿಧಿಯಹುದು ನೆತ್ತರ್ಗುಡಿದೆ ನೆರೆದಖಿಳ ।
ಸೇನೆಗಳ ನಡುವೆ ಕುಳ್ಳಿರ್ದು ॥
ದಾನವಿಯ ಕೈವಿಡಿದೆ ಬಾಣಸಿಗ ನಿನ್ನಯ ಕು ।
ಲೀನತೆಯನೆಲ್ಲ ನೀ ತೊರೆದು ॥೮೦॥

ಕೊಂದು ನರಕನನಲ್ಲಿ ರಕ್ಕಸಿಯರನು ಮದುವೆ ।
ನಿಂದೆ ಮೊಲೆಗೊಟ್ಟ ಪೂತನಿಯ ।
ಕೊಂದೆಮೊಲೆಹಾಲಿನೊಂದಿಗೆ ಪ್ರಾಣವನು ಹೀರಿ ।
ನಿಂದಿಸಲ್ಕಾರು ನೀನೆನ್ನಾ ॥೮೧॥

ಆರೆಂಬೆ ಬಕನ ಬಲಿಗೂಳ ಮುಕ್ಕಿದ ಸತ್ವ ।
ಸಾರಭಗದತ್ತನೊಳು ಪೊಣರಿ ॥
ವಾರಣದಿ ಸಿಲುಕಿರಲು ತೋರಿ ನರನಿಂ ಬಿಡಿಸಿ ।
ಪಾರುಗಾಣಿಸಿದಾತನರಿಯ ॥೮೨॥

**ವಾರ್ಧಕ**
ಬಲಿಗೊಳಿಸಿ ಗೋಪರಿಂಗೋವರ್ಧನಾಚಲಕೆ ।
ತಲೆಮರೆಸಿ ನೀನುಂಡನಿತನುಂಡೆನೇ ಕೃಷ್ಣ ।
ನೆಲೆಯಿಲ್ಲದಲೆದೆಯಾಂ ಕಲಿಜರಾಸಂಧನಂ ಕೊಲುವ ಮೊದಲೀಗ ಜಗಕೇ ॥
ಸಲೆದೈವವಾದೆ ಹೋಗಲಿ ನುಡಿದು ಫಲವೇನು ।
ನಿಲುವನಂ ನೋಳ್ಪೆನೆನ್ನಿದಿರೆಂದು ನಿಜಗದೆಯ ।
ನಲುಗಿ ಘುಡುಘುಡಿಸಿ ನಿಲುವನಿತರಲಿ ಧರ್ಮಜಂ ಮಾರುತಿಯ ತಡೆದೆಂದನು ॥೮೩॥

**ರಾಗ ಪುನ್ನಾಗ ಏಕತಾಳ**
ತಾಳುತಾಳ್ಯೆಯೆನ್ನ ತಮ್ಮನೇ । ಕೋಪ । ತಾಳುವದುಚಿತವೆ ಸುಮ್ಮನೇ ॥
ಭಕ್ತ । ರಾಳಾಗಿ ಸಲುವ ಕೃಪಾಳುವಿನಿದಿರಲಿ ॥ ತಾಳು ॥೮೪॥

ಯುಕ್ತವಾಗದು ಕೋಪ ಬಂದರೆ । ಯಜ್ಞ । ಭೋಕ್ತಾರನೇ ಬೇಡವೆಂದರೆ ॥
ನಮ್ಮ । ಶಕ್ತಿಸದ್ಯುಕ್ತಿಶಾ । ಸ್ತ್ರೋಕ್ತಿಯಿಂದಪ್ಪುದೇನು ॥ ತಾಳು ॥೮೫॥

ನೀನೆ ತಿಳಿದು ನೋಡು ನಿನ್ನಲಿ । ನಂದ । ಸೂನುವೆ ನಡಸಬೇಕೆನ್ನಲಿ ॥
ಮುಂದೆ । ತಾನೆತಾನಾಗಿ ಸು । ಮ್ಮಾನದಿ ನಡೆವುದು ॥ ತಾಳು ॥೮೬॥

**ಕಂದ**

ಬಡಬಡಿಸಿ ಭೀಮನಂ ಮುಂ ।
ಗಡೆಯೊಳ್ ಮುಳಿಸಾಂತನಂತೆ ತೋರುವ ಹರಿಯಂ ॥
ಪೊಡಮಟ್ಟು ನುತಿಸಿ ಪುನರಪಿ ।
ನುಡಿದಂ ಮೆಲುಮಾತಿನಿಂದ ಯಮಸುತನಾಗಳ್ ॥೮೭॥

**ರಾಗ ಧನ್ಯಾಸಿ ಏಕತಾಳ**

ಸ್ವಾಮೀ । ಜಯ । ತಾಮರಸಾಕ್ಷನಮಾಮಿ । ಸದ್ಭಕ್ತ ಪ್ರೇಮಿ ॥ ಪಲ್ಲವಿ ॥

ಕಾಮಜನಕ ಕಂಜೋದರ ನಿತ್ಯನಿ । ರಾಮಯ ನಿಜನಿಗಮಾಗಮವಂದಿತ । ಸ್ವಾಮಿ ॥ ಅ.ಪ ॥

ಮಾಡಲೂ । ಮುನಿ । ಯಾಡಿದ ಪರಿ ಮನ । ಮಾಡಿಬಿಟ್ಟರಿಂದು ।
ಜಗದೊಳ । ಗಾಡದಿಹರೆ ತಿಳಿ । ಗೇಡಿತನಕೆ ರಣ । ಹೇಡಿಗರಿವರೆಂದು ॥
ಆಡಲೂ । ಆನೇತರವನು ಕಾ । ಪಾಡಲೂ । ನೀನಲ್ಲದೆ ಮತ್ತೀ ।
ರೂಢಿಯೊಳಿಹರೇ । ನೋಡಲು ನಮ್ಮೊಡ ।
ಗೂಡಿ ನೋಡಿ ದಯ । ಮಾಡುವ ಮಹಿಮರು ॥ ಸ್ವಾಮೀ ॥೮೮॥

ಆದರೇ । ವಾ । ಗ್ವಾದವ ಮರೆದಪು । ದಾದಿಮೂರ್ತಿ ದಯದಿ ।
ಭೀಮನೊ । ಳಾದ ಖತಿಯ ಕಳೆ । ದಾಧರಿಸೈ ಕರು । ಣೋದಧಿಯನುನಯದಿ ।
ಈ ಧರೆ । ನುಂಗಲು ಬೀಜವ । ಮೇದರೆ । ಮೆಳೆ ಹೊಲವನು ಕಾಯುವ ।
ಹಾದಿಯಿಹುದೆ ನಿ । ನ್ನಾಧಾರಕೆ ಕುಂ ।
ದಾದರೆ ಪಾಂಡವ । ಸೋದರರುಳಿವರೆ ॥ ಸ್ವಾಮೀ ॥೮೯॥

**ವಾರ್ಧಕ**

ಇಂತೆನಲು ನಸುನಗುತ ಖಳವೈರಿ ನುಡಿದ ಕೇಳ್ ।
ಚಿಂತೆಯಂ ಬಿಡು ಭೂಪ ನಿನ್ನಮನದಣಿಕೆಯಿ ।
ದ್ದಂತೆ ನಡೆಸುವೆವಾವು ತುರಗಾಧ್ವರವ ಮಾಡು ಭೀಮನಿವನೇನೆಂದಡಂ ॥
ಅಂತರವನರಿಯವೇ ಸಾಕೆಂದು ಸಂತೈಸಿ ।
ಕುಂತೀ ಕುಮಾರರೆಲ್ಲರ ಬೇರೆ ಬೇರೆ ಮನ ।
ವಾಂತು ಮನ್ನಿಸಿ ಸುಖದೊಳಿರುಳಗಳೆದುದಯದೊಳು ಯಮಜನಂ ಕರೆದೆಂದನು ॥೯೦॥

**ಕಂದ**

ಕಳುಹಿಸು ಹಯಮಂ ತರ್ಪರ ।
ಗಳಿಗೆಯಿದೇಲೇಸು ಪಯಣಕಿನ್ನಾಂ ಪೋಪೆಂ ॥

ಬಳಿಯಟ್ಟು ಬರ್ಪೆ ಕಜ್ಜಂ ।
ಗೊಳೆಯವಸರಕೆಂದು ನುಡಿದು ಮುರರಿಪು ನಡೆದಂ ॥೯೧॥

**ರಾಗ ಘಂಟಾರವ ಅಷ್ಟತಾಳ**

ಅತ್ತ ದ್ವಾರಕೆಗೈದಲು ಗೋಪಾಲ ।
ನಿತ್ತ ಕರ್ಣಜ ಮೇಘನಾದ ಮ । ರುತ್ತನಯರೀ ಮೂವರು ॥೯೨॥

ಬಂದನುಜ್ಞೆಯ ಹೊಂದಿ ಭೂಪಾಲನ ।
ವಂದಿಸುತ ಬೀಳ್ಕೊಂಡು ಸಂತಸ । ದಿಂದ ತಾವ್‌ನಡೆ ತಂದರು ॥೯೩॥

ದಾರಿಯುದ್ದಕೆ ಶುಭಶಕುನವ ನೋಡಿ ।
ಮೀರಿ ಮನದಲಿ ಹಿಗ್ಗಿ ಕಂಡರು । ದೂರದಿಂ ಗಿರಿಯೊಂದನು ॥೯೪॥

**ಭಾಮಿನಿ**

ಹತ್ತಿದರು ಶಿಖರವನು ತದ್ಗಿರಿ ।
ಯೊತ್ತಿನಲಿ ರಾಜಿಸುವ ಭೂಪ ಕು ।
ಲೋತ್ತಮನ ಭದ್ರಾವತೀಪುರವದರ ಚೆಲುವಿಕೆಗೆ ॥
ಚಿತ್ತದಲಿ ಬೆರಗಾಂತು ತನ್ನಯ ।
ಹತ್ತಿರದಿ ಕುಳ್ಳಿರಿಸಿತಲೆದೂ ।
ಗುತ್ತ ಮಾರುತ ಜಾತ ಕರ್ಣಾತ್ಮಜನೊಳಿಂತೆಂದ ॥೯೫॥

**ರಾಗ ಕಾಂಭೋಜಿ ಝಂಪೆತಾಳ**

ಭಾನು ಸುತಸುತನೆ ನೋ । ಡೀ ನಗರರಚನಾ ವಿ । ಧಾನವನು ಪುರದಸಂಪದವ ।
ಆನುಸುರಲರಿಯೆನಿ । ದ್ದಂತೆ ಬಣ್ಣಿಸಲು ಚತು । ರಾನನಂಗಾದರಸದಳವೂ ॥೯೬॥

ಮನಸಿಜೋದ್ಭವಕಾರಿ । ವನಮಾಲಿಕಾ ಶೋಭಿ । ಯನವರತ ಶ್ರೀಕರಗ್ರಾಹೀ ॥
ಎನಗೆ ಕುಂದೇನಿನ್ನು । ವನಜಾಕ್ಷನಂತಿರ್ಪೆ । ನೆನುವಂತೆ ತೋರ್ಪುದೀನಗರೀ ॥೯೭॥

ತೆಂಗು ಹಲಸಿಮ್ಮಾವು ಕೌಂಗು ಹೊಂಬಾಳೆ ಚೆಂ । ದೆಂಗುಗಳ ತೋಟವಲ್ಲಲ್ಲೀ ॥
ಕಂಗೊಳಿಸುತಿದೆ ಕೈ ಹೊ । ಲಂ ಪುರಾಂಗನೆ ಪಚ್ಚೆ । ರಂಗು ಸೀರೆಯನುಟ್ಟತೆರದೀ ॥೯೮॥

ಮುಗಿಲಮುಟ್ಟುವಕೋಟೆ । ಯಗಳಗಡಿ ಪಾತಾಳ । ಹಗೆತನದಿ ಹೊಗುವದೆಂತಿದರ ॥
ಮಗನೆ ನೀನೋಡೊಂದು । ಯುಗ ಯುದ್ಧವೆಸಗಿದರು । ಸಿಗುವದೆಂತೈ ಕೈಗೆ ತುರಗಾ ॥೯೯॥

**ಕಂದ**

ಹರಿಯಾಡಿದ ನುಡಿಯಂದಂ ।
ಸರಿಯಾದುದೆ ಪೋಗಲರಿದೆ ಪುಗಲೆಡೆಗುಡದೇ ।

ಪುರವಿದು ನಮಗೆನೆ ಕೇಳ್ದಾ |
ಧುರವಿಕ್ರಮ ಮೇಘನಾದನವನೊಡನೆಂದಂ ||೧೦೦||

**ರಾಗ ಮಾರವಿ ಏಕತಾಳ**
ಮುತ್ತಯ್ಯನೆ ಕೇಳೀ ಪುರದಗಳನು | ಹತ್ತಿಳಿಯಲದೇಕೆ ||
ಪತ್ತನವನು ಪುಗಲೇಕೀಯೋಚನೆ | ಚಿತ್ತಕೆ ತರಲೇಕೆ ||೧೦೧||

ಪಿಡಿದಾ ತುರಗವ ತಂದಿಲ್ಲಿಗೆ ನಿ | ನ್ನಡಿಗಳಿಗೊಪ್ಪಿಸುವೇ |
ತಡೆವವರನು ತಲೆಬಡಿದೆನ್ನಯ ಕೈ | ಬೆಡಗನು ತೋರಿಸುವೆ ||೧೦೨||

ಬಂಧಿಸಿ ತುರಗವ ನಿಂದಿರೆ ನಾವ್ ನಡೆ | ತಂದಪರರಿಭಟರು
ಮುಂದೆ ರಣಾಂಗಣವೀಯೆಡೆಗಾಗಲಿ | ಹೊಂದಲಿ ಸಮಸಮರ ||೧೦೩||

ನೋಡಲಿ ನಿನ್ನ ಗದಾಘಾತದ ಸವಿ | ನೋಡಲಿ ಕರ್ಣಜನ |
ಪಾಡಿನ ಪೊಸಮಸೆಯಲಗಿನ ಸವಿ ಹರಿ | ದೋಡಲಿ ರುಧಿರಜಲಾ ||೧೦೪||

**ರಾಗ ಸೌರಾಷ್ಟ್ರ ತ್ರಿವುಡೆತಾಳ**
ಆಗ ರವಿಜಜ ನುಡಿದ ಪಿತಕೇಳ್ | ಮೇಘನಾದನ ಕಾರ್ಯಕುಶಲೋ |
ದ್ಯೋಗವೇಲೇಸಲ್ಲದಿನ್ನೊಂ | ದಾಗಲರಿದು ||೧೦೫||

ಆದರವಸರ ಸಲದು ಕಾಲವ | ಸಾಧಿಸದೆ ಕಣ್ಣಾರೆ ಕಾಣದೆ |
ಹೋದರಾ ಕುದುರೆಯನು ತರುವೊಡೆ | ಹಾದಿಯಿರದು ||೧೦೬||

ತಂದಪರು ನೀರ್ಗಾಗ ಹಿಡಿದೆಳ | ತಂದು ಕಟ್ಟಿದಡಿಲ್ಲಿಮತ್ತೆ |
ತಂದು ಬಿಡಿಸುವ ವೀರರುಂಟೆ ವ | ಸುಂಧರೆಯಲಿ ||೧೦೭||

**ಭಾಮಿನಿ**
ಹೊಗಳಿದನು ಮಕ್ಕಳನು ಮಾರುತಿ |
ಮಿಗುವ ಕಾರ್ಯಾಲೋಚನೆಗೆ ಬಗೆ |
ಬಗೆಯ ಮಾತಿಂದನಿತರಲಿ ಮಧ್ಯಾಹ್ನವಾಗಿರಲು ||
ಪೊಗುವನೀರ್ಗೊಳದಿಂದ ಪೊರಮಡು |
ವಗಣಿತಶ್ವಾವಳಿಯೊಳಾ ಪೊಸ |
ಬಗೆಯ ಚೆಲುವಿನ ಹಯವ ಕಾಣದೆ ಮನದಿ ಮರುಗಿದನು ||೧೦೮||

**ರಾಗ ನೀಲಾಂಬರಿ ರೂಪಕತಾಳ**
ಆರೊಡನುಸುರುವೆ ಕರ್ಣಕು | ಮಾರನೆ ನಮಗಿಂದೊದಗಿದ |
ದಾರುಣ ಸಂಕಷ್ಟಕೆ ಪರಿ | ಹಾರವದಿನ್ನಿಹುದೇ ||

ಚಾರುಸುಲಕ್ಷಣವಾರುಹ । ತೋರದು ತನಗಾಗಡಣದಿ ।
ತೋರದು ಬುದ್ಧಿಗೆ ಮುಂದಿನ । ದಾರಿಯು ಮುರಹರನೇ ॥೧೦೯॥

ಮುನಿವರ ಪುಸಿದನೆ ಪುಸಿದೊಡೆ । ವನರುಹಲೋಚನೆ ಸ್ಯೆರಿಸು ।
ವನೆ ಸ್ಯೆರಿಸೆ ಹತಭಾಗ್ಯನೆ । ಜನಪತಿಯಮಜಾತಾ ॥
ಜನಪತಿ ಹತಭಾಗ್ಯರೊಳೆಂ । ದೆನುವೆನೆ ಶುಭಶಕುನದೊಳಿ ।
ನ್ನೆನಗೊದಗುವ ಫಲನಿಷ್ಫಲ । ವೆನಲಿನ್ನಾರ್ಗೆನಲಿ ॥೧೧೦॥

ಭದ್ರಾವತಿಯಿಂತುರಗಲ । ಸದ್ರತ್ನವ ತಹೆನೆಂದಾ ।
ನುದ್ರೇಕದೊಳಾಡಿದೆ ಬಲ । ಭದ್ರಾನುಜನೊಡನೆ ॥
ಮದ್ರಚಿತಾಂಭಂಗ ಗು । ರುದ್ರೋಹಗಳೊಂದಿಗೆ ಧ ।
ರ್ಮದ್ರೋಹವೆ ಹಾ ಸಲಹೊ ಜ । ಗದ್ರಕ್ಷಣ ನಿಪುಣ ॥೧೧೧॥

**ಭಾಮಿನಿ**
ಸಲ್ಲಲಿತಲಕ್ಷಣದ ಹಯಮಿ ।
ಲ್ಲಿಲ್ಲದಿರ್ದೊಡೆ ವಿಧಿವಶದಿ ಭೂ ।
ವಲ್ಲಭನಕಂಡಪೆನದೆಂತೋ ಮೂರುಲೋಕದಲೀ ॥
ಎಲ್ಲಿರಲಿ ತಂದಪ್ಪನುಳಿದಡೆ ॥
ಸಲ್ಲದೆನ್ನಯ ಭಾಷೆಯೆನೆಪದ ।
ಪಲ್ಲವಕೆ ಹ್ಯೆಡಿಂಬಿಸುತತಲೆವಾಗುತಿಂತೆಂದ ॥೧೧೨॥

**ರಾಗ ಸೌರಾಷ್ಟ್ರ ಅಷ್ಟತಾಳ**
ಚಿಂತೆಯ ಬಿಡುಕಾರ್ಯ ಸಫಲವಪ್ಪಂತಿದೆ । ಅಜ್ಜ ಕೇಳು ॥ ಬಪ್ಪ ।
ಪಾಂಥರನೆರವಿಯಿಂದುಲುಹು ಕೇಳಿಸುತಿದೆ । ಅಜ್ಜ ಕೇಳು ॥೧೧೩॥

ಎಡಬಲದಲಿ ವಾಘೆವಿಡಿದು ತಂದಪರಿತ್ತ ॥ ಅಜ್ಜ ಕೇಳು । ಚೆನ್ನ ।
ದೊಡವೆಯಿಂ ಶೃಂಗಾರಮಾಗಿರ್ಪುದಾ ಹಯ । ಅಜ್ಜ ಕೇಳು ॥೧೧೪॥

ಆಯುಧ ಪಾಣಿಗಳಧಿಕ ಸಂಭ್ರಮದಿಂ । ಅಜ್ಜ ಕೇಳು । ಸುತ್ತು ।
ಕಾಯುವರದೊ ನೋಡು ಮುನಿಪೇಳ್ದ ಗುರುತಿದೆ । ಅಜ್ಜ ಕೇಳು ॥೧೧೫॥

ತಪ್ಪದಾ ಕುದುರೆಯೆ ಕಪ್ಪೈಸೆಕಿವಿಯೊಂದು ॥ ಅಜ್ಜ ಕೇಳು । ಎನ ।
ಗಪ್ಪಣೆಕೊಡು ಹಿಡಿತಪ್ಪೆನೀಕ್ಷಣದಲ್ಲಿ ॥ ಅಜ್ಜ ಕೇಳು ॥೧೧೬॥

**ರಾಗ ಶಂಕರಾಭರಣ ಮಟ್ಟೆತಾಳ**
ನುಡಿದನುಜ್ಞೆಯಾಂತು ಭೀಮ । ನಡಿಗೆ ಮಣಿದು ಮೇಘನಾದ ।
ನಡೆದನಶ್ವರಕ್ಷಕರನು । ತಡೆದು ಗರ್ಜಿಸಿ ॥

ಒಡನೆ ಮುಗಿಲುಗಾಳಿ ಮಿಂಚು । ಸಿಡಿಲು ಕಲ್ಮಳೆಗಳ ಸಿಟ್ಟಿ ।
ವಡೆದು ಮಾಯಕದಲಿ ಭಟರ । ಬಡಿದ ಭಂಗಿಸಿ ॥೧೧೭॥

ಎತ್ತ ನೋಡಲತ್ತ ಕರದಿ । ಕತ್ತಿ ಕುಂತಶೂಲವಿಡಿದು ।
ಮುತ್ತಿಕೆತ್ತಿಕುತ್ತಿ ಕಡಿವ । ದೈತ್ಯರಿದಿರಲಿ ॥
ಅತ್ತಲಿತ್ತ ಜುಣುಗಿ ಜಾರಿ । ಸತ್ವವಳಿದು ಗಾಯವಡೆದು ।
ಸತ್ತರೋಡಿದರು ಕೆಲಂಬ । ರೆತ್ತಲೆನ್ನದೆ ॥೧೧೮॥

ಅಂಧಕಾರ ಕವಿಸಿಬಲವ । ನಂದಗೆಡಿಸಿ ವಾಮಕಕ್ಷ ।
ದಿಂದ ಹಯವನೌಂಕಿಹಿಡಿದು । ನಿಂದನಭ್ರದಿ ॥
ಮಂದಮತಿಯೆ ಕೇಳು ಕಳ್ಳ । ರಂದವಿದು ಪರಾಕ್ರಮಕ್ಕೆ ।
ಕುಂದು ವೀರನಹಡೆನಿ । ಲ್ಲೆಂದು ಜರೆದರು ॥೧೧೯॥

೪

**ಭಾಮಿನಿ**
ಭಂಡರಿರ ಬಗುಳದಿರಿ ಜೀವವ ।
ಕೊಂಡು ನಡೆವ ಕೃತಾಂತ ದೂತರ ।
ಕಂಡು ಪೆಣನಡ್ಡೈಸುವಂತಾಯ್ತೆಸಲೇ ನಿಮ್ಮ ॥
ಗಂಡು ತನವಿಂದೆನುತ ತುರಗವ ॥
ಕೊಂಡು ನಡೆದ ಪ್ರಚಂಡ ವಿಕ್ರಮ ।
ದಿಂಡುಗೆಡೆದೈತಂದು ನೃಪತಿಯೊಳೆಂದರೀ ಹದನ ॥೧೨೦॥

**ರಾಗ ಸೌರಾಷ್ಟ್ರ ಏಕತಾಳ**
ಲಾಲಿಸಬೇಕು ಯವ್ವನಾಶ್ವ । ಭದ್ರಾವತೀಶ । ಲಾಲಿಸಬೇಕು ।
ಲಾಲಿಸು ಪರಭೂ । ಪಾಲರ ಮಾಯಾ । ಜಾಲವರಿಪುಶುಂ । ಡಾಲ ಮೃಗೇಶ ॥ ಪಲ್ಲವಿ ॥

ಸತ್ರವಾಜಿಯ ನೀರಿಗೆಂದು । ಕೊಂಡೊಯ್ಯಲಿಂದು ।
ಧೂರ್ತ ದಾನವನೋರ್ವ ಬಂದು । ಯುದ್ಧಕ್ಕೆ ನಿಂದು ॥
ಕತ್ತಲೆವೀಸಿ ಸ । ಮಸ್ತ ಬಲವತರಿ । ದೊತ್ತಿದದೋರ್ಬಲ । ಸತ್ವಸಮರ್ಥ ॥೧೨೧॥

ಸಂಗರ ಶೂರರತ್ಯಾತುರದಿ । ಕಾದಾಡಿಧುರದಿ ॥
ಭಂಗವಟ್ಟರು ಖಳನ ಶರದಿ । ನಡೆತಂದುಭರದಿ ।
ಬಾಂಗೇರಿದನು ತು । ರಂಗವ ಪಿಡಿದೇ । ಕಾಂಗ ವೀರನು । ತ್ತುಂಗ ಬಲಾಢ್ಯ ॥೧೨೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಚಾರರೆಂದುದ ಕೇಳಿ ಕಡು ಖತಿ । ಯೇರಿ ನುಡಿದನಿದೇನು ನಮ್ಮಯ ।
ಚಾರುತುರಗವನೊಯ್ದರೇ ರಿಪು । ಚೋರರಿಂದು ॥೧೨೩॥

ಎಲ್ಲಿ ತನಯ ಸುವೇಗ ಜೋಧರ । ದೆಲ್ಲಿ ರಾವ್ತರದೆಲ್ಲಿ ರಥಿಕರ ।
ನೆಲ್ಲರನು ಬರಹೇಳು ಯುದ್ಧಕೆ । ನಿಲ್ಲದೀಗ ॥೧೨೪॥

ಉತ್ತಮಾಶ್ವವ ಕಳ್ಳತನದಿಂ । ದತ್ತಕೊಂಡೋಡಿದರೆ ಬಿಡುವೆನೆ ।
ಮೃತ್ಯು ಮುಖದಿಂದವಗೆ ತಕ್ಕ ನಿ । ವೃತ್ತಿಗೊಡದೆ ॥೧೨೫॥

ಇಷ್ಟು ದಿನ ಪರ್ಯಂತ ನಮ್ಮಿ । ಪಟ್ಟಣಕೆ ಹಗೆಗೊಂಡು ಬಂದ ಗ ।
ರಿಷ್ಠರನು ನಾ ಕಾಣೆನೆಂದೆಂ । ಬಷ್ಟರೊಳಗೆ ॥೧೨೬॥

ಕೇಳಿ ಕೆರಳಿ ಸುವೇಗನಾ ಭೂ । ಪಾಳನಂಘ್ರಿಗೆ ಮಣಿದು ಪ್ರಳಯದ ।
ಕಾಳ ಭೈರವನಂತೆ ರೌದ್ರವ । ತಾಳಿ ನುಡಿದ ॥೧೨೭॥

**ರಾಗ ಮಾರವಿ ಏಕತಾಳ**

ತಾತನೆ ಕೇಳ್ ನಿ । ಭ್ರೀತಿಯೊಳೋರ್ವ ನೃ । ಘಾತುಕನ್ಯೆತಂದು ।
ಘಾತಿಸಿ ಚರರನು । ಕೊಂಡೊಯ್ದನೆ ನ । ಮ್ಮಾತುರಗವನಿಂದು ॥೧೨೮॥

ನಡೆಯಲಿ ಬೇಕಾ । ದೆಡೆಯಲಿ ಖಳ ಕಂ । ಡೆಡೆಯೊಳಗಡಗಿರಲಿ ॥
ಹುಡುಕಿ ಹಿಡಿದು ಹರಿ । ಗಡಿದೀಡಾಡದೆ । ಬಿಡುವೆನೆ ನೀಚನನು ॥೧೨೯॥

ಹೂಡಲಿ ಸೂರ್ಯನ । ಹಯರಥಗಳ ಸಮ । ಜೋಡಿನೊಳನುವಾಗಿ ॥
ದೂಡಲಿ ಸುರಹಯ । ಕಾಗಿ ಜತೆಯ ಹೊ । ದಾಡಿ ತರುವೆ ಭರದಿ ॥೧೩೦॥

ಅಸಮಾಕ್ಷನ ಮರೆ । ಯೊಗುವನೆ ಮಿಗೆ ತಾ । ಯ್ಬುಸುರನು ಪೊಕ್ಕಪನೆ ॥
ಬಿಸಜಾಕ್ಷನದಯ । ನಮಗಿದ್ದರೆ ಜೀ । ವಿಸಲಿನ್ನಾರ್ತವನೆ ॥೧೩೧॥

**ವಾರ್ಧಕ**

ಏನೆಂಬೆ ಯವ್ವನಾಶ್ವಂ ದಶಾಕ್ಷೋಹಿಣೀ ।
ಸೇನೆಯಂ ನೆರಹಿ ಮಗನಂ ಕೂಡಿ ಪೊರಟನನು ।
ಮಾನದಿಂ ಮೇಘನಾದಂ ಪೋದ ಕುರುಪನರಿದಪರ ದಿಗ್ಭಾಗದತ್ತ ॥
ಆ ನರಾಧಿಪನ ಬರವಂ ನೋಡಿ ಪವಮಾನ ।
ಸೂನು ಹಯ ರಕ್ಷಣೆಗೆ ಮೊಮ್ಮಗನ ನಿಲಿಸಿ ಮದ ।
ದಾನೆಯಂತಿಳಿದನಾ ಪರ್ವತದ ಶಿಖರದಿಂ ಕರ್ಣಾತ್ಮಜಾತನೊಡನೆ ॥೧೩೨॥

**ಕಂದ**

ಇದಿರಾಂತಿರ್ಕಡೆಯಿಂ ರಿಪು ।
ಕದಳೀವನ ಕಲಭದಂತೆ ಸೈನ್ಯವನಿರಿಯಲ್ ।
ವಿಧುಧರನೊಲು ಯವನಾಶ್ವಂ ।
ಪದುಮಾಪ್ತನ ಮೊಮ್ಮನೊಡನೆ ಮಾರ್ಮಲೆದೆಂದಂ ॥೧೩೩॥

**ರಾಗ ಶಂಕರಾಭರಣ ಅಷ್ಟತಾಳ**

ವೀರನಹುದೊ ಭಾಪುರೆ ನ । ಮ್ಮೂರ ಸೇರಿ ಮಾಯಕದಲಿ ॥
ವಾರುಹವನು ಕದ್ದು ತಂದ । ಚೋರ ನೀನೆಲಾ ॥೧೩೪॥

ಚೋರನಲ್ಲ ನೋಡು ಸತ್ವ । ಸಾರನೆಂದು ನಿನಗೆ ರಣದಿ ॥
ತೋರಿ ಕೊಟ್ಟುಕೊಂಡು ನಡೆವೆ । ಚಾರುಹಯವನು ॥೧೩೫॥

ಹಿಡಿದ ತುರಗವನ್ನು ಬಿಟ್ಟು । ಕೊಡುವದೊಳ್ಳಿತೀಗ ನಿನ್ನ ॥
ಕಡುಹತೋರಿ ಕೆಡುವ ದಾರಿ । ಹಿಡಿಯ ಬೇಡೆಲಾ ॥೧೩೬॥

ಹಿಡಿದ ಮೇಲೆ ಬಿಡುವುದುಂಟೆ । ನುಡಿವುದೇಕೆ ವ್ಯರ್ಥ ಹಯವ ॥
ಬಿಡುವನಲ್ಲ ಶೌರ್ಯವಿರಲು । ಬಿಡಿಸು ಬಾರೆಲಾ ॥೧೩೭॥

ಧುರಕೆ ಯೋಗ್ಯನಲ್ಲ ನಮ್ಮ । ಶರವ ತಡೆಯಲಾರೆ ಬೇಡ ॥
ತರಳುತನದ ಮಾತನಾಡಿ । ಹರಣಗೊಡದಿರು ॥೧೩೮॥

ತರಳನಹುದಂಜುವೆನೆ ಮಾಂಸ । ಭರಿತಘನಗಾತ್ರಂಗೆ ನಿನಗೆ ॥
ಕರಿಗೆ ಬೆದರಿ ಸರಿವ ಮರಿ ಕೇ । ಸರಿಯೇನಿರುವುದೆ ॥೧೩೯॥

**ಭಾಮಿನಿ**

ಹಾಲನೆರೆದಂತಾಯ್ತು ಹಾವಿಗೆ ।
ಬಾಲಕನೆ ನಿನಗೆಂದ ನುಡಿ ಹುರಿ ।
ಗೋಲ ಸವಿನೋಡಾದರಿದಕೋ ಸೈರಿಸೆಂದೆಚ್ಚ ॥
ಹಾಲನೆರೆದ್ಯೆ ಭೂಪ ಹಾವಿನ ।
ಬಾಲವನು ಬಡಿದೆಬ್ಬಿಸಿದೆ ಕಡೆ ।
ಗಾಲವಿದು ನಿನಗಿನ್ನು ನೋಡೆಂದಾರ್ದು ಖಂಡಿಸಿದ ॥೧೪೦॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಾತಿನಲಿ ಬಲು ಚಪಲನೈ ಸ । ತ್ವಾತಿಶಯ ಸಂಪನ್ನ ನೀ ನಿ ।
ರ್ಭೀತನಹೆ ಮೆಚ್ಚಿದೆನು ನಿನ್ನಯ । ತಾತನಾರೈ ॥೧೪೧॥

ನಿಂದು ಕಾದುವ ಸಮಯದಲಿ ತಾಯ್ | ತಂದೆಯರ ಹೆಸರೇಕೆ ಕರ್ಣಾ |
ನಂದ ಕರವಹ ಮಾತಿನಿಂ ಜಯ | ಹೊಂದದೈಸೆ ||೧೪೨||

ಮತ್ತನಾದೆಯ ಕುದುರೆಯನು ಕ | ದ್ದಿತ್ತ ತಂದಿಹೆನೆಂಬ ಗರ್ವದಿ |
ಹೊತ್ತುಗಳೆಯದೆ ಮಾಳ್ಪೆ ಪ್ರಾಯ | ಶ್ಚಿತ್ತ ವಿಧಿಯ ||೧೪೩||

ಕರೆಸು ಹಿರಿಯರ ಬೆಂಬಲಕೆ ಪವಿ | ಶರವಿದಕೊ ಕೊಳ್ಳೆಂದು ಹೂಡಿದೊ |
ಡುರವತಾಗಿತು ಕರ್ಣಸುತ ಮೈ | ಮರೆದನಾಗ ||೧೪೪||

**ಕಂದ**
ಅರೆನಿಮಿಷದಿ ಮೈಮರೆದೆ |
ದ್ದರಿ ಸಾರಥಿಯಂ ತಗುಳ್ದರಿಪು ಭೂಭುಜನಂ |
ಹರಿವಿದ್ರೋಹಿಯೆ ನಿಲ್ಲಂ |
ದಿರಿಯಲ್ಕಾನೃಪತಿ ಬಿಳ್ದುಮೂರ್ಛೆಗೆಸಂದಂ ||೧೪೫||

**ವಾರ್ಧಕ**
ಚೇತರಿಸಿಕೊಂಡೆದ್ದು ನೃಪತಿ ನುಡಿದಂ ರಮಾ |
ನಾಥ ಹಾ ನಿನ್ನವನ ಮರೆದೆಯಾರಣದಿ ಕೈ |
ಸೋತುನಿಲುವಂತಾಯ್ತೆ ನಿಷ್ಠೆ ನಿಜಕರ್ತವ್ಯ ಸತ್ಯಕ್ಕೆ ತೊಡಕಾದುದೆ ||
ಘಾತಿಸಿದನಿವನೀ ಕುಮಾರಂ ಕುಮಾರನೇ |
ಪಾಥೋರುಹಾಕ್ಷ ನೀನೇ ಬಲ್ಲೆಯಾದಡಾಂ |
ಮಾತನಾಡಿಸಿ ನೋಳ್ಪೆ ನಿನ್ನೊಮ್ಮೆಗೆಂದ ಮತ್ತಾತನೊಡನಿಂತೆಂದನು ||೧೪೬||

**ರಾಗ ಮಧ್ಯಮಾವತಿ ಏಕತಾಳ**
ಕೇಳೆನ್ನ ಮಾತನು ವೃಷಭಸುಕೇತಾ | ಪೇಳುವೆನಿನ್ನೊಡನಿಪ್ಪೊಂದು ಮಾತ ||
ಕಾಳಗದೊಳುಸೋತು ನುಡಿದಪನೆಂದು | ತಾಳಬೇಡನು ಮಾನಮುನಿನ್ನೊಳಿಂದು
ಕೇಳಯ್ಯಾ ಮಾತ ಕೇಳಯ್ಯಾ ||೧೪೭||

ಅಳಿವುಳಿವುದಕಾಗಿ ಬೆದರುವನಲ್ಲ | ಕೊಳುಗುಳವನು ಬಿಟ್ಟು ಕಳೆಯೆಸುಳ್ಳಲ್ಲ ||
ನಳಿನಾಭನ ಪದಕಿಂಕರರಾವು | ಅಳುಕುವೆವಾತನ ಮನಕಾಗೆ ನೋವು ||೧೪೮||

ಜಡಜಲೋಚನನ ವಿದ್ರೋಹಿಯಾನೆಂತು | ಕಡೆಗೆಂದ ನಿನ್ನ ಮಾತಿನೊಳಾಯ್ತು ಭ್ರಾಂತು ||
ನುಡಿವೀರನಹುದು ನೀನಾರಕುಮಾರ | ನಡೆತಂದುದೇಕೆಯೇನುಂಟು ವಿಚಾರ ||೧೪೯||

ವಾರುಹವನು ಪಿಡಿದೊದಾತನೆತ್ತ | ಸಾರಿದನಾರ ಮಾತಿಂದ ನೀನಿತ್ತ ||
ಘೋರಸಂಗರಕಾಗಿ ಬಂದೆ ಹೇಳೆಂದ | ಧಾರಿಣಿಪತಿಮಾತಿಗಾತನಿಂತೆಂದ ||೧೫೦||

**ರಾಗ ಭೂಪಾಳಿ ಅಷ್ಟತಾಳ**

ಭೂಪಾಲ ತಿಲಕ ಚಿತ್ತೈಸು ಸದ್ಗುಣಿಯೆ | ನಾಪೇಳ್ವನುಡಿಗಳ ಹರಿಭಕ್ತಾಗ್ರಣಿಯೆ ‖ ಪಲ್ಲವಿ ‖

ತರಣಿ ಸಂಜಾತಲೋಕೈಕವಿಕ್ರಮದಾನ |
ಪರ ಕರ್ಣನಾತನ ಸುತವೃಷಕೇತನಾ | ಗಿರುವೆನ್ನೈ ಕ್ರತುವೊಂದನು ‖
ಯುಧಿಷ್ಠರ | ಧರಣಿಪ ಗುಣಸಾಂದ್ರನು |
ಗೆಯ್ಯುವುದೆಂದು | ತಿರುವನಾಂತಿಹನು ಹಸ್ತಿನಪುರವರನು ‖ ಭೂಪಾಲ ‖ ‖೧೫೧‖

ಬಂಧುಹತ್ಯದ ಪಾಪಕಾಗಿ ಪಾರಾಶರ್ಯ |
ನೆಂದಂತೆ ಮಾರುತನಂದನಸಹನಾವು | ಬಂದೆವು ಮೂವರಿತ್ತ |
ಶ್ರೀ ವರನಾಜ್ಞೆ | ಯಿಂದ ವಾಜಿಯ ನಿಮಿತ್ತ | ಹಯಾಧ್ವರ | ಕೆಂದು ಕೊಂಡೊಯ್ಯಲತ್ತ |
ಘಟೋತ್ಕಚ | ಕಂದನದನು ಹಿಡಿತಂದ ನಮ್ಮತ್ತಾ ‖ ಭೂಪಾಲ ‖ ‖೧೫೨‖

ಮತ್ತಾದುದನು ನೀನೆ ಬಲ್ಲೆಯೆಂದೆನಲೆಂದ |
ಮಿತ್ರಪೌತ್ರನೆ ಬಂದೆನ್ನ ಽನಾಂಧತೆಗೆ ನೀ | ಮಿತ್ರನಂತಾದೆಯಿಂದು ‖
ಧರ್ಮವೆರೂಪು | ವೆತ್ತ ನೃಪಾಲನೆಂದ | ಧರ್ಮಜನ ಸ | ಮಸ್ತರಾಡುವರಿಂತೆಂದು ‖
ಯಾಗವ ಪುರು | ಷೋತ್ತಮ ನಡೆಸಲಿನ್ನಪ್ಪುದೆ ಕುಂದು ‖ ಭೂಪಾಲ ‖೧೫೩‖

**ಭಾಮಿನಿ**

ಸಫಲವಪ್ಪುದು ಭಕ್ತಸುರಪಾ |
ದಪನ ಪ್ರೀತ್ಯರ್ಥದಲಿ ಸಲುವೀ |
ವಿಪುಲಧನಕನಕಾದಿ ವಸ್ತೂತ್ಕರಗಳಿವು ಸಿದ್ಧ ‖
ಚಪಲಹಯಮಿದನೊಂದನೇ ಕೊ |
ಟ್ಟಪೆನೆ ಕೊಡೆ ಸರ್ವಸ್ವವಲ್ಲದೆ ‖
ರಿಪುಗಳೇ ನೀವಿನ್ನು ಮಾರುತಸುತನದೆಲ್ಲಿಹನು ‖೧೫೪‖

**ಕಂದ**

ಅಂತಾಗೆ ತೋರ್ಪೆಬಾರೆನೆ |
ಸಂತಸದಿಂದೀರ್ವರೇರಿ ರಥಮೊಂದರೊಳಂ ‖
ನಿಂತೈತರಲಿತ್ತಲ್ ಭೂ |
ಕಾಂತಾತ್ಮಜ ಪವನಸುತನನೆಡೆಗೊಂಡೆಂದಂ ‖೧೫೫‖

**ರಾಗ ನಾದನಾಮಕ್ರಿಯೆ ಅಷ್ಟತಾಳ**

ಕಾರಣಮಿಲ್ಲದೆ ನಡೆತಂದು | ಕದ್ದ | ವಾರುಹ ಚೋರನೆ ನೀನಿಂದು ‖
ತೋರು ಪೌರುಷವಿದ್ದರೆನ್ನಲ್ಲಿ | ಕಾಲ | ನೂರತೋರಿಸುವೆನೀಕ್ಷಣದಲ್ಲಿ ‖೧೫೬‖

ಬೆಳ್ಳನಂತಾಡುವ ಮಾತಿಗೆ । ಬೆರ್ಚು । ವಳ್ಳೆದೆಯವನೆ ಯೀ ಮಾತಿಗೆ ॥
ಕಳ್ಳರೊದಗುವರೆ ರಣದಲ್ಲಿ । ಬುದ್ಧಿ । ಯುಳ್ಳೊಡಿನಿತು ನೋಡುಮನದಲ್ಲಿ ॥೧೫೭॥

ಬುದ್ಧಿವಂತನು ನೀನೆ ಸಾಹಸಿ । ಕಾವ । ಲಿದ್ದವರನು ಹೊಡೆದೋಡಿಸಿ ।
ಗೆದ್ದರೆ ಗೆಲವಲ್ಲವದು ನೋಡು । ಸುಪ್ರ । ಸಿದ್ಧನಾದರೆ ನಿಂದು ಕಾದಾಡು ॥೧೫೮॥

**ರಾಗ ಕಾಂಭೋಜಿ ಝಂಪೆತಾಳ**

ಫಡಫಡೆಲೆ ಹುಡುಗ ನೀ । ನುಡಿಯದಿರು ಸಡಗರವ ।
ಬಡಿದಿಕ್ಕಿಧುರದೊಳಾಂತವರ ॥
ಹಿಡಿದಶ್ವವನು ಕೊಂಡು । ನಡೆವ ವೇಳೆಯಲಿ ಕೈ ।
ತಡೆವ ಕಡುಗಲಿಗಳಾರಿಹರು ॥೧೫೯॥

ತಡೆವರಿಲ್ಲೆಂದಾಸೆ । ವಡುವೆಯಾ ಹಯದೊಳೀ ।
ಪೊಡವೀಶ್ವರನ ಸುತ ಸುವೇಗ ॥
ಕೊಡಲಿಯಾಂ ವೈರಿ ವಿ । ದ್ರುಮಕೆ ತಡೆಯೆಂದೆಚ್ಚ ।
ಕಿಡಿಯಿಡುವ ದಿವ್ಯ ಮಾರ್ಗಣವ ॥೧೬೦॥

ಸಾಧ್ಯವಲ್ಲಿದು ನಿನಗೆ । ಸಮರವೆನ್ನೊಳು ಕೌರ ।
ವಾದ್ಯರನು ಗೆಲಿದ ರಣಭೀಮ ॥
ಮಧ್ಯಮನು ಕೌಂತೇಯ । ರೊಳಗಾನು ನೋಡೆಂದು
ಮಧ್ಯದಿಂ ಕಡಿದು ಖಂಡಿಸಿದ ॥೧೬೧॥

**ಭಾಮಿನಿ**

ಪೊಡವಿಪಾಲಕ ಕೇಳು ಮಾರುತಿ ।
ಯೊಡನೆ ಖಾಡಾಖಾಡಿಯಿಂ ಖತಿ ।
ವಿಡಿದು ವೀರ ಸುವೇಗ ಹೊದಾಡುತ್ತಲಿರಲಾಗಾ ॥
ಜಡಜಸಖ ಸಂಜಾತನಾತ್ಮಜ ।
ನೊಡನೆ ತಾನ್ಯೆತರುತ ಕಂಡನು ।
ತಡೆದು ತನಯನ ನುಡಿದ ವಿನಯೋಕ್ತಿಯಲಿ ಯವನಾಶ್ವ ॥೧೬೨॥

**ರಾಗ ಸೌರಾಷ್ಟ್ರ ತ್ರಿವುಡೆತಾಳ**

ಮಗನೆ ಬಿಡು ಸಂಗರವ ಬಿಲ್ಲನು । ನೆಗಹದಿರು ಮನದೊಳಗೆ ವೈರವ ।
ಬಗೆಯ ಬೇಡಿವರುಗಳು ನಮ್ಮಯ । ಹಗೆಗಳಲ್ಲ ॥೧೬೩॥

ಬಂಧುಹತ್ಯ ನಿಮಿತ್ತ ಯಮಸುತ । ನಿಂದ ಹಯಮೇಧವನು ನಡೆಸುವ ।
ನಿಂದಿರಾಧವನಿತ್ತ ತುರಗಕೆ । ಬಂದರಿವರು ॥೧೬೪॥

ಹುಟ್ಟಿ ಮಾನಿಸನಾದುದಕೆ ಹಯ । ದೊಟ್ಟಿನಿಂದೆಲ್ಲವನು ಪಾದವ ।
ಮುಟ್ಟಿ ಹರಿಗರ್ಪಿಸುವೆನ್ನೈ ನಿನ । ಗಿಷ್ಟವೈಸೆ ॥೧೬೫॥

ಆತನಿಂತೆನಲಸ್ತುಯೆಂದಾ । ಜಾತತಾತನ ಕೆಲದಿನಿಂದನು ।
ವಾತಜಾತನಪದಕೆರಗಿವೃಷ । ಕೇತು ನುಡಿದ ॥೧೬೬॥

**ರಾಗ ನಾದನಾಮಕ್ರಿಯೆ ರೂಪಕತಾಳ**
ತಾತಚಿತ್ತೈಸೆನ್ನ ಮಾತನೀ ಪೊಳಲಧಿ । ನಾಥನೀತನು ಯವ್ವನಾಶ್ವ ॥
ನೀತಿಶಾಸ್ತ್ರಾಗಮವಿದ ವಿಷ್ಣುಭಕ್ತ ವಿ । ಖ್ಯಾತ ವಿಕ್ರಮ ಪುಣ್ಯ ಚರಿತ ॥೧೬೭॥

ನೆಗಳಿದನೈ ಯುದ್ಧ ಹಗೆಗಾರರಿವರೆಂದು । ವಿಗಡ ಕ್ಷತ್ರಿಯ ಪಂಥವಿಡಿದು ॥
ಮಿಗೆ ನಾವು ನಡೆತಂದ ಬಗೆಯರಿದೆಲ್ಲವ । ನಗಧರಾರ್ಪಣಗೈವ ಮನದಿ ॥೧೬೮॥

ಬಂದನೆನ್ನೊಡನೆ ನಿಮ್ಮನು ಕಾಂಬ ತವಕದೊ । ಳೆಂದ ಮಾತಿಗೆ ಮರುತಜನು ॥
ಮಂದಹಾಸದೊಳಪ್ಪಿ ನೃಪತಿಯ ತಕ್ಕೈಸಿ । ಲೆಂದನು ಪ್ರೇಮಭಾವದೊಳು ॥೧೬೯॥

**ಭಾಮಿನಿ**
ಸೋಮವಂಶಲಲಾಮ ವಿಜಯೋ ।
ದ್ಧಾಮ ಸಂಗರ ಭೀಮ ಕೇಳೈ ।
ಭೀಮನಿನಗಪರಾಧವೆಸಗಿದೆನದನು ಮರೆದಪುದು ॥
ಕಾಮಿತಾರ್ಥಫಲಪ್ರದಾತನ ।
ಕಾಮಿಸಿಹೆ ಕಾಣಿಸುವುದೆನಗಿ ।
ನ್ನೀಮಹತ್ಸಂಪದವನರ್ಪಿಸುವುದಕೆ ನೆರವಾಗಿ ॥೧೭೦॥

**ಕಂದ**
ಆಳಾಗಿಹನೈ ನಿಮಗಾ ।
ನಾಳೀಕಾಂಬಕನೆನಲ್ಕೆ ನಿಮ್ಮೈಸಿರಿಯಂ ।
ಪೇಳುವಡರಿದೆನಗೆನಲು ನೃ ।
ಪಾಳನ ಕೊಂಡಾಡಿ ಮೆಚ್ಚಿ ಪವನಜನೆಂದಂ ॥೧೭೧॥

**ರಾಗ ಮೋಹನ ಅಷ್ಟತಾಳ**
ಯವನಾಶ್ವ । ಭೂಪ । ಯವನಾಶ್ವ ॥ ಪಲ್ಲವಿ ॥

ಯವನಾಶ್ವಭೂಪಕುಲಾಂಬುಜಮಿತ್ರ । ವಿವರಿಸಲಿನ್ನುಂಟೆ ನೀನೆಮ್ಮ ಮಿತ್ರ ॥
ಭುವನದೊಳೆಣೆಗಾಣೆನೈ ಸುಚರಿತ್ರ । ದಿವಿಜೇಂದ್ರ ವಿಭವಸಂಪನ್ನ ಪವಿತ್ರ ॥೧೭೨॥

ಮಾಧವನಂಘ್ರಿಪರಾಯಣ ನೀನು । ಸೋದರೊಳಗೆಮಗಾದೆಯಿನ್ನೇನು ॥
ಪೋದಪುದೈಸಲೆ ನಾವೆಲ್ಲರಿನ್ನು । ಮೇದಿನೀಪತಿ ಹಾದಿ ನೋಡಿ ಹಣ್ಣಹನು ॥೧೭೩॥

ಬೇಡಿಕೊಂಬೆನು ಬಪ್ಪುದರಮನೆಯೆಡೆಗೆ । ಮಾಡುವಾತಿಥ್ಯವ ಕೈಕೊಂಡು ಕಡೆಗೆ ॥
ಕೂಡಿಕೊಂಡತ್ತ ಪೋದಪುದೆಂಬ ನುಡಿಗೆ । ಹೂಡಿದರಥದೊಳೇಳ್ತಂದರಾಯೆಡೆಗೆ ॥೧೭೪॥

**ವಾರ್ಧಕ**

ಮೂರು ದಿನಮಲ್ಲಿ ಸುಖದಿಂದಿರ್ದುಮತ್ತವರು ।
ಭೂರಮಣ ಧರ್ಮಜನ ಕಾಂಬರ್ತಿಯಿಂದಾ ಸ ।
ಮೀರ ಸುತನೆಚ್ಚರಿಸೆ ಭದ್ರಾವತೀಶ್ವರಂ ಸಕಲ ಸನ್ನಾಹದೊಡನೆ ॥
ಭೋರಿಡುವ ಕಹಳೆದುಂದುಭಿ ವಾದ್ಯರವಗಳಿಂ ।
ಮೇರೆದಪ್ಪಿದ ಮಹಾರ್ಣವದಂತೆ ನೆರೆದ ಪರಿ ।
ವಾರಸಹ ಸುತಸುವೇಗನ ಕೂಡಿ ಹಯದೊಡನೆ ಪೊರಟನಿಭನಗರಿಗಾಗ ॥೧೭೫॥

**ದ್ವಿಪದಿ**

ಪೃಥ್ವೀಶ ಕೇಳ್ ಬಳಿಕ ಪವನಸಂಜಾತ ।
ಅರ್ಥಿಯಿಂದೈತರುತ ಯವನಾಶ್ವ ಸಹಿತ ॥೧೭೬॥

ಗ್ರಹಿಸಿದನು ಮನದೊಳಗೆ ಮಧ್ಯಮಾರ್ಗದಲಿ ।
ಬಹುದಿವಸವಾದುದಾನಗ್ರಜನನಗಲಿ ॥೧೭೭॥

ಪಡೆವೆರಸಿ ಪೋಪುದಕೆ ತಡವಪ್ಪುದೆಂದು ।
ನಡೆದನೋರ್ವನೆ ಮುಂದೆ ಗಜನಗರಿಗಂದು ॥೧೭೮॥

ನೋಡಿದನು ಧರ್ಮಜನ ಪದಕೆರಗಿ ನಿಂದು ।
ಆಡಿದನು ನಡೆದ ಘಟನೆಗಳ ನಿಂತೆಂದು ॥೧೭೯॥

ಬಳಿಕ ತದ್ವಾರ್ತೆಗಳನವರಾಡುತಿರಲು ।
ಇಳೆಯರಸ ಯವನಾಶ್ವಮುಂತಾಗಿ ಬರಲು ॥೧೮೦॥

ಭದ್ರಗಜವೇರಿ ಬಹುವಿಧದ ವೈಭವದಿ ।
ಭದ್ರಾವತೀಶ್ವರನನಿದಿರ್ಗೊಂಡ ಮುದದಿ ॥೧೮೧॥

**ರಾಗ ಮೋಹನ ಏಕತಾಳ**

ಕರಿಕಂಧರದಿಂದವತರಿಸುತ ಭೂ । ವರಧರ್ಮಜ ನಿಲುವನಿತರಲಿ ॥
ಸರಸೀರುಹ ಸಖ ಪೌತ್ರ ಘಟೋತ್ಕಚ । ತರಳರೆರಗಿದರು ಚರಣದಲಿ ॥೧೮೨॥

ಬಂದಾಕ್ಷಣ ಭದ್ರಾವತಿಯರಸನು | ತಂದ ಸುವಸ್ತುಗಳೆಲ್ಲವನು ||
ಒಂದುಳಿಯದೆ ಪದಕರ್ಪಿಸಿ ಮಣಿದಿಂ | ತೆಂದನು ಸಂತಸವಟ್ಟವನು ||೧೮೩||

**ಭಾಮಿನಿ**

ಕಂಡರಿಯೆ ಕೇಳ್ದಲ್ಲದಿಂದೇ |
ಕಂಡೆಕಂಗಳ ಹಬ್ಬವನು ತನು |
ಗೊಂಡಸದ್ಧರ್ಮವನು ಪ್ರತ್ಯಕ್ಷದಿ ನೃಪೋತ್ತಮನೆ ||
ಕಂಡೆನೆನ್ನಪರಾಧವಿರೆ ಮಾ |
ರ್ಕೊಂಡು ಮನ್ನಿಸಬೇಕೆನಲು ಭೂ |
ಮಂಡಲೇಶ್ವರ ಬರಸೆಳೆದು ಬಿಗಿಯಪ್ಪುತಿಂತೆಂದ ||೧೮೪||

**ವಾರ್ಧಕ**

ಯವನಾಶ್ವ ಕೇಳು ನೀನಪರಾಧಿಯೇ ತಪ್ಪಿ |
ದವರಾವು ನಮ್ಮ ನೀನೇ ಮನ್ನಿಸಲು ಬೇಕು |
ಹವಣಿಂತುಟಿನ್ನುಮಾ ಮಾತದೇಕೈದನೆಯ ತಮ್ಮ ನೀನೆಮಗೆ ನಿಜದಿ ||
ವಿವರಿಸುವಡಿನ್ನಿಲ್ಲವೆನಲಾಗ ಕುದುರೆಸಹಿ |
ತವನ ಮಗನೆರಗಲ್ಕೆ ಭೀಮನೊಳು ಸಮಸಮ ಧು |
ರವನಾಂತ ಬಿಲ್ಲಾಳು ಬಾರೆಂದು ನಸುನಗುತ ಕೈವಿಡಿದು ಸಂತಯಿಸಿದಂ ||೧೮೫||

**ರಾಗ ಮೋಹನ ಝಂಪೆತಾಳ**

ಧರಣಿಪಾಲಕನಿಂತು | ಪರಿಪರಿಯೊಳವರನುಪ
ಚರಿಸಿ ತಮ್ಮರ ಮನೆಗೆ | ಕರತಂದನಾಗ ||೧೮೬||

ಬೇರೆಬೇರವರ ಸ | ತ್ಕಾರದಲಿ ದಣಿಸಿಕಂ |
ಸಾರಿಯನು ನೆನೆದಿರ್ದ | ಚಾರುಹರ್ಷದಲಿ ||೧೮೭||

**ವಾರ್ಧಕ**

ಮತ್ತೆ ಭೀಮನ ಕಳುಹಿ ಹರಿಯ ಕರೆತಂದು ಮುನಿ |
ಪೋತ್ತಮನ ಮತದಿ ದೀಕ್ಷೆಯಗೊಂಡು ಪಾರ್ಥನಿಂ |
ಪೃಥ್ವಿಪಾಲರ ಗೆಲಿಸಿ ಕಪ್ಪಮಂ ತರಿಸಿ ವೇದೋಕ್ತದಿಂದಾ ಯಾಗಮಂ ||
ಪೂರ್ತಿಗೊಳಿಸಿ ಸಮಸ್ತ ಭೂಪಾಲರೊಳ್ ಕೀರ್ತಿ |
ವೆತ್ತು ಭೂತಳವ ಪಾಲಿಸುತಿರ್ದನ್ನೈ ಧರ್ಮ |
ಪುತ್ರನಾ ಹರಿಯ ಕಾರುಣ್ಯದಿಂ ಕೇಳು ಜನಮೇಜಯಮಹೀಪಾಲನೆ ||೧೮೮||

**ರಾಗ ಮೋಹನ ಧವಳಾರ ಏಕತಾಳ**

ವಾರಿಜಾಕ್ಷಿಯರೆಲ್ಲಗೂಡಿ | ತಾರಮಂದ್ರದಿ ದನಿಗೂಡಿ |
ಸಾರಿಗ ಪದ ಸಸ್ವರದಿಂಪಾಡಿ | ಶ್ರೀ ರಂಗನ ಚರಿತವ ಕೊಂಡಾಡಿ ||

ಧಾರಿಣಿಗಧಿಕರೆಂದೆನಿಸುವ ಪಾಂಡು ಕು ।
ಮಾರರಿಗಾರತಿಯಾ ಬೆಳಗೀರೆ ॥ ಶೋಭಾನಂ ॥೧೮೯॥

**ಕಂದ**

ವೆಂಕಟರಮಣಂ ಬಡೆಕಿಲ ।
ಶಂಕರನಾರಾಯಣಾಖ್ಯಭೂಸುರನ ಸುತಂ ।
ಪಂಕಜನಾಭನ ಪದಯುಗ ।
ಕಿಂಕರನಾಂ ಯಕ್ಷಗಾನದಿಂದಿದನೊರೆದೆಂ ॥೧೯೦॥

**ರಾಗ ಮೋಹನ ಏಕತಾಳ**

ನಂದ ನಂದನಾಯ ಜಯ । ಜಯ । ಮಂಗಲಂ ।
ದೇವ । ವೃಂದಗಂಧರ್ವಾರ್ಚಿತಾಯ ಶುಭಮಂಗಲಂ । ನಂದ ॥ ಪಲ್ಲವಿ ॥

ಸಾರಮಣಿ ಕೆಯ್ಯೂರ ರತ್ನ । ಹಾರಕಟಕ ಶೋಭಿತಾಯ ।
ಘೋರದುರಿತ ನಿರ್ಧೂತಾಯ । ಜಯಮಂಗಲಂ । ಶುಭಮಂಗಲಂ ॥ ನಂದ ॥೧೯೧॥

ಚಾರು ಗಂಧಮಾಲ್ಯ ಸುಮನೋ । ಹಾರ ವಸನ ಭೂಷಿತಾಯ ।
ನಾರದಾದಿ ಸನ್ನುತಾಯ । ಜಯಮಂಗಲಂ । ಶುಭಮಂಗಲಂ ॥ ನಂದ ॥೧೯೨॥

ಕಾಮಕೋಟಿ ಸುಂದರಾಯ । ನಾಮರೂಪ ವರ್ಜಿತಾಯ ।
ಕಾಮಿತಫಲ ಪ್ರದಾಯ । ಜಯಮಂಗಲಂ । ಶುಭಮಂಗಲಂ ॥ ನಂದ ॥೧೯೩॥

* * *